ಕರ್ನಾಟಕ ಸರ್ಕಾರ

# ಭಾರತದ ಆರ್ಥಿಕ ಅಭಿವೃದ್ಧಿ

## ಪ್ರಥಮ ಪಿಯುಸಿ ಪಠ್ಯಪುಸ್ತಕ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ

NATIONAL COUNCIL OF EDUCATIONAL RESEARCH AND TRAINING

ಪದವಿಪೂರ್ವ ಶಿಕ್ಷಣ ಇಲಾಖೆ

ಮಲ್ಲೇಶ್ವರಂ, ಬೆಂಗಳೂರು – ೫೬೦ ೦೦೨

ISBN 81-7450-551-2

**First Edition**

*February 2006 Phalguna 1927*

***Reprinted***

*October 2006 Kartika 1928*

*December 2007 Pausa 1929*

*December 2008 Pausa 1930*

*January 2010 Pausa 1931*

*January 2011 Magha 1932*

*March 2012 Magha 1933*

*January 2013 Magha 1934*

*January 2014 Magha 1935*

*December 2014 Pausa 1936*

*March 2016 Phalguna 1937*

**PD 95T HK**

© ***National Council of Educational Research and Training, 2006***

**Pages: XVI + 212**

*Printed on 80 GSM paper with NCERT watermark*

Published at the Publication Division by the Secretary, National Council of Educational Research and Training, Sri Aurobindo Marg, New Delhi 110 016 and printed at A.K. Offset (P) Ltd., 10, Sports Complex Enclave, Delhi Road, Meerut 250 002.

**ALL RIGHTS RESERVED**

- No part of this publication may be reproduced, stored in a retrieval system or transmitted, in any form or by any means, electronic, mechanical, photocopying, recording or otherwise without the prior permission of the publisher.
- This book is sold subject to the condition that it shall not, by way of trade, be lent, re-sold, hired out or otherwise disposed of without the publisher's consent, in any form of binding or cover other than that in which it is published.
- The correct price of this publication is the price printed on this page, Any revised price indicated by a rubber stamp or by a sticker or by any other means is incorrect and should be unacceptable.

**OFFICES OF THE PUBLICATION DIVISION, NCERT**

NCERT Campus
Sri Aurobindo Marg
**New Delhi 110 016** **Phone : 011-26562708**

100, 108 Feet Road
Hosdakere Halli Extension
Banashankari III Stage
**Bangaluru - 560 085** **Phone : 080-26725740**

Navjivan Trust Building
P.O.Navjivan
**Ahmedabad - 380 014** **Phone : 079-27541446**

CWC Campus
Opp. Dhankal Bus Stop
Panihati
**Kolkata - 700 114** **Phone : 033-25530454**

CWC Complex
Maligaon
**Guwahati - 781 021** **Phone : 0361-2674869**

**Publication Team**

| | | |
|---|---|---|
| Head, Publication Division | : | *Dinesh Kumar* |
| Chief Editor | : | *Shweta Uppal* |
| Chief Business Manager | : | *Gautam Ganguly* |
| Chief Production Officer (Incharge) | : | *Arun Chitkara* |
| Editor | : | *R.N. Bharadwaj* |
| Production Assistant | : | Deepak Jaiswal |

**Cover and Illustrations**
*Sarita Verma Mathur*

# FOREWORD

The National Curriculum Framework (NCF), 2005, recommends that children's life at school must be linked to their life outside the school. This principle marks a departure from the legacy of bookish learning which continues to shape our system and causes a gap between the school, home and community. The syllabi and textbooks developed on the basis of NCF signify an attempt to implement this basic idea. They also attempt to discourage rote learning and the maintenance of sharp boundaries between different subject areas. We hope these measures will take us significantly further in the direction of a child-centred system of education outlined in the National Policy on Education (1986).

The success of this effort depends on the steps that school principals and teachers will take to encourage children to reflect on their own learning and to pursue imaginative activities and questions. We must recognise that, given space, time and freedom, children generate new knowledge by engaging with the information passed on to them by adults. Treating the prescribed textbook as the sole basis of examination is one of the key reasons why other resources and sites of learning are ignored. Inculcating creativity and initiative is possible if we perceive and treat children as participants in learning, not as receivers of a fixed body of knowledge.

These aims imply considerable change in school routines and mode of functioning. Flexibility in the daily time-table is as necessary as rigour in implementing the annual calendar so that the required number of teaching days are actually devoted to teaching. The methods used for teaching and evaluation will also determine how effective this textbook proves for making children's life at school a happy experience, rather than a source of stress or boredom. Syllabus designers have tried to address the problem of curricular burden by restructuring and reorienting knowledge at different stages with greater consideration for child psychology and the time available for teaching.

The textbook attempts to enhance this endeavour by giving higher priority and space to opportunities for contemplation and wondering, discussion in small groups, and activities requiring hands-on experience.

The National Council of Educational Research and Training (NCERT) appreciates the hard work done by the textbook development team responsible for this book. We wish to thank the Chairperson of the advisory group for Social Sciences textbooks at Higher Secondary Level, Professor Hari Vasudevan and the Chief Advisor for this book, Professor Tapas Majumdar for guiding the work of this committee. Several teachers contributed to the development of this textbook; we are grateful to them and their principals for making this possible. We are indebted to the institutions and organisations which have generously permitted us to draw upon their resources, material and personnel. We are especially grateful to the members of the National Monitoring Committee, appointed by the Department of Secondary and Higher Education, Ministry of Human Resource Development under the Chairmanship of Professor Mrinal Miri and Professor G.P. Deshpande, for their valuable time and contribution. As an organisation committed to systemic reform and continuous improvement in the quality of its products, NCERT welcomes comments and suggestions which will enable us to undertake further revision and refinement.

**Director**

**New Delhi** **National Council of Educational**

**20 December 2005** **Research and Training**

# TEXTBOOK DEVELOPMENT COMMITTEE

**Chairperson, Advisory Committee For Textbooks in Social Sciences at Higher Secondary Level**

Hari Vasudevan, Professor, Department of History, University of Calcutta, Kolkata

**Chief Advisor**

Tapas Majumdar, Emeritus Professor, Jawaharlal Nehru University, New Delhi

**Members**

Bharat C. Thakur, PGT, Government Pratibha Vikas Vidyalaya, Surajmal Vihar, Delhi Gopinath Perumula, Lecturer, Tata Institute of Social Sciences, Mumbai Jaya Singh, Lecturer, DESS, NCERT, New Delhi

Nishit Ranjan Das, PGT, New Alipore Multipurpose School, Behala, Kolkata Naushad Ali Azad, Professor, Department of Economics, Jamia Milia Islamia, New Delhi

Neeraja Rashmi, Reader, DESS, NCERT, New Delhi

Rama Gopal, Professor, Department of Economics, Annamalai University, Annamalai Nagar, Tamil Nadu

Pratima Kumari, Lecturer, DERPP, NCERT, New Delhi

Poonam Bakshi, Senior Lecturer, Department of Economics, Punjab University, Chandigarh

R. Srinivasan, S.G. Lecturer, Department of Economics, Arignar Anna Government Arts College, Villupuram, Tamil Nadu

Sabitha Patnaik, PGT, Demonstration School, Regional Institute of Education, Sachivalaya Marg, Bhubaneswar

Sharmista Banerjee, Headmistress, Bidya Bharti Girls High School, Kolkata.

**Member–Coordinator**

M.V. Srinivasan, Lecturer, DESS, NCERT, New Delhi

# ACKNOWLEDGEMENTS

Many friends and colleagues have helped in preparing this textbook. The National Council of Educational Research and Training acknowledges M. Karpagam, Lecturer, Department of Economics, Meenakshi College, Chennai; J. John, Director, Centre for Education and Communication, New Delhi; Pratyusa K. Mandal, Reader, DESS, NCERT, New Delhi; Nandana Reddy, Director (Development), Concern for Working Children, Bangalore; V. Selvam, Research Scholar, Centre for Study of Regional Development and Satish Jain, Professor, Centre for Economic Studies and Planning, Jawaharlal Nehru University, New Delhi; Pooja Kapoor, Modern School, Barakhamba Road, New Delhi; Priya Vaidya, Sardar Patel Vidyalaya, Lodhi Estate, New Delhi; and Nalini Padmanabhan, DTEA Senior Secondary School, Janakpuri, New Delhi for providing their feedback and inputs.

The Council expresses its gratitude to Jan Breman and Parthiv Shah for using photographs from their book, Working in the mill no more, published by Oxford University Press, Delhi. Some stories were taken from the book, Everybody Loves a Good Drought, authored by P. Sainath and published by Penguin Books, New Delhi. A photo relating to farmers committing suicides has been used from The Hindu. A few photographs and text materials on environmental issues have been used from the State of India's Environment 1 and 2 published by the Centre for Science and Environment, New Delhi. The Council thanks the authors, copyright holders and publishers of these reference materials. The Council also acknowledges the Press Information Bureau, Ministry of Information and Broadcasting, New Delhi; National Rail Museum, New Delhi for allowing to use photographs available in their photo library. Some photographs were given by S. Thirumal Murugan, Principal, Adhiyaman Matriculation School, Uthangarai, Tamil Nadu; John Suresh Kumar, Synodical Board of Social Service; Sindhu Menon of Labour File, New Delhi; R. C. Das of CIET, New Delhi; Renuka of National Institute of Health and Family Welfare, New Delhi. The Council acknowledges their contribution as well.

Special thanks are due to Savita Sinha, *Professor and Head, Department* of Education in Social Sciences and Humanities for her support.

The Council also gratefully acknowledges the contributions of Mamta and Arvind Sharma, DTP Operators; Neena Chandra, Copy Editor; Dillip Kumar Agasti, Proof Reader; and Dinesh Kumar, Incharge Computer Station in shaping this book. The efforts of the Publication Department, NCERT are also duly acknowledged.

# ನಿರ್ದೇಶಕರ ಸಂದೇಶ

**ಆತ್ಮೀಯ ವಿದ್ಯಾರ್ಥಿಗಳೇ,**

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಶ್ರೀಮತಿ ಸಿ. ಶಿಖಾ** ಭಾ.ಆ.ಸೇ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

# ಪಠ್ಯ ಪುಸ್ತಕ ಅನುವಾದಕ ಸಮಿತಿ

**ಗೌರವಾಧ್ಯಕ್ಷರು:**

**ಶ್ರೀಮತಿ ಸಿ. ಶಿಖಾ** ಭಾ.ಆ.ಸೇ. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ನಂ. 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

**ಅಧ್ಯಕ್ಷರು:**

**ಶ್ರೀಮತಿ ಜಿ.ಬಿ. ನಾಗರತ್ನಮ್ಮ,** ಪ್ರಾಂಶುಪಾಲರು, ಸರ್ಕಾರಿ ಪದವಿಪೂರ್ವ ಕಾಲೇಜು, ಸಿರಿವರ, ತುಮಕೂರು ತಾಲ್ಲೂಕು.

**ಸಂಚಾಲಕರು:**

**ಶ್ರೀ ವೀರರಾಜು. ಎಂ.ವಿ.,** ಹಿರಿಯ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಎಚ್ಎಸ್ಆರ್ ಬಡಾವಣೆ, ಅಗರ, ಬೆಂಗಳೂರು.

**ಸದಸ್ಯರು:**

**ಶ್ರೀಮತಿ ಎಚ್. ವಾಣಿ,** ಪ್ರಾಂಶುಪಾಲರು, ಗೊಟವಾಟೆ ಪದವಿಪೂರ್ವ ಕಾಲೇಜು, ಇಂದಿರಾನಗರ, ಬೆಂಗಳೂರು.

**ಶ್ರೀ ರಾಜಣ್ಣ ಎಸ್.,** ಪ್ರಾಂಶುಪಾಲರು, ಶ್ರೀ ಬಸವೇಶ್ವರ ಕೇಂದ್ರೀಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೋಳಾಲ, ಕೊರಟಗೆರೆ ತಾಲ್ಲೂಕು.

**ಶ್ರೀ ಆರ್. ರಾಜ್‌ಗೋಪಾಲ್,**
ಹಿರಿಯ ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು.

**ಶ್ರೀ ಈ. ಶಿವೇಗೌಡ,** ಹಿರಿಯ ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, 100 ಅಡಿ ರಸ್ತೆ, ಮೈಸೂರು.

**ಶ್ರೀ ಎಸ್. ಪೂರ್ಣೇಶ್,** ಹಿರಿಯ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಆಲ್ದೂರು, ಚಿಕ್ಕಮಗಳೂರು ಜಿಲ್ಲೆ.

**ಶ್ರೀ ಸಿದ್ದಪ್ಪ,** ಹಿರಿಯ ಉಪನ್ಯಾಸಕರು, ಶ್ರೀವಾಣಿವಿಲಾಸ ಅರಸು ಬಾಲಕಿಯರ ಪದವಿ ಪೂರ್ವ ಕಾಲೇಜು, ನಜರಬಾದ್, ಮೈಸೂರು.

**ಶ್ರೀ ಕೆ. ದಿನೇಶ್,** ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಹಲಗೇರಿ, ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ.

**ಶ್ರೀ ಎಂ.ಎಚ್. ಪ್ರಕಾಶ್,** ಹಿರಿಯ ಉಪನ್ಯಾಸಕರು, ಸಂಚಿಹೊನ್ನಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜು, ಭದ್ರಾವತಿ ಶಿವಮೊಗ್ಗ ಜಿಲ್ಲೆ.

**ಶ್ರೀ ಬಿ. ನಾಗರಾಜಪ್ಪ,** ಹಿರಿಯ ಉಪನ್ಯಾಸಕರು, ಮೋತಿವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ದಾವಣಗೆರೆ.

**ಶ್ರೀಮತಿ ಸಂಗೀತ ಎನ್ ಕಟ್ಟಿಮನಿ** ಹಿರಿಯ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಸೂಪರ್ ಮಾರ್ಕೆಟ್, ಕಲ್ಬುರ್ಗಿ.

**ಶ್ರೀ ಶಂಭು ಭಟ್** ಹಿರಿಯ ಉಪನ್ಯಾಸಕರು, ವಿದ್ಯೋದಯ ಪದವಿ ಪೂರ್ವ ಕಾಲೇಜು, ಯಡಹಳ್ಳಿ, ಶಿರ್ಸಿ ತಾಲ್ಲೂಕು, ಉತ್ತರ ಕನ್ನಡ.

**ಶ್ರೀ ನಾಗರಾಜ ವೈದ್ಯ,** ಹಿರಿಯ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಬ್ರಹ್ಮಾವರ, ಉಡುಪಿ.

**ಶ್ರೀಮತಿ ಚಂದ್ರಕಲಾವತಿ ಬಿ.ಎ.,** ಹಿರಿಯ ಉಪನ್ಯಾಸಕರು, ಎಸ್.ಜೆ.ಬಿ.ಸಿ. ಪದವಿ ಪೂರ್ವ ಕಾಲೇಜು, ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು.

**ಶ್ರೀ ಪ್ರಿಯಶಂಕರ್,** ಹಿರಿಯ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಮಳವಳ್ಳಿ, ಮಂಡ್ಯ ಜಿಲ್ಲೆ.

**ಶ್ರೀಮತಿ ಕಲ್ಪನಾ ದಯಾನಂದ ಗಾಂವಕರ್** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಬ್ಯಾಟರಾಯನ ಪುರ, ಬೆಂಗಳೂರು.

**ಶ್ರೀಮತಿ ಭಗವತಿ** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ನ್ಯೂ ವಾಣಿವಿಲಾಸ, ವಿ.ವಿ. ಪುರಂ, ಬೆಂಗಳೂರು.

# ಪರಿಶೀಲನಾ ಸಮಿತಿ

**ಶ್ರೀ. ಎಂ.ಎಸ್. ಚಿದಾನಂದ,** ಪ್ರಾಂಶುಪಾಲರು, ಬಾಪೂಜಿ ಪದವಿಪೂರ್ವ ಕಾಲೇಜು, ಹೊರಪೇಟೆ, ತುಮಕೂರು.

**ಡಾ. ಪದ್ಮಿನಿ ರಾವ್,** ಸಂಚಾಲಕರು, ಅರ್ಥಶಾಸ್ತ್ರ ಸ್ನಾತಕೊತ್ತರ ವಿಭಾಗ, ನ್ಯಾಷನಲ್ ಕಾಲೇಜು ಬಸವನಗುಡಿ ಬೆಂಗಳೂರು.

**ಪ್ರೊ. ತುಳಸಿಮಾಲಾ ಬಿ.ಕೆ.** ಅರ್ಥಶಾಸ್ತ್ರ ಅಧ್ಯಾಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು.

# ಸಹಕಾರ

**ಶ್ರೀ. ವಿ. ಕೆ. ನಾಗರಾಜು** ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಶ್ರೀಮತಿ ಪಿ.ಸಿ ಪದ್ಮಿನಿ** ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಡಾ. ಹೆಚ್.ಬಿ. ಚಂದ್ರಶೇಖರ್** ಶಾಖಾಧಿಕಾರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

# ಈ ಪುಸ್ತಕವನ್ನು ಬಳಸುವ ಬಗೆ

"ಭಾರತದ ಆರ್ಥಿಕಾಭಿವೃದ್ಧಿ" ಪುಸ್ತಕದ ರಚನೆಯ ಮುಖ್ಯ ಉದ್ದೇಶವೇನೆಂದರೆ ಭಾರತದ ಅರ್ಥ ವ್ಯವಸ್ಥೆಯು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಕಲಿಕಾರ್ಥಿಗಳಿಗೆ ಪರಿಚಯಿಸುವುದು. ಈ ಪ್ರಕ್ರಿಯೆಯಲ್ಲಿ ಅವರು ಸಮಸ್ಯೆಗಳ ಬಗ್ಗೆ ಸಂವೇದನಾಶೀಲರಾಗಿ ವಿವಿಧ ಆರ್ಥಿಕ ಕ್ಷೇತ್ರಗಳಲ್ಲಿ ಸರ್ಕಾರದ ಪಾತ್ರವನ್ನು ವಿಮರ್ಶಾತ್ಮಕವಾಗಿ ಮಾಪನ ಮಾಡುವ ಮತ್ತು ಗೌರವ ನೀಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ. ಅಲ್ಲದೇ ಈ ಪುಸ್ತಕವು ಆರ್ಥಿಕ ಸಂಪನ್ಮೂಲಗಳು ಯಾವುವು ಮತ್ತು ಈ ಸಂಪನ್ಮೂಲಗಳನ್ನು ವಿವಿಧ ವಲಯಗಳಲ್ಲಿ ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಅರಿತುಕೊಳ್ಳುವ ಅವಕಾಶವನ್ನು ಒದಗಿಸುತ್ತದೆ. ಭಾರತದ ಅರ್ಥವ್ಯವಸ್ಥೆ ಮತ್ತು ಆರ್ಥಿಕ ನೀತಿಗಳ ವಿವಿಧ ಆಯಾಮಗಳಿಗೆ ಸಂಬಂಧಿಸಿದಂತಹ ಪರಿಮಾಣಾತ್ಮಕ ಮಾಹಿತಿ ಕೂಡಾ ಕಲಿಕಾರ್ಥಿಗಳಿಗೆ ಪರಿಚಯಿಸಲಾಗಿದೆ. ಭಾರತದ ಅರ್ಥ ವ್ಯವಸ್ಥೆಯ ಆರ್ಥಿಕ ಘಟನೆಗಳನ್ನು ಅರ್ಥೈಸುವ, ವಿಶ್ಲೇಷಿಸುವ ಮತ್ತು ಆರ್ಥಿಕತೆಯ ಭವಿಷ್ಯವನ್ನು ಮುಂಗಾಣುವ ಕೌಶಲ್ಯಗಳನ್ನು ಅವರು ಅಭಿವೃದ್ಧಿಪಡಿಸಿಕೊಳ್ಳುವರೆಂದು ನಿರೀಕ್ಷಿಸಲಾಗಿದೆ. ಆದಾಗ್ಯೂ ಕಲಿಕಾರ್ಥಿಗಳಿಗೆ 'ಪರಿಕಲ್ಪನೆಗಳು' ಮತ್ತು 'ದತ್ತಾಂಶಗಳ' ಹೊರೆ ಹೆಚ್ಚಾಗದಂತೆ ನೋಡಿಕೊಳ್ಳುವ ಪ್ರಜ್ಞಾಪೂರ್ವಕ ಪ್ರಯತ್ನ ಮಾಡಲಾಗಿದೆ.

ವಿವಿಧ ಆರ್ಥಿಕ ಸಮಸ್ಯೆಗಳು ಮತ್ತು ಪ್ರವೃತ್ತಿಗಳಿಗೆ ಸಂಬಂಧಿಸಿದ ಹಾಗೆ ಈ ಪುಸ್ತಕದಲ್ಲಿ ಪ್ರತಿಯೊಂದು ಸಮಸ್ಯೆಗಳಿಗೂ ಪರ್ಯಾಯ ದೃಷ್ಟಿಕೋನವನ್ನು ತಂದು ವಿದ್ಯಾರ್ಥಿಗಳು ತಮ್ಮನ್ನು ತಾವು ಸಂಪೂರ್ಣ ಮಾಹಿತಿ ಚರ್ಚೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಲು ಪ್ರಯತ್ನಿಸಲಾಗಿದೆ. "ಭಾರತದ ಆರ್ಥಿಕಾಭಿವೃದ್ಧಿ"–ಈ ಪಠ್ಯಕ್ರಮವನ್ನು ಅಭ್ಯಸಿಸಿದ ನಂತರ ಕಲಿಕಾರ್ಥಿಗಳು ತಮ್ಮ ಸುತ್ತ ಮುತ್ತ ನಡೆಯುವ ಸಮಗ್ರ ಆರ್ಥಿಕ ಘಟನೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಮಾಧ್ಯಮಗಳಿಂದ ದೊರೆಯುವ ಸಂಬಂಧಿತ ಮಾಹಿತಿಗಳನ್ನು ವಿಮರ್ಶಾತ್ಮಕವಾಗಿ ಅರ್ಥೈಸುವ ಹಾಗೂ ಮೌಲ್ಯಮಾಪನ ಮಾಡುವ ಕೌಶಲಗಳನ್ನು ಪಡೆಯುತ್ತಾರೆಂದು ನಿರೀಕ್ಷಿಸಲಾಗಿದೆ.

ಈ ಪಠ್ಯಕ್ರಮ(ಪುಸ್ತಕ)ದಲ್ಲಿ ಪ್ರತಿಯೊಂದು ಅಧ್ಯಾಯವೂ ಅನೇಕ ಚಟುವಟಿಕೆಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ಇಂತಹ ಚಟುವಟಿಕೆಗಳನ್ನು ತಮ್ಮ ಉಪನ್ಯಾಸಕರ ಮಾರ್ಗದರ್ಶನದಲ್ಲಿ ಕೈಗೊಳ್ಳಬೇಕಾಗುತ್ತದೆ. ವಾಸ್ತವವಾಗಿ ಈ ಪಠ್ಯಕ್ರಮದಲ್ಲಿ ಭಾರತೀಯ ಆರ್ಥವ್ಯವಸ್ಥೆಯ ತಿಳುವಳಿಕೆಯನ್ನು ಸಮೃದ್ಧಗೊಳಿಸುವಲ್ಲಿ ಉಪನ್ಯಾಸಕರ ಪಾತ್ರ ಮಹತ್ತರವಾಗಿದೆ. ಈ ಚಟುವಟಿಕೆಗಳು ತರಗತಿ ಕೊಠಡಿಯಲ್ಲಿನ ಚರ್ಚೆಗಳು, ಆರ್ಥಿಕ ಸಮೀಕ್ಷೆಯಂತಹ ಸರ್ಕಾರಿ ದಾಖಲೆಗಳಿಂದ, ಸರ್ಕಾರಿ ಪತ್ರಾಗಾರಗಳಿಂದ, ದಿನಪತ್ರಿಕೆ, ದೂರದರ್ಶನ ಮತ್ತು ಇತರ ಮೂಲಗಳಿಂದ ಮಾಹಿತಿ ಸಂಗ್ರಹಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ವಿದ್ವಾಂಸರುಗಳ ಲೇಖನಗಳನ್ನು ಓದಲು ಕೂಡ ಕಲಿಕಾರ್ಥಿಗಳನ್ನು ಪ್ರೋತ್ಸಾಹಿಸಬೇಕಾಗತ್ತದೆ.

ಇವೆಲ್ಲಾ ಆಗಬೇಕಾದರೆ, ಪಠ್ಯಕ್ರಮವನ್ನು ಆರಂಭಿಸುವ ಮುನ್ನ ಉಪನ್ಯಾಸಕರುಗಳು ಮೊದಲ ಹೆಜ್ಜೆಯಾಗಿ ಕೆಲವು ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ. ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಪಠ್ಯಕ್ರಮಕ್ಕೆ ಸಂಬಂಧಪಟ್ಟ ವಿವಿಧ ವಿಷಯಗಳು– ಪಂಚವಾರ್ಷಿಕ ಯೋಜನೆಗಳು; ಕೃಷಿ ಕೈಗಾರಿಕೆ ಮತ್ತು

ಸೇವಾ ಕ್ಷೇತ್ರಗಳಿಗೆ ಹಾಗೂ ಬಡತನ, ನಿರುದ್ಯೋಗ ಮುಂತಾದ ನಿರ್ದಿಷ್ಟ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲಗಳ ಹಂಚಿಕೆ; ಗ್ರಾಮೀಣಾಭಿವೃದ್ಧಿ, ಪರಿಸರ, ವಿವಿಧ ಮೂಲಸೌಕರ್ಯಗಳು, ಆರೋಗ್ಯ, ಶಿಕ್ಷಣ ಮತ್ತು ಇಂಧನ ಮುಂತಾದ ಪ್ರಮುಖ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮತ್ತು ಚೀನ, ಪಾಕಿಸ್ತಾನಗಳ ಪ್ರಮುಖ ಆರ್ಥಿಕ ಘಟನೆಗಳಂತಹ ವಿಷಯಗಳಿಗೆ ಸಂಬಂಧಿಸಿದಂತೆ ದಿನಪತ್ರಿಕೆ ಮತ್ತು ನಿಯುತಕಾಲಿಕಗಳಿಂದ ಕತ್ತರಿಸಿದ ತುಣುಕುಗಳನ್ನು ಕಲೆಹಾಕುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿರಬೇಕು. ಅವರು ಈ ಕತ್ತರಿಸಿದ ತುಣುಕುಗಳನ್ನು ಸಂರಕ್ಷಿಸಿಟ್ಟುಕೊಂಡಿದ್ದು, ಉಪನ್ಯಾಸಕರು ಒಂದು ನಿರ್ದಿಷ್ಟ ವಿಷಯವನ್ನು ತರಗತಿಯಲ್ಲಿ ಬೋಧಿಸಲು ಪ್ರಾರಂಭಿಸಿದಾಗ ಅವುಗಳನ್ನು ತರಗತಿಯಲ್ಲಿ ಪ್ರದರ್ಶಿಸಬಹುದು ಅಥವಾ ಬಳಸಿಕೊಳ್ಳಬಹುದು. ಕಲಿಕಾರ್ಥಿಗಳು ಈ ಸಂಗ್ರಹಣೆಯನ್ನು ವರ್ಷದ ಪ್ರಾರಂಭದಲ್ಲಿಯೇ ಆರಂಭಿಸುವುದು ಅಗತ್ಯವಾಗಿರುತ್ತದೆ. ಇದರಿಂದ ಅವರು ಅಗತ್ಯ ಬಿದ್ದಾಗ ಸಂಬಂಧಪಟ್ಟ ಮಾಹಿತಿಯನ್ನು ಪ್ರಸ್ತುತಪಡಿಸಬಹುದಾಗಿದೆ, ಈ ಹವ್ಯಾಸವು ಅವರಿಗೆ ಭವಿಷ್ಯದಲ್ಲಿನ ಉನ್ನತ ವ್ಯಾಸಂಗದಲ್ಲಿ ಬಹಳ ಸಹಕಾರಿಯಾಗುತ್ತದೆ.

ಎಲ್ಲಾ ಕಾಲೇಜುಗಳೂ ಆರ್ಥಿಕ ಸಮೀಕ್ಷೆಯ ಇತ್ತೀಚಿನ ಪ್ರತಿಯನ್ನು ಕೊಳ್ಳಬೇಕು. ಇದರಲ್ಲಿ ಭಾರತದ ಆರ್ಥವ್ಯವಸ್ಥೆಗೆ ಸಂಬಂಧಪಟ್ಟ ಇತ್ತೀಚಿನ ಮಾಹಿತಿಗಳನ್ನು ಸೇರಿಸಲಾಗಿರುತ್ತದೆ. ವಿದ್ಯಾರ್ಥಿಗಳು ಅಂತಹ ವರದಿಗಳ ಬಗ್ಗೆ ಪರಿಚಿತರಾಗಿ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳುವುದು ಅಗತ್ಯವಾಗುತ್ತದೆ. ಆರ್ಥಿಕ ಸಮೀಕ್ಷೆಯ ಅನುಬಂಧದಲ್ಲಿ ಲಭ್ಯವಿರುವ ಸಂಖ್ಯಾತ್ಮಕ ಕೋಷ್ಟಕಗಳು ವಿವಿಧ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಅಪಾರವಾಗಿ ಸಹಾಯಕವಾಗುತ್ತದೆ.

ಒಂದು ನಿರ್ದಿಷ್ಟ ಸಮಸ್ಯೆಯನ್ನು ಚರ್ಚಿಸುವಾಗ ಅದರ ಸಂಖ್ಯಾತ್ಮಕ ಮಾಹಿತಿಗಳ ಮೇಲೆ ಚರ್ಚಿಸುವುದು ಅನಿವಾರ್ಯವಾಗುತ್ತದೆ. ಉದಾಹರಣೆಗೆ, ನಾವು ಬೆಳವಣಿಗೆಗೆ ದರವನ್ನು – ಒಟ್ಟಾರೆ ಬೆಳವಣಿಗೆ ದರವನ್ನು ಮತ್ತು ವಿವಿಧ ವಲಯಗಳ ಬೆಳವಣಿಗೆ ದರ - ಕುರಿತು ಮಾತನಾಡುವಾಗ ಕಲಿತಾರ್ಥಿಗಳಿಗೆ ಬೆಳವಣಿಗೆ ದರದ ಪ್ರವೃತ್ತಿಗಳ ಬಗ್ಗೆ ಒಂದು ಅಂದಾಜು ಇರಬೇಕು ಹಾಗೂ ಕೇವಲ ಬೆಳವಣಿಗೆ ದರದ ಕೋಷ್ಟಕ ರೂಪದ ದತ್ತಾಂಶಗಳನ್ನು ಯಥಾರೀತಿ ಪ್ರಸ್ತುತಪಡಿಸುವುಷ್ಟೇ ಅಲ್ಲದೇ, ಈ ಬೆಳವಣಿಗೆ ದರವನ್ನು ತಲುಪುವ ಪ್ರಕ್ರಿಯೆ ಮತ್ತು ಅದಕ್ಕೆ ಕಾರಣವಾದ ಅಂಶಗಳ ಕೊಡುಗೆ ಬಗ್ಗೆ ತಿಳಿದುಕೊಳ್ಳುವಂತೆ ಕಲಿಕಾರ್ಥಿಗಳನ್ನು ಪ್ರೋತ್ಸಾಹಿಸಬೇಕಾಗುತ್ತದೆ.

ಎಲ್ಲಾ ಅಧ್ಯಾಯಗಳಲ್ಲೂ ಕ್ರಮ ಸಂಖ್ಯೆ ನೀಡಿದ ಪೆಟ್ಟಿಗೆಗಳನ್ನು ಕಾಣುವಿರಿ. ಈ ಪೆಟ್ಟಿಗೆಗಳು ಪಠ್ಯದಲ್ಲಿ ನೀಡಿರುವ ವಿಷಯಗಳಿಗೆ ಪೂರಕವಾಗಿವೆ. ಈ ಪೆಟ್ಟಿಗೆಗಳ ಮೂಲಕ ಚರ್ಚಿತ ಸಮಸ್ಯೆಗಳಿಗೆ (ವಿಷಯಗಳಿಗೆ) ಮಾನವೀಯ ಸ್ಪರ್ಶ ನೀಡುವ, ಆ ಮೂಲಕ ನಿಜ ಜೀವನಕ್ಕೆ ಹತ್ತಿರವಾಗುವ ಒಂದು ಪ್ರಯತ್ನ ಮಾಡಲಾಗಿದೆ. ಆದಾಗ್ಯೂ, ಈ ಪೆಟ್ಟಿಗೆಗಳು 'ನೀವೇ ಮಾಡಿರಿ', 'ಚಟುವಟಿಕೆಗಳ'ಂತೆಯೇ– ಪರೀಕ್ಷೆಗಾಗಲೀ ಮೌಲ್ಯಮಾಪನಕ್ಕಾಗಲೀ ಇರುವುದಿಲ್ಲ.

ಸಾಪೇಕ್ಷವಾದ ಸಾಂಪ್ರದಾಯಿಕ 'ಅಭ್ಯಾಸಗಳಲ್ಲದೆ, ಪ್ರತಿಯೊಂದು ಅಧ್ಯಾಯದ, ಕೊನೆಯಲ್ಲಿ 'ಸೂಚಿತ ಹೆಚ್ಚಿನ ಚಟುವಟಿಕೆಗಳು' ಮತ್ತು 'ನೀವೇ ಮಾಡಿರಿ'ಗಳನ್ನು ಹೊಂದಿದ್ದು ಇವುಗಳು ಪಠ್ಯಪುಸ್ತಕದ ಭಾಗವಾಗಿದೆ. ಇವುಗಳಲ್ಲಿ ವಿಸ್ತಾರವಾಗಿರುವ ಕೆಲವನ್ನು ಪ್ರಾಜಕ್ಟ್‌ಗಳನ್ನಾಗಿ ಪರಿಗಣಿಸಬಹುದು. ಈ ಚಟುವಟಿಕೆಗಳನ್ನು ಕೈಗೊಳ್ಳುವ ಪ್ರಯುತ್ನದಲ್ಲಿ ಉಪನ್ಯಾಸಕರು ವಿದ್ಯಾರ್ಥಿಗಳನ್ನು ಪಠ್ಯಪುಸ್ತಕದಾಚೆ ಪರಿಶೋಧಿಸಲು ಪ್ರೋತ್ಸಾಹಿಸುವ ಅವಶ್ಯಕತೆಯಿದೆ.

ಎಲ್ಲಾ ಕಾಲೇಜು (ಶಾಲೆ)ಗಳಲ್ಲಿ ಮಾಹಿತಿ ತಂತ್ರಜ್ಞಾನದ ಸೌಲಭ್ಯವಿಲ್ಲದಿರುವುದು ತಿಳಿದಿರುವ ವಿಷಯವೇ ಆಗಿದೆ. ಆದಾಗ್ಯೂ, ಭಾರತದ ಅರ್ಥವ್ಯವಸ್ಥೆಗೆ ಸಂಬಂಧಪಟ್ಟ ವಿವಿಧ ಮಾಹಿತಿ ಅಂತರ್ಜಾಲದಲ್ಲಿ

ದೊರಕುತ್ತವೆಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಅಗತ್ಯವಾದ ಮಾಹಿತಿಯನ್ನು ಪಡೆಯಲು ವಿದ್ಯಾರ್ಥಿಗಳಿಗೆ ಅಂತರ್ಜಾಲದ ಪರಿಚಯ ಮಾಡಿಕೊಡುವ ಮತ್ತು ವಿವಿಧ ಸರ್ಕಾರಿ ಇಲಾಖೆಗಳ ವೆಬ್‌ಸೈಟ್‌ಗಳಿಗೆ ಪ್ರವೇಶಿಸಲು ಅನುವು ಮಾಡಿಕೊಡುವ ಅಗತ್ಯವಿದೆ. ಉದಾಹರಣೆಗೆ ಬಡತನಕ್ಕೆ ಸಂಬಂಧಿಸಿದ ವಿವರಗಳನ್ನು ಯೋಜನಾ ಆಯೋಗವು ಪ್ರಕಟಿಸುತ್ತದೆ. ಭಾರತ ಸರ್ಕಾರದ ಯೋಜನಾ ಆಯೋಗವು ಒಂದು ವೆಬ್‌ಸೈಟ್‌ನ್ನು ಹೊಂದಿದ್ದು ಅದರಲ್ಲಿ ಬಡತನವನ್ನು ಒಳಗೊಂಡಂತೆ ಭಾರತದ ವಿವಿಧ ಆಯಾಮಗಳಿಗೆ ಸಂಬಂಧಿಸಿದ ವರದಿಗಳು ಲಭಿಸುತ್ತವೆ ಎಂಬುದನ್ನು ವಿದ್ಯಾರ್ಥಿಗಳು ತಿಳಿದಿರಬೇಕು. ಇಂತಹ ವರದಿಗಳನ್ನು ಯಾವಾಗಲೂ ಮುದ್ರಿತ ಪ್ರತಿಯಲ್ಲಿ (Hard copy) ಸಂಗ್ರಹಿಸಿಡಲು ಸಾಧ್ಯವಾಗದಿರಬಹುದಾದ್ದರಿಂದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು (website) ವೆಬ್‌ಸೈಟ್‌ಗಳಿಂದ ಡೌನ್‌ಲೋಡ್ ಮಾಡಿಟ್ಟುಕೊಳ್ಳಲು ಪ್ರಯತ್ನಿಸಬಹುದು ಮತ್ತು ಅದನ್ನು ತರಗತಿಯಲ್ಲಿ ಬಳಸಬಹುದು.

ಹಿಂದಿನ ಹತ್ತು ವರ್ಷಗಳ ಆರ್ಥಿಕ ಸಮೀಕ್ಷೆಯ ವರದಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ (http://www.budgetindia.nic.in) ಅನೇಕ ಸಂಘಟನೆಗಳು ತಮ್ಮ ವೆಬ್‌ಸೈಟ್ ವಿಳಾಸವನ್ನು ಬದಲಾವಣೆ ಮಾಡಿಕೊಂಡಿರಬಹುದು. ಈ ಪುಸ್ತಕದಲ್ಲಿ ನೀಡಿರುವ ಯಾವುದಾದರೊಂದು ವೆಬ್‌ಸೈಟ್‌ನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲವೆಂದರೆ, ದಯಮಾಡಿ ಅಂತಹ ವೆಬ್‌ಸೈಟ್‌ಗಳನ್ನು ಗೂಗಲ್‌ನಂತಹ (www.google.co.in) ಸರ್ಚ್ ಎಂಜಿನ್ (ಹುಡುಕುವ ಎಂಜಿನ್)ಗಳ ಮೂಲಕ ಹುಡುಕಬಹುದು.

ಕಲಿಯುವಿಕೆಗೆ ಸಹಕಾರಿಯಾಗುವಂತೆ ಮೊಟ್ಟಮೊದಲ ಬಾರಿಗೆ 'ಪುನರುಕ್ತಿ' ಎಂಬ ಶೀರ್ಷಿಕೆಯಡಿ ಪ್ರತಿ ಅಧ್ಯಾಯದ ಸಾರವನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಎಲ್ಲಾ ಕೋಷ್ಟಗಳ ಮೂಲವನ್ನು ಕೋಷ್ಟಕದೊಂದಿಗೆ ನೀಡಲು ಸಾಧ್ಯವಾಗಿಲ್ಲ. ವಿವಿಧ ಸಂಶೋಧನಾ ಗ್ರಂಥಗಳಿಂದ ಪಡೆದಿರುವ ಈ ಮೂಲಗಳನ್ನು ಅನುಬಂಧವು (Reference) ಒಳಗೊಂಡಿದೆ.

ಈ ಪಠ್ಯಕ್ರಮದ ಮುಖ್ಯ ಉದ್ದೇಶ ವಿದ್ಯಾರ್ಥಿ ಸಮುದಾಯಕ್ಕೆ ಭಾರತೀಯ ಆರ್ಥಿಕತೆಯ ಮೂಲ ಸಮಗ್ರ ಸಮಸ್ಯೆಗಳನ್ನು ಪರಿಚಯಿಸುವುದು ಮತ್ತು ನಮ್ಮ ಆರ್ಥಿಕತೆಯ ಬಗ್ಗೆ ಸಂಪೂರ್ಣ ಮಾಹಿತಿಯುಕ್ತ ಚರ್ಚೆಗಳನ್ನು ಆರಂಭಿಸುವಂತೆ ಮಾಡುವುದಾಗಿದೆ ಎಂಬುದನ್ನು ಮತ್ತೊಮ್ಮೆ ಹೇಳಲು ಇಚ್ಛಿಸುತ್ತೇವೆ. ಸಹಕಾರ ಕಲಿಕೆಯು ಈ ಪಠ್ಯಕ್ರಮದ ಒಂದು ಪ್ರಮುಖ ಆಯಾಮವಾಗಿರುವುದರಿಂದ ಆರ್ಥಿಕತೆಯ ಬಗೆಗಿನ ಮಾಹಿತಿಗಳ ಹಾಗೂ ಶಿಕ್ಷಕರ ತೊಡಗಿಸಿಕೊಳ್ಳುವಿಕೆ ಬಗ್ಗೆ ಒತ್ತು ಕೊಡಲಾಗಿದೆ ಮತ್ತು ಈ ರೀತಿ ಸಂಗ್ರಹಿದ ಮಾಹಿತಿಗಳನ್ನು ಅರ್ಥವ್ಯವಸ್ಥೆಯ ಬಗ್ಗೆ ಕಲಿಯಲು ಹಾಗೂ ಕಲಿಸಲು ಪ್ರಮುಖ ಆದಾನವಾಗಿ ಬಳಸಬೇಕಾಗಿದೆ.

ಈ ಪುಸ್ತಕದ ಯಾವುದೇ ಭಾಗಕ್ಕೆ ಸಂಬಂಧಪಟ್ಟ ನಿಮ್ಮ ಪ್ರಶ್ನೆಗಳನ್ನು ಹಾಗೂ ಅಸಿನಿಕೆಗಳನ್ನು ಈ ಕೆಳಗೆ ನೀಡಿರುವ ವಿಳಾಸಕ್ಕೆ ಕಳುಹಿಸಬಹುದಾಗಿದೆ.

**ಪ್ರೋಗ್ರಾಂ ಕೋಆರ್ಡಿನೇಟ್‌ರ್(ಎಕನಾಮಿಕ್ಸ್)**

ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್ ಇನ್ ಸೋಷಿಯಲ್ ಸೈನ್ಸ್‌ಸ್

ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್

**ಶ್ರೀ ಅರಬಿಂದೊ ಮಾರ್ಗ್**

**ಹೊಸದೆಹಲಿ – 110016**

**ಈಮೇಲ್: classtenecons2007@hotmail.com**

# ಪರಿವಿಡಿ


**ಮುನ್ನುಡಿ** VII

**ಘಟಕ I : ಅಭಿವೃದ್ಧಿ ನೀತಿಗಳು ಮತ್ತು ಅನುಭವ (1947–1990)** 1

**ಅಧ್ಯಾಯ 1 : ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಆರ್ಥಿಕ ವ್ಯವಸ್ಥೆ** 3–14

– ವಸಾಹತುಶಾಹಿ ಆಳ್ವಿಕೆಯಲ್ಲಿ ಕೆಳಮಟ್ಟದ ಆರ್ಥಿಕಾಭಿವೃದ್ಧಿ
– ಕೃಷಿ ವಲಯ
– ಕೈಗಾರಿಕಾ ವಲಯ
– ವಿದೇಶಿ ವ್ಯಾಪಾರ
– ಜನಸಂಖ್ಯಾ ಸ್ಥಿತಿಗತಿ
– ಉದ್ಯೋಗ ರಚನೆ
– ಮೂಲ ಸೌಕರ್ಯ

**ಅಧ್ಯಾಯ 2 : ಭಾರತದ ಆರ್ಥಿಕತೆ 1950–1990** 15–34

– ಪಂಚವಾರ್ಷಿಕ ಯೋಜನೆಗಳ ಗುರಿಗಳು
– ಕೃಷಿ
– ಕೈಗಾರಿಕೆ ಮತ್ತು ವ್ಯಾಪಾರ
– ವ್ಯಾಪಾರ ನೀತಿ; ಆಮದು ಬದಲೀಕರಣ

**ಘಟಕ II : 1991ರ ನಂತರದ ಆರ್ಥಿಕ ಸುಧಾರಣೆಗಳು** 35–36

**ಅಧ್ಯಾಯ 3 : ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಒಂದು ಮೌಲ್ಯಮಾಪನ** 37–56

– ಹಿನ್ನೆಲೆ
– ಉದಾರೀಕರಣ
– ಖಾಸಗೀಕರಣ
– ಜಾಗತೀಕರಣ
– ಸುಧಾರಣೆಗಳ ಕಾಲದಲ್ಲಿ ಭಾರತದ ಅರ್ಥವ್ಯವಸ್ಥೆ : ಒಂದು ಮೌಲ್ಯಮಾಪನ

**ಘಟಕ III : ಭಾರತೀಯ ಆರ್ಥವ್ಯವಸ್ಥೆಯು ಪ್ರಸ್ತುತ ಎದುರಿಸುತ್ತಿರುವ ಸವಾಲುಗಳು** **57–58**

**ಅಧ್ಯಾಯ 4 : ಬಡತನ** **59–80**

– ಬಡವರೆಂದರೆ ಯಾರು?

– ಬಡಜನರನ್ನು ಗುರುತಿಸುವುದು ಹೇಗೆ?

– ಭಾರತದಲ್ಲಿ ಬಡವರ ಸಂಖ್ಯೆ

– ಬಡತನಕ್ಕೆ ಏನು ಕಾರಣ?

– ಬಡತನವನ್ನು ಉಪಶಮನಗೊಳಿಸುವ ನೀತಿಗಳು ಮತ್ತು ಕಾರ್ಯಕ್ರಮಗಳು

– ಬಡತನವನ್ನು ಉಪಶಮನಗೊಳಿಸುವ ಕಾರ್ಯಕ್ರಮಗಳು – ಒಂದು ವಿಮರ್ಶಾತ್ಮಕ ಮೌಲ್ಯಮಾಪನ

**ಅಧ್ಯಾಯ 5 : ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣ** **81–98**

– ಮಾನವ ಬಂಡವಾಳ ಎಂದರೇನು?

– ಮಾನವ ಬಂಡವಾಳದ ಮೂಲಗಳು

– ಮಾನವ ಬಂಡವಾಳ ಮತ್ತು ಮಾನವ ಅಭಿವೃದ್ಧಿ

– ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣದ ಸ್ಥಿತಿಗತಿ

– ಭಾರತದಲ್ಲಿ ಶಿಕ್ಷಣ ವಲಯ

– ಭವಿಷ್ಯದ ನಿರೀಕ್ಷೆಗಳು

**ಅಧ್ಯಾಯ 6 : ಗ್ರಾಮೀಣಾಭಿವೃದ್ಧಿ** **99–114**

– ಗ್ರಾಮೀಣಾಭಿವೃದ್ಧಿ ಎಂದರೇನು?

– ಗ್ರಾಮೀಣ ಪ್ರದೇಶಗಳಲ್ಲಿ ಸಾಲ ಮತ್ತು ಮಾರುಕಟ್ಟೆ ವ್ಯವಸ್ಥೆ

– ಕೃಷಿ ಮಾರುಕಟ್ಟೆ ವ್ಯವಸ್ಥೆ

– ಉತ್ಪಾದನಾ ಚಟುವಟಿಕೆಗಳತ್ತ ವೈವಿಧ್ಯೀಕರಣ

– ಸುಸ್ಥಿರ ಅಭಿವೃದ್ಧಿ ಮತ್ತು ಸಾವಯವ ಬೇಸಾಯ

**ಅಧ್ಯಾಯ 7 : ಉದ್ಯೋಗ : ಬೆಳವಣಿಗೆ, ಮಾಹಿತಿ ಮತ್ತು ಇತರ ಸಮಸ್ಯೆಗಳು** **115–138**

– ಶ್ರಮಿಕರು ಮತ್ತು ಉದ್ಯೋಗ

– ಉದ್ಯೋಗದಲ್ಲಿ ಜನರ ಭಾಗವಹಿಸುವಿಕೆ

– ಸ್ವ–ಉದ್ಯೋಗಿಗಳು ಮತ್ತು ಕೂಲಿ ಶ್ರಮಿಕರು

– ಉದ್ಯಮಗಳು, ಕಾರ್ಖಾನೆಗಳು ಮತ್ತು ಕಚೇರಿಗಳಲ್ಲಿನ ಉದ್ಯೋಗ

– ಬೆಳವಣಿಗೆ ಮತ್ತು ಬದಲಾಗುತ್ತಿರುವ ಉದ್ಯೋಗದ ರಚನೆ
– ಭಾರತದ ಶ್ರಮಬಲದ ಅನೌಪಚಾರೀಕರಣ
– ನಿರುದ್ಯೋಗ
– ಸರ್ಕಾರ ಮತ್ತು ಉದ್ಯೋಗ ಸೃಷ್ಠಿ

**ಅಧ್ಯಾಯ 8 : ಮೂಲ ಸೌಕರ್ಯಗಳು** **139–160**

– ಮೂಲ ಸೌಕರ್ಯಗಳು ಎಂದರೇನು?
– ಮೂಲ ಸೌಕರ್ಯದ ಮಹತ್ವ
– ಭಾರತದಲ್ಲಿ ಮೂಲ ಸೌಕರ್ಯಗಳ ಸ್ಥಿತಿಗತಿ
– ಇಂಧನ
– ಆರೋಗ್ಯ

**ಅಧ್ಯಾಯ 9 : ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ** **161–180**

– ಪರಿಸರ ವ್ಯಾಖ್ಯೆ ಮತ್ತು ಕಾರ್ಯಗಳು
– ಭಾರತದ ಪರಿಸರದ ಸ್ಥಿತಿಗತಿಗಳು
– ಸುಸ್ಥಿರ ಅಭಿವೃದ್ಧಿ
– ಸುಸ್ಥಿರ ಅಭಿವೃದ್ಧಿಯ ಕಾರ್ಯತಂತ್ರಗಳು

**ಘಟಕ IV : ಭಾರತದ ಅಭಿವೃದ್ಧಿಯ ಅನುಭವಗಳು : ನೆರೆ ರಾಷ್ಟ್ರಗಳೊಂದಿಗೆ ತೌಲನಿಕ ಅಧ್ಯಯನ** **181–182**

**ಅಧ್ಯಾಯ 10 : ಭಾರತ ಮತ್ತು ಅದರ ನೆರೆ ರಾಷ್ಟ್ರಗಳ ಅಭಿವೃದ್ಧಿಯ ಅನುಭವಗಳ ತೌಲನಿಕ ಅಧ್ಯಯನ** **183–200**

– ಅಭಿವೃದ್ಧಿ ಪಥ – ಒಂದು ಕ್ಷಿಪ್ರ ನೋಟ
– ಜನಸಂಖ್ಯಾ ಸೂಚಕಗಳು
– ಒಟ್ಟು ದೇಶಿಯ ಉತ್ಪನ್ನ ಮತ್ತು ವಲಯಗಳು
– ಮಾನವ ಅಭಿವೃದ್ಧಿ ಸೂಚಕಗಳು
– ಅಭಿವೃದ್ಧಿಯ ಕಾರ್ಯ ತಂತ್ರಗಳು – ಒಂದು ಮೌಲ್ಯಮಾಪನ

**ಪದಕೋಶ :** **201–212**

# ಘಟಕ

# 1

## ಅಭಿವೃದ್ಧಿ ನೀತಿಗಳು ಮತ್ತು ಅನುಭವ (1947–90)

## DEVELOPMENT POLICIES AND EXPERIENCE (1947-90)

ಈ ಘಟಕದ ಎರಡು ಅಧ್ಯಾಯಗಳು ಸ್ವತಂತ್ರ ಪೂರ್ವದಿಂದ ಹಿಡಿದು, ಯೋಜಿತ ಅಭಿವೃದ್ಧಿಯ ನಾಲ್ಕು ದಶಕಗಳವರೆಗೆ ಭಾರತವು ಆರಿಸಿಕೊಂಡ ಅಭಿವೃದ್ಧಿ ಪಥದ ಸಮಗ್ರ ಸ್ವರೂಪವನ್ನು ನೀಡುತ್ತವೆ. ಅಂದರೆ, ಭಾರತ ಸರ್ಕಾರವು ಯೋಜನಾ ಆಯೋಗದ ಸ್ಥಾಪನೆ ಮತ್ತು ಪಂಚವಾರ್ಷಿಕ ಯೋಜನೆಗಳಂತಹ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕಾಯಿತು. ಈ ಘಟಕದಲ್ಲಿ ಪಂಚವರ್ಷಿಕ ಯೋಜನೆಗಳ ಗುರಿಗಳ ಮೇಲ್ನೋಟ ಮತ್ತು ಯೋಜಿತ ಅಭಿವೃದ್ಧಿಯ ಅನುಕೂಲಗಳ ಹಾಗೂ ಮಿತಿಗಳ ವಿಮರ್ಶಾತ್ಮಕ ಮೌಲ್ಯಮಾಪನವನ್ನು ಮಾಡಲಾಗಿದೆ.

1

# ಅಧ್ಯಾಯ–1

# ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಆರ್ಥಿಕ ವ್ಯವಸ್ಥೆ

# INDIAN ECONOMY ON THE EVE OF INDEPENDENCE

**ಈ ಅಧ್ಯಾಯದ ಅಧ್ಯಯನದ ನಂತರ ನೀವು,**

- ಭಾರತದ ಸ್ವಾತಂತ್ರೋತ್ಸವ ವರ್ಷ 1947ರಲ್ಲಿ ಭಾರತದ ಆರ್ಥಿಕತೆಯ ಸ್ಥಿತಿಗತಿಯ ಪರಿಚಯ ಮಾಡಿಕೊಳ್ಳುವಿರಿ.
- ಭಾರತದ ಆರ್ಥಿಕತೆಯ ಅನಭಿವೃದ್ಧಿ ಮತ್ತು ಸ್ಥಗಿತತೆಗೆ ಕಾರಣವಾದ ಅಂಶಗಳುನ್ನು ಅರ್ಥ ಮಾಡಿಕೊಳ್ಳುವಿರಿ.

"ಭಾರತ ನಮ್ಮ ಸಾಮ್ರಾಜ್ಯದ ಶಿಖರ... ನಮ್ಮ ಚಕ್ರಾಧಿಪತ್ಯದ ಯಾವುದೇ ಭಾಗವನ್ನು ಕಳೆದುಕೊಂಡರೂ ನಾವು ಬದುಕುತ್ತೇವೆ. ಆದರೆ ನಾವು ಭಾರತವನ್ನು ಕಳೆದುಕೊಂಡರೆ ನಮ್ಮ ಸಾಮ್ರಾಜ್ಯದ ಸೂರ್ಯ ಅಸ್ತಂಗತನಾಗುತ್ತಾನೆ."

**– ವಿಕ್ಟರ್ ಅಲೆಗ್ಸಾಂಡರ್ ರೂಸ್, ಭಾರತದ ವೈಸ್ ರಾಯ್ 1894**

## 1.1 ಪೀಠಿಕೆ (INTRODUCTION)

"ಭಾರತದ ಆರ್ಥಿಕಾಭಿವೃದ್ಧಿ" ಈ ಪುಸ್ತಕದ ಮೂಲ ಉದ್ದೇಶ ಭಾರತದ ಆರ್ಥಿಕತೆಯ ಮೂಲಭೂತ ಲಕ್ಷಣಗಳು ಮತ್ತು ಸ್ವಾತಂತ್ರ್ಯಾನಂತರದಲ್ಲಿನ ಅಭಿವೃದ್ಧಿಯ ಸ್ವರೂಪವನ್ನು ಪರಿಚಯಿಸುವುದು. ಆದಾಗ್ಯೂ ದೇಶದ ಆರ್ಥಿಕ ವ್ಯವಸ್ಥೆಯ ಗತಕಾಲದ ಘಟನಾವಳಿಗಳನ್ನು ತಿಳಿದುಕೊಳ್ಳುವುದು ಆರ್ಥಿಕತೆಯ ಪ್ರಸ್ತುತ ಸ್ಥಿತಿಗತಿ ಮತ್ತು ಭವಿಷ್ಯದ ನಿರೀಕ್ಷೆಗಳನ್ನು ಅಭ್ಯಸಿಸುವಷ್ಟೇ ಮಹತ್ವವಾದುದು. ಆದ್ದರಿಂದ ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಆರ್ಥಿಕ ಸ್ಥಿತಿಗತಿ ಮತ್ತು ಸ್ವಾತಂತ್ರ್ಯ ನಂತರದ ಅಭಿವೃದ್ಧಿ ಕಾರ್ಯತಂತ್ರಗಳನ್ನು ರೂಪಿಸುವಾಗ ಪರಿಗಣಿಸಲ್ಪಟ್ಟ ವಿವಿಧ ಸಂಗತಿಗಳನ್ನು ಕುರಿತು ಮೊದಲು ತಿಳಿದುಕೊಳ್ಳೋಣ.

ಭಾರತದ ಪ್ರಸ್ತುತ ಆರ್ಥಿಕ ವ್ಯವಸ್ಥೆಯ ರಚನೆಯು ತಕ್ಷಣದಲ್ಲಿ ಸೃಷ್ಟಿಯಾದುದಲ್ಲ. ಇದರ ಬೇರುಗಳು ಇತಿಹಾಸದಲ್ಲಿ ಪ್ರಮುಖವಾಗಿ ಬ್ರಿಟಿಷರ ಆಳ್ವಿಕೆಯಲ್ಲಿ ಆಳವಾಗಿವೆ. ಭಾರತವು 15 ಆಗಸ್ಟ್ 1947ರಂದು ಅಂತಿಮವಾಗಿ ಸ್ವಾತಂತ್ರ್ಯ ಪಡೆಯುವ ಮುನ್ನ ಸುಮಾರು ಎರಡು ಶತಮಾನಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು. ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯ ಏಕೈಕ ಉದ್ದೇಶವು ಇಂಗ್ಲೆಂಡಿನಲ್ಲಿ ತ್ವರಿತವಾಗಿ ವಿಸ್ತರಣೆಯಾಗುತ್ತಿದ್ದ ಆಧುನಿಕ ಕೈಗಾರಿಕಾ ನೆಲೆಗೆ ಕಚ್ಚಾ ಸಂಪನ್ಮೂಲಗಳ ಪೂರೈಕೆದಾರನಾಗಿ ಭಾರತವನ್ನು ಸೀಮಿತಗೊಳಿಸುವುದಾಗಿತ್ತು. ಭಾರತವು ಕಳೆದ ಆರುವರೆ ದಶಕಗಳಲ್ಲಿ ಸಾಧಿಸಿದ ಅಭಿವೃದ್ಧಿಯ ಮಟ್ಟವನ್ನು ಮೌಲ್ಯಮಾಪನ ಮಾಡಲು ಬ್ರಿಟೀಷರ ಈ ಶೋಷಿತ ಸ್ವರೂಪದ ಸಂಬಂಧಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

## 1.2 ವಸಾಹತುಶಾಹಿ ಆಳ್ವಿಕೆಯಲ್ಲಿ ಕೆಳಮಟ್ಟದ ಆರ್ಥಿಕಾಭಿವೃದ್ಧಿ (LOW LEVEL OF ECONOMIC DEVELOPMENT UNDER THE COLONIAL RULE)

ಬ್ರಿಟೀಷರ ಆಗಮನಕ್ಕಿಂತ ಪೂರ್ವದಲ್ಲಿ ಭಾರತವು ಸ್ವತಂತ್ರ ಆರ್ಥಿಕತೆಯನ್ನು ಹೊಂದಿತ್ತು. ಕೃಷಿಯು ದೇಶದ ಬಹುಪಾಲು ಜನರ ಜೀವನಾಧಾರ ಮೂಲವಾಗಿದ್ದಾಗ್ಯೂ, ವೈವಿಧ್ಯಮಯ ತಯಾರಿಕಾ ಚಟುವಟಿಕೆಗಳು ದೇಶದ ಆರ್ಥಿಕತೆಯ ಲಕ್ಷಣವಾಗಿತ್ತು. ಭಾರತವು ಹತ್ತಿಬಟ್ಟೆ ಮತ್ತು ರೇಷ್ಮೆ ಬಟ್ಟೆ, ಲೋಹ ಮತ್ತು ಅಮೂಲ್ಯ ಹರಳುಗಳು ಮುಂತಾದ ಕರಕುಶಲ ಕೈಗಾರಿಕಾ ವಸ್ತುಗಳಿಗೆ ಜನಪ್ರಿಯವಾಗಿತ್ತು. ಭಾರತದಿಂದ ಆಮದು ಮಾಡಿಕೊಳ್ಳುತ್ತಿದ್ದ ಈ ಉತ್ಪನ್ನಗಳು ಅವುಗಳ ಉತ್ಕೃಷ್ಟ ಗುಣಮಟ್ಟ ಮತ್ತು ಹಸ್ತಕೌಶಲ್ಯದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಮೆರೆದಿದ್ದವು.

ವಸಾಹತುಶಾಹಿ ಸರ್ಕಾರದ ಆರ್ಥಿಕ ನೀತಿಗಳು ಭಾರತದ ಆರ್ಥಿಕತೆಯ ಅಭಿವೃದ್ಧಿಗೆ ಆದ್ಯತೆ ನೀಡದೆ, ತನ್ನ ಮಾತೃ ದೇಶವಾದ ಇಂಗ್ಲೆಂಡಿನ ಆರ್ಥಿಕತೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಹಂಬಲಿಸುತ್ತಿದ್ದವು. ಇಂತಹ ಆರ್ಥಿಕ ನೀತಿಗಳು ಭಾರತದ ಆರ್ಥಿಕತೆಯ ಮೂಲ ರಚನೆಯನ್ನು ಇಂಗ್ಲೆಂಡಿಗೆ ಕಚ್ಚಾ ಸಂಪನ್ಮೂಲಗಳನ್ನು ಪೂರೈಕೆ ಮಾಡುವ ಮತ್ತು ಬ್ರಿಟನ್ನಿನಲ್ಲಿ ಉತ್ಪಾದಿಸುವ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯಾಗಿ ಪರಿವರ್ತನೆ ಮಾಡಿದವು.

**ಪೆಟ್ಟಿಗೆ ಸಂಖ್ಯೆ 1.1: ಬಂಗಾಳದ ಜವಳಿ ಕೈಗಾರಿಕೆ**

ಮಸ್ಲಿನ್ ಬಟ್ಟೆಯು ಹತ್ತಿ ಬಟ್ಟೆಯ ಒಂದು ವಿಧವಾಗಿದ್ದು, ಇದರ ಮೂಲವು ಬಂಗಾಳವಾಗಿತ್ತು. ಪ್ರಮುಖವಾಗಿ ಪ್ರಸ್ತುತ ಬಾಂಗ್ಲಾದೇಶದ ರಾಜಧಾನಿಯಾದ ಢಾಕಾದ ಸುತ್ತಮುತ್ತ ಉತ್ಪಾದಿಸಲಾಗುತ್ತಿತ್ತು. "ಡಕೈ ಮಸ್ಲಿನ್" ಹತ್ತಿ ಬಟ್ಟೆಯು ವಿಶಿಷ್ಟ ದರ್ಜೆಯಾಗಿದ್ದು ಜಾಗತಿಕ ಪ್ರಖ್ಯಾತಿಯನ್ನು ಗಳಿಸಿತ್ತು. ಮಸ್ಲಿನ್ ಬಟ್ಟೆಯ ಅತ್ಯುತ್ತಮ ಬಗೆಯನ್ನು "ಮಲ್‌ಮಲ್" ಎಂದು ಕರೆಯಲಾಗುತ್ತಿತ್ತು. ಆಗಾಗ್ಗೆ, ವಿದೇಶಿ ಪ್ರವಾಸಿಗರು ಇದನ್ನು "ಮಲ್‌ಮಾಲ್ ಶಾಯ್" ಅಥವಾ "ಮಲ್‌ಮಾಲ್‌ಖಾಸ್" ಎಂದು ಉಲ್ಲೇಖಿಸುತ್ತಿದ್ದರು ಮತ್ತು ಮಲ್‌ಮಾಲ್‌ಶಾಯ್ ಧರಿಸುವುದು ರಾಜಮನೆತನದವರಿಗೆ ಯೋಗ್ಯವಾದುದೆಂದು ಭಾವಿಸಲಾಗಿತ್ತು.

ಸಹಜವಾಗಿಯೇ, ವಸಾಹತುಶಾಹಿ ಸರ್ಕಾರವು ಭಾರತದ ರಾಷ್ಟ್ರೀಯ ವರಮಾನ ಮತ್ತು ತಲಾ ವರಮಾನವನ್ನು ಅಂದಾಜು ಮಾಡಲು ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಭಾರತದ ರಾಷ್ಟ್ರೀಯ ವರಮಾನ ಮತ್ತು ತಲಾ ವರಮಾನವನ್ನು ಮಾಪನ ಮಾಡಲು ಕೆಲವು ವೈಯಕ್ತಿಕ ಪ್ರಯತ್ನಗಳು ನಡೆದವು. ಅವರಲ್ಲಿ ಪ್ರಖ್ಯಾತರಾದವರೆಂದರೆ ದಾದಾಬಾಯಿ ನವರೋಜಿ, ವಿಲಿಯಂ ದಿಗ್ಬಿ, ಫಿಂಡ್ಲೆ ಶಿರಾಸ್, ವಿ.ಕೆ.ಆರ್.ವಿ.ರಾವ್ ಮತ್ತು ಆರ್.ಸಿ.ದೇಸಾಯಿ. ಆದರೆ ಈ ಪ್ರಯತ್ನಗಳು ವಿವಾದಾತ್ಮಕ ಮತ್ತು ಹೊಂದಾಣಿಕೆ ಇಲ್ಲದ ಫಲಿತಾಂಶ ನೀಡಿದವು. ವಸಾಹತುಶಾಹಿ ಆಳ್ವಿಕೆ ಕಾಲದಲ್ಲಿ ವಿ.ಕೆ.ಆರ್.ವಿ.ರಾವ್‌ರವರು ಮಾಡಿದ ಆದಾಯದ ಅಂದಾಜು ಪ್ರಯತ್ನಗಳು ಅತ್ಯಂತ ಮಹತ್ವಪೂರ್ಣವೆಂದು ಪರಿಗಣಿಸಲಾಗಿದೆ. ಆದಾಗ್ಯೂ, ಬಹುತೇಕ ಅಧ್ಯಯನಗಳು 20ನೇ ಶತಮಾನದ ಪೂರ್ವಾರ್ಧದಲ್ಲಿ ದೇಶದ ಸಮಗ್ರ ನೈಜ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರವು ಶೇಕಡ ಎರಡಕ್ಕಿಂತ ಕಡಿಮೆ ಮತ್ತು ತಲಾ ಆದಾಯದ ಬೆಳವಣಿಗೆಯು ಶೇಕಡ ಅರ್ಧಕ್ಕಿಂತ ಕಡಿಮೆ ಇದೆಯೆಂದು ನಿರ್ಧರಿಸಿದ್ದವು.

## 1.3 ಕೃಷಿ ವಲಯ

## (AGRICULTURAL SECTOR)

ಬ್ರಿಟೀಷರ ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಆರ್ಥಿಕತೆಯು ಕೃಷಿ ಪ್ರಧಾನವಾಗಿಯೇ ಉಳಿದಿತ್ತು. ದೇಶದ ಜನಸಂಖ್ಯೆಯ ಸುಮಾರು ಶೇಕಡ 85 ರಷ್ಟು ದೇಶದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಜೀವನೋಪಾಯಕ್ಕಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿದ್ದರು. ಬಹುಪಾಲು ಜನಸಂಖ್ಯೆ ಉದ್ಯೋಗಕ್ಕಾಗಿ ಕೃಷಿಯನ್ನು ಅವಲಂಬಿಸಿದಾಗ್ಯೂ, ಪ್ರಾಥಮಿಕ ವಲಯದ ಅಭಿವೃದ್ಧಿ ನಿರಂತರವಾಗಿ ಸ್ಥಗಿತವಾಯಿತು ಮತ್ತು ಅನಿಶ್ಚಿತವಾಗಿ ಕ್ಷೀಣಿಸಿತು. ಒಟ್ಟು ಸಾಗುವಳಿ ಭೂಮಿಯ ವಿಸ್ತರಣೆಯಿಂದಾಗಿ ಉತ್ಪಾದನೆ ಅಲ್ಪ ಪ್ರಮಾಣದಲ್ಲಿ ಹೆಚ್ಚಿದರೂ, ಕೃಷಿ ಉತ್ಪಾದಕತೆ ಇಳಿಮುಖವಾಯಿತು. ಬ್ರಿಟೀಷ್ ವಸಾಹತುಶಾಹಿ ಸರ್ಕಾರ ಜಾರಿಗೊಳಿಸಿದ ವಿವಿಧ ಭೂಮಾಲೀಕತ್ವ ಪದ್ಧತಿಗಳು, ಪ್ರಮುಖವಾಗಿ 'ಜಮೀನ್ದಾರಿ ಪದ್ಧತಿ' ಯಿಂದ ಕೃಷಿ ವಲಯದ ಸ್ಥಗಿತತೆಗೆ ಕಾರಣವಾಯಿತು. ವಿಶೇಷವಾಗಿ

**ಪೆಟ್ಟಿಗೆ ಸಂಖ್ಯೆ 1.2 : ಬ್ರಿಟೀಷ್ ಭಾರತದ ಪೂರ್ವದಲ್ಲಿ ಕೃಷಿ**

ಫ್ರೆಂಚ್ ಪ್ರವಾಸಿಗ, ಬರ್ನಿಯರ್ 17 ನೇ ಶತಮಾನದಲ್ಲಿ ಬಂಗಾಳದ ಸ್ಥಿತಿಗತಿಯನ್ನು ಈ ಕೆಳಗಿನಂತೆ ವರ್ಣಿಸುತ್ತಾನೆ. "ಬಂಗಾಳಕ್ಕೆ ನನ್ನ ಎರಡು ಭೇಟಿಗಳಿಂದ ನಾನು ಸಂಪಾಸಿದಿದ ಜ್ಞಾನವೆಂದರೆ ಇದು ಈಜಿಪ್ಟ್‌ಗಿಂತಲೂ ಶ್ರೀಮಂತವಾಗಿದೆ. ಇದು ಹತ್ತಿ, ರೇಷ್ಮೆ, ಅಕ್ಕಿ, ಸಕ್ಕರೆ, ಮತ್ತು ಬೆಣ್ಣೆಯನ್ನು ಹೇರಳವಾಗಿ ರಫ್ತು ಮಾಡುತ್ತಿದೆ. ಅಲ್ಲದೇ ಗೋಧಿ, ತರಕಾರಿ, ಧಾನ್ಯ, ಪಕ್ಷಿ (ಕೋಳಿ) ಬಾತುಕೋಳಿ ಮತ್ತು ತುಪ್ಪವನ್ನು ದೇಶಿಯ ಅನುಭೋಗಕ್ಕೆ ವಿಪುಲವಾಗಿ ಉತ್ಪಾದಿಸುತ್ತಿದೆ. ಇದು ಹಂದಿ, ಕುರಿಮಂದೆ, ಆಡು ಮತ್ತು ಮೇಕೆಗಳ ಸಮೃದ್ಧ ಸಮೂಹ ಹೊಂದಿದೆ. ಎಲ್ಲಾ ಬಗೆಯ ಮೀನುಗಳು ವಿಪುಲವಾಗಿವೆ. ರಾಜ್‌ಮಹಲ್‌ನಿಂದ ಕರಾವಳಿಯವರೆಗೆ, ನೌಕಯಾನ ಮತ್ತು ನೀರಾವರಿಗಾಗಿ, ಗತಿಸಿಹೋದ ಕಾಲದಲ್ಲಿ ಗಂಗಾನದಿಯ ಮೂಲಕ ಸೀಳಿಹೋದ (ಅಪಾರ ಶ್ರಮದೊಂದಿಗೆ) ಅಸಂಖ್ಯಾತ ಕಾಲುವೆಗಳಿವೆ.



**ಚಿತ್ರ 1.1 ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತದ ಕೃಷಿಯ ಸ್ಥಗಿತತೆ**

- 17ನೇ ಶತಮಾನದಲ್ಲಿ ನಮ್ಮ ದೇಶದ ಕೃಷಿ ವಲಯ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬುದನ್ನು ಗಮನಿಸಿ. ಇದಕ್ಕೆ ಪ್ರತಿಯಾಗಿ ಸುಮಾರು 200 ವರ್ಷಗಳ ನಂತರ ಬ್ರಿಟೀಷರು ಭಾರತವನ್ನು ಬಿಟ್ಟು ತೆರಳಿದಾಗ ಕೃಷಿಯ ಬೆಳವಣಿಗೆ ಜಡವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಇಂದಿನ ಪೂರ್ವ ರಾಜ್ಯದ ಭಾಗಗಳನ್ನೊಳಗೊಂಡ ಬಂಗಾಳ ಪ್ರಾಂತ್ಯದಲ್ಲಿ ಜಾರಿಗೊಳಿಸಿದ 'ಜಮೀನ್ದಾರಿ ಪದ್ಧತಿ'ಯಿಂದಾಗಿ ಕೃಷಿ ವಲಯದ ಲಾಭವು ಸಾಗುವಳಿದಾರರ ಬದಲಿಗೆ ಜಮೀನುದಾರರ ಪಾಲಾಯಿತು. ವಸಾಹತುಶಾಹಿ ಸರ್ಕಾರವಲ್ಲದೆ, ಜಮೀನುದಾರರೂ ಕೂಡ ಕೃಷಿ ಅಭಿವೃದ್ಧಿಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಸಾಗುವಳಿದಾರರ ಆರ್ಥಿಕ ಪರಿಸ್ಥಿತಿಯನ್ನು ಲೆಕ್ಕಿಸದೆ ಜಮೀನುದಾರರು ನಿರ್ದಾಕ್ಷಿಣ್ಯವಾಗಿ ಗೇಣಿ ಸಂಗ್ರಹಿಸುತ್ತಿದ್ದರು. ಪರಿಣಾಮವಾಗಿ, ಸಾಗುವಳಿದಾರರು ವ್ಯಾಪಕ ಶೋಷಣೆ ಮತ್ತು ಸಾಮಾಜಿಕ ತಲ್ಲಣಗಳಿಗೆ ಒಳಗಾಗಿ ರೈತರ ಸ್ಥಿತಿಗತಿ ಶೋಚನೀಯವಾಯಿತು. ವಸಾಹತುಶಾಹಿ ಸರ್ಕಾರದ 'ಕಂದಾಯ ಪಾವತಿ' ಷರತ್ತುಗಳು ಜಮೀನುದಾರ ಈ ರೀತಿಯ ವರ್ತನೆಗೆ ಕಾರಣವಾಗಿತ್ತು, ಜಮೀನುದಾರರು ನಿಗದಿತ ಅವಧಿಯೊಳಗೆ ಸರ್ಕಾರಕ್ಕೆ ನಿರ್ದಿಷ್ಟ ಮೊತ್ತದ ಕಂದಾಯವನ್ನು ಪಾವತಿಸದಿದ್ದರೆ ಭೂ ಮಾಲೀಕತ್ವದ ಹಕ್ಕನ್ನು ಕಳೆದುಕೊಳ್ಳುತ್ತಿದ್ದರು. ಜೊತೆಗೆ ಹಿಂದುಳಿದ ತಂತ್ರಜ್ಞಾನ, ನೀರಾವರಿ ಸೌಲಭ್ಯದ ಕೊರತೆ, ರಸಗೊಬ್ಬರಗಳ ಅಸಮರ್ಪಕ ಬಳಕೆ ಕೃಷಿ ಉತ್ಪಾದಕತೆಯ ಮಟ್ಟವನ್ನು ಹದಗೆಡಿಸಿ, ರೈತರ ಸಮಸ್ಯೆಯನ್ನು ಉಲ್ಬಣಗೊಳಿಸಿ ಭೀಕರ ದುರವಸ್ಥೆಗೆ ಕಾರಣವಾದುವು. ಕೃಷಿ ವಲಯದ ವಾಣಿಜ್ಯೀಕರಣದಿಂದಾಗಿ ಕೆಲವು ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳ ಇಳುವರಿ ಸಾಪೇಕ್ಷವಾಗಿ ಅಧಿಕಗೊಂಡ ನಿದರ್ಶನಗಳಿವೆ. ಭಾರತದ ಕೆಲವೇ ರೈತರು ಆಹಾರ ಬೆಳೆಗಳ ಬದಲಿಗೆ ವಾಣಿಜ್ಯ ಬೆಳೆಗಳನ್ನು ಬೆಳೆದರು. ಆದರೆ ಈ ವಾಣಿಜ್ಯ ಬೆಳೆಗಳನ್ನು ಅಂತಿಮವಾಗಿ ಬ್ರಿಟೀಷ್ ಕೈಗಾರಿಕೆಗಳು ತಾಯಿ ನಾಡಿನಲ್ಲಿ ಬಳಸುತ್ತಿದ್ದರಿಂದ ಭಾರತದ ರೈತರ ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗೆ ಸಹಾಯಕವಾಗಲಿಲ್ಲ. ನೀರಾವರಿ ಸೌಲಭ್ಯದ ಪೂರೈಕೆಯಲ್ಲಿ ಅಲ್ಪ ಪ್ರಗತಿ ಸಾಧಿಸಿದ್ದರೂ, ಹೂಡಿಕೆಯ ಅಭಾವ, ಅಸಮರ್ಪಕ ನೆರೆ ನಿಯಂತ್ರಣ, ಕಾಲುವೆ ಸೌಲಭ್ಯದ ಕೊರತೆ ಮತ್ತು ಭೂ ಸವಕಳಿಯಿಂದಾಗಿ ಕೃಷಿ ಪ್ರಗತಿ ಸಾಧ್ಯವಾಗಲಿಲ್ಲ.ಈ ನಡುವೆ ಕೆಲವೇ ರೈತರು ಬೆಳೆಯ ಮಾದರಿಯನ್ನು ಅಹಾರ ಬೆಳೆಗಳಿಂದ ವಾಣಿಜ್ಯ ಬೆಳೆಗಳಿಗೆ ಪರಿವರ್ತಿಸಿಕೊಂಡರೂ, ಬಹುತೇಕ ಸಾಗುವಳಿದಾರರು, ಗೇಣಿದಾರರು ಮತ್ತು ಸಣ್ಣ ರೈತರು ಕೃಷಿಯಲ್ಲಿ ಹೂಡಿಕೆಗೆ ಸಂಪನ್ಮೂಲವನ್ನಾಗಲಿ ಮತ್ತು ತಂತ್ರಜ್ಞಾನವನ್ನಾಗಲಿ ಅಥವಾ ಉತ್ತೇಜಕಗಳನ್ನಾಗಲಿ ಹೊಂದಿರಲಿಲ್ಲ.



**ನೀವೇ ಮಾಡಿರಿ**

**(Work These Out)**

- ಸ್ವತಂತ್ರ ಭಾರತದ ಭೂಪಟವನ್ನು ಬ್ರಿಟೀಷ್ ಭಾರತದ ಭೂಪಟದೊಂದಿಗೆ ಹೋಲಿಕೆ ಮಾಡಿ ಪಾಕಿಸ್ತಾನಕ್ಕೆ ಸೇರ್ಪಡೆಯಾದ ಭೂ ಪ್ರದೇಶ ಗುರುತಿಸಿ. ಪಾಕಿಸ್ತಾನಕ್ಕೆ ಸೇರ್ಪಡೆಯಾದ ಭೂ ಭಾಗಗಳು ಭಾರತದ ಆರ್ಥಿಕತೆಯ ದೃಷ್ಟಿಕೋನದಿಂದ ಏಕೆ ಮಹತ್ವವಾದವು?

  (ಡಾ.ರಾಜೇಂದ್ರ ಪ್ರಸಾದ್‌ರವರ **INDIA DIVIDED** ಪುಸ್ತಕವನ್ನು ಓದಿ)

- ಬ್ರಿಟೀಷರು ಭಾರತದಲ್ಲಿ ಜಾರಿಗೊಳಿಸಿದ ಕಂದಾಯ ಪಾವತಿ ಪದ್ಧತಿಗಳಾವುವು? ಅವುಗಳನ್ನು ಎಲ್ಲಿ ಮತ್ತು ಯಾವಾಗ ಜಾರಿಗೊಳಿಸಲಾಯಿತು ಮತ್ತು ಪರಿಣಾಮಗಳೇನು? ಈ ಕಂದಾಯ ಪಾವತಿ ಪದ್ಧತಿಗಳು ಇಂದಿನ ಕೃಷಿ ವಲಯದ ಚಿತ್ರಣದ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿವೆ ಎಂದು ನೀವು ತಿಳಿಯುವಿರಿ? (ನೀವು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ರಮೇಶ್ ಚಂದ್ರ ದತ್ತರವರ 'ಭಾರತದ ಆರ್ಥಿಕ ಇತಿಹಾಸ' – ಮೂರು ಆವೃತ್ತಿಗಳು– ಮತ್ತು ಬಿ.ಹೆಚ್. ಬಾಡೆನ್–ಪೊವೆಲ್‌ರವರ 'ಬ್ರಿಟೀಷ್ ಭಾರತದ ಭೂ ಪದ್ಧತಿಗಳು' – ಎರಡು ಆವೃತ್ತಿಗಳು – ಪುಸ್ತಕಗಳನ್ನು ಓದಿರಿ. ವಿಷಯದ ಉತ್ತಮ ಗ್ರಹಿಕೆಗಾಗಿ ಬ್ರಿಟೀಷ್ ಭಾರತದ ಕೃಷಿ ಸಂಬಂಧಿ ಭೂಪಟವನ್ನು ಕೈ ಬರಹ ಅಥವ ಶಾಲೆಯ ಕಂಪ್ಯೂಟರ್ ಸಹಾಯದಿಂದ ಚಿತ್ರಿಸಿ. ಕೈ ಬರಹದಲ್ಲಿ ಚಿತ್ರಿಸಿದ ನಕ್ಷೆಯು ವಿಷಯವನ್ನು ಉತ್ತಮವಾಗಿ ಗ್ರಹಿಸಿ ಅರ್ಥೈಸಲು ಸಹಾಯಕ ಎಂಬುದನ್ನು ನೆನಪಿನಲ್ಲಿಡಬೇಕು.)

## 1.4 ಕೈಗಾರಿಕಾ ವಲಯ
## (INDUSTRIAL SECTOR)

ವಸಾಹತುಶಾಹಿ ಆಳ್ವಿಕೆಯಲ್ಲಿ ಕೃಷಿಯಂತೆಯೇ ಕೈಗಾರಿಕಾ ವಲಯದ ಅಡಿಪಾಯ ಸದೃಢ ಅಭಿವೃದ್ಧಿಯನ್ನು ಕಾಣಲಿಲ್ಲ. ರಾಷ್ಟ್ರದ ಜಗತ್ಪ್ರಸಿದ್ಧ ಕರಕುಶಲ ಉದ್ದಿಮೆ ವಲಯದ ಬೆಳವಣಿಗೆ ಕ್ಷೀಣಿಸಿದರೂ ಅದಕ್ಕೆ ಪ್ರತಿಯಾಗಿ ಆಧುನಿಕ ಕೈಗಾರಿಕಾ ನೆಲೆಯ ಪರಂಪರೆಯನ್ನು ಉಳಿಸುವಂತಹ ಅಭಿವೃದ್ಧಿ ಸಾಧಿಸಲು ಅವಕಾಶ ನೀಡಲಿಲ್ಲ. ಭಾರತದ ಕೈಗಾರಿಕೆಗಳನ್ನು ವ್ಯವಸ್ಥಿತವಾಗಿ ನಾಶಪಡಿಸುವ ವಸಾಹತುಶಾಹಿ ಸರ್ಕಾರದ ನೀತಿಯ ಎರಡು ಮೂಲ ಉದ್ದೇಶಗಳನ್ನು ಹೊಂದಿತ್ತು. ಮೊದಲನೆಯದಾಗಿ, ಬ್ರಿಟನ್ನಿನಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕೈಗಾರಿಕೆಗಳಿಗೆ ಪ್ರಮುಖ ಕಚ್ಚಾ ಸಂಪನ್ಮೂಲಗಳನ್ನು ಒದಗಿಸುವ ರಫ್ತು ರಾಷ್ಟ್ರವಾಗಿ ಭಾರತದ ಪಾತ್ರವನ್ನು ಸೀಮಿತಗೊಳಿಸುವುದು. ಎರಡನೆಯದಾಗಿ, ಮಾತೃ ರಾಷ್ಟ್ರವಾದ ಬ್ರಿಟನ್ನಿನ ಗರಿಷ್ಠ ಅನುಕೂಲತೆಗಾಗಿ ಆ ಕೈಗಾರಿಕೆಗಳ ಸಿದ್ಧ ವಸ್ತುಗಳ ವಿಸ್ತೃತ ಮಾರುಕಟ್ಟೆಯಾಗಿ ಭಾರತವನ್ನು ಪರಿವರ್ತಿಸುವುದು. ಬದಲಾದ ಆರ್ಥಿಕ ಸನ್ನಿವೇಶದಲ್ಲಿ ಭಾರತದ ದೇಶೀಯ ಕರಕುಶಲ ಕೈಗಾರಿಕೆಗಳು ಕ್ಷೀಣಿಸಿ, ವ್ಯಾಪಕ ನಿರುದ್ಯೋಗವನ್ನು ಸೃಷ್ಟಿಸಿದಲ್ಲದೆ, ಭಾರತೀಯ ಗ್ರಾಹಕ ಮಾರುಕಟ್ಟೆಯಲ್ಲಿ ಬ್ರಿಟನ್ನಿನ ಕೈಗಾರಿಕಾ ಉತ್ಪನ್ನಗಳಿಗೆ ಹೊಸ ಬೇಡಿಕೆ ಸೃಷ್ಟಿಸಿತ್ತು. ಇದು ಸ್ಥಳೀಯ ಸರಕುಗಳ ಪೂರೈಕೆಗೆ ಮಾರುಕಟ್ಟೆ ಇಲ್ಲದಂತೆ ಮಾಡಿತು. ಹೊಸ ಬೇಡಿಕೆಯನ್ನು ಪೂರೈಸಲು ಬ್ರಿಟನ್ನಿನಿಂದ ಅಗ್ಗದ ತಯಾರಿಕಾ ಸರಕುಗಳನ್ನು ಆಮದು ಮಾಡಿಕೊಂಡು ದೇಶೀಯವಾಗಿ ಉತ್ಪಾದಿಸಿದ ಸರಕುಗಳ ಮಾರುಕಟ್ಟೆಯನ್ನು ಕಸಿದುಕೊಂಡಿತು.

ಹತ್ತೊಂಬತ್ತನೇ ಶತಮಾನದ ದ್ವಿತೀಯಾರ್ಧದಲ್ಲಿ ಭಾರತದಲ್ಲಿ ಆಧುನಿಕ ಕೈಗಾರಿಕೆಗಳು ಬೇರುಬಿಡಲು (ಬೀಜಧಾತು) ಪ್ರಾರಂಭಿಸಿದವು. ಆದರೆ ಪ್ರಗತಿ ಮಂದಗತಿಯಲ್ಲಿತ್ತು. ಆರಂಭದಲ್ಲಿ ಕೈಗಾರಿಕಾಭಿವೃದ್ಧಿ ಹತ್ತಿಬಟ್ಟೆ ಮತ್ತು ಸೆಣಬಿನ ಕೈಗಾರಿಕೆಗಳ ಸ್ಥಾಪನೆಗೆ ಮಾತ್ರ ಸೀಮಿತವಾಗಿತ್ತು. ಹತ್ತಿ ಬಟ್ಟೆ ಕೈಗಾರಿಕೆಗಳು ದೇಶದ ಪಶ್ಚಿಮ ಭಾಗದಲ್ಲಿ ಅಂದರೆ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿದ್ದು ಭಾರತೀಯರ ಪ್ರಾಬಲ್ಯಕ್ಕೊಳಪಟ್ಟಿದ್ದವು. ಸೆಣಬಿನ ಕೈಗಾರಿಕೆಗಳು ದೇಶದ ಪೂರ್ವ ಭಾಗದಲ್ಲಿ ಅಂದರೆ ಪ್ರಮುಖವಾಗಿ ಬಂಗಾಳದಲ್ಲಿ ಕೇಂದ್ರೀಕೃತವಾಗಿದ್ದು ವಿದೇಶಿಯರ ಪ್ರಾಬಲ್ಯಕ್ಕೆ ಒಳಪಟ್ಟಿದ್ದವು. ಕ್ರಮೇಣ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಪ್ರಾರಂಭವಾದವು. ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪೆನಿ (TISCO) 1907ರಲ್ಲಿ ಸ್ಥಾಪನೆಯಾಯಿತು. ದ್ವಿತೀಯ ಮಹಾಯುದ್ಧದ ನಂತರ ಸಕ್ಕರೆ, ಸಿಮೆಂಟ್, ಕಾಗದ ಮುಂತಾದ ಕೆಲವು ಕೈಗಾರಿಕೆಗಳು ಸ್ಥಾಪನೆಯಾದವು.

ಆದರೆ ಭಾರತದ ಕೈಗಾರಿಕೀಕರಣವನ್ನು ಪ್ರವರ್ಧಮಾನಕ್ಕೆ ತರುವ ಬಂಡವಾಳ ಸರಕುಗಳ ಕೈಗಾರಿಕೆಗಳು ಸ್ಥಾಪನೆಯಾಗಲಿಲ್ಲ.



**ನೀವೇ ಮಾಡಿರಿ**

**(Work These Out)**

- ಭಾರತದಲ್ಲಿ ಪ್ರಥಮ ಬಾರಿಗೆ ಎಲ್ಲಿ ಮತ್ತು ಯಾವಾಗ ಆಧುನಿಕ ಕೈಗಾರಿಕೆಗಳು ಸ್ಥಾಪನೆಯಾದವು ಎಂಬುದನ್ನು ಸೂಚಿಸುವ ಪಟ್ಟಿ ತಯಾರಿಸಿ. ಯಾವುದೇ ಆಧುನಿಕ ಕೈಗಾರಿಕೆಯ ಸ್ಥಾಪನೆಗೆ ಮೂಲ ಅವಶ್ಯಕಗಳನ್ನು ನೀವು ಕಂಡುಹಿಡಿಯಬಲ್ಲಿರಾ? ಉದಾಹರಣೆಗೆ, TISCO ಇಂದಿನ ಜಾರ್ಖಂಡ್ ರಾಜ್ಯದ ಜೆಮ್‌ಶೆಡ್‌ಪುರದಲ್ಲಿ ಸ್ಥಾಪನೆಯಾಗಲು ಕಾರಣಗಳೇನಿರಬಹುದು?
- ಭಾರತದಲ್ಲಿ ಪ್ರಸ್ತುತ ಎಷ್ಟು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಿವೆ? ಈ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳು ಜಗತ್ತಿನಲ್ಲೆ ಶ್ರೇಷ್ಠವಾದುವೇ ಅಥವಾ ಈ ಕಾರ್ಖಾನೆಗಳು ಪುನರ್ರಚನೆ ಮತ್ತು ಉನ್ನತೀಕರಣ ಅಗತ್ಯವಿದೆಯೆಂದು ನೀವು ಭಾವಿಸುವಿರಾ? ಹೌದಾದರೆ ಇದನ್ನು ಹೇಗೆ ಮಾಡಬಹುದು? ಪ್ರಮುಖವಲ್ಲದ ಕೈಗಾರಿಕೆಗಳನ್ನು ಸಾರ್ವಜನಿಕ ವಲಯದಲ್ಲಿ ಮುಂದುವರಿಸಬಾರದು ಎಂಬ ವಾದವಿದೆ. ನಿಮ್ಮ ಅಭಿಪ್ರಾಯವೇನು?
- ಭಾರತದ ಸ್ವಾತಂತ್ರ್ಯದ ಸಂದರ್ಭದಲ್ಲಿ ಅಸ್ಥಿತ್ವದಲ್ಲಿದ್ದ ಹತ್ತಿಬಟ್ಟೆ, ಸೆಣಬು ಮತ್ತು ಜವಳಿ ಕೈಗಾರಿಕೆಗಳನ್ನು ಭೂಪಟದಲ್ಲಿ ಗುರುತಿಸಿ.

ಬಂಡವಾಳ ಸರಕು ಕೈಗಾರಿಕೆಗಳೆಂದರೆ ಪ್ರಸ್ತುತ ಅನುಭೋಗಕ್ಕಾಗಿ ಸರಕುಗಳ ಉತ್ಪಾದನೆಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಉತ್ಪಾದಿಸುವ ಕೈಗಾರಿಕೆಗಳು. ಅಲ್ಲೊಂದು ಇಲ್ಲೊಂದು ಎಂಬಂತೆ ಕೆಲವೇ ತಯಾರಿಕಾ ಘಟಕಗಳು ಸ್ಥಾಪನೆಯಾದರೂ, ದೇಶದ ಸಾಂಪ್ರದಾಯಿಕ ಕರಕುಶಲ ಕೈಗಾರಿಕೆಗಳ ಸಾಮೂಹಿಕ ಸ್ಥಳಾಂತರಕ್ಕೆ ಪರ್ಯಾಯವಾಗಲಿಲ್ಲ. ಅಲ್ಲದೆ, ಹೊಸ ಕೈಗಾರಿಕಾ ವಲಯದ ಬೆಳವಣಿಗೆ ದರ ಮತ್ತು ಒಟ್ಟು ದೇಶಿಯ ಉತ್ಪನ್ನಕ್ಕೆ (GDP) ಕೈಗಾರಿಕಾ ವಲಯದ ಕೊಡುಗೆ ಅತ್ಯಲ್ಪ ಪ್ರಮಾಣದಲ್ಲಿಯೇ ಉಳಿಯಿತು. ಹೊಸ ಕೈಗಾರಿಕಾ ವಲಯದ ಮತ್ತೊಂದು ಪ್ರಮುಖ ನ್ಯೂನತೆಯೆಂದರೆ ಸಾರ್ವಜನಿಕ ವಲಯದ ಕಾರ್ಯ ವ್ಯಾಪ್ತಿ ಬಹಳ ಪರಿಮಿತವಾಗಿತ್ತು. ಈ ವಲಯವು ರೈಲುಸಾರಿಗೆ, ಇಂಧನ ಉತ್ಪಾದನೆ, ಸಂಪರ್ಕ, ಬಂದರುಗಳು ಮತ್ತು ಕೆಲವು ಇಲಾಖಾ ಕಾರ್ಯಗಳಿಗೆ ಮಾತ್ರ ಸೀಮಿತವಾಗಿತ್ತು.

## 1.5 ವಿದೇಶಿ ವ್ಯಾಪಾರ (FOREIGN TRADE)

ಪ್ರಾಚೀನ ಕಾಲದಿಂದಲೂ ಭಾರತವು ವ್ಯಾಪಾರದ ಒಂದು ಪ್ರಮುಖ ದೇಶವಾಗಿತ್ತು. ಆದರೆ ವಸಾಹತುಶಾಹಿ ಸರ್ಕಾರ ಸರಕುಗಳ ಉತ್ಪಾದನೆ, ವ್ಯಾಪಾರ ಮತ್ತು ಸುಂಕದ ನಿರ್ಬಂಧಿತ ನೀತಿಯನ್ನು ಅನುಸರಿಸಿದ್ದರಿಂದ ಭಾರತದ ವಿದೇಶಿ ವ್ಯಾಪಾರದ ರಚನೆ, ಸಂಯೋಜನೆ ಮತ್ತು ಪ್ರಮಾಣದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಪರಿಣಾಮವಾಗಿ ಭಾರತವು ಕಚ್ಚಾ ರೇಷ್ಮೆ, ಹತ್ತಿ, ಉಣ್ಣೆ, ಸೆಣಬು, ಶ್ರೀಫಲ (INDIGO), ಸಕ್ಕರೆ ಮುಂತಾದ ಪ್ರಾಥಮಿಕ ಸರಕುಗಳ ರಫ್ತು ರಾಷ್ಟ್ರವಾಗಿ ಹಾಗೂ ಬ್ರಿಟನಿನ್ನ ಕಾರ್ಖಾನೆಗಳಲ್ಲಿ ಉತ್ಪಾದಿಸಿದ ಹತ್ತಿ ಬಟ್ಟೆ, ರೇಷ್ಮೆ ಬಟ್ಟೆ, ಉಣ್ಣೆ ಬಟ್ಟೆ, ಮುಂತಾದ ಗ್ರಾಹಕ ವಸ್ತುಗಳು ಮತ್ತು ಬಂಡವಾಳ ವಸ್ತುಗಳಾದ ಲಘು ಯಂತ್ರೋಪಕರಣಗಳ ಆಮದು ರಾಷ್ಟ್ರವಾಗಿ ಪರಿವರ್ತನೆಯಾಯಿತು. ಭಾರತದ ರಫ್ತು ಮತ್ತು ಆಮದಿನ ಮೇಲೆ ಬ್ರಿಟನ್ ಏಕಸ್ವಾಮ್ಯ ನಿಯಂತ್ರಣ ಹೊಂದಿತು. ಇದರಿಂದಾಗಿ ಭಾರತದ ಅರ್ಧದಷ್ಟು ವಿದೇಶಿ ವ್ಯಾಪಾರ ಬ್ರಿಟನ್ನಿನೊಂದಿಗೆ ಸೀಮಿತವಾಗಿತ್ತು. ಉಳಿದ ವ್ಯಾಪಾರ ಚಟುವಟಿಕೆಗಳು ಕೆಲವೇ ರಾಷ್ಟ್ರಗಳಾದ ಚೀನಾ, ಶ್ರೀಲಂಕಾ (ಸಿಲೋನ್), ಇರಾನ್(ಪರ್ಷಿಯಾ) ನೊಂದಿಗೆ ನಡೆಯುತ್ತಿತ್ತು. ಸೂಯೆಜ್ ಕಾಲುವೆಯ ಆರಂಭದಿಂದಾಗಿ ಭಾರತದ ವಿದೇಶಿ ವ್ಯಾಪಾರದ ಮೇಲೆ ಬ್ರಿಟನ್ ಮತ್ತಷ್ಟು ಪ್ರಭುತ್ವ ಸಾಧಿಸಿತು. (ಪೆಟ್ಟಿಗೆ ಸಂಖ್ಯೆ 1.3 ನೋಡಿ).

ವಸಾಹತುಶಾಹಿ ಆಳ್ವಿಕೆಯ ಅವಧಿಯುದ್ದಕ್ಕೂ ಭಾರತದ ವಿದೇಶಿ ವ್ಯಾಪಾರದ ಪ್ರಮುಖ ಲಕ್ಷಣವೆಂದರೆ ಅತ್ಯಧಿಕ ಪ್ರಮಾಣದ ರಫ್ತು ಮಿಗತೆ (ಹೆಚ್ಚುವರಿ) ಸೃಷ್ಟಿಸುವುದು. ಆದರೆ ಈ ರಫ್ತು ಮಿಗತೆಗಾಗಿ ದೇಶದ ಆರ್ಥಿಕತೆಯೂ ಭಾರಿ ಬೆಲೆ ತೆರಬೇಕಾಯಿತು. ದೇಶೀಯ ಮಾರುಕಟ್ಟೆಯಲ್ಲಿ ಅನೇಕ ಅವಶ್ಯಕ ಸರಕುಗಳ–ಆಹಾರ ದಾನ್ಯಗಳು, ಬಟ್ಟೆ, ಸೀಮೆಎಣ್ಣೆ ಇತ್ಯಾದಿ– ಕೊರತೆಗೆ ಕಾರಣವಾಯಿತು. ಅಲ್ಲದೆ ರಫ್ತು ಮಿಗತೆಯಿಂದ ಭಾರತಕ್ಕೆ ಚಿನ್ನ ಅಥವಾ ಬೆಳ್ಳಿಯ ಹರಿವಿಗೆ ಅವಕಾಶವಾಗಲಿಲ್ಲ. ವಾಸ್ತವಿಕವಾಗಿ ವಸಾಹತುಶಾಹಿ ಸರ್ಕಾರ ಬ್ರಿಟನ್‌ನಲ್ಲಿ ಸ್ಥಾಪಿಸಿದ ಕಛೇರಿ ಖರ್ಚು ವೆಚ್ಚಗಳು, ಬ್ರಿಟೀಷ್ ಸರ್ಕಾರದ ಯುದ್ಧದ ವೆಚ್ಚ ಮತ್ತು ಭಾರತ ಮಾಡಿಕೊಂಡ ಸೇವೆಗಳ ಅಮದು ಮೌಲ್ಯ ಪಾವತಿಗಾಗಿ ರಫ್ತು ಮಿಗತೆಯನ್ನು ಬಳಸಿಕೊಳ್ಳಲಾಯಿತು. ಪರಿಣಾಮವಾಗಿ ಭಾರತದ ಸಂಪತ್ತು ವಿದೇಶಗಳಿಗೆ ಬಸಿದುಹೋಯಿತು.




### ನೀವೇ ಮಾಡಿರಿ
### (Work These Out)

- ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಭಾರತದಿಂದ ರಫ್ತಾಗುತ್ತಿದ್ದ ಮತ್ತು ಭಾರತಕ್ಕೆ ಆಮದಾಗುತ್ತಿದ್ದ ಸರಕುಗಳನ್ನು ಪಟ್ಟಿ ಮಾಡಿ.
- ಭಾರತದ ಸರ್ಕಾರದ ಹಣಕಾಸು ಸಚಿವಾಲಯ ಆರ್ಥಿಕ ಸಮೀಕ್ಷೆಯಲ್ಲಿ ಪ್ರಕಟಿಸಿರುವ ವಿವಿಧ ರಫ್ತು ಮತ್ತು ಆಮದು ಸರಕುಗಳ ಮಾಹಿತಿ ಸಂಗ್ರಹಿಸಿ, ಸ್ವಾತಂತ್ರ್ಯ ಪೂರ್ವದ ರಫ್ತು ಮತ್ತು ಆಮದು ಸರಕುಗಳೊಂದಿಗೆ ಹೋಲಿಕೆ ಮಾಡಿ. ಪ್ರಸ್ತುತ ಭಾರತದ ಬಹುಪಾಲು ವಿದೇಶಿ ವ್ಯಾಪಾರವನ್ನು ನಿರ್ವಹಿಸುತ್ತಿರುವ ಪ್ರಧಾನ ಬಂದರುಗಳನ್ನು ಪಟ್ಟಿ ಮಾಡಿ.




**ಚಿತ್ರ 1.2 ಸೂಯೆಜ್ ಕಾಲುವೆ: ಭಾರತ ಮತ್ತು ಬ್ರಿಟನ್ ನಡುವಿನ ಹೆದ್ದಾರಿ**

**ಪೆಟ್ಟಿಗೆ ಸಂಖ್ಯೆ 1.3 : ಸೂಯೆಜ್ ಕಾಲುವೆ ಮೂಲಕ ವ್ಯಾಪಾರ.**

ಸೂಯೆಜ್ ಕಾಲುವೆಯು ಈಶಾನ್ಯ ಈಜಿಪ್ಟ್‌ನ ಭೂಶಿರದ ಮೂಲಕ ಉತ್ತರದಿಂದ ದಕ್ಷಿಣಕ್ಕೆ ಸಾಗುವ ಮಾನವ ನಿರ್ಮಿತ ಜಲಮಾರ್ಗವಾಗಿದೆ. ಇದು ಮೆಡಿಟರೇನಿಯನ್ ಸಮುದ್ರದ ರೇವುಪಟ್ಟಣದಿಂದ ಕೆಂಪು ಸಮುದ್ರದ ಭಾಗವಾದ ಸೂಯೆಜ್ ಕೊಲ್ಲಿಯನ್ನು ಸಂಪರ್ಕಿಸುತ್ತದೆ. ಸೂಯೆಜ್ ಕಾಲುವೆಯು ಯೂರೋಪ್ ಮತ್ತು ಅಮೇರಿಕಾ ಬಂದರುಗಳು ಮತ್ತು ದಕ್ಷಿಣ ಏಷ್ಯಾದ ಬಂದರುಗಳು ಹಾಗೂ ಪೂರ್ವ ಆಫ್ರಿಕಾ ಮತ್ತು ಓಷಿಯನಿಯಾ ನಡುವೆ ನೇರ ವ್ಯಾಪಾರ ಮಾರ್ಗವನ್ನು ಕಲ್ಪಿಸುತ್ತದೆ ಮತ್ತು ಆಫ್ರಿಕಾವನ್ನು ಸುತ್ತುಹಾಕಿಕೊಂಡು ಪ್ರಯಾಣ ಮಾಡುವುದನ್ನು ತಪ್ಪಿಸುತ್ತದೆ. ಆರ್ಥಿಕವಾಗಿ ಮತ್ತು ಕೌಶಲ್ಯತಂತ್ರವಾಗಿಯೂ ಇದು ಜಗತ್ತಿನ ಪ್ರಮುಖ ಜಲಮಾರ್ಗವಾಗಿದೆ. ಸೂಯೆಜ್ ಕಾಲುವೆಯು 1869 ರಲ್ಲಿ ಪ್ರಾರಂಭವಾಗಿದ್ದು, ಸಾರಿಗೆ ವೆಚ್ಚವನ್ನು ಕಡಿತಗೊಳಿಸಿದೆ. ಮತ್ತು ಭಾರತದ ಮಾರುಕಟ್ಟೆಯ ಪ್ರವೇಶವನ್ನು ಸುಲಭ ಸಾಧ್ಯವಾಗಿಸಿದೆ.

## 1.6 ಜನಸಂಖ್ಯಾ ಸ್ಥಿತಿಗತಿ (DEMOGRAPHIC CONDITION)

1881ರ ಜನಗಣತಿಯಲ್ಲಿ ಪ್ರಥಮ ಬಾರಿಗೆ ಬ್ರಿಟೀಷ್ ಭಾರತದ ಜನಸಂಖ್ಯೆಗೆ ಸಂಬಂಧಿಸಿದ ವಿವಿಧ ಮಾಹಿತಿಯನ್ನು ಸಂಗ್ರಹಿಸಲಾಯಿತು. ಈ ಗಣತಿಯು ಕೆಲವು ನ್ಯೂನತೆಗಳನ್ನೂ ಹೊಂದಿದ್ದರೂ, ಭಾರತದ ಜನಸಂಖ್ಯೆಯ ಅಸ್ಥಿರ ಬೆಳವಣಿಗೆಯ ಸ್ವರೂಪವನ್ನು ಬಹಿರಂಗಗೊಳಿಸಿತು ಅನಂತರ ಪ್ರತಿ ಹತ್ತು ವರ್ಷಕ್ಕೊಮ್ಮೆ ಜನಗಣತಿ ಕಾರ್ಯವನ್ನು ನಡೆಸಲಾಯಿತು. 1921ರ ಪೂರ್ವದಲ್ಲಿ ಭಾರತವು ಜನಸಂಖ್ಯಾ ಸ್ಥಿತ್ಯಂತರದ (ಪರಿವರ್ತನೆಯ)ಮೊದಲನೇ ಹಂತದಲ್ಲಿತ್ತು. 1921ರ ನಂತರ ಭಾರತದಲ್ಲಿ ಜನಸಂಖ್ಯಾ ಸ್ಥಿತ್ಯಂತರದ (ಪರಿವರ್ತನೆಯ) ಎರಡನೇ ಹಂತ ಪ್ರಾರಂಭವಾಯಿತು. ಈ ಹಂತದಲ್ಲಿ ಭಾರತದ ಜನಸಂಖ್ಯೆಯ ಒಟ್ಟು ಪ್ರಮಾಣವಾಗಲಿ ಅಥವಾ ಬೆಳವಣಿಗೆ ದರವಾಗಲಿ ಅಧಿಕವಾಗಿರಲಿಲ್ಲ.

ವಿವಿಧ ಸಾಮಾಜಿಕ ಅಭಿವೃದ್ಧಿ ಸೂಚಕಗಳು ಸಹ ಸಂಪೂರ್ಣ ಪ್ರೋತ್ಸಾಹದಾಯಕವಾಗಿರಲಿಲ್ಲ. ದೇಶದ ಸರಾಸರಿ ಸಾಕ್ಷರತಾ ದರ ಶೇಕಡ 16ಕ್ಕಿಂತ ಕಡಿಮೆ ಇತ್ತು. ಇದರಲ್ಲಿ ಮಹಿಳಾ ಸಾಕ್ಷರತೆ ಅತ್ಯಂತ ಕನಿಷ್ಟ ಅಂದರೆ ಶೇಕಡ 7ರಷ್ಟಿತ್ತು. ದೇಶದ ಬಹುಪಾಲು ಜನರಿಗೆ ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಲಭ್ಯವಿರಲಿಲ್ಲ, ಲಭ್ಯವಿದ್ದ ಆರೋಗ್ಯ ಸೌಲಭ್ಯಗಳು ಅಸಮರ್ಪಕವಾಗಿದ್ದವು. ಪರಿಣಾಮವಾಗಿ ಮಾರಾಣಾಂತಿಕವಾದ ಜಲ ಮತ್ತು ವಾಯು ಸಂಬಂಧಿ ಕಾಯಿಲೆಗಳು ವ್ಯಾಪಕವಾಗಿದ್ದವು. ಸರಾಸರಿ ಮರಣದ ದರ ಗರಿಷ್ಠ ಮಟ್ಟದಲ್ಲಿತ್ತು, ಪ್ರಮುಖವಾಗಿ ಶಿಶು ಮರಣ ದರವು ಭಯಾನಕವಾಗಿತ್ತು. ಪ್ರತಿ ಸಾವಿರಕ್ಕೆ 218 ರಷ್ಟಿತ್ತು. ಪ್ರಸ್ತುತ ಪ್ರತಿ ಸಾವಿರಕ್ಕೆ 2001 ರಲ್ಲಿ 63 ರಷ್ಟಿದೆ. (2011ರಲ್ಲಿ 44ಕ್ಕೆ ಕಡಿಮೆಯಾಗಿದೆ) ನಿರೀಕ್ಷಿತ ಜೀವಿತಾವಧಿ ಕನಿಷ್ಟ ಅಂದರೆ 32 ವರ್ಷಗಳಷ್ಟಿತ್ತು. ಪ್ರಸ್ತುತ 2001 ರಲ್ಲಿ 66 ವರ್ಷಗಳಿಷ್ಟಿತ್ತು. (2011 ರಲ್ಲಿ 66.9 ವರ್ಷಗಳಿಗೆ ಹೆಚ್ಚಳವಾಗಿದೆ.) ಸೂಕ್ತ ದತ್ತಾಂಶಗಳ ಕೊರತೆಯಿಂದಾಗಿ ಬಡತನದ ಪ್ರಮಾಣವನ್ನು ನಿರ್ದಿಷ್ಟವಾಗಿ ವಿವರಿಸಲು ಸಾಧ್ಯವಿಲ್ಲ. ಆದರೆ ವಸಾಹತುಶಾಹಿ ಅವಧಿಯಲ್ಲಿ ಬಡತನವು ಭಾರತಾದ್ಯಂತ ವ್ಯಾಪಕವಾಗಿತ್ತು ಮತ್ತು ಭಾರತದ ಜನಸಂಖ್ಯೆಯ ನಿಕೃಷ್ಟ ಸ್ಥಿತಿಗೆ ಕಾರಣವಾಗಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.



**ಚಿತ್ರ 1.3 ಭಾರತದ ಜನಸಂಖ್ಯೆಯ ಬಹುಭಾಗ ಜನರು ವಸತಿಯಂತಹ ಮೂಲಸೌಕರ್ಯವನ್ನು ಹೊಂದಿರಲ್ಲಿಲ್ಲ**

## 1.7 ಉದ್ಯೋಗ ರಚನೆ (OCCUPATIONAL STRUCTURE)

ವಸಾಹತುಶಾಹಿ ಅವಧಿಯ ಭಾರತದ ಉದ್ಯೋಗ ರಚನೆ ಅಂದರೆ, ವಿವಿಧ ಕೈಗಾರಿಕೆಗಳಲ್ಲಿ ಮತ್ತು ವಲಯಗಳಲ್ಲಿ ಭಾರತದ ದುಡಿಯುವ ಜನರ ಹಂಚಿಕೆಯಲ್ಲಿ ಪರಿವರ್ತನೆಯ ಸಣ್ಣ ಸೂಚನೆಯೂ ಇರಲಿಲ್ಲ. ದೇಶದ ಅತಿ ಹೆಚ್ಚು ಕಾರ್ಮಿಕ ಶಕ್ತಿ ಅಂದರೆ ಶೇಕಡ 70 ರಿಂದ 75 ರಷ್ಟು ಕೃಷಿವಲಯದಲ್ಲಿ ಕೇಂದ್ರೀಕೃತವಾಗಿತ್ತು, ಇದೇ ವೇಳೆ ತಯಾರಿಕಾ ವಲಯಗಳಲ್ಲಿ ಶೇಕಡ 10 ಮತ್ತು ಸೇವಾವಲಯದಲ್ಲಿ ಕೇವಲ ಶೇಕಡ 15–20ರಷ್ಟು ಜನರು ಉದ್ಯೋಗ ನಿರತರಾಗಿದ್ದರು. ಹೆಚ್ಚುತ್ತಿರುವ ಪ್ರಾದೇಶಿಕ ಅಸಮಾನತೆ ಮತ್ತೊಂದು ಎದ್ದು ಕಾಣುವ ವಿಷಯವಾಗಿತ್ತು. ಅಂದಿನ ಮದ್ರಾಸ್ ಪ್ರೆಸಿಡೆನ್ಸಿ, (ಮದ್ರಾಸ್ ಪ್ರಾಂತ್ಯವು ಇಂದಿನ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ಮತ್ತು ಕೇರಳ ರಾಜ್ಯದ ಪ್ರದೇಶಗಳನ್ನೊಳಗೊಂಡಿತ್ತು) ಬಾಂಬೆ, ಬಂಗಾಳ ಪ್ರಾಂತ್ಯದಲ್ಲಿ ಕಾರ್ಮಿಕ ಶಕ್ತಿಯ ಕೃಷಿ ಅವಲಂಬನೆ ಇಳಿಮುಖವಾಗುತ್ತಿತ್ತು ಹಾಗೂ ತಯಾರಿಕಾ ಕೈಗಾರಿಕೆ ಮತ್ತು ಸೇವಾ ವಲಯದ ಉದ್ಯೋಗಗಳು ಪರ್ಯಾಯವಾಗಿ (ಸಮಪ್ರಮಾಣದಲ್ಲಿ) ಹೆಚ್ಚುತ್ತಿದ್ದವು. ಆದರೆ ಇದೇ ವೇಳೆ ರಾಜಸ್ತಾನ, ಒರಿಸ್ಸಾ ಮತ್ತು ಪಂಜಾಬ್ ರಾಜ್ಯಗಳಲ್ಲಿ ಕಾರ್ಮಿಕ ಶಕ್ತಿಯ ಪಾಲು ಕೃಷಿಯಲ್ಲಿ ನಿರಂತರವಾಗಿ ಹೆಚ್ಚಳವಾಯಿತು.



### ನೀವೇ ಮಾಡಿರಿ (Work These Out)

- ಸ್ವತಂತ್ರ ಪೂರ್ವ ಭಾರತದಲ್ಲಿ ಆಗಾಗ್ಗೆ ಕ್ಷಾಮಗಳು ಸಂಭವಿಸುತ್ತಿದ್ದುದರ ಕಾರಣಗಳನ್ನು ಗುರುತಿಸುವಿರಾ?–ನೀವು ನೋಬಲ್ ಪಾರಿತೋಷಕ ವಿಜೇತ ಅಮಾರ್ತ್ಯಸೇನ್‌ರವರ “ಬಡತನ ಮತ್ತು ಕ್ಷಾಮ” ಪುಸ್ತಕ ಓದಬಹುದು.
- ಸ್ವಾತಂತ್ರ್ಯದ ಸಂದರ್ಭದಲ್ಲಿ ಭಾರತದ ಉದ್ಯೋಗ ರಚನೆಯ ಪೈ ನಕ್ಷೆ ರಚಿಸಿ.



**ಚಿತ್ರ 1.4: ಬಾಂಬೆ ಮತ್ತು ಥಾಣೆ ಸಂಪರ್ಕಿಸುವ ಮೊದಲ ರೈಲುಸಾರಿಗೆ ಸೇತುವೆ– 1854**

## 1.8 ಮೂಲಸೌಕರ್ಯ (INFRASTRUCTURE)

ವಸಾಹತುಶಾಹಿ ಅವಧಿಯಲ್ಲಿ ಮೂಲ ಸೌಕರ್ಯಗಳಾದ ರೈಲುಸಾರಿಗೆ, ಜಲಸಾರಿಗೆ, ಬಂದರು, ಅಂಚೆ ಮತ್ತು ತಂತಿ ಸೌಕರ್ಯಗಳು ಅಭಿವೃದ್ಧಿಯಾದವು. ಆದರೆ ಈ ಅಭಿವೃದ್ಧಿಯ ಹಿಂದಿನ ವಾಸ್ತವಿಕ ಉದ್ದೇಶ ವಸಾಹತುಶಾಹಿ ಸರ್ಕಾರಕ್ಕೆ ನೆರವಾಗುವುದಾಗಿತ್ತೇ ವಿನಹ ಭಾರತೀಯರಿಗೆ ಮೂಲ ಸೌಕರ್ಯ ಕಲ್ಪಿಸುವುದಾಗಿರಲಿಲ್ಲ. ಬ್ರಿಟೀಷರ ಆಳ್ವಿಕೆಗೆ ಮುನ್ನ ಭಾರತದಲ್ಲಿ ನಿರ್ಮಾಣವಾದ ರಸ್ತೆಗಳು ಆಧುನಿಕ ಸಾರಿಗೆ ಪದ್ಧತಿಗೆ ಯೋಗ್ಯವಾಗಿರಲಿಲ್ಲ. ರಸ್ತೆಗಳನ್ನು ಪ್ರಮುಖವಾಗಿ ಭಾರತದೊಳಗೆ ಸೈನ್ಯವನ್ನು ಸಜ್ಜುಗೊಳಿಸಲು ಹಾಗೂ ಕಚ್ಚಾ ಸಂಪನ್ಮೂಲಗಳನ್ನು ರೈಲ್ವೆ ನಿಲ್ದಾಣ ಅಥವಾ ಬಂದರುಗಳಿಗೆ ವರ್ಗಾಯಿಸಿ ಇಂಗ್ಲೆಂಡ್ ಮತ್ತು ಆದಾಯ ನೀಡುವ ಲಾಭಾದಾಯಕ ಇತರ ದೇಶಗಳಿಗೆ ಮಾರಾಟ ಮಾಡುವ ಉದ್ದೇಶದಿಂದ ರಚಿಸಲಾಗಿತ್ತು. ಮಳೆಗಾಲದಲ್ಲಿ ಗ್ರಾಮೀಣ ಪ್ರದೇಶಗಳಿಗೆ ತಲುಪುವ ಸರ್ವಋತು ರಸ್ತೆಗಳ ತೀವ್ರ ಕೊರತೆ ಇತ್ತು. ಆದ್ದರಿಂದ ಸ್ವಾಭಾವಿಕವಾಗಿ ಇಂತಹ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರು ನೈಸರ್ಗಿಕ ವಿಪತ್ತು ಮತ್ತು ಕ್ಷಾಮದ ಸಂದರ್ಭದಲ್ಲಿ ತೀವ್ರವಾಗಿ ಬಳಲುತ್ತಿದ್ದರು.

1850ರಲ್ಲಿ ಬ್ರಿಟಿಷರು ಭಾರತದಲ್ಲಿ ರೈಲು ಸಾರಿಗೆಯನ್ನು ಪರಿಚಯಿಸಿದರು. ಇದು ಬ್ರಿಟೀಷರ ಪ್ರಮುಖ ಕೊಡುಗೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ರೈಲುಸಾರಿಗೆಯು ಭಾರತದ ಆರ್ಥಿಕತೆಯ ರಚನೆಯ ಮೇಲೆ ಎರಡು ರೀತಿಯ ಪ್ರಭಾವ ಬೀರಿತು. ಒಂದು ಕಡೆ ಜನರು ದೂರದ ಪ್ರಯಾಣ ಕೈಗೊಳ್ಳಲು ಸಾಧ್ಯವಾಗಿದ್ದರಿಂದ ಭೌಗೋಳಿಕ ಮತ್ತು ಸಾಂಸ್ಕೃತಿಕ ಅಡೆತಡೆಗಳನ್ನು ಮೀರಲು ಅವಕಾಶವಾಯಿತು. ಹಾಗೆಯೇ ಮತ್ತೊಂದು ಕಡೆ ಭಾರತದ ಕೃಷಿಯ ವಾಣಿಜ್ಯೀಕರಣವನ್ನು ಉತ್ತೇಜಿಸಿ ಗ್ರಾಮೀಣ ಆರ್ಥಿಕತೆಯ ಸ್ವಾವಲಂಬಿ ಸ್ವರೂಪದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ನಿಸ್ಸಂದೇಹವಾಗಿ ಭಾರತದ ರಫ್ತಿನ ಪ್ರಮಾಣ



**ಚಿತ್ರ. 1.5: ಟಾಟಾ ಏರ್‌ಲೈನ್ಸ್: ಟಾಟಾ ಮತ್ತು ಸನ್ಸ್ ಭಾರತದಲ್ಲಿ ವಾಯು ಸಾರಿಗೆ ವಲಯವನ್ನು 1932ರಲ್ಲಿ ಸ್ಥಾಪಿಸಿದರು.**

### ನೀವೇ ಮಾಡಿರಿ (Work These Out)

➢ ಅನೇಕ ವಿಧದಲ್ಲಿ ಬ್ರಿಟೀಷರ ಆಳ್ವಿಕೆ ಭಾರತಕ್ಕೆ ಸಾಕಷ್ಟು ಲಾಭದಾಯಕವಾಗಿತ್ತು ಎನ್ನುವ ಅಭಿಪ್ರಾಯ ಈಗಲೂ ಇದೆ. ಈ ಗ್ರಹಿಕೆಯ ಮೇಲೆ ಒಂದು ತಿಳವಳಿಕೆಯುಕ್ತ ಚರ್ಚೆಯ ಅವಶ್ಯವಿದೆ –'ಬ್ರಿಟೀಷ್ ರಾಜ್' ಭಾರತಕ್ಕೆ ಅನುಕೂಲಕರವಾಗಿತ್ತೆ? ಇದನ್ನು ನಿಮ್ಮ ತರಗತಿಯಲ್ಲಿ ಚರ್ಚಿಸಿ.

ಗಣನೀಯವಾಗಿ ಹೆಚ್ಚಿತು. ಆದರೆ ಇದರ ಅನುಕೂಲತೆಗಳು ಭಾರತೀಯರಿಗೆ ವಿರಳವಾಗಿ ಲಭ್ಯವಾಗಿವೆ ರೈಲುಸಾರಿಗೆ ಅಭಿವೃದ್ಧಿಯಿಂದ ಭಾರತೀಯರಿಗೆ ದೊರಕಿದ ಸಾಮಾಜಿಕ ಅನುಕೂಲಗಳಿಗಿಂತ ಆರ್ಥಿಕ ನಷ್ಟಗಳು ಅಧಿಕವಾಗಿದ್ದವು.

ವಸಾಹತುಶಾಹಿ ಆಳ್ವಿಕೆಯು ರಸ್ತೆ ಮತ್ತು ರೈಲು ಸಾರಿಗೆಯ ಅಭಿವೃದ್ಧಿಯ ಜೊತೆಗೆ ದೇಶೀಯ ವ್ಯಾಪಾರ (ಒಳನಾಡಿನ ವ್ಯಾಪಾರ) ಮತ್ತು ಸಮುದ್ರ ಮಾರ್ಗಗಳ ಅಭಿವೃದ್ಧಿಗೂ ಕ್ರಮ ಕೈಗೊಂಡಿತು. ಆದರೆ ಈ ಕ್ರಮಗಳು ತೃಪ್ತಿಕರವಾಗಿರಲಿಲ್ಲ. ಅಂದಿನ ಒಳನಾಡು ಜಲ ಮಾರ್ಗಗಳೂ ಕೂಡ, ಒರಿಸ್ಸಾ ಕಡಲ ತೀರದ ಕರಾವಳಿ ಕಾಲುವೆಯಂತಯೇ ಲಾಭದಾಯಕವಾಗಿರಲಿಲ್ಲ. ಒರಿಸ್ಸಾ ಕಡಲತೀರದ ಕರಾವಳಿ ಕಾಲುವೆ ಮಾರ್ಗಗಳನ್ನು ಸರ್ಕಾರದ ಅತ್ಯಧಿಕ ವೆಚ್ಚದಲ್ಲಿ ನಿರ್ಮಿಸಿದ್ದರೂ, ಕಾಲುವೆ ಮತ್ತು ರೈಲು ಸಾರಿಗೆಗಳು ಒಂದೇ ಮಾರ್ಗದಲ್ಲಿ ಸಮನಾಂತರವಾಗಿ ಚಲಿಸುತ್ತಿದ್ದರಿಂದ ರೈಲು ಸಾರಿಗೆಯೊಂದಿಗೆ ಪೈಪೋಟಿ ನಡೆಸಲು ವಿಫಲವಾಯಿತು. ಅಂತಿಮವಾಗಿ ಕಾಲುವೆ ಸಾರಿಗೆಯನ್ನು ರದ್ದುಪಡಿಸಲಾಯಿತು. ಇದೇ ರೀತಿ ಭಾರತದಲ್ಲಿ ಪರಿಚಯಿಸಲಾದ ದುಬಾರಿ ವೆಚ್ಚದ ವಿದ್ಯುತ್ 'ತಂತಿಸೇವೆ'ಯು ಕಾನೂನು ಮತ್ತು ಶಾಂತಿ ಪಾಲನೆಗೆ ಸಹಾಯ ಮಾಡುವ ಉದ್ದೇಶವನ್ನು ಈಡೇರಿಸಿತು. ಮತ್ತೊಂದೆಡೆ ಸಾರ್ವಜನಿಕ ಉಪಯೋಗಕ್ಕಾಗಿ ಪ್ರಾರಂಭಿಸಿದ 'ಅಂಚೆ ಸೇವೆ' ಜನ ಸಾಮಾನ್ಯರಿಗೆ ಉಪಯುಕ್ತ ಸೇವೆಗಳನ್ನು ಪೂರೈಸಿದ್ದರೂ ಎಲ್ಲಾ ಸಮಯದಲ್ಲೂ ಅಸಮರ್ಪಕವಾಗಿಯೇ ಉಳಿಯಿತು. (ಎಂಟನೇ ಅಧ್ಯಾಯದಲ್ಲಿ ಮೂಲ ಸೌಕರ್ಯದ ಪ್ರಸ್ತುತ ಸ್ಥಿತಿಗತಿಗಳನ್ನು ಕುರಿತು ಅಭ್ಯಾಸ ಮಾಡುವಿರಿ.)

## 1.9 ಉಪಸಂಹಾರ (CONCLUSION)

ಭಾರತವು ಸ್ವಾತಂತ್ರ್ಯ ಗಳಿಸುವ ವೇಳೆಗೆ ಎರಡು ಶತಮಾನಗಳ ದೀರ್ಘಕಾಲದ ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯ ಪರಿಣಾಮಗಳು ದೇಶದ ಆರ್ಥಿಕತೆಯ ಎಲ್ಲಾ ಆಯಾಮಗಳಲ್ಲಿ ಗೋಚರಿಸತೊಡಗಿದವು. ಕೃಷಿವಲಯ ಅಧಿಕ ಕಾರ್ಮಿಕ ಒತ್ತಡ ಮತ್ತು ಕಡಿಮೆ ಉತ್ಪಾದಕತೆಯಿಂದಾಗಿ ದುಸ್ಥಿತಿಗೆ ತಲುಪಿತು. ಕೈಗಾರಿಕಾ ವಲಯವು ಆಧುನೀಕರಣ, ವೈವಿಧ್ಯೀಕರಣ, ಧಾರಣಾಶಕ್ತಿಯ ನಿರ್ಮಾಣ ಮತ್ತು ಸರ್ಕಾರದ ಹೂಡಿಕೆಯನ್ನು ಬೇಡುತ್ತಿದ್ದವು. ಭಾರತದ ವಿದೇಶಿ ವ್ಯಾಪಾರ ಬ್ರಿಟನ್ನಿನ ಕೈಗಾರಿಕಾ ಕ್ರಾಂತಿಯನ್ನು ಪ್ರೋತ್ಸಾಹಿಸಲು ಕೇಂದ್ರೀಕೃತವಾಗಿತ್ತು. ರೈಲು ಸಾರಿಗೆಯೂ ಸೇರಿದಂತೆ ಮೂಲ ಸೌಕರ್ಯಗಳು ಉನ್ನತೀಕರಣ, ವಿಸ್ತರಣೆ ಮತ್ತು ಸಾರ್ವಜನಿಕ ಸೇವಾ ಪ್ರಾಧಾನ್ಯತೆಗಳನ್ನು ಅಪೇಕ್ಷಿಸುತ್ತಿದ್ದವು. ಕಡುಬಡತನ ಮತ್ತು ವ್ಯಾಪಕ ನಿರುದ್ಯೋಗದ ಅಸ್ಥಿತ್ವ ಮುಂತಾದವು ಕಲ್ಯಾಣ ಪ್ರಧಾನ ಸಾರ್ವತ್ರಿಕ ಆರ್ಥಿಕ ನೀತಿಯನ್ನು ಹಂಬಲಿಸುತ್ತಿದ್ದವು. ಸಂಕ್ಷಿಪ್ತವಾಗಿ ಹೇಳುವುದಾದರೆ ದೇಶದ ಮುಂದೆ ಅಪಾರವಾದ ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳಿದ್ದವು.

### ಪುನರುಕ್ತಿ

- ಭಾರತವು ಸ್ವಾತಂತ್ರ್ಯ ನಂತರದಲ್ಲಿ ಸಾಧಿಸಿದ ಆರ್ಥಿಕಾಭಿವೃದ್ಧಿಯ ಮಟ್ಟವನ್ನು ತಿಳಿದುಕೊಳ್ಳಲು ಮತ್ತು ಗಣನೆ ಮಾಡಲು ಸ್ವಾತಂತ್ರ್ಯ ಪೂರ್ವದಲ್ಲಿನ ಆರ್ಥಿಕತೆಯ ಅಧ್ಯಯನ ಅವಶ್ಯಕ.
- ವಸಾಹತುಶಾಹಿ ಪ್ರಭುತ್ವದಲ್ಲಿ, ಸರ್ಕಾರದ ಆರ್ಥಿಕ ನೀತಿಗಳು ಭಾರತದ ಆರ್ಥಿಕ ಅಭಿವೃದ್ಧಿಗಿಂತ ಬ್ರಿಟೀಷರ ಆರ್ಥಿಕ ಹಿತಾಸಕ್ತಿ ರಕ್ಷಣೆ ಮತ್ತು ಉತ್ತೇಜನಕ್ಕೆ ಆದ್ಯತೆ ನೀಡಿದ್ದವು.
- ಭಾರತದ ಬಹುಪಾಲು ಜನಸಂಖ್ಯೆ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದರೂ ಕೃಷಿ ವಲಯದ ಅಭಿವೃದ್ಧಿ ಸ್ಥಗಿತವಾಗಿತ್ತು ಮತ್ತು ದುಸ್ಥಿತಿಯಲ್ಲಿತ್ತು.
- ಬ್ರಿಟೀಷ್–ಭಾರತದ ಆಳ್ವಿಕೆಯಲ್ಲಿ, ಆಧುನಿಕ ಕೈಗಾರಿಕಾ ನೆಲೆಯ ಅಭಿವೃದ್ಧಿಗೆ ಯಾವುದೇ ಕೊಡುಗೆಯನ್ನು ನೀಡದೆ, ಭಾರತದ ಜಗತ್ಪ್ರಸಿದ್ಧ ಕರಕುಶಲ ಉದ್ದಿಮೆಗಳನ್ನು ನಾಶಮಾಡಲಾಯಿತು.
- ಸಮರ್ಪಕ ಆರೋಗ್ಯ ಸೌಲಭ್ಯಗಳ ಕೊರತೆ, ಆಗಾಗ್ಗೆ ಸಂಭವಿಸುತ್ತಿದ್ದ ನೈಸರ್ಗಿಕ ವಿಪತ್ತುಗಳು ಮತ್ತು ಕ್ಷಾಮದಿಂದ ಅಸಹಾಯಕ ಭಾರತೀಯರು ನಿರ್ಗತಿಕರಾದರು ಮತ್ತು ಅಧಿಕ ಮರಣದ ದರವನ್ನು ಎದುರಿಸಬೇಕಾಯಿತು.
- ವಸಾಹತುಶಾಹಿ ಅವಧಿಯಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೆಲವು ಪ್ರಯತ್ನಗಳು ನಡೆದಿದ್ದರೂ, ಸ್ವಾರ್ಥದ ಉದ್ದೇಶವನ್ನು ಹೊಂದಿದ್ದವು. ಆದಾಗ್ಯೂ ಸ್ವತಂತ್ರ ಭಾರತದ ಸರ್ಕಾರ ಯೋಜನೆಗಳ ಮೂಲಕ ಮೂಲಸೌಕರ್ಯಗಳನ್ನು ಈ ಆಧಾರಗಳ ಮೇಲೆಯೇ ನಿರ್ಮಿಸಿದೆ.



## ಅಭ್ಯಾಸಗಳು

1. ವಸಾಹತುಶಾಹಿ ಸರ್ಕಾರವು ಭಾರತದಲ್ಲಿ ಅನುಸರಿಸಿದ ಆರ್ಥಿಕ ನೀತಿಗಳ ಉದ್ದೇಶವೇನು? ಈ ಆರ್ಥಿಕ ನೀತಿಗಳ ಪರಿಣಾಮಗಳಾವುವು ?
2. ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ ಭಾರತದ ತಲಾವರಮಾನವನ್ನು ಅಂದಾಜು ಮಾಡಿದ ಪ್ರಮುಖ ಅರ್ಥಶಾಸ್ತ್ರಜ್ಞರನ್ನು ಹೆಸರಿಸಿ.
3. ವಸಾಹತುಶಾಹಿ ಅವಧಿಯಲ್ಲಿ ಭಾರತದ ಕೃಷಿವಲಯದ ಸ್ಥಗಿತತೆಗೆ ಪ್ರಮುಖ ಕಾರಣಗಳೇನು?
4. ನಮ್ಮ ದೇಶದ ಸ್ವಾತಂತ್ರ್ಯದ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೆಲವು ಆಧುನಿಕ ಕೈಗಾರಿಕೆಗಳನ್ನು ಹೆಸರಿಸಿ.
5. ಸ್ವತಂತ್ರ ಪೂರ್ವ ಭಾರತದಲ್ಲಿ ಬ್ರಿಟೀಷರು ವ್ಯವಸ್ಥಿತವಾಗಿ ಕೈಗಾರಿಕೆಗಳನ್ನು ನಾಶಗೊಳಿಸಿದ್ದರ ಹಿಂದಿದ್ದ ದ್ವಿಮುಖ ಉದ್ದೇಶವೇನು?
6. ಬ್ರಿಟೀಷರ ಆಳ್ವಿಕೆಯಲ್ಲಿ ಭಾರತದ ಸಾಂಪ್ರದಾಯಿಕ ಕರಕುಶಲ ಕೈಗಾರಿಕೆಗಳು ನಾಶವಾದುವು ಎಂಬುದನ್ನು ನೀವು ಒಪ್ಪುವಿರಾ? ಕಾರಣಗಳೊಂದಿಗೆ ಸಮರ್ಥಿಸಿ.
7. ಭಾರತದಲ್ಲಿ ಮೂಲಸೌಕರ್ಯದ ಅಭಿವೃದ್ಧಿ ನೀತಿಯ ಮೂಲಕ ಬ್ರಿಟೀಷರು ಸಾಧಿಸಬೇಕೆಂದುಕೊಂಡ ಉದ್ದೇಶಗಳಾವುವು?
8. ಬ್ರಿಟೀಷ್ ವಸಾಹತುಶಾಹಿ ಆಡಳಿತದಲ್ಲಿ ಅನುಸರಿಸಿದ ಕೈಗಾರಿಕಾ ನೀತಿಯ ನ್ಯೂನತೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಸಿಲಿ.
9. ವಸಾಹತುಶಾಹಿ ಆಳ್ವಿಕೆಯಲ್ಲಿ 'ಭಾರತದ ಸಂಪತ್ತು ಬಸಿದುಹೋಯಿತು' ಎಂಬುದನ್ನು ಏನೆಂದು ಅರ್ಥೈಸುವಿರಿ?
10. ಭಾರತದ ಜನಸಂಖ್ಯಾ ಸ್ಥಿತ್ಯಂತರದ ಪ್ರಥಮ ಮತ್ತು ದ್ವಿತೀಯ ಹಂತದ ವಿಭಜನೆಯನ್ನು ನಿರ್ಣಯಿಸುವ ವರ್ಷ ಯಾವುದು?
11. ವಸಾಹತುಶಾಹಿ ಅವಧಿಯಲ್ಲಿ ಭಾರತದ ಜನಸಂಖ್ಯಾ ಸ್ವರೂಪವನ್ನು ಪರಿಮಾಣಾತ್ಮಕವಾಗಿ ವಿಮರ್ಶಿಸಿ.
12. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಉದ್ಯೋಗರಚನೆಯ ಪ್ರಮುಖ ಲಕ್ಷಣಗನ್ನು ವಿವರಿಸಿ.
13. ಸ್ವಾಂತಂತ್ರ್ಯದ ಸಂದರ್ಭದಲ್ಲಿ ಭಾರತವು ಎದುರಿಸಿದ ಪ್ರಮುಖ ಆರ್ಥಿಕ ಸವಾಲುಗಳನ್ನು ಗುರುತಿಸಿ.
14. ಭಾರತದಲ್ಲಿ ಮೊಟ್ಟ ಮೊದಲಿಗೆ ಯಾವಾಗ ಅಧಿಕೃತವಾಗಿ ಜನಗಣತಿ ನಡೆಸಲಾಯಿತು?
15. ಸ್ವಾತಂತ್ರ್ಯದ ಅವಧಿಯಲ್ಲಿ ಭಾರತದ ವಿದೇಶಿ ವ್ಯಾಪಾರದ ಪ್ರಮಾಣ ಮತ್ತು ದಿಕ್ಕನ್ನು ಸೂಚಿಸಿ.
16. ಬ್ರಿಟೀಷರು, ಭಾರತಕ್ಕೆ ಸಕಾರಾತ್ಮಕ ಕೊಡುಗೆಗಳನ್ನು ನೀಡಿದ್ದಾರೆಯೆ? ಚರ್ಚಿಸಿ.



## ಸೂಚಿಸಿದ ಹೆಚ್ಚುವರಿ ಚಟುವಟಿಕೆಗಳು

1. ಸ್ವತಂತ್ರ ಪೂರ್ವ ಭಾರತದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜನರಿಗೆ ಲಭ್ಯವಿದ್ದ ಸರಕು ಮತ್ತು ಸೇವೆಗಳ ಪಟ್ಟಿಯನ್ನು ತಯಾರಿಸಿ. ಈ ಸರಕು ಮತ್ತು ಸೇವೆಗಳ ಪಟ್ಟಿಯನ್ನು ಜನರ ಇಂದಿನ ಅನುಭೋಗದ ಮಾದರಿಯೊಂದಿಗೆ ತುಲನೆ ಮಾಡಿ, ಜನರ ಜೀವನಮಟ್ಟದಲ್ಲಿ ಗೋಚರವಾಗುವ ಪ್ರಮುಖ ಬದಲಾವಣೆಯನ್ನು ಗುರುತಿಸಿ.
2. ಸಾತಂತ್ರ್ಯ ಪೂರ್ವ ಅವಧಿಯಲ್ಲಿ ನಿಮ್ಮ ನೆರೆ ಹೊರೆಯಲ್ಲಿನ ಗ್ರಾಮ/ಪಟ್ಟಣಗಳ ಚಿತ್ರವನ್ನು ತಿಳಿದು, ಅವುಗಳನ್ನು ಪ್ರಸ್ತುತ ಚಿತ್ರಣಗಳೊಂದಿಗೆ ಹೋಲಿಕೆ ಮಾಡಿ ಯಾವ ಬದಲಾವಣೆಗಳನ್ನು ನೀವು ಗುರುತಿಸುವಿರಿ? ಆ ಬದಲಾವಣೆಗಳು ಒಳಿತಾಗಿವೆಯೇ ಅಥವಾ ಕೆಡುಕಾಗಿವೆಯೇ? ಚರ್ಚಿಸಿ.
3. 'ಭಾರತದಲ್ಲಿ ಜಮೀನ್ದಾರಿ ಪದ್ಧತಿಯನ್ನು ವಾಸ್ತವಿಕವಾಗಿ ನಿಷೇದಿಸಲಾಗಿದೆಯೆ?' ಎಂಬುದರ ಬಗ್ಗೆ ನಿಮ್ಮ ಶಿಕ್ಷಕರು ಮತ್ತು ಸಹವರ್ತಿಗಳೊಂದಿಗೆ ಗುಂಪು ಚರ್ಚೆಯನ್ನು ಏರ್ಪಡಿಸಿ. ಒಂದು ವೇಳೆ ಒಮ್ಮತವಿಲ್ಲದಿದ್ದರೆ, ಏಕೆ ಮತ್ತು ಯಾವ ಕ್ರಮಗಳಿಂದ ಜಮೀನ್ದಾರಿ ಪದ್ಧತಿಯ ರದ್ಧತಿಗೆ ಕೈಗೊಳ್ಳಬೇಕೆಂದು ನೀವು ಸೂಚಿಸುವಿರಿ.
4. ಸ್ವಾತಂತ್ರ್ಯದ ಅವಧಿಯಲ್ಲಿ ನಮ್ಮ ದೇಶದ ಜನರ ಪ್ರಮುಖ ಉದ್ಯೋಗಗಳನ್ನು ಗುರುತಿಸಿ. ಇಂದಿನ ಜನರು ಪ್ರಮುಖವಾಗಿ ಯಾವ ಉದ್ಯೋಗಗಳನ್ನು ಅವಲಂಬಿಸಿದ್ದಾರೆ? 2020ರ ವೇಳೆಗೆ ಭಾರತದ ಔದ್ಯೋಗಿಕ ಚಿತ್ರಣವನ್ನು ನೀವು ಹೇಗೆ ಕಾಣುವಿರಿ?



## REFERENCES

**Books:**


BADEN-POWELL, B.H. 1892. The Land Systems of British India, Vols I, II and III. Oxford Clarendon Press, Oxford.

BUCHANAN, D.H. 1966. Development of Capitalist Enterprise in India. Frank Cass and Co, London.

CHANDRA, BIPAN. 1993. 'The Colonial Legacy' in Bimal Jalan (ed.), The Indian Economy: Problems and Prospects. Penguin Books, New Delhi.

DUTT, R.C. 1963. Economic History of India, Vols. I and II. Ministry of Information and Broadcasting, Government of India, New Delhi.

KUMAR, D. AND MEGHNAD DESAI (Eds.). 1983. Cambridge Economic History of India. Cambridge University Press, Cambridge.

MILL, JAMES.1972. History of British India. Associated Publishing House, New Delhi.

PRASAD, RAJENDRA. 1946. India Divided. Hind Kitabs, Bombay.

SEN, AMARTYA. 1999. Poverty and Famines. Oxford University Press, New Delhi.

2

# ಅಧ್ಯಾಯ–2

# ಭಾರತದ ಆರ್ಥಿಕತೆ 1950-1990

# INDIAN ECONOMY 1950-1990

**ಈ ಅಧ್ಯಾಯದ ಅಧ್ಯಯನದ ನಂತರ ನೀವು,**

- ಭಾರತದ ಪಂಚವಾರ್ಷಿಕ ಯೋಜನೆಗಳ ಗುರಿಗಳ ಬಗ್ಗೆ ತಿಳಿಯುತ್ತೀರಿ.
- 1990–1950 ರಲ್ಲಿ ವಿವಿಧ ವಲಯಗಳಾದ ಕೃಷಿ ಮತ್ತು ಕೈಗಾರಿಕೆಗಳಲ್ಲಿನ ಅಭಿವೃದ್ಧಿ ನೀತಿಗಳ ಬಗ್ಗೆ ತಿಳಿಯುತ್ತೀರಿ.
- ನಿಯಂತ್ರಿತ ಅರ್ಥವ್ಯವಸ್ಥೆಯ ಗುಣಗಳು ಮತ್ತು ಮಿತಿಗಳ ಬಗ್ಗೆ ಆಲೋಚಿಸಲು ಕಲಿಯುವಿರಿ.

ಭಾರತದ ಯೋಜನೆಗಳ ಅತಿ ಮುಖ್ಯ ಉದ್ದೇಶ... ಜೀವನ ಮಟ್ಟ ಹೆಚ್ಚಿಸುವಂತಹ ಅಭಿವೃದ್ಧಿ ಪ್ರಕ್ರಿಯೆಯನ್ನು ಉತ್ತೇಜಿಸುವುದು. ಸಮೃದ್ಧರಾಗಲು ಮತ್ತು ವೈವಿದ್ಯ ಜೀವನಕ್ಕಾಗಿ ಪ್ರಜೆಗಳು ಹೊಸ ಅವಕಾಶಗಳಿಗೆ ತೆರದುಕೊಳ್ಳುವಂತೆ ಮಾಡುವುದು.

**– ಪ್ರಥಮ ಪಂಚವಾರ್ಷಿಕ ಯೋಜನೆ**

## 2.1 ಪೀಠಿಕೆ (INTRODUCTION)

ಭಾರತ ಹೊಸ ಆಶೋತ್ತರಗಳೊಂದಿಗೆ 15 ಆಗಸ್ಟ್ 1947 ರಂದು ಸ್ವತಂತ್ರ್ಯವಾಯಿತು, ಸುಮಾರು ಎರಡು ನೂರು ವರ್ಷಗಳ ಬ್ರಿಟೀಷರ ಆಡಳಿತದ ಬಳಿಕ ಅಂತಿಮವಾಗಿ ನಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳುವವರು ನಾವೇ ಆದೆವು. ರಾಷ್ಟ್ರ ನಿರ್ಮಾಣದ ಕೆಲಸ ನಮ್ಮ ಕೈಸೇರಿತು. ಸ್ವತಂತ್ರ್ಯ ಭಾರತದ ನಾಯಕರು, ರಾಷ್ಟ್ರದ ಇತರ ಪ್ರಮುಖ ವಿಷಯಗಳ ಜೊತೆಗೆ ನಮ್ಮ ರಾಷ್ಟ್ರಕ್ಕೆ ಸರಿಹೊಂದುವಂತಹ, ಕೆಲವರ ಕಲ್ಯಾಣಕ್ಕಿಂತ ರಾಷ್ಟ್ರದ ಬಹುಜನರ ಕಲ್ಯಾಣವನ್ನು ಉನ್ನತೀಕರಿಸುವ ಒಂದು "ಅರ್ಥವ್ಯವಸ್ಥೆ"ಯನ್ನು ಆಯ್ಕೆಮಾಡಿಕೊಳ್ಳುವ ಬಗ್ಗೆ ತೀರ್ಮಾನಿಸಬೇಕಾಗಿತ್ತು. ಅನೇಕ ರೀತಿಯ ಆರ್ಥಿಕ ವ್ಯವಸ್ಥೆಗಳಿವೆ (ಪೆಟ್ಟಿಗೆ 2.1 ನೋಡಿ) ಮತ್ತು ಅವುಗಳಲ್ಲಿ ಸಮಾಜವಾದವು ನೆಹರುರವರನ್ನು ಹೆಚ್ಚು ಆಕರ್ಷಿಸಿತು. ಆದರೆ ನೆಹರುರವರು, ಹಿಂದಿನ ಸೋವಿಯತ್ ಯುನಿಯನ್‌ನಲ್ಲಿ ಅಸ್ಥಿತ್ವದಲ್ಲಿದ್ದಂತೆ ದೇಶದ ಎಲ್ಲಾ ಉತ್ಪಾದನೆಯ ಸಾಧನಗಳಾದ ಅಂದರೆ ಎಲ್ಲಾ ಕಾರ್ಖಾನೆಗಳು ಮತ್ತು ಕೃಷಿ ಜಮೀನುಗಳು ಸರ್ಕಾರದ ಸಂಪೂರ್ಣ ಅಧೀನಕ್ಕೆ ಒಳಪಟ್ಟಿರುವ ಸಮಾಜವಾದ ಪದ್ಧತಿಯ ಆಚರಣೆಯ ಬಗ್ಗೆ ಅವರು ಒಲವು ತೋರಲಿಲ್ಲ. ಅಲ್ಲಿ ಖಾಸಗಿ ಆಸ್ತಿಯೇ ಇರಲಿಲ್ಲ. ಈ ಹಿಂದಿನ ಸೋವಿಯತ್ ಯೂನಿಯನ್‌ನಲ್ಲಿ ಮಾಡಿದ ರೀತಿಯಲ್ಲಿ ಭಾರತದಂತಹ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಭೂ ಒಡೆತನವನ್ನು ಮತ್ತು ಇತರೆ ಆಸ್ತಿಗಳ ಒಡೆತನದ ಮಾದರಿಯನ್ನು ಬದಲಾಯಿಸುವುದು ಸಾಧ್ಯವಿರಲಿಲ್ಲ.



### ನೀವೇ ಮಾಡಿರಿ
### (Work These Out)

- ಪ್ರಪಂಚದಲ್ಲಿ ಪ್ರಸ್ತುತ ಆಚರಣೆಯಲ್ಲಿರುವ ಆರ್ಥಿಕ ಪದ್ದತಿಗಳ ಬಗ್ಗೆ ಒಂದು ಪಟ್ಟಿಯನ್ನು ಸಿದ್ಧಪಡಿಸಿ. ಬಂಡವಾಳಶಾಹಿ, ಸಮಾಜವಾದಿ ಮತ್ತು ಮಿಶ್ರ ಆರ್ಥಿಕತೆ ಹೊಂದಿರುವ ರಾಷ್ಟ್ರಗಳನ್ನು ಪಟ್ಟಿ ಮಾಡಿ. ಕೃಷಿ ಕ್ಷೇತ್ರ ವೀಕ್ಷಣೆಗಾಗಿ ಒಂದು ತರಗತಿಯ ಪ್ರವಾಸ ಯೋಜನೆಯನ್ನು ರೂಪಿಸಿ, ತರಗತಿಯ ವಿದ್ಯಾರ್ಥಿಗಳನ್ನು ಏಳು ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೆ ಪ್ರತ್ಯೇಕ ಗುರಿಗಳನ್ನು ನಿಗದಿ ಪಡಿಸಿ. ಉದಾ:– ಭೇಟಿಯ ಉದ್ದೇಶ, ಆಗಬಹುದಾದ ಹಣಕಾಸಿನ ಖರ್ಚುಗಳು, ಸಮಯದ ಬಳಕೆ, ಸಂಪನ್ಮೂಲಗಳು, ಗುಂಪಿನಲ್ಲಿ ಸೇರಿರುವ ಜನರ ಸಹಕಾರ್ಯ ಮತ್ತು ಯಾರನ್ನು ಅವಶ್ಯಕವಾಗಿ ಭೇಟಿ ಮಾಡಬೇಕು. ಸಂದರ್ಶಿಸಲು ಸಾಧ್ಯವಾದ ಸ್ಥಳಗಳು, ಕೇಳಬಹುದಾದ ಪ್ರಶ್ನೆಗಳು ಇತ್ಯಾದಿ.
- ಈಗ ನಿಮ್ಮ ಶಿಕ್ಷಕರ ಸಹಕಾರದೊಂದಿಗೆ ಈ ನಿರ್ದಿಷ್ಟ ಗುರಿಗಳನ್ನು ಸಮನ್ವಯಗೊಳಿಸಿ ಕೃಷಿ ಕ್ಷೇತ್ರ ಸಂದರ್ಶನದ ದೀರ್ಘಾವಧಿ ಗುರಿಗಳ ಯಶಸ್ಸಿನೊಂದಿಗೆ ಅವುಗಳನ್ನು ಹೋಲಿಕೆ ಮಾಡಿ.

ನೆಹರುರವರು ಮತ್ತು ಹೊಸದಾಗಿ ಸ್ವಾತಂತ್ರ್ಯಗೊಂಡ ಭಾರತದ ಅನೇಕ ಚಿಂತಕರು ಹಾಗೂ ಇತರೆ ಅನೇಕ ನಾಯಕರು ಅತಿಯಾದ ಬಂಡವಾಳಶಾಹಿ ಮತ್ತು ಸಮಾಜವಾದ ಪದ್ಧತಿಗೆ ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಂಡರು. ಮೂಲಭೂತವಾಗಿ ಸಮಾಜವಾದಿ ದೃಷ್ಟಿಕೋನಕ್ಕೆ ಸಹಾನುಭೂತಿ ವ್ಯಕ್ತಪಡಿಸುತ್ತಾ ಅವರು, ದೋಷಗಳಿಂದ ಮುಕ್ತವಾದ ಸಮಾಜವಾದದ ಉತ್ತಮ ಲಕ್ಷಣಗಳುಳ್ಳ ಒಂದು ಆರ್ಥಿಕ ವ್ಯವಸ್ಥೆಯನ್ನು ಕಂಡುಕೊಂಡರು. ಈ ನಿಟ್ಟಿನಲ್ಲಿ, ಭಾರತವು ಸದೃಢ ಸಾರ್ವಜನಿಕ ವಲಯವದ ಜೊತೆಗೆ ಖಾಸಗಿ ಆಸ್ತಿಗೆ ಅವಕಾಶವಿರುವ ಮತ್ತು ಪ್ರಜಾಪ್ರಭುತ್ವ ಮಾದರಿಯ ಸಮಾಜವಾದಿ ರಾಷ್ಟ್ರವಾಗಿ ರೂಪುಗೊಳಿಸುವುದು (ಪೆಟ್ಟಿಗೆ 2.2 ನೋಡಿ). ಸರ್ಕಾರವು ಆರ್ಥಿಕತೆಗೆ ಯೋಜನೆಗಳನ್ನು ರೂಪಿಸುವಾಗ ಖಾಸಗಿ ವಲಯವನ್ನು ಪ್ರೋತ್ಸಾಹಿಸುವುದು ಯೋಜನೆಯ ಭಾಗವಾಯಿತು. ಭಾರತದ ಸಂವಿಧಾನದ ನಿರ್ದೇಶಾತ್ಮಕ ತತ್ವಗಳು ಮತ್ತು 1948ರ ಕೈಗಾರಿಕಾ ನೀತಿ ಗೊತ್ತುವಳಿಗಳು(ನಿರ್ಣಯ) ಈ ದೃಷ್ಟಿಕೋನವನ್ನು ಪ್ರತಿಬಿಂಬಿಸಿದವು. 1950 ರಲ್ಲಿ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಯೋಜನಾ ಆಯೋಗ ರಚನೆಯಾಯಿತು. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳ ಯುಗ ಪ್ರಾರಂಭವಾಯಿತು.

**ಪೆಟ್ಟಿಗೆ 2.1 ಆರ್ಥಿಕ ವ್ಯವಸ್ಥೆಯ ವಿಧಗಳು (Types of Economic Systems)**

ಪ್ರತಿಯೊಂದು ಸಮಾಜ ಈ ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

- ಒಂದು ದೇಶದಲ್ಲಿ ಯಾವ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಬೇಕು?
- ಸರಕು ಮತ್ತು ಸೇವೆಗಳನ್ನು ಹೇಗೆ ಉತ್ಪಾದಿಸಬೇಕು? ಮಾನವ ಶ್ರಮದ ಹೆಚ್ಚು ಬಳಕೆಯಿಂದಲೋ ಅಥವಾ ಬಂಡವಾಳ (ಯಂತ್ರಗಳ) ಬಳಕೆಯಿಂದಲೋ?
- ಸರಕು ಮತ್ತು ಸೇವೆಗಳನ್ನು ಜನರಲ್ಲಿ ಹೇಗೆ ಹಂಚಬೇಕು?

ಈ ಎಲ್ಲಾ ಪ್ರಶ್ನೆಗಳಿಗೆ ಒಂದೇ ಉತ್ತರವೆಂದರೆ ಅದು ಮಾರುಕಟ್ಟೆ ಶಕ್ತಿಗಳಾದ ಬೇಡಿಕೆ ಮತ್ತು ಪೂರೈಕೆಗಳನ್ನು ಅವಲಂಬಿಸುವುದು. ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ, ಇದನ್ನು ಬಂಡವಾಳಶಾಹಿ ಅರ್ಥವ್ಯವಸ್ಥೆ ಎಂದೂ ಕರೆಯಲಾಗುತ್ತದೆ, ಇಲ್ಲಿ ಬೇಡಿಕೆಯನ್ನು ಹೊಂದಿರುವ ಅನುಭೋಗಿ ವಸ್ತುಗಳನ್ನು ಮಾತ್ರವೇ ಉತ್ಪಾದಿಸಲಾಗುತ್ತದೆ. ಅಂದರೆ ಲಾಭದಾಯಕವಾಗಿ ದೇಶದೊಳಗೆ ಅಥವಾ ವಿದೇಶಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುವಂತಹ ಸರಕುಗಳು. ಒಂದುವೇಳೆ ಕಾರುಗಳಿಗೆ ಬೇಡಿಕೆ ಇದ್ದರೆ ಕಾರುಗಳನ್ನು ಮತ್ತು ಸೈಕಲ್ಲುಗಳಿಗೆ ಬೇಡಿಕೆ ಇದ್ದರೆ ಸೈಕಲ್ಲುಗಳನ್ನು ಉತ್ಪಾದಿಸಲಾಗುತ್ತದೆ. ಬಂಡವಾಳಕ್ಕಿಂತ ಅಗ್ಗವಾಗಿ ಶ್ರಮಿಕರು ಲಭ್ಯವಿದ್ದರೆ 'ಶ್ರಮಸಾಂದ್ರ ಉತ್ಪಾದನಾ' ವಿಧಾನವನ್ನು, ಶ್ರಮಕ್ಕಿಂತ ಅಗ್ಗವಾಗಿ ಬಂಡವಾಳ ಲಭ್ಯವಿದ್ದರೆ 'ಬಂಡವಾಳಸಾಂದ್ರ ಉತ್ಪಾದನಾ' ವಿಧಾನವನ್ನು ಬಳಸಲಾಗುತ್ತದೆ. ಬಂಡವಾಳಶಾಹಿ ಸಮಾಜದಲ್ಲಿ ಉತ್ಪಾಸಿದಿದ ವಸ್ತುಗಳನ್ನು ಜನರಲ್ಲಿ ಹಂಚುವಾಗ ಅವರಿಗೆ ಏನುಬೇಕು ಎಂಬುದನ್ನು ಅವಶ್ಯಕತೆಗೆ ಅನುಗುಣವಾಗಿ ಹಂಚದೆ – ವಸ್ತು ಮತ್ತು ಸೇವೆಗಳನ್ನು 'ಕೊಳ್ಳುವ ಶಕ್ತಿ ಅಥವಾ ಕೊಳ್ಳುವ ಸಾಮಾರ್ಥ್ಯದ ಆಧಾರದ ಮೇಲೆ ಹಂಚಲಾಗುತ್ತದೆ. ಅದ್ದರಿಂದ ಕೊಳ್ಳುವುದಕ್ಕಾಗಿ ಪ್ರತಿಯೊಬ್ಬರು ತಮ್ಮ ಜೇಬಿನಲ್ಲಿ ಹಣವನ್ನು ಇಟ್ಟುಕೊಂಡಿರಬೇಕು. ಬಡವರಿಗೆ ಅಲ್ಪವೆಚ್ಚದ ಮನೆಗಳು ತುಂಬಾ ಅವಶ್ಯಕವಾಗಿವೆ ಆದರೆ ಬೇಡಿಕೆಯ ಹಿಂದಿರುವ ಕೊಳ್ಳುವ ಶಕ್ತಿಯನ್ನು ಬಡವರು ಹೊಂದಿಲ್ಲದೆ ಇರುವುದರಿಂದ ಮಾರುಕಟ್ಟೆ ಸಂವೇದನೆಯ ಪ್ರಕಾರ ಇದನ್ನು ಬೇಡಿಕೆ ಎಂದು ಲೆಕ್ಕಹಾಕಲು ಬರುವುದಿಲ್ಲ. ಇದರ ಒಂದು ಪರಿಣಾಮವಾಗಿ ಇಂತಹ ವಸ್ತುಗಳನ್ನು "ಮಾರುಕಟ್ಟೆಶಕ್ತಿ"ಗಳ ಪ್ರಕಾರ ಉತ್ಪಾದಿಸುವುದಿಲ್ಲ ಮತ್ತು ಪೂರೈಸುವುದಿಲ್ಲ. ದೇಶದ ಬಹುದೊಡ್ಡ ಸಂಖ್ಯೆಯ ಜನರು ಗುಣಾತ್ಮಕ ಜೀವನದ ಸುಧಾರಣೆಯ ಅವಕಾಶದಿಂದ ಹಿಂದುಳಿಯಬಹುದಾದಂತಹ ಸಮಾಜವನ್ನು ನಮ್ಮ ಪ್ರಥಮ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಇಷ್ಟಪಟ್ಟಿರಲಿಲ್ಲ.

ಒಂದು **"ಸಮಜವಾದಿ ಸಮಾಜ"ವು** ಈ ಮೂರು ಪ್ರಶ್ನೆಗಳಗೆ ವಿಭಿನ್ನ ರೀತಿಯಲ್ಲಿ ಉತ್ತರಿಸುತ್ತದೆ, ಸಮಾಜವಾದಿ ಸಮಾಜದಲ್ಲಿ ಸರ್ಕಾರ ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ಯಾವ ವಸ್ತುಗಳನ್ನು ಉತ್ಪಾದಿಸಬೇಕು, ಎಂದು ನಿರ್ಧರಿಸುತ್ತದೆ. ದೇಶದ ಜನತೆಗೆ ಯಾವುದು ಒಳ್ಳೆಯದೆಂದು ಸರ್ಕಾರಕ್ಕೆ ತಿಳಿದಿರುತ್ತದೆ ಮತ್ತು ಪ್ರತಿಯೊಬ್ಬ ಅನುಭೋಗಿಗಳ ಆಸೆಗಳಿಗೆ ಹೆಚ್ಚು ಮಹತ್ವ ನೀಡುವುದಿಲ್ಲವೆಂಬ ಕಲ್ಪನೆಯನ್ನು ಇದು ಹೊಂದಿದೆ. ಸರಕುಗಳನ್ನು ಹೇಗೆ ಉತ್ಪಾದಿಸಬೇಕು ಮತ್ತು ಅವುಗಳನ್ನು ಹೇಗೆ ಹಂಚಿಕೆ ಮಾಡಬೇಕು ಎಂಬುದನ್ನು ಸರ್ಕಾರವೇ ನಿರ್ಧರಿಸುತ್ತದೆ. ತಾತ್ವಿಕವಾಗಿ ಸಮಾಜವಾದದಲ್ಲಿ ಹಂಚಿಕೆಯು, ಜನರಿಗೆ ಏನುಬೇಕು ಎಂಬುದರ ಆಧಾರವಾಗಿದೆಯೇ ವಿನಃ ಬಂಡವಾಳಶಾಹಿ ಪದ್ಧತಿಯಂತೆ ಅವರು ಏನನ್ನು ಕೊಳ್ಳಲು ಬಯಸುತ್ತಾರೆ ಎಂಬುದರ ಮೇಲಲ್ಲ ಉದಾ:– ಸಮಾಜವಾದಿ ರಾಷ್ಟ್ರ ತನ್ನ ಎಲ್ಲಾ ನಾಗರೀಕರಿಗೆ ಉಚಿತ ಆರೋಗ್ಯ ಸೇವೆಗಳನ್ನು ಒದಗಿಸುತ್ತದೆ. ಎಲ್ಲವೂ ಸರ್ಕಾರದ ಒಡೆತನದಲ್ಲಿರುವುದರಿಂದ ಕಟ್ಟುನಿಟ್ಟಿನ ಸಮಾಜವಾದಿ ಸಮಾಜವು ಖಾಸಗಿ ಆಸ್ತಿ ಹೊಂದಿರುವುದಿಲ್ಲ. ಉದಾ:– ಕ್ಯೂಬಾ ಮತ್ತು ಚೈನಾಗಳಲ್ಲಿ ಬಹುತೇಕ ಆರ್ಥಿಕ ಚಟುವಟಿಕೆಗಳು ಸಮಾಜವಾದಿ ತತ್ವಗಳಿಂದ ನಿಯಂತ್ರಿಸಲ್ಪಟ್ಟಿವೆ.

ಬಹುಪಾಲು ಆರ್ಥಿಕ ವ್ಯವಸ್ಥೆಗಳು ಮಿಶ್ರ ಆರ್ಥಿಕ ವ್ಯವಸ್ಥೆಗಳಾಗಿವೆ. ಅಂದರೆ ಇಲ್ಲಿ ಸರ್ಕಾರ ಮತ್ತು ಮಾರುಕಟ್ಟೆಗಳೆರಡೂ ಒಟ್ಟಿಗೆ ಏನನ್ನು ಉತ್ಪಾದಿಸಬೇಕು, ಹೇಗೆ ಉತ್ಪಾದಿಸಬೇಕು, ಉತ್ಪಾದಿಸಿದ ಸರಕುಗಳನ್ನು ಹೇಗೆ ಹಂಚಿಕೆ ಮಾಡಬೇಕೆಂಬ ಈ ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕು. ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ, ಮಾರುಕಟ್ಟೆಯ ವ್ಯವಸ್ಥೆಯು ಏನೆಲ್ಲ ಸರಕು ಮತ್ತು ಸೇವೆಗಳನ್ನು ಉತ್ತಮವಾಗಿ ಉತ್ಪಾದಿಸಬಹುದೊ ಅವುಗಳನ್ನು ಒದಗಿಸಿ, ಮಾರುಕಟ್ಟೆಯ ವ್ಯವಸ್ಥೆಯು ಉತ್ಪಾದಿಸಲು ವಿಫಲವಾದ ಅಗತ್ಯ ಸರಕುಗಳು ಮತ್ತು ಸೇವೆಗಳನ್ನು ಸರ್ಕಾರ ಒದಗಿಸುವುದು.

**ಪೆಟ್ಟಿಗೆ 2.2 ಯೋಜನೆ ಎಂದರೇನು? (What is a Plan?)**

ಒಂದು ಯೋಜನೆಯು ರಾಷ್ಟ್ರದ ಸಂಪನ್ಮೂಲಗಳನ್ನು ಹೇಗೆ ಬಳಕೆ ಮಾಡಬೇಕು ಎಂಬುದನ್ನು ಹೇಳುತ್ತದೆ. ಅದು ಒಂದು ನಿರ್ದಿಷ್ಟ ಸಮಯದೊಳಗೆ ಸಾಧಿಸಬೇಕಾದ ಕೆಲವು ಸಾಮಾನ್ಯ ಗುರಿಗಳು, ಹಾಗೆಯೇ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿರಲೇಬೇಕು. ಭಾರತದಲ್ಲಿ ಯೋಜನೆಗಳು ಐದು ವರ್ಷಗಳ ಕಾಲಾವಧಿ ಹೊಂದಿವೆ ಮತ್ತು ಅವುಗಳನ್ನು 'ಪಂಚವಾರ್ಷಿಕ' ಯೋಜನೆಗಳು ಎನ್ನುತ್ತೇವೆ. (ರಾಷ್ಟ್ರೀಯ ಯೋಜನೆಗಳ ಅಗ್ರಗಣ್ಯರೆಂದು ಕರೆಯಲ್ಪಟ್ಟಿರುವ ಹಿಂದಿನ ಸೋವಿಯತ್ ಯೂನಿಯನ್‌ನಿಂದ ಇದನ್ನು ಎರವಲು ಪಡೆದ್ದಿದ್ದೇವೆ) ನಮ್ಮ ಯೋಜನೆಯ ಕಡತಗಳು, ಐದು ವರ್ಷಗಳ ಒಂದು ಯೋಜನೆಯಲ್ಲಿ ಸಾಧಿಸಬೇಕಿರುವ ನಿರ್ದಿಷ್ಟ ಉದ್ದೇಶಗಳನ್ನಷ್ಟೆ ಹೊಂದಿರದೇ, ಮುಂದಿನ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಏನನ್ನು ಸಾಧಿಸಬೇಕು? ಎಂಬುದನ್ನು ಒಳಗೊಂಡಿವೆ, ಈ ದೀರ್ಘಾವಧಿ ಯೋಜನೆಯನ್ನು "ದೂರದೃಷ್ಟಿ ಯೋಜನೆ" ಎನ್ನಲಾಗುತ್ತದೆ. ಪಂಚವಾರ್ಷಿಕ ಯೋಜನೆಗಳು ದೂರದೃಷ್ಟಿ ಯೋಜನೆಗೆ ಆಧಾರ ಒದಗಿಸಿವೆ.

ಯೋಜನೆಯೊಂದು ಎಲ್ಲಾ "ಗುರಿಗಳಿಗೆ" ಸಮಾನವಾದ ಪ್ರಾಮುಖ್ಯತೆಯನ್ನು ಎಲ್ಲಾ ಯೋಜನೆಗಳಲ್ಲಿ ನೀಡಬೇಕೆಂದು ನಿರೀಕ್ಷಿಸುವುದು ಅವಾಸ್ತವಿಕವಾಗಿರುತ್ತದೆ. ವಾಸ್ತವಿಕ ಸಂಗತಿ ಎಂದರೆ ಗುರಿಗಳ ನಿರ್ಧಾರದಲ್ಲಿ ದ್ವಂದ್ವತೆ ಇರುತ್ತದೆ. ಉದಾ:- ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸುವ ಗುರಿಯು ಉದ್ಯೋಗ ಪ್ರಮಾಣ ಹೆಚ್ಚಿಸುವ ಗುರಿಯೊಂದಿಗೆ ಸಂಘರ್ಷವನ್ನುಂಟು ಮಾಡಬಹುದು (ಘರ್ಷಣಾತ್ಮಕ ನಿರೋದ್ಯೋಗ) ಅಂದರೆ, ತಂತ್ರಜ್ಞಾನದ ಬಳಕೆ ಕಡಿಮೆ ಮಾಡಿದಾಗ ಮಾತ್ರ ಶ್ರಮಿಕರ ಅಗತ್ಯ ಉಂಟಾಗುತ್ತದೆ. ಯೋಜನಗಾರರಿಗೆ ಗುರಿಗಳನ್ನು ಸಮದೂಗಿಸುವುದು ತುಂಬಾ ಕ್ಲಿಷ್ಟಕರ ಕಾರ್ಯವಾಗಿತ್ತು. ಭಾರತದ ವಿವಿಧ ಯೋಜನೆಗಳಲ್ಲಿ ವಿವಿಧ ಗುರಿಗಳ ಬಗ್ಗೆ ಒತ್ತಿ ಹೇಳಿರುವುದನ್ನು ಕಾಣಬಹುದು

ನಮ್ಮ ಪಂಚವಾರ್ಷಿಕ ಯೋಜನೆಗಳು ಪ್ರತಿಯೊಂದು ವಸ್ತು ಮತ್ತು ಸೇವೆಗಳನ್ನು ಎಷ್ಟು ಉತ್ಪಾದಿಸಬೇಕು ಎಂಬುದನ್ನು ತಿಳಿಸಿಲ್ಲ. ಇದು ಸಾಧ್ಯವೂ ಇಲ್ಲ ಮತ್ತು ಅವಶ್ಯಕವೂ ಅಲ್ಲ (ಹಿಂದಿನ ಸೋವಿಯತ್ ಯೂನಿಯನ್ ಇದನ್ನು ಮಾಡಲು ಪ್ರಯತ್ನಿಸಿ ವಿಫಲವಾಗಿದೆ) ಇದಕ್ಕೆ ಬದಲಾಗಿ ಯಾವ ವಲಯಗಳು ಎಲ್ಲಿ ಪ್ರಧಾನ ಪಾತ್ರವಹಿಸುತ್ತವೆ ಎಂಬುದನ್ನು ಯೋಜನೆಯು ಸ್ಪಷ್ಟಪಡಿಸಿದರೆ ಸಾಕಾಗುತ್ತದೆ. ಉದಾ:- ವಿದ್ಯುತ್ ಉತ್ಪಾದನೆ ಮತ್ತು ನೀರಾವರಿ, ಹಾಗೆಯೇ ಉಳಿದವುಗಳನ್ನು ಮಾರುಕಟ್ಟೆಯ ನಿರ್ಧಾರಕ್ಕೆ ಬಿಡಬೇಕು.

## 2.2 ಪಂಚವಾರ್ಷಿಕ ಯೋಜನೆಗಳ ಗುರಿಗಳು (THE GOALS OF FIVE YEAR PLANS)

ಒಂದು ಯೋಜನೆಯು ನಿರ್ದಿಷ್ಟವಾದ ಸ್ಪಷ್ಟ ಗುರಿಗಳನ್ನು ಹೊಂದಿರಬೇಕು. ಪಂಚವಾರ್ಷಿಕ ಯೋಜನೆಗಳ ಗುರಿಗಳೆಂದರೆ ಬೆಳವಣಿಗೆ, ಆಧುನೀಕರಣ, ಸ್ವಾವಲಂಬನೆ, ಸಮಾನತೆಗಳಾಗಿವೆ. ಇದರರ್ಥ ಎಲ್ಲಾ ಯೋಜನೆಗಳು ಈ ಎಲ್ಲಾ ಗುರಿಗಳಿಗೆ ಸಮಾನವಾದ ಪ್ರಾಮುಖ್ಯತೆಯನ್ನು ನೀಡಿವೆ ಎಂದಲ್ಲ. ಮಿತವಾದ ಸಂಪನ್ಮೂಲಗಳಿಂದಾಗಿ ಪ್ರತಿಯೊಂದು ಯೋಜನೆಯಲ್ಲಿ ಯಾವ ಗುರಿಗಳಿಗೆ ಪ್ರಥಮ ಆದ್ಯತೆ ನೀಡಬೇಕು ಎಂಬುದನ್ನು ಆಯ್ಕೆಮಾಡಿಕೊಳ್ಳಬೇಕಾಗುತ್ತದೆ. ಏನೇ ಆದರೂ, ಯೋಜನಾಗಾರರು ಸಾಧ್ಯವಾದಷ್ಟರ ಮಟ್ಟಿಗೆ ಯೋಜನೆಗಳ ನೀತಿಗಳು ಈ ನಾಲ್ಕು ಗುರಿಗಳಿಗೆ ವಿರೋಧಾತ್ಮಕವಾಗಿಲ್ಲವೆಂದು ಖಚಿತ ಪಡಿಸಿಕೊಳ್ಳಬೇಕು. ಈಗ ನಾವು ಯೋಜನೆಗಳ ಗುರಿಗಳ ಬಗ್ಗೆ ವಿವರವಾಗಿ ತಿಳಿಯೋಣ.

**ಬೆಳವಣಿಗೆ (Growth):** ಆರ್ಥಿಕ ಬೆಳವಣಿಗೆಯು ದೇಶದೊಳಗೆ ಸರಕು ಮತ್ತು ಸೇವಗಳ ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದೆ. ಇದು ಉತ್ಪಾದಕ ಬಂಡವಾಳ ಮತ್ತು ಸೇವೆಗಳ ದಕ್ಷತೆಯನ್ನು ಹೆಚ್ಚಿಸುವುದು ಅಥವಾ ಬ್ಯಾಂಕ್ ಮತ್ತು ಸಾರಿಗೆಯಂತಹ ದೊಡ್ಡ ಗಾತ್ರದ ಬೆಂಬಲ ಸೇವೆಗಳನ್ನು ಅಥವಾ ಉತ್ಪಾದಕ ಬಂಡವಾಳ ಮತ್ತು ಸೇವೆಗಳ ದಕ್ಷತೆಯನ್ನು ಹೆಚ್ಚಿಸುವುದೆಂದಾಗುತ್ತದೆ. ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಆರ್ಥಿಕ ಬೆಳವಣಿಗೆಯ ಒಂದು ಒಳ್ಳೆಯ ಸೂಚಕವೆಂದರೆ, ಒಟ್ಟು ದೇಶೀಯ ಉತ್ಪನ್ನ(ಜಿ.ಡಿ.ಪಿ) ದಲ್ಲಿನ ಸ್ಥಿರವಾದ ಹೆಚ್ಚಳ. ಒಟ್ಟು ದೇಶೀಯ ಉತ್ಪನ್ನವು ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದನೆಯಾದ ಸರಕು ಮತ್ತು ಸೇವಗಳ ಮಾರುಕಟ್ಟೆ ಮೌಲ್ಯವಾಗಿದೆ. ನೀವು ಜಿ.ಡಿ.ಪಿಯನ್ನು ಒಂದು ಕೇಕ್ ಎಂದು ಭಾವಿಸಿದರೆ, ಬೆಳವಣಿಗೆ ಎಂಬುವುದು ಕೇಕ್‌ನ ಗಾತ್ರದಲ್ಲಿನ ಹೆಚ್ಚಳದಂತೆ. ಕೇಕ್‌ನ ಗಾತ್ರದೊಡ್ಡದಾಗಿದ್ದರೆ ಬಹಳಷ್ಟು ಜನ ಇದನ್ನು

ಅನುಭವಿಸುತ್ತಾರೆ. ಭಾರತ ದೇಶದ ಜನರು ಹೆಚ್ಚು ಸಮೃದ್ಧ ಮತ್ತು ವೈವಿಧ್ಯಮಯ ಜೀವನ ಅನುಭವಿಸಬೇಕಾದರೆ (ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಕಾರ) ಹೆಚ್ಚು ಸರಕು ಮತ್ತು ಸೇವಗಳ ಉತ್ಪಾದನೆ ಅವಶ್ಯಕವಾಗಿದೆ.

ಒಂದು ದೇಶದ ಜಿ.ಡಿ.ಪಿಯು ಆರ್ಥಿಕತೆಯ ವಿವಿಧ ವಲಯಗಳಿಂದ ಅಂದರೆ ಕೃಷಿ ವಲಯ, ಕೈಗಾರಿಕಾ ವಲಯ ಮತ್ತು ಸೇವಾ ವಲಯದ ಉತ್ಪತ್ತಿಯಾಗುತ್ತದೆ. ಪ್ರತಿಯೊಂದು ವಲಯದ ಕೊಡುಗೆಯು ಅರ್ಥವ್ಯವಸ್ಥೆಯ 'ರಚನಾತ್ಮಕ ಸಂಯೋಜನೆಯನ್ನು' ರೂಪಿಸುತ್ತದೆ. ಕೆಲವೊಂದು ರಾಷ್ಟ್ರಗಳಲ್ಲಿ ಕೃಷಿ ವಲಯದಲ್ಲಿನ ಬೆಳವಣಿಗೆ ಜಿ.ಡಿ.ಪಿ.ಯ ಬೆಳವಣಿಗೆಗೆ ಹೆಚ್ಚು ಕೊಡುಗೆ ನೀಡುತ್ತದೆ. ಹಾಗೆಯೇ ಇನ್ನು ಕೆಲವು ರಾಷ್ಟ್ರಗಳಲ್ಲಿ ಸೇವಾ ವಲಯದಲ್ಲಿನ ಬೆಳವಣಿಗೆ ಜಿ.ಡಿ.ಪಿ.ಯ ಬೆಳವಣಿಗೆಗೆ ಹೆಚ್ಚು ಕೊಡುಗೆ ನೀಡುತ್ತದೆ. (ಪೆಟ್ಟಿಗೆ 2.4 ನೋಡಿ).

### ಪೆಟ್ಟಿಗೆ 2.3 ಮಹಲನೋಬಿಸ್ – ಭಾರತದ ಯೋಜನೆಗಳ ಶಿಲ್ಪಿ



ನಮ್ಮ ಪಂಚವಾರ್ಷಿಕ ಯೋಜನೆಗಳು ಪ್ರಸಿದ್ಧ ಚಿಂತಕರ ಕೊಡುಗೆಯಾಗಿವೆ. ಅವರುಗಳಲ್ಲಿ ಸಂಖ್ಯಾಶಾಸ್ತ್ರಜ್ಞರೆಂದು ಖ್ಯಾತರಾದ ಪ್ರಶಾಂತಚಂದ್ರ ಮಹಲನೋಬಿಸ್ ರವರ ಕೊಡುಗೆ ಅನನ್ಯ.

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 'ಯೋಜನೆ' ಎಂಬ ಪದಕ್ಕೆ ನಿಜವಾದ ಅರ್ಥ ಮೂಡಿತು. ಎರಡನೇ ಪಂಚವಾರ್ಷಿಕ ಯೋಜನೆಯು, ಭಾರತದ ಯೋಜನೆಗಳ ಗುರಿಗಳಿಗೆ ಸಂಬಂಧಿಸಿದ ಮೂಲ ಕಲ್ಪನೆಗಳೊಂದಿಗೆ, ಅಭಿವೃದ್ಧಿ ಯೋಜನೆಗಳಿಗೆ ಮಹತ್ವಪೂರ್ಣವಾದ ಕೊಡುಗೆಯನ್ನು ನೀಡಿದೆ. ಇದು ಭಾರತದ ಯೋಜನಾ ವ್ಯವಸ್ಥೆಯ ಮೂಲೋದ್ದೇಶಗಳಿಗೆ ಅಗತ್ಯವಾದ ವಿಚಾರಗಳನ್ನು ಆಧರಿಸಿತ್ತು. ಈ ಯೋಜನೆಯು ಮಹಲನೋಬಿಸ್ ರವರ ಕಲ್ಪನೆಗಳ ಆಧಾರವಾಗಿದೆ. ಈ ಹಿನ್ನೆಲೆಯಲ್ಲಿ ಇವರನ್ನು ಭಾರತದ ಯೋಜನೆಗಳ ಶಿಲ್ಪಿ ಎಂದು ಬಣ್ಣಿಸಲಾಗಿದೆ.

ಕ್ರಿ.ಶ. 1893 ರಲ್ಲಿ ಕಲ್ಕತ್ತದಲ್ಲಿ ಜನಿಸಿದ ಇವರು ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜು ಮತ್ತು ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣವನ್ನು ಪಡೆದರು. ಇವರು ಸಂಖ್ಯಾಶಾಸ್ತ್ರ ವಿಷಯಕ್ಕೆ ನೀಡಿದ ವಿಶೇಷ ಕೊಡುಗೆಗಳಿಂದ ಇವರಿಗೆ ಅಂತರಾಷ್ಟ್ರೀಯ ಮನ್ನಣೆ ದೊರಕಿದೆ. 1946ರಲ್ಲಿ ಬ್ರಿಟನ್ ರಾಯಲ್ ಸೊಸೈಟಿಯ ಫೆಲೋಶಿಪ್(ಸದಸ್ಯತ್ವ) ಪಡೆದರು. ತುಂಬಾ ವಿಶೇಷ ಸಾಧನೆ ಮಾಡಿದ ವಿಜ್ಞಾನಿಗಳು ಮಾತ್ರ ಇದರ ಸದಸ್ಯರಾಗಿರುತ್ತಾರೆ. ಇದು ವಿಜ್ಞಾನಿಗಳಿಗೆ ಸಂಬಂಧಿಸಿದ ತುಂಬಾ ಪ್ರಸಿದ್ಧವಾದ ಒಂದು ಸಂಘಟನೆಯಾಗಿದೆ.

ಮಹಲನೋಬಿಸ್‌ರವರು ಕಲ್ಕತದಲ್ಲಿ ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆ (ಐ ಎಸ್ ಐ) ಸ್ಥಾಪಿಸಿದರು. ಮತ್ತು 'ಸಂಖ್ಯಾ' ಎಂಬ ಪತ್ರಿಕೆ ಪ್ರಾರಂಭಿಸಿದರು. ಇದು ಈಗಲೂ ಸಂಖ್ಯಾಶಾಸ್ತ್ರಜ್ಞರು ತಮ್ಮ ವಿಚಾರಗಳನ್ನು ಚರ್ಚಿಸುವ ಗೌರವಯುತ ವೇದಿಕೆಯಾಗಿದೆ. ಇಂದಿಗೂ 'ಐ.ಎಸ್.ಐ.' ಮತ್ತು 'ಸಂಖ್ಯಾ' ಇವೆರಡು ಜಗತ್ತಿನಾದ್ಯಂತ ಅರ್ಥಶಾಸ್ತ್ರಜ್ಞರು ಮತ್ತು ಸಂಖ್ಯಾಶಾಸ್ತ್ರಜ್ಞರಿಂದ ಪ್ರಶಂಸಿಸಲ್ಪಟ್ಟಿವೆ.

ಮಹಲನೋಬಿಸ್‌ರವರು ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಭಾರತದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಸಲಹೆ ಪಡೆಯಲು ಭಾರತದ ಹಾಗೂ ವಿದೇಶಗಳ ಪ್ರಸಿದ್ಧ ಅರ್ಥಶಾಸ್ತ್ರಜ್ಞರನ್ನು ಆಹ್ವಾಸಿನಿದ್ದರು. ಅದರಲ್ಲಿದ್ದ ಕೆಲವು ಅರ್ಥಶಾಸ್ತ್ರಜ್ಞರು ಕಾಲನಂತರದಲ್ಲಿ ವಿಶ್ವ ಶ್ರೇಷ್ಟ ನೊಬೆಲ್ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಇದು ವಿದ್ವತ್ತನ್ನು ಗುರುತಿಸುತ್ತಿದ್ದ ಅವರ ಮೇಧಾಶಕ್ತಿಯನ್ನು ತಿಳಿಸುತ್ತದೆ. ಮಹಲನೋಬಿಸ್‌ರವರು ಆಹ್ವಾಸಿನಿದ ಅರ್ಥಶಾಸ್ತ್ರಜ್ಞರಲ್ಲಿ ಕೆಲವರು ಎರಡನೇ ಯೋಜನೆಯಲ್ಲಿನ ಸಮಾಜವಾದಿ ತತ್ವಗಳನ್ನು ಪ್ರಬಲವಾಗಿ ಟೀಕೆ ಮಾಡಿದಾಗ, ಅವರು ಪ್ರತಿಯೊಬ್ಬರ ಟೀಕೆಗಳನ್ನು ಗಮನವಿಟ್ಟು ಆಲಿಸುತ್ತಿದ್ದರು. ಇದು ಅವರ ಮೇರು ಪಾಂಡಿತ್ಯವನ್ನು ಬಿಂಬಿಸುತ್ತದೆ.

ಇಂದು ಹಲವು ಅರ್ಥಶಾಸ್ತ್ರಜ್ಞರು ಮಹಲನೊಬಿಸ್‌ರವರು ರೂಪಿಸಿದ್ದ ಯೋಜನೆಗಳನ್ನು ನಿರಾಕರಿಸಿದರೂ. ಭಾರತವನ್ನು ಆರ್ಥಿಕ ಪ್ರಗತಿಯ ದಾರಿಗೆ ತರುವಲ್ಲಿ ಅವರ ಪಾತ್ರವನ್ನು ಇಂದಿಗೂ ಶ್ಲಾಘಿಸಿದ್ದಾರೆ ಮತ್ತು ಅವರ 'ಸಂಖ್ಯಾಶಾಸ್ತ್ರದ ಸಿದ್ಧಾಂತ'ದಿಂದ ಪ್ರಯೋಜನ ಪಡೆದ ಸಂಖ್ಯಾಶಾಸ್ತ್ರಜ್ಞರು ಸದಾ ಅವರನ್ನು ಸ್ಮರಿಸುತ್ತಾರೆ

**ಮೂಲ: Sukhamoy Chakravarty, 'Mahalanobis, Prasanta Chandra' in John Eatwell et.al, (Eds.) The New Palgrave Dictionary: Economic Development, W.W. Norton, New York and London.**

**ಪೆಟ್ಟಿಗೆ 2.4 ಸೇವಾ ವಲಯ**

ಒಂದು ದೇಶ ಅಭಿವೃದ್ಧಿಗೊಂಡಂತೆ ರಚನಾತ್ಮಕ ಬದಲಾವಣೆಗಳು ಆಗುತ್ತವೆ. ಭಾರತದಲ್ಲಿ ಈ ರಚನಾತ್ಮಕ ಬದಲಾವಣೆಗಳು ವಿಶಿಷ್ಟವಾಗಿವೆ. ಸಾಮಾನ್ಯವಾಗಿ, ಅಭಿವೃದ್ಧಿಯಾದಂತೆ ಕೈಗಾರಿಕಾ ವಲಯದ ಪಾಲು ಹೆಚ್ಚಾಗುತ್ತದೆ, ಕೃಷಿ ವಲಯದ ಪಾಲು ಕಡಿಮೆಯಾಗುತ್ತದೆ. ಉನ್ನತ ಮಟ್ಟದ ಅಭಿವೃದ್ಧಿಯಾದಾಗ, ಸೇವಾ ವಲಯವು ಜಿಡಿಪಿ ಗೆ ಉಳಿದೆರೆಡು ವಲಯಗಳಿಗಿಂತಲೂ ಹೆಚ್ಚಿನ ಕೊಡುಗೆ ನೀಡುತ್ತದೆ. ಭಾರತದಲ್ಲಿ ಕೃಷಿ ಕ್ಷೇತ್ರದ ಪಾಲು ಜಿಡಿಪಿ ಗೆ ಶೇ 50 ಕ್ಕಿಂತ ಹೆಚ್ಚಾಗಿತ್ತು – ಒಂದು ಬಡರಾಷ್ಟ್ರದಲ್ಲಿ ನಿರೀಕ್ಷಿಸುವಂತೆ. ಆದರೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇರುವಂತೆ, 1990ರಲ್ಲಿ ಕೈಗಾರಿಕೆ ಅಥವಾ ಕೃಷಿಗಿಂತಲೂ ಸೇವಾವಲಯದ ಪಾಲು ಶೇ 40.59 ಆಗಿರುತ್ತದೆ. ಈ ಚಮತ್ಕಾರದ ಬೆಳವಣಿಗೆಯಿಂದ ಸೇವಾ ವಲಯ 1991 ರ ನಂತರ ತನ್ನ ಬೆಳವಣಿಗೆಯ ವೇಗದ ತೀವ್ರತೆಯನ್ನು ಹೆಚ್ಚಿಸಿಕೊಂಡಿದೆ. (ಇದು ದೇಶದಲ್ಲಿ ಮುಂಬರುವ ಜಾಗತೀಕರಣದ ಮುನ್ಸೂಚನೆಯಾಗಿತ್ತು. ಇದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸೋಣ).

## ಆಧುನೀಕರಣ (MODERNISATION)

ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ಹೆಚ್ಚಿಸಲು ಉತ್ಪಾದಕರು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲೇಬೇಕು. ಉದಾ: ರೈತರು ಹಳೆಯ ಬೀಜಗಳಿಗೆ ಬದಲಾಗಿ ಹೊಸ ತಳಿ ಬಿತ್ತನೆ ಬೀಜಗಳನ್ನು ಬಳಸುವುದರಿಂದ ಉತ್ಪನ್ನವನ್ನು ಹೆಚ್ಚಿಸಬಹುದು. ಇದೇ ರೀತಿಯಲ್ಲಿ ಕಾರ್ಖಾನೆಯು ಹೊಸ ಮಾದರಿಯ ಯಂತ್ರಗಳನ್ನು ಬಳಸಿ ಉತ್ಪನ್ನವನ್ನು ಹೆಚ್ಚಿಸಬಹುದು. ಹೊಸ ತಂತ್ರಜ್ಞಾನದ ಅಳವಡಿಕೆಯನ್ನು"ಆಧುನೀಕರಣ" ಎನ್ನುತ್ತೇವೆ.

ಆದಾಗ್ಯೂ, ಆಧುನೀಕರಣ ಕೇವಲ ಹೊಸ ತಂತ್ರಜ್ಞಾನದ ಬಳಕೆಗೆ ಮಾತ್ರ ಸೀಮಿತವಾಗಿರದೆ ಸಾಮಾಜಿಕ ದೃಷ್ಟಿಕೋನದ ಬದಲಾವಣೆಗೂ ಅನ್ವಯಿಸುತ್ತದೆ ಅಂದರೆ ಮಹಿಳೆಯರ ಹಕ್ಕುಗಳು ಪುರುಷರ ಹಕ್ಕುಗಳಂತೆ ಸಮಾನವಾಗಿ ಗುರುತಿಸುವಂತಾಗಬೇಕು. ಸಾಂಪ್ರಾದಾಯಿಕ ಸಮಾಜದಲ್ಲಿ ಪುರುಷರು ಕೆಲಸಗಳಲ್ಲಿ ತೊಡಗಿದ್ದರೆ, ಮಹಿಳೆಯ ಕಾರ್ಯಕ್ಷೇತ್ರ ಮನೆಗೆ ಸೀಮಿತವಾಗಿರುತ್ತದೆ. ಆಧುನಿಕ ಸಮಾಜವು ಬ್ಯಾಂಕ್, ಕೈಗಾರಿಕೆ, ಶಾಲೆ ಮುಂತಾದ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಪ್ರತಿಭೆಯನ್ನು ಬಳಸಿಕೊಳ್ಳುತ್ತದೆ. ಮತ್ತು ಇಂತಹ ಸಮಾಜವು ಸರ್ವೇ ಸಾಮಾನ್ಯವಾಗಿ ಸಮೃದ್ಧವಾಗಿರುತ್ತದೆ.

## ಸ್ವಾವಲಂಬನೆ (SELF – RELIANCE)

ಒಂದು ದೇಶ ತನ್ನದೇ ಸಂಪನ್ಮೂಲಗಳನ್ನು ಬಳಸಿಕೊಂಡು ಅಥವಾ ಇತರ ದೇಶಗಳಿಂದ ಸಂಪನ್ಮೂಲಗಳನ್ನು ಆಮದು ಮಾಡಿಕೊಂಡು ಆರ್ಥಿಕ ಬೆಳವಣಿಗೆ ಮತ್ತು ಆಧುನೀಕರಣವನ್ನು ಉತ್ತೇಜಿಸಬಹುದು. ಮೊದಲ ಏಳು ಪಂಚವಾರ್ಷಿಕ ಯೋಜನೆಗಳು ಸ್ವಾವಲಂಬನೆಗೆ ಮಹತ್ವ ನೀಡಿದವು. ಅಂದರೆ ನಮ್ಮ ದೇಶದಲ್ಲಿಯೇ ಉತ್ಪಾದಿಸಬಹುದಾದ ಸರಕುಗಳ ಆಮದನ್ನು ತಡೆಯುವುದು. ಈ ನೀತಿಯು ಹೊರದೇಶಗಳ ಮೇಲಿನ ಅವಲಂಬನೆಯನ್ನು, ವಿಶೇಷವಾಗಿ ಆಹಾರ ಪದಾರ್ಥಗಳ ಅವಲಂಬನೆಯನ್ನು ಕಡಿಮೆಮಾಡಲು ಅವಶ್ಯಕವೆಂದು ಪರಿಗಣಿಸಲಾಯಿತು. ವಿದೇಶೀಯರ ಪ್ರಾಬಲ್ಯದಿಂದ ಆಗಷ್ಟೆ ಬಿಡುಗಡೆ ಪಡೆದ ಜನರು ಸ್ವಾವಲಂಬನೆಗೆ ಮಹತ್ವ ನೀಡಿದ್ದು ಸಹಜವೇ ಆಗಿದೆ. ಅಲ್ಲದೆ, ವಿದೇಶಿ ಬಂಡವಾಳ, ವಿದೇಶಿ ತಂತ್ರಜ್ಞಾನ ಮತ್ತು ಆಮದು ಆಹಾರ ಪದಾರ್ಥಗಳ ಮೇಲಿನ ಅವಲಂಬನೆಯು ನಮ್ಮ ನೀತಿಗಳಲ್ಲಿ ವಿದೇಶೀಯರ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಡುವುದರ ಮೂಲಕ ಭಾರತದ ಸಾರ್ವಭೌಮತ್ವಕ್ಕೆ ಚ್ಯುತಿಯಾಗಬಹುದೆಂಬ ಆತಂಕವಿತ್ತು.

## ಸಮಾನತೆ(ಸಮತೆ) (EQUITY)

ಕೇವಲ ಆರ್ಥಿಕ ಬೆಳವಣಿಗೆ, ಆಧುನೀಕರಣ ಮತ್ತು ಸ್ವಾವಲಂಬನೆಗಳಿಂದಲೇ ತಂತಾನೇ ದೇಶದ ಜನರ ಜೀವನ ರೀತಿಯು ಸುಧಾರಣೆಯಾಗದೇ ಇರಬಹುದು. ಒಂದು ದೇಶ ಅಧಿಕ ಬೆಳವಣಿಗೆಯನ್ನು ಹೊಂದಿರಬಹುದು, ದೇಶದಲ್ಲಿಯೇ ಅಭಿವೃದಿಯಾದ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರಬಹುದು ಜೊತೆಗೆ ಆ ದೇಶದ ಹೆಚ್ಚಿನವರು ಬಡವರಾಗಿರಬಹುದು. ಆದ್ದರಿಂದ ಆರ್ಥಿಕ ಅಭ್ಯುದಯದ ಫಲವು ಕೇವಲ ಶ್ರೀಮಂತರ ಪಾಲಾಗದೆ ಬಡವರ್ಗದವರಿಗೂ ತಲಪುವಂತೆ ನೋಡಿಕೊಳ್ಳುವುದು ಅವಶ್ಯಕವಾಗಿದೆ. ಹಾಗಾಗಿ ಆರ್ಥಿಕ ಬೆಳವಣಿಗೆ, ಆಧುನೀಕರಣ, ಸ್ವಾವಲಂಬನೆಯ ಜೊತೆಗೆ ಸಮಾನತೆಯೂ ಸಹ ಮುಖ್ಯವಾಗುತ್ತದೆ. ಪ್ರತಿಯೊಬ್ಬ



### ನೀವೇ ಮಾಡಿರಿ
### (Work These Out)

➢ ಬದಲಾಗುತ್ತಿರುವ ತಂತ್ರಜ್ಞಾನದ ಬಳಕೆ ಕುರಿತು ನಿಮ್ಮ ತರಗತಿಯಲ್ಲಿ ಚರ್ಚಿಸಿ.

1. ಆಹಾರ ಧಾನ್ಯಗಳ ಉತ್ಪಾದನೆ
2. ಉತ್ಪನ್ನಗಳನ್ನು ಪ್ಯಾಕ್ ಮಾಡುವುದು
3. ಸಮೂಹ ಸಂವಹನ.

➢ 1990–91 ಮತ್ತು 2014–15ರ ಅವಧಿಗಳಲ್ಲಿ ಭಾರತದ ಆಮದು ಮತ್ತು ರಫ್ತಿನ ಮುಖ್ಯ ವಸ್ತುಗಳನ್ನು ಗುರುತಿಸಿ ಮತ್ತು ಒಂದು ಪಟ್ಟಿ ಸಿದ್ಧಪಡಿಸಿ.

1. ವ್ಯತ್ಯಾಸಗಳನ್ನು ಗಮನಿಸಿ.
2. ಸ್ವಾವಲಂಬನೆಯ ಪರಿಣಾಮವನ್ನು ನೀವು ಗಮನಿಸಿದ್ದೀರಾ? ಚರ್ಚಿಸಿ.

ಇತ್ತೀಚಿನ ಎಕನೊಮಿಕ್ ಸರ್ವೆ (ಆರ್ಥಿಕ ಸಮೀಕ್ಷೆ) ಅಧ್ಯಯನದ ಮೂಲಕ ಇವುಗಳ ಬಗ್ಗೆ ಮಾಹಿತಿ ಪಡೆಯಿರಿ.

ಭಾರತೀಯ ಅವನ ಅಥವಾ ಅವಳ ಮೂಲಭೂತ ಅವಶ್ಯಕತೆಗಳಾದ ಆಹಾರ, ಉತ್ತಮ ವಸತಿ, ಶಿಕ್ಷಣ, ಆರೋಗ್ಯ ಸೌಕರ್ಯ ಹೊಂದಲು ಸಮರ್ಥರಾಗಬೇಕು ಮತ್ತು ಸಂಪತ್ತಿನ ಅಸಮಾನ ಹಂಚಿಕೆಯು ಕಡಿಮೆಯಾಗಬೇಕು.

ನಾವು ಈಗ, 1950–1990ರ ಅವಧಿಯಲ್ಲಿನ ಮೊದಲ ಏಳು ಪಂಚವಾರ್ಷಿಕ ಯೋಜನೆಗಳು, ವ್ಯಾಪಾರ, ಕೈಗಾರಿಕೆ ಹಾಗು ಕೃಷಿವಲಯಗಳಿಗೆ ಸಂಭಂದಿಸಿದಂತೆ, ಈ ನಾಲ್ಕು ಗುರಿಗಳನ್ನು ಸಾಧಿಸಲು ಹೇಗೆ ಪ್ರಯತ್ನಿಸಿವೆ, ಹಾಗೂ ಎಷ್ಟು ಯಶಸ್ವಿಯಾಗಿವೆ ಎಂಬುದನ್ನು ತಿಳಿಯೋಣ. ನೀವು 1991 ರ ನಂತರದಲ್ಲಿ ಕೈಗೊಂಡ ಅಭಿವೃದ್ಧಿ ಅಂಶಗಳು ಮತ್ತು ನೀತಿಗಳನ್ನು ಅಧ್ಯಾಯ–3 ರಲ್ಲಿ ಅಭ್ಯಾಸಮಾಡುವಿರಿ.

## 2.3 ಕೃಷಿ (AGRICULTURE)

ಅಧ್ಯಾಯ ಒಂದರಲ್ಲಿ ವಸಾಹತುಶಾಹಿ ಆಡಳಿತದ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಬೆಳವಣಿಗೆಯಾಗಲಿ ಅಥವಾ ಸಮಾನತೆಯಾಗಲಿ ಇರಲಿಲ್ಲ ಎಂಬುದನ್ನು ನೀವು ಅಧ್ಯಯನ ಮಾಡಿದ್ದೀರಿ. ಸ್ವತಂತ್ರ ಭಾರತದ ನೀತಿ ನಿರೂಪಕರು ಈ ಸಮಸ್ಯೆಗಳನ್ನು ಪರಿಹರಿಸಬೇಕಾಗಿತ್ತು ಮತ್ತು ಅವರು ಇದನ್ನು ಭೂ ಸುಧಾರಣೆ ಮತ್ತು ಅಧಿಕ ಇಳುವರಿ ಬಿತ್ತನೆ ಬೀಜ (ಹೆಚ್ ವೈ ವಿ) ಗಳ ಬಳಕೆಗೆ ಒತ್ತು ನೀಡುವುದರ ಮೂಲಕ ಕೈಗೊಂಡರು, ಇದು ಕೃಷಿ ಕ್ರಾಂತಿಗೆ ಕಾರಣವಾಯಿತು.

### ಭೂ ಸುಧಾರಣೆಗಳು (LAND REFORMS)

ಭಾರತವು ಸ್ವಾತಂತ್ರ ಪಡೆದ ಸಂದರ್ಭದಲ್ಲಿ ಗೇಣಿ ವ್ಯವಸ್ಥೆಯು ಮಧ್ಯವರ್ತಿಗಳಿಂದ (ಮುಖ್ಯವಾಗಿ ಜಮೀನ್ದಾರರು, ಜಹಗೀರುದಾರರು ಇತ್ಯಾದಿಯಾಗಿ ಕರೆಸಿಕೊಳ್ಳುತ್ತಿದ್ದ) ತುಂಬಿ ಹೋಗಿದ್ದು ಅವರು ಕೃಷಿ ಅಭಿವೃದ್ಧಿಗೆ ಯಾವುದೇ ಕೊಡುಗೆ ನೀಡದೆ, ಭೂಮಿಯನ್ನು ನಿಜವಾಗಿ ಉಳುವ ರೈತನಿಂದ ಗೇಣಿಯನ್ನು ಸಂಗ್ರಹಿಸುತ್ತಿದ್ದರು. ಕೃಷಿ ಕ್ಷೇತ್ರದ ಕಡಿಮೆ ಉತ್ಪಾದಕತೆಯು ಅನಿವಾರ್ಯವಾಗಿ ಭಾರತವನ್ನು ಆಹಾರ ವಸ್ತುಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನದಿಂದ (USA) ಆಮದು ಮಾಡಿಕೊಳ್ಳುವಂತೆ ಮಾಡಿತು. ಕೃಷಿಯಲ್ಲಿನ ಸಮಾನತೆಯು ಭೂ–ಸುಧಾರಣೆಗಳಿಗೆ ಕಾರಣವಾಯಿತು, ಭೂ ಸುಧಾರಣೆಗಳು ಮುಖ್ಯವಾಗಿ ಭೂ ಹಿಡುವಳಿಗಳ ಒಡೆತನದ ಬದಲಾವಣೆಗಳಿಗೆ ಸಂಬಂಧಿಸಿದ್ದಾಗಿದೆ. ಸ್ವಾತಂತ್ರ್ಯ ಪಡೆದ ಕೇವಲ ಒಂದು ವರ್ಷದಲ್ಲಿ ಮಧ್ಯವರ್ತಿಗಳನ್ನು ರದ್ದುಪಡಿಸಿ ಮತ್ತು ಉಳುವವನನ್ನೇ ಭೂ ಒಡೆಯನನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಯಿತು. ಸಾಕಷ್ಟು ಬಂಡವಾಳವನ್ನು ಒದಗಿಸಿದಲ್ಲಿ ಭೂ ಒಡೆತನವು ವ್ಯವಸಾಯದಲ್ಲಿ ಸುಧಾರಣೆ ತರವಂತಹ ಹೂಡಿಕೆ ಮಾಡಲು ಸಾಗುವಳಿದಾರರನ್ನು ಉತ್ತೇಜಿಸುತ್ತದೆ ಎಂಬುದು ಇದರ ಹಿಂದಿನ ಉದ್ದೇಶವಾಗಿತ್ತು. (ಪೆಟ್ಟಿಗೆ 2.5ನ್ನು ಗಮನಿಸಿ).

**ಪೆಟ್ಟಿಗೆ 2.5: ಮಾಲಿಕತ್ವ ಮತ್ತು ಪ್ರೋತ್ಸಾಹಕಗಳು**

ಕೃಷಿಕರು ಭೂ ಒಡೆಯರಾದಾಗ ಉತ್ಪಾದನೆ ಹೆಚ್ಚಿ ಅವರು ಇದರಿಂದ ಹೆಚ್ಚು ಪ್ರೇರಿತರಾಗಿ ಕೃಷಿಯಲ್ಲಿ ಆಸಕ್ತಿ ಪಡೆದುಕೊಳ್ಳಬಹುದು ಎಂಬ ಕಲ್ಪನೆಯ ಆಧಾರದ ಮೇಲೆ 'ಉಳುವವನಿಗೆ ಭೂಮಿ' ನೀತಿಯು ಜಾರಿಗೆ ಬಂದಿದೆ. ಭೂ ಒಡೆತನವು ಉತ್ಪಾದನೆಯ ಹೆಚ್ಚಳದಿಂದ ಆಗುವ ಲಾಭವನ್ನು ಉಳುವವನೆ ಪಡೆಯಲು ಅವಕಾಶ ಮಾಡಿಕೊಡುತ್ತದೆ. ಹೆಚ್ಚಿನ ಉತ್ಪನ್ನದಿಂದ ಭೂ ಮಾಲೀಕರು ಹೆಚ್ಚುಲಾಭ ಪಡೆದಿದ್ದರೂ, ಭೂಮಿಯಲ್ಲಿ ಅಭಿವೃದ್ಧಿಗಳನ್ನು ಮಾಡಲು ಭೂ ಗೇಣಿದಾರರು ಆಸಕ್ತಿ ತೋರಲಿಲ್ಲ. ಹಳೆಯ ಸೋವಿಯತ್ ಯೂನಿಯನ್‌ನಲ್ಲಿ ರೈತರನ್ನು ಮಾರಾಟದ ಹಣ್ಣುಗಳ ಪಿಂಡಿ(pack) ಕಟ್ಟುವ ಕಾರ್ಯಕ್ಕೆ ನಿರ್ಲಕ್ಷತೆಯಿಂದ ಬಳಸಿಕೊಂಡ ಚಿತ್ರಣ ಭೂ ಮಾಲಿಕತ್ವಕ್ಕೆ ಮಹತ್ವದ ಪ್ರೇರಣೆ ನೀಡಬೇಕಾಗಿರುವುದನ್ನು ವಿವರಿಸುತ್ತದೆ. ಅಲ್ಲಿ ರೈತರು ಅಸಹಜವಾಗಿ ತಾಜಾ ಹಣ್ಣುಗಳ ಜೊತೆ ಕೊಳೆತ ಹಣ್ಣುಗಳನ್ನು ಸೇರಿಸಿ ಪಿಂಡಿ ಕಟ್ಟುತ್ತಿದ್ದರು. ತಾಜಾ ಹಣ್ಣುಗಳ ಜೊತೆ ಕೊಳೆತ ಹಣ್ಣುಗಳನ್ನು ಸೇರಿಸಿದರೆ ಎಲ್ಲವೂ ಹಾಳಾಗುತ್ತವೆ ಎಂದು ಪ್ರತಿಯೊಬ್ಬ ರೈತನಿಗೂ ತಿಳಿದಿದ್ದರೂ ಹಾಗೆಯೇ ಪ್ಯಾಕ್ ಮಾಡುತ್ತಿದ್ದರು. ಹಣ್ಣುಗಳು ಮಾರಾಟವಾಗದಿದ್ದರೆ ನಿಸ್ಸಂಶಯವಾಗಿ, ಇದರಿಂದ ರೈತರಿಗೆ ನಷ್ಟವಾಗುತ್ತದೆ ಎಂದು ತಿಳಿದೂ ಸೋವಿಯತ್ ಯೂನಿಯನ್‌ನ ರೈತರು ಏಕೆ ಈ ರೀತಿ ಮಾಡುತ್ತಿದ್ದರು? ರೈತರಿಗೆ ಪ್ರೊತ್ಸಾಹಕಗಳು ಇಲ್ಲದೇ ಇರುವುದೇ ಇದಕ್ಕಿರುವ ಉತ್ತರವಾಗಿದೆ. ಹಳೆಯ ಸೋವಿಯತ್ ಯೂನಿಯನ್‌ನಲ್ಲಿ ರೈತರು ಯಾವುದೇ ಸ್ವಂತ ಭೂಮಿ ಹೊಂದದೇ ಇದ್ದುದರಿಂದ ಅವರು ಲಾಭಗಳನ್ನು ಅನುಭವಿಸಲೂ ಇಲ್ಲ ಹಾಗೆಯೇ ನಷ್ಟಗಳಿಂದ ಕೊರಗಲೂ ಇಲ್ಲ. ಅಲ್ಲಿ ರೈತರನ್ನು ಸಮರ್ಥಗೊಳಿಸುವ ಭಾಗವಾಗಿ ಯಾವುದೇ ಪ್ರೋತ್ಸಾಹಕಗಳಿರಲಿಲ್ಲ. ಭೂ ಮಾಲಿಕತ್ವವಿಲ್ಲದೆ, ಫಲವತ್ತಾದ ವಿಶಾಲ ಭೂಮಿ ಇದ್ದರೂ ಸೋವಿಯತ್ ಯೂನಿಯನ್‌ನಲ್ಲಿ ಕೃಷಿ ವಲಯದ ನಿರಾಶಾದಾಯಕ ಕಾರ್ಯ ಸಾಧನೆಯನ್ನು ಇದು ವಿವರಿಸುತ್ತದೆ.

**ಮೂಲ:– Thomas Sowell, Basic Economics: A Citizen's Guide to the Economy. New York: Basic Books, 2004, Second Edition.**

ಭೂ ಒಡೆತನದ ಗರಿಷ್ಠ ಮಿತಿಯು ಕೃಷಿ ವಲಯದಲ್ಲಿ 'ಸಮಾನತೆ' ತರುವ ಮತ್ತೊಂದು ನೀತಿಯಾಗಿತ್ತು. ಇದು ಒಬ್ಬ ವ್ಯಕ್ತಿ ಹೊಂದಬಹುದಾದ ಭೂಮಿಯ ಗರಿಷ್ಠ ಮಿತಿಯನ್ನು ನಿರ್ಧರಿಸುತ್ತದೆ. ಭೂಮಿಯ ಗರಿಷ್ಠ ಮಿತಿ ನಿರ್ಧಾರದ ಉದ್ದೇಶ ಭೂ ಒಡೆತನ ಕೆಲವರ ಕೈಯಲ್ಲಿ ಕೇಂದ್ರೀಕೃತವಾಗುವುದನ್ನು ಕಡಿಮೆ ಮಾಡುವುದಾಗಿದೆ.

ಮಧ್ಯವರ್ತಿಗಳ ನಿರ್ಮೂಲನೆಯಿಂದಾಗಿ ಸುಮಾರು ಇನ್ನೂರು ಲಕ್ಷ (200 ಲಕ್ಷ) ಗೇಣಿದಾರರು ಸರ್ಕಾರದೊಂದಿಗೆ ನೇರ ಸಂಪರ್ಕ ಹೊಂದುವಂತಾಯಿತು. ಇವರೆಲ್ಲರೂ ಜಮೀನ್ದಾರರ ನಿರಂತರ ಶೋಷಣೆಯಿಂದ ಮುಕ್ತಗೊಂಡರು. ಭೂ ಒಡೆತನವನ್ನು ಹಿಡುವಳಿದಾರನಿಗೆ ನೀಡಿದ್ದರಿಂದ ಉತ್ಪಾದನೆ ಹೆಚ್ಚಿಸಲು ಪ್ರೇರಣೆಯಾಯಿತು ಇದು ಕೃಷಿ ಬೆಳವಣಿಗೆಗೆ ಕೊಡುಗೆ ನೀಡಿತು. ಆದಾಗ್ಯೂ ಮಧ್ಯವರ್ತಿಗಳ ನಿರ್ಮೂಲನೆ ಮಾತ್ರದಿಂದ ಸಂಪೂರ್ಣವಾಗಿ ಸಮಾನತೆಯ ಗುರಿಯನ್ನು ಸಾಧಿಸಲಾಗಿಲ್ಲ. ಕೆಲವು ಪ್ರದೇಶಗಳಲ್ಲಿ ಹಳೆಯ ಜಮೀನ್ದಾರರು ಕಾಯ್ದೆಗಳಲ್ಲಿನ ಕೆಲವು ನ್ಯೂನತೆಗಳನ್ನು ಬಳಸಿಕೊಂಡು ಹೆಚ್ಚಿನ ಭೂ ಮಾಲೀಕತ್ವವನ್ನು ಮುಂದುವರೆಸಿದ್ದಾರೆ; ಹಲವು ಸಂದರ್ಭಗಳಲ್ಲಿ ಗೇಣಿದಾರರನ್ನು ಹೊರಹಾಕಿ ಸ್ವತಃ ತಾವೇ ಸಾಗುವಳಿದಾರರೆಂದುಕೊಂಡು ಭೂ ಒಡೆತನವನ್ನು ಉಳಿಸಿಕೊಂಡರು; ಭೂ ಸಾಗುವಳಿದಾರರು ಭೂಮಿಯ ಮಾಲೀಕತ್ವವನ್ನು ಪಡೆದ ಮೇಲೂ ಕೃಷಿಕಾರ್ಮಿಕರ ಬಡ ವರ್ಗದವರಿಗೆ (ಬೆಳೆ ಹಂಚಿಕೆ ಪದ್ಧತಿಯಲ್ಲಿದ್ದವರು ಮತ್ತು ಭೂ ರಹಿತ ಕೃಷಿಕಾರ್ಮಿಕರು), ಅತ್ಯಂತ ಬಡ ಕೃಷಿ ಕಾರ್ಮಿಕರಿಗೆ (ಗೇಣಿದಾರರು, ಭೂ ರಹಿತ ಕೃಷಿ ಕಾರ್ಮಿಕರು) ಭೂ ಸುಧಾರಣೆಯಿಂದ ಪ್ರಯೋಜನವಾಗಲಿಲ್ಲ.

ಭೂ ಹಿಡುವಳಿ ಗರಿಷ್ಠ ಮಿತಿ ಕಾಯಿದೆ ಕೂಡ ಹಲವು ತೊಡಕುಗಳನ್ನು ಎದುರಿಸಬೇಕಾಯಿತು. ದೊಡ್ಡ ಜಮೀನ್ದಾರರು ಕಾಯಿದೆಯನ್ನು ಪ್ರಶ್ನಿಸಿ ಕೋರ್ಟಗಳ ಮೊರೆ ಹೋದರು, ಇದರಿಂದ ಈ ಕಾಯಿದೆಯ ಜಾರಿ ವಿಳಂಬವಾಯಿತು. ಈ ವಿಳಂಬದ ಅವಧಿಯನ್ನು ಅವರು ತಮ್ಮ ಜಮೀನನ್ನು ಹತ್ತಿರದ ಸಂಬಂಧಿಗಳ ಹೆಸರಿಗೆ ಭೂ ನೋಂದಣಿ ಮಾಡಲು ಬಳಸಿದರು. ಆ ಮೂಲಕ ಕಾಯ್ದೆಯಿಂದ ತಪ್ಪಿಸಿಕೊಳ್ಳುತ್ತಿದ್ದರು ಈ ಕಾಯಿದೆಯೂ ಸಹ ಅನೇಕ ನ್ಯೂನತೆಗಳನ್ನು ಹೊಂದಿದ್ದು ಇದನ್ನು ಉಪಯೋಗಿಸಿಕೊಂಡು ದೊಡ್ಡ ಭೂ ಹಿಡುವಳಿದಾರರು ಅವರ ಭೂಮಿಯನ್ನು ಉಳಿಸಿಕೊಂಡರು. ಭೂ ಸುಧಾರಣಾ ಕ್ರಮಗಳು ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಯಶಸ್ವಿಯಾದವು. ಏಕೆಂದರೆ ಉಳುವವನೆ ಭೂ ಒಡೆಯ ನೀತಿಗೆ ಆ ರಾಜ್ಯ ಸರ್ಕಾರಗಳು ಬದ್ಧವಾಗಿದ್ದವು. ದುರಾದೃಷ್ಟವಶಾತ್ ಇತರ ರಾಜ್ಯಗಳು

ಇದೇ ಮಟ್ಟದ ಬದ್ಧತೆಯನ್ನು ಹೊಂದಿರಲಿಲ್ಲ. ಆದ್ದರಿಂದ ಭೂ ಹಿಡುವಳಿಗಳ ಮಾಲಿಕತ್ವದಲ್ಲಿ ಇಂದಿಗೂ ಅಧಿಕ ಅಸಮಾನತೆ ಮುಂದುವರೆದಿದೆ.

## ಹಸಿರು ಕ್ರಾಂತಿ (THE GREEN REVOLUTION)

ಸ್ವಾತಂತ್ರ್ಯದ ಸಂದರ್ಭದಲ್ಲಿ ದೇಶದಲ್ಲಿನ ಶೇ.75 ರಷ್ಟು ಜನರು ಕೃಷಿಯನ್ನು ಅವಲಂಬಿಸಿದ್ದರು. ಕೃಷಿ ವಲಯದ ಉತ್ಪಾದಕತೆ ತುಂಬಾ ಕಡಿಮೆಯಿತ್ತು ಏಕೆಂದರೆ ಹಳೆಯ ತಂತ್ರಜ್ಞಾನದ ಬಳಕೆ ಮತ್ತು ಹೆಚ್ಚಿನ ರೈತರಿಗೆ ಅವಶ್ಯವಾಗಿದ್ದ ಮೂಲಭೂತ ಸೌಕರ್ಯಗಳ ಕೊರತೆಯಿತ್ತು. ಭಾರತದ ಕೃಷಿಯು ಮುಖ್ಯವಾಗಿ ಮಾನ್ಸೂನ್ ಮಾರುತಗಳನ್ನು ಅವಲಂಬಿಸಿದೆ. ಮಾನ್ಸೂನ್ ಮಳೆ ಕೊರತೆಯಾದಾಗ ನೀರಾವರಿ ಸೌಲಭ್ಯವನ್ನು ಪಡೆದ ಕೆಲವರನ್ನು ಹೊರತು ಪಡಿಸಿದರೆ ಹೆಚ್ಚಿನ ರೈತರು ತೊಂದರೆಗೆ ಒಳಗಾಗುತ್ತಿದ್ದರು. ವಸಾಹತುಶಾಹಿ ಆಡಳಿತಾವಧಿಯಲ್ಲಿ ಕೃಷಿ ಕ್ಷೇತ್ರ ಹೊಂದಿದ್ದ ಜಡತೆಯನ್ನು ಹಸಿರು ಕ್ರಾಂತಿ ಶಾಶ್ವತವಾಗಿ ತೆಗೆದು ಹಾಕಿತು. ಆಹಾರ ಧಾನ್ಯಗಳ ಉತ್ಪಾದನೆಯಲ್ಲಾದ ಗಮನಾರ್ಹ ಹೆಚ್ಚಳವೇ 'ಹಸಿರು ಕ್ರಾಂತಿ'ಯಾಗಿದೆ. ಇದು ಕೃಷಿಯಲ್ಲಿ ವಿಶೇಷವಾಗಿ ಭತ್ತ ಮತ್ತು ಗೋಧಿಯ ಉತ್ಪಾದನೆಯಲ್ಲಿ ಅಧಿಕ ಇಳುವರಿ ನೀಡುವ ಬಿತ್ತನೆ ಬೀಜಗಳ (HYV) ಬಳಕೆಯಿಂದ ಸಾಧ್ಯವಾಯಿತು. ಈ ಬಿತ್ತನೆ ಬೀಜಗಳನ್ನು ಬಳಸಲು ಸಮರ್ಪಕ ನೀರಿನ ಪೂರೈಕೆಯ ಜೊತೆಗೆ ರಸಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಸರಿಯಾದ ಪ್ರಮಾಣದಲ್ಲಿ ನಿಯಮಿತವಾಗಿ ಬಳಸಬೇಕಾಗುತ್ತದೆ. ಈ ಆದಾನಗಳನ್ನು ಸರಿಯಾದ ಪರಿಮಾಣದಲ್ಲಿ ಬಳಸುವುದು ಅತೀ ಮುಖ್ಯ. ರೈತರಿಗೆ HYV ಬೀಜಗಳಿಂದ ಲಾಭ ಪಡೆಯಲು ಅಗತ್ಯ ನೀರಾವರಿ ಸೌಲಭ್ಯಗಳು ಹಾಗೆಯೇ ರಸಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಕೊಳ್ಳಲು ಹಣಕಾಸಿನ ಸಂಪನ್ಮೂಲಗಳ ಅಗತ್ಯವಿರುತ್ತದೆ. ಇದರ ಫಲವಾಗಿ ಮೊದಲ ಹಂತದ ಹಸಿರು ಕ್ರಾಂತಿ (1960ರ ದಶಕದ ಮಧ್ಯದಿಂದ 1970ರ ಮಧ್ಯ)ಯಲ್ಲಿ HYV ಬೀಜಗಳ ಬಳಕೆಯು ಸಮೃದ್ಧ ರಾಜ್ಯಗಳಾದ ಪಂಜಾಬ್, ಆಂಧ್ರಪ್ರದೇಶ, ಮತ್ತು ತಮಿಳುನಾಡುಗಳಿಗೆ ಸೀಮಿತವಾಯಿತು. ನಂತರ (HYV) ಅಧಿಕ ಇಳುವರಿ ನೀಡುವ ಬೀಜಗಳ ಬಳಕೆಯ ಪ್ರಯೋಜನವನ್ನು ಕೇವಲ ಗೋಧಿ ಬೆಳೆಯುವ ಪ್ರದೇಶಗಳು ಮಾತ್ರ ಪಡೆದವು. ಎರಡನೇ ಹಂತದ ಹಸಿರು ಕ್ರಾಂತಿ (1970ರ ಮಧ್ಯದಿಂದ 1980ರ ದಶಕದ ಮಧ್ಯ) ಯಲ್ಲಿ (HYV) ತಂತ್ರಜ್ಞಾನದ ಬಳಕೆ ಬಹುತೇಕ ರಾಜ್ಯಗಳಿಗೆ ಹರಡಿ ವಿವಿಧ ಬೆಳೆಗಳನ್ನು ಬೆಳೆಯಲು ಪ್ರಯೋಜನವಾಯಿತು. ಹಸಿರು ಕ್ರಾಂತಿಯ ತಂತ್ರಜ್ಞಾನದ ಬಳಕೆ ವಿಸ್ತಾರಗೊಂಡಂತೆ ಭಾರತ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು. ನಮ್ಮ ದೇಶದ ಆಹಾರದ ಅಗತ್ಯಗಳಿಗಾಗಿ ಮುಂದೆ ಅಮೇರಿಕ ಅಥವಾ ಇತರ ರಾಷ್ಟ್ರಗಳ ಹಂಗಿನಲ್ಲಿ ಇರಬೇಕಾದ ಅಗತ್ಯ ಇರಲಿಲ್ಲ.



ಕೃಷಿ ಉತ್ಪನ್ನದಲ್ಲಿನ ಬೆಳವಣಿಗೆ ಮುಖ್ಯ ಆದರೂ ಕೇವಲ ಅಷ್ಟೇ ಸಾಲದು. ಹೆಚ್ಚಾದ ಕೃಷಿ ಉತ್ಪನ್ನದ ಬಹುಭಾಗವನ್ನು ರೈತರು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರ ಬದಲಿಗೆ ಅವರು ಸ್ವಂತ ಅನುಭೋಗಕ್ಕೆ ಬಳಸಿದರೆ ಅಧಿಕ ಉತ್ಪಾದನೆಯು ಸಮಗ್ರ ಆರ್ಥಿಕತೆಯಲ್ಲಿ ಯಾವುದೇ ವ್ಯತ್ಯಾಸ ಉಂಟುಮಾಡುವುದಿಲ್ಲ. ಇದಕ್ಕೆ ಬದಲಾಗಿ ಗಣನೀಯ ಪ್ರಮಾಣದ ಕೃಷಿ ಉತ್ಪನ್ನಗಳು ರೈತರಿಂದ ಮಾರಾಟವಾದರೆ, ಹೆಚ್ಚಾದ ಉತ್ಪನ್ನವು ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆ ತರುತ್ತದೆ. ರೈತರಿಂದ ಮಾರುಕಟ್ಟೆಯಲ್ಲಿ ಮಾರಾಟ ಮಾಡಲ್ಪಟ್ಟ ಕೃಷಿ ಉತ್ಪನ್ನದ ಭಾಗವನ್ನು ಮಾರಾಟ ಮಾಡಲ್ಪಟ್ಟ ಅಧಿಕ್ಯ (Marketed surplus) ಎನ್ನುವರು. ರೈತರು ಹಸಿರು ಕ್ರಾಂತಿಯ ಸಮಯದಲ್ಲಿ ಉತ್ಪಾದಿಸಿದ ಹೆಚ್ಚಿನ ಪ್ರಮಾಣದ ಭತ್ತ ಮತ್ತು ಗೋಧಿಯನ್ನು (ಮಿಗುತೆಯ ಮಾರಾಟಕ್ಕೆ ಲಭಿಸಿದೆ) ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರು. ಇದರ ಪರಿಣಾಮವಾಗಿ ಅನುಭೋಗದ ಇತರೆ ಸರಕುಗಳಿಗೆ ಹೋಲಿಸಿದಾಗ ಆಹಾರ ಧಾನ್ಯಗಳ ಬೆಲೆ ಸಾಪೇಕ್ಷವಾಗಿ ಕಡಿಮೆಯಾಯಿತು. ಕಡಿಮೆ ಆದಾಯ ವರ್ಗದವರು ತಮ್ಮ ಆದಾಯದ ದೊಡ್ಡ ಪ್ರಮಾಣವನ್ನು ಆಹಾರಕ್ಕಾಗಿ ಖರ್ಚು ಮಾಡುವವರು ಈ ಸಾಪೇಕ್ಷ ಬೆಲೆ ಇಳಿಕೆಯ ಪ್ರಯೋಜನ ಪಡೆದರು. ಹಸಿರು ಕ್ರಾಂತಿಯಿಂದಾಗಿ ಸರ್ಕಾರ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಲು ಶಕ್ತವಾಯಿತು ಮತ್ತು ಇದನ್ನು ಆಹಾರದ ಕೊರತೆ ಇದ್ದ ಸಂದರ್ಭದಲ್ಲಿ ಉಪಯೋಗಿಸಲು ಸಾಧ್ಯವಾಯಿತು.

ಹಸಿರು ಕ್ರಾಂತಿಯಿಂದ ರಾಷ್ಟ್ರ ಅಪಾರ ಪ್ರಮಾಣದ ಪ್ರಯೋಜನ ಪಡೆದಿದ್ದರೂ ಅಳವಡಿಸಿಕೊಂಡಿದ್ದ ತಂತ್ರಜ್ಞಾನವು ಆಪತ್ತುಗಳಿಂದ ಮುಕ್ತವಾಗಿರಲಿಲ್ಲ. ದೊಡ್ಡ ರೈತರು ಮಾತ್ರವೇ ಕೃಷಿ ಆದಾನಗಳನ್ನು ಹೊಂದಿದ್ದರಿಂದ ಅವರು ಹಸಿರು ಕ್ರಾಂತಿಯ ಅತ್ಯಂತ ಹೆಚ್ಚಿನ ಪ್ರಯೋಜನಗಳನ್ನು ಪಡೆಯುತ್ತಿದ್ದರು. ಇದ್ದರಿಂದಾಗಿ ಸಣ್ಣ ಮತ್ತು ದೊಡ್ಡ ರೈತರ ನಡುವಿನ ಅಂತರ ಹೆಚ್ಚಾಗುವ ಸಾಧ್ಯತೆಯಿತ್ತು. ಮಿಗಿಲಾಗಿ ಎಚ್.ವೈ.ವಿ ಬೆಳೆಗಳು ಕ್ರಿಮಿ ಕೀಟಗಳ ದಾಳಿಗೆ ತುತ್ತಾಗುತ್ತಿದ್ದವು ಮತ್ತು ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡ ರೈತರು ಈ ಕೀಟಗಳ ದಾಳಿಯಿಂದ ತಮ್ಮ ಬೆಳೆಯನ್ನು ಸಂಪೂರ್ಣವಾಗಿ ಕಳೆದು ಕೊಳ್ಳುವ ಸಾಧ್ಯತೆಯಿತ್ತು.

ಅದೃಷ್ಟವಶಾತ್ ಸರ್ಕಾರವು ಅಗತ್ಯ ಕ್ರಮಗಳನ್ನು ಕೈಕೊಂಡಿದ್ದರಿಂದ ಈ ಆತಂಕಗಳು ನಿಜವಾಗಲಿಲ್ಲ. ಸರ್ಕಾರ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಮತ್ತು ರಿಯಾಯಿತಿ ದರದಲ್ಲಿ ಗೊಬ್ಬರವನ್ನು ಒದಗಿಸಿದ್ದರಿಂದ ಸಣ್ಣ ರೈತರು ಅಗತ್ಯ ಕೃಷಿ ಆದಾನಗಳನ್ನು ಪಡೆಯುವಂತಾಯಿತು. ಸಣ್ಣ ರೈತರು ಅಗತ್ಯ ಆದಾನಗಳನ್ನು ಪಡೆಯಲು ಸಾಧ್ಯವಾಗಿದ್ದರಿಂದ ಮುಂದಿನ ದಿನಗಳಲ್ಲಿ (ಕ್ರಮೇಣ) ಸಣ್ಣ ರೈತರ ಉತ್ಪಾದನೆಯು ದೊಡ್ಡ ರೈತರ ಉತ್ಪಾದನೆಗೆ ಸಮವಾಯಿತು. ಪರಿಣಾಮವಾಗಿ ಹಸಿರು ಕ್ರಾಂತಿಯು ಸಣ್ಣ ಮತ್ತು ಶ್ರೀಮಂತ ರೈತರಿಬ್ಬರಿಗೂ ಫಲವನ್ನು ನೀಡಿತು. ಸರ್ಕಾರದಿಂದ ಸ್ಥಾಪಿತವಾಗಿರುವ ಸಂಶೋಧನಾ ಸಂಸ್ಥೆಗಳು ನೀಡಿದ ಸೇವೆಗಳಿಂದ, ಸಣ್ಣ ರೈತರು ಎದುರಿಸುತ್ತಿದ್ದ ಸಮಸ್ಯೆಗಳು, ಮುಖ್ಯವಾಗಿ, ಕೀಟಗಳ ದಾಳಿಯಿಂದ ಫಸಲುಗಳು ಹಾಳಾಗುವುದು ಗಣನೀಯವಾಗಿ ಕಡಿಮೆಯಾಯಿತು. ಒಂದು ವೇಳೆ ಸಣ್ಣ ರೈತರು ಹೊಸ ತಂತ್ರಜ್ಞಾನದ ಪ್ರಯೋಜನ ಪಡೆಯುಂತೆ ಮಾಡುವಲ್ಲಿ ಸರ್ಕಾರ ಮಹತ್ವದ ಪಾತ್ರವನ್ನು ವಹಿಸದೇ ಇದ್ದಲ್ಲಿ ಹಸಿರು ಕ್ರಾಂತಿಯಿಂದ ಕೇವಲ ಶ್ರೀಮಂತ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು.

## ಸಹಾಯ ಧನದ ಮೇಲಿನ ಚರ್ಚೆ (THE DEBATE OVER SUBSIDIES)

ಕೃಷಿಗೆ ನೀಡುವ ಸಹಾಯ ಧನಗಳಿಗೆ ಆರ್ಥಿಕ ಸಮರ್ಥನೆ ನೀಡುವುದು ನ್ಯಾಯ ಸಮ್ಮತವೇ ಎಂಬುದು ಪ್ರಸ್ತುತ ಚರ್ಚೆಯಾಗುತ್ತಿರುವ ಪ್ರಶ್ನೆಯಾಗಿದೆ. ಸಾಮಾನ್ಯವಾಗಿ, ರೈತರು ಅದರಲ್ಲೂ ಮುಖ್ಯವಾಗಿ ಸಣ್ಣ ರೈತರಿಗೆ ಹೊಸ HYV ತಂತ್ರಜ್ಞಾನದ ಅಳವಡಿಕೆಯನ್ನು ಉತ್ತೇಜಿಸಲು ಸಹಾಯಧನ ನೀಡುವುದು ಅಗತ್ಯ ಎಂಬುದನ್ನು ಸಾರ್ವತ್ರಿಕವಾಗಿ ಒಪ್ಪಲಾಗಿದೆ. ರೈತರು ಯಾವುದೇ ಹೊಸ ತಂತ್ರಜ್ಞಾನವನ್ನು ಆತಂಕದಿಂದಲೇ ನೋಡುತ್ತಾರೆ. ಆದ್ದರಿಂದ ಕೃಷಿಯಲ್ಲಿ ರೈತರು ಹೊಸ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಉತ್ತೇಜಿಸುವುದಕ್ಕಾಗಿ ಸಹಾಯಧನ ಅಗತ್ಯವಾಗಿದೆ. ಒಮ್ಮೆ ತಂತ್ರಜ್ಞಾನದ ಬಳಕೆ ಲಾಭದಾಯಕವಾಗಿ ಕಂಡುಬಂದರೆ ಆಗ ರೈತರು ಅದನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳುತ್ತಾರೆ. ಅದರ ಉದ್ದೇಶ ಪೂರ್ಣಗೊಂಡ ನಂತರ ಸಹಾಯ ಧನವನ್ನು ನಿಲ್ಲಿಸಬೇಕೆಂದು ಕೆಲವು ಅರ್ಥಶಾಸ್ತ್ರಜ್ಞರ ನಂಬಿಕೆಯಾಗಿದೆ. ಇಂತಹ ಸಹಾಯಧನದಿಂದ ರೈತರಿಗೆ ಲಾಭವಾಗಬೇಕಾಗಿದ್ದರೂ ರಸಗೊಬ್ಬರಕ್ಕೆ ನೀಡುವ ಸಹಾಯಧನದಿಂದ ರಸಗೊಬ್ಬರದ ಕೈಗಾರಿಕೆಗಳು ಗಣನೀಯ ಪ್ರಮಾಣದ ಲಾಭ ಪಡೆಯುತ್ತಿವೆ; ಮತ್ತು ರೈತರುಗಳಲ್ಲಿ, ಹೆಚ್ಚು ಸಮೃದ್ಧವಾದ ಪ್ರದೇಶಗಳಲ್ಲಿನ ರೈತರು ಸಹಾಯಧನದಿಂದ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಆದ್ದರಿಂದ, ಉದ್ದೇಶಿತ ವರ್ಗಕ್ಕೆ ಲಾಭದಾಯಕವಲ್ಲದ,

**ಪೆಟ್ಟಿಗೆ 2.6: ಸಂಕೇತಗಳಾಗಿ ಬೆಲೆಗಳು**

ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆಗಳು ಹೇಗೆ ನಿರ್ಧಾರವಾಗುತ್ತದೆ ಎಂಬುದನ್ನು ನೀವು ಹಿಂದಿನ ತರಗತಿಗಳಲ್ಲಿ ಕಲಿತಿರಬಹುದು. ಬೆಲೆಗಳು ವಸ್ತುಗಳ ಲಭ್ಯತೆಯ ಸಂಕೇತಗಳಾಗಿವೆ ಎಂಬುದನ್ನು ತಿಳಿಯುವುದು ಮುಖ್ಯ. ವಸ್ತುವು ಕೊರತೆಯಲ್ಲಿ ಇದ್ದಾಗ ಅದರ ಬೆಲೆ ಹೆಚ್ಚಾಗುತ್ತದೆ ಮತ್ತು ಯಾರು ಈ ಸರಕುಗಳನ್ನು ಬಳಸುವರೋ ಅವರಿಗೆ ಅದರ ಬೆಲೆಯ ಆಧಾರದ ಮೇಲೆ ಅದರ ಉಪಯೋಗದ ಬಗ್ಗೆ ದಕ್ಷ ನಿರ್ಧಾರಗಳನ್ನು ಮಾಡಲು ಉತ್ತೇಜಿಸುತ್ತದೆ. ಅಂದರೆ ಕಡಿಮೆ ಪೂರೈಕೆಯಿಂದಾಗಿ ನೀರಿನ ಬೆಲೆ ಹೆಚ್ಚಾದರೆ, ಜನರು ನೀರನ್ನು ಬಹಳ ಎಚ್ಚರಿಕೆಯಿಂದ ಬಳಸಲು ಪ್ರೇರಣೆ ಪಡೆಯುತ್ತಾರೆ ಉದಾ: ನೀರನ್ನು ಉಳಿಸಲು ಕೈತೋಟಕ್ಕೆ ನೀರು ಹಾಯಿಸುವುದನ್ನು ನಿಲ್ಲಿಸಬಹುದು. ನಾವು ಪೆಟ್ರೋಲ್‌ನ ಬೆಲೆ ಹೆಚ್ಚಾದಾಗಲೆಲ್ಲಾ ಧೂಷಣೆ ಮಾಡುತ್ತೇವೆ. ಇದಕ್ಕಾಗಿ ಸರ್ಕಾರವನ್ನು ಬೈಯುತ್ತೇವೆ. ಆದರೆ ಪೆಟ್ರೋಲ್ ಬೆಲೆಯಲ್ಲಿನ ಹೆಚ್ಚಳವು ಅದರ ಕೊರತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಬೆಲೆ ಏರಿಕೆಯು ಅದರ ಲಭ್ಯತೆ ಕಡಿಮೆಯಾಗಿರುವುದನ್ನು ಸೂಚಿಸುತ್ತದೆ. ಇದು ಪೆಟ್ರೋಲ್‌ನ ಬಳಕೆಯನ್ನು ಮಿತಗೊಳಿಸಲು ಅಥವಾ ಪರ್ಯಾಯ ಇಂಧನವನ್ನು ಹುಡುಕುವಂತೆ ಪ್ರೇರೇಪಿಸುತ್ತದೆ.

ಬೆಲೆಯು ಒಂದು ವಸ್ತುವಿನ ಪೂರೈಕೆಯನ್ನು ವ್ಯಕ್ತಪಡಿಸಲು ಸಹಾಯ ಧನಗಳು ಬಿಡುವುದಿಲ್ಲವೆಂಬುದನ್ನು ಕೆಲವು ಅರ್ಥ ಶಾಸ್ತ್ರಜ್ಞರು ಗುರುತಿಸಿದ್ದಾರೆ. ಕೊರತೆಯನ್ನೂ ಪರಿಗಣಿಸದೇ ಜನರು ರಿಯಾಯಿತಿ ದರದಲ್ಲಿ ಅಥವಾ ಉಚಿತವಾಗಿ ನೀಡುವ ವಿದ್ಯುಚ್ಛಕ್ತಿ ಮತ್ತು ನೀರನ್ನು ಅಪವ್ಯಯ ಮಾಡುತ್ತಾರೆ. ನೀರನ್ನು ಉಚಿತವಾಗಿ ಪೂರೈಸಿದರೆ ರೈತರು, ಆ ಪ್ರದೇಶಲ್ಲಿ ನೀರಿನ ಕೊರತೆ ಇದ್ದಾಗ್ಯೂ, ಜಲಸಾಂದ್ರ ಬೆಳೆಗಳನ್ನೇ ಬೆಳೆಯುತ್ತಾರೆ ಮತ್ತು ಇಂತಹ ಬೆಳೆಗಳು ಈಗಾಗಲೇ ಕೊರತೆಯಲ್ಲಿರುವ ಸಂಪನ್ಮೂಲವನ್ನು ಮತ್ತಷ್ಟು ನಾಶ ಮಾಡುತ್ತವೆ. ಒಂದು ವೇಳೆ ನೀರಿನ ಕೊರತೆಯನ್ನು ಬಿಂಬಿಸುವಂತೆ ಅದಕ್ಕೆ ಬೆಲೆಯನ್ನು ನಿಗದಿಪಡಿಸಿದರೆ, ರೈತರು ಆ ಪ್ರದೇಶಕ್ಕೆ ಸೂಕ್ತವಾಗುವ ಬೆಳೆಗಳನ್ನು ಬೆಳೆಯುತ್ತಾರೆ. ರೈತರು ಆ ಪ್ರದೇಶಕ್ಕೆ ಹೊಂದುವಂತಹ ಬೆಳೆ ಬೆಳೆದರೆ ಮಾತ್ರ ನೀರಿನ ಬೆಲೆಯು ಕೊರತೆಯನ್ನು ಪ್ರತಿಬಿಂಬಿಸುತ್ತದೆ. ರಸಗೊಬ್ಬರ ಮತ್ತು ಕ್ರಿಮಿನಾಶಕಗಳಿಗೆ ನೀಡುವ ಸಹಾಯಧನವು ಸಂಪನ್ಮೂಲದ (ಭೂಮಿಯ) ಅತಿಯಾದ ಬಳಕೆಗೆ ಕಾರಣವಾಗುತ್ತದೆ. ಇದು ಪರಿಸರಕ್ಕೆ ಅಪಾಯಕಾರಿಯಾಗಬಹುದು. ಸಹಾಯಧನವು ಸಂಪನ್ಮೂಲಗಳ ದುರುಪಯೋಗಕ್ಕೆ ಪ್ರೇರಣೆ ನೀಡಿದಂತಾಗುತ್ತಿದೆ. ಸಹಾಯಧನಗಳನ್ನು ಉತ್ತೇಜಕಗಳಾಗಿ ಯೋಚಿಸಿ ಮತ್ತು ರೈತರಿಗೆ ಉಚಿತ ವಿದ್ಯುತ್ತನ್ನು ಸರಬರಾಜು ಮಾಡುವುದು ಆರ್ಥಿಕ ದೃಷ್ಟಿಕೋನದಿಂದ ಸರಿಯಾದುದೇ ಯೋಚಿಸಿ.

ಸರ್ಕಾರದ ಹಣಕಾಸಿನ ಹೊರೆಯನ್ನು ಹೆಚ್ಚಿಸುವಂತಹ ರಸಗೊಬ್ಬರದ ಮೇಲಿನ ಸಹಾಯಧನ ಮುಂದುವರೆಸಬೇಕು ಎಂಬುದಕ್ಕೆ ಯಾವುದೇ ನಿದರ್ಶನಗಳಿಲ್ಲ ಎಂದೂ ವಾದಿಸಲಾಗಿದೆ. (ಪೆಟ್ಟಿಗೆ 2.6 ನೋಡಿ)

ಇನ್ನೂ ಕೆಲವರು, ಸರ್ಕಾರವು ಕೃಷಿಗೆ ನೀಡುವ ಸಹಾಯಧನವನ್ನು ಮುಂದುವರೆಸಬೇಕೆಂದು ನಂಬಿದ್ದಾರೆ, ಏಕೆಂದರೆ ಭಾರತದಲ್ಲಿ ಕೃಷಿಯು ಹಲವಾರು ಗಂಡಾಂತರಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಬಹಳಷ್ಟು ರೈತರು ಕಡುಬಡವರಾಗಿದ್ದು ಕೃಷಿಗೆ ಬೇಕಾದ ಅಗತ್ಯ ಪರಿಕರಗಳನ್ನು ಸಹಾಯಧನವಿಲ್ಲದೆ ಕೊಳ್ಳುವಷ್ಟು ಸಮರ್ಥರಾಗಿಲ್ಲ. ಸಹಾಯಧನ ತೆಗೆದುಹಾಕುವುದರಿಂದ ಶ್ರೀಮಂತ ಹಾಗೂ ಬಡ ರೈತರ ನಡುವಿನ ಅಸಮಾನತೆ ಹೆಚ್ಚಾಗಿ 'ಸಮಾನತೆ' ಎಂಬ ಗುರಿಯ ಉಲ್ಲಂಘನೆಯಾಗುತ್ತದೆ. ತಜ್ಞರ ವಾದವೇನೆಂದರೆ ಸಹಾಯಧನಗಳಿಂದ ದೊಡ್ಡ ರೈತರಿಗೆ ಹಾಗೂ ರಸಗೊಬ್ಬರ ಕೈಗಾರಿಕೆಗೆ ಹೆಚ್ಚು ಲಾಭವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕೈಗೊಳ್ಳಬಹುದಾದ ಸರಿಯಾದ ನೀತಿಯೆಂದರೆ ಬಡ ರೈತರಿಗೆ ಇದರ ಲಾಭ ದೊರೆಯುವಂತೆ ಖಚಿತಪಡಿಸಿಕೊಳ್ಳುವ ಕ್ರಮ ಕೈಗೊಳ್ಳಬೇಕೇ ಹೊರತು ಸಹಾಯಧನವನ್ನು ನಿಲ್ಲಿಸುವುದಲ್ಲ.

ಹೀಗೆ 1960ರ ಸುಮಾರಿಗೆ ಭಾರತದ ಕೃಷಿ ಉತ್ಪಾದಕತೆ ಸಾಕಷ್ಟು ಹೆಚ್ಚಾಗಿದ್ದರಿಂದ ದೇಶ ಆಹಾರ ದಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ಸಾದ್ಯವಾಯಿತು ಇದು ಹೆಮ್ಮೆ ಪಡುವಂತಹ ಸಾಧನೆಯಾಗಿದೆ. ನಕಾರಾತ್ಮಕ ಅಂಶವೆಂದರೆ 1990ರಲ್ಲಿಯೂ ದೇಶದ ಸುಮಾರು ಶೇ.65ರಷ್ಟು ಜನರು ಜೀವನೋಪಾಯಾಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಅರ್ಥಶಾಸ್ತ್ರಜ್ಞರು ಕಂಡುಕೊಂಡಿರುವಂತೆ ಒಂದು ರಾಷ್ಟ್ರ ಹೆಚ್ಚು ಸಮೃದ್ದಗೊಂಡಂತೆ ಜಿ.ಡಿ.ಪಿಗೆ ಕೃಷಿ ವಲಯದ ಕೊಡುಗೆ ಮತ್ತು ಅದನ್ನು ಅವಲಂಬಿಸಿರುವವರ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತದೆ. ಭಾರತದಲ್ಲಿ 1950 ಮತ್ತು 1990ರ ಮದ್ಯದಲ್ಲಿ ಜಿ.ಡಿ.ಪಿಗೆ ಕೃಷಿಕ್ಷೇತ್ರದ ಕೊಡುಗೆ ಗಮನಾರ್ಹವಾಗಿ ಕಡಿಮೆಯಾಗಿದೆ. ಆದರೆ ಕೃಷಿ ಅವಲಂಬಿತರ ಪ್ರಮಾಣದಲ್ಲಿ ಕಡಿಮೆ ಆಗಲಿಲ್ಲ (1950

ರಲ್ಲಿ ಶೇ.67.5 ರಿಂದ 1990 ರಲ್ಲಿ ಶೇ.64.9 ಆಗಿದೆ). ಹಾಗೆಯೇ ಕೃಷಿ ಕ್ಷೇತ್ರದಲ್ಲಿ ಬಹಳ ಕಡಿಮೆ ಪ್ರಮಾಣದ ಜನರು ತೊಡಗಿಕೊಂಡು ಕೃಷಿ ಉತ್ಪಾದನೆ ಹೆಚ್ಚಿಸಲು ಸಾಧ್ಯವಿದ್ದರೂ ಕೃಷಿಯಲ್ಲಿ ಏಕೆ ಇನ್ನೂ ಇಷ್ಟು ದೊಡ್ಡ ಪ್ರಮಾಣದ ಜನ ಅವಲಂಬಿಸಿದ್ದಾರೆ? ಕೈಗಾರಿಕ ವಲಯ ಮತ್ತು ಸೇವಾ ವಲಯ ಕೃಷಿ ವಲಯದಲ್ಲಿ ಕೆಲಸ ಮಾಡುವ ಜನರಿಗೆ ಉದ್ಯೋಗ ನೀಡಲಿಲ್ಲ ಎಂಬುದೇ ಇದಕ್ಕೆ ಇರುವ ಉತ್ತರವಾಗಿದೆ. ಕೆಲವು ಅರ್ಥಶಾಸ್ತ್ರಜ್ಞರು ಇದನ್ನು 1950–1990ರ ಅವಧಿಯಲ್ಲಿ ನಾವು ಅನುಸರಿಸಿದ ನೀತಿಗಳಲ್ಲಿನ ಪ್ರಮುಖ ವಿಫಲತೆ ಎಂದೂ ಹೇಳಿದ್ದಾರೆ.

## 2.4 ಕೈಗಾರಿಕೆ ಮತ್ತು ವ್ಯಾಪಾರ (INDUSTRY AND TRADE)

ಬಡ ರಾಷ್ಟ್ರಗಳು ಉತ್ತಮ ಕೈಗಾರಿಕಾ ವಲಯವನ್ನು ಹೊಂದುವುದರಿಂದ ಮಾತ್ರ ಪ್ರಗತಿಯನ್ನು ಸಾಧಿಸಬಹುದು ಎಂಬ ಅಂಶವನ್ನು ಅರ್ಥಶಾಸ್ತ್ರಜ್ಞರು ಮನಗೊಂಡಿದ್ದಾರೆ.



### ನೀವೇ ಮಾಡಿರಿ (Work These Out)

- ವಿದ್ಯಾರ್ಥಿಗಳ ಒಂದು ಗುಂಪು ಕೃಷಿಯಲ್ಲಿ ಬಳಕೆ ಮಾಡಿರುವ ವಿಧಾನದ ಬಗ್ಗೆ ವರದಿಯೊಂದನ್ನು ಸಿದ್ಧಪಡಿಸಲು ಕೃಷಿ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿ ಬಳಸುತ್ತಿರುವ ಬಿತ್ತನೆ ಬೀಜಗಳ ವಿಧಗಳು, ರಸಗೊಬ್ಬರಗಳು, ಯಂತ್ರಗಳು, ನೀರಾವರಿ ಮೂಲಗಳು, ಒಟ್ಟು ವೆಚ್ಚ, ಮಾರಾಟ ಮಾಡಲ್ಪಟ್ಟ ಅಧಿಕ್ಯ ಮತ್ತು ಆದಾಯಗಳನ್ನು ಕುರಿತು ಮಾಹಿತಿ ಸಂಗ್ರಹಿಸಲಿ. ಉಳುಮೆ ವಿಧಾನಗಳಲ್ಲಿ ಬದಲಾವಣೆ ಮಾಡುವುದರಿಂದ ಲಾಭವಾಗಿದೆಯೇ ಎಂಬ ಮಾಹಿತಿಯನ್ನು ಕೃಷಿ ಕುಟುಂಬದ ಒಬ್ಬ ಹಿರಿಯ ಸದಸ್ಯನಿಂದ ಸಂಗ್ರಹಿಸಬಹುದು;
  - (ಎ) ನೀವು ಸಂಗ್ರಹಿದ ಮಾಹಿತಿಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿ.
  - (ಬಿ) ನಂತರ ಬೇರೆ ಬೇರೆ ಗುಂಪುಗಳು ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿ ಆದರಲ್ಲಿ ಉತ್ಪಾದನಾ ವೆಚ್ಚ, ಉತ್ಪಾದನಾ ಪ್ರಮಾಣ, ಬಳಸಿದ ಬಿತ್ತನೆ ಬೀಜಗಳು, ರಸಗೊಬ್ಬರಗಳು, ನೀರಾವರಿ ಮೂಲಗಳು, ತೆಗೆದುಕೊಂಡ ಸಮಯ, ಮಾರಾಟ ಮಾಡಲ್ಪಟ್ಟ ಅಧಿಕ್ಯ ಮತ್ತು ಕುಟುಂಬದ ಆದಾಯ ಮುಂತಾದವುಗಳಲ್ಲಿನ ಬದಲಾವಣೆಗಳನ್ನು ವಿವರಿಸಲಿ.
- ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ನಿಧಿ (IMF) ವಿಶ್ವಾ ವ್ಯಾಪಾರ ಸಂಘಟನೆ (WTO)ಗಳಿಗೆ ಸಂಬಂಧಿಸಿದಂತೆ ದಿನ ಪತ್ರಿಕೆಗಳ ತುಣುಕುಗಳನ್ನು (ಹಾಗೇಯೇ G7, G8, G10 ದೇಶಗಳ ಸಮ್ಮೇಳನಗಳ ಬಗ್ಗೆ) ಸಂಗ್ರಹಿಸಿ ಕೃಷಿ ಸಹಾಯಧನದ ಬಗ್ಗೆ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ದೃಷ್ಟಿಕೋನಗಳ ಬಗ್ಗೆ ಚರ್ಚಿಸಿ.
- ಈ ಕೆಳಗಿನ ಪಟ್ಟಿಯಲ್ಲಿರುವ ದತ್ತಾಂಶಗಳಿಂದ ಭಾರತದ ಆರ್ಥಿಕತೆಯಲ್ಲಿನ ಉದ್ಯೋಗ ರಚನೆಯ ಬಗ್ಗೆ ಪೈ ನಕ್ಷೆ ರಚಿಸಿ.

| ವಲಯ | 1950–51 | 1990–91 | 2011–12 |
|---|---|---|---|
| ಕೃಷಿ | 72.1 | 66.8 | 48.9 |
| ಕೈಗಾರಿಕೆ | 10.7 | 12.7 | 24.3 |
| ಸೇವಾವಲಯ | 17.2 | 20.5 | 26.8 |

- ಕೃಷಿಗೆ ನೀಡುವ ಸಹಾಯಧನಗಳ ಪರ ವಿರೋಧ ವಾದಗಳನ್ನು ಅಧ್ಯಯನ ಮಾಡಿ ಈ ವಿಷಯದ ಬಗ್ಗೆ ನಿಮ್ಮ ದೃಷ್ಟಿಕೋನ ಏನು?
- ಇತರೆ ರಾಷ್ಟ್ರಗಳಲ್ಲಿನ ರೈತರು ಮುಖ್ಯವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ರೈತರು ಸಹಾಯಧನವನ್ನು ಅಧಿಕ ಮೊತ್ತದಲ್ಲಿ ಪಡೆಯುತ್ತಿದ್ದಾರೆ, ಮತ್ತು ಅವರ ಉತ್ಪನ್ನಗಳನ್ನು ಇತರೆ ರಾಷ್ಟ್ರಗಳಿಗೆ ರಫ್ತು ಮಾಡಲು ಪ್ರೋತ್ಸಾಹಿಸಲಾಗುತ್ತಿದೆ ಎಂದು ಕೆಲವು ಅರ್ಥಶಾಸ್ತ್ರಜ್ಞರು ವಾದಿಸಿದ್ದಾರೆ. ನಮ್ಮ ರೈತರು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ರೈತರೊಂದಿಗೆ ಸ್ಪರ್ಧಿಸಲು ಸಮರ್ಥರಾಗಿದ್ದಾರೆಂದು ನೀವು ಭಾವಿಸುತ್ತೀರಾ? ಚರ್ಚಿಸಿ.

ಕೈಗಾರಿಕಾವಲಯವು ಕೃಷಿವಲಯಕ್ಕಿಂತ ಹೆಚ್ಚು ಸ್ಥಿರವಾದ ಉದ್ಯೋಗಾವಕಾಶವನ್ನು ಒದಗಿಸುತ್ತದೆ. ಇದು ಆಧುನೀಕರಣ ಹಾಗೂ ಒಟ್ಟಾರೆ ಆರ್ಥಿಕ ಸಮೃದ್ಧಿಯನ್ನು ಹೆಚ್ಚಿಸುತ್ತದೆ. ಈ ಕಾರಣಗಳಿಂದಾಗಿಯೇ ಪಂಚವಾರ್ಷಿಕ ಯೋಜನೆಗಳು ಕೈಗಾರಿಕಾಭಿವೃದ್ಧಿಗೆ ಹೆಚ್ಚು ಒತ್ತು ನೀಡಿದವು. ಭಾರತ ಸ್ವಾತಂತ್ರ್ಯ ಪಡೆದ ಕಾಲದಲ್ಲಿ ಕೈಗಾರಿಕಾ ವೈವಿದ್ಯತೆ ತೀರಾ ಸಂಕುಚಿತವಾಗಿದ್ದು, ಅದು ಕೇವಲ ಹತ್ತಿಬಟ್ಟೆ ಮತ್ತು ಸೆಣಬಿನ ಕೈಗಾರಿಕೆಗಳಿಗೆ ಸೀಮಿತವಾಗಿತ್ತು, ಅದಲ್ಲದೆ ಉತ್ತಮವಾಗಿ ನಿರ್ವವಹಿಸಲ್ಪಟ್ಟ ಎರಡು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು– ಒಂದು ಕಲ್ಕತ್ತದಲ್ಲಿ ಇನ್ನೊಂದು ಜಮ್ಷೆಡ್‌ಪುರದಲ್ಲಿ ಅಸ್ಥಿತ್ವದ್ದಲ್ಲಿದ್ದವು ಎಂಬುವುದನ್ನು ನೀವು ಹಿಂದಿನ ಅಧ್ಯಾಯದಲ್ಲಿ ಕಲಿತಿರುವಿರಿ. ಆದರೆ ಸ್ಪಷ್ಟವಾಗಿ ಹೇಳಬೇಕೆಂದರೆ ಆರ್ಥಿಕತೆಯ ಬೆಳವಣಿಗೆ ದೃಷ್ಟಿಯಿಂದ ವೈವಿಧ್ಯಮಯ ಕೈಗಾರಿಕಾ ನೆಲೆಯ ವಿಸ್ತರಣೆ ನಮಗೆ ಅಗತ್ಯವಾಗಿತ್ತು.

## ಭಾರತದ ಕೈಗಾರಿಕಾಭಿವೃದ್ಧಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯ (PUBLIC AND PRIVATE SECTORS IN INDIAN INDUSTRIAL DEVELOPMENT)

ಕೈಗಾರಿಕಾಭಿವೃದ್ಧಿಯಲ್ಲಿ ಸರ್ಕಾರ ಮತ್ತು ಖಾಸಗಿ ವಲಯದ ಪಾತ್ರ ಏನು ಎಂಬುದು ನೀತಿ ನಿರೂಪಣಾಕಾರರ ಮುಂದಿದ್ದ ಸವಾಲಾಗಿತ್ತು. ಸ್ವಾತಂತ್ರ್ಯ ಬಂದ ಸಮಯದಲ್ಲಿ ನಮ್ಮ ಆರ್ಥಿಕತೆಯ ಅಭಿವೃದ್ಧಿಗೆ ಬೇಕಾಗುವಷ್ಟು ಬಂಡವಾಳವನ್ನು ಭಾರತೀಯ ಕೈಗಾರಿಕೋದ್ಯಮಿಗಳು ಹೊಂದಿರಲಿಲ್ಲ. ಒಂದು ಪಕ್ಷ ಬಂಡವಾಳ ಇದ್ದಾಗ್ಯೂ ಕೂಡ ಬೃಹತ್ ಯೋಜನೆಗಳನ್ನು ಕೈಗೊಳ್ಳಲು ಕೈಗಾರಿಕೊದ್ಯಮಿಗಳಿಗೆ ಪ್ರೋತ್ಸಾಹ ನೀಡುವಷ್ಟು ವಿಸ್ತೃತ ಮಾರುಕಟ್ಟೆಗಳಿರಲಿಲ್ಲ. ಈ ತಾತ್ವಿಕ ಕಾರಣಗಳಿಂದಾಗಿ ಸರ್ಕಾರವು ಕೈಗಾರಿಕಾ ವಲಯವನ್ನು ಪ್ರೋತ್ಸಾಹಿಸಲು ಮಹತ್ವದ ಪಾತ್ರವನ್ನು ವಹಿಸಬೇಕಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಸ್ತಾಪಿಸುವಂತೆ ಭಾರತದ ಆರ್ಥಿಕತೆಯನ್ನು ಸಮಾಜವಾದಿ ಪಥದಲ್ಲಿ ಮುನ್ನಡೆಸಲು ಆರ್ಥಿಕತೆಯಲ್ಲಿರುವ ಕೈಗಾರಿಕೆಗಳ ಮೇಲೆ ಸರ್ಕಾರವು ನಿಯಂತ್ರಣ ಸಾಧಿಸುವುದು ಅವಶ್ಯಕವಾಗಿತ್ತು. ಆರ್ಥಿಕತೆಗೆ ಮಹತ್ವವೆನಿಸುವಂತಹ ಕೈಗಾರಿಕೆಗಳ ಮೇಲೆ ಸರ್ಕಾರ ಸಂಪೂರ್ಣ ನಿಯಂತ್ರಣ ಹೊಂದಬೇಕೆನ್ನುವುದು ಇದರ ಅರ್ಥವಾಗಿತ್ತು. ಸಾರ್ವಜನಿಕ ವಲಯ ಮುಂಚೂಣಿಯಲ್ಲಿದ್ದು, ಖಾಸಗಿ ವಲಯದ ನೀತಿಗಳು ಸಾರ್ವಜನಿಕ ವಲಯಕ್ಕೆ ಪೂರಕವಾಗಿರಬೇಕು ಎನ್ನುವುದು ಈ ಕ್ರಮದ ಹಿಂದಿನ ಆಶಯವಾಗಿತ್ತು.

## 1956 ರ ಕೈಗಾರಿಕಾ ನೀತಿ ಗೊತ್ತುವಳಿಗಳು (ನಿರ್ಣಯಗಳು) (INDUSTRIAL POLICY RESOLUTION 1956)

ಆರ್ಥಿಕತೆಯ ಶಕ್ತಿ ಕೇಂದ್ರಗಳ ಮೇಲಿನ ಸರ್ಕಾರಿ ನಿಯಂತ್ರಣ ಮತ್ತು ಆಧಿಪತ್ಯದ ಗುರಿಗೆ ಅನುಗುಣವಾಗಿ 1956ರ ಕೈಗಾರಿಕಾನೀತಿ ಗೊತ್ತುವಳಿಯನ್ನು ಅಳವಡಿಸಿಕೊಳ್ಳಲಾಯಿತು. ಸಮಾಜವಾದಿ ಮಾದರಿ ಸಮಾಜದ ತಳಹದಿಯನ್ನು ನಿರ್ಮಿಸಲು ಪ್ರಯತ್ನಿಸಿದ ಎರಡನೇ ಪಂಚ ವಾರ್ಷಿಕ ಯೋಜನೆಗೆ ಈ ಗೊತ್ತುವಳಿಗಳು ಆಧಾರವಾಯಿತು. ಈ ನಿರ್ಣಯವು ಕೈಗಾರಿಕೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿತು. ಮೊದಲನೇ ವರ್ಗದಲ್ಲಿ ಸಂಪೂರ್ಣ ಸರ್ಕಾರಿ ಒಡೆತನದ ಉದ್ಯಮಗಳು ಒಳಗೊಂಡಿದೆ. ಎರಡನೇ ವರ್ಗವು ಖಾಸಗಿ ವಲಯ ಮತ್ತು ಸಾರ್ವಜನಿಕ ವಲಯಕ್ಕೆ ಪೂರಕವಾಗಿರುವ ಖಾಸಗಿ ಕೈಗಾರಿಕೆಗಳನ್ನು ಒಳಗೊಂಡಿದ್ದು ಇವುಗಳ ಹೊಸ ಘಟಕಗಳನ್ನು ಸ್ಥಾಪಿಸುವ ಏಕೈಕ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಮೂರನೇ ವರ್ಗದಲ್ಲಿ ಉಳಿದ ಎಲ್ಲಾ ಕೈಗಾರಿಕೆಗಳು ಸೇರಿದ್ದು, ಅವು ಖಾಸಗಿ ವಲಯದಲ್ಲಿವೆ.

ಖಾಸಗಿ ವಲಯಕ್ಕೆ ಮೀಸಲಾದ ಒಂದು ವರ್ಗದ ಕೈಗಾರಿಕೆಗಳು ಇದ್ದಾಗ್ಯೂ ಆ ವಲಯವು ಪರವಾನಿಗೆ ಪದ್ಧತಿಯ ಮೂಲಕ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿದ್ದವು, ಸರ್ಕಾರದಿಂದ ಪರವಾನಿಗೆ ಪಡೆಯದೆ ಯಾವುದೇ ಹೊಸ ಉದ್ಯಮವನ್ನು ಸ್ಥಾಪಿಸಲು ಅವಕಾಶವಿರಲಿಲ್ಲ. ಈ ನೀತಿಯನ್ನು ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಉತ್ತೇಜಿಸಲು ಬಳಸಲಾಗಿತ್ತು. ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಪರವಾನಿಗೆ ಪಡೆಯುವುದು ಸುಲಭವಾಗಿತ್ತು ಜೊತೆಗೆ ಅಂತಹ ಉದ್ಯಮಗಳಿಗೆ ಕೆಲವೊಂದು ರಿಯಾಯಿತಿಗಳನ್ನು ನೀಡಲಾಗುತ್ತಿತ್ತು. ಅವುಗಳೆಂದರೆ ತೆರಿಗೆ ವಿನಾಯಿತಿ, ಕಡಿಮೆ ದರದಲ್ಲಿ ವಿದ್ಯುತ್ ಪೂರೈಕೆ ಇತ್ಯಾದಿ. **"ಪ್ರಾದೇಶಿಕ ಸಮತೋಲನ"** ಸಾಧಿಸುವುದು ಈ ನೀತಿಯ ಉದ್ದೇಶ ಆಗಿತ್ತು.

ಈ ರೀತಿಯ ಅನ್ವಯ ಈಗಾಗಲೇ ಅಸ್ತಿತ್ವದಲ್ಲಿದ್ದ ಕೈಗಾರಿಕೆಗಳು ಉತ್ಪಾದನೆ ವಿಸ್ತರಿಸಲು ಅಥವಾ ವೈವಿಧ್ಯತೆ ತರಲು (ವಿವಿಧ ಹೊಸ ವಸ್ತುಗಳನ್ನು ಉತ್ಪಾದಿಸಲು) ಪರವಾನಿಗೆ ಪಡೆಯಬೇಕಾಗಿತ್ತು. ಇದರ ಅರ್ಥ ಆರ್ಥಿಕತೆಯಲ್ಲಿ ಉತ್ಪಾದಿಸುವ ಉತ್ಪನ್ನದ ಪ್ರಮಾಣ ಆರ್ಥಿಕತೆಯ ಅಗತ್ಯಕ್ಕಿಂತಲೂ ಹೆಚ್ಚಾಗಬಾರದು ಎಂಬುದಾಗಿತ್ತು. ಆರ್ಥಿಕತೆಗೆ ಇನ್ನೂ ಹೆಚ್ಚಿನ ಉತ್ಪನ್ನ ಬೇಕಾಗಿದೆಯೆಂದು ಸರ್ಕಾರಕ್ಕೆ ಮನದಟ್ಟಾದಾಗ ಮಾತ್ರ ಉತ್ಪಾದನೆ ವಿಸ್ತರಿಸಲು ಪರವಾನಿಗೆ ನೀಡಲಾಗುತ್ತಿತ್ತು.

### ಸಣ್ಣ ಪ್ರಮಾಣದ ಕೈಗಾರಿಕೆ (SMALL-SCALE INDUSTRY)

1955ರಲ್ಲಿ ಗ್ರಾಮೀಣ ಮತ್ತು ಸಣ್ಣ ಕೈಗಾರಿಕಾ ಸಮಿತಿ ಅಥವಾ ಕರ್ವೇ ಸಮಿತಿಯು ಗ್ರಾಮೀಣಾಭಿವೃದ್ಧಿಯನ್ನು ಪ್ರೋತ್ಸಾಹಿಸಲು ಸಣ್ಣ ಕೈಗಾರಿಕೆಗಳ ಬಳಕೆಯ ಸಾಧ್ಯತೆಯನ್ನು ಮನಗೊಂಡಿತು. ಒಂದು ಕೈಗಾರಿಕಾ ಘಟಕದ ಒಟ್ಟು ಆಸ್ತಿಯ ಮೇಲಿನ ಗರಿಷ್ಠ ಹೂಡಿಕೆಯ ಆಧಾರದ ಮೇಲೆ ಒಂದು ಸಣ್ಣ ಪ್ರಮಾಣದ ಕೈಗಾರಿಕೆಯನ್ನು ವ್ಯಾಖ್ಯಾನಿಸಲಾಯಿತು. ಈ ಮಿತಿಯಲ್ಲಿ ಕ್ರಮೇಣ ಬದಲಾವಣೆಯಾಗಿದೆ. 1950 ರಲ್ಲಿ ಸಣ್ಣ ಕೈಗಾರಿಕಾ ಘಟಕದ ಗರಿಷ್ಠ ಹೂಡಿಕೆ 5 ಲಕ್ಷ ರೂಪಾಯಿಗಳಾಗಿತ್ತು. ಪ್ರಸ್ತುತ ಈ ಗರಿಷ್ಠ ಹೂಡಿಕೆಯನ್ನು 1 ಕೋಟಿಗೆ ಹೆಚ್ಚಿಸಲಾಗಿದೆ.

ಸಣ್ಣ ಕೈಗಾರಿಕೆಗಳು ಸಮಾನ್ಯವಾಗಿ ಶ್ರಮ ಸಾಂದ್ರವಾಗಿದ್ದು, ಅವು ಬೃಹತ್ ಕೈಗಾರಿಕೆಗಳಿಗಿಂತ ಹೆಚ್ಚು ಶ್ರಮವನ್ನು ಬಳಸುತ್ತವೆ. ಆದ್ದರಿಂದ ಅವುಗಳು ಹೆಚ್ಚು ಉದ್ಯೋಗವನ್ನು ಸೃಷ್ಟಿಸುತ್ತವೆ. ಆದರೆ ಇವುಗಳು ಬೃಹತ್ ಕೈಗಾರಿಕಾ ಘಟಕಗಳೊಂದಿಗೆ ಸ್ಪರ್ಧಿಸಲು ಶಕ್ತವಾಗಿಲ್ಲ. ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಬೇಕಾದರೆ ಅವುಗಳನ್ನು ದೊಡ್ಡ ಕೈಗಾರಿಕೆಗಳಿಂದ ರಕ್ಷಿಸುವ ಅಗತ್ಯವಿದೆ ಎಂಬುದು ಸ್ಪಷ್ಟವಾಗಿದೆ. ಈ ಉದ್ದೇಶಕ್ಕಾಗಿ ಕೆಲ ಸಂಖ್ಯೆಯ ಉತ್ಪನ್ನಗಳ ಉತ್ಪಾದನೆಯನ್ನು ಸಣ್ಣ ಕೈಗಾರಿಕೆಗಳಿಗೆ ಮೀಸಲಿಡಲಾಗಿತ್ತು. ಈ ಘಟಕಗಳ ಸರಕುಗಳನ್ನು ತಯಾರಿಸುವ ಸಾಮಾರ್ಥ್ಯವೇ ಮೀಸಲಾತಿಯ ಮಾನದಂಡವಾಗಿತ್ತು. ಈ ಕೈಗಾರಿಕೆಳಿಗೆ ಕೆಲವು ರಿಯಾಯಿತಿಗಳನ್ನು ನೀಡಲಾಯಿತು ಅವುಗಳೆಂದರೆ ಕಡಿಮೆ ಅಬಕಾರಿ ಸುಂಕ ಮತ್ತು ಕಡಿಮೆ ಬಡ್ಡಿದರದ ಬ್ಯಾಂಕ್ ಸಾಲ ಇತ್ಯಾದಿ.

## 2.5 ವ್ಯಾಪಾರ ನೀತಿ – ಆಮದು ಬದಲೀಕರಣ (TRADE POLICY: IMPORT SUBSTITUTION)

ನಾವು ಅಳವಡಿಸಿಕೊಂಡಿರುವ ಕೈಗಾರಿಕಾ ನೀತಿಯು ವ್ಯಾಪಾರ ನೀತಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಮೊದಲ ಏಳು ಪಂಚವಾರ್ಷಿಕ ಯೋಜನೆಗಳಲ್ಲಿ ಸಾಮಾನ್ಯವಾಗಿ ಕರೆಯಲ್ಪಡುವ ಒಳಮುಖಿ ವ್ಯಾಪಾರ ತಂತ್ರವೇ ವ್ಯಾಪಾರದ ಲಕ್ಷಣವಾಗಿತ್ತು. ತಾಂತ್ರಿಕವಾಗಿ ಈ ತಂತ್ರವನ್ನು **ಆಮದು ಬದಲೀಕರಣ** ಎನ್ನುತ್ತೇವೆ. ದೇಶಿಯ ಉತ್ಪಾದನೆಯಿಂದ ಆಮದು ಬದಲೀಕರಣವನ್ನು ಸಾಧಿಸುವುದು ಈ ನೀತಿಯ ಉದ್ದೇಶವಾಗಿತ್ತು. ಉದಾಹರಣೆಗೆ ವಿದೇಶದಲ್ಲಿ ಉತ್ಪಾದಿಸುವ ವಾಹನಗಳನ್ನು ಆಮದು ಮಾಡಿಕೊಳ್ಳುವ ಬದಲು ದೇಶೀಯವಾಗಿಯೇ ಉತ್ಪಾದಿಸಲು ಭಾರತೀಯ ಉದ್ಯಮಗಳನ್ನು ಉತ್ತೇಜಿಸುವುದು. ಈ ನೀತಿಯಿಂದ ಸರ್ಕಾರವು ದೇಶೀಯ ಕೈಗಾರಿಕೆಗಳನ್ನು ವಿದೇಶಿ ಪೈಪೋಟಿಯಿಂದ ರಕ್ಷಿಸಿದೆ. ಹೀಗೆ ರಕ್ಷಿಸಲು ಎರಡು ಮಾರ್ಗಗಳಿವೆ, ಅವುಗಳೆಂದರೆ ಸುಂಕಗಳು ಮತ್ತು ಕೋಟಾಗಳು. 'ಸುಂಕ'ಗಳು ಎಂದರೆ ಆಮದು ವಸ್ತುಗಳ ಮೇಲೆ ವಿಧಿಸುವ ತೆರಿಗೆ, ಇದನ್ನು ವಿಧಿಸುವುದರಿಂದ ಆಮದು ವಸ್ತುಗಳ ಬೆಲೆ ದುಬಾರಿಯಾಗುತ್ತವೆ. ಅವುಗಳ ಬಳಕೆಯನ್ನು ಅನುತ್ತೇಜಗೊಳಿಸುತ್ತದೆ. 'ಕೋಟಾ'ಗಳು ಎಂದರೆ ಆಮದಾಗುವ ವಸ್ತುಗಳ ಪ್ರಮಾಣವನ್ನು ನಿಗದಿಪಡಿಸುವುದಾಗಿದೆ. ಸುಂಕ ಮತ್ತು ಕೋಟಾ ನೀತಿಯ ಪರಿಣಾಮವೆಂದರೆ ಆಮದುಗಳನ್ನು ನಿರ್ಬಂಧಿಸುವುದು ದೇಶೀಯ ಉದ್ಯಮಗಳನ್ನು ವಿದೇಶಿ ಪೈಪೋಟಿಯಿಂದ ರಕ್ಷಿಸುವುದು.

"ರಕ್ಷಣಾತ್ಮಕ ವ್ಯಾಪಾರ ನೀತಿ"ಯು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಕೈಗಾರಿಕೆಗಳು, ಹೆಚ್ಚು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಕೈಗಾರಿಕೆಗಳ ಪೈಪೋಟಿಯನ್ನು ಎದುರಿಸಲು ಸಾಧ್ಯವಿಲ್ಲ ಎಂಬ ಭಾವನೆಯ ಮೇಲೆ ಆಧಾರಿತವಾಗಿದೆ. ದೇಶಿಯ ಕೈಗಾರಿಕೆಗಳನ್ನು ರಕ್ಷಿಸಿದಲ್ಲಿ ಕಾಲ ಕ್ರಮೇಣ ಅವುಗಳು ಪೈಪೋಟಿಯನ್ನು ಎದುರಿಸಲು ಕಲಿಯುತ್ತವೆಂದು ಈ ನೀತಿಯು ಭಾವಿಸಿತ್ತು. ಇದಲ್ಲದೆ ಆಮದುಗಳ ಮೇಲೆ ನಿಯಂತ್ರಣ ಹೇರದೇ ಹೋದರೆ ನಮ್ಮ ಅಮೂಲ್ಯ ವಿದೇಶಿ ವಿನಿಮಯ ಐಶಾರಾಮಿ ಅನುಭೋಗಿ ವಸ್ತುಗಳ ಮೇಲೆ ವ್ಯಯವಾಗುವ ಸಾಧ್ಯತೆ ಇದೆಯೆಂದು ಯೋಜನಾತಜ್ಞರು ಆತಂಕಗೊಂಡಿದ್ದರು. ಇಂತಹ ಕಾರಣಗಳಿಂದಾಗಿ 1980 ರ ದಶಕದ ಮದ್ಯದ ವರೆಗೆ ರಫ್ತನ್ನು ಹೆಚ್ಚಿಸುವಂತಹ ಯಾವುದೇ ಗಂಭೀರ ಚಿಂತನೆ ನಡೆಯಲಿಲ್ಲ.

## ಕೈಗಾರಿಕಾ ಅಭಿವೃದ್ಧಿಯ ಮೇಲೆ ನೀತಿಗಳ ಪರಿಣಾಮ

## (EFFECT OF POLICIES ON INDUSTRIAL DEVELOPMENT)

ಮೊದಲ ಏಳು ಯೋಜನೆಗಳ ಅವಧಿಯಲ್ಲಿನ ಕೈಗಾರಿಕಾ ವಲಯದ ಸಾಧನೆ ಗಮನಾರ್ಹವಾಗಿತ್ತು ಒಟ್ಟು ದೇಶೀಯ ಉತ್ಪನ್ನದಲ್ಲಿ (ಜಿ.ಡಿ.ಪಿ) ಕೈಗಾರಿಕಾ ವಲಯದ ಪಾಲು 1950–51 ರಲ್ಲಿ ಶೇ.11.8 ಇದ್ದದ್ದು 1990–91 ರ ಅವಧಿಯಲ್ಲಿ ಶೇ. 24.6 ಕ್ಕೆ ಏರಿಕೆಯಾಯಿತು. ಜಿ.ಡಿ.ಪಿಯಲ್ಲಿ ಕೈಗಾರಿಕಾವಲಯದ ಕೊಡುಗೆ ಏರಿಕೆಯಾಗಿರುವುದು ಆರ್ಥಿಕಾಭಿವೃದ್ಧಿಯ ಮಹತ್ವದ ಸೂಚಕವಾಗಿದೆ. ಈ ಅವಧಿಯಲ್ಲಿ ಕೈಗಾರಿಕಾ ವಲಯದಲ್ಲಿ ವಾರ್ಷಿಕ ಶೇ.6 ರಂತೆ ಬೆಳವಣಿಗೆಯ ದರ ಕಂಡುಬಂದಿರುವುದು ಶ್ಲಾಘನೀಯ. ಭಾರತದ ಕೈಗಾರಿಕಾ ವಲಯ ಹತ್ತಿ ಬಟ್ಟೆ ಹಾಗೂ ಸೆಣಬಿನ ಉದ್ಯಮಕ್ಕಷ್ಟೇ ಸೀಮಿತವಾಗದೆ 1990ರ ವೇಳಗೆ ಸಾಕಷ್ಟು ವೈವಿಧ್ಯವಾಗಿ ಬೆಳೆಯಿತು. ಇದಕ್ಕೆ ಪ್ರಮುಖ ಕಾರಣ ಸಾರ್ವಜನಿಕ ವಲಯದಲ್ಲಿನ ವಿಸ್ತರಣೆ. ದೊಡ್ಡ ಘಟಕಗಳ ಮೂಲಕ ವ್ಯವಹಾರವನ್ನು ಆರಂಭಿಸಲು ಸಾಕಾಗುವಷ್ಟು ಬಂಡವಾಳ ಹೊಂದಿಲ್ಲದವರಿಗೆ ಸಣ್ಣ ಕೈಗಾರಿಕೆಗಳಿಗೆ ನೀಡಿದ ಉತ್ತೇಜನವು ಅವಕಾಶ ಮಾಡಿಕೊಟ್ಟಿದೆ. ವಿದೇಶಿ ಪೈಪೋಟಿ ರಕ್ಷಣೆಯಿಂದಾಗಿ ಎಲೆಕ್ಟ್ರಾನಿಕ್ ಮತ್ತು ಆಟೋಮೊಬೈಲ್ ಕ್ಷೇತ್ರದಲ್ಲಿ ದೇಶೀಯ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಯಿತು ಇಲ್ಲದಿದ್ದಲ್ಲಿ ಇವು ಅಭಿವೃದ್ಧಿಯಾಗುತ್ತಿರಲಿಲ್ಲ.

ಭಾರತದ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಸಾರ್ವಜನಿಕ ವಲಯ ಗಣನೀಯ ಕೊಡುಗೆ ನೀಡಿದ್ದರೂ ಕೆಲವು ಅರ್ಥಶಾಸ್ತ್ರಜ್ಞರು ಸಾರ್ವಜನಿಕ ವಲಯದ ಕೈಗಾರಿಕೆಗಳ ಕಾರ್ಯನಿರ್ವಹಣೆಯ ಬಗ್ಗೆ ಟೀಕಿಸಿದ್ದಾರೆ. ಸಾರ್ವಕನಿಕ ವಲಯದ ಅಗತ್ಯತೆಯು ಮೊದ ಮೊದಲು ದೊಡ್ಡ ಪ್ರಮಾಣದಲ್ಲಿತ್ತು ಎನ್ನುವುದನ್ನು



### ನೀವೇ ಮಾಡಿರಿ

### (Work These Out)

➤ ಜಿ.ಡಿ.ಪಿ ಗೆ ವಲಯವಾರು ಕೊಡುಗೆ ಬಗ್ಗೆ ಈ ಕೆಳಗಿನ ಅನುಸೂಚಿಯಿಂದ ಒಂದು ಪೈ ನಕ್ಷೆ ರಚಿಸಿ, ಮತ್ತು 1950–91 ರ ಅವಧಿಯಲ್ಲಿ ವಲಯಗಳ ಕೊಡುಗೆಯಲ್ಲಿನ ವ್ಯತ್ಯಾಸಗಳು, ಅಭಿವೃದ್ಧಿಯ ಪರಿಣಾಮಗಳ ಬಗ್ಗೆ ಚರ್ಚಿಸಿ.

| ವಲಯ | 1950–51 | 1990–91 |
|---|---|---|
| ಕೃಷಿ ವಲಯ  | 59.0 | 34.9 |
| ಕೈಗಾರಿಕಾ ವಲಯ  | 13.0 | 24.6 |
| ಸೇವಾ ವಲಯ  | 28.0 | 40.5 |

➤ ನಿಮ್ಮ ತರಗತಿಯ ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಗಂಡಿಸಿ ಸಾರ್ವಜನಿಕ ವಲಯದ ಉದ್ಯಮಗಳ ಉಪಯುಕ್ತತೆ ಕುರಿತು ಒಂದು ಚರ್ಚಾ ಸ್ಪರ್ಧೆ ಏರ್ಪಡಿಸಿ. ಒಂದು ಗುಂಪು ಸಾರ್ವಜನಿಕ ವಲಯದ ಘಟಕ (ಪಿ.ಎಸ್.ಯು)ಗಳ ಪರವಾಗಿ ಮಾತಾನಾಡಲಿ ಇನ್ನೊಂದು ಗುಂಪು ವಿರೋಧವಾಗಿರಲಿ (ಎಷ್ಟು ಸಾಧ್ಯವೂ ಅಷ್ಟು ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಿ ಮತ್ತು ಉದಾಹರಣೆ ಕೊಡಲು ಅವರನ್ನು ಪ್ರೋತ್ಸಾಹಿಸಿ).

ಈ ಅಧ್ಯಾಯದ ಆರಂಭದಲ್ಲಿ ಸೂಚಿಸಲಾಗಿದೆ. ಈಗ ಅದರ ಅಗತ್ಯತೆ ಇಲ್ಲದಿದ್ದರೂ ಸರ್ಕಾರಿ ಉದ್ಯಮಗಳು ಕೆಲವು ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ಮುಂದುವರೆಸಿವೆ(ಕೆಲವೊಮ್ಮೆ ಏಕಸ್ವಾಮ್ಯತೆ ಪಡೆದು) ಎನ್ನುವ ವ್ಯಾಪಕ ಅಭಿಪ್ರಾಯವಿದೆ. ದೂರ ಸಂಪರ್ಕ ಸೇವೆಯ ಪೂರೈಕೆ ಇದಕ್ಕೆ ಒಂದು ಉದಾಹರಣೆಯಾಗಿದೆ. ಖಾಸಗಿವಲಯವು ಈ ಸೇವೆಯನ್ನು ಒದಗಿಸಬಲ್ಲದೆಂದು ತಿಳಿದ ಮೇಲೂ ಸಾರ್ವಜನಿಕ ವಲಯಕ್ಕೆ ಈ ಸೇವೆಯನ್ನು ಮೀಸಲಾಗಿಡುವುದನ್ನು ಮುಂದುವರೆಸಲಾಗಿದೆ ಈ ಕ್ಷೇತ್ರದಲ್ಲಿ ಪೈಪೋಟಿ ಇಲ್ಲದಿರುವ ಕಾರಣದಿಂದಾಗಿ 1990 ರ ದಶಕದ ಕೊನೆಯವರೆಗೂ ಒಬ್ಬ ವ್ಯಕ್ತಿ ದೂರವಾಣಿ ಸಂಪರ್ಕ ಪಡೆಯಲು ದೀರ್ಘಕಾಲ ಕಾಯಬೇಕಾಗಿತ್ತು. ಇಂತಹ ಇನ್ನೊಂದು ನಿದರ್ಶನವೆಂದರೆ, ಖಾಸಗಿ ವಲಯಕ್ಕೆ ಬ್ರೆಡ್ಡನ್ನು ತಯಾರಿಸಲು ಸಾಧ್ಯವಿಲ್ಲವೇನೋ ಎಂಬಂತೆ! ಬ್ರೆಡ್ಡನ್ನು ತಯಾರಿಸುವ ಸಾರ್ವಜನಿಕ ಉದ್ಯಮವಾದ ಮಾರ್ಡನ್ ಬ್ರೆಡ್ಡ್ ಉದ್ಯಮ. 2001 ರಲ್ಲಿ ಈ ಉದ್ಯಮ ಘಟಕವನ್ನು ಖಾಸಗಿವಲಯಕ್ಕೆ ಮಾರಲಾಯಿತು. ವಿಷಯವೇನೆಂದರೆ ಭಾರತೀಯ ಆರ್ಥಿಕತೆಯ ನಾಲ್ಕು ದಶಕಗಳ ಯೋಜಿತ ಅಭಿವೃದ್ಧಿಯ ನಂತರವೂ (1) ಸಾರ್ವಜನಿಕ ವಲಯ ಮಾತ್ರ ಏನನ್ನು ಮಾಡಬಲ್ಲದು ಮತ್ತು (2) ಖಾಸಗಿ ವಲಯವೂ ಕೂಡ ಏನನ್ನು ಮಾಡಬಲ್ಲದು ಎನ್ನುವ ವ್ಯತ್ಯಾಸವನ್ನು ಗುರುತಿಸಲಾಗಿಲ್ಲ. ಉದಾಹರಣೆಗೆ, ಇಂದಿಗೂ ಕೂಡ ಸಾರ್ವಜನಿಕ ವಲಯ ಮಾತ್ರ ರಾಷ್ಟ್ರ ರಕ್ಷಣೆ ಸೇವೆಗಳನ್ನು ಪೂರೈಸುತ್ತಿದೆ. ಖಾಸಗಿ ವಲಯವು ಹೋಟೆಲ್‌ಗಳನ್ನು ಸಮರ್ಪಕವಾಗಿ ನಿರ್ವಹಿಸಬಹುದಾದರೂ ಇನ್ನೂ ಸರ್ಕಾರ ಕೂಡ ಹೋಟೆಲ್‌ಗಳನ್ನು ನಡೆಸುತ್ತಿದೆ. ಕೆಲವೊಂದು ವಿದ್ವಾಂಸರ ವಾದದ ಪ್ರಕಾರ ಖಾಸಗಿವಲಯವು ನಿರ್ವಹಿಸಬಹುದಾದ ಕ್ಷೇತ್ರಗಳಿಂದ ಸರ್ಕಾರವು ಹೊರಬರಬೇಕು ಮತ್ತು ಖಾಸಗಿವಲಯ ಒದಗಿಸಲಾಗದ ಪ್ರಮುಖ ಸೇವೆಗಳ ಮೇಲೆ ಮಾತ್ರ ಸರ್ಕಾರ ತನ್ನ ಸಂಪನ್ಮೂಲಗಳನ್ನು ಕೇಂದ್ರೀಕರಿಸಬೇಕು.

ದೇಶದ ಮಿತವಾದ ಸಂಪನ್ಮೂಲಗಳನ್ನು ಬರಿದು ಮಾಡುತ್ತಿದ್ದರೂ ಸರ್ಕಾರಿ ಉದ್ದಿಮೆಗಳನ್ನು ಮುಚ್ಚುವುದು ಕಷ್ಟದಾಯಕವಾಗಿರುವುದರಿಂದ ಸಾರ್ವಜನಿಕ ವಲಯದ ಹಲವಾರು ಉದ್ಯಮಗಳು ದೊಡ್ಡ ಪ್ರಮಾಣದ ನಷ್ಟವನ್ನು ಅನುಭವಿಸುತಿದ್ದರೂ ಅವುಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಇದರ ಅರ್ಥ ಖಾಸಗಿ ಉದ್ಯಮಗಳು ಯಾವಾಗಲೂ ಲಾಭದಲ್ಲಿವೆ ಎಂದರ್ಥವಲ್ಲ, ವಾಸ್ತವದಲ್ಲಿ ಈಗಿನ ಕೆಲ ಸಾರ್ವಜನಿಕ ಉದ್ದಮಗಳು ಖಾಸಗಿ ವಲಯದಲ್ಲಿದ್ದವು ಅವು ಸತತ ನಷ್ಟದಿಂದಾಗಿ ನಿಂತು ಭೀತಿಯಲ್ಲಿದ್ದವು. ಈ ಸಂದರ್ಭದಲ್ಲಿ ಆ ಉದ್ಯಮಗಳಲ್ಲಿದ್ದ ಉದ್ಯೋಗವಕಾಶಗಳನ್ನು ರಕ್ಷಿಸುವ ಸಲುವಾಗಿ ರಾಷ್ಟ್ರೀಕರಣಗೊಳಿಸಲಾಯಿತು. ನಷ್ಟದಲ್ಲಿದ್ದಾಗ್ಯೂ ಖಾಸಗಿ ಉದ್ಯಮವೊಂದು, ಹಾಗೇ ಮುಂದುವರೆಸಿಕೊಂಡು ಹೋದಲ್ಲಿ ಸಂಪನ್ಮೂಲಗಳನ್ನು ಅಪವ್ಯಯಿಸುವುದಿಲ್ಲ.

ಒಂದು ಕೈಗಾರಿಕೆಯನ್ನು ಆರಂಭಿಸಲು ಪರವಾನಿಗೆ ಪಡೆಯುವ ಅಗತ್ಯತೆ ಇದ್ದುದನ್ನು ಕೈಗಾರಿಕೊದ್ಯಮ ಸಮೂಹಗಳು ದುರುಪಯೋಗ ಪಡಿಸಿಕೊಂಡವು. ದೊಡ್ಡ ಕೈಗಾರಿಕೊದ್ಯಮಿಗಳು ಹೊಸ ಕೈಗಾರಿಕೆಯ ಸ್ಥಾಪನೆಯಿಂದ ಆಗುವ ಸ್ಪರ್ದೆಯನ್ನು ತಪ್ಪಿಸಿಕೊಳ್ಳಲು ತಾವೇ ಪರವಾನಿಗೆ ಪಡೆಯುತ್ತಿದ್ದರೇ ಹೊರತು ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗಿ ಅಲ್ಲ. 'ಪರ್ಮಿಟ್ ಲೈಸನ್ಸ್ ರಾಜ್' ಎಂದು ಕರೆಯಲ್ಪಡುವ ಅತಿಯಾದ ನಿಯಂತ್ರಣಗಳು ಉದ್ಯಮಗಳ ದಕ್ಷತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದವು. ಉದ್ಯಮಿಗಳು ಉತ್ಪನ್ನದ ಸುಧಾರಣೆಯ ಕುರಿತು ಯೋಚಿಸುವುದರ ಬದಲಾಗಿ ಸಂಬಂಧಿಸಿದ ಸಚಿವಾಲಯ ಗಳಿಂದ ಪರವಾನಿಗೆ ಪಡೆದುಕೊಳ್ಳಲು ಲಾಭಿ (ವಶಿಲಿ) ಮಾಡಲು ಹೆಚ್ಚು ಸಮಯ ಕಳೆಯುತ್ತಿದ್ದರು.

ವಿದೇಶಿ ಪೈಪೋಟಿಯಿಂದ ರಕ್ಷಣೆ ಪಡೆಯುತ್ತಿರುವುದರಿಂದ ಆಗುತ್ತಿರುವ. ಒಳ್ಳೆಯದಕ್ಕಿಂತ ಹಾನಿಯೇ ಹೆಚ್ಚು ಎಂದು ಸಾಬೀತಾಗಿದ್ದರೂ ಇದನ್ನು ಇನ್ನೂ ಮುಂದುವರೆಸುತ್ತಿರುವುದನ್ನು ಟೀಕಿಸಲಾಗುತ್ತಿದೆ. ಆಮದಿನ ಮೇಲಿನ ಖಾತರಿಯಾದ ಕಾರಣದಿಂದ ಭಾರತೀಯ ಗ್ರಾಹಕರು ಭಾರತದ ಉತ್ಪಾದಕ ಏನನ್ನು ಉತ್ಪಾದಿಸುತ್ತಾರೂ ಅದನ್ನೆ ಖರೀದಿಸಬೇಕಾಗಿತ್ತು. ಉತ್ಪಾದಕರಿಗೆ ತಾವು ಖಾತರಿಯಾದ ಮಾರುಕಟ್ಟೆ ಹೊಂದಿದ್ದೇವೆ ಎಂದು ಗೊತ್ತಿತ್ತು. ಅದ್ದರಿಂದ ಅವರಿಗೆ ತಮ್ಮ ವಸ್ತುಗಳ ಗುಣಮಟ್ಟವನ್ನು ಸುಧಾರಿಸುವಂತಹ ಯಾವುದೇ ಮಾರುಕಟ್ಟೆ ಆಧಾರಿತ ಉತ್ತೇಜಕಗಳಿರಲಿಲ್ಲ, ಕಳಪೆ ಗುಣಮಟ್ಟದ ವಸ್ತುಗಳನ್ನು ಅಧಿಕ ಬೆಲೆಗೆ ಮಾರಾಟ ಮಾಡುತ್ತಿರುವಾಗ ಅವರು ಉತ್ಪಾದನೆಯ ಗುಣಮಟ್ಟವನ್ನು ಸುಧಾರಿಸಲು ಏಕೆ ಯೋಚಿಸುತ್ತಾರೆ? ಮತ್ತು ಆಮದುಗಳಿಂದ ಪೈಪೋಟಿ ಇದ್ದರೆ ನಮ್ಮ ಉತ್ಪಾದಕರು ಹೆಚ್ಚು ದಕ್ಷತೆ ಹೊಂದಲು ಪ್ರಯತ್ನಿಸುತ್ತಾರೆ.

ಇನ್ನು ಕೆಲವು ಅರ್ಥಶಾಸ್ತ್ರಜ್ಞರು ಸಾರ್ವಜನಿಕ ವಲಯವೆಂದರೆ ಲಾಭಗಳಿಸುವುದಲ್ಲ ಬದಲಾಗಿ ರಾಷ್ಟ್ರದ ಕಲ್ಯಾಣದ ಉನ್ನತಿಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ದೃಷ್ಟಿಯಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಜನರ ಕಲ್ಯಾಣಕ್ಕಾಗಿ ಅವುಗಳು ಯಾವ ಮಟ್ಟದ ಕೂಡುಗೆ ನೀಡಿವೆ ಎಂಬ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕೆ ವಿನ: ಅವುಗಳ ಲಾಭಗಳಿಕೆಯ ಮೇಲೆ ಅಲ್ಲ. ಎಂಬ ವಾದವು ಇದೆ. ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲಿಯವರೆಗೆ ಶ್ರೀಮಂತ ರಾಷ್ಟ್ರಗಳು ತಮ್ಮ ಉದ್ಯಮಗಳಿಗೆ ವಿದೇಶಿ ಪೈಪೋಟಿಯಿಂದ ರಕ್ಷಣೆ ನೀಡುತ್ತವೆಯೋ ಅಲ್ಲಿಯವರೆಗೆ ನಾವು ರಕ್ಷಣೆ ನೀಡಬೇಕು ಎನ್ನುವುದು ಕೆಲವು ಅರ್ಥಶಾಸ್ತ್ರಜ್ಞರು ಅಭಿಪ್ರಾಯವಾಗಿದ್ದು. ಈ ಎಲ್ಲಾ ಸಂಘರ್ಷಗಳಿಂದಾಗಿ ಅರ್ಥಶಾಸ್ತ್ರಜ್ಞರುಗಳು ನಮ್ಮ ನೀತಿಯಲ್ಲಿ ಬದಲಾವಣೆ ತರಬೇಕೆಂದು ಕರೆ ನೀಡಿದ್ದರು. ಈ ಎಲ್ಲಾ ಬೆಳವಣಿಗೆಗಳ ಪರಿಣಾಮವಾಗಿ ಸರ್ಕಾರವು 1991ರಲ್ಲಿ ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತಂದಿತು.

## 2.6 ಉಪಸಂಹಾರ (CONCLUSION)

ಮೊದಲ ಏಳು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಭಾರತದ ಆರ್ಥಿಕತೆಯ ಪ್ರಗತಿ ಗಣನೀಯವಾಗಿತ್ತು. ಸ್ವಾತಂತ್ರ್ಯದ ಸಂದರ್ಭಕ್ಕೆ ಹೋಲಿಕೆ ಮಾಡಿದರೆ ನಮ್ಮ ಕೈಗಾರಿಕೆಗಳು ಹೆಚ್ಚು ವೈವಿಧ್ಯಮಯವಾಗಿವೆ. ಹಸಿರು ಕ್ರಾಂತಿಯ ಪರಿಣಾಮದಿಂದಾಗಿ ಭಾರತ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯಾಗಿದೆ. ಭೂ ಸುಧಾರಣೆಗಳು ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನ ಗೊಳಿಸಿದವು. ಆದಾಗ್ಯೂ ಹಲವು ಸಾರ್ವಜನಿಕ ವಲಯದ ಉದ್ಯಮಗಳ ಕಾರ್ಯಕ್ಷಮತೆ ಬಗ್ಗೆ ಅನೇಕ ಅರ್ಥಶಾಸ್ತ್ರಜ್ಞರು ಅತೃಪ್ತಿ ಹೊಂದಿದ್ದರು. ಸರ್ಕಾರದ ಮಿತಿಮೀರಿದ ನಿಯಂತ್ರಣಗಳು ಸಾಹಸಿ ಉದ್ಯಮಶೀಲತ್ವದ ಬೆಳವಣಿಗೆಯನ್ನು ತಡೆಗಟ್ಟಿವೆ. ನಮ್ಮ ಉತ್ಪಾದಕರು ಸ್ವಾವಲಂಬನೆಯ ಹೆಸರಿನಲ್ಲಿ ವಿದೇಶಿ ಪೈಪೋಟಿಯಿಂದ ರಕ್ಷಿಸಲ್ಪಟ್ಟರು. ಆದರೆ ಇದು ಅವರು ಉತ್ಪಾದಿಸುತ್ತಿದ್ದ ವಸ್ತುಗಳ ಗುಣಮಟ್ಟ ಸುಧಾರಣೆಗೆ ಯಾವುದೇ ಪ್ರೋತ್ಸಾಹ ನೀಡಲಿಲ್ಲ. ನಮ್ಮ ನೀತಿಗಳು ಒಳಮುಖಿಗಳಾಗಿದ್ದು ಇದರಿಂದಾಗಿ ಒಂದು ಸದೃಢ ರಫ್ತು ವಲಯವನ್ನು ಅಭಿವೃದ್ಧಿ ಮಾಡುವಲ್ಲಿ ನಾವು ವಿಫಲರಾದೆವು. ಬದಲಾಗುತ್ತಿರುವ ಜಾಗತಿಕ ಆರ್ಥಿಕ ಸನ್ನಿವೇಶಗಳಲ್ಲಿ ಸಾರ್ವತ್ರಿಕ ಆರ್ಥಿಕ ನೀತಿಗೆ ಸುಧಾರಣೆ ತರುವ ಅವಶ್ಯಕತೆಯನ್ನು ಮನಗೊಂಡು ಮತ್ತು ನಮ್ಮ ಆರ್ಥಿಕತೆಯನ್ನು ಹೆಚ್ಚು ಸಮರ್ಥವಾಗಿಸಲು 1991 ರಲ್ಲಿ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಲಾಯಿತು. ಇದು ಮುಂದಿನ ಅಧ್ಯಾಯದ ವಿಷಯ ವಸ್ತುವಾಗಿದೆ.

**ಪುನರುಕ್ತಿ**

- ಸ್ವಾತಂತ್ರ್ಯದ ತರುವಾಯ ಭಾರತವು ಸಮಾಜವಾದಿ ಹಾಗೂ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಉತ್ತಮ ಅಂಶಗಳನ್ನು ಒಳಗೊಂಡ ಒಂದು ಅತ್ಯುತ್ತಮ ಮಿಶ್ರ ಅರ್ಥ ವ್ಯವಸ್ಥೆಯ ಮಾದರಿಯನ್ನು ರೂಪಿಸಿತು.
- ಎಲ್ಲಾ ಆರ್ಥಿಕ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳ ಮೂಲಕ ರಚಿಸಲಾಯಿತು.
- ಆರ್ಥಿಕ ಬೆಳವಣಿಗೆ, ಆಧುನೀಕರಣ, ಸ್ವಾವಲಂಭನೆ ಮತ್ತು ಸಮಾನತೆಗಳು ಪಂಚವಾರ್ಷಿಕ ಯೋಜನೆಯ ಸಾಮಾನ್ಯ ಗುರಿಗಳಾಗಿವೆ.
- ಕೃಷಿ ವಲಯದ ಪ್ರಮುಖ ಬೆಳವಣಿಗೆಗಳೆಂದರೆ ಭೂ ಸುಧಾರಣೆ ಹಾಗೂ ಹಸಿರು ಕ್ರಾಂತಿಗಳಾಗಿವೆ ಈ ಪ್ರೋತ್ಸಾಹಕಗಳು ಭಾರತವು ಆಹಾರೋತ್ಪಾದನೆಯಲ್ಲಿ ಸ್ವಾವಲಂಭನೆ ಸಾಧಿಸಲು ಸಹಾಯಕಾರಿಯಾದವು.
- ಕೃಷಿ ಅವಲಂಭಿತ ಜನರ ಪ್ರಮಾಣವು ನಾವು ನಿರೀಕ್ಷಿಸಿದ ರೀತಿಯಲ್ಲಿ ಕಡಿಮೆಯಾಗಲಿಲ್ಲ.
- ಜಿ.ಡಿ.ಪಿ.ಯಲ್ಲಿನ ಕೈಗಾರಿಕಾ ವಲಯದ ಕೊಡುಗೆ ಹೆಚ್ಚಲು ಈ ವಲಯದ ಕಾರ್ಯನೀತಿಗಳು ಕಾರಣ.
- ಕೈಗಾರಿಕ ವಲಯದಲ್ಲಿನ ಒಂದು ನ್ಯೂನತೆ ಎಂದರೆ ಸಾರ್ವಜನಿಕ ವಲಯದ ಅದಕ್ಷ ಕಾರ್ಯ ವೈಖರಿಯಿಂದಾಗಿ, ನಷ್ಟ ಹೊಂದಿದ್ದು ರಾಷ್ಟ್ರದ ಮಿತ ಸಂಪನ್ಮೂಲಗಳ ಅಪವ್ಯಯಕ್ಕೆ ಕಾರಣವಾಗಿದೆ.



## ಅಭ್ಯಾಸಗಳು

1. ಯೋಜನೆಯನ್ನು ವ್ಯಾಖ್ಯಾನಿಸಿ.
2. ಭಾರತ ಏಕೆ ಯೋಜನಾ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿತು?
3. ಯೋಜನೆಗಳು ಏಕೆ ಗುರಿಗಳನ್ನು ಹೊಂದಿರಬೇಕು?
4. ಅಧಿಕ ಇಳುವರಿ ಬಿತ್ತನೆ ಬೀಜಗಳು (HYV) ಎಂದರೇನು?
5. ಮಾರಾಟ ಮಾಡಲ್ಪಟ್ಟ ಮಿಗುತೆ ಎಂದರೇನು?
6. ಕೃಷಿ ಕ್ಷೇತ್ರದಲ್ಲಿ ಅಳವಡಿಸಿಕೊಂಡಿರುವ ಭೂಸುಧಾರಣೆ ಅಗತ್ಯ ಮತ್ತು ವಿಧಗಳನ್ನು ವಿವರಿಸಿ.
7. ಹಸಿರು ಕ್ರಾಂತಿ ಎಂದರೇನು? ಏಕೆ ಇದನ್ನು ಅಳವಡಿಸಿಕೊಳ್ಳಲಾಯಿತು ಮತ್ತು ರೈತರಿಗೆ ಇದು ಹೇಗೆ ಲಾಭದಾಯಕವಾಗಿದೆ? ಸಂಕ್ಷಿಪ್ತವಾಗಿ ವಿವರಿಸಿ.
8. ಯೋಜನೆಗಳ ಉದ್ದೇಶವಾಗಿ 'ಸಮಾನತೆಯೊಂದಿಗೆ ಬೆಳವಣಿಗೆ'ಯನ್ನು ವಿವರಿಸಿ.
9. ಯೋಜನೆಗಳ ಉದ್ದೇಶವಾಗಿ ಆಧುನೀಕರಣವು ಉದ್ಯೋಗ ಸೃಷ್ಟಿಸುವಲ್ಲಿ ತದ್ವಿರುದ್ಧ ಪರಿಣಾಮ ಬೀರಿದೆಯೇ? ವಿವರಿಸಿ.
10. ಭಾರತದದಂತ ಅಭಿವೃದ್ಧಿಶೀಲ ರಾಷ್ಟ್ರ ಸ್ವಾವಲಂಬನೆಯನ್ನು ಯೋಜನೆಗಳ ಉದ್ದೇಶವಾಗಿ ಅನುಸರಿಸುವುದು ಏಕೆ ಅವಶ್ಯಕವಾಗಿತ್ತು?
11. ಒಂದು ಅರ್ಥ ವ್ಯವಸ್ಥೆಯ ವಲಯವಾರು ಸಂಯೋಜನೆ ಎಂದರೇನು? ಒಂದು ಅರ್ಥವ್ಯವಸ್ಥೆಯಲ್ಲಿ ಸೇವಾ ವಲಯವು ಜಿಡಿಪಿಗೆ ಗರಿಷ್ಠ ಕೊಡುಗೆ ನೀಡಲೇಬೇಕಾದ ಅವಶ್ಯಕತೆ ಇದಯೇ? ಚರ್ಚಸಿ.
12. ಯೋಜನಾ ಅವಧಿಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸಾರ್ವಜನಿಕ ವಲಯಕ್ಕೆ ಮುಖ್ಯ ಪಾತ್ರ ನೀಡಲಾಯಿತು ಏಕೆ?
13. ಹಸಿರು ಕ್ರಾಂತಿಯಿಂದ ಸರ್ಕಾರವು ಆಹಾರ ಧಾನ್ಯಗಳನ್ನು ಸಾಕಷ್ಟು ಉತ್ಪಾದಿಸಿ ದಾಸ್ತಾನು ಮಾಡಿ ಕೊರತೆಯಾದ ಸಂದರ್ಭದಲ್ಲಿ ಬಳಕೆಮಾಡಲು ಶಕ್ತವಾಗಿದೆ – ಈ ಹೇಳಿಕೆಯನ್ನು ವಿವರಿಸಿ.
14. ಸಹಾಯಧನಗಳು ರೈತರನ್ನು ಹೊಸತಂತ್ರಜ್ಞಾನದ ಬಳಕೆಗೆ ಪ್ರೋತ್ಸಾಹ ನೀಡಿವೆ, ಆದರೆ ಅವುಗಳು ಸರ್ಕಾರದ ಹಣಕಾಸಿನಮೇಲೆ ದೊಡ್ಡ ಹೊರೆಯಾಗಿವೆ, ಈ ಹೇಳಿಕೆಯೊಂದಿಗೆ ಸಹಾಯಧನಗಳ ಉಪಯೋಗಗಳನ್ನು ಚರ್ಚಿಸಿ.
15. ಹಸಿರು ಕ್ರಾಂತಿಯ ಅನುಷ್ಠಾನದ ಹೊರತಾಗಿಯೂ 1990ರ ವರೆಗೆ ನಮ್ಮ ದೇಶದ ಜನಸಂಖ್ಯೆಯ ಶೇ 65ರಷ್ಟು ಜನರು ಕೃಷಿ ವಲಯದ ಮೇಲೆ ಅವಲಂಬಿತರಾಗಿದ್ದಾರೆ ಏಕೆ?
16. ಕೈಗಾರಿಕೆಗಳಿಗೆ ಸಾರ್ವಜನಿಕ ವಲಯ ತುಂಬಾ ಅವಶ್ಯಕವಿದ್ದಾಗಲೂ ಕೆಲವು ಸಾರ್ವಜನಿಕ ವಲಯದ ಉದ್ಯಮಗಳು ದೊಡ್ಡ ಪ್ರಮಾಣದ ನಷ್ಟ ಅನುಭವಿಸುತ್ತಿವೆ ಮತ್ತು ದೇಶದ ಸಂಪನ್ಮೂಲಗಳಿಗೆ ಹೊರೆಯಾಗಿವೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದ ಉದ್ಯಮಗಳ ಉಪಯೋಗಗಳ ಬಗ್ಗೆ ಚರ್ಚಿಸಿ.

17. ಆಮದು ಬದಲೀಕರಣವು ದೇಶೀಯ ಕೈಗಾರಿಕೆಯನ್ನು ಹೇಗೆ ರಕ್ಷಣೆ ಮಾಡಿದೆ, ವಿವರಿಸಿ.

18. ಐ.ಪಿ.ಆರ್. 1956 ರ ಪ್ರಕಾರ ಖಾಸಗಿ ವಲಯ ಏಕೆ ಮತ್ತು ಹೇಗೆ ನಿಯಂತ್ರಿಸಲ್ಪಟ್ಟಿದೆ?

19. ಹೊಂದಿಸಿ ಬರೆಯಿರಿ.

| | | | |
|---|---|---|---|
| 1. | ಪ್ರಧಾನ ಮಂತ್ರಿ | A | ಅಧಿಕ ಪ್ರಮಾಣದ ಉತ್ಪನ್ನ ನೀಡುವ ಬೀಜಗಳು |
| 2. | ಒಟ್ಟು ದೇಶೀಯ ಉತ್ಪನ್ನ | B | ಸರಕುಗಳನ್ನು ಆಮದು ಮಾಡಿಕೊಳ್ಳುವ ಪ್ರಮಾಣ |
| 3. | ಕೋಟಾ | C | ಯೋಜನಾ ಆಯೋಗದ ಅಧ್ಯಕ್ಷರು |
| 4. | ಭೂ ಸುಧಾರಣೆಗಳು ಅಧಿಕ ಇಳುವರಿ | D | ಒಂದು ವರ್ಷದ ಅವಧಿಯಲ್ಲಿ ಒಂದು ಅರ್ಥವ್ಯವಸ್ಥೆಯ ಒಳಗೆ ಉತ್ಪಾದಿಸಲ್ಪಟ್ಟ ಅಂತಿಮ ಸರಕು ಮತ್ತು ಸೇವೆಗಳ ಹಣದ ಮೌಲ್ಯ. |
| 5. | ಹೆಚ್.ವೈ.ವಿ. ಬೀಜಗಳು | E | ಉತ್ಪಾದಕತೆ ಹೆಚ್ಚಿಸಲು ಕೃಷಿ ಭೂಮಿಯನ್ನು ಅಭಿವೃದ್ಧಿ ಪಡಿಸುವುದು. |
| 6. | ಸಹಾಯಧನ | F | ಉತ್ಪಾದನಾ ಚಟುವಟಿಗಳಿಗಾಗಿ ಸರ್ಕಾರ ನೀಡುವ ಹಣಕಾಸಿನ ಸಹಾಯ. |



## REFERENCES

**Books:**


BHAGWATI, J. 1993. India in Transition: Freeing the Economy. Oxford University Press, Delhi.

DANDEKAR, V.M. 2004. Forty Years After Independence, in Bimal Jalan, (Ed.). The Indian Economy: Problems and Prospects. Penguin, Delhi.

JOSHI, VIJAY. and I.M.D. LITTLE. 1996. India's Economic Reforms 1991–2001. Oxford University Press, Delhi.

MOHAN, RAKESH. 2004. Industrial Policy and Controls, in Bimal Jalan (Ed.). The Indian Economy: Problems and Prospects. Penguin, Delhi.

RAO, C.H. HANUMANTHA. 2004. Agriculture: Policy and Performance, in Bimal Jalan, (Ed.). The Indian Economy: Problems and Prospects. Penguin, Delhi.

# ಘಟಕ

# II

## 1991ರ ನಂತರದ ಆರ್ಥಿಕ ಸುಧಾರಣೆಗಳು

## ECONOMIC REFORMS SINCE 1991

ನಲವತ್ತು ವರ್ಷಗಳ ಯೋಜಿತ ಅಭಿವೃದ್ಧಿ ನಂತರ ಭಾರತ ಸದೃಢ ಕೈಗಾರಿಕಾ ನೆಲೆಯನ್ನು ಮತ್ತು ಆಹಾರ ಧಾನ್ಯಗಳ ಉತ್ಪನ್ನದಲ್ಲಿ ಸ್ವಾವಲಂಬನೆಯನ್ನು ಸಾಧಿಸಿತು. ಆದಾಗ್ಯೂ ಜನಸಂಖ್ಯೆಯ ಪ್ರಧಾನ ಭಾಗವು ತನ್ನ ಜೀವನಾಧಾರಕ್ಕಾಗಿ ಕೃಷಿಯ ಪ್ರಮುಖ ಅವಲಂಬನೆಯನ್ನು ಮುಂದುವರೆಸಿದೆ. 1991ರಲ್ಲಿ ಪಾವತಿ ಶಿಲ್ಕುವಿನಲ್ಲುಂಟಾದ ಬಿಕ್ಕಟ್ಟು ದೇಶದಲ್ಲಿ ಆರ್ಥಿಕ ಸುಧಾರಣೆಗಳ ಜಾರಿಗೆ ಕಾರಣವಾಯಿತು. ಈ ಘಟಕವು ಭಾರತದಲ್ಲಿ ಸುಧಾರಣಾ ಪ್ರಕ್ರಿಯೆ ಮತ್ತು ಅದರ ಅನುಷ್ಠಾನಗಳ ಒಂದು ಮೌಲ್ಯ ಮಾಪನವಾಗಿದೆ.

3

# ಅಧ್ಯಾಯ–3

# ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ: ಒಂದು ಮೌಲ್ಯಮಾಪನ

# LIBERALISATION, PRIVATISATION AND GLOBALISATION: AN APPRAISAL

**ಈ ಅಧ್ಯಾಯದ ಅಧ್ಯಯನದ ನಂತರ ನೀವು,**

- 1991 ರಲ್ಲಿ ಭಾರತದಲ್ಲಿ ಜಾರಿಗೊಳಿಸಿದ ಸುಧಾರಣಾ ನೀತಿಗಳ ಹಿನ್ನೆಲೆಯನ್ನು ಗ್ರಹಿಸುವಿರಿ.
- ಜಾರಿಗೊಳಿಸಲಾದ ಸುಧಾರಣಾ ನೀತಿಗಳ ಮೂಲಕ ತಂತ್ರಗಳನ್ನು ಅರಿತುಕೊಳ್ಳುವಿರಿ.
- ಭಾರತದಲ್ಲಿನ ಜಾಗತೀಕರಣ ಮತ್ತು ಅದರ ಅನುಷ್ಠಾನದ ಪ್ರಕಿಯೆಗಳನ್ನು ಅರ್ಥೈಸಿಕೊಳ್ಳುವಿರಿ.
- ವಿವಿಧ ವಲಯಗಳಲ್ಲಿ ಸುಧಾರಣಾ ಪ್ರಕ್ರಿಯೆಯ ಪ್ರಭಾವದ ಬಗ್ಗೆ ಜಾಗೃತರಾಗುವಿರಿ.

ಇಂದು ಜಗತ್ತಿನಲ್ಲಿ, ಒಂದು ಸರ್ವಾನುಮತ ಅಭಿಪ್ರಾಯವಿದೆ ಅದೇನೆಂದರೆ, ಆರ್ಥಿಕ ಅಭಿವೃದ್ಧಿಯೇ ಎಲ್ಲವೂ ಅಲ್ಲ ಹಾಗೂ ಇಂದಿನ GDP ಯು ಸಮಾಜದ ಪ್ರಗತಿಯ ಒಂದು ಮಾಪನವಾಗಬೇಕೆಂಬ ಅಗತ್ಯವಿಲ್ಲ.

– ಕೆ.ಆರ್. ನಾರಾಯಣನ್

## 3.1 ಪೀಠಿಕೆ (INTRODUCTION)

ನೀವು ಹಿಂದಿನ ಅಧ್ಯಾಯದಲ್ಲಿ ಭಾರತ ಸ್ವಾತಂತ್ರ್ಯ ಬಂದಂದಿನಿಂದ ಬಂಡವಾಳಶಾಹಿ ಪದ್ಧತಿ ಅರ್ಥವ್ಯವಸ್ಥೆ ಮತ್ತು ಸಮಾಜವಾದಿ ಅರ್ಥ ವ್ಯವಸ್ಥೆಯ ಒಳ್ಳೆಯ ಗುಣಗಳನ್ನೊಳಗೊಂಡ ಮಿಶ್ರ ಅರ್ಥವ್ಯವಸ್ಥೆಯನ್ನು ಅನುಸರಿಸುತ್ತಿರುವುದನ್ನು ಅಧ್ಯಯನ ಮಾಡಿರುತ್ತೀರಿ. ಕ್ರಮೇಣ ಅರ್ಥವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಮತ್ತು ನಿಯಂತ್ರಿಸಲು ವಿವಿಧ ಬಗೆಯ ಕಾನೂನು ನಿಯಮಗಳನ್ನು ಜಾರಿಮಾಡಲಾಯಿತು. ಆದರೆ ಇದಕ್ಕೆ ಪ್ರತಿಯಾಗಿ ನೀತಿನಿಯಮಗಳು ಬೆಳವಣಿಗೆ ಮತ್ತು ಅಭಿವೃದ್ಧಿ ಪ್ರಕ್ರಿಯೆಗೆ ಅಡ್ಡಿಯುಂಟುಮಾಡಿದವು ಎಂದು ಕೆಲವು ವಿದ್ವಾಂಸರು ವಾದಿಸುತ್ತಾರೆ. ಭಾರತವು ತನ್ನ ಅಭಿವೃದ್ಧಿ ಯಾತ್ರೆಯನ್ನು ಬಹುತೇಕ ಸ್ಥಗಿತತೆಯ ಹಂತದಿಂದ ಪ್ರಾರಂಭಿಸಿದಾಗಿನಿಂದ ಉಳಿತಾಯದಲ್ಲಿ ಬೆಳವಣಿಗೆಯನ್ನು, ವಿವಿಧ ಸರಕುಗಳನ್ನು ಉತ್ಪಾದಿಸುವ ವೈವಿಧ್ಯಮಯ ಕೈಗಾರಿಕಾ ವಲಯದ ಬೆಳವಣಿಗೆಯನ್ನು ಸಾಧಿಸಿತು ಮತ್ತು ಆಹಾರ ಭದ್ರತೆಯ ಭರವಸೆಯನ್ನು ನೀಡುವ ಕೃಷಿ ಉತ್ಪನ್ನದ ಸುಸ್ಥಿರ ವಿಸ್ತರಣೆಯನ್ನು ಸಾಧಿಸಿತು.

1991ರಲ್ಲಿ ಭಾರತ, ಬಾಹ್ಯ ಸಾಲಕ್ಕೆ ಸಂಬಂಧಿಸಿದಂತೆ, ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿತು–ಸರ್ಕಾರವು ವಿದೇಶದಿಂದ ಪಡೆದ ಸಾಲವನ್ನು ಮರುಪಾವತಿಸಲು ಸಾಧ್ಯವಾಗಲಿಲ್ಲ; ನಾವು ಸಾಮಾನ್ಯವಾಗಿ ಪೆಟ್ರೋಲ್ ಮತ್ತು ಇತರೆ ಪ್ರಮುಖ ಸರಕುಗಳನ್ನು ಆಮದು ಮಾಡಿಕೊಳ್ಳಲು ನಿರ್ವಹಿಸುವಂತಹ ವಿದೇಶಿ ವಿನಿಮಯ ನಿಧಿಯು ಕೇವಲ ಎರಡು ವಾರಕ್ಕೂ ಸಾಕಾಗದಷ್ಟು ಮಟ್ಟಕ್ಕೆ ಕುಸಿಯಿತು. ಈ ಬಿಕ್ಕಟ್ಟು ಅಗತ್ಯ ಸರಕುಗಳ ಬೆಲೆ ಏರಿಕೆಯೊಂದಿಗೆ ಇನ್ನಷ್ಟು ಬಿಗಡಾಯಿಸಿತು. ಈ ಎಲ್ಲಾ ಅಂಶಗಳು, ಸರ್ಕಾರ ಅಭಿವೃದ್ಧಿಯ ತಂತ್ರದ ದಿಕ್ಕನ್ನು ಬದಲಾಯಿಸುವಂತಹ ಹೊಸ ನೀತಿ ಕ್ರಮಗಳನ್ನು ಜಾರಿಗೊಳಿಸುವಂತೆ ಮಾಡಿದವು. ಈ ಅಧ್ಯಾಯದಲ್ಲಿ ಬಿಕ್ಕಟ್ಟಿನ ಹಿನ್ನೆಲೆಯನ್ನು, ಸರ್ಕಾರ ಅಳವಡಿಸಿಕೊಂಡಿರುವ ಕ್ರಮಗಳನ್ನು, ಆರ್ಥಿಕತೆಯಲ್ಲಿನ ವಿವಿಧ ವಲಯದ ಮೇಲೆ ಅವುಗಳ ಪ್ರಭಾವವನ್ನು ನಾವು ಅವಲೋಕಿಸೋಣ.

## 3.2 ಹಿನ್ನೆಲೆ (BACKGROUND)

1980ರ ದಶಕದಲ್ಲಿನ ಹಣಕಾಸಿನ ಬಿಕ್ಕಟ್ಟಿನ ಮೂಲ ಭಾರತದ ಆರ್ಥಿಕತೆಯ ಆದಕ್ಷ ನಿರ್ವಹಣೆಯೆಂದು ಗುರುತಿಸಬಹುದಾಗಿದೆ. ಸರ್ಕಾರ ವಿವಿಧ ನೀತಿಗಳ ಅನುಷ್ಠಾನಕ್ಕಾಗಿ ಮತ್ತು ಅದರ ಸಾಮಾನ್ಯ ಆಡಳಿತಕ್ಕಾಗಿ ತೆರಿಗೆ ವಿಧಿಸುವುದರಿಂದ, ಸಾರ್ವಜನಿಕ ಉದ್ಯಮಗಳನ್ನು ನಡೆಸುವುದರಿಂದ, ಇತ್ಯಾದಿ ವಿವಿಧ ಮೂಲಗಳಿಂದ ನಿಧಿಯನ್ನು ಸಂಗ್ರಹಿಸುತ್ತದೆ. ವೆಚ್ಚವು ಆದಾಯಕ್ಕಿಂತ ಹೆಚ್ಚಾದಾಗ ಸರ್ಕಾರ ಕೊರತೆಯನ್ನು ನೀಗಿಸಲು ಬ್ಯಾಂಕುಗಳು ಮತ್ತು ದೇಶದೊಳಗಿನ ಜನರಿಂದ ಹಾಗೂ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುತ್ತದೆ. ನಾವು ಪೆಟ್ರೋಲಿಯಂನಂತಹ ಸರಕುಗಳನ್ನು ಆಮದು ಮಾಡಿಕೊಂಡಾಗ ಡಾಲರ್ ಮೂಲಕ ಅದನ್ನು ಪಾವತಿಸುತ್ತೇವೆ. ಆಗ ನಾವು ನಮ್ಮ ರಫ್ತಿನಿಂದ ಗಳಿಸಿದ ಡಾಲರನ್ನು ನೀಡುತ್ತೇವೆ.

ಆದಾಯ ಕಡಿಮೆ ಇದ್ದಾಗ್ಯೂ ಸರ್ಕಾರದ ಅಭಿವೃದ್ಧಿ ಕಾರ್ಯನೀತಿಗಳು ನಿರುದ್ಯೋಗ, ಬಡತನ, ಜನಸಂಖ್ಯಾ ಸ್ಫೋಟ ಮುಂತಾದ ಸವಾಲುಗಳನ್ನು ಎದುರಿಸಲು ಆದಾಯ ಮೀರಿದ ವೆಚ್ಚವನ್ನು ಅಪೇಕ್ಷಿಸಿದವು. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಮೇಲಿನ ನಿರಂತರ ವೆಚ್ಚವು ಹೆಚ್ಚಿನ ಆದಾಯವನ್ನು ಉತ್ಪತ್ತಿ ಮಾಡಲಿಲ್ಲ. ಅದೂ ಅಲ್ಲದೆ ಸರ್ಕಾರಕ್ಕೆ ಆಂತರಿಕ ಮೂಲದಿಂದ ಅಂದರೆ ತೆರಿಗೆಗಳಿಂದ ಸಾಕಷ್ಟು ಆದಾಯವನ್ನು ಸಂಗ್ರಹಿಸಲಾಗಲಿಲ್ಲ. ಸರ್ಕಾರ ತನ್ನ ಆದಾಯದ ಬಹುಪಾಲನ್ನು ಶೀಘ್ರ ಫಲ ನೀಡದಂತಹ ಸಾಮಾಜಿಕ ವಲಯ ಮತ್ತು ರಕ್ಷಣೆಗೆ ವೆಚ್ಚ ಮಾಡಿದಾಗ, ಉಳಿದ ಅದರ ಆದಾಯವನ್ನು ಹೆಚ್ಚು ದಕ್ಷವಾಗಿ ಬಳಸಿಕೊಳ್ಳುವ ಅಗತ್ಯತೆಯಿತ್ತು. ಸಾರ್ವಜನಿಕ ಉದ್ಯಮಗಳಿಂದ ಬರುವ ಆದಾಯವು (ಹೆಚ್ಚುತ್ತಿರುವ ವೆಚ್ಚವನ್ನು ಭರಿಸುವಷ್ಟು) ಅಧಿಕವಾಗಿರಲಿಲ್ಲ, ಕೆಲವೊಮ್ಮೆ ಇತರೆ ದೇಶಗಳಿಂದ ಮತ್ತು ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳಿಂದ ಸಾಲವಾಗಿ ಪಡೆದ ವಿದೇಶಿ ವಿನಿಮಯವನ್ನು

ಅನುಭೋಗದ ಅಗತ್ಯಕ್ಕಾಗಿ ಖರ್ಚು ಮಾಡಲಾಯಿತು. ಬೆಳೆಯುತ್ತಿರುವ ಅನವಶ್ಯಕ ವೆಚ್ಚವನ್ನು (ಕಡಿವಾಣವಿಲ್ಲದ ವೆಚ್ಚವನ್ನು) ಕಡಿಮೆ ಮಾಡುವ ಪ್ರಯತ್ನವಾಗಲೀ ಅಥವಾ ಹೆಚ್ಚುತ್ತಿರುವ ಆಮದನ್ನು ಸರಿದೂಗಿಸಲು ರಫ್ತನ್ನು ಹೆಚ್ಚಿಸುವ ಕಡೆ ಗಮನ ಹರಿಸುವ ಪ್ರಯತ್ನವಾಗಲೀ ನಡೆಯಲಿಲ್ಲ.

1980ರ ದಶಕದ ಕೊನೆಯಲ್ಲಿ ಸರ್ಕಾರದ ವೆಚ್ಚವು ಅದರ ಆದಾಯವನ್ನು ಮೀರಿ ಎಷ್ಟು ಬೆಳೆಯಿತೆಂದರೆ ಸಾಲಗಳ ಮೂಲಕ ವೆಚ್ಚವನ್ನು ಭರಿಸುವುದು ಸಾಧ್ಯವಾಗಲಿಲ್ಲ. ಹಲವು ಅಗತ್ಯ ಸರಕುಗಳ ಬೆಲೆ ವಿಪರೀತವಾಗಿ ಏರಿತು ಆಮದು ಬೆಳವಣಿಗೆಯು ರಫ್ತಿಗಿಂತ ಅಧಿಕವಾಗಿ ಬೆಳೆಯಿತು. ಈಗಾಗಲೇ ಗುರುತಿಸಿರುವಂತೆ ವಿದೇಶಿ ವಿನಿಮಯ ನಿಧಿಯು ಎರಡು ವಾರಗಳಷ್ಟು ಆಮದನ್ನು ಮಾಡಿಕೊಳ್ಳಲು ಬೇಕಾಗುವಷ್ಟು ಹಣಕಾಸನ್ನು ಪೂರೈಸಲೂ ಸಾಧ್ಯವಾಗದ ಮಟ್ಟಕ್ಕೆ ಕುಸಿಯಿತು. ಅಂತರರಾಷ್ಟ್ರೀಯ ಸಾಲದಾತರಿಗೆ ಬಡ್ಡಿ ನೀಡಲು ಸಾಕಾಗುವಷ್ಟು ವಿದೇಶಿ ವಿನಿಮಯ ಇರಲಿಲ್ಲ. ಹಾಗೆಯೇ ಯಾವುದೇ ದೇಶ ಅಥವಾ ಅಂತರರಾಷ್ಟ್ರೀಯ ನಿಧಿಗಾರರೂ ಸಹ ಭಾರತಕ್ಕೆ ಸಾಲ ನೀಡಲು ಒಪ್ಪಲಿಲ್ಲ.

ಈ ಸಮಯದಲ್ಲಿ ಭಾರತವು ಅಂತರರಾಷ್ಟ್ರೀಯ ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕು (IBRD) ಈಗ ವಿಶ್ವ ಬ್ಯಾಂಕ್ ಎಂದು ಜನಪ್ರಿಯವಾಗಿದೆ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮೊರೆ ಹೋಯಿತು ಮತ್ತು ಏಳು ಬಿಲಿಯನ್ ಡಾಲರನ್ನು ಬಿಕ್ಕಟ್ಟಿನ ಪರಿಹಾರಕ್ಕಾಗಿ ಸಾಲವಾಗಿ ಪಡೆಯಿತು. ಈ ಸಾಲವನ್ನು ಪಡೆಯಬೇಕಾದಲ್ಲಿ ಖಾಸಗಿ ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆದುಹಾಕುವ, ಅನೇಕ ಕ್ಷೇತ್ರಗಳಲ್ಲಿ ಸರ್ಕಾರದ ಪಾತ್ರವನ್ನು ಕಡಿತಗೊಳಿಸುವ, ಇತರ ರಾಷ್ಟ್ರಗಳ ನಡುವಿನ ವ್ಯಾಪಾರೀ ನಿರ್ಬಂಧಗಳನ್ನು ತೆಗೆದುಹಾಕುವ ಮೂಲಕ ಭಾರತವು ತನ್ನ ಆರ್ಥಿಕತೆಯನ್ನು ಮುಕ್ತಗೊಳಿಸಬೇಕೆಂದು, ಉದಾರೀಕರಣಗೊಳಿಸಬೇಕೆಂದು ಈ ಸಂಸ್ಥೆಗಳು ಅಪೇಕ್ಷಿಸಿದವು.

ಭಾರತ ವಿಶ್ವಬ್ಯಾಂಕು ಮತ್ತು IMFನ ಎಲ್ಲಾ ನಿರ್ಬಂಧಗಳನ್ನು ಒಪ್ಪಿಕೊಂಡು ಹೊಸ ಆರ್ಥಿಕ ನೀತಿಯನ್ನು (New Economic Policy-NEP) ಪ್ರಕಟಿಸಿತು. NEPಯು ವಿಶಾಲ ಶ್ರೇಣಿಯ ಆರ್ಥಿಕ ಸುಧಾರಣೆಗಳನ್ನು ಒಳಗೊಂಡಿದೆ. ಈ ನೀತಿಗಳು ಆರ್ಥಿಕತೆಯಲ್ಲಿ ಹೆಚ್ಚು ಪೈಪೋಟಿಯ ವಾತಾವರಣವನ್ನು ಸೃಷ್ಟಿಸುವುದು ಮತ್ತು ಉದ್ಯಮ ಘಟಕಗಳ ಪ್ರವೇಶ ಮತ್ತು ಬೆಳವಣಿಗೆಯ ಮೇಲಿದ್ದ ಅಡೆತಡೆಗಳನ್ನು ತೆಗೆದುಹಾಕುವುದಕ್ಕೆ ಹೆಚ್ಚು ಒತ್ತು ನೀಡಿದವು. ಈ ರೀತಿಯ ನೀತಿಗಳ ಸಮೂಹವನ್ನು ವಿಶಾಲವಾಗಿ ಎರಡು ಗುಂಪುಗಳನ್ನಾಗಿ ಮಾಡಲಾಗಿದೆ. ಸ್ಥಿರಾತ್ಮಕ ಕ್ರಮಗಳು ಮತ್ತು ರಚನಾತ್ಮಕ ಸುಧಾರಣಾ ಕ್ರಮಗಳು, ಸ್ಥಿರಾತ್ಮಕ ಕ್ರಮಗಳು ಅಲ್ಪಾವಧಿ ಕ್ರಮಗಳಾಗಿದ್ದು ಪಾವತಿ ಶಿಲ್ಕಿನಲ್ಲಿ ಉಂಟಾದ ದೌರ್ಬಲ್ಯಗಳನ್ನು ಸರಿಪಡಿಸುವುದು ಮತ್ತು ಹಣದುಬ್ಬರನ್ನು ನಿಯಂತ್ರಿಸುವುದು ಇದರ ಉದ್ದೇಶವಾಗಿದೆ. ಸರಳವಾಗಿ ಹೇಳುವುದಾದರೆ, ಸಾಕಷ್ಟು ವಿದೇಶಿ ವಿನಿಮಯ ನಿಧಿಯನ್ನು ಸಂಗ್ರಹಿಸುವುದು ಮತ್ತು ಏರಿತ್ತಿರುವ ಬೆಲೆಯನ್ನು ನಿಯಂತ್ರಿಸುವುದು. ಇನ್ನೊಂದು ಕಡೆ ರಚನಾತ್ಮಕ ಸುಧಾರಣಾ ನೀತಿಗಳು ದೀರ್ಘಾವಧಿ ಕ್ರಮಗಳಾಗಿದ್ದು, ಭಾರತದ ಆರ್ಥಿಕತೆಯ ಹಲವು ಭಾಗಗಳಲ್ಲಿರುವ ಕಾಠಿಣ್ಯತೆಗಳನ್ನು ತೆಗೆದುಹಾಕುವ ಮೂಲಕ ಆರ್ಥಿಕತೆಯ ದಕ್ಷತೆಯನ್ನು ಸುಧಾರಿಸುವುದು ಮತ್ತು ಅದರ ಅಂತರರಾಷ್ಟ್ರೀಯ ಪೈಪೋಟಿ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ನಿಟಿನಲ್ಲಿ ಸರ್ಕಾರವು ಹಲವು ನೀತಿಗಳನ್ನು ಪರಿಚಯಿಸಿತು. ಇವು ಮೂರು ಪ್ರಮುಖ ಭಾಗಗಳನ್ನು ಹೊಂದಿವೆ. ಅವುಗಳೆಂದರೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ.

## 3.3. ಉದಾರೀಕರಣ (LIBERALISATION)

ಪ್ರಾರಂಭದಲ್ಲಿಯೇ ಹೇಳಿದಂತೆ, ಆರ್ಥಿಕ ಚಟುವಟಿಕೆಗಳನ್ನು ಕ್ರಮಬದ್ಧ (ನಿಯಂತ್ರಿಸಲು) ಗೊಳಿಸುವ ಗುರಿಯನ್ನು ಹೊಂದಿದ್ದ ನಿಯಮ ಮತ್ತು ಕಾನೂನುಗಳು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪ್ರಮುಖ ತೊಡಕನ್ನುಂಟು ಮಾಡಿದ್ದವು. ಈ ಎಲ್ಲಾ ನಿರ್ಬಂಧಗಳನ್ನು ಕೊನೆಗೊಳಿಸಲು ಮತ್ತು ಆರ್ಥಿಕತೆಯ ವಿವಿಧ ವಲಯಗಳನ್ನು ಮುಕ್ತವನ್ನಾಗಿಸಲು ಉದಾರೀಕರಣವನ್ನು ಜಾರಿಗೆ ತರಲಾಯಿತು. 1980ರಲ್ಲಿ, ಕೈಗಾರಿಕಾ ಪರವಾನಗಿ, **ರಫ್ತು–ಆಮದು ನೀತಿ,** ತಾಂತ್ರಿಕ ಉನ್ನತೀಕರಣ, **ಕೋಶೀಯ ನೀತಿ** ಮತ್ತು ವಿದೇಶಿ ಹೂಡಿಕೆ

ಕ್ಷೇತ್ರಗಳಲ್ಲಿ ಕೆಲವು ಉದಾರೀಕರಣದ ಕ್ರಮಗಳನ್ನು ಜಾರಿಗೊಳಿಸಿದ್ದರೂ ಸಹ 1991ರಲ್ಲಿ ಜಾರಿಗೊಳಿಸಿದ ಕಾರ್ಯಕ್ರಮಗಳು ಇನ್ನೂ ವ್ಯಾಪಕವಾಗಿದ್ದವು. ಕೆಲವು ಪ್ರಮುಖ ಕ್ಷೇತ್ರಗಳಾದ ಕೈಗಾರಿಕಾ ವಲಯ, ಹಣಕಾಸು ವಲಯ, ತೆರಿಗೆ ಸುಧಾರಣೆ, ವಿದೇಶಿ ವಿನಿಮಯ ಮಾರುಕಟ್ಟೆ ಮತ್ತು **ವ್ಯಾಪಾರ ಹೂಡಿಕೆ ವಲಯಗಳಿಗೆ** 1991 ಮತ್ತು ನಂತರದಲ್ಲಿ ವಿಶೇಷ ಗಮನ ನೀಡಿರುವುದನ್ನು ನಾವು ಅಧ್ಯಯನ ಮಾಡೋಣ.

### ಕೈಗಾರಿಕಾ ವಲಯದ ಅನಿರ್ಬಂಧೀಕರಣ (ನಿಯಂತ್ರಣ ಮುಕ್ತತೆ) (DEREGULATION OF INDUSTRIAL SECTOR)

ಭಾರತದಲ್ಲಿ ನಿಯಂತ್ರಣದ ತಂತ್ರಗಳನ್ನು ಹಲವು ರೀತಿಯಲ್ಲಿ ಹೇರಲಾಗಿತ್ತು (i) ಕೈಗಾರಿಕಾ ಪರವಾನಗಿ ಅಡಿಯಲ್ಲಿ ಪ್ರತಿಯೊಬ್ಬ ಉದ್ಯಮಿಯು ಒಂದು ಉದ್ಯಮ ಘಟಕವನ್ನು ಸ್ಥಾಪಿಸಲು, ಮುಚ್ಚಲು ಅಥವಾ ಉತ್ಪಾದಿಸಲ್ಪಡುವ ಸರಕುಗಳ ಪ್ರಮಾಣವನ್ನು ನಿರ್ಧರಿಸಲು ಸರ್ಕಾರದ ಅಧಿಕಾರಿಗಳಿಂದ ಅನುಮತಿಯನ್ನು ಪಡೆಯಬೇಕಾಗಿತ್ತು (ii) ಹಲವು ಕೈಗಾರಿಕೆಗಳ ಸ್ಥಾಪನೆಯಲ್ಲಿ ಖಾಸಗಿ ವಲಯಕ್ಕೆ ಅವಕಾಶವಿರಲಿಲ್ಲ. (iii) ಕೆಲವು ಸರಕುಗಳನ್ನು ಕೇವಲ ಸಣ್ಣ ಕೈಗಾರಿಕೆಗಳಲ್ಲಿ ಮಾತ್ರ ಉತ್ಪಾದಿಸಬೇಕಾಗಿತ್ತು ಮತ್ತು (iv) ಕೆಲವು ಆಯ್ದ ಕೈಗಾರಿಕಾ ಉತ್ಪನ್ನಗಳ ಬೆಲೆ ನಿರ್ಧಾರ ಮತ್ತು ವಿತರಣೆಯ ಮೇಲೆ ನಿಯಂತ್ರಣವಿತ್ತು.

1991ರಲ್ಲಿ ಮತ್ತು ನಂತರದಲ್ಲಿ ಜಾರಿಗೊಳಿಸಲಾದ ಸುಧಾರಣಾ ನೀತಿಗಳು ಇವುಗಳಲ್ಲಿ ಅನೇಕ ನಿರ್ಬಂಧಗಳನ್ನು ತೆಗೆದು ಹಾಕಿದವು. ಕೆಲವು ಉತ್ಪನ್ನಗಳಾದ, ಮದ್ಯಪಾನ, ಸಿಗರೇಟ್, ಅಪಾಯಕಾರಿ ರಾಸಾಯನಿಕಗಳು, ಕೈಗಾರಿಕಾ ಸ್ಫೋಟಕಗಳು, ವಿದ್ಯುನ್ಮಾನ ಸರಕುಗಳು, ಬಾಹ್ಯಾಕಾಶ ಮತ್ತು ಡ್ರಗ್ಸ್ ಮತ್ತು ಔಷಧಿಗಳ ತಯಾರಿಕೆಯನ್ನು ಹೊರತುಪಡಿಸಿ ಇತರೆ ಎಲ್ಲಾ ಉತ್ಪನ್ನಗಳ ಮೇಲಿದ್ದ ಕೈಗಾರಿಕಾ ಪರವಾನಗಿ ನೀತಿಯನ್ನು ರದ್ದು ಪಡಿಸಲಾಯಿತು. ಪ್ರಸ್ತುತ ಸಾರ್ವಜನಿಕ ವಲಯಕ್ಕೆ ಮೀಸಲಾಗಿರುವ ಕೈಗಾರಿಕೆಗಳೆಂದರೆ ರಕ್ಷಣಾ ಉಪಕರಣಗಳು ಅಣುಶಕ್ತಿ ಉತ್ಪಾದನೆ ಮತ್ತು ರೈಲುಸಾರಿಗೆ. ಸಣ್ಣ ಕೈಗಾರಿಕೆಗಳು ಉತ್ಪಾದಿಸುತ್ತಿದ್ದ ಹಲವು ಸರಕುಗಳ ಮೀಸಲಾತಿಯನ್ನು ಈಗ ತೆಗೆದುಹಾಕಲಾಗಿದೆ. ಹಲವು ಕೈಗಾರಿಕೆಗಳಲ್ಲಿ ಬೆಲೆ ನಿರ್ಧಾರವನ್ನು ಮಾರುಕಟ್ಟೆಗೆ ಬಿಡಲಾಗಿದೆ.

### ಹಣಕಾಸು ವಲಯದ ಸುಧಾರಣೆಗಳು (FINANCIAL SECTOR REFORMS)

ಹಣಕಾಸು ವಲಯವು ಹಣಕಾಸಿನ ಸಂಸ್ಥೆಗಳಾದ, ವಾಣಿಜ್ಯ ಬ್ಯಾಂಕ್‌ಗಳು, ಹೂಡಿಕೆ ಬ್ಯಾಂಕುಗಳು, ಷೇರು ಮಾರುಕಟ್ಟೆ ಕಾರ್ಯಾಚರಣೆ ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಗಳನ್ನು ಒಳಗೊಳ್ಳುತ್ತದೆ. ಭಾರತದಲ್ಲಿ ಹಣಕಾಸು–ವಲಯವು ಭಾರತೀಯ ರಿಸರ್ವ್ ಬ್ಯಾಂಕ್ (RBI) ನಿಂದ ನಿಯಂತ್ರಿಸಲ್ಪಡುತ್ತದೆಯೆಂದು ನಿಮಗೆ ತಿಳಿದಿರಬಹುದು. ಭಾರತದಲ್ಲಿನ ಎಲ್ಲಾ ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳನ್ನು RBI ತನ್ನ ನಿಯಮ ಮತ್ತು ನಿರ್ಬಂಧಗಳ ಮೂಲಕ ನಿಯಂತ್ರಿಸುತ್ತದೆ. ಬ್ಯಾಂಕುಗಳು ತಮ್ಮ ಬಳಿ ಇಟ್ಟುಕೊಳ್ಳಬೇಕಾದ ಹಣದ ಮೊತ್ತವನ್ನು, ನಿಗದಿಪಡಿಸುವ ಬಡ್ಡಿ ದರಗಳು, ವಿವಿಧ ವಲಯಗಳಿಗೆ ನೀಡುವ ಸಾಲದ ಸ್ವರೂಪ ಮುಂತಾದವುಗಳನ್ನು RBI ನಿರ್ಧರಿಸುತ್ತದೆ. ಹಣಕಾಸು ವಲಯದ ಸುಧಾರಣೆಗಳ ಗುರಿಗಳಲ್ಲಿ ಒಂದು ಮುಖ್ಯವಾದುದೆಂದರೆ, ಹಣಕಾಸು ವಲಯದ ನಿಯಂತ್ರಕನಾಗಿದ್ದ RBI ನ ಪಾತ್ರವನ್ನು ಕಡಿಮೆಗೊಳಿಸಿ ಅದನ್ನು ಸಹಾಯಕನನ್ನಾಗಿ ಮಾರ್ಪಡಿಸುವುದಾಗಿದೆ. ಇದರರ್ಥ ಹಣಕಾಸು ವಲಯ RBIನ ಸಲಹೆಯನ್ನು ಕೇಳದೆಯೇ ಹಲವು ವಿಷಯಗಳಲ್ಲಿ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಬಹುದಾಗಿದೆ. ಸುಧಾರಣಾ ನೀತಿಗಳು ಖಾಸಗಿ ವಲಯದ ಬ್ಯಾಂಕುಗಳು ಭಾರತೀಯ ಮತ್ತು ವಿದೇಶಿ ಬ್ಯಾಂಕುಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿವೆ. ಬ್ಯಾಂಕುಗಳಲ್ಲಿ ವಿದೇಶಿ ಹೂಡಿಕೆಯ ಮಿತಿಯನ್ನು ಶೇಕಡ 50ಕ್ಕೆ ಹೆಚ್ಚಿಸಲಾಗಿದೆ. ಕೆಲವು ಷರತ್ತುಗಳನ್ನು ಈಡೇರಿಸುವಂತಹ ಬ್ಯಾಂಕುಗಳಿಗೆ RBI ಅನುಮೋದನೆ ಇಲ್ಲದೆ ಹೊಸ ಶಾಖೆಗಳನ್ನು ತೆರೆಯುವ ಸ್ವಾತಂತ್ರವನ್ನು ನೀಡಲಾಗಿದೆ ಮತ್ತು ಇದ್ದಂತ ಶಾಖೆಗಳ ಜಾಲವನ್ನು ವಿಸ್ತರಿಸುವ ವಿವೇಚನೆಯನ್ನು ಅವುಗಳಿಗೆ ಬಿಡಲಾಗಿದೆ. ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಬ್ಯಾಂಕುಗಳಿಗೆ ಸಂಪನ್ಮೂಲಗಳನ್ನು ಸೃಷ್ಟಿಸುವ ಅನುಮತಿಯನ್ನು ನೀಡಲಾಗಿದ್ದರೂ ಖಾತೆದಾರರು ಹಾಗೂ ದೇಶದ ಹಿತದೃಷ್ಟಿಯಿಂದ ಕೆಲವು ಆಡಳಿತಾತ್ಮಕ ವಿಷಯಗಳನ್ನು RBI ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರ (FII) ರಾದ ವರ್ತಕ ಬ್ಯಾಂಕ್‌ರರು, ಪಾರಸ್ಪರಿಕ ನಿಧಿಗಳು ಮತ್ತು ಪಿಂಚಣಿ ನಿಧಿಗಳಿಗೆ ಈಗ ಭಾರತೀಯ ಹಣಕಾಸು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಅವಕಾಶ ನೀಡಲಾಗಿದೆ.

## ತೆರಿಗೆ ಸುಧಾರಣೆ (TAX REFORMS)

ತೆರಿಗೆ ಸುಧಾರಣೆಗಳು ಸರ್ಕಾರದ ತೆರಿಗೆ ನೀತಿ ಮತ್ತು ಸಾರ್ವಜನಿಕ ವೆಚ್ಚಗಳಿಗೆ ಸಂಬಂಧಿಸಿದ ಸುಧಾರಣೆಗಳಾಗಿದ್ದು ಇವುಗಳನ್ನು ಒಟ್ಟಾರೆ ಕೋಶೀಯ ನೀತಿ ಎಂದು ಕರೆಯಲಾಗುತ್ತದೆ. ತೆರಿಗೆಗಳಲ್ಲಿ ಎರಡು ವಿಧಗಳಿವೆ, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ. ಪ್ರತ್ಯಕ್ಷ ತೆರಿಗೆಗಳು ವೈಯಕ್ತಿಕ ಆದಾಯದ ಮೇಲಿನ ತೆರಿಗೆ ಹಾಗೂ ವ್ಯವಹಾರೋದ್ಯಮಗಳ ಲಾಭದ ಮೇಲಿನ ತೆರಿಗೆಗಳನ್ನು ಒಳಗೊಂಡಿದೆ. 1991 ರಿಂದ ವ್ಯಕ್ತಿಗಳ ವರಮಾನಗಳ ಮೇಲಿನ ತೆರಿಗೆಗಳಲ್ಲಿ ಸತತವಾಗಿ ಇಳಿಕೆಯಾಗುತ್ತಿದ್ದು, ಆದಾಯದ ಉಳಿತಾಯ ಮತ್ತು ಸ್ವಯಂ ಆದಾಯದ ಮೇಲಿನ ಅಧಿಕ ದರದ ತೆರಿಗೆಯು ತೆರಿಗೆ ತಪ್ಪಿಸಿಕೊಳ್ಳುವುದಕ್ಕೆ ಕಾರಣವಾಗುತ್ತದೆ ಎಂದು ತಿಳಿದು 1991 ರಿಂದ ವ್ಯಕ್ತಿಗಳ ವರಮಾನಗಳ ಮೇಲಿನ ತೆರಿಗೆಗಳಲ್ಲಿ ಸತತವಾಗಿ ಇಳಿಕೆ ಕಂಡುಬಂದಿದೆ. ಮಿತವಾದ ಆದಾಯ ತೆರಿಗೆ ದರವು ಉಳಿತಾಯವನ್ನು ಹಾಗೂ ಆದಾಯದ ಸ್ವಯಂ ಘೋಷಣೆಗೆ ಪ್ರೋತ್ಸಾಹ ನೀಡುವುದೆಂದು ಈಗ ವ್ಯಾಪಕವಾಗಿ ಒಪ್ಪಿಕೊಂಡಿರುವ ವಿಷಯವಾಗಿದೆ. ಮೊದಲು ಅಧಿಕವಾಗಿದ್ದ ಕಾರ್ಪೋರೇಷನ್ ತೆರಿಗೆ ದರವನ್ನು ನಿಧಾನವಾಗಿ ಕಡಿಮೆಮಾಡಲಾಗಿದೆ. ಸರಕು-ಸೇವೆಗಳ ಸಾಮಾನ್ಯ ರಾಷ್ಟ್ರೀಯ ಮಾರುಕಟ್ಟೆಯ ಸ್ಥಾಪನೆಗೆ ಸಹಾಯ ಮಾಡಲು ಪರೋಕ್ಷ ತೆರಿಗೆ, ಸರಕುಗಳ ಮೇಲೆ ವಿಧಿಸಲಾಗುವ ತೆರಿಗೆಗಳನ್ನು ಸುಧಾರಿಸುವಂತಹ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ಕ್ಷೇತ್ರದ ಸುಧಾರಣೆಯಲ್ಲಿನ ಇನ್ನೊಂದು ಭಾಗವೆಂದರೆ ಸರಳೀಕರಣ, ತೆರಿಗೆ ಪಾವತಿದಾರರು ಈ ತೆರಿಗೆ ನೀತಿಗಳನ್ನು ಉತ್ತಮವಾಗಿ ಅನುಸರಿಸುವುದನ್ನು ಉತ್ತೇಜಿಸಲು ಹಲವು ಕಾರ್ಯ ವಿಧಾನಗಳನ್ನು ಸರಳಗೊಳಿಸಲಾಗಿದೆ ಮತ್ತು ದರಗಳನ್ನು ಗಣನೀಯವಾಗಿ ಕಡಿಮೆಮಾಡಲಾಗಿದೆ.

## ವಿದೇಶಿ ವಿನಿಮಯ ಸುಧಾರಣೆ (FOREIGN EXCHANGE REFORMS)

ಬಾಹ್ಯವಲಯದಲ್ಲಿನ ಮೊದಲ ಪ್ರಮುಖ ಸುಧಾರಣೆಯನ್ನು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮಾಡಲಾಯಿತು. 1991ರಲ್ಲಿ ಪಾವತಿ ಶಿಲ್ಕುವಿನ ಬಿಕ್ಕಟ್ಟನ್ನು ತಕ್ಷಣವೇ ಪರಿಹರಿಸುವಂತಹ ಒಂದು ಕ್ರಮವಾಗಿ, ರೂಪಾಯಿಯನ್ನು ವಿದೇಶಿ ಕರೆನ್ಸಿಗಳ ಎದುರು ಅಪಮೌಲ್ಯ ಮಾಡಲಾಯಿತು. ಇದು ವಿದೇಶಿ ವಿನಿಮಯದ ಒಳ ಹರಿವಿನ ಹೆಚ್ಚಳಕ್ಕೆ ಅವಕಾಶ ಮಾಡಿಕೊಟ್ಟಿತು. ಇದು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ನಿರ್ಧಾರವನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಿತು.

ಈಗ ಹೆಚ್ಚು ಸಂದರ್ಭಗಳಲ್ಲಿ ಮಾರುಕಟ್ಟೆಯ ವಿನಿಮಯ ದರ ನಿರ್ಧಾರವು ವಿದೇಶಿ ವಿನಿಮಯದ ಬೇಡಿಕೆ ಮತ್ತು ಪೂರೈಕೆಗಳನ್ನು ಅವಲಂಬಿಸಿದೆ.

## ವ್ಯಾಪಾರ ಮತ್ತು ಹೂಡಿಕೆ ನೀತಿಯ ಸುಧಾರಣೆಗಳು (TRADE AND INVESTMENT POLICY REFORMS)

ಕೈಗಾರಿಕಾ ಉತ್ಪನ್ನದ ಅಂತರರಾಷ್ಟ್ರೀಯ ಸ್ಪರ್ಧಾ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಆರ್ಥಿಕತೆಯೊಳಗೆ ವಿದೇಶಿ ಹೂಡಿಕೆ ಮತ್ತು ತಂತ್ರಜ್ಞಾನ ಹೆಚ್ಚು ಹರಿದುಬರುವಂತೆ ಪ್ರೋತ್ಸಾಹಿಸಲು ವ್ಯಾಪಾರ ಮತ್ತು ಹೂಡಿಕೆ ಕ್ರಮದ ಮೇಲಿನ ಉದಾರೀಕರಣವನ್ನು ಜಾರಿಗೆ ತರಲಾಯಿತು. ಸ್ಥಳೀಯ ಕೈಗಾರಿಕೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಆಧುನಿಕ ತಂತ್ರಜ್ಞಾನದ ಅಳವಡಿಕೆಯು ಇದರ ಉದ್ದೇಶವಾಗಿದೆ.

ದೇಶೀಯ ಉದ್ದಿಮೆಗಳನ್ನು ರಕ್ಷಿಸಲು ಭಾರತ ಆಮದು ಮೇಲಿನ ಪರಿಮಾಣಾತ್ಮಕ ನಿರ್ಬಂಧದ ಆಡಳಿತ ಕ್ರಮವನ್ನು ಅನುಸರಿಸುತ್ತಿತ್ತು. ಇದನ್ನು ಆಮದು ಮೇಲಿನ ಬಿಗಿಯಾದ ನಿಯಂತ್ರಣ ಮತ್ತು ಸುಂಕ ದರವನ್ನು ಅತ್ಯಧಿಕ ಮಟ್ಟದಲ್ಲಿಡುವುದರ ಮೂಲಕ ಪ್ರೋತ್ಸಾಹಿಸಲಾಗಿತ್ತು. ಈ ನೀತಿಗಳು ದಕ್ಷತೆ ಮತ್ತು ಸ್ಪರ್ಧಾ ಸಾಮರ್ಥ್ಯವನ್ನು ಕಡಿಮೆ ಮಾಡುವ ಮೂಲಕ ತಯಾರಿಕಾ ವಲಯದ ಮಂದಗತಿಯ ಬೆಳವಣಿಗೆಗೆ ಕಾರಣವಾದವು. ವ್ಯಾಪಾರ ನೀತಿ ಸುಧಾರಯಣೆಯ ಗುರಿಗಳೆಂದರೆ, (i) ಆಮದು ಮತ್ತು ರಫ್ತುಗಳ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕುವುದು (ii) ಸುಂಕ ದರಗಳನ್ನು ಕಡಿಮೆ ಮಾಡುವುದು (iii) ಉತ್ಪಾದಕರು ಮಾಡಿಕೊಳ್ಳುತ್ತಿದ್ದ ಆಮದು ಮೇಲಿನ ಪರಿವಾನಗಿಯನ್ನು ತೆಗೆದುಹಾಕುವುದು. ಅಪಾಯಕಾರಿ ಮತ್ತು ಪರಿಸರಾತ್ಮಕವಾಗಿ ಸೂಕ್ಷ್ಮ ಕೈಗಾರಿಕೆಗಳನ್ನು ಹೊರತುಪಡಿಸಿ, ಆಮದು ಪರವಾನಗಿಯನ್ನು ನಿಷೇಧಿಸಲಾಗಿದೆ. ಏಪ್ರಿಲ್ 2001ರಿಂದ ತಯಾರಿಕಾ ಅನುಭೋಗಿ ಸರಕುಗಳು ಮತ್ತು ಕೃಷಿ ಉತ್ಪನ್ನಗಳ ಆಮದು ಮೇಲಿನ ಪರಿಮಾಣಾತ್ಮಕ ನಿರ್ಬಂಧವನ್ನೂ ಸಹ ಸಂಪೂರ್ಣವಾಗಿ ತೆಗೆದುಹಾಕಲಾಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಸರಕುಗಳ ಪೈಪೋಟಿ ಸಾಮರ್ಥ್ಯವನ್ನು ಹೆಚ್ಚಿಸಲು ರಫ್ತು ಸುಂಕಗಳನ್ನು ತೆಗೆದು ಹಾಕಲಾಗಿದೆ.




## ನೀವೇ ಮಾಡಿರಿ
## (Work These Out)

- ರಾಷ್ಟ್ರೀಕೃತ ಬ್ಯಾಂಕು, ಖಾಸಗೀ ಬ್ಯಾಂಕು, ವಿದೇಶಿ ಖಾಸಗೀ ಬ್ಯಾಂಕು, FII ಮತ್ತು ಪಾರಸ್ಪರಿಕ ನಿಧಿ ಇವುಗಳಿಗೆ ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆ ಕೊಡಿ.
- ಸ್ಥಳೀಯ ಬ್ಯಾಂಕೊಂದಕ್ಕೆ ಪಾಲಕರೊಂದಿಗೆ ಭೇಟಿ ನೀಡಿರಿ. ಅದು ನಿರ್ವಹಿಸುವ ಕಾರ್ಯಗಳನ್ನು ಗಮನಿಸಿ ಮತ್ತು ಗುರುತಿಸಿ, ಈ ಬಗ್ಗೆ ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ ಮತ್ತು ಅದರ ಮೇಲೆ ಒಂದು ಪಟವನ್ನು ತಯಾರಿಸಿ.
- ಮುಂದಿನವುಗಳನ್ನು ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನಾಗಿ ವಿಂಗಡಿಸಿ ಮಾರಾಟ ತೆರಿಗೆ, ಆಮದು–ರಫ್ತು ಸುಂಕ, ಆಸ್ತಿ ತೆರಿಗೆ, ಮರಣ ತೆರಿಗೆ, ಮೌಲ್ಯವರ್ಧಿತ ತೆರಿಗೆ (VAT), ಆದಾಯ ತೆರಿಗೆ.
- ನಿಮ್ಮ ಪೋಷಕರು ತೆರಿಗೆ ಪಾವತಿದಾರರಾಗಿದ್ದಾರೆಯೇ ಎಂದು ತಿಳಿದುಕೊಳ್ಳಿ, ಹೌದಾದರೆ ಏಕೆ ಮತ್ತು ಹೇಗೆ ತೆರಿಗೆ ಪಾವತಿಸುತ್ತಾರೆ?
- ನಿಮಗೆ ತಿಳಿದಿದೆಯೆ? ಅನೇಕ ವರ್ಷಗಳವರೆಗೆ ದೇಶಗಳು ವಿದೇಶಿ ಸಂದಾಯಗಳಿಗಾಗಿ ಚಿನ್ನ ಮತ್ತು ಬೆಳ್ಳಿಯನ್ನು ನಿಧಿಯಾಗಿ ತಮ್ಮಲ್ಲಿ ಇಟ್ಟುಕೊಳ್ಳುತ್ತಿದ್ದವು. ಈಗ ನಾವು ವಿದೇಶಿ ವಿನಿಮಯ ನಿಧಿಯನ್ನು ಯಾವ ರೂಪದಲ್ಲಿ ಇಟ್ಟುಕೊಳ್ಳುತ್ತೇವೆ. ದಿನಪತ್ರಿಕೆ, ನಿಯತಕಾಲಿಕೆಗಳು ಮತ್ತು ಆರ್ಥಿಕ ಸಮೀಕ್ಷೆಗಳಿಂದ ನಾವು ಹೊಂದಿರುವ ವಿದೇಶಿ ವಿನಿಮಯ ಸಂಗ್ರಹವನ್ನು ಕಂಡುಹಿಡಿಯಿರಿ. ಜೊತೆಗೆ ಈ ಕೆಳಗಿನ ರಾಷ್ಟ್ರಗಳ ವಿದೇಶಿ ಹಣ ಮತ್ತು ಅವುಗಳೊಂದಿಗೆ ರೂಪಾಯಿಯ ವಿನಿಮಯ ದರವನ್ನು ಕಂಡುಕೊಳ್ಳಿರಿ.

| ರಾಷ್ಟ್ರ | ಹಣ | ಭಾರತೀಯ ರೂಪಾಯಿಯಲ್ಲಿ ವಿದೇಶಿ ಹಣದ 1 (ಒಂದು) ಘಟಕದ ಮೌಲ್ಯ |
|---|---|---|
| USA ಅಮೆರಿಕಾ | | ರೂ. |
| UK ಇಂಗ್ಲೆಂಡ್ | | ರೂ. |
| ಜಪಾನ್ | | ರೂ. |
| ಚೀನಾ | | ರೂ. |
| ಕೊರಿಯಾ | | ರೂ. |
| ಸಿಂಗಪೂರ್ | | ರೂ. |
| ಜರ್ಮನಿ | | ರೂ. |

## 3.4 ಖಾಸಗೀಕರಣ (PRIVATISATION)

ಸರ್ಕಾರಿ ಒಡೆತನದ ಉದ್ಯಮ ಸಂಸ್ಥೆಗಳ ಒಡೆತನ ಅಥವಾ ನಿರ್ವಹಣೆಯನ್ನು ಬಿಟ್ಟುಕೊಡುವುದೆಂದು ಇದರ ಅರ್ಥ.ಎರಡು ರೀತಿಯಲ್ಲಿ ಸರ್ಕಾರಿ ಸಂಸ್ಥೆಗಳು ಖಾಸಗಿ ಸಂಸ್ಥೆಗಳಾಗಿ ಪರಿವರ್ತಿತವಾಗುತ್ತವೆ. (i) ಸಾರ್ವಜನಿಕ ವಲಯದ ಕಂಪನಿಗಳ ಒಡೆತನ ಮತ್ತು ನಿರ್ವಹಣೆಯಿಂದ ಸರ್ಕಾರ ಹೊರಹೋಗುವುದು ಮತ್ತು / ಅಥವಾ (ii) ಸಾರ್ವಜನಿಕ ವಲಯದ ಕಂಪನಿಗಳನ್ನು ಸಾರಸಗಟು ಮಾರಾಟ ಮಾಡುವುದು. ಸಾರ್ವಜನಿಕ ವಲಯದ ಉದ್ದಿಮೆ ಸಂಸ್ಥೆಗಳ (PSEs) ಈಕ್ವಿಟಿ ಷೇರಿನ ಒಂದು ಭಾಗವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದಕ್ಕೆ "ಹೂಡಿಕೆ ಹಿಂತೆಗೆತ" ಎಂದು ಕರೆಯುತ್ತೇವೆ. ಸರ್ಕಾರದ ಪ್ರಕಾರ ಈ ಮಾರಾಟದ ಉದ್ದೇಶವು ಹಣಕಾಸಿನ ಶಿಸ್ತನ್ನು ತರುವುದು ಮತ್ತು ಆಧುನೀಕರಣದ ಸೌಲಭ್ಯವನ್ನು ಒದಗಿಸುವುದಾಗಿತ್ತು. ಸಾರ್ವಜನಿಕ ವಲಯದ

ಘಟಕ (PSUs)ಗಳ ಕಾರ್ಯವೈಖರಿಯನ್ನು ಸುಧಾರಿಸಲು, ಖಾಸಗಿ ಬಂಡವಾಳ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದೆಂಬುದು ಕೂಡ ಸರ್ಕಾರದ ಚಿಂತನೆಯಾಗಿತ್ತು. ವಿದೇಶಿ ನೇರ ಹೂಡಿಕೆ (FDI)ಯ ಒಳಹರಿವಿಗೆ ಖಾಸಗೀಕರಣವು ಬಲವಾದ ಉತ್ತೇಜನ ನೀಡಬಹುದೆಂಬುದು ಸರ್ಕಾರದ ಆಲೋಚನೆಯಾಗಿತ್ತು.

ಸರ್ಕಾರ PSUಗಳಿಗೆ ಆಡಳಿತಾತ್ಮಕ ನಿರ್ಧಾರ ತೆಗೆದುಕೊಳ್ಳುವ ಸ್ವಾಯತ್ತತೆಯನ್ನು ನೀಡುವ ಮೂಲಕ ಅವುಗಳ ದಕ್ಷತೆಯನ್ನು ಸುಧಾರಿಸುವ ಪ್ರಯತ್ನವನ್ನು ಮಾಡಿದೆ. ಉದಾಹರಣೆಗೆ, ಕೆಲವು PSUಗಳು ಮಹಾರತ್ನ, ನವರತ್ನ ಮತ್ತು ಮಿನಿರತ್ನಗಳಂತಹ ವಿಶೇಷ ಸ್ಥಾನಮಾನವನ್ನು ಪಡೆದಿವೆ. (ಪೆಟ್ಟಿಗೆ 3.1ನ್ನು ನೋಡಿ).

**ಪೆಟ್ಟಿಗೆ : 3.1 ನವರತ್ನ ಮತ್ತು ಸಾರ್ವಜನಿಕ ಉದ್ಯಮ ನೀತಿಗಳು**

ರಾಜಾ ವಿಕ್ರಮಾದಿತ್ಯನ ಆಸ್ಥಾನದಲ್ಲಿ 'ನವರತ್ನ'ಗಳೆಂದು ಗುರುತಿಸಲ್ಪಡುತ್ತಿದ್ದ ಒಂಬತ್ತು ಮಂದಿ ವಿದ್ವಾಂಸರಿದ್ದುದನ್ನು ನೀವು ಬಾಲ್ಯದಲ್ಲಿ ತಿಳಿದಿರಬಹುದು. ಇವರು ಕಲೆ, ಸಾಹಿತ್ಯ, ಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಪ್ರಾವಿಣ್ಯತೆ ಪಡೆದವರಾಗಿದ್ದರು. 1996ರಲ್ಲಿ ಸರ್ಕಾರವು PSU ಗಳ ಕಾರ್ಯದಕ್ಷತೆಯನ್ನು ಹೆಚ್ಚಿಸಲು, ವೃತ್ತಿಪರತೆ ಮೂಡಿಸಲು ಮತ್ತು ಮುಕ್ತಗೊಂಡ ಜಾಗತಿಕ ಸನ್ನಿವೇಶದಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಒಂಭತ್ತು ಪ್ರಮುಖಕಗಳನ್ನು ಮಹಾರತ್ನ, ನವರತ್ನ ಮತ್ತು ಮಿನಿರತ್ನಗಳೆಂದು ಘೋಷಿಸಿತು. ಸಮರ್ಥ ಕಾರ್ಯನಿರ್ವಹಣೆ ಮತ್ತು ಲಾಭದಾಯಕತೆಯನ್ನು ಹೆಚ್ಚಿಸಲು ಅಗತ್ಯವಿರುವ ವಿವಿಧ ನಿರ್ಧಾರಗಳನ್ನು ಕೈಗೊಳ್ಳಲು ಈ ಉದ್ಯಮಗಳಿಗೆ ಹೆಚ್ಚಿನ ಆಡಳಿತಾತ್ಮಕ ಮತ್ತು ಕಾರ್ಯನಿರ್ವಹಣಾ ಸ್ವಾಯತ್ತತೆಯನ್ನು ನೀಡಲಾಗಿದೆ. ಕೆಲವು ಪ್ರಮುಖ ಸಾರ್ವಜನಿಕ ಉದ್ದಿಮೆಗಳ ಸ್ಥಾನಮಾನ ಈ ಕೆಳಕಂಡಂತಿದೆ.

(1) ಮಹಾರತ್ನಗಳು:–

(ಎ) ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿ. (ಬಿ) ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿ.

(2) ನವರತ್ನಗಳು:–

(ಎ) ಹಿಂದೂಸ್ಥಾನ್ ಏರೋನಾಟಿಕಲ್ ಲಿ., (HAL). (ಬಿ) ಮಹಾನಗರ ದೂರವಾಣಿ ನಿಗಮ ಲಿ., (MTNL),

(3) ಮಿನಿರತ್ನಗಳು:–

(ಎ) ಭಾರತ್ ಸಂಚಾರ್ ನಿಗಮ ಲಿ.(ಬಿ.ಎಸ್.ಎನ್.ಎಲ್.)

(ಬಿ) ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಲಿ. (ಎ.ಎ.ಐ)

(ಸಿ) ಇಂಡಿಯನ್ ರೈಲ್ವೆ ಕೇಟರಿಂಗ್ ಅಂಡ್ ಟೂರಿಸಂ ಕಾರ್ಪೊರೇಷನ್ ಲಿ.

ಲಾಭದಾಯಕವಾದ ಈ ಸಾರ್ವಜನಿಕ ಉದ್ದಿಮೆಗಳಲ್ಲಿ ಹೆಚ್ಚಿನವುಗಳನ್ನು 1950 ಮತ್ತು 1960 ರಲ್ಲಿ ಸಾರ್ವಜನಿಕ ನೀತಿಯ ಉದ್ದೇಶ ಸ್ವಾವಲಂಬನೆ ಆಗಿದ್ದಾಗ ಸ್ಥಾಪಿಸಲಾಗಿದ್ದವುಗಳಾಗಿವೆ. ಸಾರ್ವಜನಿಕರಿಗೆ ಮೂಲ ಸೌಕರ್ಯಗಳನ್ನು ಪೂರೈಸುವ ಮತ್ತು ನೇರ ಉದ್ಯೋಗವನ್ನು ಒದಗಿಸುವ ದೃಷ್ಟಿಯಿಂದ ಇವುಗಳನ್ನು ಸ್ಥಾಪನೆ ಮಾಡಲಾಗಿತ್ತು. ಅದೇ ರೀತಿ ಉತ್ತಮ ಗುಣಮಟ್ಟದ ವಸ್ತುಗಳು ಕಡಿಮೆ ಬೆಲೆಗೆ ಜನರನ್ನು ತಲುಪುವಂತೆ ಮಾಡುವುದು ಹಾಗೂ ಶೇರುದಾರರಿಗೆ ಕಂಪನಿಗಳೇ ಜವಾಬ್ದಾರರಾಗುವಂತೆ ಮಾಡುವುದೂ ಕೂಡ ಇವುಗಳ ಸ್ಥಾಪನೆಯ ಆಶಯವಾಗಿತ್ತು.

ಸ್ಥಾನಮಾನ (ಮಹಾರತ್ನ, ನವರತ್ನ ಇತ್ಯಾದಿ) ಗಳನ್ನು ನೀಡಿದ್ದು ಈ ಕಂಪನಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತಿವೆ. ಸಾರ್ವಜನಿಕ ಉದ್ದಿಮೆಗಳ ವಿಸ್ತರಣೆಗೆ ಸಹಾಯಕವಾಗಿ ಅವುಗಳನ್ನು ವಿಶ್ವದರ್ಜೆಗೇರಿಸುವ ಬದಲು ಸರ್ಕಾರವು ಹೂಡಿಕೆ ಹಿಂತೆಗತದ ಮೂಲಕ ಅವುಗಳನ್ನು ಭಾಗಶ: ಖಾಸಗೀಕರಣಗೊಳಿಸುತ್ತಿದೆಯೆಂದು ಕೆಲವು ವಿದ್ವಾಂಸರು ಆಪಾದಿಸುತ್ತಾರೆ. ಇತ್ತೀಚೆಗೆ ಅವುಗಳನ್ನು ಸಾರ್ವಜನಿಕ ವಲಯದಲ್ಲಿಯೇ ಉಳಿಸಿಕೊಂಡು ವಿಶ್ವಮಾರುಕಟ್ಟೆಯಲ್ಲಿ ವಿಸ್ತರಣೆಗೊಳ್ಳಲು ಮತ್ತು ಹಣಕಾಸು ಮಾರುಕಟ್ಟೆಯಲ್ಲಿ ಸ್ವಸಾಮರ್ಥ್ಯದಿಂದ ಸಂಪನ್ಮೂಲಗಳನ್ನು ಸಂಗ್ರಹಿಸುವ ಅವಕಾಶ ನೀಡಲು ಸರ್ಕಾರ ನಿರ್ಧರಿಸಿದೆ.



### ನೀವೇ ಮಾಡಿರಿ
### (Work These Out)

- ಕೆಲವು ವಿದ್ವಾಂಸರು ಹೇಳುವಂತೆ ಸಾರ್ವಜನಿಕ ಉದ್ಯಮಗಳ ಕಾರ್ಯನಿರ್ವಹಣೆಯನ್ನು ಉತ್ತಮಪಡಿಸಲು ಜಗತ್ತಿನಾದ್ಯಂತ ಹೆಚ್ಚುತ್ತಿರುವ ಖಾಸಗೀಕರಣದ ಅಲೆಯೇ ಹೂಡಿಕೆ ಹಿಂತೆಗೆತವಾಗಿದೆ ಮತ್ತು ಕೆಲವರು ಹೇಳುವಂತೆ ಹೂಡಿಕೆ ಹಿಂತೆಗತವು ಸಾರ್ವಜನಿಕ ಆಸ್ತಿಗಳನ್ನು ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾರಾಟ ಮಾಡುವುದಾಗಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?
- ನವರತ್ನ ಉದ್ಯಮಿಗಳಿಗೆ ಸಂಬಂಧಿಸಿದ ಮತ್ತು ಪ್ರಮುಖವೆಂದು ಭಾವಿಸಿರುವ 10–15 ಸುದ್ದಿ ತುಣುಕುಗಳನ್ನು ನೀವು ದಿನಪತ್ರಿಕೆಗಳಿಂದ ಸಂಗ್ರಹಿಸಿ, ಒಂದು ಭಿತ್ತಿ ಪತ್ರವನ್ನು ತಯಾರಿಸಿರಿ. ಜೊತೆಗೆ ಈ ಕಾರ್ಖಾನೆಗಳ ಜಾಹೀರಾತುಗಳು ಮತ್ತು ಚಿಹ್ನೆ(Logos)ಗಳನ್ನು ಸಂಗ್ರಹಿಸಿ, ಇವುಗಳನ್ನು ತಮ್ಮ ಕಾಲೇಜಿನ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ತರಗತಿಯಲ್ಲಿ ಚರ್ಚಿಸಿ.
- ಕೇವಲ ನಷ್ಟದ ಉದ್ಯಮಗಳನ್ನು ಮಾತ್ರ ಖಾಸಗೀಕರಿಸಿಬೇಕೆಂದು ನೀವು ಆಲೋಚಿಸುತ್ತಿರುವಿರಾ? ಏಕೆ?
- ಸಾರ್ವಜನಿಕ ಉದ್ಯಮಗಳ ನಷ್ಟವನ್ನು ಸರ್ಕಾರದ ಆಯವ್ಯಯದಲ್ಲಿ ಭರಿಸಬೇಕು. ನೀವು ಈ ಹೇಳಿಕೆಯನ್ನು ಒಪ್ಪುವಿರಾ? ಚರ್ಚಿಸಿ.

## 3.5 ಜಾಗತೀಕರಣ (GLOBALIZATION)

ಜಾಗತೀಕರಣವು ದೇಶದ ಆರ್ಥಿಕತೆಯನ್ನು ಜಗತ್ತಿನ ಆರ್ಥಿಕತೆಯೊಂದಿಗೆ ಜೋಡಿಸುವ ಅರ್ಥವನ್ನು ಸಾಮಾನ್ಯವಾಗಿ ಹೊಂದಿದ್ದರೂ ಅದು ಒಂದು ಸಂಕೀರ್ಣ ಸಂಗತಿಯಾಗಿದೆ. ಇದು ಪರಸ್ಪರಾವಲಂಬನೆ ಮತ್ತು ಸಮನ್ವಯತೆಯಗೆ ವರ್ಗಾವಣೆಯಾಗುವ ಗುರಿಯನ್ನು ಹೊಂದಿರುವ ಹಲವು ನೀತಿಗಳು ಗುಂಪಿನ ಒಂದು ಪ್ರತಿಫಲವಾಗಿದೆ. ವಿಶ್ವವನ್ನು ಪರಸ್ಪರಾವಲಂಬಿಯನ್ನಾಗಿ ಮಾಡುವ ಹಾಗೂ ಒಗ್ಗೂಡುವಿಕೆಯಡೆಗೆ ಪರಿವರ್ತಿಸುವ ವಿವಿಧ ನೀತಿಗಳ ಪರಿಣಾಮವೇ ಜಾಗತೀಕರಣವಾಗಿದೆ.ಇದು ಆರ್ಥಿಕ ಸಾಮಾಜಿಕ ಮತ್ತು ಭೌಗೋಳಿಕ ಸೀಮೆಗಳನ್ನು ದಾಟಿಹೋಗುವ ಜಾಲಗಳ ಸೃಷ್ಟಿ ಮತ್ತು ಚಟುವಟಿಕೆಗಳನ್ನು ಒಳಗೊಂಡಿದೆ.

ಜಾಗತೀಕರಣವು, ಸಹಸ್ರ ಮೈಲು ದೂರದಲ್ಲಿ ನಡೆಯುವ ಘಟನೆಗಳಿಂದ ಭಾರತದಲ್ಲಿ ನಡೆಯುವ ಘಟನೆಗಳು ಪ್ರಭಾವಿತವಾಗುವಂತೆ ಸಂಪರ್ಕ ಸೂತ್ರವನ್ನು ಜೋಡಿಸುವ ಪ್ರಯತ್ನ ಮಾಡುತ್ತದೆ. ಇದು ಇಡೀ ವಿಶ್ವವನ್ನು ಅಖಂಡವಾಗಿ ಪರಿವರ್ತಿಸುತ್ತದೆ ಅಥವಾ ಗಡಿರಹಿತ ಪ್ರಪಂಚವನ್ನು ಸೃಷ್ಟಿಸುತ್ತದೆ.

**ಹೊರಗುತ್ತಿಗೆ (Outsourcing):** ಇದು ಜಾಗತೀಕರಣ ಪ್ರಕ್ರಿಯೆಯ ಒಂದು ಪ್ರಮುಖ ಪ್ರತಿಫಲವಾಗಿ ಹೊರಹೊಮ್ಮಿದೆ. ಹೊರಗುತ್ತಿಗೆಯಲ್ಲಿ ಒಂದು ಕಂಪನಿಯು ಕೆಲವು ಸೇವೆಗಳನ್ನು ನಿಯಮಿತವಾಗಿ ಬಾಹ್ಯ ಮೂಲಗಳಿಂದ ಎರವಲು ಪಡೆಯುತ್ತದೆ, ಹೆಚ್ಚಾಗಿ ಇತರೆ ದೇಶಗಳಿಂದ ಪಡೆಯುತ್ತದೆ. ಇದಕ್ಕೆ ಮೊದಲು ಈ ಸೇವೆಗಳನ್ನು ಆಂತರಿಕವಾಗಿ ಅಥವಾ ದೇಶದೊಳಗಿಂದ ಪಡೆಯಲಾಗುತ್ತಿರುತ್ತದೆ. ಉದಾಹರಣೆಗೆ ಕಾನೂನು ಸಲಹೆ, ಗಣಕ ಸೇವೆ, ಜಾಹಿರಾತು, ಭದ್ರತೆ ಇತ್ಯಾದಿ. ಇತ್ತೀಚಿನ ಕಾಲದಲ್ಲಿ ವಿಶೇಷವಾಗಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯಿಂದ ಸಂಪರ್ಕ ಮಾಧ್ಯಮಗಳು ವೇಗವಾಗಿ ಬೆಳವಣಿಗೆ ಹೊಂದುತ್ತಿದ್ದು, ಹೊರಗುತ್ತಿಗೆಯು ಒಂದು ಆರ್ಥಿಕ ಚಟುವಟಿಕೆಯಾಗಿ ತೀವ್ರ ಗತಿಯಲ್ಲಿ ಬೆಳೆಯುತ್ತಿದೆ. ಅನೇಕ ಸೇವೆಗಳಾದ ಧ್ವನಿ–ಆಧಾರಿತ ವ್ಯವಹಾರ ಪ್ರಕ್ರಿಯಗಳು (BPO ಅಥವಾ ಕಾಲ್ ಸೆಂಟರ್‌ಗಳೆಂದು ಜನಪ್ರಿಯವಾಗಿವೆ) ದಾಖಲೆ ರಕ್ಷಣೆ, ಲೆಕ್ಕ, ಬ್ಯಾಂಕಿಂಗ್ ಸೇವೆಗಳು, ಸಂಗೀತ ರೆಕಾರ್ಡ್ ಮಾಡುವುದು, ಸಿನಿಮಾ ಸಂಕಲನ, ಪುಸ್ತಕ ನಕಲು, ವೈದ್ಯಕೀಯ ಸಲಹೆ ಅಥವಾ ಬೋಧನೆಯನ್ನು ಸಹ ಮುಂದುವರೆದ ದೇಶಗಳಲ್ಲಿನ ಕಂಪನಿಗಳು ಭಾರತಕ್ಕೆ ಹೊರ ಗುತ್ತಿಗೆ ನೀಡುತ್ತಿವೆ. ಅಂತರ್ಜಾಲವು ಆಧುನಿಕ

**ಪೆಟ್ಟಿಗೆ: 3.2 ಜಾಗತಿಕ ಹೆಜ್ಜೆಗುರುತುಗಳು**

ಉದಾಹರಣೆಗೆ ಒ.ಎನ್.ಜಿ. ವಿದೇಶ್ ಭಾರತೀಯ ಸಾರ್ವಜನಿಕ ಉದ್ಯಮವಾದ ತೈಲ ಮತ್ತು ನೈಸರ್ಗಿಕ ಅನಿಲ ನಿಕ್ಷೇಪದ ಅನ್ವೇಷಣೆ ಮತ್ತು ಉತ್ಪಾದನೆಯನ್ನು ಒಳಗೊಂಡಿರುವ ಒ.ಎನ್.ಜಿ.ಸಿ ಯ ಒಂದು ಉಪವಿಭಾಗವಾಗಿದ್ದು ಅದು 16 ದೇಶಗಳಲ್ಲಿ ತನ್ನ ಪ್ರಾಜೆಕ್ಟ್ ಗಳನ್ನು ಹೊಂದಿದೆ. ಟಾಟ ಸ್ಟೀಲ್ ಪ್ರೈವೇಟ್ ಕಂಪನಿಗಳಿಂದ 1907ರಲ್ಲಿ ಸ್ಥಾಪಿಸಲಾಯಿತು. ಈಗ ಇದು ವಿಶ್ವದ 10 ಪ್ರಮುಖ ಸ್ಟೀಲ್ ಕಂಪನಿಗಳಲ್ಲಿ ಒಂದಾಗಿದೆ. ಇದು 26 ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು 50 ದೇಶಗಳಲ್ಲಿ ತನ್ನ ಉತ್ಪನ್ನವನ್ನು ಮಾರಾಟ ಮಾಡುತ್ತದೆ. ಇದು ವಿದೇಶಗಳಲ್ಲಿ ಸುಮಾರು 50000 ಜನರಿಗೆ ಕೆಲಸ ನೀಡಿದೆ. ಹೆಚ್ ಸಿ ಎಲ್ ಟೆಕ್ನಾಲಜಿಯು ಭಾರತದ 5 ಪ್ರಮುಖ ಐ.ಟಿ (ಮಾಹಿತಿ ತಂತ್ರಜ್ಞಾನ) ಕಂಪನಿಗಳಲ್ಲಿ ಒಂದಾಗಿದೆ. ಇದು ಸುಮಾರು 31 ರಾಷ್ಟ್ರಗಳಲ್ಲಿ ತನ್ನ ಕಛೇರಿಯನ್ನು ಹೊಂದಿದೆ ಹಾಗೂ ವಿದೇಶಗಳಲ್ಲಿ 15000 ಜನರನ್ನು ಕೆಲಸಕ್ಕೆ ನೇಮಿಸಿಕೊಂಡಿದೆ. ಪ್ರಾರಂಭದಲ್ಲಿ ಸಣ್ಣ ಕಂಪನಿಯು ಭಾರತೀಯ ದೊಡ್ಡ ದೊಡ್ಡ ಕಂಪನಿಗಳಿಗೆ ಔಷಧೀಯ ಸರಕುಗಳನ್ನು ಪೂರೈಕೆ ಮಾಡುತ್ತಿದ್ದ ಡಾ. ರೆಡ್ಡೀಸ್ ಲ್ಯಾಬೊರೆಟರೀಸ್ ಈಗ ಪ್ರಪಂಚದ ಅನೇಕ ಭಾಗಗಳಲ್ಲಿ ತಯಾರಿಕಾ ಸಂಸ್ಥೆಗಳನ್ನು ಮತ್ತು ಸಂಶೋದನಾ ಕೇಂದ್ರಗಳನ್ನು ಹೊಂದಿದೆ.

**ಮೂಲ: www.rediff.com accessed on 14–10–2014**.

ದೂರ ಸಂಪರ್ಕ ವ್ಯವಸ್ಥೆಯ ಸಹಾಯದಿಂದ ಪಠ್ಯ ಧ್ವನಿ, ದೃಶ್ಯ ದತ್ತಾಂಶಗಳನ್ನು ಒಳಗೊಂಡಂತೆ ಈ ಸೇವೆಗಳನ್ನು ಡಿಜಿಟಲೀಕರಣ (ಗಣಕೀಕರಣ) ಮಾಡಿ ಖಂಡಗಳ ಮತ್ತು ದೇಶಗಳ ಎಲ್ಲೆಯಾಚೆ ಪ್ರಸಾರಮಾಡುತ್ತದೆ. ಬಹುತೇಕ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸರ್ಕಾರಿ ಕಂಪನಿಗಳೂ ಸಕಾರಣವಾದ ಕೌಶಲ್ಯತೆ ಮತ್ತು ಕಡಿಮೆ ವೆಚ್ಚದಲ್ಲಿ ಭಾರತದಿಂದ ಕೊಳ್ಳಲು ಸಾಧ್ಯವಿರುವುದರಿಂದ ತಮ್ಮ ಸೇವೆಗಳನ್ನು ಭಾರತಕ್ಕೆ ಹೊರಗುತ್ತಿಗೆ ನೀಡುತ್ತಿವೆ. ಕಡಿಮೆ ಕೂಲಿ ದರಗಳು ಮತ್ತು ಕೌಶಲ್ಯಪೂರ್ಣ ಮಾನವ ಸಂಪನ್ಮೂಲದ ಲಭ್ಯತೆಯು ಸುಧಾರಣಾ ನಂತರದ ಅವಧಿಯಲ್ಲಿ ಭಾರತವನ್ನು ಜಾಗತಿಕ ಹೊರಗುತ್ತಿಗೆಗೆ ಗಮ್ಯಸ್ಥಾನವನ್ನಾಗಿಸಿವೆ.



ಚಿತ್ರ 3.1: ಹೊರಗುತ್ತಿಗೆ: ಬೃಹತ್ ನಗರಗಳಲ್ಲಿ ಹೊಸ ಉದ್ಯೋಗ ಅವಕಾಶ

## ವಿಶ್ವ ವ್ಯಾಪಾರ ಸಂಘಟನೆ (WTO)

1995ರಲ್ಲಿ WTO ವ್ಯಾಪಾರ ಮತ್ತು ಸುಂಕಗಳ ಮೇಲಿನ ಸಾಮಾನ್ಯ ಒಪ್ಪಂದ (GATT)ದ ಉತ್ತರಾಧಿಕಾರಿಯಾಗಿ ಸ್ಥಾಪಿತವಾಯಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ವ್ಯಾಪಾರ ಉದ್ದೇಶಗಳಿಗಾಗಿ, ಎಲ್ಲಾ ದೇಶಗಳಿಗೆ ಸಮಾನ ಅವಕಾಶ ನೀಡುವ ಮೂಲಕ ಜಾಗತಿಕ ವ್ಯಾಪಾರ ಸಂಘಟನೆಯಾಗಿ ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ನೋಡಿಕೊಳ್ಳುವ ಸಲುವಾಗಿ 1948ರಲ್ಲಿ 23 ದೇಶಗಳೊಂದಿಗೆ GATTನ್ನು ಸ್ಥಾಪಿಸಲಾಯಿತು.

ದೇಶಗಳು ವ್ಯಾಪಾರದ ಮೇಲೆ ನಿರಂಕುಶ ತಡೆಗಳನ್ನು ಹಾಕದಂತೆ ಒಂದು ನಿಯಮ ಆಧಾರಿತ ವ್ಯಾಪಾರ ಆಳ್ವಿಕೆಯ ಸ್ಥಾಪನೆಯನ್ನು WTO ದಿಂದ ನಿರೀಕ್ಷೆ ಮಾಡಲಾಗಿದೆ. ಇದರ ಜೊತೆಗೆ ಇದು ಸೇವೆಗಳ ಉತ್ಪಾದನೆ ಮತ್ತು ವ್ಯಾಪಾರದ ವಿಸ್ತರಣೆ ಮಾಡುವ ಉದ್ದೇಶವನ್ನು ಆ ಮೂಲಕ ಜಾಗತಿಕ ಸಂಪನ್ಮೂಲಗಳ ಆದರ್ಶ ಬಳಕೆ ಹಾಗೂ ಪರಿಸರ ಸಂರಕ್ಷಣೆಯನ್ನು ಮಾಡುವ ಉದ್ದೇಶವನ್ನೂ ಹೊಂದಿದೆ. ಎಲ್ಲಾ ಸದಸ್ಯ ದೇಶಗಳಿಗೆ ಸುಂಕ ಹಾಗೆಯೇ ಸುಂಕ ರಹಿತ ಅಡೆತಡೆಗಳನ್ನು ನಿವಾರಿಸಲು ಮತ್ತು ಮಾರುಕಟ್ಟೆಯ ಎಲ್ಲಾ ಉತ್ತಮ ಅವಕಾಶಗಳನ್ನು ಕಲ್ಪಿಸುವ ಮೂಲಕ ಅಂತರರಾಷ್ಟ್ರೀಯ ವ್ಯಾಪಾರ (ದ್ವಿಪಕ್ಷೀಯ ಮತ್ತು ಬಹುಪಕ್ಷೀಯ)ವನ್ನು ಸುಗಮಗೊಳಿಸುವಂತಹ ಸರಕು

ಮತ್ತು ಸೇವೆಗಳ ವ್ಯಾಪಾರವನ್ನು WTO ಒಪ್ಪಂದವು ಒಳಗೊಳ್ಳುತ್ತದೆ. ವಿಶ್ವ ವ್ಯಾಪಾರಿ ಸಂಘಟನೆಯ ಒಂದು ಮಹತ್ವಪೂರ್ಣ ಸದಸ್ಯನಾಗಿ ಭಾರತವು ಅಭಿವೃದ್ಧಿ ಶೀಲ ರಾಷ್ಟ್ರಗಳ ಹಿತ ರಕ್ಷಣೆಗಾಗಿ, ನ್ಯಾಯಪೂರ್ಣ ಜಾಗತಿಕ ವ್ಯಾಪಾರ ವ್ಯವಸ್ಥೆಯ ರಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಲ್ಲಿ ಮುಂಚೂಣಿಯಲ್ಲಿದೆ. ಆಮದು ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕಿದೆ ಮತ್ತು ಸುಂಕ ದರಗಳನ್ನು ಕಡಿಮೆ ಮಾಡಿದೆ ಮತ್ತು WTO ದಲ್ಲಿ ಹೇಳಿರುವಂತೆ ವ್ಯಾಪಾರದ ಮೂಲಕ ಉದಾರೀಕರಣದ ಬದ್ಧತೆಯನ್ನು ಭಾರತ ಉಳಿಸಿಕೊಂಡಿದೆ.



## ನೀವೇ ಮಾಡಿರಿ

## (Work These Out)

- ಹಲವು ವಿದ್ವಾಂಸರು ವಾದಿಸುವಂತೆ, ಜಾಗತೀಕರಣವು ಅಪಾಯಕಾರಕವಾಗಿದ್ದು, ಅದು ಹಲವು ವಲಯಗಳಲ್ಲಿ ಸರ್ಕಾರದ ಪಾತ್ರವನ್ನು ಕಡಿಮೆಗೊಳಿಸುತ್ತದೆ. ಮತ್ತೆ ಕೆಲವರ ಪ್ರಕಾರ ಜಾಗತೀಕರಣವು ಮಾರುಕಟ್ಟೆಯನ್ನು ಅಧೀನ ಪಡಿಸಿಕೊಳ್ಳಲು ಮತ್ತು ಸ್ಪರ್ಧಿಸಲು ಮುಕ್ತ ಅವಕಾಶಗಳನ್ನು ತೆರೆದಿಟ್ಟಿದೆ. ತರಗತಿಯಲ್ಲಿ ಇದನ್ನು ಚರ್ಚಿಸಿ.
- ಭಾರತದಲ್ಲಿನ ಹೊರಗುತ್ತಿಗೆ (BPO) ಸೇವೆಗಳನ್ನು ಒದಗಿಸುತ್ತಿರುವ ಯಾವುದಾದರೂ 5 ಕಂಪನಿಗಳು ಮತ್ತು ಅವುಗಳ ವಹಿವಾಟನ್ನು ಒಳಗೊಂಡ ಒಂದು ಪಟ್ಟಿಯನ್ನು ತಯಾರಿಸಿ.
- ಇತ್ತೀಚೆಗೆ ತುಂಬಾ ಸಾಮಾನ್ಯ ಮಾತಾಗಿರುವ ಒಂದು ವಿಷಯವನ್ನು ವರ್ಣಿಸುವ ದಿನ ಪತ್ರಿಕೆಯ ಸುದ್ದಿಯ ಆಯ್ದ ಭಾಗವನ್ನು ಓದಿ.

  "ಮುಂಜಾನೆ ಏಳು ಘಂಟೆಗೆ ಕೆಲವು ನಿಮಿಷಗಳಿರುವಾಗ ಗ್ರೀಷ್ಮ ಅವಳ ಕಂಪ್ಯೂಟರ್ ಮುಂದೆ ಕುಳಿತು ಹೆಡ್ ಸೆಟ್ ಹಾಕಿಕೊಂಡು ಹೇಳುತ್ತಾಳೆ "ಹಲೋ ಡೆನಿಲ್ಲ". ಕೆಲವು ಸೆಕೆಂಡುಗಳ ನಂತರ ಅತ್ತ ಕಡೆಯಿಂದ ಪ್ರತ್ಯುತ್ತರ "ಹಲೋ ಗ್ರೀಷ್ಮ" ಎಂದು ಕೇಳಿ ಬರುತ್ತದೆ.ಇಬ್ಬರೂ ಕೆಲ ಹೊತ್ತು ಉತ್ಸುಕತೆಯಿಂದ ಮಾತನಾಡಿಕೊಳ್ಳುತ್ತಾರೆ.ನಂತರ ಗೀಷ್ಮ ಹೇಳುತ್ತಾಳೆ ಈ ದಿನ ನಾವು ಸರ್ವನಾಮದ ಬಗ್ಗೆ ಮಾತನಾಡೋಣ. ಈ ಮಾತುಕತೆಯಲ್ಲಿ ವಿಚಿತ್ರವಾದುದೇನೂ ಇಲ್ಲ. ಆದರೆ 22 ವರ್ಷದ ಗ್ರೀಷ್ಮ ಕೊಚ್ಚಿಯ ತನ್ನ ಮನೆಯಲ್ಲಿ ಮತ್ತು 13 ವರ್ಷದ ವಿದ್ಯಾರ್ಥಿ ಡೆನಿಲ್ಲಾ ಕ್ಯಾಲಿಫೋರ್ನಿಯಾದ ಮಲಿಬೂ ನಗರದ ತನ್ನ ಮನೆಯಲ್ಲಿ ಕುಳಿತಿದ್ದಾಳೆ. ಇಬ್ಬರೂ ಇಂಟರ್ ನೆಟ್ ಸಂಪರ್ಕವಿರುವ ತಮ್ಮ ತಮ್ಮ ಕಂಪ್ಯೂಟರ್ನ ಕೃತಕ ಬಿಳಿ ಹಲಗೆಯ ಸಹಾಯದಿಂದ ಡೇನಿಯಾಳ ಪಠ್ಯ ಪುಸ್ತಕವನ್ನು ತನ್ನ ಮುಂದಿಟ್ಟುಕೊಂಡು ತನ್ನ ಶಿಷ್ಯೆಗೆ ನಾಮಪದ, ಗುಣವಾಚಕ ಮತ್ತು ಕ್ರಿಯಾಪದಗಳ ಜಟಿಲತೆಯನ್ನು ಅರ್ಥಮಾಡಿಸುತ್ತಾಳೆ. ಮಲೆಯಾಳಂ ಭಾಷೆಯಲ್ಲಿಯೇ ಮಾತನಾಡುತ್ತಾ ಬೆಳೆದು ದೊಡ್ಡವಳಾದ ಗೀಷ್ಮ ಈಗ ಡೇನಿಯಾಳಿಗೆ ಇಂಗ್ಲೀಷ್ ಓದುವುದು ಬರೆಯುವುದು ಮತ್ತು ವ್ಯಾಕರಣದ ಬಗ್ಗೆ ಶಿಕ್ಷಣನೀಡುತ್ತಿದ್ದಾಳೆ.
- ಇದು ಹೇಗೆ ಸಾದ್ಯವಾಯಿತು? ತನ್ನ ದೇಶದಲ್ಲಿಯೇ ಡೇನಿಯಾ ಕಲಿಯುವುದು ಆಗುವುದಿಲ್ಲವೇ? ಇಂಗ್ಲೀಷ್ ಮಾತೃ ಭಾಷೆಯಾಗಿರದ ಭಾರತದಿಂದ ಇಂಗ್ಲೀಷ್ ಭಾಷೆಯ ಪಾಠವನ್ನು ಏಕೆ ಕಲಿಯುತ್ತಿದ್ದಾಳೆ?
- ಭಾರತವು ಉದಾರೀಕರಣ ಮತ್ತು ವಿಶ್ವ ಮಾರುಕಟ್ಟೆಯ ಒಗ್ಗೂಡುವಿಕೆಯಿಂದ ಲಾಭ ಪಡೆಯುತ್ತಿದೆ. ಇದನ್ನು ಒಪ್ಪುವಿರಾ?
- ಕಾಲ್ ಸೆಂಟರ್ ಗಳಲ್ಲಿನ ನೌಕರಿ ಸುಸ್ಥಿರವೇ? ನಿರಂತರ ಆದಾಯ ಪಡೆಯಲು ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುತ್ತಿರುವವರು ಎಂಥಹ ಕೌಶಲ್ಯವನ್ನು ಪಡೆಯುತ್ತಾರೆ?
- ಅಗ್ಗವಾದ ಮಾನವ ಶಕ್ತಿ ಲಭಿಸುವ ಭಾರತದಂತಹ ದೇಶಗಳಿಗೆ ಬಹು ರಾಷ್ಟ್ರೀಯ ಕಂಪನಿಗಳು ಹಲವಾರು ಸೇವೆಗಳನ್ನು ಹೊರಗುತ್ತಿಗೆಗೆ ನೀಡಿದರೆ ಈ ಕಂಪನಿಗಳು ಸ್ಥಾಪಿತವಾಗಿರುವ ದೇಶವಾಸಿಗಳಿಗೆ ಏನಾಗಬಹುದು ಚರ್ಚಿಸಿ.

**ಕೋಷ್ಟಕ 3.1: GDP ಮತ್ತು ಪ್ರಧಾನ ವಲಯಗಳ ಬೆಳವಣಿಗೆ (% ನಲ್ಲಿ)**

| ವಲಯ | 1980–91 | 1992–2001 | 2002–07 | 2007–12 | 20012–2017 XII | 12ನೇ ಯೋಜನೆ ಗುರಿ– 2 |
|---|---|---|---|---|---|---|
| ಕೃಷಿ | 3.6 | 3.3 | 2.3 | 3.2 | 4.0 | 4.2 |
| ಕೈಗಾರಿಕೆ | 7.1 | 6.5 | 9.4 | 7.4 | 9.6 | 10.9 |
| ಸೇವೆಗಳು | 6.7 | 8.2 | 7.8 | 10.0 | 10.0 | 10.0 |
| **ಒಟ್ಟು** | **6.6** | **6.4** | **7.8** | **8.2** | **9.0** | **9.5** |

**Source : 10 ನೇ ಪಂಚವಾರ್ಷಿಕ ಯೋಜನೆ:** Faster, sustainable and more inclusive growth an approach to the 12th five year plan, planning or commission, Government of India 2011.

ಅಂತರ ರಾಷ್ಟ್ರೀಯ ವ್ಯಾಪಾರವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ನಡುವೆಯೇ ನಡೆಯುವುದರಿಂದ ಭಾರತವು WTOದ ಸದಸ್ಯತ್ವವನ್ನು ಪಡೆದಿರುವುದರಿಂದ ಆಗುವ ಪ್ರಯೋಜನಗಳನ್ನು ಕೆಲವು ವಿದ್ವಾಂಸರು ಪ್ರಶ್ನಿಸುತ್ತಾರೆ. ಅಭಿವೃದ್ಧಿ ಹೊಂದಿದ ದೇಶಗಳು ಕೃಷಿ ಸಹಾಯಧನದ ವಿರುದ್ಧ ಆಪಾದನೆ ಮಾಡುತ್ತಿರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳಿಗಾಗಿ ತಮ್ಮ ಮಾರುಕಟ್ಟೆಯನ್ನು ತೆರೆದಿಡಲು ಒತ್ತಾಯಿಸುತ್ತವೆ, ಆದರೆ ಆ ದೇಶಗಳು ಅವರ ಮಾರುಕಟ್ಟೆಯನ್ನು ಪ್ರವೇಶಿಸಲು ಅವಕಾಶ ನೀಡದೆ ಮೋಸ ಮಾಡುತ್ತಿದ್ದಾರೆಂಬ ಭಾವನೆಯನ್ನು ಕೆಲವು ವಿದ್ವಾಂಸರು ವ್ಯಕ್ತ ಪಡಿಸುತ್ತಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?



**ಚಿತ್ರ 3.2: ಭಾರತದ ರಫ್ತಿನಲ್ಲಿ ಐಟಿ ಉದ್ಯಮದ ಕೊಡುಗೆ ಪ್ರಧಾನವಾಗಿದೆ**

## 3.6 ಸುಧಾರಣೆಗಳ ಕಾಲದಲ್ಲಿ ಭಾರತದ ಅರ್ಥವ್ಯವಸ್ಥೆ; ಒಂದು ಮೌಲ್ಯಮಾಪನ (INDIAN ECONOMY DURING REFORMS: AN ASSESSMENT)

ಸುಧಾರಣಾ ಪ್ರಕ್ರಿಯೆಯು ಅದು ಜಾರಿಯಾದಂದಿನಿಂದ ಒಂದುವರೆ ದಶಕಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ಭಾರತದ ಅರ್ಥ ವ್ಯವಸ್ಥೆಯ ಕಾರ್ಯವೈಖರಿಯನ್ನು ನಾವೀಗ ತಿಳಿಯೋಣ. ಅರ್ಥಶಾಸ್ತ್ರದಲ್ಲಿ ಒಂದು ಆರ್ಥಿಕತೆಯ ಬೆಳವಣಿಗೆಯನ್ನು ಒಟ್ಟು ದೇಶಿಯ ಉತ್ಪನ್ನ (GDP) ದಿಂದ ಅಳೆಯುತ್ತೇವೆ. ಕೋಷ್ಟಕ 3.1ನ್ನು ನೋಡಿ.

ಜಿ.ಡಿ.ಪಿ. ಬೆಳವಣಿಗೆಯು 1980–81ರಲ್ಲಿ ಶೇಕಡ 5.6 ರಷ್ಟಿದ್ದುದು 2007–12ರಲ್ಲಿ ಶೇಕಡ 8.2 ಕ್ಕೆ ಹೆಚ್ಚಾಗಿದೆ. ಸುಧಾರಣೆ ಕಾಲದಲ್ಲಿ ಕೃಷಿ ವಲಯದ ಬೆಳವಣಿಗೆಯು ಇಳಿಕೆಯನ್ನು ಕಂಡಿದೆ. ಕೈಗಾರಿಕಾ ವಲಯವು ಏರಿಳಿತಗಳನ್ನು ಕಂಡಿದೆ, ಸೇವಾ ವಲಯದ ಬೆಳವಣಿಗೆಯು ಏರಿಕೆಯಾಗಿದೆ. ಬೆಳವಣಿಗೆಯು ಮುಖ್ಯವಾಗಿ ಸೇವಾವಲಯದ ಬೆಳವಣಿಗೆಯಲ್ಲಿ ಕಂಡು ಬರುತ್ತದೆಂಬುದನ್ನು ಇದು ಸೂಚಿಸುತ್ತದೆ. ಹನ್ನೆರಡನೇ ಪಂಚವಾರ್ಷಿಕ ಯೋಜನೆ (2001–2017) ಯು GDP ಬೆಳವಣಿಗೆ ದರವನ್ನು 9 ಅಥವಾ 9.5 ರಷ್ಟು ಸಾಧಿಸಬೇಕಾದ ಗುರಿ ಹೊಂದಿದೆ. ಇದನ್ನು ಕೃಷಿ ಕೈಗಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆ ದರವು ಕ್ರಮವಾಗಿ ಶೇಕಡ 4 ರಿಂದ 4.2 ಶೇಕಡ 9.6 ರಿಂದ 10.9 ಮತ್ತು ಶೇಕಡ 10 ರಷ್ಟಕ್ಕೆ ಹೆಚ್ಚಾಗ ಬೇಕಾಗಿದೆ. ಇಂತಹ ಅಧಿಕ ಬೆಳವಣಿಗೆ ದರದ ಹಂಚಿಕೆಯು ಅಸ್ಥಿರವಾದುದಾಗಿದೆ ಎಂಬುದನ್ನು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಆರ್ಥಿಕತೆಯ ಮುಕ್ತತೆಯಿಂದಾಗಿ ವಿದೇಶಿ ನೇರ ಹೂಡಿಕೆ ಮತ್ತು ವಿದೇಶಿ ವಿನಿಮಯ ಮೀಸಲುಗಳಲ್ಲಿ ಗಣನೀಯ ಹೆಚ್ಚಳವಾಗಿದೆ. ವಿದೇಶಿ ನೇರಹೂಡಿಕೆ (FDI) ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆ (FII) ಗಳನ್ನು ಒಳಗೊಂಡ ವಿದೇಶಿ ಹೂಡಿಕೆಯು 1990–91ರಲ್ಲಿದ್ದ US$ 100 ಮಿಲಿಯನ್‌ಗಳಿಂದ 2013–14 ರಲ್ಲಿ US$

264 ಬಿಲಿಯನ್‌ಗಳಿಗೆ ಹೆಚ್ಚಾಗಿದೆ. ವಿದೇಶಿ ವಿನಿಮಯ ಮೀಸಲು 1990–91ರಲ್ಲಿ US$ 6 ಬಿಲಿಯನ್‌ನಿಂದ 2013–14ರಲ್ಲಿ US$ 304 ಬಿಲಿಯನ್‌ಗಳಿಗೇರಿತು, ವಿಶ್ವದಲ್ಲಿ ಅತ್ಯಧಿಕ ವಿದೇಶಿ ವಿನಿಮಯ ಮೀಸಲನ್ನು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಸುಧಾರಣೆ ಅವಧಿಯಲ್ಲಿ ಭಾರತವು ಆಟೋ ಭಾಗಗಳು ಇಂಜಿನಿಯರಿಂಗ್ ಸರಕುಗಳು, IT ಸಾಫ್ಟ್‌ವೇರ್ ಮತ್ತು ಟೆಕ್ಸ್‌ಟೈಲ್ ಉತ್ಪನ್ನಗಳ ಯಶಸ್ವಿ ರಫ್ತುದಾರನಾಗಿ ಹೊರಹೊಮ್ಮಿದೆ. ಹೆಚ್ಚುತ್ತಿರುವ ಬೆಲೆಗಳೂ ಸಹ ನಿಯಂತ್ರಣಕೊಳ್ಳಪಟ್ಟವು.

ಮತ್ತೊಂದು ಕಡೆ, ಸುಧಾರಣಾ ಪ್ರಕ್ರಿಯೆ ವಿಶೇಷವಾಗಿ ಉದ್ಯೋಗ, ಕೃಷಿ, ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಕೋಶೀಯ ನಿರ್ವಹಣೆಯಂತ ಕ್ಷೇತ್ರಗಳಲ್ಲಿ ನಮ್ಮ ಆರ್ಥಿಕತೆಯು ಕೆಲವು ಮೂಲ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಲಿಲ್ಲ ಎಂದು ಬಲವಾಗಿ ಟೀಕಿಸಲಾಗಿದೆ.

**ಬೆಳವಣಿಗೆ ಮತ್ತು ಉದ್ಯೋಗ (Growth Employment):** ಸುಧಾರಣೆಯ ಕಾಲದಲ್ಲಿ GDP ಬೆಳವಣಿಗೆಯ ದರವು ಏರಿಕೆಯಾಗಿದ್ದರೂ, ದೇಶದಲ್ಲಿ ಈ ಬೆಳವಣಿಗೆಯು ಸಾಕಷ್ಟು ಉದ್ಯೋಗವಕಾಶಗಳನ್ನು ಸೃಷ್ಟಿಸಿಲ್ಲ ಎಂಬುದನ್ನು ವಿದ್ವಾಂಸರು ಗುರುತಿಸಿ ಹೇಳುತ್ತಾರೆ. ನೀವು ಮುಂದಿನ ಘಟಕದಲ್ಲಿ ಉದ್ಯೋಗ ಮತ್ತು ಬೆಳವಣಿಗೆಯ ವಿವಿಧ ಆಯಾಮಗಳ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲಿದ್ದೀರಿ.




### ನೀವೇ ಮಾಡಿರಿ
### (Work These Out)

- ಕೃಷಿಯನ್ನು ಒಳಗೊಂಡಂತೆ ವಿವಿಧ ವಲಯಗಳಲ್ಲಿ ಸರ್ಕಾರ ಸಹಾಯಧನ ನೀಡುತ್ತಿರುವುದನ್ನು ನೀವು ಈಗಾಗಲೇ ತಿಳಿದಿರಬಹುದು. ಕೆಲವು ವಿದ್ವಾಂಸರು ವಾದಿಸುವಂತೆ, ಕೃಷಿಯಲ್ಲಿನ ಸಹಾಯಧನವನ್ನು ತೆಗೆದಾಗ ಆ ವಲಯವು ಅಂತರರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ಮಾಡುವ ಸಾಮರ್ಥ್ಯ ಹೊಂದುತ್ತದೆ ಎಂದು ವಾಸಿದಿದ್ದಾರೆ.ನೀವು ಇದನ್ನು ಒಪ್ಪುವಿರಾ? ಹಾಗಾದರೆ, ಇದನ್ನು ಹೇಗೆ ಮಾಡಬಹುದು? ತರಗತಿಯಲ್ಲಿ ಚರ್ಚಿಸಿ.
- ಮುಂದಿನ ವಾಕ್ಯವೃಂದವನ್ನು ಓದಿರಿ ಮತ್ತು ತರಗತಿಯಲ್ಲಿ ಚರ್ಚಿಸಿ.

ಆಂದ್ರಪ್ರದೇಶದಲ್ಲಿ ಶೇಂಗಾ (ನೆಲಗಡಲೆ) ಒಂದು ಪ್ರಮುಖ ಎಣ್ಣೆಬೀಜದ ಬೆಳೆ ಮಹಾದೇವ, ಅನಂತಪುರ ಜಿಲ್ಲೆಯ ಒಬ್ಬ ರೈತ. ಈತ ತನ್ನ 1/2 ಎಕರೆ ಜಮೀನಿನಲ್ಲಿ ಶೇಂಗಾ ಬೆಳೆಯಲು ರೂ. 1500 ಹಣ ವೆಚ್ಚಮಾಡಿದ್ದ. ಈ ವೆಚ್ಚವು ಕಚ್ಚಾ ವಸ್ತುಗಳು (ಬೀಜ, ಗೊಬ್ಬರ ಇತ್ಯಾದಿ), ಶ್ರಮ, ಎತ್ತುಗಳ ಶಕ್ತಿ ಮತ್ತು ಯಂತ್ರದ ಬಳಕೆಯ ಮೇಲಿನ ವೆಚ್ಚಗಳನ್ನು ಒಳಗೊಂಡಿತ್ತು. ಮಹಾದೇವ ಸರಾಸರಿ 2 ಕ್ವಿಂಟಾಲ್ ಶೇಂಗಾ ಉತ್ಪಾದಿಸುತ್ತಿದ್ದ. ಪ್ರತಿ ಕ್ವಿಂಟಾಲಿಗೆ ರೂ. 1000 ರಂತೆ ಸರಾಸರಿ ರೂ. 6000 ಆದಾಯಗಳಿಸುತ್ತಿದ್ದ ಮತ್ತು 1500 ರೂ ವೆಚ್ಚ ಮಾಡುತ್ತಿದ್ದ. ಅನಂತಪುರ ಒಂದು ಬರಪೀಡಿತ ತಾಲ್ಲೂಕು. ಆರ್ಥಿಕ ಸುಧಾರಣೆಗಳ ಪರಿಣಾಮವಾಗಿ ಸರ್ಕಾರ ಯಾವುದೇ ಪ್ರಮುಖ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಅನಂತಪುರ ತಾಲ್ಲೂಕಿನಾದ್ಯಂತ ಶೇಂಗಾ ಬೆಳೆಗೆ ನಿರಂತರ ರೋಗಬಾಧೆ ಹೆಚ್ಚಾಗಿದೆ. ಸರ್ಕಾರದ ವೆಚ್ಚ ಕಡಿತದಿಂದಾಗಿ ಸಂಶೋಧನೆ ಮತ್ತು ವಿಸ್ತರಣತೆ ಕೆಲಸಗಳು ಸ್ಥಗಿತಗೊಂಡಿವೆ. ಮಹಾದೇವ ಮತ್ತು ಆತನ ಸ್ನೇಹಿತರು ಈ ಬಗ್ಗೆ ಪದೇ ಪದೇ ಸಂಬಂಧಿಸಿದ ಸರ್ಕಾರಿ ನೌಕರರ ಗಮನಕ್ಕೆ ತಂದರೂ, ಯಾವುದೇ ಪ್ರಯೋಜನವಾಗಿಲ್ಲ. ಬೀಜ, ಗೊಬ್ಬರ ಮುಂತಾದವುಗಳ ಮೇಲಿನ ಸಹಾಯಧನ ಕಡಿತ ಮಾಡಿರುವುದರಿಂದ ಈಗ ಮಹಾದೇವಯ್ಯನ ಸಾಗುವಳಿ ವೆಚ್ಚ ಹೆಚ್ಚಾಗಿದೆ. ಮೇಲಾಗಿ ಆಮದುಗಳ ಮೇಲಿನ ನಿಯಂತ್ರಣದಿಂದ ಕಡಿಮೆ ಬೆಲೆಗೆ ಅಡಿಗೆ ಎಣ್ಣೆ ಆಮದಾಗುತ್ತಿದೆ. ಹಾಗಾಗಿ ಶೇಂಗಾ ಬೇಡಿಕೆ ಕಡಿಮೆಯಾಗಿ, ಬೆಲೆ ಕುಸಿತವಾಗಿದೆ. ಈಗ ಮಹದೇವನಿಗೆ ಮಾರುಕಟ್ಟೆಯಲ್ಲಿ ಶೇಂಗಾವನ್ನು ಮಾರಾಟಮಾಡಲು ಸಾಧ್ಯವಾಗುತ್ತಿಲ್ಲ ಏಕೆಂದರೆ ಅವನ ಖರ್ಚಿಗೆ ಸಮನಾದ ಬೆಲೆಯು ಅಲ್ಲಿ ಸಿಗುತ್ತಿಲ್ಲ. ಮಹಾದೇವನಂತಹ ರೈತರ ನಷ್ಟಗಳನ್ನು ತಪ್ಪಿಸಲು ಏನು ಮಾಡಬಹುದು? ತರಗತಿಯಲ್ಲಿ ಚರ್ಚಿಸಿ.

**ಕೃಷಿಯಲ್ಲಿ ಸುಧಾರಣೆಗಳು (Reforms in Agriculture):** ಸುಧಾರಣೆಗಳು ಕೃಷಿಗೆ ಲಾಭದಾಯಕವಾಗಲಿಲ್ಲ, ಇದರಲ್ಲಿ ಬೆಳವಣಿಗೆ ದರವು ಕುಸಿಯುತ್ತಿದೆ. ಸಾಧಾರಣಾ ಕಾಲದಲ್ಲಿ ಕೃಷಿವಲಯದ ಮೇಲಿನ ಸಾರ್ವಜನಿಕ ಹೂಡಿಕೆಯು ಇಳಿಮುಖವಾಯಿತು. ವಿಶೇಷವಾಗಿ ನೀರಾವರಿ, ಶಕ್ತಿ ಸಂಪನ್ಮೂಲ, ರಸ್ತೆಗಳು, ಮಾರುಕಟ್ಟೆ ಕೊಂಡಿಗಳು ಮತ್ತು ಸಂಶೋಧನೆ ಮತ್ತು ವಿಸ್ತರಣೆ (ಹಸಿರು ಕ್ರಾಂತಿಯಲ್ಲಿ ಗಂಭೀರ ಪಾತ್ರವನ್ನು ನಿರ್ವಹಿಸಿತ್ತು)ಗಳು ಇಳಿಮುಖ ಆದವು. ಅಲ್ಲದೆ ರಸಗೊಬ್ಬರದ ಮೇಲಿನ ಸಹಾಯಧನದ ತೆರವು ಉತ್ಪಾದನಾ ವೆಚ್ಚದ ಹೆಚ್ಚಳಕ್ಕೆ ಕಾರಣವಾಯಿತು, ಇದು ಹಲವು ಸಣ್ಣ ಮತ್ತು ಸೀಮಾಂತ(ಅತಿ ಸಣ್ಣ) ರೈತರನ್ನು ತೊಂದರೆಗೀಡುಮಾಡಿತು. ಈ ವಲಯವು ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕಗಳ ಕಡಿತ, ಕನಿಷ್ಟ ಬೆಂಬಲ ಬೆಲೆಯ ತೆರವು ಮತ್ತು ಕೃಷಿ ಉತ್ಪನ್ನಕ್ಕಾಗಿ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕುವುದು ಮುಂತಾದ ಹಲವು ನೀತಿಗಳ ಬದಲಾವಣೆಯನ್ನು ಅನುಭವಿಸಿದೆ. ಈ ಎಲ್ಲಾ ಅಂಶಗಳು ಭಾರತೀಯ ರೈತರ ಮೇಲೆ ಅಡ್ಡ ಪರಿಣಾಮಗಳನ್ನುಂಟು ಮಾಡಿವೆ ಮತ್ತು ರೈತರು ಅಂತರರಾಷ್ಟ್ರೀಯ ತೀವ್ರ ಪೈಪೋಟಿಯನ್ನು ಎದುರಿಸಬೇಕಾಗಿದೆ.

ಆದಾಗ್ಯೂ ಕೃಷಿಯಲ್ಲಿನ ರಫ್ತು ಆಧಾರಿತ ನೀತಿಗಳ ತಂತ್ರದ ಕಾರಣದಿಂದಾಗಿ, ದೇಶೀಯ ಮಾರುಕಟ್ಟೆಗಾಗಿ ಉತ್ಪನ್ನ ಮಾಡುತ್ತಿದ್ದ ಆಹಾರ ಧಾನ್ಯಗಳ ಬದಲಾಗಿ ವಾಣಿಜ್ಯ ಬೆಳೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ರಫ್ತು ಆಧಾರಿತ ಮಾರುಕಟ್ಟೆಗಳತ್ತ ಪಲ್ಲಟ ಮಾಡಲಾಗಿದೆ. ಇದು ಆಹಾರ ಧಾನ್ಯಗಳ ಬೆಳೆಗಳ ಮೇಲೆ ಒತ್ತಡವನ್ನು ತರುತ್ತದೆ.

**ಕೈಗಾರಿಕೆಯಲ್ಲಿ ಸುಧಾರಣೆಗಳು (Reforms in Industry):** ಕೈಗಾರಿಕಾ ಬೆಳವಣಿಗೆಯು ಸಹ ಕುಂಠಿತವಾಗಿರುವುದು ದಾಖಲಾಗಿದೆ. ಏಕೆಂದರೆ ಅಗ್ಗದ ಆಮದು, ಮೂಲ ಸೌಕರ್ಯದಲ್ಲಿ ಹೂಡಿಕೆಯ ಕೊರತೆಯಂತಹ ಹಲವು ಕಾರಣಗಳಿಂದಾಗಿ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗುತ್ತಿದೆ. ಜಾಗತಿಕ ಪ್ರಪಂಚದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಒತ್ತಾಯ ಪೂರ್ವಕವಾಗಿ ಅಭಿವೃದ್ಧಿ ಹೊಂದಿದ ದೇಶಗಳ ಸರಕು ಮತ್ತು ಬಂಡವಾಳದ ಹರಿವಿಗೆ ತಮ್ಮ ಆರ್ಥಿಕತೆಯನ್ನು ತೆರೆದಿರಬೇಕಾಗುತ್ತದೆ ಮತ್ತು ಅವರ ಕೈಗಾರಿಕೆಗಳು ಪೂರೈಸಿದ ಆಮದು ಸರಕುಗಳಿಂದ ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ. ಅಗ್ಗದ ಆಮದುಗಳು ದೇಶೀಯ ಸರಕುಗಳ ಬೇಡಿಕೆಯನ್ನು ಕಿತ್ತುಕೊಂಡವು. ದೇಶೀಯ ತಯಾರಕರು ಆಮದುಗಳಿಂದ ಪೈಪೋಟಿಯನ್ನು ಎದುರಿಸುತ್ತಿದ್ದಾರೆ. ಹೂಡಿಕೆಯ ಕೊರತೆಯಿಂದಾಗಿ ಮೂಲ ಸೌಕರ್ಯದ ಕೊರತೆ ಇಂಧನದ ಪೂರೈಕೆಯನ್ನು ಒಳಗೊಂಡಂತೆ ಹಾಗೆಯೇ ಉಳಿದು ಹೊರ ದೇಶಗಳಿಂದ ಸರಕು ಸೇವೆಗಳು ಮುಕ್ತವಾಗಿ ಚಲಿಸ ಬೇಕೆಂಬ ಷರತ್ತನ್ನು ವಿಧಿಸಿರುವ ಜಾಗತೀಕರಣವು, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಸ್ಥಳೀಯ ಕೈಗಾರಿಕೆಗಳ ಮತ್ತು ಉದ್ಯೋಗವಕಾಶಗಳ ಮೇಲೆ ಅಡ್ಡ ಪರಿಣಾಮ ಬೀರುತ್ತದೆ.

ಆದಾಗ್ಯೂ ಅಭಿವೃದ್ಧಿ ಶೀಲ ದೇಶವಾದ ಭಾರತವು ಅಧಿಕ ಸುಂಕೇತರ ಅಡೆತಡೆಗಳ ಕಾರಣದಿಂದಾಗಿ ಅಭಿವೃದ್ಧಿ ಹೊಂದಿದ ದೇಶದ ಮಾರುಕಟ್ಟೆಗಳಿಗೆ ಪ್ರವೇಶಿಸುವ ಮಾರ್ಗವನ್ನು ರಫ್ತು ಮೂಲಕ ಪಡೆಯಲಾಗಿತ್ತಿಲ್ಲ. ಉದಾಹರಣೆಗೆ, ಭಾರತದಲ್ಲಿ ಟೆಕ್ಸ್‌ಟೈಲ್ಸ್ ಮತ್ತು ಬಟ್ಟೆ ರಫ್ತಿನ ಮೇಲಿನ ಎಲ್ಲಾ ಕೋಟಾ ನಿರ್ಬಂಧಗಳನ್ನು ತೆಗೆಯಲಾಗಿದ್ದರೂ, USA ಮಾತ್ರ ಭಾರತ ಮತ್ತು ಚೈನಾದಿಂದ ಆಮದಾಗುತ್ತಿದ್ದ ಟೆಕ್ಸ್‌ಟೈಲ್‌ನ ಮೇಲಿನ ಕೋಟಾ ನಿರ್ಬಂಧವನ್ನು ತೆಗೆದುಹಾಕಿಲ್ಲ.

**ಹೂಡಿಕೆ ಹಿಂತೆಗೆತ (Disinvestment):** ಪ್ರತಿವರ್ಷ ಸರ್ಕಾರ ಸಾರ್ವಜನಿಕ ವಲಯದ ಉದ್ದಿಮೆ ಸಂಸ್ಥೆಗಳ ಹೂಡಿಕೆ ಹಿಂತೆಗೆದ ಗುರಿಯನ್ನು ನಿಗದಿಪಡಿಸುತ್ತದೆ. ಉದಾಹರಣೆಗೆ, 1991–92 ರಲ್ಲಿ 2,500 ಕೋಟಿ ರೂಪಾಯಿಗಳಷ್ಟು ಹಣವನ್ನು ಹೂಡಿಕೆ ಹಿಂತೆಗೆತದ ಮೂಲಕ ಸಜ್ಜುಗೊಳಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಸರ್ಕಾರವು 3,040 ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸುವ ಮತ್ತು ಇದು ಗುರಿಯನ್ನು ಮೀರಿದ

ಸಾಧನೆಯಾಗಿದೆ. 2013–14ರಲ್ಲಿ ಗುರಿಯು 56,000 ಕೋಟಿ ರೂಪಾಯಿಗಳಷ್ಟಿತ್ತು, ಆದರೆ ಸಾಧನೆಯು ಕೇವಲ 26,000 ಕೋಟಿ ರೂಪಾಯಿಗಳಷ್ಟಾಯಿತು. ಟೀಕಾಕಾರರು ಸಾರ್ವಜನಿಕ ವಲಯದ ಉದ್ದಿಮೆಗಳ ಆಸ್ತಿಯ ಮೌಲ್ಯವನ್ನು ಕಡಿಮೆ ಮಾಡಿ ಮತ್ತು ಇದನ್ನು ಖಾಸಗಿ ವಲಯಕ್ಕೆ ಮಾರಾಟ ಮಾಡಲಾಗುತ್ತದೆ ಎಂದು ಆಪಾದಿಸುತ್ತಾರೆ.

ಇದರರ್ಥವೇನೆಂದರೆ ವಾಸ್ತವವಾಗಿ ಸರ್ಕಾರಕ್ಕೆ ಗಣನೀಯ ನಷ್ಟವಾಗಿದೆ ಆದಾಗ್ಯೂ, ದೇಶದಲ್ಲಿ ಹೂಡಿಕೆ ಹಿಂತೆಗೆತದ ಬಂಡವಾಳವನ್ನು ಸಾರ್ವಜನಿಕ ವಲಯದ ಘಟಕಗಳ (PSUs) ಅಭಿವೃದ್ಧಿ ಮತ್ತು ಸಾಮಾಜಿಕ ಮೂಲಸೌಕರ್ಯದ ಅಭಿವೃದ್ಧಿಗೆ ಬಳಸಿಕೊಳ್ಳುವುದರ ಬದಲಾಗಿ ಹೂಡಿಕೆ ಹಿಂತೆಗೆತದಿಂದ ಬಂದ ಹಣವನ್ನು ಸರ್ಕಾರದ ಆದಾಯದ ಕೊರತೆಯನ್ನು ತುಂಬಲು ಬಳಸಲಾಗಿತ್ತು. ಸರ್ಕಾರಿ ಕಂಪನಿಗಳ ಆಸ್ತಿಗಳ ಒಂದು ಭಾಗವನ್ನು ಮಾರಾಟ ಮಾಡುವುದು ಅವುಗಳ ದಕ್ಷತೆಯನ್ನು ಸುಧಾರಿಸುವ ಒಂದು ಉತ್ತಮ ಮಾರ್ಗವೆಂದು ನೀವು ಭಾವಿಸುವಿರಾ?

**ಸುಧಾರಣೆ ಮತ್ತು ಕೋಶೀಯ ನೀತಿಗಳು (Reforms and Fiscal Policies):** ಆರ್ಥಿಕ ಸುಧಾರಣೆಗಳು ಸಾರ್ವಜನಿಕ ವೆಚ್ಚದ ಬೆಳವಣಿಗೆಯ ಮೇಲೆ ಮಿತಿಗಳನ್ನು ಹೇರಿದವು, ವಿಶೇಷವಾಗಿ ಸಾಮಾಜಿಕ ವಲಯದಲ್ಲಿ ಈ ಮಿತಿಗಳನ್ನು ಹೇರಲಾಯಿತು. ಸುಧಾರಣಾ ಅವಧಿಯಲ್ಲಿ ತೆರಿಗೆ ರಿಯಾಯಿತಿಗಳು ಅಧಿಕ ಆದಾಯವನ್ನು ತಂದುಕೊಡುತ್ತದೆ ಮತ್ತು ತೆರಿಗೆಯಿಂದ ತಪ್ಪಿಸಿಕೊಳ್ಳುವುದನ್ನು ನಿಯಂತ್ರಿಸುತ್ತದೆ ಎಂಬ ನಿರೀಕ್ಷೆ ಇತ್ತು, ಆದರೆ ಇದರಿಂದ ಸರ್ಕಾರದ ತೆರಿಗೆ ಆದಾಯ ಹೆಚ್ಚಾಗಲಿಲ್ಲ. ಆಮದು ರಫ್ತು ಸುಂಕಗಳ ಮೂಲಕ ಆದಾಯವನ್ನು ಹೆಚ್ಚಿಸುವುದನ್ನು ಸಹ ಸುಂಕ ರಿಯಾಯಿತಿಯನ್ನೊಳಗೊಂಡ ಸುಧಾರಣಾ ನೀತಿಗಳು ಮೊಟಕುಗೊಳಿಸಿದವು. ವಿದೇಶಿ ಹೂಡಿಕೆದಾರರನ್ನು ಆಕರ್ಷಿಸಲು ತೆರಿಗೆ ವಿನಾಯಿತಿ ನೀಡಿದು ತೆರಿಗೆ ಸಂಗ್ರಹಣೆಯ ವ್ಯಾಪ್ತಿಯನ್ನು ಕಡಿತಗೊಳಿಸಿತು. ಇದು ಅಭಿವೃದ್ಧಿಯ ಮತ್ತು ಕಲ್ಯಾಣ ವೆಚ್ಚಗಳ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರಿತು.

## 3.7 ಉಪಸಂಹಾರ (CONCLUSION)

ಕೆಲವು ವಿದ್ವಾಂಸರು ವಾದಿಸುವ ಪ್ರಕಾರ ಜಾಗತೀಕರಣವು ಜಾಗತಿಕ ಮಾರುಕಟ್ಟೆಗೆ ಪ್ರವೇಶಿಸುವ ಮತ್ತು ಉನ್ನತ ತಾಂತ್ರಿಕತೆ ಪಡೆದುಕೊಳ್ಳುವ ಒಂದು ಉತ್ತಮ ಅವಕಾಶವೆಂದು ನೋಡಬೇಕಾಗಿದೆ. ಅಲ್ಲದೆ ಅಭಿವೃದ್ಧಿಶೀಲ ರಾಷ್ಟ್ರಗಳ ಬೃಹತ್ ಕೈಗಾರಿಕೆಗಳಿಗೆ ಅಂತರ ರಾಷ್ಟ್ರೀಯ ವೇದಿಕೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ ಹೆಚ್ಚಿನ ಅವಕಾಶಗಳಿವೆ ಎಂದು ಪರಿಗಣಿಸಬೇಕಾಗುತ್ತದೆಂದು ಅಭಿಪ್ರಾಯಪಡುತ್ತಾರೆ.

**ಪೆಟ್ಟಿಗೆ 3.3: ಸಿರಿಸಿಲ್ಲಾ ದುರ್ಘಟನೆ**

ವಿದ್ಯುತ್ ವಲಯದ ಸುಧಾರಣೆಗಳಿಂದಾಗಿ ಭಾರತದ ಬಹುತೇಕ ರಾಜ್ಯಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿದ್ದ ರಿಯಾಯಿತಿ ದರಗಳು ಇಲ್ಲದಾಗಿವೆ. ಮತ್ತು ವಿದ್ಯುತ್ ದರಗಳು ವೇಗವಾಗಿ ಹೆಚ್ಚುತ್ತಿವೆ. ಇದು ಸಣ್ಣ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ತೊಂದರೆಯನ್ನುಂಟು ಮಾಡಿದೆ. ಆಂಧ್ರ ಪ್ರದೇಶದಲ್ಲಿನ ಯಾಂತ್ರೀಕೃತ ಮಗ್ಗದ ಜವಳಿ ಉದ್ಯಮ ಇದಕ್ಕೊಂದು ಉದಾಹರಣೆಯಾಗಿದೆ. ಯಾಂತ್ರೀಕೃತ ಮಗ್ಗದ ಕೆಲಸಗಾರರಿಗೆ ಅವರ ಉತ್ಪಾದನಾ ಪ್ರಮಾಣದ ಆಧಾರದ ಮೇಲೆ ಕೂಲಿಯನ್ನು ಕೊಡಲಾಗುತ್ತದೆ. ವಿದ್ಯುತ್ ಕಡಿತದಿಂದ ಉತ್ಪಾದನೆ ಕಡಿಮೆಯಾದರೆ ಕೂಲಿಯೂ ಕಡಿತವಾಗುತ್ತದೆ. ಈಗಾಗಲೇ ವಿದ್ಯುತ್ ದರ ಹೆಚ್ಚಳದಿಂದ ಬಳಲಿರುವ ನೇಕಾರರು, ಕೂಲಿ ಕಡಿತದಿಂದ ಮತ್ತಷ್ಟು ಸಂಕಷ್ಟಕ್ಕೆ ತಳ್ಳಲ್ಪಟ್ಟಿದ್ದಾರೆ. ಇದರಿಂದಾಗಿ ಆಂಧ್ರಪ್ರದೇಶದ ಸಿರಿಸಿಲ್ಲಾ ಪಟ್ಟಣದಲ್ಲಿ ಸುಮಾರು 50 ಮಂದಿ ಯಾಂತ್ರೀಕೃತ ಮಗ್ಗದ ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

- ವಿದ್ಯುತ್ ದರವನ್ನು ಹೆಚ್ಚಿಸಬಾರದೆಂದು ನೀವು ಯೋಚಿಸುವಿರಾ?
- ಸುಧಾರಣೆಗಳಿಂದಾಗಿ ತೊಂದರೆಗೆ ಒಳಗಾಗಿರುವ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ನಿಮ್ಮ ಸಲಹೆಗಳೇನು?

ಇದಕ್ಕೆ ವಿರುದ್ಧವಾಗಿ, ಟೀಕಾಕಾರರು ಜಾಗತೀಕರಣವು ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಮಾರುಕಟ್ಟೆಗಳನ್ನು ಇತರೆ ದೇಶಗಳಿಗೆ ವಿಸ್ತರಿಸುವಂತಹ ಒಂದು ತಂತ್ರವಾಗಿದೆ ಎಂದು ವಾದಿಸುತ್ತಾರೆ. ಅವರ ಪ್ರಕಾರ ಇದು ಬಡ ದೇಶಗಳಲ್ಲಿನ ಜನರ ಕಲ್ಯಾಣ ಮತ್ತು ವ್ಯಕ್ತಿತ್ವದೊಂದಿಗೆ ರಾಜಿ ಮಾಡಿಕೊಂಡಿದೆ. ಮಾರುಕಟ್ಟೆಯಾಧಾರಿತ ಜಾಗತೀಕರಣವು ದೇಶಗಳು ಮತ್ತು ಜನರ ನಡುವೆ ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತದೆ ಎಂದು ವಾದಿಸುತ್ತಾರೆ.

ಭಾರತೀಯ ಸನ್ನಿವೇಶಕ್ಕೆ ಅನ್ವಯಿಸಿ ಮಾಡಿದ ಕೆಲವು ಅಧ್ಯಯನಗಳ ಪ್ರಕಾರ 1990ರ ಆರ್ಥಿಕ ಸಂಕಷ್ಟವು ಮೂಲವಾಗಿ ಭಾರತೀಯ ಸಮಾಜದಲ್ಲಿ ಬೇರುಬಿಟ್ಟಿದ್ದ ಆರ್ಥಿಕ ಅಸಮಾನತೆಗಳ ಪರಿಣಾಮವಾಗಿತ್ತು. ಈ ಸಂಕಷ್ಟದಿಂದ ಹೊರಬರಲು ಬಾಹ್ಯ ಶಕ್ತಿಗಳ ಸಲಹೆ ಮೇರೆಗೆ ಸರ್ಕಾರ ಕೈಗೊಂಡ ಕಾರ್ಯನೀತಿಗಳು, ಆರ್ಥಿಕ ಸುಧಾರಣೆಗಳು. ಈ ವಿಷಮ ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರವಾಗಿಸಿತು. ಅಲ್ಲದೆ ಆರ್ಥಿಕ ಸುಧಾರಣೆಗಳು ಅಧಿಕ ಆದಾಯದ ಸಮೂಹಗಳ ಆದಾಯ ಮತ್ತು ಅನುಭೋಗದ ಗುಣಮಟ್ಟವನ್ನು ಮಾತ್ರ ಹೆಚ್ಚಿಸಿತು. ಬೆಳವಣಿಗೆಯು ಸೇವಾವಲಯದ ಕೆಲವು ಆಯ್ದ ಕ್ಷೇತ್ರಗಳಿಗೆ ಮಾತ್ರ ಕೇಂದ್ರೀಕೃತಗೊಂಡಿತು. ಅವುಗಳೆಂದರೆ ದೂರ ಸಂಪರ್ಕ, ಮಾಹಿತಿ ತಂತ್ರಜ್ಞಾನ, ಹಣಕಾಸು, ಮನರಂಜನೆ, ಪ್ರವಾಸ ಮತ್ತು ಅತಿಥಿ ಸತ್ಕಾರ ಸೇವೆಗಳು, ರಿಯಲ್ ಎಸ್ಟೇಟ್ ಮತ್ತು ವ್ಯಾಪಾರ. ಆಧಾರ ವಲಯಗಳಾದ ಮತ್ತು ಲಕ್ಷಾಂತರ ಜನರಿಗೆ ಜೀವನಾಧಾರವಾಗಿರುವ ಕೃಷಿ ಮತ್ತು ಕೈಗಾರಿಕಾ ವಲಯಗಳಿಗೆ ಈ ಸುಧಾರಣೆಗಳಿಂದ ಲಾಭವಾಗಲಿಲ್ಲ.

1. ಭಾರತದಲ್ಲಿ ಸುಧಾರಣೆಗಳು ಏಕೆ ಜಾರಿಯಾದವು?

**ಪುನರುಕ್ತಿ**

- ಭಾರತೀಯ ಅರ್ಥವ್ಯವಸ್ಥೆಯು ಕಡಿಮೆಯಾಗುತ್ತಿದ್ದ ವಿದೇಶಿ ವಿನಿಮಯ ಸಂಗ್ರಹ. ರಫ್ತುಗಳಿಗಿಂತ ಹೆಚ್ಚಾಗಿ ಬೆಳೆಯುತ್ತಿದ್ದ ಆಮದುಗಳ ಮತ್ತು ಅತಿಯಾದ ಹಣದುಬ್ಬರ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಹಣಕಾಸು ಬಿಕ್ಕಟ್ಟು ಹಾಗೂ ವಿಶ್ವಬ್ಯಾಂಕು ಮತ್ತು IMF ನಂತಹ ಅಂತರರಾಷ್ಟ್ರೀಯ ಸಂಘಟನೆಗಳ ಒತ್ತಡದ ಕಾರಣದಿಂದಾಗಿ 1991 ರಲ್ಲಿ ಭಾರತವು ತನ್ನ ಆರ್ಥಿಕ ನೀತಿಗಳಲ್ಲಿ ಬದಲಾವಣೆ ತರಬೇಕಾಯಿತು.
- ದೇಶೀಯ ಅರ್ಥವ್ಯವಸ್ಥೆಯಲ್ಲಿ ಕೈಗಾರಿಕೆ ಮತ್ತು ಹಣಕಾಸು ವಲಯಗಳಲ್ಲಿ ಪ್ರಮುಖ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಬಾಹ್ಯ ವಲಯದ ಪ್ರಮುಖ ಸುಧಾರಣೆಗಳೆಂದರೆ ವಿದೇಶಿ ವಿನಿಮಯದ ಅನಿಯಂತ್ರಣ ಮತ್ತು ಆಮದು ಉದಾರೀಕರಣ.
- ಸಾರ್ವಜನಿಕ ವಲಯದ ಕಾರ್ಯನಿರ್ವಹಣೆಯನ್ನು ಸುಧಾರಿಸುವ ದೃಷ್ಟಿಯಿಂದ ಅದರ ಪಾತ್ರವನ್ನು ಕಡಿತಗೊಳಿಸಲು ಮತ್ತು ಅದನ್ನು ಖಾಸಗಿ ವಲಯಕ್ಕೆ ಮುಕ್ತಿಗೊಳಿಸಲು ಒಲವು ಮೂಡಿತು. ಇದನ್ನು ಹೂಡಿಕೆ ಹಿಂತೆಗೆತ ಮತ್ತು ಉದಾರೀಕರಣ ಕ್ರಮಗಳ ಮೂಲಕ ಜಾರಿಗೊಳಿಸಲಾಗಿದೆ.
- ಜಾಗತೀಕರಣವು ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳ ಫಲವಾಗಿದೆ. ಇದರ ಅರ್ಥ, ಒಂದು ಅರ್ಥ ವ್ಯವಸ್ಥೆಯನ್ನು ವಿಶ್ವದ ಇತರ ಅರ್ಥ ವ್ಯವಸ್ಥೆಗಳೊಂದಿಗೆ ಒಗ್ಗೂಡಿಸುವುದು.
- ಹೊರಗುತ್ತಿಗೆಯು ಇತ್ತೀಚೆಗೆ ಬೆಳೆಯುತ್ತಿರುವ ಒಂದು ವ್ಯವಹಾರ ಚಟುವಟಿಕೆಯಾಗಿದೆ.
- WTO ದ ಉದ್ದೇಶವೆಂದರೆ ವಿಶ್ವದ ಸಂಪನ್ಮೂಲಗಳ ಗರಿಷ್ಠ ಬಳಕೆಯ ಭರವಸೆ ನೀಡಲು ನಿಯಮಾಧಾರಿತ ವ್ಯಾಪಾರಿ ಆಡಳಿತವನ್ನು ಪ್ರತಿಷ್ಠಾಪಿಸುವುದಾಗಿದೆ.
- ಸುಧಾರಣೆಗಳ ಅವಧಿಯಲ್ಲಿ ಕೃಷಿ ಬೆಳವಣಿಗೆ ಕಡಿಮೆಯಾಗಿದೆ. ಕೈಗಾರಿಕಾ ಬೆಳವಣಿಗೆ ಏರಿಳಿತಗಳಿಂದ ಕೂಡಿದೆ. ಆದರೆ ಸೇವಾ ವಲಯವು ನಿರಂತರ ಬೆಳವಣಿಗೆಯನ್ನೂ ಸಾಧಿಸಿದೆ.
- ಸುಧಾರಣೆಗಳು ಕೃಷಿ ವಲಯಕ್ಕೆ ಅನುಕೂಲಕರವಾಗಿಲ್ಲ. ಈ ವಲಯದಲ್ಲಿ ಸಾರ್ವಜನಿಕ ಹೂಡಿಕೆಯೂ ಸಹ ಕಡಿಮೆಯಾಗಿದೆ.
- ಅಗ್ಗದ ಆಮದುಗಳ ಲಭ್ಯತೆ ಮತ್ತು ಕಡಿಮೆ ಹೂಡಿಕೆಯಿಂದಾಗಿ ಕೈಗಾರಿಕಾ ವಲಯದ ಬೆಳವಣಿಗೆಯು ಕುಂಠಿತಗೊಂಡಿದೆ.



## ಅಭ್ಯಾಸಗಳು

2. WTO ದ ಸದಸ್ಯನಾಗುವ ಅಗತ್ಯವೇಕಿದೆ?
3. ಭಾರತದಲ್ಲಿ RBI ತನ್ನ ಪಾತ್ರವನ್ನು ಹಣಕಾಸು ವಲಯದ ನಿಯಂತ್ರಕನಿಂದ ಸಹಾಯಕನಾಗಿ ಏಕೆ ಬದಲಿಸ ಬೇಕಾಯಿತು?
4. RBI ವಾಣಿಜ್ಯ ಬ್ಯಾಂಕುಗಳನ್ನು ಹೇಗೆ ನಿಯಂತ್ರಿಸುತ್ತದೆ?
5. ರೂಪಾಯಿಯ ಅಪಮೌಲ್ಯೀಕರಣವನ್ನು ನೀವು ಹೇಗೆ ಅರ್ಥೈಸುತ್ತೀರಿ?
6. ಈ ಕೆಳಗಿನವುಗಳ ವ್ಯತ್ಯಾಸಗಳನ್ನು ಬರೆಯಿರಿ.
   (i) ತಂತ್ರ ಮತ್ತು ಅಲ್ಪಸಂಖ್ಯಾತ ಮಾರಾಟ
   (ii) ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ವ್ಯಾಪಾರ
   (iii) ಸುಂಕ ಮತ್ತು ಸುಂಕರಹಿತ ಅಡೆತಡೆಗಳು
7. ಸುಂಕಗಳನ್ನು ಏಕೆ ವಿಧಿಸಲಾಯಿತು?
8. ಪರಿಮಾಣಾತ್ಮಕ ನಿರ್ಬಂಧಗಳ ಅರ್ಥವೇನು?
9. ಲಾಭ ಮಾಡುತ್ತಿರುವ ಸಾರ್ವಜನಿಕ ಅಧೀನ ವಲಯಗಳನ್ನು ಖಾಸಗೀಕರಣಗೊಳಿಸಬೇಕು ಈ ಅಭಿಪ್ರಾಯವನ್ನು ನೀವು ಒಪ್ಪುವಿರಾ? ಏಕೆ?
10. ಹೊರಗುತ್ತಿಗೆಯು ಭಾರತಕ್ಕೆ ಒಳ್ಳೆಯದೆಂದು ನೀವು ಭಾವಿಸುವಿರಾ? ಅಭಿವೃದ್ಧಿ ಹೊಂದಿದ ದೇಶಗಳು ಇದನ್ನು ಏಕೆ ವಿರೋಧಿಸುತ್ತಿವೇ?
11. ಭಾರತ ಒಂದು ಹೊರಗುತ್ತಿಗೆಯ ನಿರ್ಧಿಷ್ಠ ಆಪ್ತ ಸ್ಥಳವಾಗಿ ಕೆಲವು ಅನುಕೂಲಗಳನ್ನು ಹೊಂದಿದೆ. ಅಂತಹ ಅನುಕೂಲಗಳಾವುವು?
12. ಭಾರತದಲ್ಲಿ ಸರ್ಕಾರದ ನವರತ್ನ ನೀತಿಯು ಸಾರ್ವಜನಿಕ ವಲಯದ ಕಾರ್ಯವೈಖರಿಯನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ನೀವು ಭಾವಿಸುವಿರಾ? ಹೇಗೆ?
13. ಸೇವಾ ವಲಯದ ಅಧಿಕ ಬೆಳವಣಿಗೆಗೆ ಯಾವ ಪ್ರಧಾನ ಸಂಗತಿಗಳು ಕಾರಣಗಳಾಗಿವೆ?
14. ಕೃಷಿ ವಲಯವು ಸುಧಾರಣಾ ಪ್ರಕ್ರಿಯೆಯಿಂದ ಅಡ್ಡ ಪರಿಣಾಮಗಳಿಗೊಳಗಾಗಿದೆ ಎಂದು ಕಂಡುಬರುತ್ತದೆ. ಏಕೆ?
15. ಸುಧಾರಣಾ ಅವಧಿಯಲ್ಲಿ ಕೈಗಾರಿಕಾ ವಲಯವು ಕಳಪೆ ಕಾರ್ಯವೈಖರಿಯನ್ನು ತೋರಿಸಿದೆ. ಏಕೆ?
16. ಸಾಮಾಜಿಕ ನ್ಯಾಯ ಮತ್ತು ಕಲ್ಯಾಣದ ಬೆಳಕಿನಲ್ಲಿ ಭಾರತದಲ್ಲಿ ಆರ್ಥಿಕ ಸುಧಾರಣೆಗಳನ್ನು ಚರ್ಚಿಸಿ.
1. ಕೆಳಗೆ ನೀಡಿರುವ ಕೋಷ್ಟಕವು 2004–2005ರ ಬೆಲೆಗಳಲ್ಲಿ ಜಿ.ಡಿ.ಪಿ ಬೆಳವಣಿಗೆಯನ್ನು ತೋರಿಸುತ್ತದೆ. ಅರ್ಥಶಾಸ್ತ್ರಕ್ಕೆ

## ಸೂಚಿಸಿದ ಹೆಚ್ಚುವರಿ ಚಟುವಟಿಕೆಗಳು

ಸಂಖ್ಯಾಶಾಸ್ತ್ರದಲ್ಲಿ ನೀವು ದತ್ತಾಂಶಗಳ ನಿರೂಪಣೆಯ ತಂತ್ರಗಳನ್ನು ಅಧ್ಯಯನ ಮಾಡಿರುವಿರಿ. ಕೋಷ್ಟದಲ್ಲಿ ನೀಡಿರುವ ದತ್ತಾಂಶದ ಆಧಾರದ ಮೇಲೆ ಕಾಲ/ಸಮಯ ಶ್ರೇಣಿ ರೇಖಾ ನಕ್ಷೆಯನ್ನು ರಚಿಸಿ ಮತ್ತು ವಿಶ್ಲೇಷಿಸಿ.

| ವರ್ಷ | ಜಿ.ಡಿ.ಪಿ ಬೆಳವಣಿಗೆ |
|---|---|
| 2000-01 | 4.1 |
| 2001-02 | 5.4 |
| 2002-03 | 3.9 |
| 2003-04 | 8.0 |
| 2004-05 | 7.1 |
| 2005-06 | 9.5 |
| 2006-07 | 9.6 |
| 2007-08 | 9.3 |
| 2008-09 | 6.7 |
| 2009-10 | 8.6 |
| 2010-11 | 8.9 |
| 2011-12 | 6.7 |
| 2012–13 | 4.5 |

2. ನಿಮ್ಮ ಸುತ್ತಮುತ್ತಲು ಗಮನಿಸಿ – ರಾಜ್ಯ ವಿದ್ಯುಚ್ಛಕ್ತಿ ಮಂಡಲಿ (ಎಸ್.ಇ.ಬಿ.ಎಸ್.) ನಂತಹ ನಗರಕ್ಕೆ ಇನ್ನೂ ಅನೇಕ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ನಗರಗಳಿಗೆ/ರಾಜ್ಯಕ್ಕೆ ವಿದ್ಯುತ್‌ನ್ನು ಪೂರೈಸುತ್ತಿರುವುದನ್ನು ನೀವು ನೋಡಿರಬಹುದು. ಖಾಸಗಿ ಬಸ್‌ಗಳು ಜೊತೆ ಜೊತೆಗೆ ಸರ್ಕಾರಿ ಬಸ್‌ಗಳ ಸೇವೆ ಇತ್ಯಾದಿಗಳನ್ನು ಕಾಣಬಹುದು:

   (1) ಈ ರೀತಿಯ ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡೂ ಒಟ್ಟಿಗೆ ಅಸ್ತಿತ್ವದಲ್ಲಿರುವುದಕ್ಕೆ ಏನೆನ್ನುವಿರಿ?

   (2) ಈ ದ್ವಂದ್ವ ಪದ್ಧತಿಯ ಅನುಕೂಲ ಮತ್ತು ಅನಾನೂಕೂಲತೆಗಳಾವುವು ಚರ್ಚಿಸಿ.

3. ನಿಮ್ಮ ತಂದೆ ತಾಯಿಗಳ ಹಾಗೂ ಅಜ್ಜ ಅಜ್ಜಿಯರ ಸಹಾಯವನ್ನು ಪಡೆದು ಸ್ವಾತಂತ್ರ್ಯ ಬಂದ ಸಂರ್ಭದಲ್ಲಿ ಭಾರತದಲ್ಲಿದ್ದ ಬಹುರಾಷ್ಟ್ರೀಯ ಕಂಪನಿಗಳ ಪಟ್ಟಿಯನ್ನು ತಯಾರಿಸಿ. ಈಗಲೂ ಅಸ್ತಿತ್ವದಲ್ಲಿರುವ (ಬೆಳೆಯುತ್ತಿರುವ) ಕಂಪನಿಗಳ ಎದುರು (✓) ಗುರುತನ್ನು ಹಾಕಿ ಹಾಗೂ ಈಗ ಅಸ್ತಿತ್ವದಲ್ಲಿಲ್ಲದೇ ಇರುವ ಕಂಪನಿಗಳ ಎದುರು (✗) ಗುರುತನ್ನು ಹಾಕಿ. ಯಾವುದಾದರೂ ಕಂಪನಿಗಳ ಹೆಸರು ಬದಲಾವಣೆಯಾಗಿವೆಯೇ? ಹೊಸ ಹೆಸರುಗಳನ್ನು, ಮೂಲ ದೇಶವನ್ನು, ಉತ್ಪನ್ನದ ಸ್ವರೂಪವನ್ನು, ಲೋಗೋಗಳನ್ನು ಕಂಡುಹಿಡಿದು ನಿಮ್ಮ ತರಗತಿಗಾಗಿ ಒಂದು ಪಟವನ್ನು ತಯಾರು ಮಾಡಿ.
4. ಸೂಕ್ತ ಉದಾಹರಣೆಗಳನ್ನು ನೀಡಿ.

| ಉತ್ಪನ್ನದ ಸ್ವರೂಪ | ವಿದೇಶಿ ಕಂಪನಿಯೊಂದರ ಹೆಸರು |
|---|---|
| ಬಿಸ್ಕತ್ತುಗಳು | |
| ಶೂಸ್‌ಗಳು | |
| ಕಂಪ್ಯೂಟರ್‌ಗಳು | |
| ಕಾರ್‌ಗಳು | |
| ಟಿವಿ ಮತ್ತು ರೆಫ್ರಿಜರೇಟರ್‌ಗಳು | |
| ಲೇಖನ ಸಾಮಗ್ರಿಗಳು | |

ಈಗ ಮೇಲೆ ಹೇಳಿರುವ ಕಂಪನಿಗಳು ಭಾರತದಲ್ಲಿ 1991ಕ್ಕೆ ಮುಂಚೆಯೇ ಇದ್ದವೇ ಅಥವಾ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಿದ ಮೇಲೆ ಬಂದಿವೆಯೇ ಎಂಬುದನ್ನು ಕಂಡಹಿಡಿಯಿರಿ. ಇದಕ್ಕೆ ನಿಮ್ಮ ಉಪನ್ಯಾಸಕರ, ತಂದೆ ತಾಯಿಗಳ, ಅಜ್ಜ ಅಜ್ಜಿಯರ ಮತ್ತು ಅಂಗಡಿ ಮಾಲೀಕರ ಸಹಾಯವನ್ನು ಪಡೆಯಿರಿ.

5. ಡಬ್ಲ್ಯೂ.ಟಿ.ಓ. ಆಯೋಜಿಸಿದ ಸಭೆಗಳ ಬಗ್ಗೆ ದಿನಪತ್ರಿಕೆಯ ತುಣುಕುಗಳನ್ನು ಸಂಗ್ರಹಿಸಿ ಈ ಸಭೆಗಳಲ್ಲಿ ವಾಚಿಸಿ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮತ್ತು ಸಂಘಟನೆಯು ವಿಶ್ವವ್ಯಾಪಾರಕ್ಕೆ ಹೇಗೆ ಸಹಾಯಕವಾಗಿದೆ ಎಂಬುದನ್ನು ಕಂಡು ಹಿಡಿಯಿರಿ.
6. ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್‌ನ ಸೂಚನೆಯಂತೆ ಭಾರತಕ್ಕೆ ಆರ್ಥಿಕ ಸುಧಾರಣೆಗಳನ್ನು ಪರಿಚಯಿಸುವ ಅಗತ್ಯವಿತ್ತೇ? ಸಂದಾಯ ಬಾಕಿಯಲ್ಲಿನ ಕೊರತೆಯನ್ನು ನೀಗಿಸಿಕೊಳ್ಳಲು ಬೇರೆ ದಾರಿ ಇರಲಿಲ್ಲವೇ? ತರಗತಿಯಲ್ಲಿ ಚರ್ಚಿಸಿ.

**Books:**



## REFERENCES

ACHARYA, S. 2003. India's Economy: Some Issues and Answers. Academic Foundation, New Delhi.

ALTERNATIVE SURVEY GROUP. 2005. Alternative Economic Survey, India 2004–05, Disequalising Growth. Daanish Books, Delhi.

AHLUWALIA, I.J. and I.M.D. LITTLE. 1998. India's Economic Reforms and Development. Oxford University Press, New Delhi.

BARDHAN, PRANAB. 1998. The Political Economy of Development in India. Oxford University Press, Delhi.

BHADURI, AMIT and DEEPAK NAYYAR. 1996. The Intelligent Person's Guide to Liberalisation. Penguin, Delhi.

BHAGWATI, JAGDISH. 1992. India in Transition: Freeing the Economy. Oxford University Press, Delhi.

BYRES, TERENCE J. 1997. The State, Development Planning and Liberalisation in India.

Oxford University Press, Delhi.

CHADHA, G.K. 1994. Policy Perspectives in Indian Economic Development. Har-Anand, Delhi.

CHELLIAH, RAJA J. 1996. Towards Sustainable Growth: Essays in Fiscal and Financial Sector Reforms in India. Oxford University Press, Delhi.

DEBROY, B. and RAHUL MUKHERJI (Eds.). 2004. The Political Economy of Reforms. Bookwell Publication, New Delhi.

DREZE, JEAN and AMARTYA SEN. 1996. India: Economic Development and Social Opportunity. Oxford University Press, Delhi.

DUTT, RUDDAR AND K.P.M. SUNDARAM. 2005. Indian Economy. S. Chand and Company, New Delhi.

GUHA, ASHOK (Ed.) 1990. Economic Liberalisation, Industrial Structure and Growth in India. Oxford University Press, Delhi.

JALAN, BIMAL. 1993. India's Economic Crisis: The Way Ahead. Oxford University Press, Delhi.

JALAN, BIMAL. 1996. India's Economic Policy: Preparing for the Twenty First Century. Viking, Delhi.

JOSHI,VIJAY and I.M.D. LITTLE. 1996. India's Economic Reforms 2001–1991. Oxford University Press, Delhi,

KAPILA, Uma. 2005. Understanding the Problems of Indian Economy. Academic Foundation, New Delhi.

MAHAJAN, V.S. 1994. Indian Economy Towards 2000 A.D. Deep & Deep, Delhi.

PAREKH, KIRIT and RADHAKRISHNA, 2002, India Development Report 2001-02. Oxford University Press, New Delhi.

RAO, C.H. HANUMANTHA. and HANS LINNEMANN. 1996. Economic Reforms and Poverty Alleviation in India, Sage Publication, Delhi.

SACHS, JEFFREY D., ASHUTOSH VARSHNEY and NIRUPAM BAJPAI.1999. India in the Era of Economic Reforms. Oxford University Press, New Delhi.

## Government Reports

Economic Survey 2013–14. Ministry of Finance, Government of India. Published by Oxford University Press, New Delhi.

Tenth Five Year Plan 1997-2002. Vol. 1. Government of India, Planning Commission, New Delhi.

# ಘಟಕ
# III

## ಭಾರತೀಯ ಅರ್ಥವ್ಯವಸ್ಥೆಯು ಪ್ರಸ್ತುತ ಎದುರಿಸುತ್ತಿರುವ ಸವಾಲುಗಳು

## CURRENT CHALLENGES FACING THE INDIAN ECONOMY

ಭಾರತವು ಸದ್ಯದಲ್ಲಿ ಎದುರಿಸುತ್ತಿರುವ ಸವಾಲುಗಳೆಂದರೆ ಬಡತನ, ಗ್ರಾಮೀಣ ಭಾರತದ ಅಭಿವೃದ್ಧಿ ಮತ್ತು ಮೂಲಸೌಕರ್ಯಗಳ ನಿರ್ಮಾಣ. ನಾವು ಇಂದು ಶತಕೋಟಿ ಮೀರಿದ ಜನಸಂಖ್ಯೆ ಹೊಂದಿರುವ ಬಲಿಷ್ಠ ರಾಷ್ಟ್ರ ಮತ್ತು ಮಾನವ ಬಂಡವಾಳ ನಮ್ಮ ದೇಶದ ಬಹುದೊಡ್ಡ ಆಸ್ತಿ; ಇದಕ್ಕೆ ಶಿಕ್ಷಣ ಮತ್ತು ಆರೋಗ್ಯದಲ್ಲಿ ಹೂಡಿಕೆಯ ಅವಶ್ಯಕತೆ ಇದೆ. ನಮ್ಮ ದೇಶದಲ್ಲಿ ಉದ್ಯೋಗದ ಪರಿಕಲ್ಪನೆ ಮತ್ತು ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಅವಶ್ಯಕತೆಯನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ನಮ್ಮ ಪರಿಸರದ ಮೇಲಾಗುತ್ತಿರುವ ಅಭಿವೃದ್ಧಿಯ ಪರಿಣಾಮಗಳನ್ನೂ ಗಮನಿಸಬೇಕಾಗಿದೆ ಮತ್ತು ಸುಸ್ಥಿರ ಅಭಿವೃದ್ಧಿಗೂ ಆದ್ಯತೆ ನೀಡಬೇಕಾಗಿದೆ. ಈ ಎಲ್ಲಾ ಸಮಸ್ಯೆಗಳನ್ನು ಎದುರಿಸುವಲ್ಲಿ ಸರ್ಕಾರದ ಪ್ರಯತ್ನಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವ ಅವಶ್ಯಕತೆಯಿದೆ. ಈ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಪ್ರತಿಯೊಂದು ಸಮಸ್ಯೆಗಳನ್ನೂ ಬಗೆಹರಿಸುವಲ್ಲಿ ಸರ್ಕಾರದ ಪ್ರಯತ್ನಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವ ಅಗತ್ಯವಿದೆ.

4

# ಅಧ್ಯಾಯ-4

# ಬಡತನ (POVERTY)

**ಈ ಅಧ್ಯಾಯದ ಅಧ್ಯಾಯನದ ನಂತರ ನೀವು,**

- ಬಡತನದ ವಿವಿಧ ಲಕ್ಷಣಗಳ ಬಗ್ಗೆ ಅರ್ಥಮಾಡಿಕೊಳ್ಳುವಿರಿ.
- ಬಡತನದ ಪರಿಕಲ್ಪನೆಯ ವಿವಿಧ ಆಯಾಮಗಳ ಬಗ್ಗೆ ಗ್ರಹಿಸುವಿರಿ.
- ಬಡತನವನ್ನು ಅಂದಾಜು ಮಾಡುವ ಮಾರ್ಗವನ್ನು ವಿಮರ್ಶಾತ್ಮಕವಾಗಿ ಮೆಚ್ಚುವಿರಿ.
- ಸದ್ಯದಲ್ಲಿನ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಲು ಸಮರ್ಥರಾಗುವಿರಿ ಮತ್ತು ಗೌರವಿಸುವಿರಿ.

**"ಯಾವ ಸಮಾಜದ ಹೆಚ್ಚು ಸದಸ್ಯರು ಬಡತನ ಮತ್ತು ದುಃಖದಿಂದ ಕೂಡಿರುತ್ತಾರೋ, ಆ ಸಮಾಜದಲ್ಲಿ ಪ್ರಗತಿ ಮತ್ತು ಸಂತೋಷ ಸಾಧ್ಯವೇ ಇಲ್ಲ".**

**– ಆಡಂಸ್ಮಿತ್**

## 4.1 ಪೀಠಿಕೆ (INTRODUCTION)

ಹಿಂದಿನ ಅಧ್ಯಾಯಗಳಲ್ಲಿ ನೀವು, ಭಾರತವು ಕಳೆದ ಆರುವರೆ ದಶಕಗಳಲ್ಲಿ ತೆಗೆದುಕೊಂಡ ಆರ್ಥಿಕ ನೀತಿಗಳು ಮತ್ತು ಅವುಗಳ ಪರಿಣಾಮಗಳನ್ನು ಅಭ್ಯಾಸ ಮಾಡಿದ್ದೀರಿ. ಸ್ವತಂತ್ರ ಭಾರತದ ಬಹುಮುಖ್ಯ ಗುರಿ ಜನರಿಗೆ ಮೂಲ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಬಡತನವನ್ನು ಕಡಿಮೆಮಾಡುವುದಾಗಿದೆ. ಎಲ್ಲಾ ಪಂಚವಾರ್ಷಿಕ ಯೋಜನೆಗಳು ಸಾಧಿಸಿದ ಅಭಿವೃದ್ಧಿಯ ತಂತ್ರಗಳು ಕಡು ಬಡವರನ್ನು ಮೇಲೆತ್ತುವ (ಅಂತ್ಯೋದಯ) ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು, ಕನಿಷ್ಠ ಜೀವನಮಟ್ಟವನ್ನು ದೊರಕಿಸಿಕೊಡುವುದಾಗಿದೆ.

ಜವಹಾರಲಾಲ್ ನೆಹರೂರವರು 1947 ರಲ್ಲಿ ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, "ಈ ಸಾಧನೆ (ಸ್ವಾತಂತ್ರ್ಯ) ಒಂದು ಪ್ರಮುಖವಾದ ಹೆಜ್ಜೆ ಮತ್ತು ನಮ್ಮ ಯಶಸ್ಸು ಹಾಗೂ ಸಾಧನೆಗಳಿಗೆ ತೆರೆದಿಟ್ಟ ಒಂದು ದೊಡ್ಡ ಅವಕಾಶ.... ಬಡತನ ಮತ್ತು ಅಜ್ಞಾನ ಹಾಗೂ ರೋಗರುಜಿನಗಳ ನಿರ್ಮೂಲನೆ ಮತ್ತು ಅವಕಾಶಗಳ ಅಸಮಾನತೆಯನ್ನು ಕೊನೆಗೊಳಿಸುವುದಾಗಿದೆ".

ಆದಾಗ್ಯೂ ಇಂದು ನಾವು ಏನನ್ನು ಸಾಧಿಸಿದ್ದೇವೆ ಎಂಬುದನ್ನು ತಿಳಿದುಕೊಳ್ಳುವ ಅವಶ್ಯಕತೆ ಇದೆ. ಭಾರತವೊಂದರಲ್ಲೇ ವಿಶ್ವದ ಒಟ್ಟು ಬಡವರಲ್ಲಿ ಐದನೇ ಒಂದು ಭಾಗದಷ್ಟು ಬಡವರು ವಾಸಿಸುತ್ತಿದ್ದರೂ, ಬಡತನ ಭಾರತಕಷ್ಟೇ ಸವಾಲಾಗಿಲ್ಲ. ವಿಶ್ವದಲ್ಲಿ 300 ದಶಲಕ್ಷಕ್ಕಿಂತಲೂ ಹೆಚ್ಚು ಜನರು ತಮ್ಮ ಮೂಲ ಅವಶ್ಯಕತೆಗಳನ್ನು ಪಡೆಯುವ ಸಾಮರ್ಥ್ಯವನ್ನು ಹೊಂದಿಲ್ಲವಾದ್ದರಿಂದ, ಬಡತನ ವಿಶ್ವಕ್ಕೂ ಸವಾಲಾಗಿದೆ.

ಬಡತನವು ಹಲವಾರು ಸ್ವರೂಪಗಳನ್ನು ಹೊಂದಿದೆ. ಅದು ಕಾಲಾಂತರದಲ್ಲಿ ಸ್ಥಳದಿಂದ ಸ್ಥಳಕ್ಕೆ ಬದಲಾವಣೆಯಾಗುತ್ತಿರುತ್ತದೆ ಮತ್ತು ಅದನ್ನು ಅನೇಕ ರೀತಿಗಳಲ್ಲಿ ವರ್ಣಿಸಲಾಗಿದೆ. ಸಾಮಾನ್ಯವಾಗಿ ಜನರು ತಪ್ಪಿಸಿಕೊಳ್ಳಲು ಬಯಸುವ ಒಂದು ಪರಿಸ್ಥಿತಿಯೇ ಬಡತನವಾಗಿದೆ. ಬಡತನವು–ಬಡವರಿಗೆ ಮತ್ತು ಶ್ರೀಮಂತರಿಗೆ – ಪ್ರತಿಯೊಬ್ಬರಿಗೂ ಸಾಕಷ್ಟು ಆಹಾರ, ಸಮರ್ಪಕ ವಸತಿ, ಶಿಕ್ಷಣದ ಲಭ್ಯತೆ, ಆರೋಗ್ಯದ ಲಭ್ಯತೆ, ಹಿಂಸೆಯಿಂದ ರಕ್ಷಣೆ ಮತ್ತು ತಮ್ಮ ಸಮುದಾಯದಲ್ಲಾಗುವ ಸಂಗತಿಗಳಿಗೆ ಧ್ವನಿಯಾಗುವಂತೆ ಕಾರ್ಯೋನ್ಮುಖರಾಗಲು ಒಂದು ಜಾಗತಿಕ ಬದಲಾವಣೆಗೆ ನೀಡಿದ ಕರೆಯಾಗಿದೆ.

ಬಡತನವನ್ನು ಕಡಿಮೆಮಾಡಲು ನೆರವಾಗುವ ಅಂಶಗಳಾವುವು ಮತ್ತು ಯಾವುದಕ್ಕೆ ಬಡತನವನ್ನು ಕಡಿಮೆ ಮಾಡಲು ಸಾಧ್ಯತೆ ಇದೆ ಮತ್ತು ಸಾಧ್ಯತೆ ಇಲ್ಲ, ಕಾಲಾಂತರದಲ್ಲಿ ಏನೇನು ಬದಲಾವಣೆಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು ಬಡತನವನ್ನು ವ್ಯಾಖ್ಯಾನಿಸಬೇಕಾಗುತ್ತದೆ, ಅಳತೆಮಾಡಬೇಕಾಗುತ್ತದೆ ಮತ್ತು ಅಧ್ಯಯನ ಮಾಡಬೇಕಾಗುತ್ತದೆ – ಅದನ್ನು ಅನುಭವಿಸಲೂ ಬೇಕಾಗುತ್ತದೆ. ಬಡತನವು ವಿವಿಧ ಆಯಾಮಗಳನ್ನು ಹೊಂದಿರುವುದರಿಂದ ಇದನ್ನು ವಿವಿಧ ಸೂಚಕಗಳಿಂದ ಅವಲೋಕಿಸಬೇಕಾಗುತ್ತದೆ – ಆದಾಯದ ಮತ್ತು ಅನುಭೋಗದ ಮಟ್ಟ, ಸಾಮಾಜಿಕ ಸೂಚಕಗಳು ಮತ್ತು ಅಪಾಯಕ್ಕೀಡಾಗುವ ದುರ್ಬಲತೆಯ ಹಾಗೂ ಸಾಮಾಜಿಕ/ರಾಜಕೀಯ ಭಾಗವಹಿಸುವಿಕೆ ಸೂಚಕಗಳು.

## 4.2 ಬಡವರೆಂದರೆ ಯಾರು? (WHO ARE THE POOR?)

ಎಲ್ಲಾ ಸ್ಥಳಗಳಲ್ಲಿ ಮತ್ತು ನೆರೆಹೊರೆಯಲ್ಲಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ, ನಮ್ಮಲ್ಲಿ ಕೆಲವು ಬಡವರನ್ನು ಮತ್ತು ಕೆಲವು ಶ್ರೀಮಂತರನ್ನು ನೀವು ಗಮನಿಸಿರುತ್ತೀರಿ. ಅನು ಮತ್ತು ಸುಧಾರವರ ಕಥೆಯನ್ನು ಓದಿರಿ. ಅವರ ಜೀವನ ಈ ಎರಡು ಅತಿರೇಕದ ಸ್ಥಿತಿಗಳಿಗೆ ಉದಾಹರಣೆಯಾಗಿದೆ. (ಬಾಕ್ಸ್ ಸಂಖ್ಯೆ 4.1ನ್ನು ನೋಡಿ). ಇವೆರಡರ ನಡುವಿನ ಅನೇಕ ಹಂತಗಳಲ್ಲಿ ಕೂಡ ಜನರಿರುತ್ತಾರೆ.

ಗಾಡಿ ಎಳೆಯುವವರು, ಚಮ್ಮಾರರು, ಹೂಕಟ್ಟುವ ಮಹಿಳೆಯರು, ಚಿಂದಿ ಆಯುವವರು, ಅತಿ ಸಣ್ಣ ವ್ಯಾಪಾರಿಗಳು ಮತ್ತು ಭಿಕ್ಷುಕರು ನಗರ ಪ್ರದೇಶದ ಬಡ ಹಾಗೂ ದುರ್ಬಲ ಗುಂಪಿಗೆ ಉದಾಹರಣೆಯಾಗಿರುತ್ತಾರೆ. ಬಡ ಜನರು ಅತಿ ಕಡಿಮೆ ಸ್ವತ್ತುಗಳನ್ನು ಹೊಂದಿದ್ದು, ಹುಲ್ಲು, ಗರಿ, ಬಿದಿರು ಮತ್ತು ಮರ ಹಾಗೂ ಸುಟ್ಟ ಮಣ್ಣಿನಿಂದ ನಿರ್ಮಿಸಲ್ಪಟ್ಟ ಕಚ್ಚಾ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಕಡು ಬಡವರಿಗೆ ಈ ರೀತಿಯ ವಾಸದ ಸೌಲಭ್ಯಗಳೂ ಸಹ ಇರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಅಂತಹ ಹೆಚ್ಚಿನವರು

ಭೂರಹಿತರು. ಕೆಲವರು ಭೂಮಿ ಹೊಂದಿದ್ದರೂ ಅದು ಒಣ ಅಥವಾ ನಿರುಪಯುಕ್ತ ಭೂಮಿಯಾಗಿದೆ. ಹಲವರು ದಿನದ ಎರಡು ಹೊತ್ತಿನ ಊಟವನ್ನು ಪಡೆಯಲಾಗುತ್ತಿಲ್ಲ. ಹಸಿವು ಮತ್ತು ಅರೆಹೊಟ್ಟೆ ಕಡು ಬಡಕುಟುಂಬಗಳ ಬಹುಮುಖ್ಯ ಲಕ್ಷಣಗಳಾಗಿವೆ. ಬಡವರು ಮೂಲ ಸಾಕ್ಷರತೆ ಮತ್ತು ಕೌಶಲ್ಯಗಳ ಕೊರತೆಯಿಂದಾಗಿ ಅತ್ಯಂತ ಕಡಿಮೆ ಆರ್ಥಿಕ ಅವಕಾಶಗಳನ್ನು ಹೊಂದಿದ್ದಾರೆ. ಜೊತೆಗೆ ಇವರು ಅಸ್ಥಿರ ಉದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

**ಪೆಟ್ಟಿಗೆ 4.1: ಅನು ಮತ್ತು ಸುಧಾ**

ಅನು ಮತ್ತು ಸುಧಾ ಇಬ್ಬರೂ ಒಂದೇ ದಿನ ಜನಿಸಿದ್ದರು. ಅನು ತಾಯಿ–ತಂದೆಯರು ಕಟ್ಟಡ ನಿರ್ಮಾಣ ಕಾರ್ಮಿಕರು ಮತ್ತು ಸುಧಾಳ ತಂದೆ ಒಬ್ಬ ವ್ಯಾಪಾರಿ ಮತ್ತು ಅವಳ ತಾಯಿ ಒಬ್ಬ ವಿನ್ಯಾಸಗಾರ್ತಿ.

ಅನು ತಾಯಿ ಹೆರಿಗೆ ನೋವು ಬರುವವರೆಗೂ ತಲೆಯ ಮೇಲೆ ಇಟ್ಟಿಗೆ ಹೊರುವ ಕೆಲಸದಲ್ಲಿ ನಿರತಳಾಗಿದ್ದಳು. ನಂತರ ಅವಳು ಕಟ್ಟಡ ನಿವೇಶನದ ಹಿಂಭಾಗದಲ್ಲಿದ್ದ ಸಾಮಗ್ರಿಗಳ ಜೋಪಡಿಗೆ (Tool shed) ಹೋಗಿ ತಾನೇ ಮಗುವಿಗೆ ಹೆರಿಗೆ ಮಾಡಿಕೊಂಡಳು. ತನ್ನ ಮಗುವಿಗೆ ಹಾಲುಣಿಸಿ ನಂತರ ಅವಳನ್ನು ಒಂದು ಹಳೆಯ ಸೀರೆಯಿಂದ ಸುತ್ತಿ, ಗೋಣಿಚೀಲದಿಂದ ತೊಟ್ಟಿಲನ್ನು ಮಾಡಿ, ಪುಟ್ಟ ಅನುಳನನ್ನು ಅದರಲ್ಲಿ ಹಾಕಿ ಒಂದು ಮರಕ್ಕೆ ತೂಗುಹಾಕಿದಳು. ಕೆಲಸ ಕಳೆದುಕೊಳ್ಳುವ ಭಯಯದಿಂದಾಗಿ ತಕ್ಷಣವೇ ಕೆಲಸಕ್ಕೆ ಹಿಂತಿರುಗಿದಳು. ಸಂಜೆಯವರೆಗೂ ಅನು ಮಲಗಿರುವ ನಂಬಿಕೆ ಅವಳಿಗಿತ್ತು.

ಸುಧಾ ನಗರದಲ್ಲಿನ ಒಂದು ಪ್ರತಿಷ್ಠಿತ ನರ್ಸಿಂಗ್ ಹೋಂನಲ್ಲಿ ಜನಿಸಿದ್ದಳು. ವೈದ್ಯರಿಂದ ಸಂಪೂರ್ಣವಾಗಿ ಪರೀಕ್ಷಿಸಲ್ಪಟ್ಟಿದ್ದಳು. ಅವಳಿಗೆ ಸ್ನಾನ ಮಾಡಿಸಿ, ಶುಭ್ರವಾದ ಮತ್ತು ಮೃದುವಾದ ಬಟ್ಟೆ ತೊಡಿಸಿ, ತಾಯಿಯ ಪಕ್ಕದಲ್ಲಿದ್ದ ತೊಟ್ಟಿಲಲ್ಲಿ ಹಾಕಲಾಗಿತ್ತು. ಅವಳ ತಾಯಿ, ಅವಳಿಗೆ ಹಸಿವಾದಾಗಲೆಲ್ಲಾ ಹಾಲುಣಿಸುತ್ತಿದ್ದಳು. ತೂಗುತ್ತಿದ್ದಳು, ಮುದ್ದಿಸುತ್ತಿದ್ದಳು ಹಾಗೂ ಜೋಗುಳ ಹಾಡಿ ಮಲಗಿಸುತ್ತಿದ್ದಳು. ಅವಳ ಕುಟುಂಬದವರು ಮತ್ತು ಸ್ನೇಹಿತರು ಅವಳು ಹುಟ್ಟಿದ್ದಕ್ಕಾಗಿ ಸಂಭ್ರಮಿಸಿದ್ದರು.

ಅನು ಮತ್ತು ಸುಧಾ ಬೇರೆ ಬೇರೆ ರೀತಿಯ ಬಾಲ್ಯದ ದಿನಗಳನ್ನು ಹೊಂದಿದ್ದರು. ಅನು ಅತಿ ಚಿಕ್ಕ ವಯಸ್ಸಿನಲ್ಲಿಯೇ ತನ್ನ ದೈನಂದಿನ ಕೆಲಸಗಳನ್ನು ತಾನೇ ನಿರ್ವಹಿಸಿಕೊಳ್ಳುವುದನ್ನು ಕಲಿತಿದ್ದಳು. ಹಸಿವು ಮತ್ತು ಸೌಲಭ್ಯಗಳಿಲ್ಲದಿರುವುದೇನೆಂಬುದು ಅವಳಿಗೆ ತಿಳಿದಿತ್ತು. ಕಸದ ತೊಟ್ಟಿಯಿಂದ ಆಹಾರವನ್ನು ಆಯ್ದು ತೆಗೆಯುವುದು, ಹೇಗೆ ಚಳಿಗಾಲದಲ್ಲಿ ಬೆಚ್ಚಗಿರುವುದು, ಹೇಗೆ ಮಳೆಗಾಲದಲ್ಲಿ ಆಶ್ರಯ ಪಡೆದುಕೊಳ್ಳುವುದು ಮತ್ತು ತಂತಿ ತುಣುಕುಗಳು, ಕಲ್ಲುಗಳು ಹಾಗೂ ಮರದ ಚಿಕ್ಕ ಕಡ್ಡಿಗಳಿಂದ ಆಟವಾಡುವುದು ಹೇಗೆ ಎಂಬುದನ್ನು ಅವಳು ಕಂಡುಕೊಂಡಿದ್ದಳು. ಅವಳ ತಂದೆ–ತಾಯಿಗಳು ವಲಸೆ ಕಾರ್ಮಿಕರಾಗಿದ್ದು, ಅವರು ಕೆಲಸವನ್ನು ಅರಸಿಕೊಂಡು ನಗರದಿಂದ ನಗರಕ್ಕೆ ವಲಸೆ ಹೋಗುತ್ತಿದ್ದರು. ಆದ್ದರಿಂದ ಅನು ಶಾಲೆಗೆ ಹೋಗಲಾಗುತ್ತಿರಲಿಲ್ಲ.

ಅನು ನೃತ್ಯವನ್ನು ಇಷ್ಟಪಡುತ್ತಿದ್ದಳು. ಅವಳು ಸಂಗೀತವನ್ನು ಕೇಳಿದಾಗಲೆಲ್ಲಾ ಅದರಿಂದ ಉತ್ತೇಜಿತಳಾಗುತ್ತಿದ್ದಳು. ಅವಳು ಅತ್ಯಂತ ಸುಂದರವಾಗಿದ್ದಳು ಮತ್ತು ಅವಳ ಆಂಗಿಕ ಚಲನೆಗಳು ಲಾವಣ್ಯದಿಂದ ಕೂಡಿ, ಪ್ರಚೋದಿಸುವಂತಿದ್ದವು. ಯಾವುದಾದರೂ ಒಂದು ದಿನ ವೇದಿಕೆಯ ಮೇಲೆ ನೃತ್ಯ ಮಾಡುವ ಕನಸು ಅವಳದಾಗಿತ್ತು. ಅನು ಖ್ಯಾತ ನೃತ್ಯಗಾರ್ತಿಯಾಗಬಹುದಿತ್ತು. ಆದರೆ ತನ್ನ ಹನ್ನೆರಡನೇ ವಯಸ್ಸಿನಲ್ಲಿಯೇ ಕೆಲಸ ಮಾಡುವುದನ್ನು ಪ್ರಾರಂಬಿಸಿದಳು. ತನ್ನ ತಂದೆ–ತಾಯಿಗಳೊಂದಿಗೆ ಬದುಕುವುದಕ್ಕಾಗಿ ಶ್ರೀಮಂತರಿಗಾಗಿ ಮನೆಗಳನ್ನು ನಿರ್ಮಿಸುವ ಕೆಲಸದಲ್ಲಿ ದುಡಿಯುತ್ತಿದ್ದಳು. ಆದರೆ ಅವಳು ಆ ಮನೆಗಳಲ್ಲಿ ಎಂದೂ ವಾಸಿಸಿರಲಿಲ್ಲ.

ಸುಧಾ ತುಂಬಾ ಉತ್ತಮವಾದ ಶಿಶುಶಾಲೆಗೆ ಹೋಗಿ ಅಲ್ಲಿ ಅವಳು ಓದುವುದು, ಬರೆಯುವುದು ಮತ್ತು ಕೂಡುವುದು ಹೇಗೆಂಬುದನ್ನು ಕಲಿತುಕೊಂಡಿದ್ದಳು. ಅವಳು ತಾರಾಲಯ, ವಸ್ತು ಸಂಗ್ರಹಾಲಯ ಹಾಗೂ ರಾಷ್ಟ್ರೀಯ ಉದ್ಯಾನಗಳಿಗೆ ಪ್ರವಾಸ ಹೋಗುತ್ತಿದ್ದಳು. ನಂತರ ಅವಳು ಉತ್ತಮ ಶಾಲೆಗೆ ಸೇರಿಕೊಂಡಳು. ಅವಳು ಚಿತ್ರ ಕಲೆಯನ್ನು ಇಷ್ಟಪಡುತ್ತಿದ್ದಳು ಮತ್ತು ಅದಕ್ಕಾಗಿ ಖ್ಯಾತ ಕಲಾವಿದನಿಂದ ಖಾಸಗಿ ಪಾಠವನ್ನು ಪಡೆದಳು. ನಂತರ ಚಿತ್ರಕಲಾ ಶಾಲೆಯನ್ನು ಸೇರಿ ಖ್ಯಾತ ವರ್ಣಚಿತ್ರಗಾರ್ತಿಯಾದಳು.

ಬಡವರಲ್ಲಿ ಅಪೌಷ್ಟಿಕತೆಯು ಗರಿಷ್ಠ ಮಟ್ಟದಲ್ಲಿದೆ. ಅನಾರೋಗ್ಯ, ಅಶಕ್ತತೆ ಅಥವಾ ಗಂಭೀರ ಸ್ವರೂಪದ ಖಾಯಿಲೆಗಳು ಅವರನ್ನು ದೈಹಿಕವಾಗಿ ದುರ್ಬಲರನ್ನಾಗಿಸಿವೆ. ಅವರು ಖಾಸಗೀ ಲೇವಾದೇವಿದಾರರಿಂದ ಅಧಿಕ ಬಡ್ಡಿದರದಲ್ಲಿ ಸಾಲ ಪಡೆಯುತ್ತಾರೆ. ಅದು ಅವರನ್ನು ಶಾಶ್ವತ ಸಾಲಗಾರರನ್ನಾಗಿ ಮಾಡಿದೆ. ಬಡವರು ತಮ್ಮ ಮಾಲೀಕರಿಂದ ನ್ಯಾಯಬದ್ಧವಾಗಿ ಪಡೆಯಬೇಕಾದ ಕೂಲಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಶೋಷಣೆಗೆ ಒಳಗಾಗಿದ್ದಾರೆ. ಹೆಚ್ಚಿನ ಬಡ ಕುಟುಂಬಗಳಿಗೆ ವಿದ್ಯುಚ್ಛಕ್ತಿಯ ಸೌಲಭ್ಯಗಳಿಲ್ಲ. ಅಡಿಗೆ ಮಾಡಲು ಉರುವಲು ಕಟ್ಟಿಗೆ ಮತ್ತು ಸಗಣಿಯ ಬೆರಣಿಯನ್ನು ಅವಲಂಬಿಸಿದ್ದಾರೆ. ಹೆಚ್ಚಿನ ಬಡವರು ಶುದ್ಧ ಕುಡಿಯುವ ನೀರಿನ ಸೌಲಭ್ಯದಿಂದಲೂ ವಂಚಿತರಾಗಿದ್ದಾರೆ. ಬಡ ಕುಟುಂಬದಲ್ಲಿ ಅತಿಯಾದ ಲಿಂಗತಾರತಮ್ಯದಿಂದಾಗಿ ಮಹಿಳೆಯರು ಲಾಭದಾಯಕ ಉದ್ಯೋಗದಲ್ಲಿ ಭಾಗವಹಿಸಲು, ಶಿಕ್ಷಣ ಮತ್ತು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ತಾಯ್ತನಕ್ಕೆ ಸಂಬಂಧಿಸಿದಂತೆ ಬಡ ಮಹಿಳೆಯರು ಕಡಿಮೆ ಆರೈಕೆಯನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಆರೋಗ್ಯವಂತ ಮಕ್ಕಳು ಜನಿಸುವ ಅಥವಾ ಅವರ ಮಕ್ಕಳು ಬದುಕುಳಿಯುವ ಸಾಧ್ಯತೆ ಕಡಿಮೆ ಇದೆ.



**ಚಿತ್ರ 4.1 ಬಹುತೇಕ ಕೃಷಿ ಕಾರ್ಮಿಕರು ಬಡವರಾಗಿದ್ದಾರೆ**



**ಚಿತ್ರ 4.2 ಅನೇಕ ಬಡ ಕುಟುಂಬಗಳು ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ**

ಅರ್ಥಶಾಸ್ತ್ರಜ್ಞರು ವೃತ್ತಿ ಮತ್ತು ಆಸ್ತಿಗಳ ಮಾಲೀಕತ್ವದ ಆಧಾರದ ಮೇಲೆ ಬಡವರನ್ನು ಗುರುತಿಸಿದ್ದಾರೆ. ಅವರ ಪ್ರಕಾರ ಗ್ರಾಮೀಣ ಬಡವರು ಭೂ ರಹಿತ ಕೃಷಿ ಕಾರ್ಮಿಕರಾಗಿ, ಅತಿ ಸಣ್ಣ ಹಿಡುವಳಿದಾರರಾಗಿ, ಕೃಷಿಯೇತರ ವಿವಿಧ ಕಸುಬುಗಳಲ್ಲಿ ನಿರತರಾಗಿರುವ ಭೂರಹಿತ ಕೃಷಿ ಕಾರ್ಮಿಕರಾಗಿ ಮತ್ತು ಗೇಣಿದಾರರಾಗಿ ಕೆಲಸ ಮಾಡುತ್ತಿರುತ್ತಾರೆ.

ನಗರ ಪ್ರದೇಶದ ಬಡವರೆಂದರೆ, ಗ್ರಾಮೀಣ ಪ್ರದೇಶದಲ್ಲಿ ಬಡವರ ಸಂಖ್ಯೆ ಹೆಚ್ಚಾಗಿ, ಅವರು ತಮ್ಮ ಜೀವನ ನಿರ್ವಹಣೆಗೋಸ್ಕರ ಪರ್ಯಾಯ ಉದ್ಯೋಗಗಳನ್ನು ಮತ್ತು ಬದುಕನ್ನು ಅರಸಿ ವಲಸೆ ಬಂದವರು. ಅವರು ಬಹುಮಟ್ಟಿಗೆ ವಿವಿಧ ಸಾಂದರ್ಭಿಕ ಕೆಲಸಗಳನ್ನು ನಿರ್ವಹಿಸುವ ಮತ್ತು ರಸ್ತೆಬದಿಗಳಲ್ಲಿ ವಿವಿಧ ವಸ್ತುಗಳನ್ನು ಮಾರುವ ಸ್ವಯಂ ಉದ್ಯೋಗಿಗಳಾಗಿದ್ದಾರೆ ಮತ್ತು ನಾನಾ ರೀತಿಯ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

### ಪೆಟ್ಟಿಗೆ 4.2: ಬಡತನ ಎಂದರೇನು?

ಶಾಹೀನ್ ರಫ್ಹಿಖಾನ್ ಮತ್ತು ಡಾಮಿಯನ್ ಕಿಲ್ಲನ್ ಎಂಬ ಇಬ್ಬರು ವಿದ್ವಾಂಸರು ಬಡವರನ್ನು ಸಂಕ್ಷಿಪ್ತವಾಗಿ ಹೀಗೆ ವ್ಯಾಖ್ಯಾಸಿನಿದ್ದಾರೆ: ಬಡತನವೆಂದರೆ–ಹಸಿವು, ಬಡತನವೆಂದರೆ–ಅನಾರೋಗ್ಯದಿಂದಿರುವುದು ಮತ್ತು ವೈದ್ಯರನ್ನು ಕಾಣಲು ಅಸಮರ್ಥರಾಗಿರುವುದು. ಬಡತನವೆಂದರೆ–ಶಾಲೆಗೆ ಹೋಗಲು ಸಾಧ್ಯವಾಗದಿರುವುದು ಮತ್ತು ಓದುವುದು ಗೊತ್ತಿಲ್ಲದಿರುವುದು. ಬಡತನವೆಂದರೆ–ಉದ್ಯೋಗವಿಲ್ಲದಿರುವುದು ಮತ್ತು ಭವಿಷ್ಯದ ಬಗ್ಗೆ ಭಯಸ್ಥರಾಗಿರುವುದು ಹಾಗೂ ದಿನದಲ್ಲಿ ಕೇವಲ ಒಂದು ಹೊತ್ತಿನ ಊಟವನ್ನು ಪಡೆಯುವಂತಹ ಸ್ಥಿತಿ. ಬಡತನವೆಂದರೆ–ಅಶುದ್ಧವಾದ ನೀರಿನಿಂದ ಬರಬಹುದಾದ ಖಾಯಿಲೆಗಳಿಂದ ಮಗುವನ್ನು ಕಳೆದುಕೊಳ್ಳುವ ಸ್ಥಿತಿ. ಬಡತನವೆಂದರೆ–ಅಧಿಕಾರವಿದಲ್ಲದಿರುವುದು, ಪ್ರಾತಿನಿಧ್ಯತೆ ಮತ್ತು ಸ್ವಾತಂತ್ರ್ಯ ಇಲ್ಲದಿರುವುದು.

ನೀವೇನು ಯೋಚಿಸುವಿರಿ?

## 4.3 ಬಡಜನರನ್ನು ಗುರುತಿಸುವುದು ಹೇಗೆ?

### (HOW ARE POOR PEOPLE IDENTIFIED?)

ಭಾರತವು ಬಡತನದ ಸಮಸ್ಯೆಯನ್ನು ನಿವಾರಿಸಬೇಕಾದಲ್ಲಿ ಬಡತನದ ಕಾರಣಗಳನ್ನು ಗುರುತಿಸಿ, ಸೂಕ್ತ ಮತ್ತು ಸುಸ್ಥಿರ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಬಡವರನ್ನು ಆ ಸ್ಥಿತಿಯಿಂದ ಹೊರತರಲು ಸಹಾಯವಾಗುವಂತಹ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಆದರೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಬಡವರು ಯಾರೆಂದು ನಿಖರವಾಗಿ ಗುರುತಿಸುವ ಅವಶ್ಯಕತೆ ಇದೆ. ಅದಕ್ಕೋಸ್ಕರ ಬಡತನವನ್ನು ಮಾಪನಮಾಡುವ ಮಾನದಂಡಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಮತ್ತು ಬಡತನವನ್ನು ಮಾಪನ ಮಾಡಲು ಯೋಗ್ಯವಾದ ತಂತ್ರಗಳನ್ನು ಅತ್ಯಂತ ಎಚ್ಚರಿಕೆಯಿಂದ ಆಯ್ಕೆಮಾಡಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ದಾದಾಬಾಯಿ ನವರೋಜಿಯವರು ಬಡತನ ರೇಖೆಯ ಪರಿಕಲ್ಪನೆ ಬಗ್ಗೆ ಮೊಟ್ಟಮೊದಲು ಚರ್ಚಿಸಿದರು. ಅವರು ಜೈಲಿನಲ್ಲಿ ಕೈದಿಯೊಬ್ಬನಿಗೆ ಕೊಡುತ್ತಿದ್ದ ಊಟ ಮತ್ತು ಅದಕ್ಕೆ ಸಂಬಂಧಿಸಿದ ಸೂಕ್ತ ಆಹಾರ ಸಾಮಗ್ರಿಗಳ ಬೆಲೆಗಳ ಆಧಾರದ ಮೇಲೆ 'ಕಾರಾಗೃಹ ಜೀವನ ವೆಚ್ಚ' ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ್ದರು. ಆದರೆ ಬಂಧೀಖಾನೆಗಳಲ್ಲಿ ಕೇವಲ ವಯಸ್ಕರು ಇದ್ದು, ವಾಸ್ತವಿಕ ಸಮಾಜದಲ್ಲಿ ಮಕ್ಕಳೂ ಇರುತ್ತಾರೆ. ಆದ್ದರಿಂದ ಅವರು ಈ ಜೀವನ ವೆಚ್ಚವನ್ನು ಸೂಕ್ತವಾಗಿ ಹೊಂದಾಣಿಕೆ ಮಾಡಿಕೊಂಡು ಬಡತನ ರೇಖೆಯನ್ನು ಪ್ರಸ್ತುತಪಡಿಸಿದ್ದಾರೆ. ಈ ಹೊಂದಾಣಿಕೆಗಾಗಿ, ಅವರು ಭಾವಿಸುವುದೇನೆಂದರೆ, ಮೂರನೆ ಒಂದು ಭಾಗದ ಜನಸಂಖ್ಯೆಯು ಮಕ್ಕಳಿಂದ ಕೂಡಿದೆ ಮತ್ತು ಅವರಲ್ಲಿ ಅರ್ಧದಷ್ಟು ಮಕ್ಕಳು ಅತಿ ಕಡಿಮೆ ಅನುಭೋಗಿಸುತ್ತಿದ್ದು, ಉಳಿದ ಅರ್ಧಭಾಗದ(ಶೇ.50ರಷ್ಟು) ಮಕ್ಕಳು ವಯಸ್ಕರ ಆಹಾರದಲ್ಲಿ ಅರ್ಧಭಾಗದಷ್ಟು ಅನುಭೋಗಿಸುತ್ತಾರೆ. ನಾಲ್ಕನೇ ಮೂರು ಅಂಶದ ಲೆಕ್ಕಾಚಾರಕ್ಕೆ ಅವರು ಈ ತೀರ್ಮಾನಕ್ಕೆ ಬಂದಿದ್ದಾರೆ; (1/6) (ಇಲ್ಲ) + (1/6) (ಅರ್ಧ) + (2/3) (ಪೂರ್ಣ) = (3/4) (ಪೂರ್ಣ). ಈ ಮೂರು ವಿಭಾಗಗಳ ಸರಾಸರಿ ಅನುಭೋಗದ ಆಧಾರದ ಮೇಲೆ ಸರಾಸರಿ ಬಡತನರೇಖೆ ನಿರ್ಧಾರವಾಗುತ್ತದೆ. ಅದು ವಯಸ್ಕರ ಕಾರಾಗೃಹ ಜೀವನ ವೆಚ್ಚದ ನಾಲ್ಕನೇ ಮೂರರಷ್ಟಾಗುತ್ತದೆ.

ಸ್ವತಂತ್ರ ಭಾರತದಲ್ಲಿ, ದೇಶದಲ್ಲಿನ ಬಡವರ ಸಂಖ್ಯೆಯನ್ನು ಗುರುತಿಸಲು ಯಾಂತ್ರಿಕ ಕೌಶಲ್ಯದ ರಚನೆಗೆ ಅನೇಕ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ, 1962 ರಲ್ಲಿ ಯೋಜನಾ ಆಯೋಗವು ಅಧ್ಯಯನ ತಂಡವೊಂದನ್ನು ರಚಿಸಿತ್ತು. 1979 ರಲ್ಲಿ "ಕನಿಷ್ಠ ಅಗತ್ಯಗಳು ಮತ್ತು ಪರಿಣಾಮಕಾರಿ ಅನುಭೋಗದ ಬೇಡಿಕೆ ಯೋಜನೆಗಳ ಮೇಲಿನ ಕಾರ್ಯಪಡೆ" ಎಂಬ ಮತ್ತೊಂದು ಸಂಸ್ಥೆಯನ್ನು ರಚಿಸಲಾಯಿತು. ಇದೇ ಉದ್ದೇಶಕ್ಕಾಗಿ 1989 ಮತ್ತು 2005ರಲ್ಲಿ 'ತಜ್ಞರ ತಂಡವನ್ನು' ರಚಿಸಲಾಗಿತ್ತು. ಯೋಜನಾ ಆಯೋಗವಲ್ಲದೆ ಇಂತಹ ಯಾಂತ್ರಿಕ ಕೌಶಲ್ಯಗಳ ಅಭಿವೃದ್ಧಿಗೆ ಅನೇಕ ಅರ್ಥಶಾಸ್ತ್ರಜ್ಞರು ವೈಯಕ್ತಿಕವಾಗಿ ಪ್ರಯತ್ನಿಸಿದ್ದಾರೆ.

ಬಡತನವನ್ನು ವ್ಯಾಖ್ಯಾನಿಸುವ ಉದ್ದೇಶಕ್ಕಾಗಿ ನಾವು ಜನರನ್ನು ಎರಡು ವರ್ಗಗಳಾಗಿ ವಿಂಗಡಿಸಿದ್ದೇವೆ; ಬಡವರು ಮತ್ತು ಬಡವರಲ್ಲದವರು. ಬಡತನ ರೇಖೆಯು ಇವೆರಡು ವರ್ಗಗಳನ್ನು ವಿಭಜಿಸುತ್ತದೆ. ಅಲ್ಲದೆ ಬಡವರಲ್ಲಿ ಅನೇಕ ವಿಧಗಳಿವೆ; ಸಂಪೂರ್ಣ ಬಡವರು, ಕಡುಬಡವರು ಮತ್ತು ಬಡವರು. ಅದೇರೀತಿಯಲ್ಲಿ ಬಡವರಲ್ಲದವರಲ್ಲಿ ಅನೇಕ ವಿಧಗಳಿವೆ; ಮಧ್ಯಮ ವರ್ಗ, ಮೇಲ್ಮಧ್ಯಮ ವರ್ಗ, ಶ್ರೀಮಂತರು, ಅತಿ ಶ್ರೀಮಂತರು ಮತ್ತು ಸಂಪೂರ್ಣ ಶ್ರೀಮಂತರು. ಬಡತನ ರೇಖೆಯು ಅತ್ಯಂತ ಬಡವರಿಂದ ಅತ್ಯಂತ ಶ್ರೀಮಂತರವರೆಗೆ ಇದ್ದು, ಅದು ಬಡವರನ್ನು ಬಡವರಲ್ಲದವರಿಂದ ವಿಭಜಿಸುವ ರೇಖೆಯಾಗಿದೆ(ಬಿಂದುವಾಗಿದೆ).

**ಪಟ 4.1: ಬಡತನ ರೇಖೆ**

| ಸಂಪೂರ್ಣ ಬಡವರು | ಕಡು ಬಡವರು | ಬಡವರು | ಅಷ್ಟಾಗಿ ಬಡವರಲ್ಲದವರು | ಮಧ್ಯಮ ವರ್ಗ | ಮೇಲ್ ಮಧ್ಯಮ ವರ್ಗ | ಶ್ರೀಮಂತರು | ಅತಿ ಶ್ರೀಮಂತರು | ಲಕ್ಷಾಧಿಪತಿಗಳು | ಕೋಟ್ಯಾಧಿಪತಿಗಳು |
|---|---|---|---|---|---|---|---|---|---|

ಬಡವರು ಬಡವರಲ್ಲದವರು

## ಬಡತನದ ವರ್ಗೀಕರಣ

## (CATEGORISING POVERTY)

ಬಡತನದ ವರ್ಗೀಕರಣಕ್ಕೆ ಅನೇಕ ಮಾರ್ಗಗಳಿವೆ. ಸದಾ ಬಡವರು (Always Poor) ಮತ್ತು ಸಾಮಾನ್ಯ ಬಡವರು (Usually Poor) ಎಂಬುದು ಅಂತಹ ಒಂದು ಮಾರ್ಗವಾಗಿದೆ. ಆದರೆ ಇವರು ಕೆಲವೊಮ್ಮೆ ಅತ್ಯಲ್ಪ ಹಣ ಹೊಂದಿದ್ದು (ಉದಾ. ದಿನಗೂಲಿ / ಸಾಂದರ್ಭಿಕ ಕೆಲಸಗಾರರು) ಇವರನ್ನು ದೀರ್ಘಕಾಲದ (ಶಾಶ್ವತ) (Chronic)ಬಡವರೆಂದು ವರ್ಗೀಕರಿಸಲಾಗಿದೆ. ಮತ್ತೊಂದು ಗುಂಪಿನವರೆಂದರೆ **'ಕಡೆಯುವ ಬಡವರು'** (Churning Poor), ಇವರು ಬಡತನದ ಒಳಗೆ ಮತ್ತು ಹೊರಗೆ ನಿರಂತರವಾಗಿ ಚಲಿಸುವವರಾಗಿದ್ದಾರೆ. (ಉದಾಹರಣೆ:– ಸಣ್ಣ ರೈತರು ಮತ್ತು ಋತುಮಾನ ಕೆಲಸಗಾರರು.) **'ಪ್ರಾಸಂಗಿಕ/ಆಕಸ್ಮಿಕ ಬಡವರು' (Occasionally Poor)** ಇವರು ಬಹುತೇಕ ಕಾಲ ಶ್ರೀಮಂತರಾಗಿದ್ದು, ಕೆಲವು ಸಮಯಗಳಲ್ಲಿ ದುರಾದೃಷ್ಟದಿಂದಾಗಿ ಬಡವರಾಗಬಹುದು. ಇವರನ್ನು **'ಕ್ಷಣಿಕ ಬಡವರು'** (Transient Poor) ಎಂದೂ ಕರೆಯಲಾಗುತ್ತದೆ. ಹಲವರು ಎಂದಿಗೂ ಬಡವರಾಗದವರು (Never Poor) ಇದ್ದು ಮತ್ತು ಅವರು ಬಡವರಲ್ಲದವರೆನಿಸುತ್ತಾರೆ (Non-Poor).

## ಬಡತನ ರೇಖೆ

## (THE POVERTY LINE)

ಈಗ ನಾವು ಬಡತನ ರೇಖೆಯನ್ನು ನಿರ್ಧರಿಸುವುದು ಹೇಗೆ ಎಂಬುದನ್ನು ಪರಿಶೀಲಿಸೋಣ. ಬಡತನವನ್ನು ಮಾಪನ ಮಾಡಲು ಅನೇಕ ಮಾರ್ಗಗಳಿವೆ. ಗ್ರಾಮೀಣ ಪ್ರದೇಶದ ವ್ಯಕ್ತಿಗೆ ದಿನಕ್ಕೆ ಕನಿಷ್ಟ 2400 ಕ್ಯಾಲೊರಿಗಳು ಮತ್ತು ನಗರ ಪ್ರದೇಶದ ವ್ಯಕ್ತಿಗೆ ದಿನಕ್ಕೆ ಕನಿಷ್ಟ 2100 ಕ್ಯಾಲೊರಿಗಳಷ್ಟು ಪೌಷ್ಠಿಕಾಂಶದ ಆಹಾರದ ಅವಶ್ಯಕತೆ ಇದ್ದು, ಅದರ ಹಣದ ಮೌಲ್ಯ(ತಲಾ ವೆಚ್ಚ)ದ ಮೂಲಕ ಬಡತನ ರೇಖೆಯನ್ನು ನಿರ್ಧರಿಸುವುದು ಒಂದು ಮಾರ್ಗವಾಗಿದೆ. ಇದರ ಆಧಾರದ ಮೇಲೆ 2009–2010ರಲ್ಲಿ ಮಾಸಿಕ ತಲಾ ಅನುಭೋಗ ವೆಚ್ಚ ಗ್ರಾಮೀಣ ಪ್ರದೇಶದಲ್ಲಿ ರೂ.673 ಮತ್ತು ನಗರ ಪ್ರದೇಶದಲ್ಲಿ ರೂ.860ಗಳಿಗೆ ಬಡತನ ರೇಖೆ ಎಂದು ವ್ಯಾಖ್ಯಾನಿಸಲಾಗಿದೆ.

ಸರ್ಕಾರವು ಕುಟುಂಬಗಳ ಆದಾಯಕ್ಕೆ ಬದಲಾಗಿ **'ಮಾಸಿಕ ತಲಾ ಅನುಭೋಗ ವೆಚ್ಚ' (MPCE) ವನ್ನು** ಬಡವರನ್ನು ಗುರುತಿಸಲು ಬಳಸುತ್ತಿದ್ದಾಗ್ಯೂ ಈ ತಾಂತ್ರಿಕ ವಿಧಾನವು ನಮ್ಮ ದೇಶದಲ್ಲಿ ಬಡ ಕುಟುಂಬಗಳನ್ನು ಸಮರ್ಪಕವಾಗಿ ಗುರುತಿಸುವುದೆಂದು ನೀವು ಭಾವಿಸುತ್ತೀರಾ?




**ರೇಖಾಚಿತ್ರ 4.2: ದೀರ್ಘಕಾಲಿಕ ಬಡವರು, ಕ್ಷಣಿಕ ಬಡವರು ಮತ್ತು ಬಡವರಲ್ಲದವರು**

ಅರ್ಥಶಾಜ್ಞರ ಪ್ರಕಾರ ಈ ತಾಂತ್ರಿಕ ವಿಧಾನದ ಪ್ರಮುಖ ಸಮಸ್ಯೆ ಎಂದರೆ ಎಲ್ಲಾ ಬಡವರನ್ನು ಒಂದೇ ಗುಂಪಿನಲ್ಲಿ ಸೇರಿಸಿರುವುದು. ಅದು ಕಡುಬಡವರು ಮತ್ತು ಇತರೆ ಬಡವರನ್ನು ವ್ಯತ್ಯಾಸಗೊಳಿಸುವುದಿಲ್ಲ. (ರೇಖಾಪಟ: 4.2ನ್ನು ನೋಡಿ). ಈ ಬದಲಿ ವಿಧಾನವು ಕೇವಲ ಆಹಾರದ ಅನುಭೋಗದ ವೆಚ್ಚ ಮತ್ತು ಕೆಲವೇ ಆಯ್ದ ವಸ್ತುಗಳ ಅನುಭೋಗದ ಆಧಾರದ ಮೇಲೆ ಬಡತನ ರೇಖೆಯನ್ನು ನಿರ್ಧರಿಸಿರುವುದನ್ನು ಅರ್ಥಶಾಸ್ತ್ರಜ್ಞರು ಪ್ರಶ್ನಿಸಿದ್ದಾರೆ. ಈ ಯಾಂತ್ರಿಕ ವಿಧಾನವು ಬಡವರನ್ನು ಒಟ್ಟಾರೆಯಾಗಿ ಗುರುತಿಸಲು ಸಹಾಯಕವಾಗಿದೆ. ಆದರೆ ಬಡವರಲ್ಲಿ ಯಾರಿಗೆ ಸರ್ಕಾರದ ಸಹಾಯ ಹೆಚ್ಚು ಅಗತ್ಯವಾಗಿ ಬೇಕಾಗಿದೆ ಎಂದುನ್ನು ಗುರುತಿಸುವುದು ಕಷ್ಟವಾಗಿದೆ.

ಆದಾಯ ಮತ್ತು ಆಸ್ತಿಗಳಲ್ಲದೆ ಬಡತನಕ್ಕೆ ಸಂಬಂಧಿಸಿದ ಅನೇಕ ಅಂಶಗಳಿವೆ. ಉದಾಹರಣೆಗೆ ಮೂಲ ಶಿಕ್ಷಣ, ಆರೋಗ್ಯ ಸುರಕ್ಷತೆ, ಕುಡಿಯುವ ನೀರು ಮತ್ತು ನೈರ್ಮಲ್ಯಗಳ ಲಭ್ಯತೆ ಇವುಗಳನ್ನು ಬಡತನದ ರೇಖೆಯನ್ನು ಅಭಿವೃದ್ಧಿಪಡಿಸಲು ಪರಿಗಣಿಸಬೇಕಾದ ಅಗತ್ಯವಿದೆ. ಈಗ ಅಸ್ಥಿತ್ವದಲ್ಲಿರುವ ವಿಧಾನವು ಬಡತನ ರೇಖೆಯನ್ನು ನಿರ್ಧರಿಸುವಲ್ಲಿ ಬಡತನವನ್ನು ಪ್ರಚೋದಿಸುವ ಮತ್ತು ಶಾಶ್ವತಗೊಳಿಸುವಂತಹ ಇತರೆ ಸಾಮಾಜಿಕ ಅಂಶಗಳಾದ ಅನಕ್ಷರತೆ, ಅನಾರೋಗ್ಯ, ಸಂಪನ್ಮೂಲಗಳ ಲಭ್ಯತೆಯ ಅಭಾವ, ನಾಗರೀಕ ಮತ್ತು ರಾಜಕೀಯ ಸ್ವಾತಂತ್ರ್ಯ ಅಭಾವ ಮುಂತಾದ ತಾರತಮ್ಯಗಳನ್ನು ಪರಿಗಣಿಸಿಲ್ಲ. ವ್ಯಕ್ತಿಗಳಿಗೆ ಆರೋಗ್ಯವಂತ ಮತ್ತು ಪೌಷ್ಠಿಕಾಂಶವುಳ್ಳ ಸರಕುಗಳ ಲಭ್ಯತೆ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಜನರ ಜೀವನಮಟ್ಟವನ್ನು ಉತ್ತಮಪಡಿಸುವುದು ಮತ್ತು ಅವರನ್ನು ಜ್ಞಾನವಂತರಾನ್ನಾಗಿ ಸಮುದಾಯದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು ಬಡತನದ ಉಪಶಮನ ನೀತಿಗಳ ಮೂಲ ಉದ್ದೇಶವಾಗಿರಬೇಕು. **ಅಭಿವೃದ್ಧಿ ಎಂದರೆ, ವ್ಯಕ್ತಿಯ ಬದುಕಿಗೆ ಅಡೆತಡೆಯಾಗಿರುವ ಸಂಗತಿಗಳಾದ ಅನಕ್ಷರತೆ, ಅನಾರೋಗ್ಯ, ಸಂಪನ್ಮೂಲಗಳನ್ನು ಪಡೆಯುವಲ್ಲಿನ ಅಸಮರ್ಥತೆ ಅಥವಾ ನಾಗರೀಕ ಮತ್ತು ರಾಜಕೀಯ ಸ್ವಾತಂತ್ರ್ಯದ ಕೊರತೆಯನ್ನು ತೊಡೆದುಹಾಕುವುದು.**

ಅಧಿಕ ಬೆಳವಣಿಗೆ ದರ, ಕೃಷಿ ಉತ್ಪಾದನೆಯ ಹೆಚ್ಚಳ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು 1990ರ ದಶಕದಲ್ಲಿ ಪರಿಚಯಿಸಲಾದ ಆರ್ಥಿಕ ಸುಧಾರಣಾ ಕ್ರಮಗಳ ಪರಿಣಾಮದಿಂದಾಗಿ ಬಡತನ ಮಟ್ಟ ಕಡಿಮೆಯಾಗಿದೆ ಎನ್ನುವುದು ಸರ್ಕಾರದ ವಾದವಾಗಿದ್ದಾಗ್ಯೂ ಅರ್ಥಶಾಸ್ತ್ರಜ್ಞರು ಸರ್ಕಾರದ ಈ ವಾದದ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ದತ್ತಾಂಶಗಳನ್ನು ಸಂಗ್ರಹಿಸಿರುವ ವಿಧಾನ, ಅನುಭೋಗದ ಬುಟ್ಟಿಯಲ್ಲಿರುವ ಸರಕುಗಳು, ಬಡತನ ರೇಖೆಯನ್ನು ಅಂದಾಜಿಸಿರುವ ಮಾರ್ಗಗಳು ಮತ್ತು ಬಡವರ ಸಂಖ್ಯೆಯನ್ನು ತಿರುಚಿ ಭಾರತದಲ್ಲಿ ಬಡವರ ಸಂಖ್ಯೆ ಕಡಿಮೆಯಾಗಿದೆ ಎಂಬ ಹೇಳಿಕೆಗೆ ಅರ್ಥಶಾಸ್ತ್ರಜ್ಞರು ಗಮನಸೆಳೆದಿದ್ದಾರೆ.

ಬಡತನವನ್ನು ಅಧಿಕೃತವಾಗಿ ಅಂದಾಜಿಸುವ ವಿಧಾನಗಳಲ್ಲಿ ವಿವಿಧ ಮಿತಿಗಳಿರುವುದರಿಂದ ಅರ್ಥಶಾಸ್ತ್ರಜ್ಞರು ಪರ್ಯಾಯ ವಿಧಾನಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದ್ದಾರೆ. ಉದಾಹರಣೆಗೆ ನೋಬೆಲ್ ಪಾರಿತೋಷಕ ಪುರಸ್ಕೃತ ಅಮರ್ತ್ಯಸೇನ್ ರವರು ಅಭಿವೃದ್ಧಿಪಡಿಸಿರುವ 'ಸೇನ್ ಸೂಚ್ಯಾಂಕ'. ಇತರೆ ಸೂಚ್ಯಾಂಕಗಳು ಇವೆ, ಅವುಗಳೆಂದರೆ, 'ಬಡತನ ಅಂತರ ಸೂಚಿ' ಮತ್ತು 'ದ್ವಿಗುಣಗೊಳಿಸಲಾದ ಬಡತನ ಅಂತರ'. ಈ ಸೂಚ್ಯಾಂಕಗಳ ಬಗ್ಗೆ ನೀವು ಉನ್ನತ ತರಗತಿಗಳಲ್ಲಿ ಅಭ್ಯಸಿಸಲಿದ್ದೀರಿ.

## 4.4 ಭಾರತದಲ್ಲಿ ಬಡವರ ಸಂಖ್ಯೆ (THE NUMBER OF POOR IN INDIA)

ಬಡತನ ರೇಖೆಗಿಂತ ಕೆಳಗಿರುವ ಜನರ ಪ್ರಮಾಣದ ಆಧಾರದ ಮೇಲೆ ಬಡವರ ಸಂಖ್ಯೆಯನ್ನು ಅಂದಾಜಿಸುವುದನ್ನು 'ತಲೆ ಎಣಿಕೆ ಅನುಪಾತ' ಎನ್ನುತ್ತೇವೆ (Head count ratio).

ಭಾರತದಲ್ಲಿ ವಾಸಿಸುತ್ತಿರುವ ಒಟ್ಟು ಬಡವರ ಸಂಖ್ಯೆಯನ್ನು ತಿಳಿಯುವ ಆಸಕ್ತಿ ನಿಮಗಿರಬಹುದು. ಅವರು ಎಲ್ಲಿ ವಾಸಿಸುತ್ತಿದ್ದಾರೆ ಮತ್ತು ಕಾಲಕ್ರಮೇಣ ಅವರ ಸಂಖ್ಯೆ ಅಥವಾ ಪ್ರಮಾಣ ಕಡಿಮೆಯಾಗಿದೆಯೇ ಅಥವಾ ಇಲ್ಲವೇ? ಈ ರೀತಿಯ ಅನುಪಾತ ಮತ್ತು ಶೇಕಡಾವಾರು ಪ್ರಮಾಣಗಳ ಆಧಾರದ ಮೇಲೆ ಬಡಜನರ ತುಲನಾತ್ಮಕ ವಿಶ್ಲೇಷಣೆ, ಬಡತನದ ವಿವಿಧ ಹಂತಗಳು ಮತ್ತು ಕಾಲಾಂತರದಲ್ಲಿ ಅವರು ವಿವಿಧ ರಾಜ್ಯಗಳ ನಡುವೆ ಹಂಚಿಕೆಯಾಗಿರುವುದರ ಬಗ್ಗೆ ನಮಗೆ ತಿಳಿಯುತ್ತದೆ.

ಬಡತನದ ಅಧಿಕೃತ ಅಂಕಿಅಂಶಗಳು ಯೋಜನಾ ಆಯೋಗದಿಂದ ಸಾರ್ವಜನಿಕರಿಗೆ ಲಭಿಸುತ್ತವೆ. ಇದನ್ನು 'ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ' (NSSO)ಯು



## ನೀವೇ ಮಾಡಿರಿ
## (Work These Out)

- ಕೇವಲ ಆದಾಯ ಮತ್ತು ವೆಚ್ಚದ ಸೂಚಕಗಳಲ್ಲದೆ, ಇತರೆ ಅನೇಕ ಅಂಶಗಳಾದ ಭೂಮಿ, ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯಗಳನ್ನು ಹೊಂದಿರುವುದರ ಆಧಾರದ ಮೇಲೆ ಬಡವರನ್ನು ಗುರುತಿಸಿರುವುದನ್ನು, ಜೊತೆಗೆ ತಾರತಮ್ಯ ಆಚರಣೆಯನ್ನು ಪರಿಗಣಿಸಿರುವುದನ್ನು ನೀವು 4.2 ಮತ್ತು 4.3ನೇ ವಿಭಾಗದಲ್ಲಿ ಗಮನಿಸಬಹುದು. ಈ ಎಲ್ಲಾ ಸೂಚಕಗಳನ್ನು ಒಳಗೊಂಡಂತೆ ಬಡತನ ರೇಖೆಯ ಪರ್ಯಾಯ ವಿಧಾನಗಳನ್ನು ರಚಿಸುವುದು ಹೇಗೆ ಎಂಬುದನ್ನು ಚರ್ಚಿಸಿ.
- ಬಡತನ ರೇಖೆಗೆ ನೀಡಿರುವ ವ್ಯಾಖ್ಯಾನಗಳ ಆಧಾರದ ಮೇಲೆ ನಿಮ್ಮ ಪ್ರದೇಶದ ನೆರೆಹೊರೆಯಲ್ಲಿ ಗೃಹ ಕೆಲಸಗಳಿಗೆ ನೆರವಾಗುವ ಮಡಿವಾಳರು ಮತ್ತು ಸುದ್ದಿ ಪತ್ರಿಕೆಗಳನ್ನು ಹಂಚುವವರು ಮುಂತಾದವರು ಬಡತನ ರೇಖೆಯಿಂದ ಮೇಲಿದ್ದಾರೆಯೇ ಅಥವಾ ಇಲ್ಲವೆ ಎಂಬುದನ್ನು ಕಂಡುಹಿಡಿಯಿರಿ.

ಸಂಗ್ರಹಿಸುವ ಅನುಭೋಗ ವೆಚ್ಚದ ಅಂಕಿ–ಅಂಶಗಳ ಆಧಾರದ ಮೇಲೆ ಅಂದಾಜಿಸಲಾಗುತ್ತದೆ. 1973–2012ರ ವರೆಗಿನ ಅವಧಿಯಲ್ಲಿ ಭಾರತದ ಜನಸಂಖ್ಯೆಯಲ್ಲಿರುವ ಬಡವರ ಸಂಖ್ಯೆ ಮತ್ತು ಶೇಕಡಾವಾರು ಪ್ರಮಾಣವನ್ನು ರೇಖಾಚಿತ್ರ 4.3ರಲ್ಲಿ ತೋರಿಸಲಾಗಿದೆ. 1973–74ರಲ್ಲಿ 320 ದಶಲಕ್ಷಗಳಿಗಿಂತ ಅಧಿಕ ಜನರು ಬಡತನದ ರೇಖೆಗಿಂತ ಕೆಳಗಿದ್ದರು. 2011–12ರಲ್ಲಿ ಈ ಸಂಖ್ಯೆಯು ಸುಮಾರು 270 ದಶಲಕ್ಷಗಳಿಗೆ ಇಳಿದಿದೆ.

ಶೇಕಡಾವಾರು ಪ್ರಮಾಣದಲ್ಲಿ 1973–74ರಲ್ಲಿ ಒಟ್ಟು ಜನಸಂಖ್ಯೆಯ ಶೇ.55ರಷ್ಟು ಬಡತನ ರೇಖೆಯ ಕೆಳಗಿದ್ದರು. 2011–12ರಲ್ಲಿ ಈ ಪ್ರಮಾಣವು ಶೇ.22ಕ್ಕೆ ಇಳಿದಿತ್ತು. 1973–74ರಲ್ಲಿ ಶೇ.80 ಕ್ಕಿಂತ ಹೆಚ್ಚು ಬಡವರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಮತ್ತು 2011–12ರಲ್ಲಿಯೂ ಸಹ ಈ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಇದರ ಅರ್ಥ ಭಾರತದಲ್ಲಿ ನಾಲ್ಕನೇ–ಮೂರರಷ್ಟಕ್ಕಿಂತ(3/4) ಅಧಿಕ ಬಡವರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಇದು ಏಕೆ ಹೀಗೆಂದು ನೀವು ಯೋಚಿಸಬಲ್ಲಿರಾ?

1990ರ ದಶಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಡವರ ಸಂಖ್ಯೆಯು ಕಡಿಮೆಯಾಗಿದ್ದು, ನಗರ ಪ್ರದೇಶದಲ್ಲಿ ಅವರ ಸಂಖ್ಯೆಯು ಅತ್ಯಲ್ಪ ಪ್ರಮಾಣದಲ್ಲಿ ಹೆಚ್ಚಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿಯೂ ಬಡತನದ




**ರೇಖಾಚಿತ್ರ 4.3: ಭಾರತದಲ್ಲಿ ಬಡತನದ ಪ್ರವೃತ್ತಿ – 2012 – 1973**

ಅನುಪಾತವು ನಿರಂತರವಾಗಿ ಕಡಿಮೆಯಾಗಿದೆ. ರೇಖಾಚಿತ್ರ 4.3ರಲ್ಲಿ ನೀವು ಗಮನಿಸಿದಂತೆ 1973–2012ರ ಅವಧಿಯಲ್ಲಿ ಬಡವರ ಸಂಖ್ಯೆ ಮತ್ತು ಬಡತನ ಪ್ರಮಾಣಗಳೆರಡೂ ಇಳಿಕೆಯಾಗಿವೆ. ಆದರೆ ಈ ಎರಡೂ ಮಾನದಂಡಗಳಲ್ಲಿನ ಇಳಿಕೆಯ ಸ್ವರೂಪವೂ ಪ್ರೋತ್ಸಾಹದಾಯಕವಾಗಿಲ್ಲ. ದೇಶದಲ್ಲಿ ಒಟ್ಟು ಬಡವರ ಸಂಖ್ಯೆಯ ಇಳಿಕೆಗಿಂತ ಬಡತನದ ಶೇಕಡಾವಾರು ಅನುಪಾತದಲ್ಲಿನ ಇಳಿಕೆಯೂ ತುಂಬಾ ಮಂದಗತಿಯಲ್ಲಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಒಟ್ಟು ಬಡವರ ಸಂಖ್ಯೆಯ ನಡುವಿನ ಅಂತರ ಕಡಿಮೆಯಾಗಿರುವುದನ್ನು ನೀವು ಗಮನಿಸಬಹುದು. ಆದರೆ ಅನುಪಾತದ ಅಂತರ 1999–2000 ವರೆಗೆ ಸ್ಥಿರವಾಗಿತ್ತು ಮತ್ತು 2011–12ರಲ್ಲಿ ಹೆಚ್ಚಾಗಿದೆ.

ರಾಜ್ಯ ಮಟ್ಟದ ಬಡತನದ ಪ್ರವೃತ್ತಿಯನ್ನು ರೇಖಾಚಿತ್ರ 4.3 ರಲ್ಲಿ ತೋರಿಸಲಾಗಿದೆ. ರೇಖಾಚಿತ್ರದಲ್ಲಿರುವ ಎರಡು ರೇಖೆಗಳು ರಾಷ್ಟ್ರೀಯ ಬಡತನ ಮಟ್ಟವನ್ನು ಸೂಚಿಸುತ್ತದೆ. ಕೆಳಗಿನಿಂದ ಮೊದಲನೇ ರೇಖೆಯು 2011–12ರಲ್ಲಿನ ಬಡತನದ ಮಟ್ಟವನ್ನು ಸೂಚಿಸುತ್ತದೆ ಮತ್ತು ಇತರೆ ಅಂದರೆ ಮೇಲಿನ ರೇಖೆಯು 1973–74ರಲ್ಲಿಸುಡತನದ ಮಟ್ಟವನ್ನು ಸೂಚಿಸುತ್ತದೆ. ಈ ರೇಖೆಗಳು 1973–2012ರ ನಡುವಿನ ಅವಧಿಯಲ್ಲಿ ಭಾರತದಲ್ಲಿನ ಬಡವರ ಪ್ರಮಾಣವು ಶೇಕಡ 55 ರಿಂದ 22ಕ್ಕೆ ಕಡಿಮೆಯಾಗಿರುವುದನ್ನು ಸೂಚಿಸುತ್ತವೆ. ಈ ರೇಖಾಚಿತ್ರವು 1973–74ರಲ್ಲಿ ಆರು ರಾಜ್ಯಗಳು– ತಮಿಳುನಾಡು, ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾ–ಅಧಿಕ ಸಂಖ್ಯೆಯ ಬಡವರನ್ನು ಒಳಗೊಂಡಿರುವುದನ್ನು ಸ್ಪಷ್ಟಪಡಿಡುತ್ತದೆ. 1973–2012ರ ಅವಧಿಯಲ್ಲಿ ಭಾರತದ ಅನೇಕ ರಾಜ್ಯಗಳು ಬಡತನದ ಮಟ್ಟವನ್ನು ಗಮನಾರ್ಹವಾಗಿ ಕಡಿಮೆಮಾಡಿವೆ. ಆದಾಗ್ಯೂ ನಾಲ್ಕು ರಾಜ್ಯಗಳಲ್ಲಿ–ಒರಿಸ್ಸಾ, ಮಧ್ಯ ಪ್ರದೇಶ, ಬಿಹಾರ ಮತ್ತು ಉತ್ತರ ಪ್ರದೇಶ–ಇಂದಿಗೂ ಬಡತನದ ಮಟ್ಟವು ರಾಷ್ಟ್ರೀಯ ಬಡತನದ ಮಟ್ಟಕ್ಕಿಂತಲೂ




**ಸೂಚನೆ:** 1973ರ ವರ್ಷದಲ್ಲಿ ಉತ್ತರ ಪ್ರದೇಶವು ಈಗಿನ ಉತ್ತರಕಾಂಡವನ್ನು, ಮಧ್ಯ ಪ್ರದೇಶವು ಈಗಿನ ಚತ್ತಿಸ್‌ಗರ್ ಮತ್ತು ಬಿಹಾರವು ಈಗಿನ ಜಾರ್‌ಖಂಡ್‌ಗಳನ್ನು ಒಳಗೊಂಡಿದೆ.

**ರೇಖಾಚಿತ್ರ 4.4: ಕೆಲವು ರಾಜ್ಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಪ್ರಮಾಣ 1973–2012**(%)

ಅಧಿಕವಾಗಿದೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳು ಬಡತನದ ಮಟ್ಟವನ್ನು ಇತರೆ ರಾಜ್ಯಗಳಿಗಿಂತ ಪರಿಣಾಮಕಾರಿಯಾಗಿ ಕಡಿಮೆ ಮಾಡಿರುವುದನ್ನು ನೀವು ಗಮನಿಸಬಹುದು. ಈ ರಾಜ್ಯಗಳು ಇತರ ರಾಜ್ಯಗಳಿಗಿಂತ ಹೆಚ್ಚು ಉತ್ತಮ ಸಾಧನೆ ಮಾಡಲು ಹೇಗೆ ಸಾಧ್ಯವಾಯಿತು?

## 4.5 ಬಡತನಕ್ಕೆ ಏನು ಕಾರಣ? (WHAT CAUSES POVERTY?)

ಬಡವರ ಜೀವನವನ್ನು ಸೂಚಿಸುವ ಸಾಂಸ್ಥಿಕ ಮತ್ತು ಸಾಮಾಜಿಕ ಅಂಶಗಳಲ್ಲಿ ಬಡತನದ ಕಾರಣಗಳು ಅಡಗಿವೆ. ಬಡವರು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿದ್ದು ಮತ್ತು ಉತ್ತಮ ಆದಾಯಗಳನ್ನು ಗಳಿಸುವ ಕೌಶಲ್ಯಗಳನ್ನು ಪಡೆದುಕೊಳ್ಳುವಲ್ಲಿ ಅಸಮರ್ಥರಾಗಿದ್ದಾರೆ. ಜೊತೆಗೆ ಬಡವರಿಗೆ ಆರೋಗ್ಯ ಸುರಕ್ಷತೆಯ ಮಾರ್ಗವೂ ಮುಚ್ಚಿದೆ. ಬಡವರು ಜಾತಿ, ಧರ್ಮ ಮತ್ತು ಇತರೆ ತಾರತಮ್ಯ ಆಚರಣೆಗಳ ಪ್ರಮುಖ ಬಲಿಪಶುಗಳಾಗಿದ್ದಾರೆ. ಇವುಗಳಿಗೆ ಮುಖ್ಯ ಕಾರಣಗಳೆಂದರೆ;

(1) ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆ (2) ಸಾಮಾಜಿಕ ಬಹಿಷ್ಕಾರ (3) ನಿರುದ್ಯೋಗ (4) ಋಣಭಾರ (5) ಸಂಪತ್ತಿನ ಅಸಮಾನ ಹಂಚಿಕೆ.

ವ್ಯಕ್ತಿಗತ ಬಡತನವನ್ನು ಕೂಡಿಸಿದರೆ ಅದು ಸಮಗ್ರ ಬಡತನವಾಗುತ್ತದೆ. ಆರ್ಥಿಕತೆಯಲ್ಲಿನ ವ್ಯಾಪಕ ಸಮಸ್ಯೆಗಳ ಮೂಲಕ ಬಡತನವನ್ನು ವಿವರಿಸಲಾಗಿದೆ. ಅಂದರೆ; (1) ಕಡಿಮೆ ಬಂಡವಾಳ ಸಂಗ್ರಹಣೆ (2) ಮೂಲ ಸೌಕರ್ಯಗಳ ಕೊರತೆ (3) ಬೇಡಿಕೆಯ ಅಭಾವ (4) ಜನಸಂಖ್ಯೆಯ ಒತ್ತಡ (5) ಸಾಮಾಜಿಕ / ಕಲ್ಯಾಣ ಸೌಕರ್ಯಗಳ ಕೊರತೆ.

ಮೊದಲನೇ ಅಧ್ಯಾಯದಲ್ಲಿ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಬಗ್ಗೆ ನೀವು ಓದಿರುವಿರಿ. ಬ್ರಿಟಿಷರ ಆಳ್ವಿಕೆಯು ಭಾರತೀಯರ ಜೀವನ ಮಟ್ಟದ ಮೇಲೆ ಉಂಟು ಮಾಡಿದ್ದ ಪರಿಣಾಮಗಳು ಇಂದಿಗೂ ಚರ್ಚಾಸ್ಪದವಾಗಿವೆ. ಭಾರತೀಯ ಅರ್ಥವ್ಯವಸ್ಥೆ ಮತ್ತು ಜನರ ಜೀವನ ಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯಗಳಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದ ಕೈಗಾರಿಕೀಕರಣವು ಗಣನೀಯವಾಗಿ ಕಡಿಮೆಯಾಗಿತ್ತು. ಇಂಗ್ಲೆಂಡಿನ ಲ್ಯಾಂಕ್‌ಷೈರ್‌ನಿಂದ ತಯಾರಿಸಿದ ಹತ್ತಿಬಟ್ಟೆಯ ಆಮದಿನಿಂದಾಗಿ ಸ್ಥಳೀಯ ಉತ್ಪಾದನೆಯು ಸ್ಥಳಾಂತರಗೊಂಡಿತು ಮತ್ತು ಭಾರತವು ಹತ್ತಿಬಟ್ಟೆಯ ಬದಲಿಗೆ ನೂಲನ್ನು ರಫ್ತು ಮಾಡುವಂತಾಯಿತು.

ಬ್ರಿಟಿಷರ ಆಡಳಿತದ ಅವಧಿಯುದ್ದಕ್ಕೂ ಶೇ.70ಕ್ಕಿಂತ ಹೆಚ್ಚು ಭಾರತೀಯರು ಕೃಷಿಯಲ್ಲಿ ನಿರತರಾಗಿದ್ದರು. ಕೃಷಿ ವಲಯದ ಮೇಲೆ ಉಂಟಾದ ಪರಿಣಾಮವು ಜನರ ಜೀವನಮಟ್ಟದ ಮೇಲೆ ಬೇರೆಲ್ಲವುಗಳಿಗಿಂತ ಮಹತ್ವದ ಪರಿಣಾಮವನ್ನು ಬೀರಿತ್ತು. ಬ್ರಿಟಿಷರ ನೀತಿಗಳು ಗ್ರಾಮೀಣ ತೆರಿಗೆಗಳನ್ನು ತೀವ್ರವಾಗಿ ಹೆಚ್ಚಿಸಿದ್ದರಿಂದ, ವ್ಯಾಪಾರಿಗಳು ಮತ್ತು ಲೇವಾದೇವಿದಾರರು ದೊಡ್ಡ ಭೂಮಾಲೀಕರಾದರು. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದಿಂದ ಆಹಾರಧಾನ್ಯಗಳನ್ನು ರಫ್ತು ಮಾಡಲು ಆರಂಭಿಸಿತು, ಪರಿಣಾಮವಾಗಿ 1875 ಮತ್ತು 1900ರ ನಡುವಿನ ಭೀಕರ ಕ್ಷಾಮಗಳಲ್ಲಿ ಸುಮಾರು 26 ದಶಲಕ್ಷ ಜನರು ಮರಣಹೊಂದಿದ್ದರು.

ಬ್ರಿಟಿಷ್ ಆಳ್ವಿಕೆಯ ಪ್ರಮುಖ ಗುರಿಗಳೆಂದರೆ ಅವರ ರಫ್ತುಗಳಿಗೆ ಮಾರುಕಟ್ಟೆ ಒದಗಿಸುವುದು, ಬ್ರಿಟನ್ನಿನ ಸಾಲ ತೀರುವಳಿಗಾಗಿ ಭಾರತದ ಸೇವೆಗಳನ್ನು ಪಡೆಯುವುದು ಮತ್ತು ಬ್ರಿಟಿಷರ ವಸಾಹತು ಸೈನ್ಯಗಳಿಗೆ ಭಾರತದ ಮಾನವ ಶಕ್ತಿಯನ್ನು ಪಡೆದುಕೊಳ್ಳುವುದಾಗಿತ್ತು.



**ಚಿತ್ರ : 4.3 ಕಳಪೆ ಗುಣಮಟ್ಟದ ಸ್ವಯಂ ಉದ್ಯೋಗ ಬಡತನವನ್ನು ಮುಂದುವರಿಸಿದೆ**

ಬ್ರಿಟಿಷರ ಆಳ್ವಿಕೆಯು ಭಾರತದಲ್ಲಿ ಲಕ್ಷಾಂತರ ಜನರನ್ನು ನಿರ್ಗತಿಕರನ್ನಾಗಿ ಮಾಡಿತ್ತು. ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆದರು, ನಮ್ಮ ಕೈಗಾರಿಕೆಗಳು ಬ್ರಿಟಿಷರಿಗಾಗಿ ಕಡಿಮೆ ಬೆಲೆಯಲ್ಲಿ ಸರಕುಗಳನ್ನು ಉತ್ಪಾದಿಸಲು

ಕಾರ್ಯನಿರ್ವಹಿಸುತ್ತಿದ್ದವು ಮತ್ತು ನಮ್ಮ ಆಹಾರ ಧಾನ್ಯಗಳು ರಫ್ತಾಗುತ್ತಿದ್ದವು. ಹೆಚ್ಚು ಜನರು ಕ್ಷಾಮ ಮತ್ತು ಹಸಿವಿನಿಂದ ಮರಣ ಹೊಂದಿದ್ದರು. ಅನೇಕ ಸ್ಥಳೀಯ ರಾಜರುಗಳನ್ನು ಅಧಿಕಾರದಿಂದ ತೆಗೆದುಹಾಕಿದ ಆಕ್ರೋಶ, ಗೇಣಿದಾರರ ಮೇಲೆ ಅತ್ಯಧಿಕ ತೆರಿಗೆಗಳನ್ನು ವಿಧಿಸಿದ್ದರಿಂದ ಹಾಗೂ ಮತ್ತಿತರ ಕ್ರೋಧಗಳಿಂದ ಬ್ರಿಟಿಷರ ಅಧೀನದಲ್ಲಿದ್ದ ಭಾರತೀಯ ಸಿಪಾಯಿಗಳು ಬ್ರಿಟಿಷರ ಆಳ್ವಿಕೆ ವಿರುದ್ಧ 1857–58ರಲ್ಲಿ ದಂಗೆ ಎದ್ದರು.

ಭಾರತದಲ್ಲಿ ಇಂದಿಗೂ ಕೃಷಿಯು ಜೀವನ ನಿರ್ವಹಣೆಯ ಪ್ರಮುಖ ಮಾರ್ಗವಾಗಿದೆ ಮತ್ತು ಭೂಮಿಯು ಗ್ರಾಮೀಣ ಜನರ ಮೂಲ ಆಸ್ತಿಯಾಗಿದೆ; ಭೂ ಒಡೆತನವು ಅವರ ಭೌತಿಕ ಕಲ್ಯಾಣದ ಪ್ರಮುಖ ನಿರ್ಧಾರಕವಾಗಿದೆ ಮತ್ತು ಸ್ವಲ್ಪ ಭೂಮಿಯನ್ನು ಹೊಂದಿರುವವರು ತಮ್ಮ ಜೀವನದ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುವ ಉತ್ತಮ ಅವಕಾಶವನ್ನು ಹೊಂದಿರುತ್ತಾರೆ.

ಸ್ವಾತಂತ್ರ್ಯಾ ನಂತರ ಸರ್ಕಾರವು ಜಮೀನು ಹೆಚ್ಚು ಇರುವವರಿಂದ ಭೂಮಿಯನ್ನು ಪಡೆದು, ಕೃಷಿಯಲ್ಲಿ ನಿರತರಾಗಿದ್ದ ಭೂರಹಿತ ಕೃಷಿ ಕಾರ್ಮಿಕರಿಗೆ ಭೂಮಿಯ ಮರುಹಂಚಿಕೆಗೆ ಪ್ರಯತ್ನಿಸಿತು. ಆದಾಗ್ಯೂ ಅಧಿಕ ಸಂಖ್ಯೆಯ ಕೃಷಿ ಕಾರ್ಮಿಕರು ಸಣ್ಣ ಹಿಡುವಳಿಗಳಲ್ಲಿ ಬೇಸಾಯ ಮಾಡಲು ಸಾಧ್ಯವಾಗುತ್ತಿಲ್ಲ. ಈಗ ಅವರು ಹೊಂದಿರುವ ಭೂಮಿಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಬೇಕಾದ ಹಣವಾಗಲೀ, ಕೌಶಲ್ಯವಾಗಲೀ ಅವರಲ್ಲಿ ಇಲ್ಲದಿರುವುದರಿಂದ, ಈ ಪ್ರಯತ್ನವು ಅಲ್ಪ ಪ್ರಮಾಣದ ಯಶಸ್ಸು ಕಂಡಿದೆ. ಜೊತೆಗೆ ಭೂ ಹಿಡುವಳಿಗಳು ಬಹಳ ಚಿಕ್ಕವಾಗಿದ್ದು ಬೇಸಾಯಕ್ಕೆ ಸೂಕ್ತವಾಗಿಲ್ಲ. ಅಲ್ಲದೆ ಭಾರತದ ಅನೇಕ ರಾಜ್ಯಗಳು ಭೂಮಿಯ ಮರು ಹಂಚಿಕೆ ನೀತಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿವೆ.

ಭಾರತದಲ್ಲಿನ ಅಧಿಕ ಸಂಖ್ಯೆಯ ಗ್ರಾಮೀಣ ಬಡವರು ಸಣ್ಣ ರೈತರಾಗಿದ್ದಾರೆ. ಅವರು ಹೊಂದಿರುವ ಭೂಮಿ ಸಾಮಾನ್ಯವಾಗಿ ಕಡಿಮೆ ಫಲವತ್ತತೆಯಿಂದ ಕೂಡಿದ್ದು ಮಳೆ ಆಶ್ರಿತವಾಗಿದೆ. ಅವರ ಬದುಕು ಜೀವನಾಧಾರ ಬೆಳೆಗಳ ಮೇಲೆ ಹಾಗೂ ಕೆಲವು ಸಂದರ್ಭಗಳಲ್ಲಿ ಜಾನುವಾರು ಸಾಕಾಣಿಕೆ ಮೇಲೆ ಅವಲಂಬಿತವಾಗಿದೆ. ಜನಸಂಖ್ಯೆಯ ತೀವ್ರ ಬೆಳವಣಿಗೆ ಮತ್ತು ಉದ್ಯೋಗದ ಪರ್ಯಾಯ ಮೂಲಗಳು ಇಲ್ಲದಿರುವುದರಿಂದ, ಸಾಗುವಳಿ ಭೂಮಿಯ ತಲಾ ಲಭ್ಯತೆ ನಿರಂತರವಾಗಿ ಕಡಿಮೆಯಾಗಿ, ಭೂ ಹಿಡುವಳಿಗಳ ಛಿದ್ರೀಕರಣಕ್ಕೆ ಕಾರಣವಾಗಿದೆ. ಈ ಸಣ್ಣ ಭೂಹಿಡುವಳಿಗಳಿಂದ ಬರುವ ಆದಾಯವು ಆ ಕುಟುಂಬಗಳ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಕಾಗುತ್ತಿಲ್ಲ.

ಬರಗಾಲ ಮತ್ತು ಇತರೆ ನೈಸರ್ಗಿಕ ವಿಕೋಪಗಳಿಂದಾಗಿ ಬೆಳೆಗಳು ವಿಫಲವಾಗಿದ್ದು, ರೈತರು ಬೇಸಾಯಕ್ಕಾಗಿ ಮತ್ತು ಕುಟುಂಬದ ಇತರೆ ಅಗತ್ಯಗಳಿಗಾಗಿ ಪಡೆದಿದ್ದ ಸಾಲವನ್ನು ಮರುಪಾವತಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನೀವು ಕೇಳಿದ್ದೀರಿ.

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಬಹುತೇಕ ಜನರು ಅಗತ್ಯ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿಲ್ಲವಾದ್ದರಿಂದ ನಗರ ಮತ್ತು ಗ್ರಾಮೀಣ ಆರ್ಥಿಕತೆಯ ವಿವಿಧ ವಲಯಗಳಲ್ಲಿ ಸೃಷ್ಟಿಯಾಗುವ ಉದ್ಯೋಗಾವಕಾಶಗಳಲ್ಲಿ ಭಾಗವಹಿಸುವ ಸಾಮರ್ಥ್ಯ ಹೊಂದಿಲ್ಲ.



**ಚಿತ್ರ 4.4 ಬಡವರಿಗೆ ಗುಣಮಟ್ಟದ ಉದ್ಯೋಗ ಇನ್ನೂ ಕನಸಾಗಿಯೇ ಉಳಿದಿದೆ**

ಭಾರತದ ನಗರಗಳಲ್ಲಿನ ಹೆಚ್ಚಿನ ಬಡವರು ಗ್ರಾಮೀಣ ಪ್ರದೇಶದಿಂದ ಹೊರದೂಡಲ್ಪಟ್ಟ ಬಡವರಾಗಿದ್ದು, ಉದ್ಯೋಗ ಮತ್ತು ಜೀವನೋಪಾಯವನ್ನು ಅರಸಿ ನಗರಗಳಿಗೆ ವಲಸೆ ಬಂದವರಾಗಿದ್ದಾರೆ. ಕೈಗಾರಿಕೀಕರಣವು ಈ ಎಲ್ಲಾ ಜನರಿಗೆ ಉದ್ಯೋಗ ನೀಡುವ ಸಾಮರ್ಥ್ಯ ಹೊಂದಿಲ್ಲ. ಆದ್ದರಿಂದ ನಗರದ ಬಡವರು ನಿರುದ್ಯೋಗಿಗಳು ಅಥವಾ ಸಾಂದರ್ಭಿಕ ಉದ್ಯೋಗ ಹೊಂದಿರುವ ದಿನಗೂಲಿ ಕಾರ್ಮಿಕರಾಗಿದ್ದಾರೆ. ದಿನಗೂಲಿ ಕಾರ್ಮಿಕರು ಉದ್ಯೋಗ ಭದ್ರತೆ ಮತ್ತು ಆಸ್ತಿಗಳನ್ನು ಹೊಂದಿಲ್ಲದಿರುವುದರಿಂದ ಹಾಗೂ ಸೀಮಿತ ಕೌಶಲ್ಯ ಮತ್ತು

**ಪೆಟ್ಟಿಗೆ 4.3: ಹತ್ತಿ ಬೆಳೆಗಾರರ ಸಂಕಷ್ಟ**



ಭಾರತದ ಪ್ರಗತಿಪರ ರಾಜ್ಯಗಳ ಅನೇಕ ಸಣ್ಣ ಭೂ ಹಿಡುವಳಿದಾರರ ಕೃಷಿ ಕುಟುಂಬಗಳು ಮತ್ತು ನೇಕಾರರು ಜಾಗತೀಕರಣದ ಆಘಾತದಿಂದಾಗಿ ಆದಾಯಗಳಿಸುವ ಅವಕಾಶಗಳ ಗ್ರಹಿಕೆಯಿಲ್ಲದೆ ಬಡವರಾಗುತ್ತಿದ್ದಾರೆ. ಆಸ್ತಿ ಮಾರುವ ಅಥವಾ ಸಾಲ ಪಡೆಯುವ ಅಥವಾ ಅನ್ಯ ಉದ್ಯೋಗದಿಂದ ವರಮಾನ ಗಳಿಸುವ ಪರ್ಯಾಯ ಅವಕಾಶಗಳಿರುವವರಿಗೂ ಈ ಜಾಗತೀಕರಣದ ಆಘಾತ ತಾತ್ಕಾಲಿಕವಾಗಿದೆ. ಮಾರಲು ಆಸ್ತಿಯೂ ಇಲ್ಲದೆ ಅಥವಾ ಬೇರಾವುದೇ ಮೂಲದಿಂದ ಸಾಲವನ್ನೂ ಪಡೆಯಲಾಗದೆ ಅಥವಾ ಅತ್ಯಧಿಕ ಬಡ್ಡಿಗೆ ಸಾಲ ಪಡೆದುಕೊಳ್ಳುವ ಕುಟುಂಬಗಳು ತಮ್ಮ ಸಂಪೂರ್ಣ ಕಾಲಾವಧಿಯಲ್ಲಿ, ಬಡತನ ರೇಖೆಯ ಕೆಳಗೆ ತಳ್ಳಲ್ಪಡುತ್ತಾರೆ. ಈ ದುರಂತ ಪರಿಸ್ಥಿತಿಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆಂಧ್ರಪ್ರದೇಶ ಒಂದರಲ್ಲೇ ಆತ್ಮಹತ್ಯೆ ಸಂಖ್ಯೆ 3000ಕ್ಕೆ ಮುಟ್ಟಿ ಇನ್ನೂ ಹೆಚ್ಚಾಗುತ್ತಲೇ ಇದೆ. 2001 ರಿಂದ ಡಿಸೆಂಬರ್ 2005ರ ವರೆಗೆ ಮಹಾರಾಷ್ಟ್ರದಲ್ಲಿ 1000ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಸರ್ಕಾರ ಒಪ್ಪಿಕೊಂಡಿದೆ.

2002–03ರಲ್ಲಿ ಭಾರತವು ವಿಶ್ವದಲ್ಲಿಯೇ ಅತಿ ಹೆಚ್ಚು ಅಂದರೆ ಸುಮಾರು 8300 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಹತ್ತಿ ಬೇಸಾಯ ಮಾಡಿದರೂ ಸಹ ಕಡಿಮೆ ಇಳುವರಿಯಿಂದಾಗಿ ಪ್ರತಿ ಹೆಕ್ಟೇರ್‌ಗೆ ಕೇವಲ 300 ಕೆ.ಜಿ. ಹತ್ತಿ ಉತ್ಪಾದನೆ ಮಾಡಿ ವಿಶ್ವದ ಹತ್ತಿ ಉತ್ಪಾದನೆ ಮಾಡುವ ರಾಷ್ಟ್ರಗಳ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ವಿಶೇಷವಾಗಿ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಅಧಿಕ ಉತ್ಪಾದನಾ ವೆಚ್ಚ, ಕಡಿಮೆ ಮತ್ತು ಅಸ್ಥಿರ ಇಳುವರಿ, ಜಾಗತಿಕ ಮಾರುಕಟ್ಟೆಯಲ್ಲಿನ ಕಡಿಮೆ ಬೆಲೆ, ಬೆಳೆಯಲ್ಲಿ ಏರಿಳಿತ, ಅಮೇರಿಕಾ ಹಾಗೂ ಇನ್ನಿತರ ದೇಶಗಳು ನೀಡುವ ಸಹಾಯಧನ ಇತ್ಯಾದಿಗಳು ರೈತರನ್ನು ಸಂಕಷ್ಟಕ್ಕೀಡುಮಾಡಿವೆ ಮತ್ತು ರೈತರ ಆತ್ಮಹತ್ಯೆಗೆ ಕಾರಣವಾಗಿವೆ.

ಕೃಷಿಯನ್ನು ಅವಲಂಬಿಸಿರುವ ಲಕ್ಷಾಂತರ ಸಣ್ಣ ಮತ್ತು ಸೀಮಾಂತ ರೈತರಿಗೆ ಇದು ಕೇವಲ ಲಾಭ ಗಳಿಕೆ ಮತ್ತು ಅಧಿಕ ಪ್ರತಿಫಲಗಳಿಸುವ ವಿಷಯವಾಗಿರದೆ, ಜೀವನ ನಿರ್ವಹಣೆ ಮತ್ತು ಬದುಕುಳಿಯುವ ವಿಷಯವಾಗಿದೆ.

ವಿದ್ವಾಂಸರು ಹತ್ತಿ ಬೆಳೆಗಾರರ ಆತ್ಮಹತ್ಯೆಗೆ ಅನೇಕ ಕಾರಣಗಳನ್ನು ತಿಳಿಸಿರುತ್ತಾರೆ. (1) ಹತ್ತಿ ಬೆಳೆಗಾರರು ಸಾಂಪ್ರದಾಯಿಕ ಕೃಷಿಯಿಂದ ಹೆಚ್ಚು ಇಳುವರಿ ನೀಡುವ ವಾಣಿಜ್ಯ ಬೆಳೆಗಳಿಗೆ ವರ್ಗಾವಣೆಯಾಗುವಲ್ಲಿ ಅವರಿಗೆ ಸೂಕ್ತ ತಾಂತ್ರಿಕ ಸಲಹೆ ಇಲ್ಲದಿರುವುದು, ಕೃಷಿ ವಿಸ್ತರಣಾ ಸೇವೆ, ತುರ್ತು ಪರಿಹಾರ ಕ್ರಮ, ಕೃಷಿ ತಾಂತ್ರಿಕತೆಗೆ ಸಂಬಂಧಿಸಿದಂತೆ ಆಪ್ತ ಸಮಾಲೋಚನೆಗಳನ್ನು ಸರ್ಕಾರ ಹಿಂಪಡೆದಿರುವುದು. ಸಕಾಲಿಕ ಮತ್ತು ಸೂಕ್ತ ಸಲಹೆಗಳ ಕೊರತೆಗಳಂತಹ ಸಮಸ್ಯೆಗಳು. (2) ಕಳೆದ ಎರಡು ದಶಕಗಳಲ್ಲಿ ಕೃಷಿಯ ಮೇಲಿನ ಸಾರ್ವಜನಿಕ ಹೂಡಿಕೆ ಇಳಿಮುಖವಾಗಿರುವುದು. (3) ಖಾಸಗಿ ಮತ್ತು ಜಾಗತಿಕ ಬೃಹತ್ ಉದ್ದಿಮೆಗಳಿಂದ ಪೂರೈಸಲ್ಪಟ್ಟ ಬೀಜಗಳ ಮೊಳಕೆಯೊಡೆವ ಪ್ರಮಾಣ ಮತ್ತು ಕೀಟ ನಾಶಕಗಳ ಗುಣಮಟ್ಟ ಕಡಿಮೆಯಿರುವುದು. (4) ಬೆಳೆ ವಿಫಲ, ಕ್ರಿಮಿ ಕೀಟಗಳ ಕಾಟ ಮತ್ತು ಬರಗಾಲ. (5) ಖಾಸಗಿ ಲೇವಾದೇವಿಗಾರರು ಶೇ.36 ರಿಂದ 120ರಷ್ಟು ಬಡ್ಡಿಗೆ ಸಾಲ ನೀಡಿ ಶೋಷಣೆ ಮಾಡುತ್ತಿರುವುದು. (6) ಸುಲಭ ಆಮದು ವ್ಯವಸ್ಥೆಯು ಬೆಲೆ ಮತ್ತು ಲಾಭದ ಇಳಿಕೆಗೆ ಕಾರಣವಾಗಿರುತ್ತದೆ. (7) ಬೆಳೆಗೆ ಸಾಕಾಗುವಷ್ಟು ನೀರಿಲ್ಲದ ಕಾರಣ ಅಧಿಕ ಬಡ್ಡಿದರದಲ್ಲಿ ಸಾಲ ಪಡೆದು ಕೊಳವೆಬಾವಿ ತೆಗೆದರೂ ಸಹ ನೀರು ಸಿಗದಿರುವುದು.

**ಮೂಲ:** ಎ.ಕೆ. ಮೆಹ್ತಾ ಮತ್ತು ಸೌರಭ್ ಗೋಷ್ ರವರಿಂದ ಪಡೆದು ಮತ್ತು ಅಸಿಸ್ಟೆಡ್ ಬೈ ರಿತು ಎಲ್ವಾದಿ "ಗ್ಲೋಬಲೈಜೇಷನ್, ಲಾಸ್ ಆಫ್ ಲೈವ್ಲಿವುಡ್ಸ್ ಅಂಡ್ ಎಂಟ್ರಿ ಇಂಟು ಪಾವರ್ಟಿ" ಪರ್ಯಾಯ ಆರ್ಥಿಕ ಸಮೀಕ್ಷೆ, ಭಾರತ 2004–2005, ಪರ್ಯಾಯ ಸಮೀಕ್ಷೆ ಗ್ರೂಪ್, ಡ್ಯಾನಿಶ್ ಪುಸ್ತಕಗಳು, ದಿಲ್ಲಿ 2005 ಮತ್ತು ಪಿ. ಸಾಯಿನಾಥ್, ದಿ ಸ್ವೆಲ್ಲಿಂಗ್ 'ರಿಜಿಸ್ಟರ್ ಆಫ್ ಡೆತ್ಸ್', ದಿ ಹಿಂದೂ, ಡಿಸೆಂಬರ್ 29, 2005



## ನೀವೇ ಮಾಡಿರಿ
## (Work These Out)

- ನಿಮ್ಮ ನೆರೆಹೊರೆಯಲ್ಲಿ ವಾಸಿಸುತ್ತಿರುವ ಅಗಸರನ್ನು ಮತ್ತು ಕ್ಷೌರಿಕರನ್ನು ನೀವು ಗಮನಿಸಿರಬಹುದು. ಕೆಲವು ನಿಮಿಷ ಅವರೊಂದಿಗೆ ಮಾತನಾಡಿ. ಈ ರೀತಿಯ ಚಟುವಟಿಕೆ ನಡೆಸಲು ಕಾರಣವೇನು ? ಅವರು ಕುಟುಂಬದ ಜೊತೆಗೆ ಎಲ್ಲಿ ವಾಸಿಸುತ್ತಾರೆ ? ಒಂದು ದಿನಕ್ಕೆ ಎಷ್ಟು ಬಾರಿ ಊಟ ಮಾಡುತ್ತಾರೆ? ಅವರು ಯಾವುದಾದರೂ ಭೌತಿಕ ಆಸ್ತಿಯನ್ನು ಹೊಂದಿದ್ದಾರೆಯೇ ? ಅವರು ಏತಕ್ಕಾಗಿ ಉದ್ಯೋಗ ಮಾಡುವುದಿಲ್ಲ? ಈ ಮಾಹಿತಿಗಳನ್ನು ಸಂಗ್ರಹಿಸಿ ನಿಮ್ಮ ತರಗತಿಗಳಲ್ಲಿ ಚರ್ಚಿಸಿ.
- ಗ್ರಾಮೀಣ ಮತ್ತು ನಗರ ಪ್ರದೇಶಗಳ ಚಟುವಟಿಕೆಗಳ ಪ್ರತ್ಯೇಕ ಪಟ್ಟಿ ಮಾಡಿ. ಬಡರಲ್ಲದವರ ಚಟುವಟಿಕೆಗಳನ್ನೂ ಪಟ್ಟಿ ಮಾಡಿ. ಇವೆರಡನ್ನೂ ಹೋಲಿಸಿ ಮತ್ತು ಬಡವರು ಏತಕ್ಕಾಗಿ ಅಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲಾಗುತ್ತಿಲ್ಲ ಎಂಬುದರ ಬಗ್ಗೆ ತರಗತಿಗಳಲ್ಲಿ ಚರ್ಚಿಸಿ.

ವಿರಳ ಅವಕಾಶಗಳಿಂದಾಗಿ ಸಮಾಜದಲ್ಲಿ ಶೋಷಣೆಗೆ ಒಳಗಾಗಿದ್ದಾರೆ ಹಾಗೂ ಸುಸ್ಥಿರ ಬದುಕಿಗೆ ಬೇಕಾದ ಮಿಗತೆಯನ್ನು ಹೊಂದಿರುವುದಿಲ್ಲ.

ಆದ್ದರಿಂದ, ಬಡತನವು ಉದ್ಯೋಗದ ಸ್ವರೂಪದೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ನಿರುದ್ಯೋಗ ಮತ್ತು ಅರೆಉದ್ಯೋಗ ಹಾಗೂ ದಿನಗೂಲಿ ಮತ್ತು ಸಾಂಧರ್ಭಿಕ ಉದ್ಯೋಗದ ಸ್ವರೂಪವು ಅವರನ್ನು ಸಾಲದ ಸುಳಿಗೆ ದೂಡಿ ಬಡತನವನ್ನು ಮತ್ತಷ್ಟು ಹೆಚ್ಚಿಸಿವೆ. ಋಣಭಾರವು ಬಡತನದ ಒಂದು ಪ್ರಮುಖ ಅಂಶವಾಗಿದೆ.

ಆಹಾರ ಧಾನ್ಯಗಳು ಮತ್ತು ಅಗತ್ಯ ಸರಕುಗಳ ಬೆಲೆಗಳು ವಿಲಾಸಿ ಸರಕುಗಳ ಬೆಲೆಗಳಿಗಿಂತ ತೀವ್ರವಾಗಿ ಹೆಚ್ಚಾಗಿದ್ದರಿಂದ ಕಡಿಮೆ ಆದಾಯದ ಗುಂಪಿನವರ ಬದುಕನ್ನು ಮತ್ತಷ್ಟು ಸಂಕಷ್ಟಗೊಳಿಸಿದೆ ಮತ್ತು ಅವಕಾಶಗಳನ್ನು ಕಸಿದುಕೊಂಡಿದೆ. ಆದಾಯ ಮತ್ತು ಆಸ್ತಿಯ ಅಸಮಾನ ಹಂಚಿಕೆಯೂ ಸಹ ಭಾರತದಲ್ಲಿ ಬಡತನವು ಶಾಶ್ವತವಾಗಿ ನೆಲಯೂರುವಂತೆ ಮಾಡಿದೆ.

ಈ ಎಲ್ಲ ಅಂಶಗಳು ಸಮಾಜದಲ್ಲಿ ಎರಡು ವಿಭಿನ್ನ ಗುಂಪುಗಳನ್ನು ಸೃಷ್ಟಿಸಿವೆ: ಉತ್ಪಾದನಾ ಸಾಧನಗಳನ್ನು ಹೊಂದಿದ್ದು, ಉತ್ತಮ ಆದಾಯ ಗಳಿಸುವವರು ಮತ್ತು ಬದುಕಿಗಾಗಿ ಕೇವಲ ತಮ್ಮ ಶ್ರಮವನ್ನು ಹೊಂದಿರುವವರು. ವರ್ಷಗಳು ಕಳೆದಂತೆ ಭಾರತದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಹೆಚ್ಚುತ್ತಿದೆ. ಬಡತನವು ಭಾರತದ ಹಲವು ಆಯಾಮದ ಸವಾಲಾಗಿದ್ದು, ಅದನ್ನು ಸಮರೋಪಾದಿಯಲ್ಲಿ ಎದುರಿಸುವ ಅಗತ್ಯವಿದೆ.

## 4.6 ಬಡತನ ಕಡಿಮೆಗೊಳಿಸುವ ನೀತಿಗಳು ಮತ್ತು ಕಾರ್ಯಕ್ರಮಗಳು: (POLICIES AND PROGRAMMES TOWARDS POVERTY ALLEVIATION)

ಭಾರತದ ಸಂವಿಧಾನ ಮತ್ತು ಪಂಚವಾರ್ಷಿಕ ಯೋಜನೆಗಳು ತಿಳಿಸಿರುವಂತೆ ಸಾಮಾಜಿಕ ನ್ಯಾಯವು ಸರ್ಕಾರದ ಅಭಿವೃದ್ಧಿ ತಂತ್ರಗಳ ಪ್ರಾಥಮಿಕ ಉದ್ದೇಶವಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ (1951–56) ಉಲ್ಲೇಖಿಸಿರುವಂತೆ "ಬಡತನ ಮತ್ತು ಆದಾಯ, ಸಂಪತ್ತು ಹಾಗೂ ಅವಕಾಶಗಳ ಅಸಮಾನತೆ ಅಂಶಗಳಿಂದಾಗಿ ಪ್ರಸ್ತುತ ಪರಿಸ್ಥಿತಿಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯನ್ನು ತರುವ ತುರ್ತು ಅಗತ್ಯವಿದೆ". ಎರಡನೇ ಪಂಚವಾರ್ಷಿಕ ಯೋಜನೆ(1956–61)ಯು ಗುರುತಿಸಿರುವಂತೆ 'ಆರ್ಥಿಕ ಅಭಿವೃದ್ಧಿಯ ಅನುಕೂಲಗಳು ಸಮಾಜದ ಅತಿ ಕಡಿಮೆ ಸೌಲಭ್ಯ ಹೊಂದಿರುವ ವರ್ಗಗಳಿಗೆ ಹೆಚ್ಚು ಹೆಚ್ಚಾಗಿ ಲಭಿಸಬೇಕಾಗಿದೆ'. ಸರ್ಕಾರದ ಎಲ್ಲಾ ನೀತಿ ನಿರೂಪಣೆಯಲ್ಲಿ ಬಡತವನ್ನು ಉಪಶಮನಗೊಳಿಸಲು ಒತ್ತು ನೀಡಿರುವುದನ್ನು ಕಾಣಬಹುದು ಮತ್ತು ಅದಕ್ಕಾಗಿ ವಿವಿಧ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂಬುದನ್ನು ಎಲ್ಲರೂ ತಿಳಿಯಬಹುದು.

ಬಡತನವನ್ನು ಕಡಿಮೆಗೊಳಿಸುವ ಸರ್ಕಾರದ ನೀತಿಯು (ಮಾರ್ಗ) ಮೂರು ಆಯಾಮಗಳನ್ನು ಹೊಂದಿದೆ. ಮೊದಲನೆಯದು ಬೆಳವಣಿಗೆ ಆಧಾರಿತ



ಚಿತ್ರ 4.6 ಕೂಲಿಗಾಗಿ ಕಾಳು ಯೋಜನೆ ಅಡಿಯಲ್ಲಿ ಕೈಗೊಂಡಿರುವ ಕೂಲಿ ಉದ್ಯೋಗ

ಮಾರ್ಗವಾಗಿದೆ. ಇದು ಆರ್ಥಿಕ ಬೆಳವಣಿಗೆಯ–ಒಟ್ಟು ದೇಶೀಯ ಉತ್ಪನ್ನ ಮತ್ತು ತಲಾದಾಯಗಳಲ್ಲಿ ತೀವ್ರ ಹೆಚ್ಚಳ–ಪರಿಣಾಮಗಳು ಸಮಾಜದ ಎಲ್ಲಾ ವರ್ಗಗಳಿಗೆ ವಿಸ್ತರಿಸುತ್ತದೆಂಬ ಮತ್ತು ಬಡ ವರ್ಗದ ಜನರನ್ನೂ ಸಹ ತಲುಪವುದೆಂಬ ನಿರೀಕ್ಷೆಯನ್ನು ಆಧರಿಸಿದ್ದಾಗಿದೆ. ಇದು 1950ರ ದಶಕದಲ್ಲಿ 1960ರ ಆರಂಭದಲ್ಲಿನ ಯೋಜನೆಗಳ ಪ್ರಮುಖ ಆದ್ಯತೆಯಾಗಿತ್ತು. ತೀವ್ರ ಕೈಗಾರಿಕಾಭಿವೃದ್ಧಿ ಮತ್ತು ಆಯ್ದ ಪ್ರದೇಶಗಳಲ್ಲಿನ ಹಸಿರುಕ್ರಾಂತಿಯ ಮೂಲಕ ಆದ ಕೃಷಿಯ ಪರಿವರ್ತನೆಯಿಂದಾಗಿ ಹಿಂದುಳಿದ ಪ್ರದೇಶಗಳು ಮತ್ತು ಹಿಂದುಳಿದ ವರ್ಗಗಳಿಗೆ ಹೆಚ್ಚು ಅನುಕೂಲಗಳಾಗಲಿವೆ ಎಂದು ಭಾವಿಸಲಾಗಿತ್ತು. ಒಟ್ಟಾರೆ ಬೆಳವಣಿಗೆ ಮತ್ತು ಕೃಷಿ ಹಾಗೂ ಕೈಗಾರಿಕಾ ಬೆಳವಣಿಗೆಗಳು ಹೆಚ್ಚು ಪರಿಣಾಮಕಾರಿ ಆಗಿರಲಿಲ್ಲ ಎನ್ನುವುದನ್ನು ನೀವು 2 ಮತ್ತು 3ನೇ ಅಧ್ಯಾಯಗಳಲ್ಲಿ ಅಭ್ಯಾಸ ಮಾಡಿರುವಿರಿ. ಜನಸಂಖ್ಯೆಯ ಬೆಳವಣಿಗೆಯ ಪರಿಣಾಮದಿಂದಾಗಿ ತಲಾ ಆದಾಯದಲ್ಲಿ ಅತಿ ಕಡಿಮೆ ಬೆಳವಣಿಗೆಯಾಗಿದೆ. ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ವಾಸ್ತವಿಕವಾಗಿ ಹೆಚ್ಚಾಯಿತು. ಹಸಿರುಕ್ರಾಂತಿಯು ಪ್ರಾದೇಶಿಕ ಹಾಗೂ ದೊಡ್ಡ ಮತ್ತು ಸಣ್ಣ ರೈತರ ನಡುವಿನ ಅಸಮಾನತೆಯನ್ನು ತೀವ್ರವಾಗಿ ಹೆಚ್ಚಿಸಿದೆ. ಭೂಮಿಯ ಮರುಹಂಚಿಕೆಗೆ ಇಚ್ಛೆ ಮತ್ತು ಸಾಮರ್ಥ್ಯವಿರಲಿಲ್ಲ. ಆರ್ಥಿಕ ಬೆಳವಣಿಗೆಯ ಲಾಭಗಳು ಬಡವರಿಗೆ ತಲುಪುತ್ತಿಲ್ಲವೆಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಮಧ್ಯೆ ನಿರ್ದಿಷ್ಟವಾಗಿ ಬಡವರಿಗೆ ಸಂಬಂಧಿಸಿದ ಪರ್ಯಾಯ ಮಾರ್ಗಗಳನ್ನು ಹುಡುಕುವಾಗ, ಉದ್ಯೋಗಸೃಷ್ಟಿ ಮತ್ತು ಹೆಚ್ಚುವರಿ ಆಸ್ತಿಗಳನ್ನು ನಿರ್ಮಿಸುವ ಮೂಲಕ ಬಡವರ ಆದಾಯ ಮತ್ತು ಉದ್ಯೋಗಗಳನ್ನು ಹೆಚ್ಚಿಸಬಹುದು ಎಂದು ನೀತಿ ರಚನಾಕಾರರು ಯೋಚಿಸಲು ಆರಂಭಿಸಿದರು. ಬಡತನ ತಗ್ಗಿಸುವ ನಿರ್ದಿಷ್ಟ ಕಾರ್ಯಕ್ರಮಗಳ ಮೂಲಕ ಇದನ್ನು ಸಾಧಿಸಬಹುದಾಗಿದೆ. ಈ ಎರಡನೇ ಮಾರ್ಗವನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ(1961–66) ಪ್ರಾರಂಭಿಸಲಾಯಿತು ಮತ್ತು ನಂತರ ನಿರಂತರವಾಗಿ ವಿಸ್ತರಿಸಲಾಯಿತು. 1970ರ ದಶಕದಲ್ಲಿ ಪ್ರಾರಂಭಿಸಿದ **'ಕೂಲಿಗಾಗಿ ಕಾಳು ಯೋಜನೆ'** ಅಂತಹ ಒಂದು ಪ್ರಮುಖ ಕಾರ್ಯಕ್ರಮವಾಗಿದೆ.

ಬಹುತೇಕ ಬಡತನ ನಿರ್ಮೂಲನಾ ಕಾರ್ಯಕ್ರಮಗಳು ಪಂಚವಾರ್ಷಿಕ ಯೋಜನೆಗಳ ದೃಷ್ಟಿಕೋನದ ಆಧಾರದ ಮೇಲೆ ಅನುಷ್ಠಾನಗೊಂಡಿವೆ. ಸ್ವ-ಉದ್ಯೋಗ ಕಾರ್ಯಕ್ರಮಗಳು ಮತ್ತು ಕೂಲಿ ಉದ್ಯೋಗ ಕಾರ್ಯಕ್ರಮಗಳನ್ನು ವಿಸ್ತರಿಸುವುದು ಬಡತನವನ್ನು ಎದುರಿಸುವ ಪ್ರಧಾನ ಮಾರ್ಗಗಳೆಂದು ಪರಿಗಣಿಸಲಾಗಿದೆ.

ಸ್ವ-ಉದ್ಯೋಗ ಕಾರ್ಯಕ್ರಮಗಳಿಗೆ ಉದಾಹರಣೆಗಳೆಂದರೆ **ಗ್ರಾಮೀಣ ಉದ್ಯೋಗ ಸೃಷ್ಟಿ ಕಾರ್ಯಕ್ರಮ (REGP), ಪ್ರಧಾನ ಮಂತ್ರಿ ರೋಜಗಾರ್ ಯೋಜನೆ (PMRY), ಮತ್ತು ಸ್ವರ್ಣ ಜಯಂತಿ ಷಹರಿ ರೋಜಗಾರ್ ಯೋಜನೆ (SJSRY)**. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ಸ್ವಯಂ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮೊದಲನೇ ಕಾರ್ಯಕ್ರಮದ ಗುರಿಯಾಗಿದೆ. ಇದನ್ನು ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಆಯೋಗವು (KVIC) ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯ ಅಡಿಯಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವವರು, ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಹಣಕಾಸು ನೆರವು ಪಡೆಯಬಹುದಾಗಿದೆ. PMRY ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಕಡಿಮೆ ವರಮಾನದ ಕುಟುಂಬಗಳ ವಿದ್ಯಾವಂತ ನಿರುದ್ಯೋಗಿಗಳು ಹಣಕಾಸು ಸಹಾಯ ಪಡೆದು ಉದ್ಯೋಗ ಸೃಷ್ಟಿಸುವ ಯಾವುದೇ ವಿಧದ ಉದ್ದಿಮೆಗಳನ್ನು ಸ್ಥಾಪಿಸಬಹುದಾಗಿದೆ. ನಗರ ಪ್ರದೇಶಗಳಲ್ಲಿ-ಸ್ವಯಂ ಉದ್ಯೋಗ ಮತ್ತು ಕೂಲಿ ಉದ್ಯೋಗಳನ್ನು ಸೃಷ್ಟಿಸುವುದು SJSRY ನ ಪ್ರಮುಖ ಗುರಿಯಾಗಿದೆ.

ಆರಂಭದಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ, ಹಣಕಾಸು ನೆರವನ್ನು ಕುಟುಂಬಗಳಿಗೆ ಅಥವಾ ವ್ಯಕ್ತಿಗಳಿಗೆ ನೀಡಲಾಗುತ್ತಿತ್ತು. 1990ರ ದಶಕದಿಂದೀಚೆಗೆ ಈ ವಿಧಾನವನ್ನು ಬದಲಾಯಿಸಲಾಗಿದೆ. ಪ್ರಸ್ತುತ ಈ ಕಾರ್ಯಕ್ರಮಗಳಿಂದ ಅನುಕೂಲ ಪಡೆಯಲಿಚ್ಛಿಸುವವರು ಸ್ವ-ಸಹಾಯ ಗುಂಪುಗಳನ್ನು ರಚಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಪ್ರಾರಂಭದಲ್ಲಿ ಅವರು ಅಲ್ಪ ಹಣವನ್ನು ಉಳಿತಾಯ ಮಾಡಲು ಪ್ರೋತ್ಸಾಹಿಸಲಾಗುತ್ತದೆ ಮತ್ತು ಆ ಹಣದಿಂದ ಅವರುಗಳಲ್ಲಿಯೇ ಕಿರು ಪ್ರಮಾಣದ ಸಾಲಗಳನ್ನು ನೀಡಲಾಗುತ್ತದೆ. ನಂತರ ಸರ್ಕಾರವು ಬ್ಯಾಂಕ್‌ಗಳ ಮೂಲಕ ಸ್ವ-ಸಹಾಯ ಗುಂಪುಗಳಿಗೆ ಭಾಗಶಃ ಹಣಕಾಸಿನ ನೆರವನ್ನು ಒದಗಿಸುತ್ತದೆ. ಆ ನಂತರ ಸ್ವ-ಸಹಾಯ ಗುಂಪುಗಳು ಸ್ವಯಂ ಉದ್ಯೋಗ ಚಟುವಟಿಕೆಗಳಿಗಾಗಿ ಯಾರಿಗೆ ಸಾಲ ನೀಡಬೇಕೆಂಬುದನ್ನು ನಿರ್ಧರಿಸುತ್ತವೆ. ಅಂತಹ ಒಂದು ಕಾರ್ಯಕ್ರಮವೆಂದರೆ **ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ(SGSY).** ಪ್ರಸ್ತುತ ಈ ಕಾರ್ಯಕ್ರಮವನ್ನು "ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್" (National Rural Livelihoods Mission-NRLM) ಎಂದು ಪುನರ್ರಚಿಸಲಾಗಿದೆ. ಇದೇರೀತಿ ನಗರ ಪ್ರದೇಶದ ಬಡವರಿಗಾಗಿ "ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್" (National Urban Livelihoods Mission-NULM) ಎಂಬ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

ಸರ್ಕಾರವು, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡವರು ಮತ್ತು ಕೌಶಲ್ಯ ರಹಿತ ಜನರಿಗೆ ಕೂಲಿ ಉದ್ಯೋಗಗಳನ್ನು ಸೃಷ್ಟಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 2005ನೇ ಆಗಸ್ಟ್‌ನಲ್ಲಿ ಕೂಲಿ ಉದ್ಯೋಗದ ಖಾತರಿ ನೀಡುವ ಹೊಸ ಕಾಯಿದೆಯನ್ನು ಸಂಸತ್ತು ಅಂಗೀಕರಿಸಿತು. ಇದರ ಪ್ರಕಾರ ಬಡ ಕುಟುಂಬದ ಇಚ್ಛೆಯುಳ್ಳ ವಯಸ್ಕರಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕೌಶಲ್ಯ ರಹಿತ ದಿನಗೂಲಿ ಕೆಲಸವನ್ನು ಒದಗಿಸುವ ಖಾತರಿ ನೀಡಲಾಗಿದೆ. ಈ ಕಾಯಿದೆಯನ್ನು 'ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯಿದೆ' (MGNREGA) ಎನ್ನುತ್ತೇವೆ. ಈ ಕಾಯಿದೆ ಅಡಿಯಲ್ಲಿ ಬಡವರಲ್ಲಿ ಯಾರು ಕನಿಷ್ಠ ಕೂಲಿಗೆ ಕೆಲಸಮಾಡಲು ಸಿದ್ಧರಿರುತ್ತಾರೋ ಅವರು ಈ ಕಾರ್ಯಕ್ರಮವು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಉದ್ಯೋಗಕ್ಕೆ ವರದಿ ಮಾಡಿಕೊಳ್ಳಬಹುದು. ಈ ಕಾಯಿದೆಯಡಿಯಲ್ಲಿ 2013-14ನೇ ಸಾಲಿನಲ್ಲಿ ಸುಮಾರು ಐದು ಕೋಟಿ ಕುಟುಂಬಗಳು ಉದ್ಯೋಗಾವಕಾಶ ಪಡೆದುಕೊಂಡಿದಿದ್ದವು.

ಮೂರನೆಯ ಮಾರ್ಗವು ಜನರಿಗೆ ಕನಿಷ್ಠ ಮೂಲ ಸೌಕರ್ಯಗಳನ್ನು ಒದಗಿಸಿ ಬಡತನವನ್ನು ನಿವಾರಿಸುವುದಾಗಿದೆ. ಭಾರತವು ಸಾಮಾಜಿಕ ಅನುಭೋಗದ ಅವಶ್ಯಕತೆಗಳ ಮೇಲೆ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವ ಮೂಲಕ-ಸಹಾಯಧನದ ದರದಲ್ಲಿ ಆಹಾರ ಧಾನ್ಯಗಳ ಪೂರೈಕೆ, ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ-ಜನರ ಜೀವನಮಟ್ಟವನ್ನು ಸುಧಾರಿಸಬಹುದೆಂದು ಆಲೋಚಿಸಿದ ಜಗತ್ತಿನ ಅಗ್ರಗಣ್ಯ ರಾಷ್ಟ್ರವಾಗಿದೆ. ಈ ಮಾರ್ಗದಡಿಯಲ್ಲಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಂದ ಬಡವರ ಅನುಭೋಗವನ್ನು ಹೆಚ್ಚಿಸುವುದು, ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಆರೋಗ್ಯ ಹಾಗೂ ಶಿಕ್ಷಣದಲ್ಲಿ ಸುಧಾರಣೆಗಳನ್ನು ನಿರೀಕ್ಷಿಸಲಾಗಿದೆ. ಈ ಮಾರ್ಗವನ್ನು 5ನೇ ಪಂಚವಾರ್ಷಿಕ ಯೋಜನೆಯಿಂದ ಗುರುತಿಸಬಹುದಾಗಿದೆ. "ಕೇವಲ



### ನೀವೇ ಮಾಡಿರಿ

### (Work These Out)

- ಕರಾವಳಿ ಪ್ರದೇಶಗಳು, ಮರುಭೂಮಿಗಳು, ಗುಡ್ಡಗಾಡು ಬುಡಕಟ್ಟು ಪ್ರದೇಶಗಳಲ್ಲಿ (1) ಕೂಲಿಗಾಗಿ ಕಾಳು ಕಾರ್ಯಕ್ರಮ ಮತ್ತು (2) ಸ್ವಯಂ-ಉದ್ಯೋಗ ಇವುಗಳ ಅಡಿಯಲ್ಲಿ ಸೃಷ್ಟಿಯಾಗಿರುವ ಮೂರು ಉದ್ಯೋಗಾವಕಾಶಗಳನ್ನು ಕುರಿತು ಚರ್ಚಿಸಿ ನಂತರ ಒಂದು ಪಟ್ಟಿಯನ್ನು ಸಿದ್ಧಪಡಿಸಿ.
- ನಿಮ್ಮ ಪ್ರದೇಶ ಅಥವಾ ನೆರೆಹೊರೆಗಳಲ್ಲಿ ರಸ್ತೆಗಳ ನಿರ್ಮಾಣ, ಸರ್ಕಾರಿ ಆಸ್ಪತ್ರೆಗಳು ಮತ್ತು ಸರ್ಕಾರಿ ಶಾಲೆಗಳಲ್ಲಿ ಕಟ್ಟಡ ನಿರ್ಮಾಣ ಮುಂತಾದ ಅಭಿವೃದ್ಧಿ ಕೆಲಸಗಳನ್ನು ನೀವು ಗುರುತಿಸಬಹುದು. ಅಂತಹ ಸ್ಥಳಗಳಿಗೆ ಭೇಟಿ ನೀಡಿ-ಕೆಲಸದ ಸ್ವರೂಪ, ಎಷ್ಟು ಜನರು ಉದ್ಯೋಗ ಪಡೆಯುತ್ತಿದ್ದಾರೆ, ಕಾರ್ಮಿಕರಿಗೆ ನೀಡುತ್ತಿರುವ ಕೂಲಿ ಮುಂತಾದವುಗಳ ಬಗ್ಗೆ ಎರಡು ಅಥವಾ ಮೂರು ಪುಟಗಳಲ್ಲಿ ಒಂದು ವರದಿಯನ್ನು ತಯಾರಿಸಿ.

ಉದ್ಯೋಗಾವಕಾಶಗಳ ವಿಸ್ತರಣೆಯಿಂದ ಬಡವರು ತಾವೇ ಎಲ್ಲ ಅವಶ್ಯಕ ಸರಕು ಮತ್ತು ಸೇವೆಗಳನ್ನು ಖರೀದಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಅವಶ್ಯಕ ಆಹಾರಧಾನ್ಯಗಳು, ಶಿಕ್ಷಣ, ಆರೋಗ್ಯ, ಪೌಷ್ಠಿಕಾಂಶ, ಕುಡಿಯುವ ನೀರು, ವಸತಿ, ಸಂಪರ್ಕಗಳು ಮತ್ತು ವಿದ್ಯುತ್ ರೂಪದಲ್ಲಿ ಸಾಮಾಜಿಕ ಅನುಭೋಗ ಮತ್ತು ಹೂಡಿಕೆಯ ಮೂಲಕ ಕನಿಷ್ಟಪಕ್ಷ ಅವರು ಒಂದು ಕನಿಷ್ಟ ಜೀವನಮಟ್ಟವನ್ನು ಹೊಂದುವಂತೆ ಮಾಡಬಹುದಾಗಿದೆ." ಬಡವರ ಆಹಾರ ಮತ್ತು ಪೌಷ್ಠಿಕತೆಯ ಮಟ್ಟವನ್ನು ಸುಧಾರಿಸುವ ಉದ್ದೇಶವನ್ನು ಹೊಂದಿರುವ ಮೂರು ಪ್ರಮುಖ ಕಾರ್ಯಕ್ರಮಗಳೆಂದರೆ; **ಸಾರ್ವಜನಿಕ ವಿತರಣಾ ವ್ಯವಸ್ಥೆ(PDS), ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ICDS) ಮತ್ತು ಮಧ್ಯಾಹ್ನದ ಊಟದ ಯೋಜನೆ(MDMS). ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ, ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ, ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಗಳೂ** ಸಹ ಈ ನಿಟ್ಟಿನಲ್ಲಿ ಪ್ರಯತ್ನಿಸಿವೆ. ಭಾರತವು ಹಲವಾರು ಅಂಶಗಳಲ್ಲಿ ತೃಪ್ತಿಕರವಾದ ಪ್ರಗತಿಯನ್ನು ಸಾಧಿಸಿದೆ ಎಂದು ಸಂಕ್ಷಿಪ್ತವಾಗಿ ಹೇಳಬಹುದಾಗಿದೆ.

ಕೆಲವು ನಿರ್ದಿಷ್ಟ ಗುಂಪುಗಳಿಗೆ ಸಹಾಯ ಮಾಡಲು ವಿವಿಧ ರೀತಿಯ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಸರ್ಕಾರವು ಜಾರಿಗೊಳಿಸಿದೆ. ಕೇಂದ್ರ ಸರ್ಕಾರವು ಆರಂಭಿಸಿರುವ ಅಂತಹ ಒಂದು ಯೋಜನೆ ಎಂದರೆ 'ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ'. ಈ ಕಾರ್ಯಕ್ರಮದ ಅಡಿಯಲ್ಲಿ ವಾರಸುದಾರರಿಲ್ಲದ ಹಿರಿಯ ನಾಗರಿಕರಿಗೆ ಜೀವನ ನಿರ್ವಹಣೆಗಾಗಿ ವೃದ್ಧಾಪ್ಯವೇತನವನ್ನು ನೀಡಲಾಗುತ್ತಿದೆ. ದಿಕ್ಕಿಲ್ಲದ ಬಡ ಮಹಿಳೆಯರು ಮತ್ತು ವಿಧವೆಯರೂ ಸಹ ಈ ಯೋಜನೆಯ ಸೌಲಭ್ಯ ಪಡೆಯುತ್ತಿದ್ದಾರೆ. ಸರ್ಕಾರವು ಬಡ ಜನರಿಗೆ ಆರೋಗ್ಯ ವಿಮೆ ಒದಗಿಸಲು ಕೆಲವು ಯೋಜನೆಗಳನ್ನು ಪ್ರಾರಂಭಿಸಿದೆ. 2014 ರಿಂದ "ಪ್ರಧಾನ ಮಂತ್ರಿ ಜನ-ಧನ" ಯೋಜನೆಯನ್ನು ಆರಂಭಿಸಲಾಗಿದ್ದು, ಭಾರತದಲ್ಲಿ ಜನರು ಬ್ಯಾಂಕ್‌ಗಳಲ್ಲಿ ಖಾತೆ ತೆರೆಯುವುದನ್ನು ಪ್ರೋತ್ಸಾಹಿಸಲಾಗುತ್ತಿದೆ. ಜೊತೆಗೆ ಜನರಲ್ಲಿ ಉಳಿತಾಯದ ಹವ್ಯಾಸವನ್ನೂ ಉತ್ತೇಜಿಸಲು, ಸರ್ಕಾರದ ಯೋಜನೆಗಳ ಸವಲತ್ತುಗಳನ್ನು ಮತ್ತು ಸಹಾಯಧನಗಳನ್ನು ನೇರವಾಗಿ ಖಾತೆ ದಾರರಿಗೆ ವರ್ಗಾಯಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಇಂತಹ ಪ್ರತಿಯೊಬ್ಬ ಬ್ಯಾಂಕ್ ಖಾತೆದಾರ ಒಂದು ಲಕ್ಷ ರೂಪಾಯಿಗಳಷ್ಟು ಅಪಘಾತ ವಿಮೆ ಹಾಗೂ ಮೂವತ್ತು ಸಾವಿರ ರೂಪಾಯಿಗಳಷ್ಟು ಜೀವವಿಮೆ ಪಡೆಯಲು ಅರ್ಹನಾಗಿರುತ್ತಾನೆ.

## 4.7 ಬಡತನ ಉಪಶಮನಗೊಳಿಸುವ ಕಾರ್ಯಕ್ರಮಗಳು – ಒಂದು ವಿಮರ್ಶಾತ್ಮಕ ಮೌಲ್ಯಮಾಪನ

## (POVERTY ALLEVIATION PROGRAMMES – A CRITICAL ASSESSMENT)

ಮೊದಲ ಬಾರಿಗೆ ಬಡತನವನ್ನು ಕಡಿಮೆ ಮಾಡುವ ಪ್ರಯತ್ನಗಳು ಸ್ವತಂತ್ರ್ಯಾ ನಂತರದಲ್ಲಿ ಫಲನೀಡಿವೆ. ಈಗ ಕೆಲವು ರಾಜ್ಯಗಳಲ್ಲಿ ನಿರಪೇಕ್ಷ ಬಡವರ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಬಡತವನ್ನು ನಿರ್ಮೂಲನೆ

## ಪೆಟ್ಟಿಗೆ 4.4: ರಾಮದಾಸ್ ಕೊರವನ ಗುರಿ ಇಲ್ಲದ ರಸ್ತೆ

1993ರಲ್ಲಿ ಸರ್ಕಾರ ಬುಡಕಟ್ಟು ಜನರ ಅಭಿವೃದ್ಧಿಯ ಹೆಸರಿನಲ್ಲಿ ರೂ.17.44 ಲಕ್ಷಗಳನ್ನು ಯೋಜನೆಗೆ ವೆಚ್ಚಮಾಡಿ ಸುರ್ಗುಜಾ ಗ್ರಾಮವನ್ನು ಸಂಪರ್ಕಿಸುವ ಮೂರು ಕಿ.ಮೀ. ರಸ್ತೆ ನಿರ್ಮಾಣ ಮಾಡಲು ನಿರ್ಧರಿಸಿತು. ಏಕೋ ಏನೋ ರಾಚಕೇತ ಹಳ್ಳಿಯ ರಾಮದಾಸ್ ಕೊರವ ತಾನು ರೂ.17.44 ಲಕ್ಷಗಳಷ್ಟು ಸರ್ಕಾರಕ್ಕೆ ಬೆಲೆಯುಳ್ಳವನಾಗಿರುವ ಅಂಶವು ಅವನಿಗೆ ಆನಂದ ನೀಡಲಿಲ್ಲ.

ಭಾರತದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲೊಂದಾದ ಸುರ್ಗುಜಾದಲ್ಲಿ ಶೇಕಡ 55ಕ್ಕೂ ಹೆಚ್ಚು ಬುಡಕಟ್ಟು ಜನರು ನೆಲೆಸಿದ್ದಾರೆ. ಪಹಡಿ ಅಥವಾ ಚಿಟ್ಟಕೊರವರು ಶೇಕಡ 5 ಕ್ಕಿಂತ ಕಡಿಮೆಯಿದ್ದು, ಪುರಾತನ ಬುಡಕಟ್ಟು ಆದಿವಾಸಿಗಳೆಂದು ಸರ್ಕಾರ ಪಟ್ಟಿಮಾಡಿದೆ. ಇವರ ಅಭಿವೃದ್ಧಿಗಾಗಿ ವಿಶೇಷ ಪ್ರಯತ್ನಗಳು ನಡೆಯುತ್ತಿದ್ದು, ಆಗಾಗ್ಗೆ ಅಪಾರ ಮೊತ್ತದ ಹಣವನ್ನು ವೆಚ್ಚಮಾಡಲಾಗುತ್ತಿದೆ. ಪಹಡಿ ಕೊರವ ಯೋಜನೆಯು ಒಂದು ಕೇಂದ್ರನಿಧಿ ಯೋಜನೆಯಾಗಿದ್ದು, ಐದು ವರ್ಷಗಳಲ್ಲಿ ರೂ.42 ಕೋಟಿಗಳಷ್ಟು ಮೌಲ್ಯದ್ದಾಗಿದೆ.

ಸುಮಾರು 15,000 ಪಹಡಿ ಕೊರವರಿದ್ದು, ಇವರಲ್ಲಿ ಜನರು ಸುರ್ಗುಜಾದಲ್ಲಿದ್ದಾರೆ. ಆದರೆ, ರಾಜಕೀಯ ಕಾರಣಗಳಿಗಾಗಿ, ರಾಯಗಡ ಜಿಲ್ಲೆಯು ಈ ಯೋಜನೆಯ ಕೇಂದ್ರಸ್ಥಾನವಾಗಿದೆ. ರಾಚ್‌ಖೇತದಲ್ಲಿ ಪಹಡಿ ಕೊರವ ರಸ್ತೆ ನಿರ್ಮಾಣಕ್ಕೆ ಒಂದು ಸಣ್ಣ ಸಮಸ್ಯೆ ಇದೆ–ರಾಮದಾಸ್ ಕುಟುಂಬವನ್ನು ಹೊರತುಪಡಿಸಿ, ಇಡೀ ಗ್ರಾಮವು ಸಂಪೂರ್ಣವಾಗಿ ಪಹಡಿ ಕೊರವ ರಹಿತವಾಗಿತ್ತು.

ಈ ಯೋಜನೆಗಳಿಂದ ಪಹಡಿ ಕೊರವರಿಗೆ ಕನಿಷ್ಟ ಪ್ರಯೋಜನವಾಗದಿದ್ದರೂ ಮತ್ತು ಸಂಪೂರ್ಣ ನಿಷ್ಪ್ರಯೋಜಕವಾದರೂ ಪರವಾಗಿಲ್ಲ. ಇಲ್ಲಿ ನೀವು ಒಂದು ಈಜುಕೊಳ ಮತ್ತು ಒಂದು ಬಂಗಲೆ ನಿರ್ಮಿಸಿದರೂ, ಅದನ್ನು ನೀವು ಬುಡಕಟ್ಟು ಜನರ ಹೆಸರಿನಲ್ಲಿಯೇ ಮಾಡಬೇಕಾಗುತ್ತದೆ ಎಂದು ಎನ್.ಜಿ.ಓ. ಕಾರ್ಯಕರ್ತನೊಬ್ಬ ಹೇಳುತ್ತಾನೆ. ರಾಮ್‌ದಾಸನ ಮಗ ರಾಮಾವತಾರ್ ಕೊರವ ಹೇಳುವಂತೆ "ರಾಚ್‌ಖೇತಾ ಗ್ರಾಮದಲ್ಲಿ ವಾಸ್ತವಿಕವಾಗಿ ಯಾವುದೇ ಪಹಡಿ ಕೊರವರು ವಾಸವಾಗಿದ್ದಾರೆಯೆ ಎಂದು ಪರಿಶೀಲಿಸುವ ತೊಂದರೆ ಯಾರೊಬ್ಬನು ತೆಗೆದುಕೊಂಡಿಲ್ಲ ಮತ್ತು ಅಲ್ಲಿ ಈಗಾಗಲೇ ಒಂದು ಕಚ್ಚಾ ರಸ್ತೆ ಇದೆ. ಅವರು ರಸ್ತೆಯ ಮೇಲೆ ಕೇವಲ ಕೆಂಪು ಮಣ್ಣನ್ನು ಹಾಕುತ್ತಾರೆ ಅಷ್ಟೆ. ರೂ.17.44 ಲಕ್ಷಗಳನ್ನು ಖರ್ಚುಮಾಡಿದ ನಂತರವೂ, ಇಂದಿಗೂ ಇದು ಪಕ್ಕಾ ರಸ್ತೆಯಾಗಲಿಲ್ಲ".

ರಾಮ್‌ದಾಸನ ಸ್ವಂತ ಬೇಡಿಕೆಗಳು ಹೃದಯಸ್ಪರ್ಶಿ ಹಾಗೂ ಅವನು ಹೇಳುವಂತೆ "ನನಗೆ ಬೇಕಾಗಿರುವುದು ಸ್ವಲ್ಪ ನೀರು". ನೀರಿಲ್ಲದೆ ವ್ಯವಸಾಯ ಮಾಡುವುದು ಹೇಗೆ ಮತ್ತೆ ಮತ್ತೆ ಕೇಳಿದಾಗ "ಆ ರಸ್ತೆಗಾಗಿ ರೂ.17.44 ಲಕ್ಷಗಳನ್ನು ವೆಚ್ಚ ಮಾಡುವ ಬದಲಾಗಿ ಕೆಲವೇ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ತನ್ನ ಜಮೀನಿನಲ್ಲಿ ಹಾಳಾಗಿರುವ ಬಾವಿಯ ದುರಸ್ತಿ ಮಾಡಿದ್ದರೆ ಅದಕ್ಕಿಂತ ಒಳ್ಳೆಯದಾಗುತ್ತಿರಲಿಲ್ಲವೆ? ಜಮೀನಿನ ಅಭಿವೃದ್ಧಿಯೂ ಅವಶ್ಯಕ, ನಮಗೆ ಸ್ವಲ್ಪ ನೀರನ್ನು ಕೊಡುವ ಮೂಲಕ ಇದನ್ನು ಪ್ರಾರಂಭಿಸಲಿ" ಎಂದು ಹೇಳುತ್ತಾನೆ.

ರಾಮ್‌ದಾಸ್‌ನ ಸಮಸ್ಯೆಗಳನ್ನು ಅಲಕ್ಷ್ಯ ಮಾಡಲಾಯಿತು. ಸರ್ಕಾರದ ಸಮಸ್ಯೆ ಗುರಿಸಾಧನೆಯಾಗಿತ್ತು. ಅಧಿಕಾರಿಯೊಬ್ಬರು ಮೌಖಿಕವಾಗಿ ಗೇಲಿಮಾಡುವಂತೆ ಹಣವನ್ನು ಕೇವಲ ಬ್ಯಾಂಕುಗಳಲ್ಲಿ ಮುದ್ದತಿ ಠೇವಣಿಯಾಗಿರಿಸಿದ್ದರೆ (Fixed Deposit) ಪಹಡಿ ಕೊರವ ಕುಟುಂಬದ ಯಾರೊಬ್ಬನೂ ಮತ್ತೆ ಕೆಲಸ ಮಾಡಬೇಕಾಗುವುದಿಲ್ಲ. ಕೇವಲ ಬಡ್ಡಿಯೊಂದೆ ಅವರನ್ನು ಸುರ್ಗುಜಾ ಗ್ರಾಮದಲ್ಲಿ ಯೋಗ್ಯವಾಗಿ ಬದುಕುವಂತೆ ಮಾಡುತ್ತಿತ್ತು.

ರಾಮ್‌ದಾಸ್‌ಗೆ ವಾಸ್ತವಿಕವಾಗಿ ಏನು ಅಗತ್ಯವಿದೆ, ಅವನ ಸಮಸ್ಯೆಗಳೇನೆಂದು ಅಥವಾ ಅವುಗಳನ್ನು ಬಗೆಹರಿಸಲು ಅವನ ಕೋರಿಕೆಯನ್ನು ಪರಿಗಣಿಸಲು ಯಾರೊಬ್ಬರೂ ಚಿಂತಿಸಲಿಲ್ಲ. ಬದಲಿಗೆ ಅವನ ಹೆಸರಿನಲ್ಲಿ ಅವನು ಉಪಯೋಗಿಸದ ರಸ್ತೆಯನ್ನು ರೂ.17.44 ಲಕ್ಷಗಳನ್ನು ವೆಚ್ಚ ಮಾಡಿ ನಿರ್ಮಿಸಲಾಯಿತು. ಗುರಿಯಿಲ್ಲದ ರಸ್ತೆಯಲ್ಲಿ ನಾವು ಎರಡು ಕಿ.ಮೀ. ಪಯಣಿಸಿ ನಿಂತಾಗ, ರಾಮದಾಸ್ ಕೊರವ "ಸ್ವಾಮಿ, ನನ್ನ ನೀರಿನ ಸಮಸ್ಯೆಗೆ ಏನಾದರೂ ಮಾಡಿ" ಎಂದನು.

**ಮೂಲ:** ಪಿ. ಸಾಯಿನಾಥ್ ರವರಿಂದ ಪಡೆದ "ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್" 1996, ಸ್ಟೋರೀಸ್ ಫ್ರಂ ಇಂಡಿಯಾಸ್ ಪೂರೆಸ್ಟ್ ಡಿಸ್ಟ್ರಿಕ್ಟ್ಸ್, ಪೆಂಗ್ವಿನ್ ಬುಕ್ಸ್, ನ್ಯೂ ಡೆಲ್ಲಿ.

ಮಾಡಲು ವಿವಿಧ ಕಾರ್ಯತಂತ್ರಗಳಿದ್ದಾಗ್ಯೂ ಹಸಿವು, ಅಪೌಷ್ಠಿಕತೆ, ಅನಕ್ಷರತೆ, ಮೂಲ ಅವಶ್ಯಕತೆಗಳ ಕೊರತೆಗಳು ಭಾರತದ ಹಲವು ಭಾಗಗಳಲ್ಲಿನ ಸಾಮಾನ್ಯ ಲಕ್ಷಣಗಳಾಗಿ ಮುಂದುವರೆದಿವೆ. ಕಳೆದ ಐದುವರೆ ದಶಕಗಳ ಅವಧಿಯಲ್ಲಿ ಬಡತನವನ್ನು ಕಡಿಮೆ ಮಾಡುವ ನೀತಿಗಳನ್ನು ಪ್ರಗತಿಪರ ಸ್ವರೂಪದಲ್ಲಿ ವಿಸ್ತರಿಸಿದ್ದಾಗ್ಯೂ ಅದರ ಅಮೂಲಾಗ್ರ ಪರಿವರ್ತನೆ ಸಾಧ್ಯವಾಗಿಲ್ಲ. ನೀವು ಕಾರ್ಯಕ್ರಮಗಳ ಹೆಸರುಗಳು, ಒಗ್ಗೂಡುವಿಕೆ ಅಥವಾ ಮಾರ್ಪಾಟುಗಳಲ್ಲಾಗಿರುವ ಬದಲಾವಣೆಗಳನ ಗುರುತಿಸಬಹುದು. ಹೀಗಿದ್ದರೂ ಅಗತ್ಯವಿರುವ ಬಡವರಿಗೆ ಆಸ್ತಿಯ ಒಡೆತನ, ಉತ್ಪಾದನಾ ಪ್ರಕ್ರಿಯೆ ಮತ್ತು ಮೂಲ ಅವಶ್ಯಕತೆಗಳನ್ನು ಹೆಚ್ಚಿಸುವಲ್ಲಿ ಯಾವುದೇ ಅಮೂಲಾಗ್ರ ಬದಲಾವಣೆಗಳು ಫಲನೀಡಿಲ್ಲ. ವಿಧ್ವಾಂಸರು ಈ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡುವಾಗ ಅವುಗಳ ಯಶಸ್ವಿ ಅನುಷ್ಠಾನಕ್ಕೆ ತಡೆಯುಂಟು ಮಾಡಿರುವ ಮೂರು ಕ್ಷೇತ್ರಗಳನ್ನು ತಿಳಿಸಿದ್ದಾರೆ. ಭೂಮಿ ಮತ್ತು ಇತರ ಆಸ್ತಿಗಳ ಅಸಮಾನ ಹಂಚಿಕೆಯಿಂದಾಗಿ ಬಡತನ ಕಡಿಮೆ ಗೊಳಿಸುವ ಕಾರ್ಯಕ್ರಮಗಳ ನೇರ ಪ್ರಯೋಜನಗಳನ್ನು ಬಡವರಲ್ಲದವರು ಪಡೆದುಕೊಳ್ಳುತ್ತಿದ್ದಾರೆ. ಬಡತನದ ಪ್ರಮಾಣಕ್ಕೆ ಹೋಲಿಸಿದರೆ ಈ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿರುವ ಹಣದ ಸಂಪನ್ಮೂಲ ಸಾಕಾಗುತ್ತಿಲ್ಲ. ಅಲ್ಲದೆ, ಈ ಕಾರ್ಯಕ್ರಮಗಳ ಅನುಷ್ಠಾನವು ಮುಖ್ಯವಾಗಿ ಸರ್ಕಾರ ಮತ್ತು ಬ್ಯಾಂಕ್ ಅಧಿಕಾರಿಗಳನ್ನು ಅವಲಂಬಿಸಿದೆ. ಇಂತಹ ಅಧಿಕಾರಿಗಳು ಇಚ್ಛಾ ರಹಿತರು, ಅಸಮರ್ಪಕ ತರಬೇತಿ ಹೊಂದಿರುವವರು, ಭ್ರಷ್ಟಾಚಾರ ಪೀಡಿತರು ಮತ್ತು ವಿವಿಧ ಸ್ಥಳೀಯ ನಾಯಕರ ಒತ್ತಡಗಳಿಗೆ ಒಳಗಾಗಿದ್ದು, ಸಂಪನ್ಮೂಲಗಳು ಅಸಮರ್ಪಕವಾಗಿ ಬಳಕೆಯಾಗುತ್ತಿವೆ ಮತ್ತು ಅಪವ್ಯಯವಾಗುತ್ತಿವೆ . ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸ್ಥಳೀಯ ಸಂಸ್ಥೆಗಳೂ ಸಹ ಭಾಗವಹಿಸುತ್ತಿಲ್ಲ.

ಬಡತನ ರೇಖೆಯ ಮೇಲೆ ಅಥವಾ ಬಡತನ ರೇಖೆಗಿಂತ ಸ್ವಲ್ಪ ಮೇಲೆ ಬದುಕುತ್ತಿರುವ ಅಧಿಕ ಸಂಖ್ಯೆಯ ದುರ್ಬಲ ಜನರನ್ನು ಪರಿಗಣಿಸುವಲ್ಲಿಯೂ ಸಹ ಸರ್ಕಾರದ ನೀತಿಗಳು ವಿಫಲವಾಗಿವೆ. ಇದು ಮತ್ತೆ ತಿಳಿಸುವುದೇನೆಂದರೆ, ಆರ್ಥಿಕ ಬೆಳವಣಿಗೆಯೊಂದೇ ಬಡತನವನ್ನು ತಗ್ಗಿಸಲು ಸಾಕಾಗುವುದಿಲ್ಲ. ಬಡವರ ಸಕ್ರಿಯ ಸಹಭಾಗಿತ್ವ ಇಲ್ಲದೆ ಯಾವುದೇ ಕಾರ್ಯಕ್ರಮದ ಯಶಸ್ವಿ ಅನುಷ್ಠಾನ ಸಾಧ್ಯವಾಗುವುದಿಲ್ಲ.



**ಚಿತ್ರ 4.6: ಚಿಂದಿ ಆಯುವವರು – ಉದ್ಯೋಗ ಸೃಷ್ಟಿ ಯೋಜನೆಗಳ ಅಸಮರ್ಪಕ ನಿರ್ವಹಣೆಯು ಜನರನ್ನು ಇಂತಹ ಕಡಿಮೆ ಆದಾಯಗಳಿಸುವ ಕಸುಬುಗಳನ್ನು ನಿರ್ವಹಿಸುವಂತೆ ಮಾಡಿದೆ.**

ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಬಡವರು ಸಕ್ರಿಯವಾಗಿ ಭಾಗವಹಿಸಿ, ಬೆಳವಣಿಗೆಗೆ ತಮ್ಮ ಕೊಡುಗೆಯನ್ನು ನೀಡಿದಾಗ ಮಾತ್ರ ಬಡತನವನ್ನು ಯಶಸ್ವಿಯಾಗಿ ನಿರ್ಮೂಲನೆ ಮಾಡಬಹುದು. ಬಡವರನ್ನು ಸಾಮಾಜಿಕವಾಗಿ ಸಜ್ಜುಗೊಳಿಸಿ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಿ ಮತ್ತು ಸಬಲೀಕರಣ ಪ್ರಕ್ರಿಯೆ ಮೂಲಕ ಬಡತನ ನಿರ್ಮೂಲನೆಗೊಳಿಸಬಹುದಾಗಿದೆ. ಇದು ಆದಾಯದ ಮಟ್ಟಗಳು, ಕೌಶಲ್ಯದ ಅಭಿವೃದ್ಧಿ, ಆರೋಗ್ಯ ಮತ್ತು ಸಾಕ್ಷರತೆಯ ಹೆಚ್ಚಳಕ್ಕೆ ಕಾರಣವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ನೆರವಾಗುತ್ತದೆ. ಮೇಲಾಗಿ ಬಡತನ ಪೀಡಿತ ಪ್ರದೇಶಗಳನ್ನು ಗುರುತಿಸಿ ಮತ್ತು ಮೂಲ ಸೌಕರ್ಯಗಳಾದ ಶಾಲೆಗಳು, ರಸ್ತೆಗಳು, ಇಂದನ, ದೂರಸಂಪರ್ಕ, ಮಾಹಿತಿ ತಂತ್ರಜ್ಞಾನ ಸೇವೆಗಳು, ತರಬೇತಿ ಸಂಸ್ಥೆಗಳು ಮುಂತಾದವುಗಳನ್ನು ಒದಗಿಸುವುದು ಅವಶ್ಯಕವಾಗಿದೆ.

## 4.8 ಉಪಸಂಹಾರ (CONCLUSION)

ಸ್ವಾತಂತ್ರ್ಯಾನಂತರ ನಾವು ಸುಮಾರು ಆರು ದಶಕಗಳನ್ನು ಪ್ರಯಾಣಿಸಿದ್ದೇವೆ. ನಮ್ಮ ಎಲ್ಲ ನೀತಿಗಳ ಉದ್ದೇಶಗಳು ಸ್ಪಷ್ಟಪಡಿಸಿರುವಂತೆ ಸಮಾನತೆ ಮತ್ತು ಸಾಮಾಜಿಕ ನ್ಯಾಯದೊಂದಿಗೆ ಶೀಘ್ರ ಮತ್ತು ಸಮತೋಲನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ನೀತಿ ನಿರೂಪಕರಿಂದ ಬಡತನ ನಿವಾರಣೆಯು ಯಾವಾಗಲೂ ಭಾರತದ ಒಂದು ಪ್ರಮುಖ ಸವಾಲಾಗಿ ಸ್ವೀಕರಿಸಲ್ಪಟ್ಟಿದೆ. ದೇಶದಲ್ಲಿ ನಿರಪೇಕ್ಷ ಬಡವರ ಸಂಖ್ಯೆ ಕಡಿಮೆಯಾಗಿದೆ ಮತ್ತು ಕೆಲವು ರಾಜ್ಯಗಳಲ್ಲಿ ಬಡವರ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ. ಆದಾಗ್ಯೂ ವಿಮರ್ಶಕರು ಹೇಳುವುದೇನೆಂದರೆ, ಅಪಾರ ಸಂಪನ್ಮೂಲಗಳ ಹಂಚಿಕೆ ಮತ್ತು ವೆಚ್ಚ ಮಾಡಿದ್ದಾಗ್ಯೂ ನಾವು ಗುರಿ ಸಾಧನೆಗೆ ಇಂದಿಗೂ ಬಹು ದೂರ ಉಳಿದಿದ್ದೇವೆ. ತಲಾದಾಯ ಮತ್ತು ಸರಾಸರಿ ಜೀವನಮಟ್ಟಕ್ಕೆ ಸಂಬಂಧಿಸಿದಂತೆ ಸುಧಾರಣೆಯಾಗಿದೆ: ಮೂಲ ಅವಶ್ಯಕತೆಗಳನ್ನು ಒದಗಿಸುವಲ್ಲಿ ಅಲ್ಪ ಪ್ರಗತಿಯಾಗಿದೆ. ಆದರೆ ಇತರ ರಾಷ್ಟ್ರಗಳು ಮಾಡಿರುವ ಪ್ರಗತಿಗೆ ಹೋಲಿಕೆ ಮಾಡಿದರೆ ನಮ್ಮ ಸಾಧನೆ ಗಣನೀಯವಾಗಿಲ್ಲ. ಅಲ್ಲದೆ ಅಭಿವೃದ್ಧಿಯ ಫಲಗಳು ಜನಸಂಖ್ಯೆಯ ಎಲ್ಲಾ ವರ್ಗಗಳಿಗೆ ತಲುಪಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಜನರ ಕೆಲವು ವರ್ಗಗಳು, ಆರ್ಥಿಕತೆಯ ಕೆಲವು ವಲಯಗಳು, ದೇಶದ ಕೆಲವು ಪ್ರದೇಶಗಳು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಸ್ಪರ್ಧೆ ಮಾಡಬಲ್ಲವು. ಆದಾಗ್ಯೂ ಅನೇಕರು ಬಡತನದ ವಿಷವರ್ತುಲದಿಂದ ಹೊರ ಬರುವ ಸಾಮರ್ಥ್ಯವನ್ನು ಪಡೆದಿಲ್ಲ.

### ಪುನರುಕ್ತಿ

- ಬಡತನವನ್ನು ಕಡಿಮೆ ಮಾಡುವುದು ಭಾರತದ ಅಭಿವೃದ್ಧಿ ಕಾರ್ಯತಂತ್ರಗಳ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.
- ಕನಿಷ್ಠ ಆಹಾರೇತರ ವೆಚ್ಚದ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಸರಾಸರಿ ದಿನವೊಂದಕ್ಕೆ ತಲಾ ಅಗತ್ಯ 2400 ಕ್ಯಾಲೊರಿಗಳು ಮತ್ತು ನಗರ ಪ್ರದೇಶಗಳಲ್ಲಿ 2100 ಕ್ಯಾಲೊರಿಗಳಷ್ಟು ಭರಿಸುವ ತಲಾ ಅನುಭೋಗ ವೆಚ್ಚದ ಮಟ್ಟವನ್ನು ಬಡತನ ರೇಖೆ ಅಥವಾ ನಿರಪೇಕ್ಷ ಬಡತನ ಎಂದು ಕರೆಯುತ್ತಾರೆ.
- ಬಡವರ ಸಂಖ್ಯೆ ಮತ್ತು ಅವರ ಪ್ರಮಾಣವನ್ನು ಹೋಲಿಕೆ ಮಾಡಿದಾಗ ಜನರ ಬಡತನದ ವಿವಿಧ ಹಂತಗಳು ಮತ್ತು ಕಾಲಾಂತರದಲ್ಲಿ ಅವರು ವಿವಿಧ ರಾಜ್ಯಗಳ ನಡುವೆ ಹಂಚಿಕೆಯಾಗಿರುವ ಮಾಹಿತಿಯನ್ನು ನಾವು ಪಡೆಯುತ್ತೇವೆ.
- ಭಾರತದಲ್ಲಿ ಬಡವರ ಸಂಖ್ಯೆ ಮತ್ತು ಒಟ್ಟು ಜನಸಂಖ್ಯೆಯಲ್ಲಿ ಅವರ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. 1990ರ ದಶಕದಲ್ಲಿ ಮೊದಲ ಬಾರಿಗೆ ನಿರಪೇಕ್ಷ ಬಡವರ ಸಂಖ್ಯೆ ಕಡಿಮೆಯಾಗಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಹುತೇಕ ಬಡವರು ಸಾಂದರ್ಭಿಕ ಮತ್ತು ಕೌಶಲ್ಯರಹಿತ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.
- ಆದಾಯ ಮತ್ತು ವೆಚ್ಚ ಆಧಾರಿತ ಮಾರ್ಗ ಬಡ ಜನರ ಅನೇಕ ಗುಣಲಕ್ಷಣಗಳನ್ನು ಗಣನೆಗೆ ತೆಗೆದುಕೊಂಡಿಲ್ಲ.
- ವರ್ಷಗಳು ಕಳೆದಂತೆ, ಭಾರತದಲ್ಲಿ ಬಡತನವನ್ನು ಕಡಿಮೆ ಮಾಡಲು ಸರ್ಕಾರವು ಮೂರು ಮಾರ್ಗಗಳನ್ನು ಅನುಸರಿಸುತ್ತಿದೆ: ಬೆಳವಣಿಗೆ ಆಧಾರಿತ ಅಭಿವೃದ್ಧಿ, ಬಡತನ ಉಪಶಮನದ ನಿರ್ದಿಷ್ಟ ಕಾರ್ಯಕ್ರಮಗಳು ಮತ್ತು ಬಡ ಜನರಿಗೆ ಕನಿಷ್ಟ ಅಗತ್ಯಗಳನ್ನು ಪೂರೈಸುವುದು.
- ಬಡವರಿಗೆ ಆಸ್ತಿಗಳ ಒಡೆತನ, ಉತ್ಪಾದನಾ ಪ್ರಕ್ರಿಯೆಗಳು ಮತ್ತು ಮೂಲ ಸೌಲಭ್ಯಗಳನ್ನು ಒದಗಿಸುವ ವಿಷಯದಲ್ಲಿ ಸರ್ಕಾರದ ಪ್ರಯತ್ನಗಳು ಇನ್ನೂ ಪರಿವರ್ತನೆ ಉಂಟುಮಾಡಬೇಕಾಗಿದೆ.



## ಅಭ್ಯಾಸಗಳು

1. ಪೌಷ್ಟಿಕಾಂಶ ಆಧಾರಿತ ವಿಧಾನವು ಏಕೆ ಬಡವರನ್ನು ಗುರುತಿಸುವಲ್ಲಿ ಸಮರ್ಪಕವಾಗಿಲ್ಲ ?
2 ಕೂಲಿಗಾಗಿ ಕಾಳು ಯೋಜನೆ ಎಂದರೇನು?
3. ಭಾರತದಲ್ಲಿ ಬಡತನ ನಿರ್ಮೂಲನೆ ಮಾಡಲು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳು ಏಕೆ ಪ್ರಮುಖವಾಗಿವೆ?
4 ಬಡತನ ಸಮಸ್ಯೆಯನ್ನು ಆದಾಯ ಗಳಿಸುವ ಆಸ್ತಿಗಳ ಸೃಷ್ಟಿಯು ಹೇಗೆ ನಿವಾರಿಸಬಲ್ಲವು ?
5 ಭಾರತದಲ್ಲಿ ಬಡತನ ನಿವಾರಣೆಗಾಗಿ ಸರ್ಕಾರವು ಕೈಗೊಂಡಿರುವ ಮೂರು ಆಯಾಮದ ಕಾರ್ಯಕ್ರಮಗಳು ಬಡತನ ನಿರ್ಮೂಲನೆ ಮಾಡುವಲ್ಲಿ ಯಶಸ್ವಿಯಾಗಿಲ್ಲ. ವಿಮರ್ಶಿಸಿ.
6 ಬಡವರು ಮತ್ತು ಹಿರಿಯ ನಾಗರಿಕರು ಹಾಗೂ ದಿಕ್ಕಿಲ್ಲದ ಮಹಿಳೆಯರ ಸಹಾಯಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳಾವುವು ?
7 ನಿರುದ್ಯೋಗ ಮತ್ತು ಬಡತನದ ನಡುವೆ ಯಾವುದಾದರೂ ಸಂಬಂಧವಿದೆಯೇ? ವಿವರಿಸಿ.
8 ನೀವು ಒಂದು ಬಡ ಕುಟುಂಬದಿಂದ ಬಂದಿದ್ದು, ಒಂದು ಪೆಟ್ಟಿಗೆ ಅಂಗಡಿಯನ್ನು ಇಡಲು ಸರ್ಕಾರದಿಂದ ಹಣಕಾಸಿನ ಸಹಾಯ ಪಡೆಯಲು ಅಪೇಕ್ಷಿದಿಸ್ದೀರೆಂದು ಭಾವಿಸಿ. ನೀವು ಯಾವ ಯೋಜನೆ ಅಡಿಯಲ್ಲಿ ಸಹಾಯಕ್ಕೆ ಅರ್ಜಿ ಸಲ್ಲಿಸುವಿರಿ? ಮತ್ತು ಏಕೆ?
9 ಗ್ರಾಮೀಣ ಮತ್ತು ನಗರ ಬಡತನದ ನಡುವಿನ ವ್ಯತ್ಯಾಸವನ್ನು ವಿಷದೀಕರಿಸಿ. ಬಡತನ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವರ್ಗಾವಣೆಯಾಗಿದೆ ಎಂದು ಹೇಳುವುದು ಸರಿಯೇ ? ಬಡತನ ಅನುಪಾತ ಪ್ರವೃತ್ತಿಯನ್ನು ಬಳಸಿಕೊಂಡು ನಿಮ್ಮ ಉತ್ತರವನ್ನು ಸಮರ್ಥಿಸಿ.
10 ನೀವು ಗ್ರಾಮ ನಿವಾಸಿಯೆಂದು ಭಾವಿಸಿಕೊಂಡು, ಬಡತನದ ಸಮಸ್ಯೆಯನ್ನು ಎದುರಿಸುವ ಕೆಲವು ಕ್ರಮಗಳನ್ನು ಸೂಚಿಸಿ.



## ಸೂಚಿಸಿದ ಹೆಚ್ಚುವರಿ ಚಟುವಟಿಕೆಗಳು

1. ನೀವು ವಾಸಿಸುತ್ತಿರುವ ಪ್ರದೇಶದ ಸಾಪೇಕ್ಷ ಬಡತನದ ಹಂತವನ್ನು ತಿಳಿಯಲು ನಿಮ್ಮ ವಾಸಸ್ಥಳದಲ್ಲಿನ 30 ಮಂದಿಯು ದಿನನಿತ್ಯ ಅನುಭೋಗಿಸುವ ವಿವಿಧ ವಸ್ತುಗಳ ದತ್ತಾಂಶವನ್ನು ಸಂಗ್ರಹಿಸಿ. ನಂತರ ಉತ್ತಮ ಮತ್ತು ಕನಿಷ್ಠತೆಯ ಹೋಲಿಕೆಯೊಂದಿಗೆ ಅವರನ್ನು ಶ್ರೇಣೀಕರಿಸಿ.
2. ಕಡಿಮೆ ವರಮಾನವುಳ್ಳ ನಾಲ್ಕು ಕುಟುಂಬಗಳು ವಿವಿಧ ವಸ್ತುಗಳ ಮೇಲೆ ಹಣ ರೂಪದಲ್ಲಿ ವೆಚ್ಚ ಮಾಡಿದ್ದರ ಬಗ್ಗೆ ಮಾಹಿತಿ ಸಂಗ್ರಹಿಸಿ. ಕೋಷ್ಟಕದಲ್ಲಿನ ಕಾಲಂಗಳಲ್ಲಿ ಭರ್ತಿ ಮಾಡಿ. ಇತರ ಕುಟುಂಬಗಳಿಗೆ ಹೋಲಿಸಿದರೆ ಯಾವ ಕುಟುಂಬ ಸಾಪೇಕ್ಷೆ ಬಡತನದಲ್ಲಿದೆ ಎಂಬುದನ್ನು ಗುರುತಿಸಿ ವಿಶ್ಲೇಷಿಸಿ. ಪ್ರತಿಯೊಬ್ಬ ವ್ಯಕ್ತಿಯ ವೆಚ್ಚ ಪ್ರತಿ ಒಂದು ತಿಂಗಳಿಗೆ ರೂ.500/– ಎಂದು ನಿಗಧಿಪಡಿಸಿದರೆ ಯಾರು ನಿರಪೇಕ್ಷ ಬಡವರಾಗಿದ್ದಾರೆ ಎಂಬುದನ್ನು ಗುರುತಿಸಿ.

| ವಸ್ತುಗಳು | ಕುಟುಂಬ–ಎ | ಕುಟುಂಬ–ಬಿ | ಕುಟುಂಬ–ಸಿ | ಕುಟುಂಬ–ಡಿ |
|---|---|---|---|---|
| ಅಕ್ಕಿ/ಗೋಧಿ | | | | |
| ತರಕಾರಿ/ಖಾದ್ಯ ತೈಲ | | | | |
| ಸಕ್ಕರೆ | | | | |
| ವಿದ್ಯುತ್ಶಕ್ತಿ/ಬೆಳಕು | | | | |
| ತುಪ್ಪ | | | | |
| ಉಡುಪುಗಳು | | | | |
| ಮನೆ ಬಾಡಿಗೆ | | | | |

3. ಭಾರತ ಮತ್ತು ದೆಹಲಿಯ ಕೊಳಗೇರಿಗಳಲ್ಲಿ ಜನರು ವಿವಿಧ ಬಾಬ್ತುಗಳ ಅನುಭೋಗದ ಮೇಲೆ ಮಾಡಿದ ಸರಾಸರಿ ಮಾಸಿಕ ವೆಚ್ಚವನ್ನು ಶೇಕಡಾ ಪ್ರಮಾಣದಲ್ಲಿ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಅಕ್ಕಿ ಮತ್ತು ಗೋಧಿಯ ಮೇಲಿನ ವೆಚ್ಚ ಶೇಕಡ 25 ಅಂದರೆ ಪ್ರತಿ 100 ರೂಪಾಯಿಗಳಲ್ಲಿ 25 ರೂಪಾಯಿಗಳು ಕೇವಲ ಅಕ್ಕಿ ಮತ್ತು ಗೋಧಿಯನ್ನು ಕೊಳ್ಳಲು ವೆಚ್ಚ ಮಾಡಲಾಗುತ್ತದೆ ಎಂದರ್ಥ. ಕೋಷ್ಟಕವನ್ನು ಮತ್ತೊಮ್ಮೆ ಓದಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

| ಬಾಬ್ತುಗಳು | ಗ್ರಾಮೀಣ | ನಗರ | ದೆಹಲಿಯ ಕೊಳಗೇರಿ |
|---|---|---|---|
| ಅಕ್ಕಿ ಮತ್ತು ಗೋಧಿ | 25.0 | 35.9 | 28.7 |
| ಬೇಳೆಕಾಳುಗಳು ಮತ್ತು ಅದರ ಉತ್ಪನ್ನಗಳು | 5.7 | 6.1 | 9.9 |
| ಹಾಲು ಮತ್ತು ಹಾಲಿನ ಉತ್ಪನ್ನಗಳು | 17.4 | 14.1 | 10.3 |
| ತರಕಾರಿ ಮತ್ತು ಹಣ್ಣುಗಳು | 15.0 | 12.7 | 19.6 |
| ಮಾಂಸ, ಮೀನು ಮತ್ತು ಮೊಟ್ಟೆಗಳು | 6.3 | 5.3 | 13.0 |
| ಸಕ್ಕರೆ | 3.3 | 3.8 | 4.0 |
| ಉಪ್ಪು ಮತ್ತು ಸಾಂಬಾರು ಪದಾರ್ಥ | 10.8 | 10.8 | 8.1 |
| ಇತರೆ ಆಹಾರ ವಸ್ತುಗಳು | 16.5 | 11.3 | 6.4 |
| **ಒಟ್ಟು: ಎಲ್ಲಾ ಆಹಾರ** | **100** | **100** | **100** |
| ಆಹಾರದ ವಸ್ತುಗಳ ಮೇಲಿನ ಖರ್ಚೆ ಎಲ್ಲಾ ವಸ್ತುಗಳ ಶೇಕಡಾವಾರು | 62.9 | 72.2 | 72.8 |

- ವಿವಿಧ ಗುಂಪುಗಳು ಆಹಾರ ಬಾಬ್ತುಗಳ ಮೇಲೆ ಮಾಡಿದ ಶೇಕಡಾವಾರು ವೆಚ್ಚವನ್ನು ಮತ್ತು ಅವರ ಆದ್ಯತೆಯನ್ನು ಹೋಲಿಕೆ ಮಾಡಿ.
- ಕೊಳಗೆರೆ ನಿವಾಸಿಗಳು ಹೆಚ್ಚು ಹೆಚ್ಚು ಧಾನ್ಯಗಳು ಮತ್ತು ಬೇಳೆಕಾಳುಗಳ ಮೇಲೆ ಅವಲಂಭಿಸಿದ್ದಾರೆ ಎಂದು ಯೋಚಿಸುತ್ತೀರಾ.
- ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರು ಯಾವ ಬಾಬ್ತಿನ ಮೇಲೆ ಅತಿ ಕಡಿಮೆ ಖರ್ಚು ಮಾಡುತ್ತಿದ್ದಾರೆ? ಅವುಗಳನ್ನು ಹೋಲಿಕೆ ಮಾಡಿ.
- ಕೊಳಗೇರಿ ನಿವಾಸಿಗಳು ಮಾಂಸ, ಮೀನು ಮತ್ತು ಮೊಟ್ಟೆಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಾರೆ ಎಂದು ನೀವು ಯೋಚಿಸುತ್ತೀರಾ?



# REFERENCES


**Books:**

Dandekar, V.M. and Nilakantha Rath 1971. *Poverty in India, Indian* School of Political Economy, Pune.

Dreze, Jean, Amartya Sen & Akthar Husain (Eds.) 1995. *The political Economy of Hunger.* Clarendon Press, Oxford.

Maoroji, Dadabhai, 1996. *Poverty and Un-Biritish Rule in India,* Publications Division, Ministry of Information and Broadcasting, Government of India, Second Edition, New Delhi.

Sainath, P. 1996. *Everybody Loves a Good Drought : Storeis from India's Poorest Districts. Penguin Books,* New Delhi.

Sen, Amartya, 1999. *Poverty and Famines : An Essay on Entitlement and Deprivatin.* Oxford University Press, New Delhi.

Subramaniam, S. (Ed.) 2001. *India's Development Experrience: Selected Writings of S. Guhan.* Oxford University Press, New Delhi.

**Articles:**

Kumar, Naveen and S.C. Aggarwal. 2003. 'Pattern of Consumption and Poverty in Delhi Slums.' *Economic and political weelkly,* December 13. Pp. 5300–5294.

inhas, B.S., L.R. Jain and S.D. Tendulkar 1991 'Declinng incidence of Poverty in the 1980s-Evidence versus Artefects, Economics and Political Weekly', July 13–6.

**Government Reports:**

Report of the *Expert Group of the Estimation of Proportion and Number of* poor, Perspective Planning Division, Planning Commission Government of India, New Delhi, 1993.

*Economic Survey* 14–2013, *Ministry of Finance, Government of India.*

*Tenth Five Year Plan* 07–2002, *Vol. II: Sectoral Policies and Programmes, Planning Commission, Governemnt of India, New Delhi.*

Twelfth Five Year Plan (17–2012), Vol. I, II and III. Stage Publicatons Pvt. Ltd., New Delhi (for Planning Commission, Government of India).

5

# ಅಧ್ಯಾಯ–5

# ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣ

# HUMAN CAPITAL FORMATION IN INDIA

**ಈ ಅಧ್ಯಾಯದ ಅಧ್ಯಯನದ ನಂತರ ನೀವು:**

- ಮಾನವ ಸಂಪನ್ಮೂಲ, ಮಾನವ ಬಂಡವಾಳ ನಿರ್ಮಾಣ ಮತ್ತು ಮಾನವ ಅಭಿವೃದ್ಧಿ ಪರಿಭಾವನೆಗಳನ್ನು ಅರ್ಥೈಸಿಕೊಳ್ಳುವಿರಿ.
- ಮಾನವ ಬಂಡವಾಳದಲ್ಲಿನ ಹೂಡಿಕೆ, ಆರ್ಥಿಕ ಬೆಳವಣಿಗೆ ಮತ್ತು ಮಾನವ ಅಭಿವೃದ್ಧಿ ನಡುವಿನ ಸಂಬಂಧವನ್ನು ಕಲಿಯುವಿರಿ.
- ಸರ್ಕಾರವು ಶಿಕ್ಷಣ ಮತ್ತು ಆರೋಗ್ಯದ ಮೇಲೆ ವೆಚ್ಚ ಮಾಡುವ ಅಗತ್ಯತೆಯನ್ನು ಅರ್ಥೈಸಿಕೊಳ್ಳುವಿರಿ.
- ಭಾರತದ ಶೈಕ್ಷಣಿಕ ಸಾಧನೆಯ ಸ್ಥಿತಿಗತಿಗಳನ್ನು ಗ್ರಹಿಸುವಿರಿ.

"ಶಿಕ್ಷಣದ ಮೇಲೆ ಖಾಸಗಿ ಮತ್ತು ಸಾರ್ವಜನಿಕ ನಿಧಿಗಳ ವಿನಿಯೋಗವನ್ನು ಅದರ ನೇರ ಪ್ರತಿಫಲ ಮಾತ್ರದಿಂದ ಅಳೆಯುವುದು ವಿವೇಕಯುತವಾದುದಲ್ಲ. ಸಾಮಾನ್ಯವಾಗಿ ಹೂಡಿಕೆಯಿಂದ ವೈಯಕ್ತಿಕವಾಗಿ ಪಡೆದುಕೊಳ್ಳುವ ಅವಕಾಶಗಳಿಗಿಂತ ಹೆಚ್ಚಿನ ಅವಕಾಶಗಳನ್ನು ನೀಡುವುದು ಹೆಚ್ಚು ಲಾಭದಾಯಕವಾಗಿರುತ್ತದೆ. ಅನಾಮಿಕರಾಗಿ ಸಾಯುವ ಅನೇಕರಿಗೆ ಇದು ಅವರ ಸುಪ್ತ ಸಾಮರ್ಥ್ಯಗಳನ್ನು ಹೊರತರುವುದಕ್ಕೆ ಅಗತ್ಯವಾದ ಪ್ರಾರಂಭ ನೀಡುವಲ್ಲಿ ಸಮರ್ಥನೆಯನ್ನು ನೀಡುತ್ತದೆ."

**– ಆಲ್ಫ್ರೆಡ್ ಮಾರ್ಷಲ್**

## 5.1 ಪೀಠಿಕೆ (INTRODUCTION)

ಮಾನವ ಜನಾಂಗದ ವಿಕಾಸದಲ್ಲಿ ಮಹತ್ವದ ಬದಲಾವಣೆಯನ್ನುಂಟುಮಾಡಿದ ಒಂದು ಅಂಶದ ಬಗ್ಗೆ ಯೋಚಿಸಿ. ಬಹುಶಃ ಅದು ಜ್ಞಾನವನ್ನು ಸಂಪಾದಿಸುವ ಮತ್ತು ವರ್ಗಾಯಿಸುವ ಮಾನವನ ಸಾಮರ್ಥ್ಯವಾಗಿದೆ. ಇದನ್ನು ಅವನು ಸಂಭಾಷಣೆ, ಹಾಡುಗಳ ಮೂಲಕ ಮತ್ತು ಸುದೀರ್ಘ ಉಪನ್ಯಾಸಗಳ ಮೂಲಕ ಮಾಡುತ್ತಿದ್ದಾನೆ. ಆದರೆ ಕೆಲಸವನ್ನು ದಕ್ಷತೆಯಿಂದ ಮಾಡಲು ಉತ್ತಮ ತರಬೇತಿ ಮತ್ತು ಕೌಶಲ್ಯ ಅಗತ್ಯವೆಂಬುದನ್ನು ಮಾನವನು ಬಹುಬೇಗ ತಿಳಿದುಕೊಂಡನು. ನಮಗೆ ತಿಳಿದಿರುವಂತೆ ವಿದ್ಯಾವಂತ ವ್ಯಕ್ತಿಯ ಶ್ರಮಕೌಶಲ್ಯವು ಅವಿದ್ಯಾವಂತನಿಗಿಂತ ಹೆಚ್ಚಾಗಿರುತ್ತದೆ. ಪರಿಣಾಮವಾಗಿ ವಿದ್ಯಾವಂತ ಅವಿದ್ಯಾವಂತನಿಗಿಂತ ಹೆಚ್ಚು ಆದಾಯವನ್ನು ಉತ್ಪತ್ತಿ ಮಾಡಬಲ್ಲ. ಆದುದರಿಂದ ಆರ್ಥಿಕ ಬೆಳವಣಿಗೆಗೆ ಅವನ ಕೊಡುಗೆ ಹೆಚ್ಚು.

ಶಿಕ್ಷಣ ಪಡೆಯುವುದರಿಂದ ಕೇವಲ ಹೆಚ್ಚು ಸಂಪಾದಿಸುವ ಸಾಮರ್ಥ್ಯವನ್ನಷ್ಟೇ ಅಲ್ಲದೇ, ಇತರೆ ಉಪಯುಕ್ತ ಪ್ರಯೋಜನಗಳನ್ನು ಪಡೆಯಬಹುದು. ಶಿಕ್ಷಣವು ಸಾಮಾಜಿಕವಾಗಿ ಉತ್ತಮ ಸ್ಥಾನ ಮತ್ತು ಗೌರವವನ್ನು ತಂದುಕೊಡುತ್ತದೆ ಇದು ವ್ಯಕ್ತಿಯು ಜೀವನದಲ್ಲಿ ಯೋಗ್ಯ ಆಯ್ಕೆಗಳನ್ನು ಮಾಡಲು ಶಕ್ತಗೊಳಿಸುತ್ತದೆ. ಇದು ಸಮಾಜದಲ್ಲಾಗುತ್ತಿರುವ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವ ಜ್ಞಾನವನ್ನು ಒದಗಿಸುತ್ತದೆ. ಇದು ಅವಿಷ್ಕಾರಗಳನ್ನು ಕೂಡ ಪ್ರೇರೇಪಿಸುತ್ತದೆ. ಮೇಲಾಗಿ ವಿದ್ಯಾವಂತ ಶ್ರಮಶಕ್ತಿಯ ಲಭ್ಯತೆಯು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗುತ್ತದೆ.




**ಚಿತ್ರ 5.1: ರೈತರಿಗೆ ಸೂಕ್ತ ಶಿಕ್ಷಣ ಮತ್ತು ತರಬೇತಿ ನೀಡಿದರೆ, ಕೃಷಿಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಬಹುದು**

ಅರ್ಥಶಾಸ್ತ್ರಜ್ಞರು ದೇಶದಲ್ಲಿ ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸುವ ಅಗತ್ಯತೆಯನ್ನು ಒತ್ತಿಹೇಳುತ್ತಾರೆ. ಏಕೆಂದರೆ ಅದು ಅಭಿವೃದ್ಧಿ ಪ್ರಕ್ರಿಯೆಯನ್ನು ತೀವ್ರಗೊಳಿಸುತ್ತದೆ.

## 5.2 ಮಾನವ ಬಂಡವಾಳ ಎಂದರೇನು? (WHAT IS HUMAN CAPITAL)

ಭೂಮಿಯಂತಹ ನೈಸರ್ಗಿಕ ಸಂಪನ್ಮೂಲಗಳನ್ನು, ಕಾರ್ಖಾನೆಗಳಂತಹ ಭೌತಿಕ ಬಂಡವಾಳವನ್ನಾಗಿ ಮಾರ್ಪಡಿಸುವಂತೆ, ಒಂದು ದೇಶವು ವಿದ್ಯಾರ್ಥಿಗಳಂತಹ ಮಾನವ ಸಂಪನ್ಮೂಲವನ್ನು ಪ್ರಾಧ್ಯಾಪಕರು, ಅಭಿಯಂತರರು (ಇಂಜಿನಿಯರರು), ವೈದ್ಯರಂತಹ (ಡಾಕ್ಟರರು) ಮಾನವ ಬಂಡವಾಳವನ್ನಾಗಿ ಮಾರ್ಪಡಿಸಬಲ್ಲದು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ, ಸಮಾಜಕ್ಕೆ ಮುಂಚೂಣಿಯಲ್ಲಿ ಸಾಕಷ್ಟು ಶಿಕ್ಷಣ ಮತ್ತು ತರಬೇತಿ ಪಡೆದ ಪ್ರಾಧ್ಯಾಪಕರು ಮತ್ತು ಇತರೆ ವೃತ್ತಿಪರ ದಕ್ಷ ಜನರಿಂದ ಕೂಡಿದ ಮಾನವ ಬಂಡವಾಳ ಅವಶ್ಯಕವಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನಮಗೆ ಇತರೆ ಮಾನವ ಬಂಡವಾಳವನ್ನು (ಅಭಿಯಂತರರು, ವೈದ್ಯರು, ಇತ್ಯಾದಿ) ಉತ್ಪಾದಿಸಲು ಉತ್ತಮ ಮಾನವ ಬಂಡವಾಳದ ಅಗತ್ಯವಿದೆ. ಇದರ ಅರ್ಥ ಮಾನವ ಸಂಪನ್ಮೂಲದಿಂದ ಹೆಚ್ಚು ಹೆಚ್ಚು ಮಾನವ ಬಂಡವಾಳವನ್ನು ಉತ್ಪಾದಿಸಲು ನಾವು ಮಾನವ ಬಂಡವಾಳದ ಮೇಲೆ ಹೂಡಿಕೆ ಮಾಡುವುದು ಅಗತ್ಯವಾಗಿದೆ.

ಕೆಳಗಿನ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನಾವೀಗ ಮಾನವ ಬಂಡವಾಳ ಎಂದರೇನು, ಎಂಬುದನ್ನು ಇನ್ನೂ ವಿಸ್ತಾರವಾಗಿ ತಿಳಿಯೋಣ.

I. ಮಾನವ ಬಂಡವಾಳದ ಮೂಲಗಳು ಯಾವುವು?

II. ಒಂದು ದೇಶದ ಆರ್ಥಿಕ ಬೆಳವಣಿಗೆ ಮತ್ತು ಮಾನವ ಬಂಡವಾಳದ ನಡುವೆ ಯಾವುದಾದರೂ ಸಂಬಂಧವಿದೆಯೇ?

III. ಮಾನವ ಬಂಡವಾಳ ನಿರ್ಮಾಣವು ಮಾನವನ ಸರ್ವಾಂಗೀಣ ಅಭಿವೃದ್ಧಿ ಅಥವಾ ಪ್ರಸ್ತುತ ವ್ಯಾಖ್ಯಾನಿಸಿರುವಂತೆ ಮಾನವ ಅಭಿವೃದ್ಧಿಯೊಂದಿಗೆ ಸಂಬಂಧ ಹೊಂದಿದೆಯೇ?

IV. ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣದಲ್ಲಿ ಸರ್ಕಾರ ಯಾವ ಪಾತ್ರವನ್ನು ನಿರ್ವಹಿಸಲು ಸಾಧ್ಯ?

## 5.3 ಮಾನವ ಬಂಡವಾಳದ ಮೂಲಗಳು (SOURCES OF HUMAN CAPITAL)

ಶಿಕ್ಷಣದ ಮೇಲಿನ ಹೂಡಿಕೆಯನ್ನು ಮಾನವ ಬಂಡವಾಳದ ಪ್ರಮುಖ ಮೂಲಗಳಲ್ಲಿ ಒಂದೆಂದು ಭಾವಿಸಲಾಗಿದೆ. ಇದಲ್ಲದೇ ಅನೇಕ ಇತರೆ ಮೂಲಗಳು ಇವೆ. ಆರೋಗ್ಯದ ಮೇಲಿನ ಹೂಡಿಕೆ, ವೃತ್ತಿನಿರತರಿಗೆ ತರಬೇತಿ, ವಲಸೆ ಮತ್ತು ಮಾಹಿತಿ ಮುಂತಾದವು ಮಾನವ ಬಂಡವಾಳ ನಿರ್ಮಾಣದ ಇತರೆ ಮೂಲಗಳಾಗಿವೆ.



### ನೀವೇ ಮಾಡಿರಿ (Work These out)

➤ ವಿಭಿನ್ನ ವರ್ಗದ ಮೂರು ಕುಟುಂಬಗಳನ್ನು ತೆಗೆದುಕೊಳ್ಳಿ.

(1) ಕಡುಬಡವರು, (2) ಮಧ್ಯಮ ವರ್ಗದವರು (3) ಶ್ರೀಮಂತರು. ಈ ಕುಟುಂಬಗಳು ಗಂಡು ಮತ್ತು ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ವೆಚ್ಚ ಮಾಡಿರುವ ನಮೂನೆಯನ್ನು ಅಧ್ಯಯನ ಮಾಡಿ.

ನಿಮ್ಮ ಪೋಷಕರು ನಿಮ್ಮ ಶಿಕ್ಷಣದ ಮೇಲೆ ಏತಕ್ಕಾಗಿ ಹಣ ವೆಚ್ಚ ಮಾಡುತ್ತಾರೆ? ವ್ಯಕ್ತಿಗಳು ಶಿಕ್ಷಣದ ಮೇಲೆ ಮಾಡುವ ವೆಚ್ಚವು, ಕಂಪನಿಗಳು ಭವಿಷ್ಯದಲ್ಲಿ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಬಂಡವಾಳ ಸರಕುಗಳ ಮೇಲೆ ಮಾಡುವ ವೆಚ್ಚಕ್ಕೆ ಅನುರೂಪವಾಗಿರುತ್ತದೆ. ಅದೇ ರೀತಿಯಲ್ಲಿ ವ್ಯಕ್ತಿಗಳು ಶಿಕ್ಷಣದ ಮೇಲೆ ತಮ್ಮ ಭವಿಷ್ಯದ ಆದಾಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಶಿಕ್ಷಣದ ಮೇಲೆ ಹೂಡಿಕೆ ಮಾಡುತ್ತಾರೆ.

ಶಿಕ್ಷಣದಂತೆಯೇ ಆರೋಗ್ಯವೂ ಸಹ ಒಬ್ಬ ವ್ಯಕ್ತಿಯ ಅಭಿವೃದ್ಧಿಯಲ್ಲಿ ಎಷ್ಟು ಪ್ರಾಮುಖ್ಯವಾದುದೋ, ಅಷ್ಟೇ ಮುಖ್ಯವಾಗಿ ರಾಷ್ಟ್ರದ ಅಭಿವೃದ್ಧಿಗೆ ಒಂದು ಪ್ರಮುಖ ಆದಾನವೆಂದು ಪರಿಗಣಿಸಲಾಗಿದೆ.

ಯಾರು ಉತ್ತಮವಾಗಿ ಕೆಲಸ ಮಾಡಬಲ್ಲರು –ಅನಾರೋಗ್ಯ ಪೀಡಿತ ವ್ಯಕ್ತಿಯೋ ಅಥವಾ ಸದೃಢ ಆರೋಗ್ಯ ಹೊಂದಿರುವ ವ್ಯಕ್ತಿಯೋ? ವೈದ್ಯಕೀಯ ಸೌಲಭ್ಯಗಳಿಲ್ಲದ ಒಬ್ಬ ಅನಾರೋಗ್ಯ ಪೀಡಿತ ಕಾರ್ಮಿಕನು ಅನಿವಾರ್ಯವಾಗಿ ಕೆಲಸದಿಂದ ದೂರವಿರಬೇಕಾಗುತ್ತದೆ ಅಥವಾ ಗೈರು ಹಾಜರಾಗಬೇಕಾಗುತ್ತದೆ. ಇದರಿಂದ ಉತ್ಪಾದಕತೆಯಲ್ಲಿ



ನಷ್ಟ ಉಂಟಾಗುತ್ತದೆ. ಹೀಗಾಗಿ ಆರೋಗ್ಯದ ಮೇಲಿನ ವೆಚ್ಚವು ಮಾನವ ಬಂಡವಾಳ ನಿರ್ಮಾಣದಲ್ಲಿ ಒಂದು ಪ್ರಮುಖ ಮೂಲವಾಗಿದೆ.

ಪ್ರತಿಬಂಧಕ ಔಷಧಿ (ಲಸಿಕೆ ಹಾಕುವುದು), ನಿವಾರಕ ಔಷಧಿ (ಖಾಯಿಲೆ ಬಂದಾಗಿನ ಚಿಕಿತ್ಸೆ), ಸಾಮಾಜಿಕ ಔಷಧಿ (ಆರೋಗ್ಯದ ಅರಿವು ಮೂಡಿಸುವುದು) ಹಾಗೂ ಶುದ್ಧ ಕುಡಿಯುವ ನೀರು ಮತ್ತು ಉತ್ತಮ ಶೌಚಾಲಯ ವ್ಯವಸ್ಥೆಯನ್ನು ಒದಗಿಸುವುದು ಮುಂತಾದವು ಆರೋಗ್ಯ ವೆಚ್ಚಗಳ ಹಲವು ರೂಪಗಳಾಗಿವೆ. ಆರೋಗ್ಯ ವೆಚ್ಚವು ನೇರವಾಗಿ ಆರೋಗ್ಯಯುತ ಶ್ರಮಶಕ್ತಿಯ ಪೂರೈಕೆಯನ್ನು ಹೆಚ್ಚಿಸುತ್ತದೆ. ಹೀಗಾಗಿ ಇದು ಮಾನವ ಬಂಡವಾಳ ನಿರ್ಮಾಣದ ಒಂದು ಮೂಲವಾಗಿದೆ.



ಉತ್ಪಾದಕ ಘಟಕಗಳು (Firms) ತಮ್ಮ ಕೆಲಸಗಾರರಿಗೆ ವೃತ್ತಿನಿರತ ತರಬೇತಿ ನೀಡಲು ವೆಚ್ಚ ಮಾಡುತ್ತವೆ. ಇದನ್ನು ವಿಭಿನ್ನ ರೂಪಗಳಲ್ಲಿ ಕೈಗೊಳ್ಳಬಹುದು.

ಮೊದಲನೆಯದಾಗಿ, ಕೆಲಸಗಾರರಿಗೆ ತಮ್ಮ ಉದ್ಯಮ ಘಟಕದಲ್ಲಿಯೇ ಕೌಶಲ್ಯಪೂರ್ಣ ಕೆಲಸಗಾರರ ಮೇಲ್ವಿಚಾರಣೆ ಅಡಿಯಲ್ಲಿ ತರಬೇತಿ ನೀಡುವುದು, ಎರಡನೆಯದಾಗಿ, ಕೆಲಸಗಾರರನ್ನು ಅವರು ಕಾರ್ಯ ನಿರ್ವಹಿಸುತ್ತಿರುವ ಘಟಕದಿಂದ ಹೊರಗಡೆ ಕಳುಹಿಸಿ ತರಬೇತಿ ಕೊಡಿಸಬಹುದು. ಈ ಎರಡೂ ಸನ್ನಿವೇಶಗಳಲ್ಲಿ ಉದ್ಯಮ ಘಟಕಗಳು ಕೆಲವು ವೆಚ್ಚಗಳನ್ನು ಎದುರಿಸ ಬೇಕಾಗುತ್ತದೆ. ಆದುದರಿಂದ ವೃತ್ತಿನಿರತ ತರಬೇತಿ ನಂತರ ಉದ್ಯಮ ಘಟಕಗಳು ಕೆಲಸಗಾರರಿಗೆ ನಿರ್ದಿಷ್ಟ ಅವಧಿಯವರೆಗೆ ಕೆಲಸ ಮಾಡುವಂತೆ ಆಗ್ರಹಿಸುತ್ತವೆ. ಈ ಅವಧಿಯಲ್ಲಿ ಅವು ತರಬೇತಿಯ ಕಾರಣದಿಂದಾಗಿ ಅಧಿಕಗೊಂಡ ಉತ್ಪಾದಕತೆಯ ಲಾಭವನ್ನು ಪಡೆಯ ಬಲ್ಲವು. ಶ್ರಮದ ಉತ್ಪಾದಕತೆಯನ್ನು ಹೆಚ್ಚಿಸುವ ಇಂತಹ ವೆಚ್ಚದ ಪ್ರತಿಫಲವು ತರಬೇತಿ ವೆಚ್ಚಕ್ಕಿಂತ ಅಧಿಕವಾಗಿದೆ. ಆದುದರಿಂದ ಇಂತಹ ತರಬೇತಿ ಮಾನವ ಬಂಡವಾಳ ನಿರ್ಮಾಣದ ಮತ್ತೊಂದು ಮೂಲವಾಗಿದೆ.



ಜನರು ತಮ್ಮ ಸ್ಥಳಿಯ ಪ್ರದೇಶಗಳಲ್ಲಿ ಪಡೆಯ ಬಹುದಾದ ವೇತನಕ್ಕಿಂತ ಹೆಚ್ಚಿನ ವೇತನವನ್ನು ಗಳಿಸುವ ಸಲುವಾಗಿ ಉದ್ಯೋಗಗಳನ್ನು ಅರಸಿ ಬೇರೆಡೆಗೆ ವಲಸೆ ಹೋಗುತ್ತಾರೆ. ಭಾರತದಲ್ಲಿ ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ವಲಸೆ ಹೋಗುವುದಕ್ಕೆ ನಿರುದ್ಯೋಗವು ಕಾರಣವಾಗಿದೆ.

ಅಭಿಯಂತರರು (ಇಂಜಿನಿಯರರು) ಮತ್ತು ವೈದ್ಯ ರಂತಹ (ಡಾಕ್ಟರರು) ತಾಂತ್ರಿಕ ಅರ್ಹತೆಯುಳ್ಳ ಜನರು ಇತರೆ ದೇಶಗಳಿಗೆ ವಲಸೆ ಹೋಗುತ್ತಾರೆ. ಏಕೆಂದರೆ ಇವರು ಅಂತಹ ದೇಶಗಳಲ್ಲಿ ಹೆಚ್ಚಿನ ವೇತನ ಪಡೆಯಬಹುದು. ಈ ಎರಡೂ ಸನ್ನಿವೇಶಗಳಲ್ಲಿ ವಲಸೆಯು ಸಾರಿಗೆ ವೆಚ್ಚ, ವಲಸೆ ಹೋದ ಪ್ರದೇಶಗಳಲ್ಲಿನ ಅಧಿಕ ಜೀವನ ವೆಚ್ಚ, ಮತ್ತು ಅಪರಿಚಿತ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಬದುಕುವ ಮಾನಸಿಕ ವೆಚ್ಚಗಳನ್ನು ಒಳಗೊಂಡಿದೆ. ಆದರೆ ಹೊಸ ಸ್ಥಳಗಳಲ್ಲಿನ ಅಧಿಕಗೊಂಡ ಗಳಿಕೆ, ವಲಸೆಯ ವೆಚ್ಚಕ್ಕಿಂತ ಹೆಚ್ಚಿರುತ್ತದೆ. ಆದುದರಿಂದ ವಲಸೆಯ ಮೇಲಿನ ವೆಚ್ಚವೂ ಸಹ ಮಾನವ ಬಂಡವಾಳ ನಿರ್ಮಾಣದ ಒಂದು ಮೂಲವಾಗಿದೆ.

ಶ್ರಮದ ಮಾರುಕಟ್ಟೆ ಹಾಗೂ ಶಿಕ್ಷಣ ಮತ್ತು ಆರೋಗ್ಯದಂತಹ ಇತರೆ ಮಾರುಕಟ್ಟೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಳ್ಳಲು ಜನರು ಹಣವನ್ನು ವೆಚ್ಚ ಮಾಡುತ್ತಾರೆ. ಉದಾಹರಣೆಗೆ, ವಿವಿಧ ಉದ್ಯೋಗಗಳಿಗೆ ಸಂಬಂಧಿಸಿದ ವೇತನಗಳ ಮಟ್ಟ, ಶೈಕ್ಷಣಿಕ ಸಂಸ್ಥೆಗಳು, ಉದ್ಯೋಗಕ್ಕೆ ಸೂಕ್ತವಾದ ಕೌಶಲ್ಯಗಳನ್ನು ಒದಗಿಸುತ್ತವೆಯೇ ಮತ್ತು ಯಾವ ಬೆಲೆಯಲ್ಲಿ ಒದಗಿಸುತ್ತವೆ ಎಂಬ ಮಾಹಿತಿಗಳನ್ನು ತಿಳಿಯಲು ಆಪೇಕ್ಷಿಸುತ್ತಾರೆ. ಈ ಮಾಹಿತಿಯು ಮಾನವ ಬಂಡಾವಾಳದಲ್ಲಿ ಹೂಡಿಕೆ ಮಾಡುವ ಕುರಿತು ನಿರ್ಧಾರಗಳನ್ನು ಕೈಗೊಳ್ಳಲು, ಅದೇ ರೀತಿ ಗಳಿಸಿದ ಮಾನವ ಬಂಡವಾಳ ಸಂಗ್ರಹವನ್ನು

### ಪೆಟ್ಟಿಗೆ ಸಂಖ್ಯೆ 5.1 : ಭೌತಿಕ ಮತ್ತು ಮಾನವ ಬಂಡವಾಳ

ಬಂಡವಾಳ ನಿರ್ಮಾಣದ ಎರಡು ರೂಪಗಳು ಪ್ರಜ್ಞಾಪೂರ್ವಕ ಹೂಡಿಕೆ ನಿರ್ಧಾರಕಗಳ ಫಲಗಳಾಗಿವೆ. ಭೌತಿಕ ಬಂಡವಾಳದಲ್ಲಿ ಹೂಡಿಕೆ ಸಂಬಂಧದ ನಿರ್ಧಾರವನ್ನು ಇದಕ್ಕೆ ಸಂಬಂಧಿಸಿದ ಜ್ಞಾನದ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು.ಉದ್ಯಮಿಯು ಪ್ರತಿಫಲದ ನಿರೀಕ್ಷಿತ ದರಕ್ಕೆ ತಕ್ಕಂತೆ ಹೂಡಿಕೆಯ ವ್ಯಾಪ್ತಿಯನ್ನು ಲೆಕ್ಕಾಚಾರ ಮಾಡಲು ಜ್ಞಾನವನ್ನು ಹೊಂದಿದ್ದು ಯಾವ ಹೂಡಿಕೆಯನ್ನು ಮಾಡಬೇಕೆಂಬುದನ್ನು ವಿವೇಚನೆಯಿಂದ ನಿರ್ಧರಿಸುತ್ತಾನೆ. ಭೌತಿಕ ಬಂಡವಾಳದ ಮಾಲೀಕತ್ವವು ಮಾಲೀಕನ ಪ್ರಜ್ಞಾಪೂರ್ವಕ ನಿರ್ಧಾರದ ಫಲವಾಗಿರುತ್ತದೆ. ಭೌತಿಕ ಬಂಡವಾಳ ನಿರ್ಮಾಣವು ಮುಖ್ಯವಾಗಿ ಒಂದು ಆರ್ಥಿಕ ಮತ್ತು ತಾಂತ್ರಿಕಪ್ರಕ್ರಿಯೆಯಾಗಿದೆ. ಮಾನವ ಬಂಡವಾಳ ನಿರ್ಮಾಣದ ಒಂದು ಗಣನೀಯ ಭಾಗವು ವ್ಯಕ್ತಿಯ ಜೀವನದಲ್ಲಿ ಯಾವಾಗ ಸಂಭವಿಸುತ್ತದೆಂದರೆ, ಅದು ಅವನ/ಅವಳ ಗಳಿಕೆಯನ್ನು ಗರಿಷ್ಟಗೊಳಿಸಿದೆಯೋ, ಇಲ್ಲವೋ ಎಂಬುದನ್ನು ನಿರ್ಧರಿಸಲು ಅಸಮರ್ಥರಾಗಿರುವಾಗ ಮಕ್ಕಳಿಗೆ ಅವರ ಪೋಷಕರು ಮತ್ತು ಸಮಾಜದಿಂದ ವಿವಿಧ ರೀತಿಯ ಶಾಲಾ ಶಿಕ್ಷಣ ಮತ್ತು ಆರೋಗ್ಯ ಸುರಕ್ಷತಾ ಸೌಲಭ್ಯಗಳನ್ನು ಕೊಡಲಾಗುತ್ತದೆ. ಕಾಲೇಜು ಹಂತದಲ್ಲಿ ಸಮಾನಮನಸ್ಕರು, ಶಿಕ್ಷಕರು ಮತ್ತು ಸಮಾಜ, ಮಾನವ ಬಂಡವಾಳ ಹೂಡಿಕೆಗಳಿಗೆ ಸಂಬಂಧಿಸಿದ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತಾರೆ. ಮೇಲಾಗಿ ಈ ಹಂತದಲ್ಲಿ ಮಾನವ ಬಂಡವಾಳ ನಿರ್ಮಾಣವು ಈಗಾಗಲೇ ಶಾಲಾ ಹಂತದಲ್ಲಿ ನಿರ್ಮಾಣಗೊಂಡಿರುವ ಮಾನವ ಬಂಡವಾಳದ ಮೇಲೆ ಅವಲಂಬಿತವಾಗಿರುತ್ತದೆ. ಮಾನವ ಬಂಡವಾಳ ನಿರ್ಮಾಣವು ಭಾಗಶಃ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ ಮತ್ತು ಭಾಗಶಃ ಮಾನವ ಬಂಡವಾಳದ ಮಾಲೀಕನ ಪ್ರಜ್ಞಾಪೂರ್ವಕ ನಿರ್ಧಾರದಿಂದಾದುದಾಗಿದೆ.

ನಿಮಗೆ ತಿಳಿದಿರುವಂತೆ, ಭೌತಿಕ ಬಂಡವಾಳ ಬಳಕೆಯಲ್ಲಿ ಉದಾಹರಣೆಗೆ, ಬಸ್‌ನ ಮಾಲೀಕ ಅದನ್ನು ಬಳಸುವ ಸ್ಥಳದಲ್ಲಿ ಇರಬೇಕಾದ ಅವಶ್ಯಕತೆ ಇಲ್ಲ. ಬದಲಾಗಿ ಜನರು ಮತ್ತು ಸರಕುಗಳನ್ನು ಸಾಗಾಟ ಮಾಡಲು ಬಸ್ಸನ್ನು ಬಳಸುವಾಗ ಬಸ್ ಚಾಲನೆಯ ಜ್ಞಾನ ಮತ್ತು ಸಾಮರ್ಥ್ಯ ಪಡೆದಿರುವ ಬಸ್ ಚಾಲಕ ಇರಬೇಕಾಗುತ್ತದೆ. ಭೌತಿಕ ಬಂಡವಾಳವನ್ನು ಸ್ಪರ್ಶಿಸಬಹುದು ಮತ್ತು ಮಾರುಕಟ್ಟೆಯಲ್ಲಿ ಇತರೆ ಸರಕುಗಳಂತೆ ಮಾರಾಟ ಮಾಡಬಹುದು. ಮಾನವ ಬಂಡವಾಳವನ್ನು ಸ್ಪರ್ಶಿಸಲಾಗದು, ಇದು ಅದರ ಮಾಲೀಕನ ದೇಹ ಮತ್ತು ಮನಸ್ಸಿನಲ್ಲಿ ಆಂತರಿಕವಾಗಿ ನಿರ್ಮಾಣವಾಗಿರುತ್ತದೆ. ಮಾನವ ಬಂಡವಾಳವನ್ನು ಮಾರುಕಟ್ಟೆಯಲ್ಲಿ ಮಾರುವುದಿಲ್ಲ, ಕೇವಲ ಮಾನವ ಬಂಡವಾಳದ ಸೇವೆಗಳನ್ನು ಮಾರಲಾಗುತ್ತದೆ. ಆದುದರಿಂದ ಉತ್ಪಾದನೆಯ ಸ್ಥಳದಲ್ಲಿ ಮಾನವ ಬಂಡವಾಳದ ಮಾಲೀಕ ಪ್ರತ್ಯಕ್ಷವಾಗಿ ಇರಬೇಕಾದದ್ದು ಅವಶ್ಯಕವಾಗಿದೆ. ಭೌತಿಕ ಬಂಡವಾಳವನ್ನು ಅದರ ಮಾಲೀಕನಿಂದ ಪ್ರತ್ಯೇಕಿಸಬಹುದು. ಆದರೆ ಮಾನವ ಬಂಡವಾಳವನ್ನು ಅದರ ಮಾಲೀಕನಿಂದ ಪ್ರತ್ಯೇಕಿಸಲಾಗದು.

ಚಲನೆಯ ದೃಷ್ಟಿಯಲ್ಲಿ ಈ ಎರಡೂ ರೂಪದ ಬಂಡವಾಳಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿವೆ. ಭೌತಿಕ ಬಂಡವಾಳವು ಕೆಲವು ಕೃತಕ ವ್ಯಾಪಾರೀ ನಿಯಂತ್ರಣಗಳನ್ನು ಹೊರತುಪಡಿಸಿ, ದೇಶಗಳ ನಡುವೆ ಸಂಪೂರ್ಣವಾಗಿ ಚಲಿಸುತ್ತದೆ. ಆದರೆ ಮಾನವ ಬಂಡವಾಳವು ದೇಶಗಳ ನಡುವೆ ಪರಿಪೂರ್ಣ ಚಲನೆಯನ್ನು ಹೊಂದಿಲ್ಲ, ಇದರ ಚಲನೆಯು ಸಂಸ್ಕೃತಿ ಮತ್ತು ರಾಷ್ಟ್ರೀಯತೆಯಿಂದ ನಿರ್ಬಂಧಿಸಲ್ಪಟ್ಟಿದೆ. ಆದುದರಿಂದ ಭೌತಿಕ ಬಂಡವಾಳ ನಿರ್ಮಾಣವನ್ನು ಆಮದುಗಳ ಮೂಲಕವೂ ಸಹ ನಿರ್ಮಿಸಬಹುದು.ಆದರೆ ಮಾನವ ಬಂಡವಾಳ ರಚನೆಯನ್ನು ಸಮಾಜ ಮತ್ತು ಅರ್ಥವ್ಯವಸ್ಥೆಯ ಸ್ವರೂಪ ಹಾಗೂ ರಾಜ್ಯ ಮತ್ತು ವ್ಯಕ್ತಿಗಳು ಮಾಡಲಿರುವ ವೆಚ್ಚಕ್ಕೆ ಹೊಂದಿಕೊಂಡಂತೆ ಪ್ರಜ್ಞಾಪೂರ್ವಕ ನೀತಿ ನಿಯಮಗಳ ಮೂಲಕ ಮಾಡಲಾಗುತ್ತದೆ.

ಕಾಲ ಕಳೆದಂತೆ ಎರಡೂ ರೂಪದ ಬಂಡವಾಳಗಳು ಸವಕಳಿ ಹೊಂದುತ್ತವೆ. ಆದರೆ ಎರಡರ ನಡುವಿನ ಸವಕಳಿ ಸ್ವರೂಪ ಭಿನ್ನವಾಗಿದೆ. ಯಂತ್ರದ ನಿರಂತರ ಬಳಕೆಯು ಅದರ ಸವಕಳಿಗೆ ದಾರಿ ಮಾಡಿಕೊಡುತ್ತದೆ ಮತ್ತು ತಂತ್ರಜ್ಞಾನದ ಬದಲಾವಣೆಯು ಯಂತ್ರವನ್ನು ಹಳೆಯದನ್ನಾಗಿಸುತ್ತದೆ. ಮಾನವ ಬಂಡವಾಳದ ವಿಷಯದಲ್ಲಿ, ಸವಕಳಿಯು ವಯಸ್ಸಾಗುವುದರೊಂದಿಗೆ ಸಂಭವಿಸುತ್ತದೆ. ಆದರೆ ಶಿಕ್ಷಣ, ಆರೋಗ್ಯ ಮುಂತಾದವುಗಳಲ್ಲಿ ನಿರಂತರ ಹೂಡಿಕೆ ಮಾಡುವ ಮೂಲಕ ಹೆಚ್ಚಿನ ಮಟ್ಟಿಗೆ ಇದನ್ನು ಕಡಿಮೆ ಮಾಡಬಹುದು. ಈ ಹೂಡಿಕೆಯು ತಂತ್ರಜ್ಞಾನದ ಬದಲಾವಣೆಗೂ ಮಿಗಿಲಾಗಿ ಮಾನವ ಬಂಡವಾಳಕ್ಕೆ ಅನುಕೂಲಕರವಾಗಿದೆ. ಇದು ಭೌತಿಕ ಬಂಡವಾಳದ ವಿಷಯದಲ್ಲಿ ಸಾಧ್ಯವಿಲ್ಲ.

ಮಾನವ ಬಂಡವಾಳದಿಂದ ಹರಿಯುವ ಲಾಭಗಳ ಸ್ವರೂಪವು ಭೌತಿಕ ಬಂಡವಾಳದಿಂದಾಗುವ ಲಾಭಗಳಿಗಿಂತ ಭಿನ್ನವಾಗಿವೆ. ಮಾನವ ಬಂಡವಾಳವು ಕೇವಲ ಮಾಲೀಕನಿಗೆ ಮಾತ್ರ ಲಾಭ ಒದಗಿಸುವುದಿಲ್ಲ. ಆದರೆ ಸಾಮಾನ್ಯವಾಗಿ ಸಮಾಜಕ್ಕೆ ಲಾಭಗಳನ್ನು ಒದಗಿಸುತ್ತದೆ. ಇದನ್ನು ಬಾಹ್ಯ ಲಾಭ ಎನ್ನುತ್ತಾರೆ. ಒಬ್ಬ ವಿದ್ಯಾವಂತ ವ್ಯಕ್ತಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಬಲ್ಲನು ಮತ್ತು ದೇಶದ ಸಾಮಾಜಿಕ ಆರ್ಥಿಕ ಪ್ರಗತಿಗೆ ಕೊಡುಗೆ ನೀಡಬಲ್ಲನು.

ಒಬ್ಬ ಆರೋಗ್ಯವಂತ ವ್ಯಕ್ತಿ, ವೈಯಕ್ತಿಕ ಶುಚಿತ್ವ ಮತ್ತು ಆರೋಗ್ಯ ರಕ್ಷಣೆ ಮೂಲಕ ಸೋಂಕು ಮತ್ತು ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆಯಬಹುದು. ಮಾನವ ಬಂಡವಾಳವು ಖಾಸಗಿ ಮತ್ತು ಸಾಮಾಜಿಕ ಲಾಭಗಳೆರಡನ್ನೂ ಸೃಷ್ಟಿಸುತ್ತದೆ. ಆದರೆ ಭೌತಿಕ ಬಂಡವಾಳವು ಖಾಸಗಿ ಲಾಭವನ್ನು ಮಾತ್ರ ಸೃಷ್ಟಿಸುತ್ತದೆ. ಅಂದರೆ ಬಂಡವಾಳ ಸರಕುಗಳಿಂದ ಬರುವ ಲಾಭಗಳು ಅದರಿಂದ ಉತ್ಪಾದಿಸಲ್ಪಟ್ಟ ಸರಕು ಮತ್ತು ಸೇವೆಗಳ ಬೆಲೆಯನ್ನು ಕೊಡುವವರಿಗೆ ಮಾತ್ರ ದೊರೆಯುತ್ತವೆ.

ಸಮರ್ಥವಾಗಿ ಬಳಸಿಕೊಳ್ಳುವುದು ಅಗತ್ಯವಾಗಿದೆ. ಶ್ರಮದ ಮಾರುಕಟ್ಟೆ ಮತ್ತು ಇತರೆ ಮಾರುಕಟ್ಟೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯುವುದಕ್ಕಾಗಿ ತಗಲುವ ವೆಚ್ಚವೂ ಸಹ ಮಾನವ ಬಂಡವಾಳ ನಿರ್ಮಾಣದ ಒಂದು ಮೂಲವಾಗಿದೆ.

ಮಾನವ ಬಂಡವಾಳವನ್ನು ಪರಿಭಾವನಾತ್ಮಕವಾಗಿ ಗ್ರಹಿಸಲು ಭೌತಿಕ ಬಂಡವಾಳದ ಪರಿಕಲ್ಪನೆಯು ಆಧಾರವಾಗಿದೆ. ಬಂಡವಾಳದ ಈ ಎರಡು ರೂಪಗಳ ನಡುವೆ ಕೆಲವು ಹೋಲಿಕೆಗಳಿವೆ; ಜೊತೆಗೆ ಕೆಲವು ಎದ್ದುಕಾಣುವ ಭಿನ್ನತೆಗಳಿವೆ. (ಪೆಟ್ಟಿಗೆ ಸಂಖ್ಯೆ 5.1ನ್ನು ನೋಡಿರಿ)

## ಮಾನವ ಬಂಡವಾಳ ಮತ್ತು ಆರ್ಥಿಕ ಬೆಳವಣಿಗೆ (Human Capital and Economic Growth)

ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡುವವರು ಯಾರು? ಕಾರ್ಖಾನೆಯಲ್ಲಿನ ಕಾರ್ಮಿಕನೋ ಅಥವಾ ಸಾಫ್ಟ್‌ವೇರ್ ಉದ್ಯೋಗಿಯೋ ನಮಗೆ ತಿಳಿದಂತೆ ಒಬ್ಬ ವಿದ್ಯಾವಂತ ವ್ಯಕ್ತಿಯ ಶ್ರಮ ಕೌಶಲ್ಯವು (Labour Skill) ಒಬ್ಬ ಅವಿದ್ಯಾವಂತ ವ್ಯಕ್ತಿಗಿಂತ ಹೆಚ್ಚಾಗಿರುತ್ತದೆ ಮತ್ತು ವಿದ್ಯಾವಂತ, ಅವಿದ್ಯಾವಂತನಿಗಿಂತ ಅಧಿಕ ಆದಾಯವನ್ನು ಉತ್ಪಾದಿಸುತ್ತಾನೆ. ಆರ್ಥಿಕ ಬೆಳವಣಿಗೆಯ ಅರ್ಥವೆಂದರೆ, ಒಂದು ದೇಶದ ನೈಜ ರಾಷ್ಟ್ರೀಯ ಆದಾಯದಲ್ಲಿನ ಹೆಚ್ಚಳವಾಗಿದೆ. ಸಹಜವಾಗಿ, ಆರ್ಥಿಕ ಬೆಳವಣಿಗೆಗೆ ವಿದ್ಯಾವಂತ ವ್ಯಕ್ತಿಯ ಕೊಡುಗೆಯು ಅನಕ್ಷರಸ್ಥ ವ್ಯಕ್ತಿಗಿಂತ ಹೆಚ್ಚಾಗಿರುತ್ತದೆ.

ಒಬ್ಬ ಆರೋಗ್ಯವಂತ ವ್ಯಕ್ತಿಯು ದೀರ್ಘಾವಧಿಯಲ್ಲಿ ತಡೆರಹಿತ ಶ್ರಮದ ಪೂರೈಕೆಯನ್ನು ಒದಗಿಸುವುದಾದರೆ ಆಗ ಆರೋಗ್ಯವೂ ಸಹ ಆರ್ಥಿಕಾಭಿವೃದ್ಧಿಯ ಒಂದು ಪ್ರಮುಖ ಅಂಶವಾಗಿರುತ್ತದೆ. ಆದುದರಿಂದ ಶಿಕ್ಷಣ ಮತ್ತು ಆರೋಗ್ಯ, ಈ ಎರಡರ ಜೊತೆಗೆ ವೃತ್ತಿನಿರತ ತರಬೇತಿ, ಉದ್ಯೋಗ ಮಾರುಕಟ್ಟೆ ಮಾಹಿತಿ ಮತ್ತು ವಲಸೆಯಂತಹ



**ಚಿತ್ರ 5.2 ನ್ನು ನೋಡಿ ಮತ್ತು ಚರ್ಚಿಸಿ.**

(ಎ) ಸೂಕ್ತ ತರಗತಿ ಕೊಠಡಿಗಳನ್ನು ಹೊಂದಿದ್ದರೆ ಆಗುವ ಅನುಕೂಲಗಳು ಯಾವುವು?

(ಬಿ) ಈ ಶಾಲೆಗೆ ಹೋಗುತ್ತಿರುವ ಮಕ್ಕಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವರೆಂದು ನೀವು ಯೋಚಿಸುವಿರಾ?

(ಸಿ) ಈ ಶಾಲೆಗಳು ಏಕೆ ಕಟ್ಟಡಗಳನ್ನು ಹೊಂದಿಲ್ಲ?



**ಚಿತ್ರ 5.2: ಮಾನವ ಬಂಡವಾಳ ನಿರ್ಮಾಣ: ದೆಹಲಿಯಲ್ಲಿ ತಾತ್ಕಾಲಿಕ ಆವರಣದಲ್ಲಿ ನಡೆಯುತ್ತಿರುವ ಒಂದು ಶಾಲೆ**

ಇತರ ಅಂಶಗಳು ಒಬ್ಬ ವ್ಯಕ್ತಿಯ ಆದಾಯ ಮತ್ತು ಉತ್ಪತ್ತಿ ಮಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.

ಮಾನವನ ಅಥವಾ ಮಾನವ ಬಂಡವಾಳದ ಅಧಿಕಗೊಂಡ ಉತ್ಪಾದಕತೆಯು ಕೇವಲ ಶ್ರಮದ ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗಣನೀಯ ಕೊಡುಗೆಯನ್ನು ನೀಡುವುದಲ್ಲದೇ, ಅದು ಅವಿಷ್ಕಾರಗಳನ್ನು ಪ್ರಚೋದಿಸುತ್ತದೆ ಮತ್ತು ನವೀನ ತಂತ್ರಜ್ಞಾನವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ನೀಡುತ್ತದೆ. ಶಿಕ್ಷಣವು ಸಮಾಜದಲ್ಲಾಗುವ ಬದಲಾವಣೆಗಳನ್ನು ಮತ್ತು ವೈಜ್ಞಾನಿಕ ಉನ್ನತಿಯನ್ನು ಅರ್ಥಮಾಡಿಕೊಳ್ಳುವ ಜ್ಞಾನವನ್ನು ಒದಗಿಸುತ್ತದೆ. ಹೀಗೆ ಶಿಕ್ಷಣವು ಸಂಶೋಧನೆಗಳಿಗೆ ಮತ್ತು ಅವಿಷ್ಕಾರಗಳಿಗೆ ಅನುಕೂಲ ಮಾಡಿಕೊಡುತ್ತದೆ. ಅದೇ ರೀತಿಯಲ್ಲಿ ವಿದ್ಯಾವಂತ ಶ್ರಮಶಕ್ತಿಯ ಲಭ್ಯತೆಯು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಮಾನವ ಬಂಡವಾಳದ ಹೆಚ್ಚಳವು ಆರ್ಥಿಕ ಬೆಳವಣಿಗೆಯನ್ನು ಉಂಟುಮಾಡುತ್ತದೆ ಎಂಬುದನ್ನು ದೃಢೀಕರಿಸಲು ಇರುವ ಅನುಭವಜನ್ಯ ಪುರಾವೆಗಳು ಬಹಳ ಅಸ್ಪಷ್ಟವಾಗಿವೆ. ಮಾಪನದ ಸಮಸ್ಯೆಗಳಿಂದ ಹೀಗಾಗಬಹುದು. ಉದಾಹರಣೆಗೆ ಶಾಲಾವರ್ಷಗಳು, ವಿದ್ಯಾರ್ಥಿ–ಶಿಕ್ಷಕ ಅನುಪಾತ ಮತ್ತು ದಾಖಲಾತಿ ದರಗಳ ಆಧಾರದ ಮೇಲೆ ಮಾಪನ ಮಾಡಿದ ಶಿಕ್ಷಣವು ಗುಣಮಟ್ಟದ ಶಿಕ್ಷಣವನ್ನು ಪ್ರತಿಬಿಂಬಿಸಲಾರವು: ನಿರೀಕ್ಷಿತ ಜೀವಿತಾವಧಿ, ಮರಣದರ ಮತ್ತು ಹಣದ ರೂಪದಲ್ಲಿ ಆರೋಗ್ಯ ಸೇವೆಗಳನ್ನು ಮಾಪನ ಮಾಡಿದಾಗ ಅವುಗಳು ದೇಶದ ಜನರ ನಿಜವಾದ ಆರೋಗ್ಯ ಸ್ಥಿತಿಯನ್ನು ಪ್ರತಿಬಿಂಬಿಸಲಾರವು. ಮೇಲೆ ತಿಳಿಸಿದ ಸೂಚಕಗಳನ್ನು ಬಳಸಿಕೊಂಡು, ಮುಂದುವರಿಯುತ್ತಿರುವ ಮತ್ತು ಮುಂದುವರಿದ ದೇಶಗಳೆರಡರಲ್ಲಿನ ಶಿಕ್ಷಣ ಮತ್ತು ಆರೋಗ್ಯ ವಲಯಗಳ ಸುಧಾರಣೆ ಹಾಗೂ ನೈಜ ತಲಾ ಆದಾಯದ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಿದಾಗ, ಮಾನವ ಬಂಡವಾಳದ ಮಾಪಕಗಳಲ್ಲಿ ಒಗ್ಗೂಡಿದ ಚಲನೆಯು ಕಂಡು ಬರುತ್ತದೆ. ಆದರೆ ನೈಜ ತಲಾ ಆದಾಯದಲ್ಲಿ ಇಂತಹ ಪ್ರವೃತ್ತಿಯ ಚಲನೆಯ ಲಕ್ಷಣಗಳು ಕಂಡು ಬರುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ



ಚಿತ್ರ 5.3: ವೈಜ್ಞಾನಿಕ ಮತ್ತು ತಾಂತ್ರಿಕ ಮಾನವಶಕ್ತಿ: ಮಾನವ ಬಂಡವಾಳದ ಸಮೃದ್ಧ ಪರಿಕರಗಳು

ಮಾನವ ಬಂಡವಾಳದ ಬೆಳವಣಿಗೆಯು ವೇಗವಾಗಿದೆ, ಆದರೆ ನೈಜ ತಲಾ ಆದಾಯದ ಬೆಳವಣಿಗೆಯು ಅಷ್ಟೊಂದು ವೇಗವಾಗಿಲ್ಲ. ಮಾನವ ಬಂಡವಾಳ ಮತ್ತು ಆರ್ಥಿಕ ಬೆಳವಣಿಗೆಗಳ ನಡುವಿನ ಕಾರ್ಯ ಕಾರಣ ಸಂಬಂಧದಿಂದ ಎರಡೂ ದಿಕ್ಕಿನಲ್ಲಿ ಚಲಿಸಲು ಅವುಗಳ ನಡುವಿನ ಸಂಬಂಧವು ದ್ವಿಮುಖಿಯಾಗಿದೆ. ಅಂದರೆ ಹೆಚ್ಚಿನ ಆದಾಯದ ಕಾರಣದಿಂದಾಗಿ ಉನ್ನತ ಮಟ್ಟದ ಮಾನವ ಬಂಡವಾಳವನ್ನು ನಿರ್ಮಿಸಲಾಗುತ್ತದೆ. ಅದೇ ರೀತಿಯಲ್ಲಿ ಉನ್ನತ ಮಟ್ಟದ ಮಾನವ ಬಂಡವಾಳವು ಆದಾಯದ ಬೆಳವಣಿಗೆಗೆ ಕಾರಣವಾಗಿದೆ.

ಭಾರತವು ಬಹಳ ಹಿಂದೆಯೇ ಆರ್ಥಿಕ ಬೆಳವಣಿಗೆಯಲ್ಲಿ ಬಂಡವಾಳದ ಮಹತ್ವವನ್ನು ಗುರುತಿಸಿದೆ. ಏಳನೆಯ ಪಂಚವಾರ್ಷಿಕ ಯೋಜನೆಯು ಹೇಳಿರುವಂತೆ, "ವಿಶೇಷವಾಗಿ ಹೆಚ್ಚು ಜನಸಂಖ್ಯೆ ಇರುವ ದೇಶಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯು (ಮಾನವ ಬಂಡವಾಳ ಎಂದು ಓದಿಕೊಳ್ಳಿ) ಯಾವುದೇ ಅಭಿವೃದ್ಧಿ ಕಾರ್ಯತಂತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆರ್ಥಿಕ ಬೆಳವಣಿಗೆಯ ವೇಗವನ್ನು ತ್ವರಿತಗೊಳಿಸುವಲ್ಲಿ ಮತ್ತು ಅಪೇಕ್ಷಿತ ದಿಕ್ಕಿನಲ್ಲಿ ಸಾಮಾಜಿಕ ಬದಲಾವಣೆಯ ಭರವಸೆ ನೀಡುವಲ್ಲಿ ವಿದ್ಯಾವಂತ ಮತ್ತು ತರಬೇತಿ ಹೊಂದಿದ ಅಧಿಕ ಜನಸಂಖ್ಯೆಯು ಒಂದು ಆಸ್ತಿಯಾಗಬಲ್ಲದು."

**ಕೋಷ್ಟಕ 5.1**

**ಶಿಕ್ಷಣ ಮತ್ತು ಆರೋಗ್ಯವಲಯದಲ್ಲಿನ ಅಭಿವೃದ್ಧಿಯ ಆಯ್ದ ಸೂಚಕಗಳು**

| ವಿವರಗಳು | | 1951 | 1981 | 1991 | 2001 | 2013 |
|---|---|---|---|---|---|---|
| ನೈಜ ತಲಾ ಆದಾಯ (ರೂಪಾಯಿಗಳಲ್ಲಿ ) | | 7,651 | 12,174 | 15,748 | 23,095 | 41,255 |
| ಕಚ್ಚಾ ಮರಣದರ (ಪ್ರತಿ ಸಾವಿರ ಜನರಿಗೆ) | | 25.1 | 12.5 | 9.8 | 8.1 | 7 |
| ಶಿಶು ಮರಣದರ (ಪ್ರತಿ ಸಾವಿರ ಜನನಕ್ಕೆ) | | 146 | 110 | 80 | 63 | 40 |
| ನಿರೀಕ್ಷಿತ ಜೀವಿತಾವಧಿ (ವರ್ಷಗಳಲ್ಲಿ) | ಪುರುಷರು | 37.2 | 54.1 | 59.7 | 63.9 | 65.8 |
| | ಮಹಿಳೆಯರು | 36.2 | 54.7 | 60.9 | 66.9 | 69.3 |
| ಸಾಕ್ಷರತಾ ದರ (%) | | 16.67 | 43.57 | 52.21 | 65.20 | 74 |

ಆರ್ಥಿಕ ಬೆಳವಣಿಗೆ ಮತ್ತು ಮಾನವ ಬಂಡವಾಳದ (ಶಿಕ್ಷಣ ಮತ್ತು ಆರೋಗ್ಯ) ಬೆಳವಣಿಗೆ ನಡುವೆ ಕಾರ್ಯಕಾರಣ ಸಂಬಂಧವನ್ನು ಸ್ಥಾಪಿಸುವುದು ಕಷ್ಟವಾಗಿದೆ. ಆದರೆ ಈ ಎರಡೂ ವಲಯಗಳು ಏಕಪ್ರಕಾರವಾಗಿ ಬೆಳವಣಿಗೆ ಹೊಂದಿರುವುದನ್ನು ನಾವು ಕೋಷ್ಟಕ 5.1 ರಲ್ಲಿ ನೋಡಬಹುದು. ಪ್ರತಿ ವಲಯದಲ್ಲಿನ ಬೆಳವಣಿಗೆಯು ಬಹುತೇಕ ಇತರೇ ಪ್ರತಿ ವಲಯದ ಬೆಳವಣಿಗೆಯನ್ನು ಬಲಪಡಿಸುತ್ತದೆ.

ಭಾರತೀಯ ಅರ್ಥವ್ಯವಸ್ಥೆಯ ಮೇಲಿನ ಇತ್ತೀಚಿನ ಎರಡು ಸ್ವತಂತ್ರ ವರದಿಗಳು ಗುರುತಿಸಿರುವಂತೆ, ಭಾರತವು ತನ್ನ ಮಾನವ ಬಂಡವಾಳ ನಿರ್ಮಾಣದಲ್ಲಿನ ಬಲದ ಕಾರಣದಿಂದ ವೇಗವಾಗಿ ಬೆಳೆಯಬಲ್ಲದು. ಜರ್ಮನಿಯ ಡ್ಯೂಶ್ಚೇ ಬ್ಯಾಂಕು (Deutsche Bank) ದಿನಾಂಕ: 01–07–2005ರಲ್ಲಿ ಪ್ರಕಟಿಸಿದ 'ಜಾಗತಿಕ ಬೆಳವಣಿಗೆ ಕೇಂದ್ರಗಳು' ಎಂಬ ತನ್ನ ವರದಿಯಲ್ಲಿ ಭಾರತವು 2020ರ ವೇಳೆಗೆ ಪ್ರಪಂಚದಲ್ಲಿನ ನಾಲ್ಕು ಬೆಳವಣಿಗೆ ಕೇಂದ್ರಗಳಲ್ಲಿ ಒಂದಾಗಿ ಕಾಣಿಸಿಕೊಳ್ಳಲಿದೆ ಎಂದು ಗುರುತಿಸಿದೆ. ಮುಂದುವರಿಯುತ್ತಾ, "ಮಾನವ ಬಂಡವಾಳವು ಇಂದಿನ ಅರ್ಥವ್ಯವಸ್ಥೆಗಳಲ್ಲಿ ಅತಿ ಮಹತ್ವವಾದ ಉತ್ಪಾದನಾಂಗವಾಗಿದೆ ಎಂಬುದನ್ನು ನಮ್ಮ ಪ್ರಯೋಗಾತ್ಮಕ ಶೋಧನೆಯ ಅಭಿಪ್ರಾಯವು ಬೆಂಬಲಿಸುತ್ತದೆ. ಜಿಡಿಪಿಯಲ್ಲಿ ಹೆಚ್ಚಳವನ್ನು ಸಾಧಿಸಲು ಮಾನವ ಬಂಡವಾಳದಲ್ಲಿನ ಹೆಚ್ಚಳವು ನಿರ್ಣಾಯಕವಾಗಿದೆ" ಎಂದು ಅಭಿಪ್ರಾಯ ಪಟ್ಟಿದೆ. ಭಾರತಕ್ಕೆ ಸಂಬಂಧಿಸಿದಂತೆ "ನಾವು ಭಾರತದಲ್ಲಿ 2005 ಮತ್ತು 2020ರ ನಡುವೆ 7 ವರ್ಷಗಳಿಗೆ ಮೇಲ್ಪಟ ಶಿಕ್ಷಣದ ಸರಾಸರಿ ವರ್ಷಗಳಲ್ಲಿ ಶೇ.40 ರಷ್ಟು ಹೆಚ್ಚಳವನ್ನು ನಿರೀಕ್ಷಿಸುತ್ತೇವೆ."



**ಚಿತ್ರ 5.4 ವೃತ್ತಿ ನಿರತರು: ಜ್ಞಾನ ಅರ್ಥವ್ಯವಸ್ಥೆಯಾಗಿ ಬದಲಾಗುತ್ತಿರುವ ಭಾರತ.**

ವಿಶ್ವಬ್ಯಾಂಕು ತನ್ನ ಇತ್ತೀಚಿನ "ಭಾರತ ಮತ್ತು ಜ್ಞಾನ ಅರ್ಥವ್ಯವಸ್ಥೆ – ಸನ್ನೆಯ ಬಲಗಳು ಮತ್ತು ಅವಕಾಶಗಳು" ಎಂಬ ವರದಿಯಲ್ಲಿ ತಿಳಿಸುವುದೇನೆಂದರೆ, ಭಾರತವು ಜ್ಞಾನ ಅರ್ಥವ್ಯವಸ್ಥೆಯಾಗಿ ಬದಲಾವಣೆಗೊಳ್ಳಬೇಕು ಮತ್ತು ಇದು ಐರ್ಲೆಂಡ್‌ನಷ್ಟು, ತನ್ನ ಜ್ಞಾನವನ್ನು ಉಪಯೋಗಿಸಿಕೊಂಡಿದ್ದೇ ಆದರೆ, ಭಾರತದ ತಲಾ ಆದಾಯವು 2002ರಲ್ಲಿನ 1,000 ಅಮೇರಿಕನ್ ಡಾಲರ್‌ಗಳಿಂದ 2020ರ ವೇಳೆಗೆ 3000 ಅಮೇರಿಕನ್ ಡಾಲರ್‌ಗಳಿಗೆ ಹೆಚ್ಚಲಿದೆ. ಈ ವರದಿಯು ಮತ್ತೆ ತಿಳಿಸುವುದೇನೆಂದರೆ, ಭಾರತೀಯ ಅರ್ಥವ್ಯವಸ್ಥೆಯು ಈ ಬದಲಾವಣೆಗೆ

**ಪೆಟ್ಟಿಗೆ ಸಂಖ್ಯೆ 5.2: ಜ್ಞಾನ ಅರ್ಥ ವ್ಯವಸ್ಥೆಯಾಗಿ ಭಾರತ**

ಕಳೆದ ದಶಕದಿಂದೀಚೆಗೆ ಭಾರತೀಯ ಗಣಕ ತಂತ್ರಾಂಶ(ಸಾಫ್ಟ್‌ವೇರ್) ಉದ್ಯಮವು ಗಮನಾರ್ಹ ದಾಖಲೆಯನ್ನು ಮಾಡುತ್ತಿದೆ. ಉದ್ಯಮಿಗಳು, ಅಧಿಕಾರಿಗಳು ಮತ್ತು ರಾಜಕಾರಣಿಗಳು ಮಾಹಿತಿ ತಂತ್ರಜ್ಞಾನ (Information Technology) ವನ್ನು ಉಪಯೋಗಿಸಿಕೊಳ್ಳುವ ಮೂಲಕ ಭಾರತವು ಒಂದು ಜ್ಞಾನ–ಆಧಾರಿತ ಅರ್ಥವ್ಯವಸ್ಥೆಯಾಗಿ ತಾನು ಹೇಗೆ ಪರಿವರ್ತನೆಗೊಳ್ಳಬಹುದೆಂಬುದರ ಕುರಿತಾಗಿ ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದಿದ್ದಾರೆ. ಇ–ಮೇಲ್ ಬಳಸುತ್ತಿರುವ ಹಳ್ಳಿಗಳ ಕೆಲವು ದೃಷ್ಟಾಂತಗಳು ನಮ್ಮ ಮುಂದಿವೆ. ಅವು ಈ ಪರಿವರ್ತನೆಯ ಗಮನಾರ್ಹ ಉದಾಹರಣೆಗಳಾಗಿವೆ. ಅದೇ ರೀತಿ ಇ–ಆಡಳಿತವನ್ನು ಭವಿಷ್ಯದ ಮಾರ್ಗವಾಗಿ ಬಿಂಬಿಸಲಾಗುತ್ತಿದೆ. ಮಾಹಿತಿ ತಂತ್ರಜ್ಞಾನದ ಮೌಲ್ಯವು ಸದ್ಯದ ಆರ್ಥಿಕ ಅಭಿವೃದ್ಧಿ ಮಟ್ಟದ ಮೇಲೆ ಹೆಚ್ಚಾಗಿ ಅವಲಂಬಿತವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು ಮಾನವ ಅಭಿವೃದ್ಧಿಯನ್ನು ಮುನ್ನಡೆಸಬಲ್ಲವೆಂದು ನೀವು ಯೋಚಿವಿಸುವಿರಾ? ಚರ್ಚಿಸಿ.

ಬೇಕಾದ ಎಲ್ಲಾ ಪ್ರಧಾನ ಘಟಕಾಂಶಗಳನ್ನು ಹೊಂದಿದೆ. ಅವುಗಳೆಂದರೆ, ಕೌಶಲ್ಯಸಹಿತ ಕೆಲಸಗಾರರ ಒಂದು ಸಮೂಹ, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಜಾಪ್ರಭುತ್ವ ಮತ್ತು ವೈವಿಧ್ಯಪೂರ್ಣ ವಿಜ್ಞಾನ ಮತ್ತು ತಂತ್ರಜ್ಞಾನ ಮೂಲಸೌಕರ್ಯ ಹೀಗೆ ಎರಡೂ ವರದಿಗಳು ಗುರುತಿಸಿರುವ ಅಂಶವೆಂದರೆ, ಭಾರತದಲ್ಲಿ ಮತ್ತಷ್ಟು ಹೆಚ್ಚಿನ ಮಾನವ ಬಂಡವಾಳದ ನಿರ್ಮಾಣವು, ಅದರ ಅರ್ಥವ್ಯವಸ್ಥೆಯನ್ನು, ಉನ್ನತ ಬೆಳವಣಿಗೆ ಪಥದಲ್ಲಿ ಮುನ್ನಡೆಯುವಂತೆ ಮಾಡಲಿದೆ.

## 5.4 ಮಾನವ ಬಂಡವಾಳ ಮತ್ತು ಮಾನವ ಅಭಿವೃದ್ಧಿ (HUMAN CAPITAL AND HUMAN DEVELOPMENT)

ಈ ಎರಡು ಶಬ್ದಗಳು ಒಂದೇ ಎನಿಸಿದರೂ ಅವುಗಳ ನಡುವೆ ಒಂದು ಸ್ಪಷ್ಟವಾದ ವ್ಯತ್ಯಾಸವಿದೆ. ಮಾನವ ಬಂಡವಾಳವು ಶಿಕ್ಷಣ, ಆರೋಗ್ಯ ಮತ್ತು ಶ್ರಮದ ಉತ್ಪಾದಕತೆಯನ್ನು ಹೆಚ್ಚಿಸುವ ಒಂದು ಸಾಧನವೆಂದು ಪರಿಗಣಿಸುತ್ತದೆ. ಮಾನವ ಅಭಿವೃದ್ಧಿಯು, ಮಾನವನ ಯೋಗಕ್ಷೇಮಕ್ಕೆ, ಶಿಕ್ಷಣ ಮತ್ತು ಆರೋಗ್ಯ ಎರಡೂ ಅವಿಭಾಜ್ಯ ಎಂಬ ವಿಚಾರದ ಮೇಲೆ ಮಾನವ ಅಭಿವೃದ್ಧಿಯು ಆಧಾರಿತವಾಗಿವೆ, ಏಕೆಂದರೆ ಜನರು ಓದುವ ಮತ್ತು ಬರೆಯುವ ಸಾಮರ್ಥ್ಯ ಹಾಗೂ ಆರೋಗ್ಯಯುತ ಮತ್ತು ದೀರ್ಘಾವಧಿ ಜೀವನ ಸಾಮರ್ಥ್ಯ ಹೊಂದಿದ್ದಾಗ ಮಾತ್ರ ಅವರು ಇತರೇ ಮೌಲ್ಯಯುತ ಆಯ್ಕೆಗಳನ್ನು ಮಾಡಲು ಸಮರ್ಥರಾಗಬಲ್ಲರು. ಮಾನವ ಬಂಡವಾಳವು ಮಾನವನನ್ನು ಗುರಿಯೊಂದರ ಸಾಧನವಾಗಿ ನೋಡುತ್ತದೆ. ಈ ಗುರಿಯು ಉತ್ಪಾದಕತೆಯ ಹೆಚ್ಚಳವಾಗಿದೆ. ಈ ದೃಷ್ಟಿಕೋನದಲ್ಲಿ ಶಿಕ್ಷಣ ಮತ್ತು ಆರೋಗ್ಯದಲ್ಲಿನ ಯಾವುದೇ ಹೂಡಿಕೆಯು ಸರಕುಗಳ ಮತ್ತು ಸೇವೆಗಳ ಉತ್ಪಾದನೆಯನ್ನು ಹೆಚ್ಚಿಸದಿದ್ದಲ್ಲಿ, ಅದು ಅನುತ್ಪಾದಕವೆನಿಸುತ್ತದೆ. ಮಾನವ ಅಭಿವೃದ್ಧಿಯ ದೃಷ್ಟಿಯಲ್ಲಿ ಮಾನವರು ತಮಗೆ ತಾವೇ ಅಂತಿಮ ಗುರಿಯಾಗಿರುತ್ತಾರೆ. ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೂಡುವ ಬಂಡವಾಳವು ಶ್ರಮದ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸದಿದ್ದರೂ, ಮಾನವನ ಯೋಗಕ್ಷೇಮವನ್ನು ಹೆಚ್ಚಿಸುವುದಕ್ಕಾಗಿ ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೂಡಿಕೆಯನ್ನು ಮಾಡಲೇಬೇಕಿದೆ. ಆದುದರಿಂದ



**ನೀವೇ ಮಾಡಿರಿ**

- ಒಬ್ಬ ಕಟ್ಟಡ ನಿರ್ಮಾಣದ ಕೆಲಸಗಾರ, ಪರಿಚಾರಿಕೆ, ಧೋಬಿ ಅಥವಾ ಶಾಲೆಯಲ್ಲಿನ ಜವಾನ ದೀರ್ಘ ಕಾಲ ಅನಾರೋಗ್ಯ ನಿಮಿತ್ತ ಕೆಲಸಕ್ಕೆ ಗೈರು ಹಾಜರಾದರೆ, ಇದು ಅವನ / ಅವಳ.

  1. ಕೆಲಸದ ಭದ್ರತೆ
  2. ಕೂಲಿ/ಸಂಬಳ

  ಇವುಗಳ ಮೇಲೆ ಯಾವ ಪರಿಣಾಮ ಉಂಟು ಮಾಡುತ್ತದೆಂಬುದನ್ನು ಪತ್ತೆ ಹಚ್ಚಿ ಈ ಪರಿಸ್ಥಿತಿಗೆ ಸಾಧ್ಯವಾದ ಕಾರಣಗಳು ಏನಾಗಿರಹುದು?

ಮೂಲಶಿಕ್ಷಣ ಮತ್ತು ಮೂಲ ಆರೋಗ್ಯ – ಶ್ರಮದ ಉತ್ಪಾದಕತೆಗೆ ಅವುಗಳ ಕೊಡುಗೆಯ ಹೊರತಾಗಿಯೂ, ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದಿವೆ. ಈ ದೃಷ್ಟಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಮೂಲ ಶಿಕ್ಷಣ ಮತ್ತು ಮೂಲ ಆರೋಗ್ಯ ಸುರಕ್ಷತೆಯನ್ನು ಪಡೆಯುವ ಹಕ್ಕು ಹೊಂದಿದ್ದಾನೆ. ಅಂದರೆ ಪ್ರತಿಯೊಬ್ಬ ವ್ಯಕ್ತಿಯು ಸಾಕ್ಷರನಾಗಲು ಮತ್ತು ಆರೋಗ್ಯಯುತ ಜೀವನ ನಡೆಸಲು ಹಕ್ಕು ಹೊಂದಿದ್ದಾನೆ.

## 5.5 ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣದ ಸ್ಥಿತಿಗತಿ (STATE OF HUMAN CAPITAL FORMATION IN INDIA)

ಈ ವಿಭಾಗದಲ್ಲಿ ನಾವು ಭಾರತದಲ್ಲಿಯ ಮಾನವ ಬಂಡವಾಳ ನಿರ್ಮಾಣವನ್ನು ಕುರಿತು ವಿಶ್ಲೇಷಣೆ ಮಾಡಲಿದ್ದೇವೆ. ಮಾನವ ಬಂಡವಾಳ ನಿರ್ಮಾಣವು ಶಿಕ್ಷಣ, ಆರೋಗ್ಯದಲ್ಲಿನ ಹೂಡಿಕೆಗಳು, ವೃತ್ತಿನಿರತ ತರಬೇತಿ, ವಲಸೆ ಮತ್ತು ಮಾಹಿತಿಯ ಫಲವಾಗಿದೆ ಎಂಬುದನ್ನು ನಾವು ಈಗಾಗಲೇ ತಿಳಿದಿದ್ದೇವೆ ಇವುಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಮಾನವ ಬಂಡವಾಳ ನಿರ್ಮಾಣದಲ್ಲಿ ಬಹು ಮುಖ್ಯವಾದ ಮೂಲಗಳಾಗಿವೆ. ನಮ್ಮದು ಸಂಯುಕ್ತ ವ್ಯವಸ್ಥೆಯ ರಾಷ್ಟ್ರ, ಇದರಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸರ್ಕಾರಗಳು (ಮಹಾ ನಗರ ಪಾಲಿಕೆಗಳು, ನಗರ ಸಭೆಗಳು ಮತ್ತು ಗ್ರಾಮ ಪಂಚಾಯಿತಿಗಳು) ಇವೆ ಎಂಬುದು ನಮಗೆ ತಿಳಿದಿದೆ. ಭಾರತದ ಸಂವಿಧಾನವು ಸರ್ಕಾರದ ಪ್ರತಿ ಹಂತದಲ್ಲಿ ಕೈಗೊಳ್ಳಬೇಕಾದ ಕಾರ್ಯಗಳನ್ನು ತಿಳಿಸುತ್ತದೆ. ಅದರಂತೆ ಸರ್ಕಾರದ ಎಲ್ಲಾ ಮೂರು ಹಂತಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಈ ಎರಡರ ಮೇಲಿನ ವೆಚ್ಚಗಳನ್ನು ಏಕಕಾಲಕ್ಕೆ ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಆರೋಗ್ಯ ವಲಯದ ವಿಶ್ಲೇಷಣೆಯನ್ನು 8ನೇ ಅಧ್ಯಾಯದಲ್ಲಿ ತಿಳಿಯಲಿದ್ದೇವೆ ಆದುದರಿಂದ ಇಲ್ಲಿ ನಾವು ಕೇವಲ ಶಿಕ್ಷಣ ವಲಯದ ವಿಶ್ಲೇಷಣೆ ಮಾಡೋಣ.

ಭಾರತದಲ್ಲಿ ಶಿಕ್ಷಣ ಮತ್ತು ಆರೋಗ್ಯದ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ ಎಂಬುದು ನಿಮಗೆ ತಿಳಿದಿದೆಯೇ? ಭಾರತದಲ್ಲಿನ ಶಿಕ್ಷಣ ವಲಯದ ವಿಶ್ಲೇಷಣೆಯನ್ನು ನಾವು ಕೈಗೊಳ್ಳುವ ಮೊದಲು, ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಸರ್ಕಾರದ ಮಧ್ಯಪ್ರವೇಶದ ಅಗತ್ಯತೆಯನ್ನು ನಾವು ಗಮನಿಸೋಣ. ಶಿಕ್ಷಣ ಮತ್ತು ಆರೋಗ್ಯ ಸುರಕ್ಷತಾ ಸೇವೆಗಳು ಖಾಸಗಿ ಮತ್ತು ಸಾಮಾಜಿಕ ಲಾಭಗಳೆರಡನ್ನೂ ಸೃಷ್ಟಿಸುತ್ತವೆಂದು ನಾವು ಅರ್ಥ ಮಾಡಿಕೊಂಡಿದ್ದೇವೆ ಮತ್ತು ಈ ಕಾರಣದಿಂದಾಗಿ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಮಾರುಕಟ್ಟೆಯಲ್ಲಿ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳೆರಡೂ ಅಸ್ತಿತ್ವದಲ್ಲಿವೆ. ಶಿಕ್ಷಣ ಮತ್ತು ಆರೋಗ್ಯದ ಮೇಲಿನ ವೆಚ್ಚಗಳು ಗಣನೀಯವಾದ ದೀರ್ಘಾವಧಿ ಪರಿಣಾಮ ಉಂಟುಮಾಡುತ್ತವೆ ಮತ್ತು ಅವುಗಳನ್ನು ಸುಲಭವಾಗಿ ಹಿಂಪಡೆಯಲಾಗದು. ಆದುದರಿಂದ ಸರ್ಕಾರದ ಮಧ್ಯಪ್ರವೇಶ ಅವಶ್ಯಕವಾಗಿದೆ. ಉದಾಹರಣೆಗೆ, ಒಮ್ಮೆ ಮಗುವೊಂದನ್ನು ಶಾಲೆ ಅಥವಾ ಆರೋಗ್ಯ ಕೇಂದ್ರಕ್ಕೆ ದಾಖಲಾತಿ ಮಾಡಿದರೆ, ಅಲ್ಲಿ ಅಗತ್ಯ ಸೇವೆಗಳನ್ನುಒದಗಿಸದಿದ್ದಲ್ಲಿ, ಮಗುವನ್ನು ಬೇರೊಂದು ಸಂಸ್ಥೆಗೆ ವರ್ಗಾಯಿಸಲು ನಿರ್ಧಾರ ಕೈಗೊಳ್ಳುವ ಮುಂಚೆ, ಸಾಕಷ್ಟು ಹಾನಿಯುಂಟಾಗಿರುತ್ತದೆ. ಮೇಲಾಗಿ ಈ ಸೇವೆಗಳ ವೈಯಕ್ತಿಕ ಅನುಭೋಗಿಗಳಿಗೆ ಸೇವೆಗಳ ಗುಣಮಟ್ಟ ಮತ್ತು ಅವುಗಳ ವೆಚ್ಚಗಳ ಬಗ್ಗೆ ಪೂರ್ಣ ಮಾಹಿತಿ ಇರುವುದಿಲ್ಲ. ಇಂತಹ ಸನ್ನಿವೇಶದಲ್ಲಿ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಪೂರೈಸುವವರು ಏಕಸ್ವಾಮ್ಯ ಶಕ್ತಿಯನ್ನು ಪಡೆದುಕೊಳ್ಳುವರು ಮತ್ತು ಶೋಷಣೆಯಲ್ಲಿ ತೊಡಗುವರು. ಇಂತಹ ಸನ್ನಿವೇಶದಲ್ಲಿ, ಈ ಸೇವೆಗಳ ಖಾಸಗಿ ಪೂರೈಕೆದಾರರು ಸರ್ಕಾರ ನಿಶ್ಚಯಿಸಿದ ಪ್ರಮಾಣಗಳಿಗೆ ಬದ್ಧರಾಗಿರುತ್ತಾರೆಂದು ಹಾಗೂ ಸೂಕ್ತ ಬೆಲೆ ವಿಧಿಸುವುದಕ್ಕೆ ಬದ್ಧರಾಗಿರುತ್ತಾರೆಂದು ಸರ್ಕಾರವು ಭರವಸೆ ಕೊಡಬೇಕಾಗುತ್ತದೆ.

ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯಗಳ ಹಂತದ ಶಿಕ್ಷಣ ಸಚಿವಾಲಯಗಳು, ಶಿಕ್ಷಣ ಇಲಾಖೆಗಳು ಮತ್ತು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ಸಂಸ್ಥೆ (NCERT), ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ (DSERT), ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE), ಮುಂತಾದ ಹಲವಾರು ಸಂಘಟನೆಗಳು ಶಿಕ್ಷಣ ವಲಯದ ಅಡಿಯಲ್ಲಿ ಬರುವ ಸಂಸ್ಥೆಗಳಿಗೆ ಸಹಾಯಕವಾಗುತ್ತವೆ. ಅದೇ ರೀತಿಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಹಂತದಲ್ಲಿ

ಆರೋಗ್ಯ ಸಚಿವಾಲಯಗಳು, ಆರೋಗ್ಯ ಇಲಾಖೆಗಳು ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ICMR) ಯಂತಹ ಹಲವು ಸಂಘಟನೆಗಳು ಆರೋಗ್ಯ ವಲಯದ ಅಡಿಯಲ್ಲಿ ಬರುವ ಸಂಸ್ಥೆಗಳಿಗೆ ಸಹಾಯಕವಾಗುತ್ತವೆ.

ನಮ್ಮಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಜನಸಂಖ್ಯೆಯ ಹೆಚ್ಚು ಭಾಗ ಬಡತನ ರೇಖೆಯ ಕೆಳಗಡೆ ವಾಸಿಸುತ್ತಿದ್ದು, ನಮ್ಮಲ್ಲಿ ಬಹಳಷ್ಟು ಜನರು ಮೂಲ ಶಿಕ್ಷಣ ಮತ್ತು ಆರೋಗ್ಯ ಸುರಕ್ಷತಾ ಸೌಲಭ್ಯಗಳನ್ನು ಪಡೆಯಲು ಶಕ್ತರಾಗಿಲ್ಲ. ಮೇಲಾಗಿ ಗಣನೀಯ ಭಾಗದಷ್ಟು ಜನರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಮತ್ತು ಉನ್ನತ ಶಿಕ್ಷಣವನ್ನು ತಲುಪಿಸಲು ಸಾಧ್ಯವಾಗಿಲ್ಲ. ಇದೂ ಅಲ್ಲದೆ, ಯಾವಾಗ ಶಿಕ್ಷಣ ಮತ್ತು ಆರೋಗ್ಯ ಸುರಕ್ಷತೆಯನ್ನು ನಾಗರೀಕರ ಹಕ್ಕು ಎಂದು ಪರಿಗಣಿಸಲಾಗುತ್ತದೆಯೋ, ಆಗ ಸರ್ಕಾರವು, ಅರ್ಹ ನಾಗರೀಕರಿಗೆ ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಗಾದ ವರ್ಗಗಳ ಜನರಿಗೆ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಉಚಿತವಾಗಿ ಪೂರೈಸಬೇಕಾತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಪ್ರತಿಶತ 100 ರಷ್ಟು ಸಾಕ್ಷರತೆಯನ್ನು ಸಾಧಿಸುವ ಉದ್ದೇಶದ ಈಡೇರಿಕೆಗಾಗಿ ಮತ್ತು ಭಾರತೀಯರ ಸರಾಸರಿ ಶೈಕ್ಷಣಿಕ ಸಾಧನೆಯನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಾನುಕ್ರಮದಲ್ಲಿ ಶಿಕ್ಷಣದ ಮೇಲಿನ ವೆಚ್ಚವನ್ನು ಹೆಚ್ಚಿಸಿವೆ.



**ನೀವೇ ಮಾಡಿರಿ**

- NCERT, UGC, AICTE ಮತ್ತು ICMR ಇವುಗಳ ಉದ್ದೇಶಗಳು ಮತ್ತು ಕಾರ್ಯಗಳನ್ನು ಗುರುತಿಸಿ.

## 5.6 ಭಾರತದಲ್ಲಿ ಶಿಕ್ಷಣ ವಲಯ (EDUCATION SECTOR IN INDIA)

### ಶಿಕ್ಷಣದ ಮೇಲಿನ ಸರ್ಕಾರಿ ವೆಚ್ಚದಲ್ಲಿನ ಬೆಳವಣಿಗೆ (Growth in Government Expenditure on Education):

ಸರ್ಕಾರವು ಶಿಕ್ಷಣದ ಮೇಲೆ ಎಷ್ಟು ಹಣವನ್ನು ವೆಚ್ಚ ಮಾಡುತ್ತಿದೆ ಎಂಬುದು ನಿಮಗೆ ಗೊತ್ತೇ? ಸರ್ಕಾರದ ಈ ವೆಚ್ಚವನ್ನು ಎರಡು ರೀತಿಯಲ್ಲಿ ವ್ಯಕ್ತಪಡಿಸಬಹುದು. (1) ಸರ್ಕಾರದ ಒಟ್ಟು ವೆಚ್ಚದ ಶೇಕಡಾವಾರು ರೂಪದಲ್ಲಿ (2) ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇಕಡಾವಾರು ರೂಪದಲ್ಲಿ.

ಸರ್ಕಾರದ ಒಟ್ಟು ವೆಚ್ಚದ ಶೇಕಡಾವಾರು ಶಿಕ್ಷಣ ವೆಚ್ಚವು ಸರ್ಕಾರದ ಮುಂದಿರುವ ಯೋಜನೆಗಳಲ್ಲಿ ಶಿಕ್ಷಣದ ಮಹತ್ವವನ್ನು ಸೂಚಿಸುತ್ತದೆ. ಜಿಡಿಪಿಯ ಶೇಕಡಾವಾರು ಶಿಕ್ಷಣ ವೆಚ್ಚವು ದೇಶದಲ್ಲಿ ಶಿಕ್ಷಣದ ಅಭಿವೃದ್ಧಿಗೆ ಯಾವ ಪ್ರಮಾಣದ ಆದಾಯವನ್ನು ವೆಚ್ಚಮಾಡಲು ಬದ್ಧವಾಗಿದೆ ಎಂಬುದನ್ನು ವ್ಯಕ್ತಪಡಿಸುತ್ತದೆ. 1952 ರಿಂದ 2012ರ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚದಲ್ಲಿ ಶಿಕ್ಷಣದ ವೆಚ್ಚದ ಶೇಕಡಾವಾರು ಪ್ರಮಾಣವು 7.92 ರಿಂದ 11.7 ಕ್ಕೆ ಹೆಚ್ಚಳವಾಗಿದೆ ಮತ್ತು ಜಿಡಿಪಿಯ ಶೇಕಡಾವಾರು ಪ್ರಮಾಣವು 0.64 ರಿಂದ 3.31ಕ್ಕೆ ಹೆಚ್ಚಳವಾಗಿದೆ. ಈ ಅವಧಿಯುದ್ದಕ್ಕೂ ಶಿಕ್ಷಣ ವೆಚ್ಚದಲ್ಲಿನ ಹೆಚ್ಚಳವು ಏಕಪ್ರಕಾರವಾಗಿರದೆ ಅನಿಯಮಿತ ಏರಿಳಿತಗಳನ್ನು ಹೊಂದಿತ್ತು. ಈ ವೆಚ್ಚಕ್ಕೆ ವ್ಯಕ್ತಿಗಳು ಮತ್ತು ಜನಸೇವಾ ಸಂಸ್ಥೆಗಳು ಮಾಡುವ ಖಾಸಗಿ ವೆಚ್ಚವನ್ನು ಸೇರಿಸಿದರೆ ಒಟ್ಟು ಶಿಕ್ಷಣ ವೆಚ್ಚವು ಇನ್ನೂ ಹೆಚ್ಚಾಗುತ್ತದೆ.

ಒಟ್ಟು ಶಿಕ್ಷಣ ವೆಚ್ಚದ ಬಹುಪಾಲನ್ನು ಪ್ರಾಥಮಿಕ ಶಿಕ್ಷಣವು ಪಡೆಯುತ್ತಿದೆ ಮತ್ತು ಉನ್ನತ ಶಿಕ್ಷಣದ (ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು) ಪಾಲು ಅತ್ಯಂತ ಕಡಿಮೆ ಇದೆ. ಉನ್ನತ ಶಿಕ್ಷಣದ ಮೇಲೆ ಸರ್ಕಾರವು ಕಡಿಮೆ ಹಣವನ್ನೂ ವೆಚ್ಚ ಮಾಡುತ್ತಿದ್ದರೂ ಸಹ, ಸರಾಸರಿಯಾಗಿ ಉನ್ನತ ಶಿಕ್ಷಣದಲ್ಲಿ ಸರಾಸರಿ ತಲಾ ವಿದ್ಯಾರ್ಥಿ ವೆಚ್ಚವು ಪ್ರಾಥಮಿಕ ಶಿಕ್ಷಣಕ್ಕಿಂತಲೂ ಹೆಚ್ಚಾಗಿದೆ. ಇದರ ಅರ್ಥ ಹಣಕಾಸು ಸಂಪನ್ಮೂಲಗಳನ್ನು ಉನ್ನತ ಶಿಕ್ಷಣದಿಂದ ಪ್ರಾಥಮಿಕ ಶಿಕ್ಷಣಕ್ಕೆ ವರ್ಗಾಯಿಸಬೇಕೆಂಬುದಲ್ಲ. ನಾವು ಶಾಲಾ ಶಿಕ್ಷಣವನ್ನು ವಿಸ್ತರಿಸಿದಂತೆ, ನಮಗೆ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ತರಬೇತಿ ಪಡೆದ ಶಿಕ್ಷಕರ ಅವಶ್ಯಕತೆ ಇರುತ್ತದೆ. ಆದುದರಿಂದ ಶಿಕ್ಷಣದ ಎಲ್ಲಾ ಹಂತಗಳ ಮೇಲಿನ ವೆಚ್ಚವನ್ನು ಹೆಚ್ಚಿಸಬೇಕಾಗಿದೆ.

2011–12ರಲ್ಲಿ ಪ್ರಾಥಮಿಕ ಶಿಕ್ಷಣದ ತಲಾ ಶಿಕ್ಷಣ ವೆಚ್ಚದಲ್ಲಿ ರಾಜ್ಯ ರಾಜ್ಯಗಳ ನಡುವೆ ಬಹಳ ವ್ಯತ್ಯಾಸವಿದೆ.

ಅದು ಹಿಮಾಚಲ ಪ್ರದೇಶದಲ್ಲಿ ಅತಿ ಹೆಚ್ಚು ಅಂದರೆ ರೂಪಾಯಿ 17,000 ದಿಂದ ಹಿಡಿದು ಬಿಹಾರದಲ್ಲಿ ಅತಿ ಕಡಿಮೆ ಅಂದರೆ, ರೂ.3,600ರ ವರೆಗೂ ಇದೆ. ಇದು ರಾಜ್ಯಗಳ ನಡುವೆ ಶೈಕ್ಷಣಿಕ ಅವಕಾಶಗಳು ಮತ್ತು ಸಾಧನೆಗಳಲ್ಲಿನ ವ್ಯತ್ಯಾಸಗಳಿಗೆ ದಾರಿ ಮಾಡಿಕೊಡುತ್ತಿದೆ.



**ಚಿತ್ರ 5.5 ಶಿಕ್ಷಣ ಮೂಲ ಸೌಕರ್ಯದಲ್ಲಿನ ಹೂಡಿಕೆಯು ಅನಿವಾರ್ಯವಾಗಿದೆ.**

ವಿವಿಧ ಆಯೋಗಗಳಿಂದ ಶಿಫಾರಸ್ಸು ಮಾಡಲಾದ ಶಿಕ್ಷಣ ವೆಚ್ಚದ ಆಪೇಕ್ಷಿತ ಮಟ್ಟದ ಜೊತೆಗೆ ಹೋಲಿಕೆ ಮಾಡುವುದಾದರೆ, ನಾವೀಗ ಶಿಕ್ಷಣದ ಮೇಲೆ ಮಾಡುತ್ತಿರುವ ವೆಚ್ಚವು ಸಾಕಾಗುವುದಿಲ್ಲ ಎಂಬುದನ್ನು ಯಾರಾದರೂ ಅರ್ಥ ಮಾಡಿಕೊಳ್ಳಬಹುದು. ಐವತ್ತು ವರ್ಷಗಳ ಹಿಂದೆ ಶಿಕ್ಷಣ ಆಯೋಗ (1964–66) ಶಿಕ್ಷಣದ ಮೇಲೆ ಕನಿಷ್ಟ ಪಕ್ಷ ಜಿಡಿಪಿಯ ಶೇಕಡಾ 6ರಷ್ಟು ಹಣವನ್ನಾದರೂ ವೆಚ್ಚ ಮಾಡುವುದರಿಂದ ಗಮನಾರ್ಹವಾದ ಶೈಕ್ಷಣಿಕ ಬೆಳವಣಿಗೆಯನ್ನು ಸಾಧಿಸಬಹುದೆಂದು ಶಿಫಾರಸ್ಸು ಮಾಡಿತ್ತು. 1998ರಲ್ಲಿ ಭಾರತ ಸರ್ಕಾರದಿಂದ ನೇಮಕವಾಗಿದ್ದ, 'ತಪಸ್ ಮುಜುಂದಾರ್ ಸಮಿತಿ'ಯು 10 ವರ್ಷಗಳ ಅವಧಿಯಲ್ಲಿ (1998–99ರಿಂದ 2006–07) 6 ರಿಂದ 14 ವರ್ಷಗಳ ವಯೋಗುಂಪಿನ ಎಲ್ಲಾ ಭಾರತೀಯ ಮಕ್ಕಳನ್ನು ಶಾಲಾ ಶಿಕ್ಷಣದ ವ್ಯಾಪ್ತಿಯೊಳಗೆ ತರಲು ಸುಮಾರು 1.37 ಲಕ್ಷ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕೆಂದು ಅಂದಾಜು ಮಾಡಿತ್ತು. ಜಿಡಿಪಿಯ ಸುಮಾರು ಶೇ.6 ರಷ್ಟಿರುವ ಈ ಆಪೇಕ್ಷಿತ ಮಟ್ಟದ ಶಿಕ್ಷಣ ವೆಚ್ಚದೊಂದಿಗೆ ಹೋಲಿಕೆ ಮಾಡಿದರೆ ಸದ್ಯದಲ್ಲಿ ಸರ್ಕಾರವು ಮಾಡುತ್ತಿರುವ ಶೇ.4 ರಷ್ಟು ವೆಚ್ಚವು ಬಹಳಷ್ಟು ಕಡಿಮೆಯದ್ದಾಗಿದೆ. ತಾತ್ವಿಕವಾಗಿ ಶೇ.6ರ ಗುರಿಯನ್ನು ತಲುಪಬೇಕಾದ ಅಗತ್ಯವಿದೆ. ಮುಂಬರುವ ವರ್ಷಗಳಲ್ಲಿ ಇದು ಸಾಧ್ಯವಾಗಲೇ ಬೇಕೆಂದು ಒಪ್ಪಿಕೊಳ್ಳಲಾಗಿದೆ. 6 ರಿಂದ 14 ವರ್ಷಗಳ ವಯೋಗುಂಪಿನ ಎಲ್ಲಾ ಮಕ್ಕಳಿಗೆ ನೀಡುವ ಉಚಿತ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಲು, ಭಾರತ ಸರ್ಕಾರವು 2009ರಲ್ಲಿ ಶಿಕ್ಷಣಹಕ್ಕು ಕಾಯ್ದೆಯನ್ನು ಜಾರಿಗೆ ತಂದಿತು.

ಭಾರತ ಸರ್ಕಾರವು ಎಲ್ಲಾ ಕೇಂದ್ರ ತೆರಿಗೆಗಳ ಮೇಲೆ ಶೇ.2 ರಷ್ಟು 'ಶಿಕ್ಷಣ ಮೇಲುತೆರಿಗೆ' (Education Cess) ಯನ್ನು ವಿಧಿಸಲು ಪ್ರಾರಂಭಿಸಿದೆ. ಶಿಕ್ಷಣ ಮೇಲುತೆರಿಗೆಯಿಂದ ಬರುವ ಆದಾಯವನ್ನು ಪ್ರಾಥಮಿಕ ಶಿಕ್ಷಣದ ಮೇಲಿನ ವೆಚ್ಚಕ್ಕಾಗಿ ಮೀಸಲಿಡುತ್ತಿದೆ. ಇದರ ಜೊತೆಗೆ ಸರ್ಕಾರವು ಉನ್ನತ ಶಿಕ್ಷಣದ ಅಭಿವೃದ್ಧಿಗಾಗಿ ದೊಡ್ಡ ಪ್ರಮಾಣದ ಹಣವನ್ನು ಮಂಜೂರು ಮಾಡುತ್ತಿದೆ ಮತ್ತು ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಮುಂದುವರಿಸುವುದಕ್ಕಾಗಿ ಹೊಸ ಸಾಲ ಯೋಜನೆಗಳನ್ನು ಜಾರಿಗೆ ತಂದಿದೆ.

**ನೀವೇ ಮಾಡಿರಿ**

➤ ವಿವಿಧ ಶಾಲಾ ಹಂತಗಳಲ್ಲಿ ಶಾಲೆ ಬಿಡುವ ಮಕ್ಕಳ ವಿಷಯದ ಅಧ್ಯಯನ ಪಟ್ಟಿಯನ್ನು ತಯಾರಿಸಿ, ಅಂದರೆ,

1) ಪ್ರಾಥಮಿಕ ಹಂತದಲ್ಲಿ

2) 8ನೇ ತರಗತಿಯ ಹಂತದಲ್ಲಿ ಮತ್ತು

3) 10ನೇ ತರಗತಿ ಹಂತದಲ್ಲಿ ಶಾಲೆ ಬಿಡಲು ಕಾರಣಗಳನ್ನು ಪತ್ತೆ ಹಚ್ಚಿರಿ ಮತ್ತು ತರಗತಿಯಲ್ಲಿ ಚರ್ಚಿಸಿ.

"ಶಾಲೆ ಬಿಡುವ ಮಕ್ಕಳು ಬಾಲಕಾರ್ಮಿಕರಾಗುತ್ತಿದ್ದಾರೆ." ಇದು ಮಾನವ ಬಂಡವಾಳದ ನಷ್ಟಕ್ಕೆ ಹೇಗೆ ಕಾರಣವಾಗುತ್ತದೆ ಚರ್ಚಿಸಿ.

ಕೋಷ್ಟಕ 5.2

ಭಾರತದಲ್ಲಿ ಶೈಕ್ಷಣಿಕ ಸಾಧನೆಗಳು

| ಕ್ರ. ಸಂ. | ವಿವರಣೆಗಳು | 1990 | 2000 | 2008–12 |
|---|---|---|---|---|
| 1 | ವಯಸ್ಕರ ಸಾಕ್ಷರತಾ ದರ (+15 ವಯಸ್ಸಿನ ಜನರ ಶೇಕಡಾವಾರು) | | | |
| | 1.1 ಪುರುಷರು | 61.9 | 68.4 | 76.7 |
| | 1.2 ಮಹಿಳೆಯರು | 37.9 | 45.4 | 67.6 |
| 2 | ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ದರ (ಸೂಕ್ತ ವಯೋಗುಂಪಿನ ಶೇಕಡಾವಾರು) | | | |
| | 2.1 ಪುರುಷರು | 78 | 85 | 96.6 |
| | 2.2 ಮಹಿಳೆಯರು | 61 | 69 | 96.3 |
| 3 | ಯುವ ಸಾಕ್ಷರತಾ ದರ (15ರಿಂದ 24 ವಯಸ್ಸಿನ ಜನರ ಶೇಕಡಾವಾರು) | | | |
| | 3.1 ಪುರುಷರು | 76.6 | 79.7 | 88 |
| | 3.2 ಮಹಿಳೆಯರು | 54.2 | 64.8 | 74 |

### ಭಾರತದಲ್ಲಿ ಶೈಕ್ಷಣಿಕ ಸಾಧನೆಗಳು (Educational Achievements in India):

ಸಾಮಾನ್ಯವಾಗಿ ಒಂದು ದೇಶದಲ್ಲಿನ ಶೈಕ್ಷಣಿಕ ಸಾಧನೆಗಳನ್ನು ವಯಸ್ಕರ ಸಾಕ್ಷರತಾ ದರ, ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ದರ ಮತ್ತು ಯುವ ಸಾಕ್ಷರತಾ ದರಗಳ ರೂಪದಲ್ಲಿ ಸೂಚಿಸಲಾಗುತ್ತದೆ. 5.2ನೇ ಕೋಷ್ಟಕದಲ್ಲಿ ಹಿಂದಿನ ಎರಡು ದಶಕಗಳಲ್ಲಿ ಇದ್ದಂತಹ ಇವುಗಳ ಪ್ರಮಾಣವನ್ನು ವಿವರಿಸಲಾಗಿದೆ.

## 5.7 ಭವಿಷ್ಯದ ನಿರೀಕ್ಷೆಗಳು (FUTURE PROSPECTUS)

### ಎಲ್ಲರಿಗೂ ಶಿಕ್ಷಣ – ಇನ್ನೂ ದೂರದ ಕನಸು (Education for all – Still a Distant Dream):

ವಯಸ್ಕ ಸಾಕ್ಷರತಾ ಮತ್ತು ಯುವ ಸಾಕ್ಷರತಾ ದರ, ಈ ಎರಡು ಸಾಕ್ಷರತಾ ದರಗಳು ಹೆಚ್ಚುತ್ತಿದ್ದರೂ ಸಹಾ, ಇನ್ನೂ ಭಾರತದಲ್ಲಿ ಅನಕ್ಷರಸ್ಥರ ಒಟ್ಟು ಸಂಖ್ಯೆಯು ಸ್ವತಂತ್ರ ಪಡೆದ ಸಮಯದಲ್ಲಿದ್ದ ಭಾರತದ ಜನಸಂಖ್ಯೆಯಷ್ಟಿದೆ.



ಚಿತ್ರ 5.6 : ಶಾಲೆ ಬಿಡುವ ಮಕ್ಕಳು ಬಾಲಕಾರ್ಮಿಕರಾಗಿ ಹೋಗುತ್ತಿರುವುದು : ಇದು ಮಾನವ ಬಂಡವಾಳದ ನಷ್ಟ

1950ರಲ್ಲಿ ಸಂವಿಧಾನ ರಚನಾ ಸಭೆಯಿಂದ ಭಾರತದ ಸಂವಿಧಾನವನ್ನು ಅಂಗೀಕರಿಸಿದಾಗ, ಸಂವಿಧಾನ ಜಾರಿಗೆ ಬಂದ 10 ವರ್ಷಗಳಲ್ಲಿ 14 ವರ್ಷಗಳ ವರೆಗಿನ ಎಲ್ಲಾ ಮಕ್ಕಳಿಗೆ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂದು ಸಂವಿಧಾನ ನಿರ್ದೇಶಕ ತತ್ವಗಳಲ್ಲಿ ಸೂಚಿಸಲಾಗಿತ್ತು. ನಾವು ಇದನ್ನು ಸಾಧಿಸಿದ್ದಿದ್ದರೆ, ಈ ವೇಳೆಗೆ ಪ್ರತಿಶತ 100 ಸಾಕ್ಷರತೆಯನ್ನು ಹೊಂದಿರುತ್ತಿದ್ದೆವು.

### ಲಿಂಗಸಮಾನತೆ – ಮೊದಲಿಗಿಂತಲೂ ಉತ್ತಮ (Gender Equity – Better than Before):

ಪುರುಷ ಮತ್ತು ಮಹಿಳೆಯರ ನಡುವಿನ ಸಾಕ್ಷರತಾ ದರಗಳಲ್ಲಿನ ವ್ಯತ್ಯಾಸಗಳು ಕಡಿಮೆಯಾಗುತ್ತಿರುವುದು ಲಿಂಗ ಸಮಾನತೆಯಲ್ಲಿನ ಅಭಿವೃದ್ಧಿಯ ಒಂದು ಧನಾತ್ಮಕ ಸೂಚನೆಯಾಗಿದೆ. ಇಂತಹ ಹಲವಾರು ಕಾರಣಗಳಿಂದಾಗಿ ಭಾರತದಲ್ಲಿ ಮಹಿಳಾ ಶಿಕ್ಷಣವನ್ನು ಈಗಲೂ ಪ್ರೋತ್ಸಾಹಿಸುವ ಅವಶ್ಯಕತೆ ಇದೆ. ಮಹಿಳಾ ಶಿಕ್ಷಣವು ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಅವರ ಸಾಮಾಜಿಕ ಸ್ಥಿತಿಗತಿಯನ್ನು ಸುಧಾರಿಸುವುದಲ್ಲದೆ ಅದು ಫಲವಂತಿಕೆ ದರ, ಮಹಿಳಾ ಮತ್ತು ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಗಳ ಮೇಲೆ ಅನುಕೂಲಕರ ಪರಿಣಾಮಗಳನ್ನು ಬೀರುವುದು. ಆದುದರಿಂದ ಸಾಕ್ಷರತಾ ದರಗಳಲ್ಲಿ ಹೆಚ್ಚಳವಾಗುತ್ತಿರುವುದರ ಬಗ್ಗೆ ನಾವು ಈಗಲೇ ಸಂತೃಪ್ತರಾಗಬೇಕಾಗಿಲ್ಲ ಮತ್ತು ಪ್ರತಿಶತ 100 ರಷ್ಟು ವಯಸ್ಕ ಸಾಕ್ಷರತೆಯನ್ನು ಸಾಧಿಸುವಲ್ಲಿ ನಾವು ಇನ್ನೂ ಬಹುದೂರವನ್ನು ಕ್ರಮಿಸಬೇಕಾಗಿದೆ.

### ಉನ್ನತ ಶಿಕ್ಷಣ – ಪಡೆಯುವವರು ಕೆಲವರು (Higher Education - a Few Takers) :

ಭಾರತೀಯ ಶಿಕ್ಷಣ ಗೋಪುರವು (ಪಿರಮಿಡ್) (Pyramid) ಕಡಿದಾಗಿದ್ದು, ಇದು ಉನ್ನತ ಶಿಕ್ಷಣ ಹಂತವನ್ನು ತಲುಪುವವರು ಅತ್ಯಂತ ಕಡಿಮೆ ಸಂಖ್ಯೆಯ ಜನರು ಎಂಬುದನ್ನು ಸೂಚಿಸುತ್ತದೆ. ಮೇಲಾಗಿ, ವಿದ್ಯಾವಂತ ಯುವಕರಲ್ಲಿ ನಿರುದ್ಯೋಗದ ಮಟ್ಟ ಅತಿ ಹೆಚ್ಚಾಗಿದೆ. ಎನ್.ಎಸ್.ಎಸ್.ಒ. ದತ್ತಾಂಶಗಳ ಪ್ರಕಾರ, 2011–12ನೇ ವರ್ಷದಲ್ಲಿ ಪದವಿ ಮತ್ತು ಅದಕ್ಕಿಂತ ಮೇಲ್ಪಟ್ಟ ಶಿಕ್ಷಣವನ್ನು ಪಡೆದಿರುವ ಗ್ರಾಮೀಣ ಪ್ರದೇಶದ ಯುವಕರಲ್ಲಿ ನಿರುದ್ಯೋಗದ ಪ್ರಮಾಣ ಶೇ. 19ರಷ್ಟಿತ್ತು. ಇವರಿಗೆ ಹೋಲಿಸಿದರೆ ನಗರ ಪ್ರದೇಶದಲ್ಲಿ ನಿರುದ್ಯೋಗದ ಪ್ರಮಾಣದ ಮಟ್ಟ ಕಡಿಮೆ ಇದ್ದು ಶೇ. 16ರಷ್ಟಿದೆ. ಗ್ರಾಮೀಣ ಯುವತಿಯರು ತೀವ್ರ ತೊಂದರೆಗೊಳಗಾಗಿದ್ದು, ಪದವಿ ಪಡೆದವರಲ್ಲಿ ಶೇ. 30 ರಷ್ಟು ನಿರುದ್ಯೋಗಿಗಳಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಪಡೆದ ಯುವಜನರಲ್ಲಿ ಕೇವಲ ಶೇ.3 ರಿಂದ ಶೇ.6 ರಷ್ಟು ನಿರುದ್ಯೋಗವಿದೆ. ಆದುದರಿಂದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಜನೆ ಮಾಡುತ್ತಿರುವವರನ್ನು ಕೌಶಲ್ಯಭರಿತ ಮತ್ತು ಉದ್ಯೋಗ ಸಮರ್ಥರನ್ನಾಗಿ ಮಾಡುವುದಕ್ಕೆ, ಸರ್ಕಾರವು ಉನ್ನತ ಶಿಕ್ಷಣಕ್ಕೆ ಹಣದ ಹಂಚಿಕೆಯನ್ನು ಹೆಚ್ಚಿಸಬೇಕಾಗಿದೆ ಮತ್ತು ಇಂತಹ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಸುಧಾರಿಸಬೇಕಾಗಿದೆ.



**ಚಿತ್ರ 5.7: ಉನ್ನತ ಶಿಕ್ಷಣ – ಪಡೆಯುವವರು ಕೆಲವರು**

ಕಡಿಮೆ ಶಿಕ್ಷಣ ಪಡೆದವರಿಗೆ ಹೋಲಿಸಿದರೆ, ವಿದ್ಯಾವಂತರಲ್ಲಿ ಬಹುಪಾಲು ನಿರುದ್ಯೋಗಿಗಳಾಗಿದ್ದಾರೆ, ಏಕೆ?

## 5.8 ಉಪಸಂಹಾರ CONCLUSION

ಮಾನವ ಬಂಡವಾಳ ನಿರ್ಮಾಣ ಮತ್ತು ಮಾನವ ಅಭಿವೃದ್ಧಿಯ ಆರ್ಥಿಕ ಮತ್ತು ಸಾಮಾಜಿಕ ಪ್ರಯೋಜನಗಳು ಎಲ್ಲರಿಗೂ ತಿಳಿದ ವಿಷಯವಾಗಿದೆ. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣ ಮತ್ತು ಆರೋಗ್ಯ ವಲಯಗಳ ಅಭಿವೃದ್ಧಿಗಾಗಿ ಗಣನೀಯ ಪ್ರಮಾಣದ ಹಣವನ್ನು ವೆಚ್ಚ ಮಾಡುತ್ತಿವೆ. ಏಕಕಾಲಕ್ಕೆ ಆರ್ಥಿಕ ಬೆಳವಣಿಗೆ ಮತ್ತು ಸಮಾನತೆಯನ್ನು ಸಾಧಿಸಲು ಸಮಾಜದ ಎಲ್ಲಾ ವರ್ಗಗಳಿಗೂ ಆರೋಗ್ಯ ಮತ್ತು ಶಿಕ್ಷಣ ಸೇವೆಗಳು ವಿಸ್ತರಣೆಗೊಳ್ಳಬೇಕು. ಜಗತ್ತಿನಲ್ಲಿ ಭಾರತವು ಶ್ರೀಮಂತವಾದ ವೈಜ್ಞಾನಿಕ ಮತ್ತು ತಾಂತ್ರಿಕ ಮಾನವ ಶಕ್ತಿಯ ಸಂಗ್ರಹವನ್ನು ಹೊಂದಿದೆ. ಇದನ್ನು ಗುಣಾತ್ಮಕವಾಗಿ ಉತ್ತಮಪಡಿಸುವುದು ಮತ್ತು ಅವರನ್ನು ನಮ್ಮ ದೇಶದಲ್ಲಿಯೇ ಬಳಸಿಕೊಳ್ಳುವಂತಹ ಉತ್ತಮ ವಾತಾವರಣವನ್ನು ಒದಗಿಸುವುದು ಸದ್ಯದ ಅಗತ್ಯವಾಗಿದೆ.

### ಪುನರುಕ್ತಿ

- ಶಿಕ್ಷಣದಲ್ಲಿನ ಹೂಡಿಕೆಗಳು ಮಾನವರನ್ನು ಮಾನವ ಬಂಡವಾಳವನ್ನಾಗಿ ಪರಿವರ್ತಿಸುತ್ತವೆ; ಮಾನವ ಬಂಡವಾಳವು ಅಧಿಕಗೊಂಡ ಶ್ರಮದ ಉತ್ಪಾದಕತೆಯನ್ನು ಪ್ರತಿನಿಧಿಸುತ್ತದೆ. ಇದು ಪ್ರಜ್ಞಾಪೂರ್ವಕ ಹೂಡಿಕೆ ನಿರ್ಧಾರಗಳ ಫಲವಾಗಿದ್ದು, ಗಳಿಸಿದ ಸಾಮರ್ಥ್ಯವಾಗಿದೆ. ಇಂತಹ ಹೂಡಿಕೆಗಳು ಭವಿಷ್ಯದ ಆದಾಯದ ಮೂಲಗಳನ್ನು ಹೆಚ್ಚಿಸುವ ನಿರೀಕ್ಷೆಗಳಿವೆ.
- ಶಿಕ್ಷಣದಲ್ಲಿನ ಹೂಡಿಕೆಗಳು, ವೃತ್ತಿ ನಿರತ ತರಬೇತಿ, ವಲಸೆ, ಆರೋಗ್ಯ ಮತ್ತು ಮಾಹಿತಿ ಮಾನವ ಬಂಡವಾಳ ನಿರ್ಮಾಣದ ಮೂಲಗಳಾಗಿವೆ.
- ಭೌತಿಕ ಬಂಡವಾಳದ ಪರಿಕಲ್ಪನೆಯು ಮಾನವ ಬಂಡವಾಳದ ಪರಿಭಾವನಾತ್ಮಕ ನೆಲೆಗಟ್ಟಾಗಿದೆ. ಬಂಡವಾಳ ನಿರ್ಮಾಣದ ಈ ಎರಡು ರೂಪಗಳ ನಡುವೆ ಕೆಲವು ಹೋಲಿಕೆಗಳು ಜೊತೆಗೆ ಕೆಲವು ಭಿನ್ನತೆಗಳೂ ಇವೆ.
- ಮಾನವ ಬಂಡವಾಳ ನಿರ್ಮಾಣದಲ್ಲಿನ ಹೂಡಿಕೆಯು ದಕ್ಷತೆ ಮತ್ತು ಬೆಳವಣಿಗೆಯನ್ನು ಹೆಚ್ಚಿಸುವುದೆಂದು ಪರಿಗಣಿಸಲಾಗಿದೆ.
- ಮಾನವ ಅಭಿವೃದ್ಧಿಯು ಮಾನವನ ಸಮಗ್ರ ಯೋಗಕ್ಷೇಮಕ್ಕೆ ಶಿಕ್ಷಣ ಮತ್ತು ಆರೋಗ್ಯ ಅಗತ್ಯವಾಗಿವೆ ಎಂಬ ವಿಚಾರದ ಮೇಲೆ ಆಧಾರಿತವಾಗಿವೆ. ಏಕೆಂದರೆ ಜನರು ಓದುವ ಮತ್ತು ಬರೆಯುವ ಸಾಮರ್ಥ್ಯದ ಜೊತೆಗೆ ಒಂದು ಸುದೀರ್ಘ ಮತ್ತು ಆರೋಗ್ಯಯುತ ಜೀವನವನ್ನು ನಡೆಸುವ ಸಾಮರ್ಥ್ಯವನ್ನು ಹೊಂದಿದ್ದಾಗ ಮಾತ್ರ ಅವರು ಇತರೇ ಮೌಲ್ಯಯುತ ಆಯ್ಕೆಗಳನ್ನು ಮಾಡುವರಲ್ಲವೇ?
- ಸರ್ಕಾರದ ಒಟ್ಟು ವೆಚ್ಚದಲ್ಲಿ, ಶಿಕ್ಷಣದ ಮೇಲೆ ಮಾಡಿದ ವೆಚ್ಚದ ಶೇಕಡ ಪಾಲು, ಸರ್ಕಾರದ ಯೋಜನೆ ಆದ್ಯತೆಗಳಲ್ಲಿ ಶಿಕ್ಷಣದ ಮಹತ್ವವನ್ನು ಸೂಚಿಸುತ್ತದೆ.



### ಅಭ್ಯಾಸಗಳು

1. ಒಂದು ದೇಶದ ಮಾನವ ಬಂಡವಾಳದ ಎರಡು ಪ್ರಮುಖ ಮೂಲಗಳು ಯಾವುವು?
2. ಒಂದು ದೇಶದ ಶೈಕ್ಷಣಿಕ ಸಾಧನೆಯ ಸೂಚಕಗಳು ಯಾವುವು?
3. ಭಾರತದಲ್ಲಿ ಶೈಕ್ಷಣಿಕ ಸಾಧನೆಯಲ್ಲಿ ಪ್ರಾದೇಶಿಕ ವ್ಯತ್ಯಾಸಗಳನ್ನು ಕಾಣುತ್ತೇವೆ, ಏಕೆ?
4. ಮಾನವ ಬಂಡವಾಳ ಮತ್ತು ಮಾನವ ಅಭಿವೃದ್ಧಿ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.
5. "ಮಾನವ ಬಂಡವಾಳಕ್ಕೆ ಹೋಲಿಸಿದರೆ ಮಾನವ ಅಭಿವೃದ್ಧಿಯು ವಿಶಾಲವಾದ ಪರಿಭಾವನೆಯಾಗಿದೆ" ಹೇಗೆ?
6. ಮಾನವ ಬಂಡವಾಳ ನಿರ್ಮಾಣಕ್ಕೆ ಕೊಡುಗೆ ನೀಡುವ ಅಂಶಗಳಾವುವು?
7. ಭಾರತದಲ್ಲಿ ಶಾಲೆಗಳ ಮತ್ತು ಆಸ್ಪತ್ರೆಗಳ ಕಾರ್ಯನಿರ್ವಹಣೆಗೆ ಸರ್ಕಾರಿ ಸಂಘಟನೆಗಳು ಹೇಗೆ ಸಹಾಯಕವಾಗಿವೆ?
8. ಒಂದು ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣವನ್ನು ಒಂದು ಮುಖ್ಯ ಸಾಧನವಾಗಿ ಪರಿಗಣಿಸಲಾಗಿದೆ, ಹೇಗೆ?

9. ಮಾನವ ಬಂಡವಾಳ ನಿರ್ಮಾಣದ ಮೂಲಗಳಾಗಿ ಕೆಳಗಿನವುಗಳನ್ನು ಚರ್ಚಿಸಿ.

   [1] ಆರೋಗ್ಯ ಮೂಲ ಸೌಕರ್ಯ [2] ವಲಸೆ ಮೇಲಿನ ವೆಚ್ಚ

10. ಮಾನವ ಸಂಪನ್ಮೂಲದ ಪರಿಣಾಮಕಾರಿ ಬಳಕೆಗಾಗಿ ಆರೋಗ್ಯ ಮತ್ತು ಶಿಕ್ಷಣದ ಮೇಲಿನ ವೆಚ್ಚಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯುವ ಅಗತ್ಯತೆಯನ್ನು ಪ್ರತಿಪಾದಿಸಿ.

11. ಮಾನವ ಬಂಡವಾಳದ ಹೂಡಿಕೆಯು ಬೆಳವಣಿಗೆಗೆ ಹೇಗೆ ಕೊಡುಗೆ ಸಲ್ಲಿಸುತ್ತದೆ?

12. "ಸರಾಸರಿ ಶಿಕ್ಷಣಮಟ್ಟ ಹೆಚ್ಚಾದಂತೆ ವಿಶ್ವದಾದ್ಯಂತ ಅಸಮಾನತೆಯ ಪ್ರಮಾಣ ಇಳಿಮುಖವಾಗುತ್ತದೆ" ಎಂಬ ಅಂಶವನ್ನು ವಿಮರ್ಶಿಸಿ.

13. ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ಪರಿಶೀಲಿಸಿ.

14. ಶಿಕ್ಷಣದ ಮೇಲಿನ ಹೂಡಿಕೆಯು ಆರ್ಥಿಕ ಬೆಳವಣಿಗೆಯನ್ನು ಹೇಗೆ ಉತ್ತೇಜಿಸುತ್ತದೆ ಎನ್ನುವುದನ್ನು ವಿವರಿಸಿ.

15. ಒಬ್ಬ ವ್ಯಕ್ತಿಗೆ ವೃತ್ತಿ ನಿರತ ತರಬೇತಿಯ ಅಗತ್ಯತೆಯನ್ನು ತಿಳಿಸಿ.

16. ಮಾನವ ಬಂಡವಾಳ ಮತ್ತು ಆರ್ಥಿಕ ಬೆಳವಣಿಗೆ ನಡುವಿನ ಸಂಬಂಧವನ್ನು ಗುರುತಿಸಿ.

17. ಭಾರತದಲ್ಲಿ ಮಹಿಳಾ ಶಿಕ್ಷಣವನ್ನು ಉತ್ತೇಜಿಸುವ ಅಗತ್ಯತೆಯನ್ನು ಚರ್ಚಿಸಿ.

18. ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ವಿವಿಧ ಪ್ರಕಾರದ ಸರ್ಕಾರಗಳ ಮಧ್ಯಪ್ರವೇಶದ ಅವಶ್ಯಕತೆಯನ್ನು ಸಮರ್ಥಿಸಿ.

19. ಭಾರತದಲ್ಲಿ ಮಾನವ ಬಂಡವಾಳ ನಿರ್ಮಾಣದ ಪ್ರಮುಖ ಸಮಸ್ಯೆಗಳಾವುವು?

20. ನಿಮ್ಮ ದೃಷ್ಟಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವಾ ಸಂಸ್ಥೆಗಳ ಶುಲ್ಕ ಸಂರಚನೆಯನ್ನು ಸರ್ಕಾರ ನಿಯಂತ್ರಿಸುವ ಅಗತ್ಯತೆ ಇದೆಯೇ? ಹಾಗಿದ್ದರೆ ಏಕೆ?




## ಸೂಚಿಸಿದ ಹೆಚ್ಚುವರಿ ಚಟುವಟಿಕೆಗಳು

1. ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ಹೇಗೆ ಲೆಕ್ಕಾಚಾರ ಮಾಡಲಾಗುತ್ತದೆ ಗುರುತಿಸಿ. ವಿಶ್ವ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಭಾರತದ ಸ್ಥಾನವೇನು?

2. ಭವಿಷ್ಯದಲ್ಲಿ ಭಾರತವು ಜ್ಞಾನಾಧಾರಿತ ಅರ್ಥವ್ಯವಸ್ಥೆಯಾಗಿ ಮುನ್ನಡೆಯುತ್ತದೆಯೇ? ತರಗತಿಯಲ್ಲಿ ಚರ್ಚಿಸಿ.

3. ಕೋಷ್ಟಕ 5.2ರಲ್ಲಿ ಕೊಟ್ಟಿರುವ ದತ್ತಾಂಶ ಅರ್ಥೈಸಿ.

4. ವಿದ್ಯಾವಂತ ವ್ಯಕ್ತಿಯಾಗಿ ಶಿಕ್ಷಣಕ್ಕೋಸ್ಕರ ನಿಮ್ಮ ಕೊಡುಗೆ ಏನು {ಉದಾಹರಣೆಗೆ: "ಕಲಿಯದವರ ಹೊಣೆ– ಕಲಿತವರದ್ದು" (Each one – Teach One)}

5. ಶಿಕ್ಷಣ, ಆರೋಗ್ಯ ಮತ್ತು ಶ್ರಮಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುವ ವಿವಿಧ ಮೂಲಗಳನ್ನು ಪಟ್ಟಿ ಮಾಡಿ.

6. ಕೇಂದ್ರ ಆರೋಗ್ಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳ ವಾರ್ಷಿಕ ವರದಿಗಳನ್ನು ಓದಿ ಮತ್ತು ಅವುಗಳ ಸಾರಾಂಶವನ್ನು ಬರೆಯಿರಿ. ಆರ್ಥಿಕ ಸಮೀಕ್ಷೆಯಲ್ಲಿ ಸಾಮಾಜಿಕ ವಲಯವನ್ನು ಕುರಿತಾದ ಅಧ್ಯಾಯವನ್ನು ಓದಿ.



# REFERENCES

**Books:**

BECKER, GARY S. 1964. Human Capital.2nd Edition, Columbia University Press, New York.

FREEMAN, RICHARD. 1976. The Overeducated American. Academic Press, New York.

**Government Reports:**

Education in India, Ministry of Human Resource Development, Government of India (for recent years) for various years.

Annual Reports, Ministry of Human Resource Development, Government of India.

**Websites**

www.education.nic.in

www.cbse.nic.in

www.ugc.ac.in

www.aicte.ernet.in

www.ncert.nic.in

www.finmin.nic.in

6

# ಗ್ರಾಮೀಣಾಭಿವೃದ್ಧಿ

# RURAL DEVELOPMENT

**ಈ ಅಧ್ಯಾಯದ ಅಧ್ಯಯನದ ನಂತರ ನೀವು:**

- ಗ್ರಾಮೀಣಾಭಿವೃದ್ಧಿ ಮತ್ತು ಅದಕ್ಕೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳನ್ನು ಅರಿತುಕೊಳ್ಳುವಿರಿ.
- ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯು ಹೇಗೆ ನಿರ್ಣಾಯಕವಾಗಿದೆ ಎಂಬುದನ್ನು ಶ್ಲಾಘಿಸುವಿರಿ.
- ಗ್ರಾಮೀಣಾಭಿವೃದ್ಧಿಯಲ್ಲಿ ಸಾಲ ಮತ್ತು ಮಾರುಕಟ್ಟೆ ವ್ಯವಸ್ಥೆಯ ಗಂಭೀರ ಪಾತ್ರವನ್ನು ಅರ್ಥಮಾಡಿಕೊಳ್ಳುವಿರಿ.
- ಸುಸ್ಥಿರ ಜೀವನಾಧಾರಕ್ಕೆ ಅಗತ್ಯವಾದ ವೈವಿಧ್ಯೀಕರಣದ ಉತ್ಪಾದನಾ ಚಟುವಟಿಕೆಗಳ ಪ್ರಾಮುಖ್ಯತೆಯ ಬಗ್ಗೆ ತಿಳಿಯುವಿರಿ.
- ಸುಸ್ಥಿರ ಅಭಿವೃದ್ಧಿಯಲ್ಲಿ ಸಾವಯವ ಬೇಸಾಯದ ಮಹತ್ವವನ್ನು ಅರ್ಥಮಾಡಿಕೊಳ್ಳುವಿರಿ.

"ಉಳುವವರು ಮಾತ್ರ ಹಕ್ಕಿನಿಂದ ಜೀವಿಸಬಲ್ಲರು. ಉಳಿದ ಅವರ ಪರಿಶ್ರಮ ಮತ್ತು ಆಹಾರ ಮಾತ್ರ ಅವಲಂಬಿತರ ಅನ್ನವಾಗಿರುತ್ತದೆ"

– ತಿರುವಳ್ಳವರ್

## 6.1 ಪೀಠಿಕೆ (INTRODUCTION)

ಈಗಾಗಲೇ ನಾವು ಅಧ್ಯಾಯ – 4ರಲ್ಲಿ ಬಡತನವು ಭಾರತಕ್ಕೆ ಹೇಗೆ ಒಂದು ಪ್ರಮುಖ ಸವಾಲಾಗಿದೆ ಎಂಬುದನ್ನು ಅಭ್ಯಸಿಸಿದ್ದೇವೆ. ಅಲ್ಲದೆ ಬಹಳಷ್ಟು ಬಡವರು ತಮ್ಮ ಜೀವನಕ್ಕೆ ಅಗತ್ಯವಾಗಿರುವ ಮೂಲಸೌಕರ್ಯಗಳನ್ನು ಹೊಂದಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ ಎಂಬುದನ್ನೂ ಅರಿತಿದ್ದೇವೆ.

ಗ್ರಾಮೀಣ ವಲಯದಲ್ಲಿ ಕೃಷಿಯು ಜೀವನಾಧಾರದ ಪ್ರಮುಖ ಮೂಲವಾಗಿದೆ. "ಭಾರತದ ನೈಜ ಪ್ರಗತಿಯು ಕೇವಲ ನಗರ ಕೇಂದ್ರಗಳ ಕೈಗಾರಿಕಾ ಬೆಳವಣಿಗೆ ಮತ್ತು ವಿಸ್ತರಣೆಯಿಂದ ಆಗುವುದಿಲ್ಲ, ಆದರೆ ಮುಖ್ಯವಾಗಿ ಅದು ಹಳ್ಳಿಗಳ ಅಭಿವೃದ್ಧಿಯಿಂದ ಮಾತ್ರ ಸಾಧ್ಯವಾಗುತ್ತದೆ" ಎಂದು ಮಹಾತ್ಮಗಾಂಧಿಯವರು ಒಮ್ಮೆ ಹೇಳಿದ್ದರು. ಗ್ರಾಮೀಣ ಅಭಿವೃದ್ಧಿ ಎಂಬ ಈ ಅಭಿಪ್ರಾಯವು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಕೇಂದ್ರಬಿಂದುವಾಗಿದೆ. ಹಾಗೂ ಇದು ಇಂದಿಗೂ ಪ್ರಸ್ತುತವೆನಿಸಿದೆ. ಇದು ಹೀಗೇಕೆ? ನಮ್ಮ ಸುತ್ತಮುತ್ತಲಿನ ನಗರಗಳು, ಬೃಹತ್ ಕೈಗಾರಿಕೆ ಮತ್ತು ಆಧುನಿಕ ಮಾಹಿತಿ ತಂತ್ರಜ್ಞಾನದ ಜಾಲದಿಂದ ವೇಗವಾಗಿ ಬೆಳೆಯುವುದನ್ನು ನೋಡಿದಾಗ, ನಾವೇಕೆ ಈ ಗ್ರಾಮೀಣಾಭಿವೃದ್ಧಿಯ ಪ್ರಾಮುಖ್ಯತೆಗೆ ಅಂಟಿಕೊಂಡಿರಬೇಕು? ಏಕೆಂದರೆ, ಭಾರತದ ಜನಸಂಖ್ಯೆಯ ಮೂರನೇ ಎರಡಕ್ಕಿಂತ ಅಧಿಕ ಜನರು ಕೃಷಿಯನ್ನವಲಂಬಿಸಿದ್ದಾರೆ. ಇದು ಇನ್ನೂ ತನ್ನ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಮೂರನೇ ಒಂದರಷ್ಟು ಗ್ರಾಮೀಣ ಭಾರತವು ಈಗಲೂ ಕಡುಬಡತನದಲ್ಲಿ ಜೀವಿಸುತ್ತಿದೆ. ಈ ಕಾರಣಕ್ಕಾಗಿಯೇ ನಮ್ಮ ದೇಶವು ನೈಜ ಪ್ರಗತಿಯನ್ನು ಸಾಧಿಸಬೇಕಾದರೆ ಅಭಿವೃದ್ಧಿ ಹೊಂದಿದ ಗ್ರಾಮೀಣ ಭಾರತವನ್ನು ನಿರ್ಮಾಣ ಮಾಡಬೇಕಾಗಿದೆ. ಹಾಗಾದರೆ ಗ್ರಾಮೀಣ ಅಭಿವೃದ್ಧಿಯು ಏನನ್ನು ಸೂಚಿಸುತ್ತದೆ?

## 6.2. ಗ್ರಾಮೀಣಾಭಿವೃದ್ಧಿ ಎಂದರೇನು? (WHAT IS RURAL DEVELOPMENT?)

ಗ್ರಾಮೀಣಾಭಿವೃದ್ಧಿಯು ಒಂದು ವಿಸ್ತೃತವಾದ ಪದವಾಗಿದೆ. ಇದು ಮೂಲತಃ ಗ್ರಾಮೀಣ ಅರ್ಥವ್ಯವಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಿರುವ ಹಿಂದುಳಿದ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳ ಮೇಲೆ ಗಮನ ಹರಿಸುತ್ತದೆ. ಗ್ರಾಮೀಣ ಭಾರತಕ್ಕೆ ಸವಾಲಾಗಿರುವ ಮತ್ತು ಅಭಿವೃದ್ಧಿಗೆ ಹೊಸ ಪ್ರಯತ್ನದ ಅಗತ್ಯವಿರುವ ಕೆಲವು ಕ್ಷೇತ್ರಗಳೆಂದರೆ:

- ಮಾನವ ಸಂಪನ್ಮೂಲದ ಅಭಿವೃದ್ಧಿ.
  - ಸಾಕ್ಷರತೆ, ವಿಶೇಷವಾಗಿ ಸ್ತ್ರೀ (ಮಹಿಳಾ) ಸಾಕ್ಷರತೆ, ಶಿಕ್ಷಣ ಮತ್ತು ಕೌಶಲ್ಯತೆಯ ಅಭಿವೃದ್ಧಿ.
  - ಆರೋಗ್ಯ_ನೈರ್ಮಲ್ಯತೆ ಮತ್ತು ಸಾರ್ವಜನಿಕ ಆರೋಗ್ಯ ಸೇರಿದಂತೆ.
- ಭೂ–ಸುಧಾರಣೆ.
- ಒಂದೊಂದು ಪ್ರದೇಶದಲ್ಲೂ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ.
- ವಿದ್ಯುತ್ಚ್ಛಕ್ತಿ, ನೀರಾವರಿ, ಸಾಲ, ಮಾರುಕಟ್ಟೆವ್ಯವಸ್ಥೆ, ಹಳ್ಳಿ ರಸ್ತೆಗಳ ನಿರ್ಮಾಣ ಮತ್ತು ರಾಷ್ಟ್ರೀಯ ಹೆದ್ದಾರಿ ಬಳಿಯ ಪೂರಕ ರಸ್ತೆಗಳನ್ನೊಳಗೊಂಡಂತೆ ಸಾರಿಗೆ ಸೌಲಭ್ಯಗಳು, ಕೃಷಿ ಸಂಶೋಧನೆ ಮತ್ತು ವಿಸ್ತರಣೆ ಸೌಲಭ್ಯಗಳು, ಮತ್ತು ಮಾಹಿತಿ ವಿಸ್ತರಣೆ ಮುಂತಾದ ಮೂಲ ಸೌಕರ್ಯಗಳ ಅಭಿವೃದ್ಧಿ.
- ಬಡತನ ಉಪಶಮನದಂತಹ ವಿಶೇಷ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಮತ್ತು ದುರ್ಬಲ ವರ್ಗಗಳ ಬದುಕಿನ ಸ್ಥಿತಿಯನ್ನು ಗಮನಾರ್ಹವಾಗಿ ಸುಧಾರಿಸುವಂತಹ ಉತ್ಪಾದಕ ಉದ್ಯೋಗವಕಾಶಗಳನ್ನು ಕಲ್ಪಿಸುವುದು.

ಇವೆಲ್ಲವುಗಳ ಅರ್ಥವೆಂದರೆ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಜನರಿಗೆ ಅವರ ಉತ್ಪಾದಕತೆಯನ್ನು ಹೆಚ್ಚಿಸುವ ವಿವಿಧ ಸಾಧನಗಳನ್ನು ಒದಗಿಸುವುದು. ಅವರು ಆಹಾರ ಸಂಸ್ಕರಣೆಯಂತಹ ಕೃಷಿಯೇತರ ಉತ್ಪಾದಕ ಚಟುವಟಿಕೆಗಳನ್ನು ಕೈಗೊಳ್ಳುವಂತಹ ಅವಕಾಶಗಳನ್ನು ಒದಗಿಸುವ ಅವಶ್ಯಕತೆಯಿದೆ. ಶೀಘ್ರಗತಿ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಕೆಲಸ ಮಾಡುವ ಸ್ಥಳಗಳು ಮತ್ತು ಮನೆಗಳಲ್ಲಿ ಉತ್ತಮ ಮತ್ತು ಕೈಗೆಟಕುವ ಆರೋಗ್ಯ ರಕ್ಷಣೆ, ನೈರ್ಮಲ್ಯ ಸೌಕರ್ಯಗಳನ್ನು ಮತ್ತು ಶಿಕ್ಷಣವನ್ನು ಪಡೆಯುವಂತೆ ಅವರನ್ನು ಸಮರ್ಥರನ್ನಾಗಿಸುವುದಕ್ಕೆ ಪ್ರಥಮ ಆದ್ಯತೆಯನ್ನು ನೀಡುವ ಅಗತ್ಯವಿದೆ.

ಜಿ.ಡಿ.ಪಿ.ಯಲ್ಲಿ ಕೃಷಿ ವಲಯದ ಪಾಲು ಇಳಿಮುಖವಾಗಿದ್ದರೂ ಈ ವಲಯದಲ್ಲಿ ಅವಲಂಬಿತರಾಗಿರುವ ಜನಸಂಖ್ಯೆಯಲ್ಲಿ ಯಾವುದೇ ಗಮನಾರ್ಹ ಬದಲಾವಣೆಯಾಗಿಲ್ಲ ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ತಿಳಿದುಕೊಂಡಿದ್ದೇವೆ. ಅಲ್ಲದೆ ಸುಧಾರಣೆಗಳನ್ನು ತಂದಮೇಲೆ, ಕೃಷಿವಲಯದ ಬೆಳವಣಿಗೆ ದರವು 1991–2012ರ ಅವಧಿಯಲ್ಲಿ ವಾರ್ಷಿಕ ಶೇ.3ಕ್ಕೆ ಇಳಿಯಿತು. ಇದು ಹಿಂದಿನ ವರ್ಷಗಳಿಗಿಂತ ಬಹಳ ಕಡಿಮೆಯಾಗಿತ್ತು. 1991ರಿಂದ ಸಾರ್ವಜನಿಕ ಹೂಡಿಕೆಯಲ್ಲಿ ಇಳಿಮುಖವಾಗಿರುವುದೇ ಇದಕ್ಕೆ ಪ್ರಮುಖ ಕಾರಣವೆಂದು ವಿದ್ವಾಂಸರು ಗುರುತಿಸಿದ್ದಾರೆ. ಜೊತೆಗೆ ಸಾಕಷ್ಟು ಮೂಲಸೌಕರ್ಯಗಳಿಲ್ಲದಿರುವುದು ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಬದಲಿ ಉದ್ಯೋಗಾವಕಾಶಗಳ ಕೊರತೆ, ಹಂಗಾಮಿ ಉದ್ಯೋಗಗಳ ಹೆಚ್ಚಳ ಇತ್ಯಾದಿಗಳೂ ಸಹ ಗ್ರಾಮೀಣಾಭಿವೃದ್ಧಿಗೆ ಅಡ್ಡಿಯಾಗಿವೆ ಎಂದು ವಾದಿಸುತ್ತಾರೆ. ಪರಿಣಾಮವಾಗಿ ದೇಶದ ವಿವಿಧ ಭಾಗದ ರೈತರು ಸಂಕಷ್ಟಕ್ಕೆ ಗುರಿಯಾಗಿರುವುದನ್ನು ನಾವು ನೋಡಬಹುದು. ಈ ಎಲ್ಲಾ ಹಿನ್ನೆಲೆಯಿಂದಾಗಿ, ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ನಾವು ಗ್ರಾಮೀಣ ಭಾರತದ ಪರಿಕಲ್ಪನೆಗಳಾದ ಸಾಲ ಮತ್ತು ಮಾರುಕಟ್ಟೆ ವ್ಯವಸ್ಥೆ, ಕೃಷಿ ವೈವಿಧ್ಯೀಕರಣ ಮತ್ತು ಸಾವಯವ ಬೇಸಾಯದ ಪಾತ್ರ ಮುಂತಾದವುಗಳ ಕಡೆಗೆ ವಿವೇಕಯುತವಾಗಿ ಪರಿಶೀಲಿಸೋಣ.



**ನೀವೇ ಮಾಡಿರಿ**

**(Work These out)**

- ಮಾಸಿಕ ಆಧಾರದ ಮೇಲೆ ನಿಮ್ಮ ಸ್ಥಳೀಯ ದಿನ ಪತ್ರಿಕೆಗಳನ್ನು ಓದಿ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಪಟ್ಟ ಸಮಸ್ಯೆ ಮತ್ತು ಅವುಗಳನ್ನು ಪರಿಹರಿಸುವ ಕ್ರಮಗಳನ್ನು ಗುರುತಿಸಿ ನೀವು ಹತ್ತಿರವಿರುವ ಹಳ್ಳಿಯನ್ನು ಭೇಟಿ ಮಾಡಿ ಅಲ್ಲಿನ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಬಹುದು. ಈ ಸಮಸ್ಯೆಗಳನ್ನು ಶಾಲೆಯ ತರಗತಿಗಳಲ್ಲಿ ಚರ್ಚಿಸಿ.
- ಸರ್ಕಾರಿ ವೆಬ್ ಸೈಟ್ http: // www. Rural. Nic.in ಗಳನ್ನು ನೋಡಿ ಇತ್ತೀಚಿನ ಯೋಜನೆಗಳ ಮತ್ತು ಅವುಗಳ ಉದ್ದೇಶವನ್ನು ಪಟ್ಟಿಮಾಡಿ.

## 6.3. ಗ್ರಾಮೀಣ ಪ್ರದೇಶಗಳಲ್ಲಿ ಸಾಲ ಮತ್ತು ಮಾರುಕಟ್ಟೆ ವ್ಯವಸ್ಥೆ

## (CREDIT AND MARKETING RURAL AREAS)

### ಸಾಲ (Credit):

ಗ್ರಾಮೀಣ ಆರ್ಥಿಕತೆಯ ಬೆಳವಣಿಗೆಯು ಮುಖ್ಯವಾಗಿ, ಕೃಷಿ ಮತ್ತು ಕೃಷಿಯೇತರ ವಲಯಗಳಲ್ಲಿ ಅಧಿಕ ಉತ್ಪಾದಕತೆಯನ್ನು ಸಾಧಿಸಲು, ಕಾಲಕಾಲಕ್ಕೆ ಬಂಡವಾಳ ತೊಡಗಿಸುವಿಕೆಯನ್ನು ಅವಲಂಬಿಸಿದೆ. ಬಿತ್ತನೆ ಕಾರ್ಯ ಮತ್ತು ಫಸಲು ಪಡೆಯುವ ನಡುವಿನ ಕಾಲಾವಧಿಯು ದೀರ್ಘವಾದುದಾಗಿದೆ. ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಕೃಷಿ ಉಪಕರಣಗಳು ಮತ್ತು ಇತರೆ ಕೌಟುಂಬಿಕ ವೆಚ್ಚಗಳಾದ, ವಿವಾಹ, ಮರಣ, ಧಾರ್ಮಿಕಾಚರಣೆ ಇತ್ಯಾದಿ ವೆಚ್ಚಗಳನ್ನು (ಖರ್ಚುಗಳನ್ನು) ಭರಿಸಲು ರೈತರು ವಿವಿಧ ಮೂಲಗಳಿಂದ ಸಾಲವನ್ನು ಪಡೆಯುತ್ತಾರೆ.

ಸ್ವಾತಂತ್ರ್ಯದ ಸಮಯದಲ್ಲಿ ಲೇವಾದೇವಿಗಾರರು ಮತ್ತು ವ್ಯಾಪಾರಿಗಳು ಸಣ್ಣ ಹಾಗೂ ಅತಿ ಸಣ್ಣ ರೈತರನ್ನು ಮತ್ತು ಭೂ–ರಹಿತ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದರು. ಈ ಮಧ್ಯವರ್ತಿಗಳು ಸಣ್ಣ ರೈತರಿಗೆ ಅಧಿಕ ಬಡ್ಡಿ ದರದ ಸಾಲ ನೀಡುವುದು ಮತ್ತು ಸಾಲದ ಲೆಕ್ಕವನ್ನು ತಿರುಚುವ ಮೂಲಕ ಅವರನ್ನು ಸಾಲದ ಸುಳಿಗೆ ತಳ್ಳುತ್ತಿದ್ದರು.

**ಪೆಟ್ಟಿಗೆ 6.1 ಬಡ ಹೆಣ್ಣು ಮಕ್ಕಳ ಬ್ಯಾಂಕ್**

'ಕುಡುಂಬಶ್ರೀ' 1995 ಕೇರಳದಲ್ಲಿ ಬಡತನವನ್ನು ಕಡಿಮೆ ಮಾಡಲು ಮಹಿಳಾ ಆಧಾರಿತ ಸಾಮುದಾಯಿಕ ಕಾರ್ಯಕ್ರಮವೊಂದನ್ನು ಜಾರಿಗೊಳಿಸಲಾಯಿತು. ಇದೇ ಕುಡುಂಬಶ್ರೀ ಕಾರ್ಯಕ್ರಮ. ಉಳಿತಾಯವನ್ನು ಉತ್ತೇಜಿಸುವ ಉದ್ದೇಶದಿಂದ ಮಿತವ್ಯಯ ಮತ್ತು ಸಾಲ ಸಂಘವನ್ನು ಬಡಹೆಣ್ಣು ಮಕ್ಕಳ ಸಣ್ಣ ಉಳಿತಾಯ ಬ್ಯಾಂಕಾಗಿ ಸ್ಥಾಪಿಸಲ್ಪಟ್ಟಿದೆ. ಈ ಸಂಘವು ಒಂದು ಕೋಟಿ ರೂಪಾಯಿನ ಬಂಡವಾಳವನ್ನು ಮಿತವ್ಯಯ ಮತ್ತು ಉಳಿತಾಯವಾಗಿ ಸಂಗ್ರಹಿಸಿತು. ಭಾಗವಹಿಸುವಿಕೆ ಮತ್ತು ಉಳಿತಾಯ ಸಂಗ್ರಹಣೆಯ ದೃಷ್ಟಿಯಿಂದ ಈ ಸಂಘವು ಏಷ್ಯಾದಲ್ಲಿಯೇ ಅತಿ ದೊಡ್ಡ ಅನೌಪಚಾರಿಕ ಬ್ಯಾಂಕ್ ಎನಿಸಿದೆ.

ಗ್ರಾಮೀಣ ಸಾಲದ ಅಗತ್ಯಗಳನ್ನು ಪೂರೈಸುವ ಸಲುವಾಗಿ 1969ರಲ್ಲಿ ಭಾರತವು ಸಾಮಾಜಿಕ ಬ್ಯಾಂಕಿಂಗ್ ಮತ್ತು ಬಹುಮುಖ ಹಣಕಾಸಿನ ಸಂಸ್ಥೆಗಳನ್ನು ಅಳವಡಿಸಿಕೊಂಡ ನಂತರ ಒಂದು ಪ್ರಮುಖ ಬದಲಾವಣೆ ಕಂಡುಬಂದಿತು. ಗ್ರಾಮೀಣ ಹಣಕಾಸು ವ್ಯವಸ್ಥೆಯಲ್ಲಿ ತೊಡಗಿಕೊಂಡಿರುವ ಎಲ್ಲಾ ಹಣಕಾಸು ಸಂಸ್ಥೆಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸಲು 1982ರಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (NABARD) ಎಂಬ ಒಂದು ಅಪೆಕ್ಸ್ ಬ್ಯಾಂಕನ್ನು ಸ್ಥಾಪಿಸಲಾಯಿತು. ಹಸಿರು ಕ್ರಾಂತಿಯೂ ಕೂಡ ಗ್ರಾಮೀಣ ಸಾಲ ವ್ಯವಸ್ಥೆಯಲ್ಲಿ ಪರಿವರ್ತನೆಯ ಪ್ರಮುಖ ಹರಿಕಾರನಾಗಿ ಪಾತ್ರ ನಿರ್ವಹಿಸಿತು, ಏಕೆಂದರೆ, ಇದು ಗ್ರಾಮೀಣ ಸಾಲವನ್ನು ವಿವಿಧ ಉತ್ಪಾದನಾ ಸಂಬಂಧಿತ ಉದ್ದೇಶಗಳಿಗೆ ಬಳಸಲ್ಪಡುವಂತೆ ಮಾಡಿತು.

ಇಂದು ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆಯ ಸಾಂಸ್ಥಿಕ ರಚನೆಯು ಬಹುಮುಖಿ ಹಣಕಾಸಿನ ಸಂಸ್ಥೆಗಳಾದ ವಾಣಿಜ್ಯ ಬ್ಯಾಂಕು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (RRB), ಸಹಕಾರಿ ಬ್ಯಾಂಕುಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಒಳಗೊಂಡಿವೆ. ಅವುಗಳು ಸಾಕಷ್ಟು ಸಾಲವನ್ನು ಕಡಿಮೆ ದರದಲ್ಲಿ ಒದಗಿಸುತ್ತವೆ ಎಂದು ನಿರೀಕ್ಷಿಸಲಾಗಿದೆ. ಇತ್ತೀಚೆಗೆ ಸ್ವ-ಸಹಾಯ ಗುಂಪು (SHGS)ಗಳು ಔಪಚಾರಿಕ ಸಾಲ ವ್ಯವಸ್ಥೆಯಲ್ಲಿರುವ ಅಂತರವನ್ನು ತುಂಬಲು ಉದಯಿಸಿವೆ. ಏಕೆಂದರೆ ಔಪಚಾರಿಕ ಸಾಲ ನೀಡಿಕೆ ತಂತ್ರವು ಕೊರತೆಯಲ್ಲದಿರುವುದಷ್ಟೇ ಅಲ್ಲದೆ ಅದು ಸರ್ವತೋಮುಖ ಗ್ರಾಮೀಣ ಸಾಮಾಜಿಕ ಮತ್ತು ಸಮುದಾಯದ ಅಭಿವೃದ್ಧಿಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿಲ್ಲ ಎಂಬುದನ್ನು ಸಾಬೀತುಪಡಿಸಿದೆ. ಬಡ ಗ್ರಾಮೀಣ ಕುಟುಂಬಗಳ ಬಹುಪಾಲು ಜನರು ಔಪಚಾರಿಕ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಅಗತ್ಯವಿರುವ ಆಧಾರವನ್ನು (ಭದ್ರತೆಗಳನ್ನು) ನೀಡಲು ಅಸಮರ್ಥರಾಗಿರುವುದರಿಂದ ಅವರು ಸಹಜವಾಗಿಯೇ ಸಾಲ ಪಡೆಯುವುದರಿಂದ ಹೊರಗುಳಿದಿದ್ದಾರೆ. ಸ್ವ-ಸಹಾಯ ಗುಂಪುಗಳು ಪ್ರತೀ ಸದಸ್ಯರುಗಳ ಸಣ್ಣ ವಂತಿಕೆಯ ಮೂಲಕ ಮಿತವ್ಯಯವನ್ನು ಪ್ರೋತ್ಸಾಹಿಸುತ್ತಿವೆ. ಸಂಗ್ರಹಿಸಲ್ಪಟ್ಟ ಹಣದಿಂದ



**ನೀವೇ ಮಾಡಿರಿ**

**(Work These out)**

- ಸ್ವ-ಸಹಾಯ ಗುಂಪುಗಳು (SHGs) ನಿಮ್ಮ ಸ್ಥಳೀಯ ಪ್ರದೇಶದಲ್ಲಿ ಸಾಲ ಸೌಲಭ್ಯವನ್ನು ಒದಗಿಸುತ್ತವೆ ಎಂಬುದನ್ನು ನೀವು ಗಮನಿಸಿರುತ್ತೀರಿ. ಈ SHGsಗಳ ಕೆಲವು ಸಭೆಗಳಲ್ಲಿ ಹಾಜರಾಗಿ. ಆ ಸಂಘಗಳ ಬಗ್ಗೆ ಸಂಕ್ಷಿಪ್ತ ವರದಿಯನ್ನು ತಯಾರಿಸಿ. ಈ ವರದಿಯಲ್ಲಿ ಸಂಘ ಯಾವಾಗ ಪ್ರಾರಂಭವಾಯಿತು, ಸದಸ್ಯರ ಸಂಖ್ಯೆ ಉಳಿತಾಯದ ಮೊತ್ತ ಮತ್ತು ಅವು ಒದಗಿಸುವ ಸಾಲದ ಸ್ವರೂಪ ಮತ್ತು ಸಾಲಗಾರರು ಹೇಗೆ ಈ ಸಾಲವನ್ನು ಬಳಸುತ್ತಾರೆ ಎಂಬ ಅಂಶಗಳು ಒಳಗೊಂಡಿರಲಿ.
- ಸ್ವಂತ ಉದ್ಯೋಗ ಚಟುವಟಿಕೆಯ ಉದ್ದೇಶದಿಂದ ಸಾಲ ಪಡೆದವರು ಅದನ್ನು ಬೇರೆ ಉದ್ದೇಶಗಳಿಗೆ ಬಳಸುವುದನ್ನು ನೀವು ನೋಡಿರಬಹುದು. ಅಂತಹ ಕೆಲವು ಸಾಲಗಾರರನ್ನು ಸಂದರ್ಶಿಸಿ, ಅವರು ಸ್ವಯಂ-ಉದ್ಯೋಗ-ಚಟುವಟಿಕೆಗಳನ್ನು ಯಾಕೆ ಪ್ರಾರಂಭಿಸಿಲ್ಲ ಎಂಬುದಕ್ಕೆ ಕಾರಣಗಳನ್ನು ಗುರುತಿಸಿ. ತರಗತಿಗಳಲ್ಲಿ ಚರ್ಚಿಸಿ.

ಅಗತ್ಯವಿರುವವರಿಗೆ ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬಹುದಾದ ನ್ಯಾಯಯುತ ಬಡ್ಡಿದರದ ಸಾಲವನ್ನು ನೀಡಲಾಗುತ್ತದೆ. 2003ರ ಮಾರ್ಚ್ ವೇಳೆಗೆ ಏಳು ಲಕ್ಷಕ್ಕೂ ಅಧಿಕ SHGಗಳು ಸಾಲದ ವ್ಯವಸ್ಥೆಯೊಳಗೆ ಬಂದಿವೆ ಎಂದು ವರದಿಯಾಗಿದೆ. ಇಂತಹ ಸಾಲ ನೀಡಿಕೆಗಳು ಸಾಮಾನ್ಯವಾಗಿ 'ಸೂಕ್ಷ್ಮ ಸಾಲ ಯೋಜನೆಗಳು' ಎಂದು ಉಲ್ಲೇಖಿತವಾಗಿವೆ. SHGಗಳು ಮಹಿಳಾಸಬಲೀಕರಣಕ್ಕೆ ಸಹಾಯ ಮಾಡಿವೆ. ಆದರೆ ಈ ಸಾಲಗಳು ಅನುಭೋಗದ ಉದ್ದೇಶಕ್ಕೆ ಮಾತ್ರ ಸೀಮಿತವಾಗಿವೆ ಎಂದು ಅಪಾದಿಸಲಾಗುತ್ತಿದೆ. ಸಾಲಗಾರರು ಏಕೆ ಉತ್ಪಾದನಾ ಉದ್ದೇಶಗಳಿಗೆ ಈ ಸಾಲವನ್ನು ವ್ಯಯಿಸುತ್ತಿಲ್ಲ?

### ಗ್ರಾಮೀಣ ಬ್ಯಾಂಕ್ ವ್ಯವಸ್ಥೆ–ಒಂದ ವಿಮರ್ಶಾತ್ಮಕ ಮೌಲ್ಯಮಾಪನ (Rural Banking-a critical Appraisal):

ಬ್ಯಾಂಕಿಂಗ್ ವ್ಯವಸ್ಥೆಯು ಗ್ರಾಮೀಣ ವ್ಯವಸಾಯ ಮತ್ತು ವ್ಯವಸಾಯೇತರ ಉತ್ಪನ್ನ ಆದಾಯ ಮತ್ತು ಉದ್ಯೋಗದ ಮೇಲೆ ಧನಾತ್ಮಕ ಪರಿಣಾಮವನ್ನು ಬೀರಿತು. ಅದರಲ್ಲೂ ವಿಶೇಷವಾಗಿ ಹಸಿರುಕ್ರಾಂತಿಯ ನಂತರ ಈ ಧನಾತ್ಮಕ ಪರಿಣಾಮ ಹೆಚ್ಚಾಯಿತು. ಇದು ರೈತರು ಉತ್ಪಾದನಾ ಅಗತ್ಯಗಳನ್ನು ಭರಿಸಲು, ವಿವಿಧ ಸೇವೆಗಳು ಮತ್ತು ಸಾಲ ಸೌಲಭ್ಯಗಳು ಮತ್ತು ವೈವಿಧ್ಯಮಯ ಸಾಲಗಳನ್ನು ಪಡೆಯಲು ಸಹಾಯ ಮಾಡಿತು. ಕ್ಷಾಮ ಅಥವಾ ಬರ ಭೂತಕಾಲದ ಘಟನೆಗಳಾಗಿವೆ. ಈಗ ನಾವು ಆಹಾರ ಭದ್ರತೆಯನ್ನು ಸಾಧಿಸಿದ್ದೇವೆ. ಇದು ಆಹಾರ ಧಾನ್ಯಗಳ ಹೇರಳ ಕಾಪು ದಾಸ್ತಾನು (Buffer Stocks)ಗಳಲ್ಲಿ ಪ್ರತಿಬಿಂಬಿತವಾಗಿದೆ. ಏನೇ ಆದರೂ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಾಗಿಲ್ಲ.

ವಾಣಿಜ್ಯ ಬ್ಯಾಂಕುಗಳನ್ನು ಹೊರತುಪಡಿಸಿ, ಇತರೆ ಔಪಚಾರಿಕ ಸಂಸ್ಥೆಗಳು ಠೇವಣಿ ಸಂಗ್ರಹಣೆ ಮಾಡುವ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವಲ್ಲಿ – ಯೋಗ್ಯ ಸಾಲಗಾರರಿಗೆ ಸಾಲನೀಡಿಕೆ ಮತ್ತು ಪರಿಣಾಮಕಾರಿ ಸಾಲ ವಸೂಲಾತಿಯನ್ನು ಮಾಡುವಲ್ಲಿ ವಿಫಲವಾಗಿವೆ. ಕೃಷಿಸಾಲ ಮರುಪಾವತಿ ಮಾಡದಿರುವವರ ದರವು ಸತತವಾಗಿ ಹೆಚ್ಚುತ್ತಲೇ ಇದೆ. ರೈತರು ಏಕೆ ಸಾಲ ಮರುಪಾವತಿಸುವಲ್ಲಿ ವಿಫಲರಾಗುತ್ತಿದ್ದಾರೆ? ರೈತರು ಉದ್ದೇಶ ಪೂರ್ವಕವಾಗಿ ಸಾಲ ಮರುಪಾವತಿಯನ್ನು ತಿರಸ್ಕರಿಸುತ್ತಿದ್ದಾರೆ ಎಂದು ಆಪಾದಿಸಲಾಗಿದೆ. ಕಾರಣ ಏನಾಗಿರಬಹುದು?

ಹೀಗೆ, ಗ್ರಾಮೀಣ ಬ್ಯಾಂಕಿಂಗ್ ವಲಯದ ವಿಸ್ತರಣೆ ಮತ್ತು ಅಭಿವೃದ್ಧಿಯು ಸುಧಾರಣೆಯ ನಂತರ



### ನೀವೇ ಮಾಡಿರಿ
### (Work These out)

- ➢ ಕಳೆದ ಕೆಲವು ವರ್ಷಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನಿಮ್ಮ ಅಕ್ಕ ಪಕ್ಕದ ಹಳ್ಳಿಗಳಲ್ಲಿ ನೋಡಿರಬಹುದು ಅಥವಾ ದಿನಪತ್ರಿಕೆಗಳಲ್ಲಿ ಓದಿರಬಹುದು. ಅಥವಾ TV ಗಳಲ್ಲಿ ನೋಡಿರಬಹುದು. ಇಂತಹ ಅನೇಕ ರೈತರು ಹಣವನ್ನು ವ್ಯವಸಾಯ ಮತ್ತು ಇತರೆ ಉದ್ದೇಶಗಳಿಗೆ ಸಾಲವಾಗಿ ಪಡೆದಿರುತ್ತಾರೆ. ಬೆಳೆ ವೈಫಲ್ಯದಿಂದಾಗಿ, ಆದಾಯದ ಮತ್ತು ಉದ್ಯೋಗದ ಕೊರತೆಯಿಂದಾಗಿ ಸಾಲವನ್ನು ತೀರಿಸಲು ಸಾಧ್ಯವಾಗದಿದ್ದಾಗ ಅವರು ಇಂತಹ ನಿರ್ಧಾರವನ್ನು ತೆಗೆದುಕೊಂಡಿರುವುದು ತಿಳಿದುಬರುತ್ತದೆ. ಇದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಮತ್ತು ಇದನ್ನು ತರಗತಿಯಲ್ಲಿ ಚರ್ಚಿಸಿ.
- ➢ ಗ್ರಾಮೀಣ ಪ್ರದೇಶಗಳಿಗೆ ಸಾಲ ಒದಗಿಸುವ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕುಗಳಿಗೆ ಭೇಟಿ ಕೊಡಿ. ಅವು ಪ್ರಾಥಮಿಕ ಕೃಷಿ ಸಹಕಾರ ಬ್ಯಾಂಕುಗಳಾಗಿರಬಹುದು. ಭೂ ಅಭಿವೃದ್ಧಿ ಬ್ಯಾಂಕುಗಳಾಗಿರಬಹುದು, ಪ್ರಾದೇಶಿಕ ಗ್ರಾಮೀಣಾ ಬ್ಯಾಂಕುಗಳು, ಜಿಲ್ಲಾ ಸಹಕಾರ ಬ್ಯಾಂಕುಗಳೂ ಆಗಿರಬಹುದು. ಎಷ್ಟು ಗ್ರಾಮೀಣ ಕುಟುಂಬಗಳು ಈ ಬ್ಯಾಂಕುಗಳಿಂದ ಸಾಲ ಪಡೆದಿವೆ, ಮೊತ್ತ ಎಷ್ಟು, ಆಧಾರಗಳೇನು, ಬಡ್ಡಿದರ ಎಷ್ಟು, ಮತ್ತು ಯಾವುದಕ್ಕೆ ಬಳಸಿವೆ, ಬಾಕಿ ಎಷ್ಟು, ಎಂಬುದರ ಬಗ್ಗೆ ವಿವರಗಳನ್ನು ಸಂಗ್ರಹಿಸಿ.
- ➢ ಸಹಕಾರಿ ಬ್ಯಾಂಕುಗಳಿಂದ ಸಾಲ ಪಡೆದಾಗ ರೈತರು ಬೆಳೆ ವೈಫಲ್ಯ ಅಥವಾ ಇತರೆ ಕಾರಣಗಳಿಂದ ಸಾಲ ತೀರಿಸಲಾಗದೇ ಇದ್ದಾಗ ಅವರ ಸಾಲವನ್ನು ಮನ್ನಾ ಮಾಡಬೇಕು ಇಲ್ಲವಾದಲ್ಲಿ ಅವರು ಆತ್ಮಹತ್ಯೆಯಂತಹ ಉಗ್ರ ನಿರ್ಧಾರಕ್ಕೆ ಬರಬೇಕಾಗುತ್ತದೆ. ನೀವು ಇದನ್ನು ಒಪ್ಪುವಿರಾ?

ಹಿಂದೆ ಸರಿದಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ಬ್ಯಾಂಕುಗಳು ತಮ್ಮ ಕಾರ್ಯವೈಖರಿಯನ್ನು ಕೇವಲ ಸಾಲ ನೀಡುವುದಕ್ಕಷ್ಟೇ ಸೀಮಿತವಾಗಿರಿಸದೆ, ಸಾಲಗಾರರ ಜೊತೆ ಬಾಂಧವ್ಯ ಬೆಸೆಯುವ ಕಾರ್ಯಕ್ಕೆ ಬದಲಾಯಿಸಿಕೊಳ್ಳುವ ಅವಶ್ಯಕತೆಯಿದೆ ಎಂದು ಸಲಹೆ ನೀಡಲಾಗಿದೆ. ರೈತರಿಗೂ ಕೂಡ ಮಿತವ್ಯಯ ಸ್ವಭಾವವನ್ನು ಮತ್ತು ಹಣಕಾಸು ಸಂಪನ್ಮೂಲಗಳ ದಕ್ಷ ಬಳಕೆಯನ್ನು ಹೆಚ್ಚಿಸಿಕೊಳ್ಳುವಂತೆ ಪರಿಣಾಮಕಾರಿಯಾಗಿ ತಿಳಿಸಿಕೊಡಬೇಕಾಗಿದೆ.

## 6.4. ಕೃಷಿ ಮಾರುಕಟ್ಟೆ ವ್ಯವಸ್ಥೆ (AGRICULTURAL MARKETING SYSTEM)

ನಾವು ದಿನ ನಿತ್ಯ ಅನುಭೋಗಿಸುವ ಆಹಾರ ಧಾನ್ಯಗಳು, ತರಕಾರಿಗಳು ಮತ್ತು ಹಣ್ಣುಗಳು ದೇಶದ ವಿವಿಧ ಭಾಗಗಳಿಂದ ಹೇಗೆ ಬರುತ್ತವೆ ಎಂಬುದನ್ನು ನೀವು ಎಂದಾದರೂ ನಿಮ್ಮನ್ನು ಕೇಳಿಕೊಂಡಿದ್ದೀರಾ?

ವಿವಿಧ ಪ್ರದೇಶಗಳಿಗೆ ಈ ಸರಕುಗಳು ತಲುಪುವ ತಂತ್ರವು ಮಾರುಕಟ್ಟೆ ಸಾಧನಗಳನ್ನು ಅವಲಂಬಿಸಿದೆ. ಕೃಷಿ ಮಾರುಕಟ್ಟೆ ವ್ಯವಸ್ಥೆಯು ದೇಶಾದ್ಯಂತ ವಿವಿಧ ಕೃಷಿ ಉತ್ಪನ್ನಗಳನ್ನು ಒಟ್ಟುಗೂಡಿಸುವ, ಸಂಗ್ರಹಿಸುವ, ಸಂಸ್ಕರಿಸುವ, ವರ್ಗೀಕರಿಸುವ, ಪ್ಯಾಕ್ ಮಾಡುವ ಮತ್ತು ಸಾಗಾಟದ ಮೂಲಕ ವಿತರಿಸುವ ಒಂದು ಪ್ರಕ್ರಿಯೆಯಾಗಿದೆ.

ಸ್ವತಂತ್ರ ಪೂರ್ವದಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ವ್ಯಾಪಾರಿಗಳಿಗೆ ಮಾರಾಟ ಮಾಡುವಾಗ, ತಪ್ಪು ತೂಕ ಮತ್ತು ಲೆಕ್ಕ ತಿರುಚುವುದರಿಂದ ತೊಂದರೆ ಅನುಭವಿಸುತ್ತಿದ್ದರು. ರೈತರು ಮಾರುಕಟ್ಟೆಯಲ್ಲಿ ದೊರೆಯುವ ಬೆಲೆಗಳ ಬಗ್ಗೆ ಸರಿಯಾದ ಮಾಹಿತಿ ಸಿಗದೇ ಅವರು ಅನೇಕ ಬಾರಿ ಒತ್ತಾಯ ಪೂರ್ವಕವಾಗಿ ತಮ್ಮ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಬರುವವರೆಗೂ ಕಾದು ಮಾರಾಟ ಮಾಡಲು ಅವರು ಉತ್ತಮ ದಾಸ್ತಾನು ಮಳಿಗೆಗಳ (ಉಗ್ರಾಣ) ಸೌಲಭ್ಯವನ್ನೂ ಹೊಂದಿರಲಿಲ್ಲ. ಇಂದಿಗೂ ಶೇಕಡ 10ಕ್ಕಿಂತಲೂ ಅಧಿಕ ಕೃಷಿ ಉತ್ಪನ್ನವು ದಾಸ್ತಾನು ಮಳಿಗೆಯ ಕೊರತೆಯಿಂದಾಗಿ ವ್ಯರ್ಥವಾಗುತ್ತಿದೆ. ಆದುದ್ದರಿಂದ ಖಾಸಗಿ ವ್ಯಾಪಾರಿಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಸರ್ಕಾರದ ಮಧ್ಯ ಪ್ರವೇಶ ಅಗತ್ಯವಾಯಿತು ಎಂಬುದು ನಿಮಗೆ ಗೊತ್ತೆ?

ನಾವೀಗ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸುವಂತಹ ನಾಲ್ಕು ಕ್ರಮಗಳನ್ನು ಚರ್ಚಿಸೋಣ. ಮೊದಲ ಹೆಜ್ಜೆಯಾಗಿ ಕ್ರಮಬದ್ಧವಾದ ಮತ್ತು ಪಾರದರ್ಶಕ ಮಾರುಕಟ್ಟೆ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಮಾರುಕಟ್ಟೆಗಳನ್ನು ನಿಯಂತ್ರಿಸುವುದು. ಒಟ್ಟಾರೆ ಈ ನೀತಿಯು ರೈತರಿಗೂ ಹಾಗೂ ಗ್ರಾಹಕರಿಗೂ ಲಾಭ ತಂದುಕೊಟ್ಟಿತು. ಏನೇ ಆದರೂ, ಗ್ರಾಮೀಣ ಮಾರುಕಟ್ಟೆಗಳ ಪೂರ್ಣ ಸಾಮರ್ಥ್ಯವನ್ನು ಸಿದ್ಧಿಸಿಕೊಳ್ಳಲು ಸುಮಾರು 27.000 ಗ್ರಾಮೀಣ ನಿಯತಕಾಲಿಕ



ಚಿತ್ರ 6.1: ರೈತರು ಹಾಗೆಯೇ ಅನುಬೋಗಿಗಳಿಗೆ ಲಾಭದಾಯಕ ನಿಯಂತ್ರಿತ ಮಾರುಕಟ್ಟೆ

## ನೀವೇ ಮಾಡಿರಿ
## (Work These out)

- ನಿಮ್ಮ ಹತ್ತಿರದ ತರಕಾರಿ ಮತ್ತು ಹಣ್ಣಿನ ಮಾರುಕಟ್ಟೆಗೆ ಭೇಟಿ ನೀಡಿ. ಆ ಮಾರುಕಟ್ಟೆಯ ವಿವಿಧ ಲಕ್ಷಣಗಳನ್ನು ಗುರುತಿಸಿ ಮತ್ತು ಗಮನಿಸಿ. ಕೊನೆ ಪಕ್ಷ ಹತ್ತು ವಿವಿಧ ಹಣ್ಣುಗಳು ಮತ್ತು ತರಕಾರಿಗಳು ಎಲ್ಲಿ ಬೆಳೆಯಲ್ಪಡುತ್ತವೆ ಮತ್ತು ಮಾರುಕಟ್ಟೆಯನ್ನು ತಲುಪಲು ಎಷ್ಟು ದೂರ ಪ್ರಯಾಣಿಸಬೇಕಾಗುತ್ತದೆ ಎಂಬುದನ್ನು ಪತ್ತೆಹಚ್ಚಿ. ನಂತರ ಅವುಗಳು ಯಾವ ಪ್ರಕಾರದ ಸಾರಿಗೆಯ ಸಾಧನಗಳ ಮೂಲಕ ಬರುತ್ತವೆ ಮತ್ತು ಬೆಲೆಯ ಮೇಲೆ ಅವುಗಳು ಬೀರುವ ಪ್ರಭಾವವೇನು ಎಂಬುದನ್ನು ತಿಳಿಯಲು ಪ್ರಯತ್ನಿಸಿ.
- ಬಹುತೇಕ ಸಣ್ಣ ನಗರಗಳು ನಿಯಂತ್ರಿತ ಮಾರುಕಟ್ಟೆ ಯಾರ್ಡ್‌ನ್ನು ಹೊಂದಿವೆ. ರೈತರು ಈ ಮಾರುಕಟ್ಟೆಗಳಿಗೆ ಹೋಗಿ ತಮ್ಮ ಉತ್ಪನ್ನಗಳನ್ನು ಮಾರಬಹುದು. ಅಲ್ಲದೆ ಅವರು ತಮ್ಮ ಸರಕುಗಳನ್ನು ಅಲ್ಲಿ ಸಂಗ್ರಹಿಸಬಹುದು. ಅಂತಹ ಒಂದು ನಿಯಂತ್ರಿತ ಮಾರುಕಟ್ಟೆಗೆ ಭೇಟಿ ನೀಡಿ ಅದರ ಕಾರ್ಯ ವೈಖರಿ ಮತ್ತು ಯಾವ ವಿಧದ ಸರಕುಗಳು ಬರುತ್ತವೆ ಮತ್ತು ಬೆಲೆಗಳು ಹೇಗೆ ನಿರ್ಧರಿಸಲ್ಪಡುತ್ತವೆ ಎಂಬ ವಿವರಗಳನ್ನು ಸಂಗ್ರಹಿಸಿ.

ಮಾರುಕಟ್ಟೆಗಳನ್ನು ನಿಯಂತ್ರಿತ ಮಾರುಕಟ್ಟೆಗಳನ್ನಾಗಿ ಅಭಿವೃದ್ಧಿ ಪಡಿಸುವ ಅಗತ್ಯವಿದೆ. ಎರಡನೇ ಅಂಶವೆಂದರೆ, ಭೌತಿಕ ಮೂಲಸೌಕರ್ಯಗಳಾದ ರಸ್ತೆಗಳು, ರೈಲ್ವೆಗಳು, ದಾಸ್ತಾನು ಮಳಿಗೆಗಳು, ಉಗ್ರಾಣಗಳು, ಶೈತ್ಯಾಗಾರ ಸಂಗ್ರಹಗಳು ಮತ್ತು ಸಂಸ್ಕರಣಾ ಘಟಕಗಳ ಸೌಲಭ್ಯವನ್ನು ಪೂರೈಸುವುದು. ಪ್ರಸ್ತುತ ಮೂಲಸೌಕರ್ಯಗಳು ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲಾಗುತ್ತಿಲ್ಲ ಮತ್ತು ಅವುಗಳನ್ನು ಸುಧಾರಿಸುವ ಅಗತ್ಯವಿದೆ. ರೈತರ ಉತ್ಪನ್ನಗಳಿಗೆ ನ್ಯಾಯ ಬೆಲೆಯನ್ನು ಒದಗಿಸುವ ಸಹಕಾರ ಮಾರುಕಟ್ಟೆ ವ್ಯವಸ್ಥೆಯ ಸ್ಥಾಪನೆಯು ಸರ್ಕಾರದ ಮೂರನೇ ಕ್ರಮವಾಗಿದೆ. ಗುಜರಾತ್ ಮತ್ತು ದೇಶದ ಇತರೆ ಹಲವು ಭಾಗಗಳ ಸಾಮಾಜಿಕ ಮತ್ತು ಆರ್ಥಿಕ ವಾತಾವರಣವನ್ನೇ ಪರಿವರ್ತನೆ ಮಾಡಿದ ಹಾಲು ಸಹಕಾರ ಸಂಘಗಳ ಯಶಸ್ವಿಯು, ಸಹಕಾರ ಸಂಘಗಳ ಪ್ರಮುಖ ಪಾತ್ರಕ್ಕೆ ಪುರಾವೆ (ಸಾಕ್ಷಿ)ಯಾಗಿದೆ. ಆದರೂ ಸಹಕಾರ ಸಂಘಗಳು ಇತ್ತೀಚೆಗೆ ಸಾಕಷ್ಟು ರೈತ ಸದಸ್ಯರ ಕೊರತೆ, ಮಾರುಕಟ್ಟೆ ಮತ್ತು ಸಂಸ್ಕರಣ ಸಹಕಾರ ಸಂಘಗಳ ನಡುವಿನ ಸಮನ್ವಯತೆಯ ಕೊರತೆ ಮತ್ತು ಅಸಮರ್ಥ ಹಣಕಾಸು ನಿರ್ವಹಣಾ ವ್ಯವಸ್ಥೆಯಿಂದ ಹಿನ್ನೆಡೆಯನ್ನು ಅನುಭವಿಸಿವೆ. ನಾಲ್ಕನೇ ಅಂಶವೆಂದರೆ, ನೀತಿ ಸಾಧನಗಳಾದ (i) ಭಾರತೀಯ ಆಹಾರ ನಿಗಮ (FCI)ದಿಂದ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಯ ಆಶ್ವಾಸನೆ (ii) (FCI) ಭಾರತೀಯ ಆಹಾರ ನಿಗಮ (ii) ಮೂಲಕ ಗೋಧಿ ಮತ್ತು ಅಕ್ಕಿಯ ಕಾಪು ದಾಸ್ತಾನು (Buffer Stock) ನಿರ್ವಹಣೆ (iii) ಪಡಿತರ ಪದ್ಧತಿ (PDS) ಯ ಮೂಲಕ ಆಹಾರಧಾನ್ಯ ಮತ್ತು ಸಕ್ಕರೆಯ ವಿತರಣೆ ಈ ಸಾಧನಗಳು ರೈತರ ಆದಾಯವನ್ನು ಸಂರಕ್ಷಿಸುವ ಮತ್ತು ಬಡವರಿಗೆ ಆಹಾರ ಧಾನ್ಯಗಳನ್ನು ಕಡಿಮೆ ದರದಲ್ಲಿ ಪೂರೈಸುವ ಗುರಿಯನ್ನಿಟ್ಟುಕೊಂಡಿವೆ. ಏನೇ ಆದರೂ ಸರ್ಕಾರದ ಮಧ್ಯಪ್ರವೇಶದ ಹೊರತಾಗಿಯೂ, ಖಾಸಗಿ ವ್ಯಾಪಾರ (ಲೇವಾದೇವಿಗಾರರು, ಗ್ರಾಮೀಣ ರಾಜಕೀಯ ದುರೀಣರು, ದೊಡ್ಡ ವಾಣಿಜ್ಯೋದ್ಯಮಿಗಳು ಮತ್ತು ಶ್ರೀಮಂತ ರೈತರುಗಳಿಂದ) ಕೃಷಿ ಮಾರುಕಟ್ಟೆಯಲ್ಲಿ ಮೇಲುಗೈ ಸಾಧಿಸಿದೆ. ವಿಶೇಷವಾಗಿ ಕೃಷಿ ಉತ್ಪನ್ನದ ಬಹುಪಾಲು ವ್ಯಾಪಾರ ಖಾಸಗಿ ವಲಯದ ಹಿಡಿತದಲ್ಲಿರುವಾಗ, ಸರಕಾರದ ಮಧ್ಯಪ್ರವೇಶ ಅನಿವಾರ್ಯವಾಗಿದೆ.

ಕೃಷಿ ಮಾರುಕಟ್ಟೆಯು ವಿವಿಧ ರೀತಿಯ ಸರ್ಕಾರದ ಮಧ್ಯಸ್ಥಿಕೆಯೊಂದಿಗೆ ಬಹಳ ದೂರ ಸಾಗಿಬಂದಿದೆ. ಆದರೆ ಕೆಲವು ವಿದ್ವಾಂಸರು ಕೃಷಿ ವಾಣಿಜ್ಯೀಕರಣವು ರೈತರಿಗೆ ಅಧಿಕ ಆದಾಯವನ್ನು ಗಳಿಸಿಕೊಡುವ ಅದ್ಭುತ ಅವಕಾಶವನ್ನು ಒದಗಿಸುವುದರಿಂದ ಸರ್ಕಾರದ ಮಧ್ಯಸ್ಥಿಕೆಯನ್ನು ನಿರ್ಬಂಧಿಸಬೇಕೆಂದು ವಾದಿಸುತ್ತಾರೆ. ಈ ಅಭಿಪ್ರಾಯದ ಬಗ್ಗೆ ನಿಮ್ಮ ಅನಿಸಿಕೆ ಏನು?

### ಪರ್ಯಾಯ ಮಾರುಕಟ್ಟೆ ವಾಹಿನಿಗಳ ಉದಯ (Emerging Alternate Marketing Channels):

ರೈತರು ತಮ್ಮ ಉತ್ಪನ್ನವನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಿದರೆ ಅವರ ಆದಾಯ ಹೆಚ್ಚುತ್ತದೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಇಂತಹ ಪರ್ಯಾಯ ಮಾರುಕಟ್ಟೆ ವಾಹಿನಿಗಳಿಗೆ ಕೆಲವು ಉದಾಹರಣೆಯೆಂದರೆ,

ಅಪನೀ ಮಂಡಿ (ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನ) ಹಡಸ್ಪಾರ್ ಮಂಡಿ (ಪುಣೆ); ರೈತುಬಜಾರ್ (ಆಂಧ್ರದ ತರಕಾರಿ ಮತ್ತು ಹಣ್ಣುಗಳ ಮಾರುಕಟ್ಟೆ), ಉಜ್ವಾರ್ ಶಾಂಡಿ (ತಮಿಳುನಾಡಿನ ರೈತರ ಮಾರುಕಟ್ಟೆ) ಇದರೊಂದಿಗೆ ಹಲವು ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಶೀಘ್ರ ಆಹಾರೋತ್ಪನ್ನ ಕಂಪನಿ (Fast Food Chains) ಗಳು ರೈತರೊಂದಿಗೆ ಒಪ್ಪಂದ ಮಾಡಿಕೊಂಡು ಅಪೇಕ್ಷಿತ ಗುಣಮಟ್ಟದ ವ್ಯವಸಾಯೋತ್ಪನ್ನಗಳನ್ನು (ತರಕಾರಿ, ಹಣ್ಣು, ಇತ್ಯಾದಿ) ಬೆಳೆಯಲು ಅವರಿಗೆ ಉತ್ತಮ ಬಿತ್ತನೆ ಬೀಜಗಳನ್ನು ಮತ್ತು ಇತರೆ ಆದಾನಗಳನ್ನು ಒದಗಿಸುವುದಷ್ಟೇ ಅಲ್ಲದೆ, ಉತ್ಪನ್ನಗಳನ್ನು ಪೂರ್ವನಿರ್ಧರಿತ ಬೆಲೆಗೆ ಶೇಖರಿಸುವ ಆಶ್ವಾಸನೆಯೊಂದಿಗೆ ಪ್ರೋತ್ಸಾಹಿಸುತ್ತಿವೆ. ಇಂತಹ ಏರ್ಪಾಡುಗಳು ರೈತರ ಬೆಲೆ ಇಳಿಕೆ (Price risk) ಯ ತೊಂದರೆಯನ್ನು ಕಡಿಮೆ ಮಾಡುತ್ತವೆ ಮತ್ತು ವ್ಯವಸಾಯೋತ್ಪನ್ನಗಳಿಗೆ ಮಾರುಕಟ್ಟೆಗಳು ವಿಸ್ತರಿಸಲ್ಪಡುತ್ತವೆ ಎಂದು ವಾದಿಸಲಾಗುತ್ತಿದೆ. ಇಂತಹ ಏರ್ಪಾಡುಗಳು ಸಣ್ಣ ರೈತರ ಆದಾಯವನ್ನು ಹೆಚ್ಚಿಸುತ್ತವೆ ಎಂದು ನಿಮಗನಿಸುತ್ತದೆಯೇ?

**ನೀವೇ ಮಾಡಿರಿ**
**(Work These out)**

➤ ನಿಮ್ಮ ಸ್ಥಳೀಯ ಪ್ರದೇಶದಲ್ಲಿರುವ ಅಥವಾ ಪಕ್ಕದ ಊರಿನಲ್ಲಿರುವ ಒಂದು ಪರ್ಯಾಯ ಮಾರುಕಟ್ಟೆಗೆ ಭೇಟಿ ನೀಡಿ. ಈ ಮಾರುಕಟ್ಟೆಗಳು ಹೇಗೆ ನಿಯಂತ್ರಿತ ಮಾರುಕಟ್ಟೆಗಳಿಂದ ಭಿನ್ನವಾಗಿವೆ? ಇವು ಸರ್ಕಾರದಿಂದ ಉತ್ತೇಜನ ಮತ್ತು ಬೆಂಬಲವನ್ನು ಪಡೆಯಬೇಕೆ? ಏಕೆ ಮತ್ತು ಹೇಗೆ? ಚರ್ಚಿಸಿ.

## 6.5 ಉತ್ಪಾದನೆ ಚಟುವಟಿಕೆಗಳತ್ತ ವೈವಿಧ್ಯೀಕರಣಃ (DIVERSIFICATION INTO PRODUCTIVE ACTIVITIES)

ವೈವಿಧ್ಯೀಕರಣವು ಎರಡು ಆಯಾಮಗಳನ್ನು ಒಳಗೊಂಡಿದೆ: ಒಂದು, ಬೆಳೆ ಮಾದರಿಯ ಬದಲಾವಣೆಗೆ ಸಂಬಂಧಿಸಿರುತ್ತದೆ. ಮತ್ತು ಇನ್ನೊಂದು ಶ್ರಮವನ್ನು ಕೃಷಿಯಿಂದ ಇತರೆ ಸಂಬಂಧಿತ ಚಟುವಟಿಕೆಗಳು (ಪಶುಸಂಗೋಪನೆ, ಕೋಳಿ ಸಾಕಣೆ, ಮೀನುಗಾರಿಕೆ ಇತ್ಯಾದಿ) ಮತ್ತು ಕೃಷಿಯೇತರ ವಲಯಕ್ಕೆ ಬದಲಾಯಿಸುವುದಕ್ಕೆ ಸಂಬಂಧಿಸಿದೆ. ಜೀವನಾಧಾರಕ್ಕಾಗಿ ವ್ಯವಸಾಯವನ್ನು ಅವಲಂಬಿಸಿರುವುದು ತುಂಬಾ ಅಪಾಯಕಾರಿಯಾಗುವುದರಿಂದ, ವೈವಿಧ್ಯೀಕರಣದ ಅಗತ್ಯತೆಯು ಉದ್ಭವಿಸುತ್ತದೆ. ಕೃಷಿ ವಲಯದ ಗಂಡಾಂತರಗಳನ್ನು ಕಡಿಮೆ ಮಾಡುವುದಷ್ಟೇ ಅಲ್ಲದೆ ಗ್ರಾಮೀಣ ಜನರ ಸುಸ್ಥಿರ ಫಲದಾಯಕ ಜೀವನಾಧಾರದ ಆಯ್ಕೆಯನ್ನು ಒದಗಿಸಲು ಹೊಸ ಕ್ಷೇತ್ರಗಳೆಡೆಗೆ ವೈವಿಧ್ಯೀಕರಣಗೊಳ್ಳುವ ಅವಶ್ಯಕತೆಯಿದೆ. ಬಹಳಷ್ಟು ಕೃಷಿ ಉದ್ಯೋಗದ ಚಟುವಟಿಕೆಗಳು ಮುಂಗಾರು ಋತುವಿನಲ್ಲಿ ಕೇಂದ್ರಿಕೃತವಾಗಿರುತ್ತವೆ. ಆದರೆ ಹಿಂಗಾರು ಋತುವಿನಲ್ಲಿ ನೀರಾವರಿ ಸೌಕರ್ಯಗಳ ಕೊರತೆಯಿರುವ ಪ್ರದೇಶಗಳಲ್ಲಿ ಲಾಭದಾಯಕ ಉದ್ಯೋಗವನ್ನು ಹುಡುಕಿಕೊಳ್ಳುವುದು ತುಂಬಾ ಕಷ್ಟಕರವಾಗಿರುತ್ತದೆ. ಆದುದರಿಂದ ಬಡತನ ಮತ್ತು ಇತರೆ ಕಷ್ಟಗಳಿಂದ ಹೊರಬರಲು ಗ್ರಾಮೀಣ ಜನರು ಲಾಭದಾಯಕ ಪೂರಕ ಉದ್ಯೋಗ ಮತ್ತು ಆದಾಯ ಪಡೆಯುವುದಕ್ಕಾಗಿ, ಇತರೆ ವಲಯಗಳತ್ತ ಗಮನ ಹರಿಸುವ ಅಗತ್ಯವಿದೆ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸುಸ್ಥಿರ ಜೀವನಾಧಾರವನ್ನು ಒದಗಿಸುವ ಹಲವಾರು ಆಯ್ಕೆಗಳು ಲಭ್ಯವಿದ್ದರೂ ಕೃಷಿ ಸಂಬಂಧಿ ಚಟುವಟಿಕೆಗಳು, ಕೃಷಿಯೇತರ ಉದ್ಯೋಗ ಮತ್ತು ಇತರೆ ಉದಯಿಸುತ್ತಿರುವ ಜೀವನಾಧಾರ ಪರ್ಯಾಯಗಳತ್ತ ಗಮನ ಹರಿಸುವ ಅಗತ್ಯವಿದೆ.



ಚಿತ್ರ 6.2: ಬೆಲ್ಲ ತಯಾರಿಕೆ ಕೃಷಿವಲಯದ ಒಂದು ಸಂಬಂಧಿತ ಚಟುವಟಿಕೆ

**ಪೆಟ್ಟಿಗೆ 6.2 ಕೃಷಿಯಲ್ಲಿ ತಮಿಳುನಾಡಿನ ಮಹಿಳೆ (TANWA)**

ಆಧುನಿಕ ಕೃಷಿ ತಂತ್ರಜ್ಞಾನದಲ್ಲಿ ಹೆಣ್ಣು ಮಕ್ಕಳಿಗೆ ತರಬೇತಿ ನೀಡಲು TANWA ಒಂದು ಕಾರ್ಯಕ್ರಮವಾಗಿ ತಮಿಳುನಾಡಿನಲ್ಲಿ ಪ್ರಾರಂಭವಾಗಿದೆ. ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಕುಟುಂಬದ ಆದಾಯವನ್ನು ಹೆಚ್ಚಿಸಲು ಮಹಿಳೆಯರು ಕ್ರಿಯಾತ್ಮಕವಾಗಿ ಭಾಗವಹಿಸಿಬೇಕೆಂದು ಈ ಕಾರ್ಯಕ್ರಮವು ಪ್ರೋತ್ಸಾಹಿಸುತ್ತದೆ. ತಿರುಚಿರಾಪಲ್ಲಿಯಲ್ಲಿರುವ ಮಹಿಳಾ ವ್ಯವಸಾಯ ಗುಂಪನ್ನು ಆಂತೋಣಿಯಮ್ಮಾಳ್ ಎಂಬುವವರು ನಡೆಸುತ್ತಿದ್ದು, ತರಬೇತಾದ ಹೆಣ್ಣು ಮಕ್ಕಳು, ಎರೆಹುಳ್ಳು ಗೊಬ್ಬರ (Vermi compost) ವನ್ನು ತಯಾರಿಸಿ ಮಾರಾಟ ಮಾಡಿ ಆದಾಯವನ್ನು ಗಳಿಸುತ್ತಿದ್ದಾರೆ. ಹಲವು ಇತರ ಮಹಿಳಾಗುಂಪುಗಳು ಸೂಕ್ಷ್ಮ ಸಾಲ ಯೋಜನೆಗಳ ಮೂಲಕ ಸಣ್ಣ ಬ್ಯಾಂಕುಗಳನ್ನು ಕಾರ್ಯಗತಗೊಳಿಸಿ ಉಳಿತಾಯ ಸಂಗ್ರಹಣೆಯನ್ನು ಹೆಚ್ಚಿಸುತ್ತಿವೆ. ಈ ರೀತಿ ಸಂಗ್ರಹವಾದ ಉಳಿತಾಯದೊಂದಿಗೆ ಅವರು ಸಣ್ಣ ಪ್ರಮಾಣದ ಕುಟುಂಬ ಚಟುವಟಿಕೆಗಳಾದ ಅಣಬೆ ಬೇಸಾಯ, ಸೋಪು ತಯಾರಿಕೆ, ಗೊಂಬೆ ತಯಾರಿಕೆ ಅಥವಾ ಇತರೆ ಆದಾಯವನ್ನು ಸೃಷ್ಟಿಸುವ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ.

ಕೃಷಿಯು ಈಗಾಗಲೇ ಜನಭರಿತವಾಗಿರುವುದರಿಂದ, ಹೆಚ್ಚುತ್ತಿರುವ ಶ್ರಮಶಕ್ತಿಯ ಹೆಚ್ಚಿನ ಪಾಲು ಇತರೆ ಕೃಷಿಯೇತರ ವಲಯಗಳಲ್ಲಿ ಪರ್ಯಾಯ ಉದ್ಯೋಗವಕಾಶಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಕೃಷಿಯೇತರ ವಲಯವು ಹಲವಾರು ಭಾಗಗಳನ್ನು ಹೊಂದಿದೆ. ಅವುಗಳಲ್ಲಿ ಕೆಲವು ಕ್ರಿಯಾತ್ಮಕ ಜೋಡಣೆಗಳನ್ನು ಹೊಂದಿದ್ದು ತಮ್ಮಲ್ಲಿ ಆರೋಗ್ಯಕರ ಬೆಳವಣಿಗೆಗೆ ಅವಕಾಶ ಕೊಡುತ್ತವೆ. ಮತ್ತೆ ಕೆಲವು ಜೀವನಾಧಾರವಾಗಿದ್ದು ಕಡಿಮೆ ಉತ್ಪಾದಕತೆಯ ಯೋಜನೆಗಳಾಗಿವೆ. ಕ್ರಿಯಾತ್ಮಕ ಉಪವಿಭಾಗವು ಕೃಷಿ–ಸಂಸ್ಕರಣೆ ಕೈಗಾರಿಕೆ, ಆಹಾರ ಸಂಸ್ಕರಣೆ ಕೈಗಾರಿಕೆ, ಚರ್ಮೋದ್ಯಮ, ಪ್ರವಾಸೋದ್ಯಮ ಇತ್ಯಾದಿಗಳನ್ನು ಒಳಗೊಳ್ಳುತ್ತದೆ. ಆದರೆ ಸಾಮರ್ಥ್ಯವಿದ್ದೂ ಮೂಲಸೌಕರ್ಯ ಮತ್ತು ಇತರೆ ಉತ್ತೇಜನಗಳ ಕೊರತೆಯನ್ನು ಎದುರಿಸುತ್ತಿರುವ ಅಂತಹ ವಲಯಗಳೆಂದರೆ ಸಾಂಪ್ರದಾಯಿಕ ಗೃಹಕೈಗಾರಿಕೆಗಳಾದ ಕುಂಬಾರಿಕೆ ಕರಕುಶಲಗಾರಿಕೆ, ಕೈಮಗ್ಗಗಳು ಇತ್ಯಾದಿ. ಸಾಮಾನ್ಯವಾಗಿ ಗ್ರಾಮೀಣ ಪುರುಷರು ಕೃಷಿಯೇತರ ಉದ್ಯೋಗಗಳತ್ತ ಒಲವನ್ನು ತೋರಿಸುತ್ತಿರುವಾಗ, ಬಹಳಷ್ಟು ಗ್ರಾಮೀಣ ಮಹಿಳೆಯರು ಕೃಷಿಯಲ್ಲಿ ಉದ್ಯೋಗವನ್ನು ಕಂಡು ಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರೂ ಸಹ ಕೃಷಿಯೇತರ ಕೆಲಸಗಳತ್ತ ಒಲವು ತೋರಿಸುತ್ತಿದ್ದಾರೆ.

### ಪಶುಸಂಗೋಪನೆ (Animal husbandry or live stock):

ಭಾರತದಲ್ಲಿ ಕೃಷಿ ಸಮುದಾಯವು ಮಿಶ್ರಬೆಳೆ–ಪಶುಸಂಗೋಪನೆ ಪದ್ಧತಿಗಳನ್ನು ಬಳಕೆ ಮಾಡಿಕೊಳ್ಳುತ್ತಿದೆ. ಪಶುಸಂಗೋಪನೆಯಲ್ಲಿ ದನಕರುಗಳು, ಕುರಿ, ಮೇಕೆ, ಕೋಳಿ, ಇತ್ಯಾದಿಗಳನ್ನು ಹೆಚ್ಚಾಗಿ ಸಾಕಲಾಗಿತ್ತಿದೆ. ಪಶುಸಂಗೋಪನಾ ಉತ್ಪನ್ನವು ಆಹಾರ ಉತ್ಪಾದನಾ ಚಟುವಟಿಕೆಗಳಿಗೆ ಧಕ್ಕೆ ಉಂಟು ಮಾಡದೆ ಕುಟುಂಬದ ಆದಾಯದಲ್ಲಿ ಸ್ಥಿರತೆಯನ್ನು ಹೆಚ್ಚಿಸುತ್ತದೆ, ಆಹಾರ ಭದ್ರತೆ, ಪೌಷ್ಟಿಕತೆ, ಸಾರಿಗೆ ಮತ್ತು ಇಂಧನಗಳನ್ನು ಒದಗಿಸುತ್ತದೆ. ಇಂದು 70 ದಶಲಕ್ಷ (Million) ಸಣ್ಣ ಮತ್ತು ಭೂರಹಿತ ಕಾರ್ಮಿಕರನ್ನೊಳಗೊಂಡಂತೆ ಅತಿ ಸಣ್ಣ ರೈತರಿಗೆ ಪಶುಸಂಗೋಪನೆ ವಲಯವೊಂದೇ ಪರ್ಯಾಯ ಜೀವನಾಧಾರದ ಆಯ್ಕೆಯನ್ನು ಒದಗಿಸುತ್ತಿದೆ. ಪಶು ಸಂಗೋಪನೆಯಲ್ಲಿ ಮಹಿಳೆಯರೂ ಸಹ ಗಮನಾರ್ಹ ಸಂಖ್ಯೆಯಲ್ಲಿ ಉದ್ಯೋಗವನ್ನು ಕಂಡುಕೊಂಡಿದ್ದಾರೆ.

ಪಟ 6.1 ಭಾರತದಲ್ಲಿ ಪಶು ಸಂಗೋಪನೆಯ ವಿತರಣೆಯನ್ನು ತೋರಿಸುತ್ತದೆ. ಕೋಳಿ ಸಾಕಾಣೆಯು ಶೇಕಡ 58 ರಷ್ಟು ಅತ್ಯಧಿಕ ಪಾಲನ್ನು ಹೊಂದಿದ್ದು ನಂತರ




**ಪಟ 6.1: ಭಾರತದಲ್ಲಿ ಕೋಳಿಸಾಕಣೆ ಮತ್ತು ಪಶುಸಂಗೋಪನೆಯ ಹಂಚಿಕೆ, 2012**

ಉಳಿದವುಗಳು ಬರುತ್ತವೆ. ಇತರೆ ಪ್ರಾಣಿಗಳಾದ ಒಂಟೆಗಳು, ಕತ್ತೆಗಳು, ಕುದುರೆಗಳು, ಸಣ್ಣ ಕುದುರೆಗಳು (Ponies) ಹಾಗೂ ಹೇಸರಗತ್ತೆ ಮುಂತಾದವುಗಳು ಕೊನೆಯ ಮೆಟ್ಟಿಲುಗಳಲ್ಲಿವೆ. 2012ರಲ್ಲಿ ಭಾರತ 108 ಮಿಲಿಯನ್ ಎಮ್ಮೆಗಳನ್ನೊಗೊಂಡಂತೆ 300 ಮಿಲಿಯನ್ ದನಕರುಗಳನ್ನು ಹೊಂದಿತ್ತು. ಕಳೆದ ಮೂರು ದಶಕಗಳಿಂದ ಭಾರತೀಯ ಹೈನು ಉದ್ಯಮವು (Dairy) ಸಾಕಷ್ಟು ಪ್ರಭಾವಯುತವಾಗಿ ಬೆಳೆದಿದೆ. 1960–2002ರ ಅವಧಿಯಲ್ಲಿ ದೇಶದಲ್ಲಿ ಹಾಲು ಉತ್ಪನ್ನದಲ್ಲಿ ಐದು ಪಟ್ಟು ಹೆಚ್ಚಳವಾಗಿದೆ. ಇದರ ಮುಖ್ಯ ಶ್ರೇಯಸ್ಸು 'ಆಪರೇಷನ್ ಫ್ಲಡ್'ನ ಯಶಸ್ವಿ ಅನುಷ್ಠಾನಕ್ಕೆ ಸಲ್ಲುತ್ತದೆ. ಈ ವ್ಯವಸ್ಥೆಯಲ್ಲಿ ರೈತರೆಲ್ಲರೂ ಹಾಲು ಉತ್ಪನ್ನವನ್ನು ಒಟ್ಟಾಗಿ ಸಂಗ್ರಹಿಸುತ್ತಾರೆ ಮತ್ತು ವಿವಿಧ ಗ್ರೇಡ್‌ಗಳಾಗಿ – ಗುಣಮಟ್ಟದ ಆಧಾರದ ಮೇಲೆ ವಿಂಗಡಿಸಿ ಸಹಕಾರಿ ಸಂಸ್ಥೆಗಳ ಮೂಲಕ ಸಂಸ್ಕರಿಸಿ ನಗರಕೇಂದ್ರಗಳಲ್ಲಿ ಮಾರಾಟ ಮಾಡಲಾಗುತ್ತದೆ. ಈ ಪದ್ಧತಿಯಲ್ಲಿ ರೈತರು ಹಾಲನ್ನು ನಗರ ಮಾರುಕಟ್ಟೆಗಳಿಗೆ ಪೂರೈಸುವುದರಿಂದ ನ್ಯಾಯಬೆಲೆಯ ಭರವಸೆಯನ್ನು ಪಡೆಯುತ್ತಾರೆ. ಈಗಾಗಲೇ ತಿಳಿಸಿರುವಂತೆ ಗುಜರಾತ್ ರಾಜ್ಯದ ಹಾಲು ಉತ್ಪನ್ನ ಸಹಕಾರ ಸಂಘಗಳ ಸಮರ್ಥ ಅನುಷ್ಠಾನದ ಯಶೋಗಾಥೆಯನ್ನು ಹಲವು ರಾಜ್ಯಗಳು ಅನುಸರಿಸಿವೆ. ಮಾಂಸ, ಮೊಟ್ಟೆ, ಉಣ್ಣೆ ಮತ್ತು ಇತರೆ ಉಪ ಉತ್ಪನ್ನಗಳು ವೈವಿಧ್ಯೀಕರಣಕ್ಕೆ ಪ್ರಮುಖ ಉತ್ಪಾದಕ ವಲಯಗಳಾಗಿ ಉದಯಿಸುತ್ತಿವೆ.



**ಚಿತ್ರ 6.3 ಕುರಿ ಸಾಕಣೆ–ಗ್ರಾಮೀಣ ಪ್ರದೇಶಗಳಲ್ಲಿ ಒಂದು ಪ್ರಮುಖ ಆದಾಯ ವೃದ್ಧಿಸುವ ಚಟುವಟಿಕೆ**

### ಮೀನುಗಾರಿಕೆ (Fisheries):

ಮೀನುಗಾರ ಸಮುದಾಯವು ಜಲಸಂಪನ್ಮೂಲವನ್ನು 'ತಾಯಿ' ಅಥವಾ 'ಕಾಮಧೇನುವಿನಂತೆ' ಪರಿಗಣಿಸಿದೆ. ಸಮುದ್ರ, ಸಾಗರ, ನದಿಗಳು, ಸರೋವರಗಳು, ನೈಸರ್ಗಿಕ ನೀರಿನ ಕೊಳಗಳು, ಝರಿಗಳು (Streams) ಹಳ್ಳಗಳು ಇತ್ಯಾದಿಗಳನ್ನು ಒಳಗೊಂಡಿರುವ ಜಲಮೂಲವು ಮೀನುಗಾರ ಸಮುದಾಯಕ್ಕೆ ಬದುಕನ್ನು ಕಟ್ಟಿಕೊಡುವ ಮೂಲವಾಗಿದೆ.

ಭಾರತದಲ್ಲಿ ಮೀನುಗಾರಿಕೆ ಮತ್ತು ಜಲಚರ ಬೇಸಾಯದ ಮೇಲಿನ ಆಯ–ವ್ಯಯ (ಬಜೆಟ್) ಹಂಚಿಕೆಯ ಹೆಚ್ಚಳದಿಂದ ಮತ್ತು ಹೊಸ ತಂತ್ರಜ್ಞಾನದ ಅಳವಡಿಕೆಯ ನಂತರದಿಂದ ಮೀನುಗಾರಿಕೆ ಉತ್ಪಾದನೆಯು ಗಮನಾರ್ಹವಾಗಿ ಸುಧಾರಿಸಿದೆ. ಪ್ರಸ್ತುತ ಒಟ್ಟು ಮೀನು ಉತ್ಪಾದನೆಯಲ್ಲಿ ಶೇಕಡ 64 ರಷ್ಟು ಉತ್ಪನ್ನವು ಒಳನಾಡಿನ ಮೂಲಗಳಿಂದ ಬಂದರೆ, ಉಳಿದ ಶೇಕಡ 36ರಷ್ಟು ಉತ್ಪನ್ನವು ಕಡಲ ವಲಯ (ಸಮುದ್ರ ಮತ್ತು ಸಾಗರ)ದಿಂದ ಬರುತ್ತಿದೆ. ಇಂದು ಒಟ್ಟು ಮೀನು ಉತ್ಪನ್ನವು ಒಟ್ಟು GDP ಯ ಶೇಕಡ 0.8 ರಷ್ಟಾಗಿದೆ. ಕೇರಳ, ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡುಗಳು ಪ್ರಮುಖ ಸಮುದ್ರ ಮೀನು ಉತ್ಪಾದಕ ರಾಜ್ಯಗಳಾಗಿವೆ. ಬಹುಪಾಲು ಮೀನುಗಾರ ಕುಟುಂಬಗಳು ಬಡ ಕುಟುಂಬಗಳಾಗಿವೆ. ಇಂದು ಮಿತಿ ಮೀರಿದ ಅರೆ ಉದ್ಯೋಗ, ಕಡಿಮೆ ತಲಾದಾಯದಗಳಿಕೆ, ಇತರ ವಲಯದೆಡೆಗೆ ಶ್ರಮದ ಚಲನೆ ಕಡಿಮೆಯಿರುವುದು, ಅಧಿಕ ದರದ ಅನಕ್ಷರತೆ ಮತ್ತು ಋಣಬಾಧೆ (ಸಾಲಬಾಧೆ) ಮುಂತಾದವುಗಳು ಮೀನುಗಾರ ಸಮುದಾಯ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿವೆ. ಹೆಣ್ಣುಮಕ್ಕಳು ಮೀನುಗಾರಿಕೆಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಳ್ಳದಿದ್ದರೂ ರಫ್ತು ಮಾರುಕಟ್ಟೆಯಲ್ಲಿ ಶೇಕಡ 60ರಷ್ಟು ಮತ್ತು ಆಂತರಿಕ ಮಾರುಕಟ್ಟೆಯಲ್ಲಿ ಶೇಕಡ 40ರಷ್ಟು ಶ್ರಮಶಕ್ತಿ ಮಹಿಳೆಯರದೇ ಆಗಿದೆ. ಮಹಿಳಾ ಮೀನುಗಾರರಿಗೆ ಸಹಕಾರ ಸಂಘಗಳು ಮತ್ತು SHGs ಗಳ ಮೂಲಕ ಬಿಕರಿ ಮಾಡಲು ಅಗತ್ಯವಾದ ದುಡಿಯುವ ಬಂಡವಾಳವನ್ನು, ಅಗತ್ಯವಾದ ಸಾಲಸೌಲಭ್ಯಗಳನ್ನು ಹೆಚ್ಚಿಸುವ ಅಗತ್ಯವಿದೆ.

### ತೋಟಗಾರಿಕೆ (Horticulture):

ವೈವಿಧ್ಯಮಯ ಹವಾಗುಣ ಮತ್ತು ಮಣ್ಣನ್ನು ಹೊಂದಿರುವ ಭಾರತವು ವೈವಿಧ್ಯಮಯ ತೋಟಗಾರಿಕಾ ಬೆಳೆಗಳಾದ ಹಣ್ಣುಗಳು, ತರಕಾರಿ, ಗೆಡ್ಡೆಗೆಣಸು (Tuber crops) ಗಳು, ಹೂಗಳು, ಔಷಧಿ ಸಸ್ಯಗಳು ಮತ್ತು ಸುಗಂದ ದ್ರವ್ಯ ಸಸ್ಯಗಳ ಬೆಳೆಯನ್ನು ಅಳವಡಿಸಿಕೊಂಡಿದೆ. ತೋಟಗಾರಿಕೆ ಬೆಳೆಗಳು ಉದ್ಯೋಗ ಸಮಸ್ಯೆಯನ್ನು ಬಗೆಹರಿಸುವುದರರೊಂದಿಗೆ ಆಹಾರ ಮತ್ತು ಪೌಷ್ಟಿಕತೆಯನ್ನು ಒದಗಿಸುವಲ್ಲಿ ಪ್ರಮುಖ

ಪಾತ್ರವನ್ನುವಹಿಸುತ್ತವೆ. ತೋಟಗಾರಿಕಾ ಕ್ಷೇತ್ರವು, ಸುಮಾರು, ಕೃಷಿ ಉತ್ಪನ್ನದ 1/3 ಭಾಗದಷ್ಟು ಮತ್ತು ಒಟ್ಟು ದೇಶೀಯ ಉತ್ಪನ್ನದ ಶೇಕಡ 6ರಷ್ಟು ಕೊಡುಗೆಯನ್ನು ನೀಡುತ್ತಿದೆ. ಭಾರತವು ವಿವಿಧ ಹಣ್ಣುಗಳಾದ ಮಾವಿನಹಣ್ಣು, ಬಾಳೆಹಣ್ಣು, ತೆಂಗು, ಗೋಡಂಬಿ ಮತ್ತು ಸಾಂಬಾರ ಪದಾರ್ಥಗಳ ಉತ್ಪಾದನೆಯಲ್ಲಿ ಪ್ರಪಂಚದ ಮುಂಚೂಣಿ ದೇಶವಾಗಿ ಹೊರಹೊಮ್ಮಿದೆ. ನಮ್ಮ ದೇಶವು ಹಣ್ಣುಗಳು ಮತ್ತು ತರಕಾರಿ ಉತ್ಪನ್ನದಲ್ಲಿ ವಿಶ್ವದಲ್ಲಿ ಎರಡನೇ ದೊಡ್ಡ ದೇಶವಾಗಿದೆ. ತೋಟಗಾರಿಕೆಯಲ್ಲಿ ತೊಡಗಿರುವ ಹಲವು ರೈತರ ಆರ್ಥಿಕ ಸ್ಥಿತಿಯು ಸುಧಾರಿಸಿದೆ ಮತ್ತು ಇದು ಸೌಕರ್ಯವಂಚಿತ ಹಲವು ವರ್ಗಗಳಿಗೆ ಜೀವನಾಧಾರವನ್ನು ಸುಧಾರಿಸುವ ಸಾಧನವಾಗಿ ಪರಿಣಮಿಸಿದೆ. ಹೂ–ಕೊಯ್ಲು, ಸಸಿ ಪೋಷಣೆ (ನರ್ಸರಿ), ಹೈಬ್ರಿಡ್ ಬೀಜೋತ್ಪಾದನೆ, ಅಂಗಾಂಶ ಕೃಷಿ, ಹಣ್ಣು ಮತ್ತು ಹೂಗಳ ಬೀಜ ಪ್ರಸರಣ, ಆಹಾರ ಸಂಸ್ಕರಣೆ ಮುಂತಾದವುಗಳು ಗ್ರಾಮೀಣ ಮಹಿಳೆಯರಿಗೆ ಅಧಿಕ ಆದಾಯ ತಂದುಕೊಡುವ ಉದ್ಯೋಗದ ಆಯ್ಕೆಗಳಾಗಿವೆ.

ನಮ್ಮ ದೇಶದಲ್ಲಿ ಜಾನುವರು ಸಂಖ್ಯೆ ಅತ್ಯಂತ ಅಧಿಕವಾಗಿದ್ದರೂ ಇತರೆ ದೇಶಗಳಿಗೆ ಹೋಲಿಸಿದರೆ ಇದರ ಉತ್ಪಾದಕತೆಯು ತೀರಾ ಕಡಿಮೆ ಇದೆ. ಪಶುಸಂಗೋಪನೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಸುಧಾರಿತ ತಂತ್ರಜ್ಞಾನ ಮತ್ತು ಉತ್ತಮ ತಳಿಯ ಅಗತ್ಯವಿದೆ. ಸಣ್ಣ ಮತ್ತು ಅತಿ ಸಣ್ಣ ರೈತರು ಮತ್ತು ಭೂ ರಹಿತರಿಗೆ ಸುಧಾರಿತ ಪಶುಚಿಕಿತ್ಸೆ ಮತ್ತು ಸಾಲ ಸೌಲಭ್ಯಗಳನ್ನು ಒದಗಿಸುವುದರಿಂದ ಪಶುಸಂಗೋಪನೆ ಉತ್ಪನ್ನದ ಮೂಲಕ ಸುಸ್ಥಿರ ಜೀವನಾಧಾರದ ಆಯ್ಕೆಗಳನ್ನು



**ಚಿತ್ರ 6.5: ಗ್ರಾಮೀಣ ಗೃಹಿಣಿಯರು ಜೇನು ಸಾಕಾಣೆಯನ್ನು ಒಂದು ಉದ್ಯಮ ಚಟುವಟಿಕೆಯಾಗಿ ಕೈಗೊಂಡಿದ್ದಾರೆ**

ಹೆಚ್ಚಿಸಬಹುದು. ಮೀನುಗಾರಿಕೆ ಉತ್ಪನ್ನವು ಈಗಾಗಲೇ ಗಮನಾರ್ಹವಾಗಿ ಹೆಚ್ಚಿದೆ.

ಏನೇ ಆದರೂ ಅತಿಯಾದ ಮೀನುಗಾರಿಕೆ ಮತ್ತು ಜಲಮಾಲಿನ್ಯಕ್ಕೆ ಸಂಬಧಿಸಿದಂತಹ ಸಮಸ್ಯೆಗಳನ್ನು ನಿಯಂತ್ರಿಸುವ ಮತ್ತು ಕ್ರಮಬದ್ಧಗೊಳಿಸುವ ಅಗತ್ಯವಿದೆ. ಮೀನುಗಾರ ಸಮುದಾಯಗಳಿಗಾಗಿರುವ ಕಲ್ಯಾಣ ಕಾರ್ಯಕ್ರಮಗಳು ದೀರ್ಘಾವಧಿಯಲ್ಲಿ ಲಾಭಯುಕ್ತವಾಗುವಂತೆ ಮತ್ತು ಜೀವನೋಪಾಯದ ಪೋಷಣೆ ಮಾಡುವ ರೀತಿಯಲ್ಲಿ ಪುನಶ್ಚೇತನಗೊಳ್ಳಬೇಕಿದೆ. ತೋಟಗಾರಿಕೆಯು ಒಂದು ಯಶಸ್ವಿ ಸುಸ್ಥಿರ ಜೀವನಾಧಾರ ಆಯ್ಕೆಯಾಗಿ ಉದಯಿಸಿದೆ ಮತ್ತು ಇದನ್ನು ಪ್ರೋತ್ಸಾಹಿಸುವ ಅಗತ್ಯವಿದೆ. ಇದರ ಪಾತ್ರವನ್ನು ಮತ್ತಷ್ಟು ಮಹತ್ವಪೂರ್ಣವಾಗಿಸಬೇಕಾದರೆ ವಿದ್ಯುಚ್ಛಕ್ತಿ, ಶೈತ್ಯಾಗಾರ ವ್ಯವಸ್ಥೆ, ಮಾರುಕಟ್ಟೆಯ ಕೊಂಡಿಗಳು, ಸಣ್ಣ ಸಂಸ್ಕರಣಾ ಘಟಕಗಳು ಮತ್ತು ತಾಂತ್ರಿಕತೆಯ ಸುಧಾರಣೆ ಮತ್ತು ಪ್ರಸಾರ ಮುಂತಾದ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡುವ ಅಗತ್ಯವಿದೆ.

### ಇತರೆ ಪರ್ಯಾಯ ಜೀವನಾದಾರ ಆಯ್ಕೆ (Other Alternative livelihood options):

ಭಾರತೀಯ ಆರ್ಥಿಕತೆಯಲ್ಲಿ ಮಾಹಿತಿ ತಂತ್ರಜ್ಞಾನ (IT)ವು ಹಲವು ವಲಯಗಳಲ್ಲಿ ಕ್ರಾಂತಿಯನ್ನು ಉಂಟುಮಾಡಿದೆ. 21ನೇ



**ಚಿತ್ರ 6.4: ಭಾರತದ ಪಶುಸಂಗೋಪನೆಯಲ್ಲಿ ಬಹುಪಾಲನ್ನು ಹೊಂದಿರುವ ಕೋಳಿಸಾಕಾಣಿಕೆ**

ಶತಮಾನದಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ಆಹಾರ ಭದ್ರತೆಯನ್ನು ಸಾಧಿಸಲು ಮಾಹಿತಿ ತಂತ್ರಜ್ಞಾನವು ಒಂದು ಗಂಭೀರ ಪಾತ್ರವನ್ನು ವಹಿಸಬಲ್ಲದೆಂಬ ಸ್ಪಷ್ಟ ಒಮ್ಮತವಿದೆ. ಸರ್ಕಾರಗಳು ಸೂಕ್ತವಾದ ಮಾಹಿತಿ ಮತ್ತು ಸಾಫ್ಟ್ ವೇರ್ ತಂತ್ರಗಳನ್ನು ಬಳಸಿಕೊಂಡು ಆಹಾರದ ಅಭದ್ರತೆ ಖಂಡನೀಯ ಪರಿಸ್ಥಿತಿ ಎದುರಾಗ ಬಹುದಾದ ಪ್ರದೇಶಗಳನ್ನು ಊಹಿಸಿ ತುರ್ತುಪರಿಸ್ಥಿತಿ ಉಂಟಾಗಬಹುದಾದ ಸಾಧ್ಯತೆಯನ್ನು ತಪ್ಪಿಸಲ ತಕ್ಕ ಕ್ರಮ ಕೈಗೊಳ್ಳಬೇಕಾಗಿದೆ. ಇದು ಕೃಷಿ ವಲಯದ ಮೇಲೆ ಧನಾತ್ಮಕ ಪ್ರಭಾವವನ್ನು ಬೀರುತ್ತದೆ. ಏಕೆಂದರೆ ಇದು ವಿವಿಧ ಬೆಳೆಗಳನ್ನು ಬೆಳೆಯಲು ಬೇಕಾದ ಆಧುನಿಕ ತಂತ್ರಜ್ಞಾನ ಮತ್ತು ಅದರ ಅಳವಡಿಕೆಗಳು, ಬೆಲೆಗಳು, ಹವಾಮಾನ ಮತ್ತು ಮಣ್ಣಿನ ಪರಿಸ್ಥಿತಿಯ ಬಗ್ಗೆ ಮಾಹಿತಿಯನ್ನು ಪ್ರಸಾರಮಾಡುತ್ತದೆ. ಮಾಹಿತಿ ತಂತ್ರಜ್ಞಾನವು ತನ್ನಷ್ಟಕ್ಕೆ ತಾನೆ ಪರಿವರ್ತನೆ ಪ್ರಚೋದಕವಾಗಲ್ಲದಿದ್ದರೂ ಅದು ಸಮಾಜದಲ್ಲಿ ಜ್ಞಾನವನ್ನೂ ಮತ್ತು ಸೃಜನಾತ್ಮಕತೆಯನ್ನು ಪ್ರಸಾರ ಮಾಡುವ ಒಂದು ಸಾಧನವಾಗಿ ಕಾರ್ಯ ನಿರ್ವಹಿಸಬಲ್ಲದು. ಇದು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ನಿರ್ಮಾಣದ ಶಕ್ತಿಯನ್ನೂ ಹೊಂದಿದೆ.

ಗ್ರಾಮೀಣಾಭಿವೃದ್ಧಿಗಾಗಿ ಮಾಹಿತಿ ತಂತ್ರಜ್ಞಾನ ಮತ್ತು ಅದರ ಅನುಷ್ಠಾನಗಳ ಮೇಲಿನ ಪ್ರಯೋಗಗಳನ್ನು ಭಾರತದ ವಿವಿಧ ಭಾಗಗಳಲ್ಲಿ ಕೈಗೊಳ್ಳಲಾಗುತ್ತಿದೆ. (ಪೆಟ್ಟಿಗೆ 6.3ನ್ನು ನೋಡಿ).

## 6.6 ಸುಸ್ಥಿರ ಅಭಿವೃದ್ಧಿ ಮತ್ತು ಸಾವಯವ ಬೇಸಾಯ (SUSTAINABLE DEVELOPMENT AND ORGANIC FARMING)

ನಮ್ಮ ಆರೋಗ್ಯದ ಮೇಲಾಗುತ್ತಿರುವ ರಾಸಾಯನಿಕಯುಕ್ತ ಗೊಬ್ಬರಗಳು ಮತ್ತು ಕ್ರಿಮಿ ಕೀಟನಾಶಕಗಳ ದುಷ್ಪರಿಣಾಮಗಳ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಜಾಗೃತಿ ಹೆಚ್ಚಾಗುತ್ತಿದೆ. ಸಾಂಪ್ರದಾಯಿಕ ಕೃಷಿಯು ರಾಸಾಯನಿಕ ಗೊಬ್ಬರ ಮತ್ತು ವಿಷಕಾರಕ ಕ್ರಿಮಿಕೀಟ ನಾಶಕಗಳ ಮೇಲೆ ಅತಿಯಾಗಿ ಅವಲಂಬಿಸಿದೆ. ಇದು ಆಹಾರ ಮತ್ತು ಜಲಮೂಲದೊಳಗೆ ಸೇರಿಹೋಗುತ್ತಿದೆ ಮತ್ತು ಜೈವಿಕ ಪರಿಸರ ಪದ್ಧತಿಯನ್ನು ನಾಶಮಾಡುತ್ತಿದೆ. ಸುಸ್ಥಿರ ಅಭಿವೃದ್ಧಿಗೆ ಅಗತ್ಯವಿರುವ ಪರಿಸರ ಸ್ನೇಹಿ ತಂತ್ರಜ್ಞಾನಗಳನ್ನು ಅಳವಡಿಸುವ ಪ್ರಯತ್ನವಾಗಬೇಕಿದೆ. ಅಂತಹ ಒಂದು ತಂತ್ರಜ್ಞಾನವೆಂದರೆ ಸಾವಯವ ಬೇಸಾಯವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸಾವಯವ ಬೇಸಾಯವು ಜೀವ ಪರಿಸರ ಸಮತೋಲನವನ್ನು ಸಂರಕ್ಷಣೆ ಮಾಡುವ, ನಿರ್ವಹಿಸುವ, ಮತ್ತು ಅದನ್ನು ಸಂವರ್ಧಿಸುವ ಒಂದು ಪರಿಪೂರ್ಣ ಬೇಸಾಯವಾಗಿದೆ. ಪ್ರಪಂಚದಾದ್ಯಂತ ಸಂರಕ್ಷಿತ ಆಹಾರವನ್ನು ಪೂರೈಸುವ ಸಾವಯವ ಬೇಸಾಯದಿಂದ ಉತ್ಪಾದಿಸಿದ ಆಹಾರಕ್ಕೆ ಬೇಡಿಕೆ ಹೆಚ್ಚುತ್ತಿದೆ. (ಪೆಟ್ಟಿಗೆ 6.4ನ್ನು ನೋಡಿ)

**ಪೆಟ್ಟಿಗೆ 6.3 : ಲೋಕಸಭಾ ಸದಸ್ಯರುಗಳಿಂದ ಗ್ರಾಮ ದತ್ತು ಸ್ವೀಕಾರ.**

2014 ಅಕ್ಟೋಬರ್ ತಿಂಗಳಿನಿಂದ ಭಾರತ ಸರ್ಕಾರವು ಸಂಸತ್ ಆದರ್ಶ ಗ್ರಾಮ ಯೋಜನಾ (ಎಸ್ ಎ ಜಿ ವೈ) ಎಂಬ ಹೊಸ ಯೋಜನೆಯೊಂದನ್ನು ಪರಿಚಯಿಸಿದೆ. ಭಾರತದ ಪಾರ್ಲಿಮೆಂಟ್ ಸದಸ್ಯರುಗಳು ತಮ್ಮ ಲೋಕಸಭಾ ಕ್ಷೇತ್ರದಲ್ಲಿ ಒಂದು ಹಳ್ಳಿಯನ್ನು ಆಯ್ಕೆ ಮಾಡಿಕೊಂಡು ಅದನ್ನು ಅಭಿವೃದ್ಧಿಪಡಿಸಬೇಕಾಗಿದೆ. ಮೊದಲಿಗೆ 2016ರ ಹೊತ್ತಿಗೆ ಎಂ. ಪಿ. ಗಳು ಒಂದು ಹಳ್ಳಿಯನ್ನು ಆದರ್ಶ ಗ್ರಾಮವಾಗಿ ಅಭಿವೃದ್ಧಿಪಡಿಸಬೇಕು ಮತ್ತು 2019 ರ ಹೊತ್ತಿಗೆ ಇನ್ನೂ 2 ಗ್ರಾಮಗಳನ್ನು ಒಟ್ಟಾರೆ ಸುಮಾರು 2500 ಗ್ರಾಮಗಳನ್ನು ಒಳಗೊಳ್ಳುವಂತೆ ಅಭಿವೃದ್ಧಿ ಪಡಿಸಬೇಕು. ಈ ಯೋಜನೆಯ ಪ್ರಕಾರ ಇಂತಹ ಗ್ರಾಮವು ಬಯಲು ಪ್ರದೇಶವಾದರೆ 3000 – 5000 ಜನಸಂಖ್ಯೆಯನ್ನು ಮತ್ತು ಗುಡ್ಡಗಾಡು ಪ್ರದೇಶವಾದರೆ 1000– 3000 ಜನಸಂಖ್ಯೆಯನ್ನು ಹೊಂದಿರಬಹುದು ಮತ್ತು ಇದು ಎಮ್.ಪಿ. ಗಳ ಅಥವಾ ಪತಿ/ಪತ್ನಿಯ ಸ್ವಂತ ಗ್ರಾಮವಾಗಿರಬಾರದು. ಗ್ರಾಮದ ಅಭಿವೃದ್ಧಿ ಯೋಜನೆಗೆ ಸಹಾಯ ಮಾಡುವುದು, ವಿವಿಧ ಚಟುವಟಿಕೆಗಳನ್ನು ಕೈಗತ್ತಿಕೊಳ್ಳಲು ಮತ್ತು ಆರೋಗ್ಯ, ಪೌಷ್ಟಿಕತೆ ಮತ್ತು ಶಿಕ್ಷಣ ಕ್ಷೇತ್ರಗಳ ಮೂಲಸೌಕರ್ಯಗಳನ್ನು ಕಟ್ಟಲು ಅನುಕೂಲ ಮಾಡಿಕೊಡುವುದನ್ನು ಸಂಸದರಿಂದ ನಿರೀಕ್ಷಿಸಲಾಗಿದೆ.

**ಪೆಟ್ಟಿಗೆ 6.4 : ಸಾವಯವ ಆಹಾರ**

ಪ್ರಪಂಚದಾದ್ಯಂತ ಸಾವಯವ ಆಹಾರದ ಜನಪ್ರಿಯತೆ ಹೆಚ್ಚಾಗುತ್ತಿದೆ. ಬಹುತೇಕ ದೇಶಗಳು ತಮ್ಮ ಆಹಾರದಲ್ಲಿ ಶೇಕಡ 10ರಷ್ಟನ್ನು ಸಾವಯವ ಕೃಷಿ ಮೂಲಕ ಉತ್ಪಾದನೆ ಮಾಡುತ್ತಿವೆ. ಬಹಳಷ್ಟು ಚಿಲ್ಲರೆ ಮಳಿಗೆಗಳು ಮತ್ತು ಸೂಪರ್ ಮಾರುಕಟ್ಟೆಗಳು ಸಾವಯವ ಆಹಾರವನ್ನು ಮಾರಾಟ ಮಾಡಲು ಹಸಿರು ದರ್ಜೆ ಗುರುತನ್ನು ನೀಡಿವೆ. ಸಾವಯವ ಆಹಾರ ವಸ್ತುಗಳ ಬೆಲೆ ಸಾಂಪ್ರದಾಯಿಕ ವಸ್ತುಗಳಿಗಿಂತ ಶೇಕಡ 10ರಿಂದ 100 ರಷ್ಟು ಅಧಿಕವಾಗಿರುತ್ತವೆ.

### ಸಾವಯವ ಬೇಸಾಯದ ಲಾಭಗಳು (Benefits of Organic Farming):

ಸಾವಯವ ಕೃಷಿಯು ದುಬಾರಿಯಾದ ಕೃಷಿ ಆದಾನಗಳ (HYV ಬೀಜಗಳು, ರಾಸಾಯನಿಕ ಗೊಬ್ಬರಗಳು, ಕ್ರಿಮಿಕೀಟ ನಾಶಕಗಳು ಇತ್ಯಾದಿ) ಬದಲಿಗೆ ಸ್ಥಳೀಯವಾಗಿ ತಯಾರಿಸಲ್ಪಟ್ಟ ಹಾಗೂ ಅಗ್ಗವಾದ ಆದಾನಗಳನ್ನು ನೀಡುತ್ತದೆ. ಇದು ಹೂಡಿಕೆಯ ಮೇಲೆ ಉತ್ತಮವಾದ ಗಳಿಕೆಯನ್ನು ಗಳಿಸಿಕೊಡುತ್ತದೆ. ಸಾವಯವ ಕೃಷಿಯ ಬೆಳೆಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ರಫ್ತು ಮಾಡುವ ಮೂಲಕ ಅಧಿಕ ಆದಾಯವನ್ನು ಗಳಿಸುತ್ತದೆ.

ಸಾವಯವ ಪದ್ಧತಿಯಿಂದ ಬೆಳೆಯುವ ಆಹಾರವು ರಾಸಾಯನಿಕ ವ್ಯವಸಾಯಕ್ಕಿಂತ ಹೆಚ್ಚು ಪುಷ್ಠಿದಾಯಕ ಮೌಲ್ಯವನ್ನು ಹೊಂದಿದ್ದು, ಅದು ಆರೋಗ್ಯದಾಯಕ ಆಹಾರವನ್ನು ಒದಗಿಸುತ್ತದೆ ಎಂಬುದನ್ನು ಅಧ್ಯಯನಗಳು ತೋರಿಸಿವೆ. ಸಾಂಪ್ರದಾಯಿಕ ಬೇಸಾಯಕ್ಕಿಂತ ಸಾವಯವ ಬೇಸಾಯಕ್ಕೆ ಅಧಿಕ ಶ್ರಮ ಬೇಕಾಗುವುದರಿಂದ ಇದು ಭಾರತಕ್ಕೆ ಹೆಚ್ಚು ಆಕರ್ಷಕವಾಗಿದೆ. ಅಂತಿಮವಾಗಿ, ಈ ಉತ್ಪನ್ನವು ಕೀಟನಾಶಕ ಮುಕ್ತವಾಗಿದೆ ಮತ್ತು ಪರಿಸರಾತ್ಮಕವಾಗಿ ಸುಸ್ಥಿರ ಮಾರ್ಗವಾಗಿದೆ. (ಪೆಟ್ಟಿಗೆ 6.5 ನ್ನು ನೋಡಿ).

ಸಾವಯವ ಬೇಸಾಯವನ್ನು ಜನಪ್ರಿಯಗೊಳಿಸ –ಬೇಕಾದರೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ರೈತರಲ್ಲಿ ಜಾಗೃತಿ ಮತ್ತು ಇಚ್ಛಾಶಕ್ತಿಯನ್ನು ಮೂಡಿಸಬೇಕಾಗಿದೆ. ಸಾವಯವ ಬೇಸಾಯವನ್ನು ಪ್ರೋತ್ಸಾಹಿಸಲು ಸೂಕ್ತ ಕೃಷಿ ನೀತಿಯ ಜೊತೆಗೆ ಮೂಲ ಸೌಕರ್ಯಗಳ ಕೊರತೆ ಮತ್ತು ಉತ್ಪನ್ನಗಳ ಮಾರುಕಟ್ಟೆ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ. ಪ್ರಾರಂಭದ ವರ್ಷಗಳಲ್ಲಿ ಸಾವಯವ ಬೇಸಾಯದ ಇಳುವರಿಯು ಆಧುನಿಕ ಬೇಸಾಯದ ಇಳುವರಿಗಿಂತ ಕಡಿಮೆ ಇದೆ ಎಂಬುದನ್ನು ಗಮನಿಸಲಾಗುತ್ತಿದೆ. ಆದುದರಿಂದ ಸಣ್ಣ ಮತ್ತು ಸೀಮಾಂತ ರೈತರಿಗೆ ಬೃಹತ್ ಪ್ರಮಾಣದ ಉತ್ಪನ್ನವನ್ನು

**ಪೆಟ್ಟಿಗೆ 6.5 ಮಹಾರಾಷ್ಟ್ರದಲ್ಲಿ ಸಾವಯವ ಬೇಸಾಯದಿಂದ ಉತ್ಪಾದಿಸಲ್ಪಟ್ಟ ಹತ್ತಿ**

1995ರಲ್ಲಿ ಪ್ರಕೃತಿ (ಒಂದು ಎನ್ ಜಿ ಓ)ಯ ಕಿಶನ್ ಮೆಹತಾ ಎನ್ನುವವರು ಬಹಳಷ್ಟು ರಾಸಾಯನಿಕ ಕ್ರಿಮಿಕೀಟ ನಾಶಕದ ಬಳಕೆಯಿಂದ ಉತ್ಪಾದಿಸಲ್ಪಡುವ ಹತ್ತಿಯನ್ನು ಸಾವಯವ ಬೇಸಾಯದಿಂದ ತಯಾರಿಸಬೇಕೆಂಬ ಸಲಹೆ ನೀಡಿದರು. ಇದನ್ನು ನಾಗಪುರದ ನಂತರ The Central Institute for Cotton Research ಎಂಬ ಎಂಬ ಸಂಸ್ಥೆಯ ಅಂದಿನ ನಿರ್ದೇಶಕರು "ನೀವು ಭಾರತವನ್ನು ವಸ್ತ್ರವಿಹೀನವನ್ನಾಗಿ ನೋಡಲು ಇಚ್ಛಿಸುತ್ತೀರ" ಎಂದು ಟೀಕೆ ಮಾಡಿರುವುದು ಬಹು ಪ್ರಸಿದ್ಧವಾಗಿರುತ್ತದೆ. ಪ್ರಸ್ತುತ, 130ರಷ್ಟು ರೈತರು 1,200 ಹೆಕ್ಟೇರ್ ಭೂಮಿಯನ್ನು ಬಳಸಿ The International Federation of Organic Agriculture Movement ನ ಗುಣಮಟ್ಟವನ್ನು ಆಧರಿಸಿ ಸಾವಯವ ಬೇಸಾಯದಿಂದ ಹತ್ತಿಯನ್ನು ಬೆಳೆಯುತ್ತಿದ್ದಾರೆ. ಈ ಉತ್ಪನ್ನವು German accredited agency, AGRECO ಯಿಂದ ಪರೀಕ್ಷಿಸಲ್ಪಟ್ಟು ಮತ್ತು ಉತ್ತಮ ಗುಣಮಟ್ಟದ್ದೆಂದು ಗುರುತಿಸಲ್ಪಡುತ್ತದೆ. ಕಿಶನ್ ಮೆಹತಾರವರು ಶೇಕಡ 78ರಷ್ಟು ಭಾರತೀಯ ರೈತರು ಅತಿ ಸಣ್ಣ ರೈತರು ಮತ್ತು ಇವರು 0.8 ಹೆಕ್ಟೇರ್‌ಗಿಂತಲೂ ಕಡಿಮೆ ಭೂಮಿಯನ್ನು ಮಾತ್ರ ಹೊಂದಿದ್ದು ಇದು ಭಾರತದ ಸಾಗುವಳಿ ಭೂಮಿಯ ಶೇಕಡ 20 ರಷ್ಟಾಗಿದೆ ಎಂದು ತಿಳಿಸಿದ್ದಾರೆ. ಇಂತಹ ರೈತರಿಗೆ ಸಾವಯವ ಕೃಷಿಯು ಹಣ ಮತ್ತು ಭೂ–ಸಾರ ಸಂರಕ್ಷಣೆಯ ರೂಪದಲ್ಲಿ ದೀರ್ಘಾವಧಿಯಲ್ಲಿ ಲಾಭದಾಯಕವಾಗಿದೆ.

**Source : Lyla Bavadam, a green alternative, frontline, 29 July 2005**

ಸಾಧಿಸಲು ಸಾವಯವ ಬೇಸಾಯವನ್ನು ಅಳವಡಿಸಿಕೊಳ್ಳುವುದು ಕಷ್ಟವಾಗಿ ಕಾಣಬಹುದು. ಸಾವಯವ ಉತ್ಪನ್ನವು (Sprayed) ರಾಸಾಯನಿಕಗಳನ್ನು ಸಿಂಪಡಿಸಿ ಬೆಳೆದ ಉತ್ಪನ್ನಕ್ಕಿಂತ ಬೇಗ ಕೆಡುವ ನ್ಯೂನತೆಯನ್ನು ಹೊಂದಿರಬಹುದು. ಇದಲ್ಲದೆ ಸಾವಯವ ಬೇಸಾಯದಲ್ಲಿ ಅಕಾಲಿಕ ಬೆಳೆ ಬೆಳೆಯುವ ಆಯ್ಕೆ ಬಹಳ ಮಿತಿಯಲ್ಲಿರುತ್ತದೆ. ಆದಾಗ್ಯೂ ಸಾವಯವ ಬೇಸಾಯವು ಕೃಷಿಯ ಸುಸ್ಥಿರ ಅಭಿವೃದ್ಧಿಗೆ ಸಹಾಯಕವಾಗಿದೆ. ಆಂತರಿಕ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತವು ಸಾವಯವ ಉತ್ಪನ್ನಗಳನ್ನು ಉತ್ಪಾದಿಸುವ ನಿಚ್ಚಳ ಅವಕಾಶವನ್ನು ಹೊಂದಿದೆ. ಸಾವಯವ ಬೇಸಾಯ ವಿಧಾನಗಳಿಂದ ಬೆಳೆದ ಆಹಾರ ಮತ್ತು ಆಹಾರೇತರ ವಸ್ತುಗಳು ಹೆಚ್ಚು ಅಗ್ಗವೆಂದು ನೀವು ಭಾವಿಸುವಿರಾ?

## 6.7 ಸಮಾರೋಪ (CONCLUSION)

ಎಲ್ಲಿಯವರೆಗೂ ಚಮತ್ಕಾರಿಕ ಬದಲಾವಣೆಗಳು ಆಗುವುದಿಲ್ಲವೋ ಅಲ್ಲಿಯವರೆಗೂ ಗ್ರಾಮೀಣ ವಲಯವು ಹಿಂದುಳಿದಿರುತ್ತೆಂಬುದು ಸ್ಪಷ್ಟವಾಗಿದೆ. ಇಂದು ಗ್ರಾಮೀಣಪ್ರದೇಶದ ಅನೇಕ ಪ್ರಕಾರದ ಉತ್ಪಾದಕ ಕಾರ್ಯಗಳನ್ನು ಮತ್ತಷ್ಟು ತೀವ್ರಗೊಳಿಸಿ ಅಲ್ಲಿ ಒಂದು ಹೊಸ ಉತ್ಸಾಹ/ಸ್ಫೂರ್ತಿಯನ್ನು ಉಂಟುಮಾಡಬೇಕಾದುದು ಅವಶ್ಯಕವಾಗಿದೆ. ಇದನ್ನು ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ಹಣ್ಣು ಮತ್ತು ತರಕಾರಿಗಳ ಉತ್ಪನ್ನಗಳಲ್ಲಿ ವೈವಿಧ್ಯೀಕರಣ ಸಾಧಿಸುವುದು ಮತ್ತು ಗ್ರಾಮೀಣ ಉತ್ಪಾದನಾ ಕೇಂದ್ರಗಳನ್ನು ನಗರ ಮತ್ತು ವಿದೇಶಿ (ರಫ್ತು) ಮಾರುಕಟ್ಟೆಗಳಿಗೆ ಜೋಡಿಸುವುದು ಹಾಗೂ ಆ ಮೂಲಕ ಇವುಗಳ ಮೇಲೆ ಮಾಡಿದ ಹೂಡಿಕೆಗಳಿಗೆ ಹೆಚ್ಚು ಪ್ರತಿಫಲ ಸಿಗುವಂತೆ ಮಾಡುವ ಮೂಲಕ ಸಾಧಿಸಬಹುದಾಗಿದೆ. ಅಲ್ಲದೆ, ಮೂಲಸೌಕರ್ಯದ ಸಾಧನಗಳಾದ ಸಾಲ ಹಾಗೂ ಮಾರುಕಟ್ಟೆ ವ್ಯವಸ್ಥೆ, ರೈತ ಸ್ನೇಹಿ ಕೃಷಿ ನೀತಿಗಳು, ಬೆಲೆ ನಿರ್ಧಾರ ಮತ್ತು ರೈತ ಸಮೂಹ ಹಾಗೂ ರಾಜ್ಯ ಕೃಷಿ ಇಲಾಖೆಗಳ ನಡುವಿನ ಮಾತುಕತೆಗಳು ಇತ್ಯಾದಿಗಳು ಈ ವಲಯದ ಸಾಮರ್ಥ್ಯವನ್ನು ಸಿದ್ಧಿಸಿಕೊಳ್ಳಲು ತೀರಾ ಅವಶ್ಯಕವೆನಿಸಿದೆ.

ಇಂದು ಪರಿಸರ ಮತ್ತು ಗ್ರಾಮೀಣ ಅಭಿವೃದ್ಧಿ ಎಂಬ ವಿಷಯಗಳನ್ನು ಎರಡು ವಿಭಿನ್ನ ವಿಷಯಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ವಿವಿಧ ಸನ್ನಿವೇಶಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಸಹಾಯಕವಾಗುವ ಮತ್ತು ಪರಿಸರ ಸ್ನೇಹಿ ತಂತ್ರಜ್ಞಾನಗಳನ್ನು ಕಂಡುಹಿಡಿಯುವ ಅಗತ್ಯವಿದೆ. ಪ್ರತೀ ಗ್ರಾಮೀಣ ಸಮುದಾಯವು ಅದರ ಉದ್ದೇಶಕ್ಕೆ ಸೂಕ್ತವಾದುದನ್ನು ಆಯ್ಕೆ ಮಾಡಿಕೊಳ್ಳಬಹುದು. ನಮ್ಮ ಮೊದಲ ಕೆಲಸವೆಂದರೆ ಲಭ್ಯವಿರುವ 'ಉತ್ತಮ ಅಭ್ಯಾಸ' ಗಳಲ್ಲಿ (ದೇಶದಲ್ಲಿ ವಿವಿಧ ಸನ್ನಿವೇಶಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಈಗಾಗಲೇ ಯಶಸ್ಸು ಕಂಡಿರುವ ಗ್ರಾಮೀಣ ಅಭಿವೃದ್ಧಿಯ ಯಶೋಗಾಥೆಗಳು) ಸರ್ವಶ್ರೇಷ್ಠವಾದುದನ್ನು ಕಂಡುಹಿಡಿದು ಅದನ್ನು ಆಯ್ಕೆ ಮಾಡಿಕೊಂಡು 'ಮಾಡಿ ಕಲಿ' ಎಂಬ ಪ್ರಕ್ರಿಯೆಯನ್ನ ತ್ವರಿತಗೊಳಿಸುವುದಾಗಿದೆ.



### ನೀವೇ ಮಾಡಿರಿ
### (Work These out)

- ಭಾರತದಲ್ಲಿ ಸಾವಯವ ಬೇಸಾಯದಲ್ಲಿ ಉತ್ಪಾದಿಸಲ್ಪಡುವ ಐದು ವಸ್ತುಗಳನ್ನು ಪಟ್ಟಿಮಾಡಿ
- ಹತ್ತಿರದಲ್ಲಿರುವ ಸೂಪರ್ ಮಾರುಕಟ್ಟೆ, ತರಕಾರಿ ಅಂಗಡಿ ಮತ್ತು / ಅಥವಾ ಒಂದು ಡಿಪಾರ್ಟ್‌ಮೆಂಟಲ್ ಶಾಪ್‌ನ್ನು ಭೇಟಿಮಾಡಿ ಕೆಲವು ವಸ್ತುಗಳನ್ನು ಗುರುತಿಸಿ, ಸಾವಯವ ಬೇಸಾಯದಲ್ಲಿ ಉತ್ಪಾದಿಸಲ್ಪಟ್ಟ ಹಾಗೂ ಸಾಮಾನ್ಯ ರೀತಿಯಲ್ಲಿ ಉತ್ಪಾದಿಸಲ್ಪಟ್ಟ ಕೆಲವು ವಸ್ತುಗಳನ್ನು ಹೋಲಿಕೆ ಮಾಡಿ ಅವುಗಳ ಬೆಲೆ, ಗುಣಮಟ್ಟ, ಜನಪ್ರಿಯಗೊಳಿಸಲು ಕೈಗೊಂಡ ಜಾಹೀರಾತಿನ ಪ್ರಕಾರ ಇವುಗಳನ್ನು ತಿಳಿಸುವ ಒಂದು ಚಾರ್ಟನ್ನು ತಯಾರು ಮಾಡಿ.
- ಹತ್ತಿರದ ಸ್ಥಳೀಯ ಪ್ರದೇಶದಲ್ಲಿರುವ ಒಂದು ತೋಟಗಾರಿಕಾ ಪ್ರದೇಶಕ್ಕೆ ಭೇಟಿ ನೀಡಿ. ಅಲ್ಲಿ ಬೆಳೆಯಲ್ಪಡುವ ಉತ್ಪನ್ನಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಿ. ಅವರು ತಮ್ಮ ಬೆಳೆ ಹಂಚಿಕೆಯನ್ನು ವೈವಿಧ್ಯೀಕರಣಗೊಳಿಸಿಕೊಳ್ಳ ಬಹುದಾಗಿತ್ತು. ಅವರ ಜೊತೆ ವೈವಿಧ್ಯೀಕರಣದ ಗುಣಾವಗುಣಗಳ ಬಗ್ಗೆ ಚರ್ಚಿಸಿ.

## ಪುನರುಕ್ತಿ

- ಗ್ರಾಮೀಣಾಭಿವೃದ್ಧಿಯು ತುಂಬಾ ವಿಸ್ತೃತ ಪದವಾಗಿದೆ ಆದರೆ ಇದು ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಕಾರ್ಯ ಯೋಜನೆ ಎಂಬ ಅರ್ಥನೀಡುತ್ತದೆ.
- ಇದರ ನಿಜವಾದ ಸಮರ್ಥತೆಯನ್ನು ಸಾಧಿಸಲು ಬ್ಯಾಂಕಿಂಗ್, ಮಾರುಕಟ್ಟೆ ವ್ಯವಸ್ಥೆ, ಸಂಗ್ರಹಣೆ (ದಾಸ್ತಾನು), ಸಾಗಣೆ ಮತ್ತು ಸಂಪರ್ಕ ಇತ್ಯಾದಿ ಮೂಲಸೌಕರ್ಯಗಳ ಪ್ರಮಾಣ ಮತ್ತು ಗುಣಮಟ್ಟವನ್ನು ಸುಧಾರಿಸುವ ಅಗತ್ಯವಿದೆ. ಕೇವಲ ಕೃಷಿಯ ವಲಯದಲ್ಲಿನ ಗಂಡಾಂತರವನ್ನು ಕಡಿಮೆ ಮಾಡುವುದಷ್ಟೆ ಅಲ್ಲ, ಬದಲಾಗಿ ನಮ್ಮ ಜನರಿಗೆ ಸುಸ್ಥಿರ ಜೀವನಾಧಾರ ಆಯ್ಕೆಯನ್ನು ಒದಗಿಸಲು ಹೊಸ ಕ್ಷೇತ್ರಗಳಾದ ಪಶುಸಂಗೋಪನೆ, ಮೀನುಗಾರಿಕೆ ಮತ್ತು ಇತರೆ ಕೃಷಿಯೇತರ ಚಟುವಟಿಕೆಗಳತ್ತ ವೈವಿಧ್ಯೀಕರಣಗೊಳ್ಳಬೇಕಾಗಿದೆ.
- ಪರಿಸರ ದೃಷ್ಟಿಯಿಂದ ಸುಸ್ಥಿರ ಉತ್ಪಾದನಾ ಪ್ರಕ್ರಿಯೆಯಾದ ಸಾವಯವ ಬೇಸಾಯದ ಮಹತ್ವವು ಇಂದು ಪ್ರಚಲಿತದಲ್ಲಿದೆ ಮತ್ತು ಇದನ್ನು ಉತ್ತೇಜಿಸುವ ಅವಶ್ಯಕತೆಯಿದೆ.



## ಅಭ್ಯಾಸಗಳು

1. ಗ್ರಾಮೀಣಾಭಿವೃದ್ಧಿ ಎಂದರೇನು? ಗ್ರಾಮೀಣಾಭಿವೃದ್ಧಿಯ ಪ್ರಮುಖ ಸಮಸ್ಯೆಗಳನ್ನು ತಿಳಿಸಿ.
2. ಗ್ರಾಮೀಣಾಭಿವೃದ್ಧಿಯಲ್ಲಿ ಸಾಲದ ಮಹತ್ವವನ್ನು ಚರ್ಚಿಸಿ.
3. ಬಡವರಿಗೆ ಸಾಲದ ಅಗತ್ಯಗಳನ್ನು ಪೂರೈಸುವ ಸೂಕ್ಷ್ಮ ಸಾಲದ ಪಾತ್ರವನ್ನು ವಿವರಿಸಿ.
4. ಗ್ರಾಮೀಣ ಮಾರುಕಟ್ಟೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ವಿವರಿಸಿ.
5. ಸುಸ್ಥಿರ ಜೀವನಾಧಾರಕ್ಕೆ ಕೃಷಿ ವೈವಿಧ್ಯೀಕರಣವು ಏಕೆ ಅಗತ್ಯವಾದುದಾಗಿದೆ?
6. ಭಾರತದಲ್ಲಿ ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ ಗ್ರಾಮೀಣ ಬ್ಯಾಂಕಿನ ಪಾತ್ರವನ್ನು ವಿಮರ್ಶಾತ್ಮಕವಾಗಿ ವಿಷದೀಕರಿಸಿ.
7. ಕೃಷಿ ಮಾರುಕಟ್ಟೆ ಎಂದರೇನು?
8. ಕೃಷಿ ಮಾರುಕಟ್ಟೆ ತಂತ್ರಗಳಿಗೆ ಅಡ್ಡಿಯುಂಟು ಮಾಡಿರುವ ಕೆಲವು ಅಡಚಣೆಗಳನ್ನು ತಿಳಿಸಿ.
9. ಕೃಷಿ ಮಾರುಕಟ್ಟೆಗೆ ಲಭ್ಯವಿರುವ ಪರ್ಯಾಯ ವ್ಯವಸ್ಥೆಗಳಾವುವು? ಉದಾಹರಣೆ ಕೊಡಿ.
10. ಹಸಿರು ಕ್ರಾಂತಿ ಮತ್ತು ಸುವರ್ಣಕ್ರಾಂತಿಯ ನಡುವಿನ ವ್ಯತ್ಯಾಸ ಗುರುತಿಸಿ.
11. ಕೃಷಿ ಮಾರುಕಟ್ಟೆಯನ್ನು ಸುಧಾರಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ಸಾಕಾಗುವಷ್ಟಿವೆಯೇ? ಚರ್ಚಿಸಿ.
12. ಗ್ರಾಮೀಣ ವೈವಿಧ್ಯೀಕರಣವನ್ನು ಉತ್ತೇಜಿಸಲು ಕೃಷಿಯೇತರ ಉದ್ಯೋಗದ ಪಾತ್ರವನ್ನು ವಿವರಿಸಿ.
13. ವೈವಿಧ್ಯೀಕರಣದ ಮೂಲವಾಗಿ ಪಶುಸಂಗೋಪನೆ, ಮೀನುಗಾರಿಕೆ ಮತ್ತು ತೋಟಗಾರಿಕೆಯ ಮಹತ್ವವನ್ನು ವಿವರಿಸಿ.
14. 'ಸುಸ್ಥಿರ ಅಭಿವೃದ್ಧಿ ಮತ್ತು ಆಹಾರ ಭದ್ರತೆಯನ್ನು ಸಾಧಿಸುವಲ್ಲಿ ಮಾಹಿತಿ ತಂತ್ರಜ್ಞಾನವು ಪ್ರಮುಖ ಪಾತ್ರವನ್ನು ವಹಿಸುತ್ತದೆ' ವಿಮರ್ಶಿಸಿ.

15. ಸಾವಯವ ಬೇಸಾಯ ಎಂದರೇನು? ಮತ್ತು ಇದು ಹೇಗೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುತ್ತದೆ.
16. ಸಾವಯವ ಬೇಸಾಯದ ಪ್ರಯೋಜನ ಮತ್ತು ಮಿತಿಗಳನ್ನು ಗುರುತಿಸಿ.
17. ಸಾವಯವ ಬೇಸಾಯದ ಪ್ರಾರಂಭದ ವರ್ಷಗಳಲ್ಲಿ ರೈತರು ಎದುರಿಸುವ ಸಮಸ್ಯೆಗಳನ್ನು ಪಟ್ಟಿಮಾಡಿ.



## REFERENCES


**Books:**

ACHARYA, S.S. 2004. Agricultural Marketing, State of the Indian Farmer, a Millennium Study. Academic Foundation, New Delhi.

ALAGH, Y.K. 2004. State of the Indian Farmer, a Millennium Study – an Overview. Academic Foundation, New Delhi.

CHAWLA, N.K., M.P.G. KURUP and V. P. SHARMA. 2004. Animal Husbandry, State of the Indian Farmer, a Millennium Study. Academic Foundation, New Delhi.

DEHADRAI, P.V. and Y.S. YADAV. 2004. Fisheries Development, State of the Indian Farmer, a Millennium Study. Academic Foundation, New Delhi.

JALAN, BIMAL. (Ed.). 1992. The Indian Economy: Problems and Perspectives. Penguin Publication, New Delhi.

NARAYANAN, S. 2005. Organic Farming in India. NABARD Occasional Paper No: 38, Department of Agriculture and Rural Development, Mumbai.

SINGH, H.P., P.P. DUTTA and M. SUDHA. 2004. Horticulture Development, State of the Indian Farmer, a Millennium Study. Academic Foundation, New Delhi.

SINGH, SURJIT and VIDYA SAGAR. 2004. Agricultural Credit in India: State of the Indian Farmer, a Millennium Study. Academic Foundation, New Delhi.

SINHA, V.K. 1998. Challenges in Rural Development. Discovery Publishing House, New Delhi.

TODARO, MICHAEL P. 1987. Economic Development in the Third World. Orient Longman Ltd, Hyderabad.

TOPPO, E. 2004. Organic Vegetable Gardening: Grow Your Own Vegetables. Unit for Labour Studies, Tata Institute of Social Sciences, Mumbai.

**Government Reports:**

Successful Governance Initiatives and Best Practices: Experiences from Indian States, Government of India in Coordination with Human Resource Development Centre and UNDP, Planning Commission, Delhi, 2002.

Annual Reports, Ministry of Rural Development, Government of India, New Delhi.

**Website**

www.dahd.nic.in.

7

# ಅಧ್ಯಾಯ–7

# ಉದ್ಯೋಗ: ಬೆಳವಣಿಗೆ, ಅನೌಪಚಾರೀಕರಣ ಮತ್ತು ಇತರ ಸಮಸ್ಯೆಗಳು

# EMPLOYMENT: GROWTH, INFORMALISATION AND OTHER ISSUES

**ಈ ಅಧ್ಯಾಯದ ಅಧ್ಯಯನದ ನಂತರ ನೀವು:**

- ಉದ್ಯೋಗಕ್ಕೆ ಸಂಬಂಧಿಸಿದಂತಹ ಕೆಲವು ಮೂಲಭೂತ ಪರಿಕಲ್ಪನೆಗಳಾದ ಆರ್ಥಿಕ ಚಟುವಟಿಕೆ, ಶ್ರಮಿಕ, ಶ್ರಮಿಕರ ಬಲ ಮತ್ತು ನಿರುದ್ಯೋಗಗಳನ್ನು ಅರ್ಥಮಾಡುಕೊಳ್ಳುವಿರಿ.
- ವಿವಿಧ ವಲಯಗಳಲ್ಲಿನ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವ/ತೊಡಗುವ ಪುರುಷ ಮತ್ತು ಮಹಿಳೆಯರ ಸ್ವರೂಪವನ್ನು ಅರ್ಥಮಾಡಿಕೊಳ್ಳುವಿರಿ.
- ಉದ್ಯೋಗದ ಸ್ವರೂಪ ಮತ್ತು ಉದ್ಯೋಗದ ಮಟ್ಟವನ್ನು (ಹರವು/ವಿಸ್ತಾರ) ತಿಳಿಯುವಿರಿ.
- ಸರ್ಕಾರ ವಿವಿಧ ವಲಯಗಳಲ್ಲಿ ಮತ್ತು ಪ್ರದೇಶಗಳಲ್ಲಿ ಉದ್ಯೋಗವಕಾಶಗಳನ್ನು ಸೃಷ್ಟಿಸುವಲ್ಲಿ ಕೈಗೊಂಡ ಕ್ರಮಗಳನ್ನು ಮೌಲ್ಯಮಾಪನ ಮಾಡುವುರಿ.

"ನಾನು ಯಂತ್ರೋಪಕರಣಗಳ ಬಗ್ಗೆ ಇರುವ ಹುಚ್ಚನ್ನು ಆಕ್ಷೇಪಿಸುತ್ತೇನೆ ಹೊರತು ಯಂತ್ರೋಪಕರಣಗಳನ್ನಲ್ಲ. ಯಂತ್ರೋಪಕರಣಗಳು ಶ್ರಮ ಉಳಿತಾಯ ಮಾಡುತ್ತವೆ ಎಂಬ ಗೀಳು ಜನರಲ್ಲಿದೆ. ಸಾವಿರಾರು ಜನ ಉದ್ಯೋಗವಿಲ್ಲದೆ ಬೀದಿಯಲ್ಲಿ ಹಸಿವಿನಿಂದ ಸಾಯುತ್ತಿರುವಾಗ ಜನರು ಶ್ರಮ ಉಳಿತಾಯ ಮಾಡಲು ಬಯಸುವರು"

– ಮಹಾತ್ಮ ಗಾಂಧೀಜಿ

## 7.1 ಪೀಠಿಕೆ INTRODUCTION

ಜನರು ವಿವಿಧ ಕೆಲಸಗಳನ್ನು ಮಾಡುತ್ತಾರೆ. ಕೆಲವರು ಹೊಲ–ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ, ಬ್ಯಾಂಕುಗಳಲ್ಲಿ, ಅಂಗಡಿಗಳಲ್ಲಿ ಮತ್ತು ಇತರ ಉದ್ಯೋಗ ಸ್ಥಳಗಳಲ್ಲಿ ಕೆಲಸ ಮಾಡುವರು. ಇನ್ನೂ ಕೆಲವರು ಮನೆಯಲ್ಲಿ ಕೆಲಸ ಮಾಡುತ್ತಾರೆ. ಮನೆಯಲ್ಲಿನ ಕೆಲಸವೆಂದರೆ ಸಾಂಪ್ರದಾಯಕ ಕೆಲಸಗಳಾದ ನೇಯುವುದು, ಕಸೂತಿ ಹಾಕುವುದು ಅಥವಾ ವಿವಿಧ ಕರಕುಶಲ ಕೆಲಸಗಳು ಮಾತ್ರವಲ್ಲದೆ, ಮಾಹಿತಿ ತಂತ್ರಜ್ಞಾನ ಕೈಗಾರಿಕೆಯಲ್ಲಿನ ಪ್ರೋಗ್ರಾಮ್ಮಿಂಗ್ ನಂತಹ ಆಧುನಿಕ ಉದ್ಯೋಗಗಳು ಸೇರುತ್ತವೆ. ಹಿಂದೆ ಕಾರ್ಖಾನೆ ಕೆಲಸವೆಂದರೆ ನಗರಗಳಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಎನ್ನುವುದಾಗಿತ್ತು. ಆದರೆ ಈಗ ತಂತ್ರಜ್ಞಾನವು ಜನರನ್ನು ಕಾರ್ಖಾನೆಯಾಧಾರಿತ ವಸ್ತುಗಳನ್ನು ಹಳ್ಳಿಗಳ ಮನೆಗಳಲ್ಲೇ ಉತ್ಪಾದಿಸುವಷ್ಟು ಸಮರ್ಥರನ್ನಾಗಿಸಿದೆ.

ಜನರು ಯಾಕೆ ಕೆಲಸ ಮಾಡುತ್ತಾರೆ? ಕೆಲಸ ನಮ್ಮ ವೈಯುಕ್ತಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜನರು ತಮ್ಮ ಜೀವನಕ್ಕಾಗಿ ದುಡಿಯುತ್ತಾರೆ. ಕೆಲಜನರು ಕೆಲಸ ಮಾಡದೆ ತಮ್ಮ ಪಿತ್ರಾರ್ಜಿತ ಹಣವನ್ನು ಹೊಂದಿರಬಹುದು. ಆದರೆ ಇದು ಯಾರನ್ನೂ ಸಂಪೂರ್ಣವಾಗಿ ತೃಪ್ತಿಪಡಿಸುವುದಿಲ್ಲ. ಕೆಲಸದಲ್ಲಿ ತೊಡಗಿಸಿಕೊಳ್ಳುವುದರಿಂದ, ಅದು ನಮ್ಮಲ್ಲಿ ಸ್ವಗೌರವ ಪ್ರಜ್ಞೆಯನ್ನು ಮೂಡಿಸುವುದಲ್ಲದೆ ನಮ್ಮನ್ನು ಸಮಾಜದಲ್ಲಿ ಇತರರೊಂದಿಗೆ ಬೆರೆಯಲು ಸಮರ್ಥರನ್ನಾಗಿಸುತ್ತದೆ. ಪ್ರತಿಯೊಬ್ಬ ಕೆಲಸಗಾರನು ರಾಷ್ಟ್ರೀಯ ವರಮಾನಕ್ಕೆ ಕ್ರಿಯಾಶೀಲ ಕೊಡುಗೆಯನ್ನು ಸಲ್ಲಿಸುತ್ತಾನೆ. ಹಾಗಾಗಿ, ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುವುದರಿಂದ ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿ ಉಂಟಾಗುತ್ತದೆ. ಇದೇ ದುಡಿಮೆಯ ಬದುಕಿನ ನಿಜವಾದ ಅರ್ಥವಾಗಿದೆ. ನಮಗೋಸ್ಕರ ಮಾತ್ರವಲ್ಲದೆ ನಮ್ಮನ್ನು ಅವಲಂಬಿಸಿದವರ ಅಗತ್ಯತೆಗಳನ್ನು ಪೂರೈಸುವ



ಚಿತ್ರ 7.1 ಪಂಜಾಬ್ ರಾಜ್ಯದ ಜಲಂದರ್‌ನ ಮನೆಗಳಲ್ಲಿ ತಯಾರಾದ ಫುಟ್‌ಬಾಲ್ ಬಹುರಾಷ್ಟ್ರೀಯ ಕಂಪನಿಗಳು ಮಾರಾಟಮಾಡುತ್ತವೆ

ದೃಷ್ಟಿಯಿಂದ ದುಡಿದಾಗ ಒಂದು ಸಾಧನೆಯ ಭಾವ ನಮ್ಮಲ್ಲಿರುತ್ತದೆ. ಮಹಾತ್ಮ ಗಾಂಧೀಜಿಯವರು ಕರಕುಶಲ ಕೆಲಸಗಳು ಸೇರಿದಂತೆ ವಿವಿಧ ಕೆಲಸಗಳ ಮೂಲಕ ಶಿಕ್ಷಣ ಮತ್ತು ತರಬೇತಿ ನೀಡುವ ಬಗ್ಗೆ ಹೆಚ್ಚು ಒತ್ತನ್ನು ನೀಡಿದ್ದರು.

ದುಡಿಯುವ ಜನರ ಬಗ್ಗೆ ಅಧ್ಯಯನ ಮಾಡುವುದರಿಂದ ಅದು ನಮ್ಮ ದೇಶದಲ್ಲಿನ ಉದ್ಯೋಗದ ಗುಣಲಕ್ಷಣಗಳು ಮತ್ತು ಸ್ವರೂಪದ ಬಗ್ಗೆ ಪರಿಜ್ಞಾನವನ್ನು ತಂದುಕೊಡುತ್ತದೆ ಮತ್ತು ಮಾನವ ಸಂಪನ್ಮೂಲ ಹಾಗೂ ಅದರ ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಇದು ವಿವಿಧ ಕೈಗಾರಿಕೆಗಳು ಮತ್ತು ವಲಯಗಳು ರಾಷ್ಟ್ರೀಯ ವರಮಾನಕ್ಕೆ ನೀಡಿರುವ ಕೊಡುಗೆಯನ್ನು ವಿಶ್ಲೇಷಿಸಲು ಸಹಾಯಕವಾಗಿದೆ. ಇದು ಅನೇಕ ಸಾಮಾಜಿಕ ಸಮಸ್ಯೆಗಳಾದಂತಹ ಸಮಾಜದ ಕಟ್ಟಕಡೆಯ (ಅಂಚಿನ–Marginalised) ಜನರ ಶೋಷಣೆ, ಬಾಲಕಾರ್ಮಿಕ ಸಮಸ್ಯೆ ಮುಂತಾದವುಗಳನ್ನು ಬಗೆಹರಿಸಲು ಕೂಡ ಇದು ಸಹಾಯಕವಾಗಿದೆ.

## 7.2 ಶ್ರಮಿಕರು ಮತ್ತು ಉದ್ಯೋಗ WORKERS AND EMPLOYMENT

ಉದ್ಯೋಗ ಎಂದರೇನು? ಶ್ರಮಿಕ ಎಂದರೆ ಯಾರು? ರೈತನೊಬ್ಬ ತನ್ನ ಹೊಲ–ಗದ್ದೆಯಲ್ಲಿ ಶ್ರಮವಹಿಸಿ ಆಹಾರ ಧಾನ್ಯಗಳನ್ನು ಮತ್ತು ಕೈಗಾರಿಕೆಗಳಿಗೆ ಕಚ್ಚಾ ಸರಕುಗಳನ್ನು ಉತ್ಪಾದಿಸುತ್ತಾನೆ/ತ್ತಾಳೆ. ಹತ್ತಿಯು ಬಟ್ಟೆ ಗಿರಣಿಗಳಲ್ಲಿ ಮತ್ತು ವಿದ್ಯುತ್ ಮಗ್ಗಗಳಲ್ಲಿ ಬಟ್ಟೆಯಾಗಿ ತಯಾರಾಗುತ್ತದೆ. ಲಾರಿಗಳು ಸರಕು ಮತ್ತು ಸೇವೆಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸುತ್ತವೆ. ಒಂದು ವರ್ಷದಲ್ಲಿ ರಾಷ್ಟ್ರದೊಳಗೆ ಉತ್ಪಾದಿಸಲ್ಪಟ್ಟ ಅಂತಹ ಸರಕು ಮತ್ತು ಸೇವೆಗಳ ಒಟ್ಟು ಹಣರೂಪಿ ಮೌಲ್ಯವನ್ನು ಆ ದೇಶದ ಒಟ್ಟು ದೇಶೀಯ ಉತ್ಪನ್ನ (Gross Domestic Product-GDP)ವೆಂದು ಕರೆಯಲಾಗುತ್ತದೆಂಬುದು ನಮಗೆ ತಿಳಿದಿದೆ. ಒಂದು ವೇಳೆ ನಾವು ಆಮದಿಗಾಗಿ ಪಾವತಿಸುವ ಮತ್ತು ರಫ್ತುವಿನಿಂದ ಗಳಿಸುವ ಆದಾಯವನ್ನು ಪರಿಗಣಿಸಿದರೆ ನಿವ್ವಳ ಗಳಿಕೆ (Net Earnings) ಯನ್ನು ಕಂಡುಹಿಡಿಯಬಹುದು. ಆ ನಿವ್ವಳ ಗಳಿಕೆಯು ಧನಾತ್ಮಕವಾಗಿರಬಹುದು (ನಮ್ಮ ರಫ್ತುವಿನ ಮೌಲ್ಯ ಆಮದಿನ ಮೌಲ್ಯಕ್ಕಿಂತ ಹೆಚ್ಚಾಗಿರುವುದು) ಅಥವಾ ಋಣಾತ್ಮಕವಾಗಿರಬಹುದು (ನಮ್ಮ ಆಮದಿನ ಮೌಲ್ಯ ರಫ್ತುವಿನ ಮೌಲ್ಯಕ್ಕಿಂತ ಹೆಚ್ಚಾಗಿರುವುದು) ಅಥವಾ ಶೂನ್ಯವಾಗಿರಬಹುದು (ರಫ್ತು ಮತ್ತು ಆಮದಿನ ಮೌಲ್ಯ ಪರಸ್ಪರ ಸಮನಾಗಿರುವುದು). ವಿದೇಶಿ ವ್ಯವಹಾರಗಳಿಂದ ಗಳಿಸಿದ ಆದಾಯವನ್ನು (+ ಅಥವಾ – ) ರಾಷ್ಟ್ರದ ಒಟ್ಟು ದೇಶೀಯ ಉತ್ಪನ್ನಕ್ಕೆ ಸೇರಿಸಿದಾಗ ಅದನ್ನು ಒಟ್ಟು ರಾಷ್ಟ್ರೀಯ ಉತ್ಪನ್ನ (Gross National Product-GNP) ವೆಂದು ಕರೆಯಲಾಗುತ್ತದೆ.

ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆ ನೀಡುವ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳು ಎಂದು ಕರೆಯಲಾಗುತ್ತದೆ. ತಮ್ಮ ತಮ್ಮ ಸಾಮರ್ಥ್ಯದ (ಹೆಚ್ಚು ಅಥವಾ ಕಡಿಮೆಯಿರಬಹುದು) ಆಧಾರದ ಮೇರೆಗೆ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವವರನ್ನು 'ಶ್ರಮಿಕರು' ಎಂದು ಕರೆಯಲಾಗುತ್ತದೆ. ಕೆಲವರು ಅನಾರೋಗ್ಯ, ಖಾಯಿಲೆ ಅಥವಾ ದೈಹಿಕ ಅಸಮರ್ಥತೆ, ಪ್ರತಿಕೂಲ ಹವಾಮಾನ, ಹಬ್ಬ–ಹರಿದಿನಗಳು, ಸಾಮಾಜಿಕ ಅಥವಾ ಧಾರ್ಮಿಕ ಸಮಾರಂಭಗಳಿಂದಾಗಿ ಕೆಲಸದಿಂದ ತಾತ್ಕಾಲಿಕವಾಗಿ ದೂರ ಉಳಿದಿರುವವರನ್ನೂ ಕೂಡ 'ಶ್ರಮಿಕ'ರೆಂದು ಕರೆಯಲಾಗುವುದು. ಆರ್ಥಿಕ ಚಟುವಟಿಕೆಗಳಲ್ಲಿ ಮುಖ್ಯ ಕೆಲಸಗಾರರಿಗೆ ಸಹಾಯಕರಾಗಿ ಕೆಲಸ ಮಾಡುವವರೂ ಶ್ರಮಿಕ ವರ್ಗಕ್ಕೆ ಸೇರುತ್ತಾರೆ. ಸಾಮಾನ್ಯವಾಗಿ ತಮ್ಮ ಕೆಲಸಕ್ಕಾಗಿ ಮಾಲೀಕನಿಂದ ಹಣಪಡೆಯುವವರನ್ನು ಶ್ರಮಿಕರೆಂದು ಕರೆಯಲಾಗುತ್ತದೆ. ಇದು ಸರಿಯಾದ ಅರ್ಥವಲ್ಲ. ಸ್ವಉದ್ಯೋಗವನ್ನು ಕೈಗೊಳ್ಳುವವರೆಲ್ಲರೂ ಕೂಡ ಕಾರ್ಮಿಕರು ಎಂದು ಹೇಳಿದರೆ ತಪ್ಪಾಗಲಾರದು.

ಭಾರತದಲ್ಲಿ ಉದ್ಯೋಗದ ಸ್ವರೂಪವು ಬಹು ಮುಖಿಯಾಗಿದೆ. ಕೆಲವರು ವರ್ಷಪೂರ್ತಿ ಉದ್ಯೋಗವನ್ನು ಹೊಂದಿದ್ದರೆ ಮತ್ತೆ ಕೆಲವರು ವರ್ಷದಲ್ಲಿ ಕೆಲವೇ ಕೆಲವು ತಿಂಗಳುಗಳು ಮಾತ್ರ ಉದ್ಯೋಗವನ್ನು ಹೊಂದಿದ್ದಾರೆ. ಅನೇಕ ಕೆಲಸಗಾರರು ತಮ್ಮ ಕೆಲಸಕ್ಕೆ ನ್ಯಾಯಯುತ ಕೂಲಿಯನ್ನು ಪಡೆಯುತ್ತಿಲ್ಲ. ಶ್ರಮಿಕರ ಸಂಖ್ಯೆಯನ್ನು ಅಂದಾಜು ಮಾಡುವಾಗ ಆರ್ಥಿಕ ಚಟುವಟಿಕೆಗಳಲ್ಲಿ

**ನೀವೇ ಮಾಡಿರಿ**

**(Work this out)**

- ನಿಮ್ಮ ಮನೆಯಲ್ಲಿ ಅಥವಾ ನೆರೆಹೊರೆಯಲ್ಲಿ ಅನೇಕ ಮಹಿಳೆಯರು ತಾಂತ್ರಿಕ ಪದವಿಗಳನ್ನು ಮತ್ತು ಡಿಪ್ಲೊಮಾಗಳನ್ನು ಹೊಂದಿರುವುದಲ್ಲದೆ ಕೆಲಸಕ್ಕೆ ಹೋಗುವಷ್ಟು ಸಮಯಾವಕಾಶವಿದ್ದರೂ ಕೆಲಸಕ್ಕೆ ಹೋಗುವುದಿಲ್ಲ. ಅವರು ಕೆಲಸಕ್ಕೆ ಹೋಗದಿರಲು ಕಾರಣಗಳನ್ನು ಕೇಳಿ ಪಟ್ಟಿ ಮಾಡಿ. ಈ ಮಹಿಳೆಯರು ಕೆಲಸಕ್ಕೆ ಹೋಗಬೇಕೆ ಮತ್ತು ಏಕೆ ಹೋಗಬೇಕು ಹಾಗೂ ಕೆಲಸಕ್ಕೆ ಅವರನ್ನು ಕಳುಹಿಸಬಹುದಾದ ಮಾರ್ಗೋಪಾಯಗಳು ಯಾವುವು ಎಂಬುದನ್ನು ತರಗತಿಗಳಲ್ಲಿ ಚರ್ಚಿಸಿ. ಅನೇಕ ಸಾಮಾಜಿಕ ವಿಜ್ಞಾನಿಗಳು ಯಾವುದೇ ಕೂಲಿಯಿಲ್ಲದೆ ತಮ್ಮ ಮನೆಗಳಲ್ಲಿ ಕೆಲಸ ನಿರ್ವಹಿಸುವ ಗೃಹಿಣಿಯರೂ ಕೂಡ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವವರಂತೆಯೇ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆಯನ್ನು ನೀಡುವವರೆಂದು ವಾದಿಸುವರು. ಇದನ್ನು ನೀವು ಒಪ್ಪುವಿರಾ?

ತೊಡಗಿರುವವರೆಲ್ಲರನ್ನು ಕೆಲಸದಲ್ಲಿರುವವರೆಂದೇ ಪರಿಗಣಿಸಲಾಗುತ್ತದೆ. ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ನಿರತರಾಗಿರುವ ಜನರ ಒಟ್ಟು ಸಂಖ್ಯೆಯನ್ನು ತಿಳಿಯಲು ನೀವು ಆಸಕ್ತರಾಗಿರಬಹುದು. 2011–12ರಲ್ಲಿ ಭಾರತದ ಪ್ರಬಲ ಶ್ರಮಬಲದ ಸಂಖ್ಯೆ 473 ದಶಲಕ್ಷದಷ್ಟಿತ್ತು. ಒಟ್ಟು ಶ್ರಮಬಲದಲ್ಲಿ ಪುರುಷರೇ ಅಧಿಕವಾಗಿದ್ದಾರೆ. ಭಾರತದಲ್ಲಿ ಹೆಚ್ಚು ಜನರು ಗ್ರಾಮೀಣ ಪ್ರದೇಶಗಳಲ್ಲೇ ವಾಸವಾಗಿರುವುದರಿಂದ ಒಟ್ಟು ಶ್ರಮಿಕರಲ್ಲಿ ಬಹುಪಾಲು ಅವರೇ ಆಗಿದ್ದಾರೆ. ಈ 473 ದಶಲಕ್ಷ ಶ್ರಮಿಕರಲ್ಲಿ ಗ್ರಾಮೀಣ ಶ್ರಮಿಕರು 3/4 ಭಾಗದಷ್ಟಿದ್ದಾರೆ. ಒಟ್ಟು ಶ್ರಮಿಕರಲ್ಲಿ ಶೇ. 70ರಷ್ಟು ಪುರುಷರಾಗಿದ್ದು, ಉಳಿದವರು ಮಹಿಳೆಯರಾಗಿದ್ದಾರೆ. (ಪುರುಷ ಮತ್ತು ಮಹಿಳಾ ಶ್ರಮಿಕರೆರೆಡರಲ್ಲೂ ಬಾಲ ಕಾರ್ಮಿಕರನ್ನು ಒಳಗೊಂಡಂತೆ). ಮಹಿಳಾ ಶ್ರಮಿಕರಲ್ಲಿ 1/3 ಭಾಗದಷ್ಟು ಗ್ರಾಮೀಣ ಪ್ರದೇಶದವರಾಗಿದ್ದರೆ 1/5 ಭಾಗದಷ್ಟು ನಗರ ಪ್ರದೇಶದವರಾಗಿದ್ದಾರೆ. ಮಹಿಳೆಯರು ಅಡುಗೆ ಮಾಡುವುದು, ನೀರು ಮತ್ತು ಉರುವಲು ಸೌದೆಯನ್ನು ತರುವುದು ಹಾಗೂ ಹೊಲ–ಗದ್ದೆಗಳಲ್ಲಿ ಮಾಡುವಂತಹ ಕೆಲಸಗಳನ್ನು ನಿರ್ವಹಿಸುವರು. ಆದರೆ ಇವರ ಕೆಲಸಕ್ಕೆ ಕೂಲಿಯನ್ನು ಹಣದ ರೂಪದಲ್ಲಾಗಲಿ ಅಥವಾ ಧಾನ್ಯಗಳ ರೂಪದಲ್ಲಾಗಲಿ ನೀಡುವುದಿಲ್ಲ. ಈ ಕಾರಣದಿಂದಾಗಿ ಇಂತಹ ಮಹಿಳೆಯರನ್ನು ಶ್ರಮಿಕರ ವರ್ಗಕ್ಕೆ ಸೇರಿಸಲಾಗಿಲ್ಲ. ಆದರೆ ಅರ್ಥಶಾಸ್ತ್ರಜ್ಞರು ಈ ಮಹಿಳೆಯರನ್ನೂ ಕೂಡ ಶ್ರಮಿಕರೆಂದು ಕರೆಯಬೇಕೆಂದು ವಾದಿಸಿದ್ದಾರೆ.

## 7.3 ಉದ್ಯೋಗದಲ್ಲಿನ ಜನರ ಭಾಗವಹಿಸುವಿಕೆ PARTICIPATION OF PEOPLE IN EMPLOYMENT

ಶ್ರಮಿಕ–ಜನಸಂಖ್ಯೆಯ ಅನುಪಾತ ಸೂಚಕವನ್ನು ರಾಷ್ಟ್ರದ ಉದ್ಯೋಗದ ಸ್ಥಿತಿಯನ್ನು ವಿಶ್ಲೇಷಿಸಲು ಉಪಯೋಗಿಸಲಾಗುತ್ತದೆ. ಈ ಅನುಪಾತವು ರಾಷ್ಟ್ರದ ಸರಕು ಮತ್ತು ಸೇವೆಗಳ ಉತ್ಪಾದನೆಗೆ ಸಕ್ರೀಯವಾಗಿ ಕೊಡುಗೆ ಸಲ್ಲಿಸುವ ಜನರ ಪ್ರಮಾಣವನ್ನು ತಿಳಿಯಲು ಉಪಯುಕ್ತವಾಗಿದೆ. ಒಂದು ವೇಳೆ ಈ ಅನುಪಾತವು ಹೆಚ್ಚಾಗಿದ್ದರೆ, ಉದ್ಯೋಗದಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚಾಗಿದೆ ಎಂದರ್ಥ. ಒಂದು ವೇಳೆ ಈ ಅನುಪಾತವು ಮಧ್ಯಮ ಅಥವಾ ಅಲ್ಪಪ್ರಮಾಣದಲ್ಲಿದ್ದರೆ, ಜನಸಂಖ್ಯೆಯಲ್ಲಿನ ದೊಡ್ಡ ಪ್ರಮಾಣದ ಜನರು ಆರ್ಥಿಕ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿಸಿಕೊಂಡಿಲ್ಲ ಎಂದರ್ಥ.

ನೀವು ಈಗಾಗಲೇ ಹಿಂದಿನ ತರಗತಿಗಳಲ್ಲಿ 'ಜನಸಂಖ್ಯೆ' ಎಂಬ ಪರಿಭಾವನೆಯ ಅರ್ಥವನ್ನು ಅಧ್ಯಯನ ಮಾಡಿರಬಹುದು. ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಸಮಯದಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆಯನ್ನು 'ಜನಸಂಖ್ಯೆ' ಎಂದು ವ್ಯಾಖ್ಯಾನಿಸಲಾಗಿದೆ. ನೀವು ಶ್ರಮಿಕ–ಜನಸಂಖ್ಯೆಯ ಅನುಪಾತವನ್ನು ತಿಳಿಯಬೇಕಾದರೆ ಭಾರತದ ಒಟ್ಟು ಶ್ರಮಿಕರನ್ನು ಭಾರತದ ಒಟ್ಟು ಜನಸಂಖ್ಯೆಯಿಂದ ಭಾಗಿಸಿ ಅದನ್ನು 100ರಿಂದ ಗುಣಿಸಿದರೆ ಶ್ರಮಿಕ–ಜನಸಂಖ್ಯೆಯ ಅನುಪಾತವನ್ನು ಪಡೆಯಬಹುದು.

ಈ ಕೆಳಗಿನ ಕೋಷ್ಟಕ(7.1)ವನ್ನು ಗಮನಿಸಿ. ಇದು ವಿವಿಧ ಮಟ್ಟದಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಜನರನ್ನು ತೋರಿಸುತ್ತದೆ. ಭಾರತದಲ್ಲಿ ಪ್ರತಿ 100 ಜನರಿಗೆ 39 ಜನ (38.6 ನ್ನು 39 ಎಂದು ಪರಿಗಣಿಸಲಾಗಿದೆ) ಶ್ರಮಿಕರಿದ್ದಾರೆ. ನಗರ ಪ್ರದೇಶಗಳಲ್ಲಿ 36 ಜನ ಶ್ರಮಿಕರಿದ್ದರೆ ಗ್ರಾಮೀಣ ಪ್ರದೇಶಗಳಲ್ಲಿ 40 ಜನರಿದ್ದಾರೆ. ಏಕೆ ಇಷ್ಟೊಂದು ವ್ಯತ್ಯಾಸ? ಗ್ರಾಮೀಣ ಪ್ರದೇಶಗಳಲ್ಲಿನ ಜನರು ಮಿತ ಸಂಪನ್ಮೂಲಗಳನ್ನು ಹೊಂದಿರುವುದರಿಂದ ಹೆಚ್ಚು ಆದಾಯ ಸಂಪಾದಿಸಲು ಹೆಚ್ಚು ಹೆಚ್ಚು ಉದ್ಯೋಗ ಮಾರುಕಟ್ಟೆಯಲ್ಲಿ ಭಾಗವಹಿಸುತ್ತಾರೆ. ಅನೇಕ ಜನರು ಶಾಲಾ–ಕಾಲೇಜುಗಳಿಗೆ ಮತ್ತು ತರಬೇತಿ ನೀಡುವ ಸಂಸ್ಥೆಗಳಿಗೆ ಹೋಗುವುದೆ ಇಲ್ಲ. ಒಂದು ವೇಳೆ ಕೆಲವರು ಹೋದರೂ ಮಧ್ಯದಲ್ಲೇ ಸ್ಥಗಿತಗೊಳಿಸಿ (ನಿಲ್ಲಿಸಿ) ಕೆಲಸಕ್ಕೆ ಸೇರುವರು. ಆದರೆ ನಗರ ಪ್ರದೇಶಗಳಲ್ಲಿ ಗಣನೀಯ ಪ್ರಮಾಣದ ಜನರು ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ಶಕ್ತರಾಗಿರುತ್ತಾರೆ. ನಗರ ಪ್ರದೇಶದ ಜನರು ವಿವಿಧ ಉದ್ಯೋಗವಕಾಶಗಳನ್ನು ಹೊಂದಿರುವರು. ಅವರು ತಮ್ಮ ವಿದ್ಯಾರ್ಹತೆ ಮತ್ತು ಕೌಶಲ್ಯಗಳಿಗೆ ತಕ್ಕಂತ ಉದ್ಯೋಗವನ್ನು ಅರಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿನ ಆರ್ಥಿಕ ಸ್ಥಿತಿಗತಿಗಳು ಜನರನ್ನು ಮನೆಯಲ್ಲಿ ಉಳಿಯಲು ಬಿಡುವುದಿಲ್ಲ.

**ಕೋಷ್ಟಕ 7.1**

**ಭಾರತದಲ್ಲಿನ ಶ್ರಮಿಕ–ಜನಸಂಖ್ಯೆಯ ಅನುಪಾತ 2011–12**

| ಲಿಂಗ | ಶ್ರಮಿಕ–ಜನಸಂಖ್ಯೆಯ ಅನುಪಾತ | | |
|---|---|---|---|
| | ಒಟ್ಟು | ಗ್ರಾಮೀಣ | ನಗರ |
| ಪುರುಷರು | 54.4 | 54.3 | 54.6 |
| ಮಹಿಳೆಯರು | 21.9 | 24.8 | 14.7 |
| **ಒಟ್ಟು** | **38.6** | **39.9** | **35.5** |

**ನೀವೇ ಮಾಡಿರಿ**
**(Work this out)**

- ಉದ್ಯೋಗಕ್ಕೆ ಸಂಬಂಧಿಸಿದ ಯಾವುದೇ ಅಧ್ಯಯನ ಶ್ರಮಿಕ-ಜನಸಂಖ್ಯೆಯ ಅನುಪಾತದ ಪುನರ್‌ವಿಮರ್ಶೆ (ಮರುಪರಿಶೀಲನೆ)ಯಿಂದಲೇ ಪ್ರಾರಂಭವಾಗಬೇಕು–ಏಕೆ?
- ಕೆಲವು ಸಮುದಾಯಗಳಲ್ಲಿ ಗಂಡಸರು ಹೆಚ್ಚು ಆದಾಯವನ್ನು ಸಂಪಾದಿಸದಿದ್ದರೂ ಮಹಿಳೆಯರನ್ನು ಕೆಲಸಕ್ಕೆ ಕಳುಹಿಸದಿರುವುದನ್ನು ನೀವು ಗಮನಿಸಿರಬಹುದು–ಏಕೆ?

ಸ್ತ್ರೀಯರಿಗೆ ಹೋಲಿಸಿದರೆ ಪುರುಷರೇ ಹೆಚ್ಚು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಉದ್ಯೋಗದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರದಲ್ಲೂ ಅಗಾಧ ವ್ಯತ್ಯಾಸವಿದೆ. ನಗರ ಪ್ರದೇಶಗಳಲ್ಲಿ ಪ್ರತಿ 100 ನಗರ ಮಹಿಳೆಯರಿಗೆ ಕೇವಲ 15 ಮಹಿಳೆಯರು ಮಾತ್ರ ಕೆಲವು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ 25 ಮಹಿಳೆಯರು ಉದ್ಯೋಗದ ಮಾರುಕಟ್ಟೆಯಲ್ಲಿ ಭಾಗವಹಿಸುವರು. ಸಾಮನ್ಯವಾಗಿ, ಮಹಿಳೆಯರು ವಿಶೇಷವಾಗಿ ನಗರ ಮಹಿಳೆಯರು ಏಕೆ ಕೆಲಸ ಮಾಡುವುದಿಲ್ಲ? ಎಲ್ಲಿ ಪುರುಷರು ಹೆಚ್ಚು ಆದಾಯವನ್ನು ಸಂಪಾದಿಸುತ್ತಾರೋ ಅಂತಹ ಕುಟುಂಬಗಳಲ್ಲಿ ಮಹಿಳೆಯರು ಕೆಲಸ ಮಾಡುವುದನ್ನು ಪ್ರೋತ್ಸಾಹಿಸುವುದಿಲ್ಲವೆಂಬುದು ಸಾಮಾನ್ಯವಾಗಿ ಕಂಡುಬರುತ್ತದೆ.

ಮೇಲೆ ತಿಳಿಸಿದ ವಿಷಯಕ್ಕೆ ಈಗ ಮತ್ತೆ ಬರೋಣ. ಮಹಿಳೆಯರು ನಿರ್ವಹಿಸುವ ಅನೇಕ ಗೃಹಕೃತ್ಯಗಳನ್ನು ಉತ್ಪಾದಕ ಕೆಲಸವೆಂದು ಪರಿಗಣಿಸಿಲ್ಲ. ಕೆಲಸ/ಉದ್ಯೋಗದ ಬಗ್ಗೆ ಇರುವ ಇಂತಹ ಸಂಕುಚಿತ ವ್ಯಾಖ್ಯಾನವು ಮಹಿಳೆಯರ ಕೆಲಸಕ್ಕೆ ಮನ್ನಣೆ ನೀಡುವುದಿಲ್ಲ ಮತ್ತು ರಾಷ್ಟ್ರದ ಮಹಿಳಾ ಉದ್ಯೋಗಿಗಳ ಸಂಖ್ಯೆ ವಾಸ್ತವವಾಗಿರುವುದಕ್ಕಿಂತ ಕಡಿಮೆ ಅಂದಾಜಿಗೆ ಕಾರಣವಾಗುತ್ತದೆ. ಮಹಿಳೆಯರು ಮನೆಯೊಳಗೆ ಮತ್ತು ಹೊಲ-ಗದ್ದೆಗಳ ಅನೇಕ ಕೆಲಸಗಳಲ್ಲಿ ತೊಡಗಿದ್ದರೂ ಅವರ ಕೆಲಸಗಳಿಗೆ ಯಾವುದೇ ಕೂಲಿಯಿಲ್ಲ ಎಂಬುದನ್ನು ಯೋಚಿಸಿ ನೋಡಿ. ಮನೆ ಮತ್ತು ಹೊಲ-ಗದ್ದೆಗಳ ನಿರ್ವಹಣೆಯಲ್ಲಿ ಅವರು ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸುವುದರಿಂದ ಅವರನ್ನು ಕೂಡ ಮಹಿಳಾ ಉದ್ಯೋಗಿಗಳ ಸಂಖ್ಯೆಗೆ ಸೇರಿಸಲೇಬೇಕಲ್ಲವೇ?

## 7.4 ಸ್ವ-ಉದ್ಯೋಗಿಗಳು ಮತ್ತು ಕೂಲಿ ಶ್ರಮಿಕರು SELF-EMPLOYMENT AND HIRED WORKERS

ಶ್ರಮಿಕ-ಜನಸಂಖ್ಯೆಯ ಅನುಪಾತ ಸಮಾಜದಲ್ಲಿನ ಶ್ರಮಿಕರ ಸ್ಥಾನಮಾನ ಅಥವಾ ಅವರ ಕೆಲಸದ ಸ್ಥಿತಿಗತಿಗಳನ್ನು ತಿಳಿಸುತ್ತದೆಯೇ? ಉದ್ಯಮದಲ್ಲಿನ ಶ್ರಮಿಕರ ಸ್ಥಾನಮಾನಗಳನ್ನು ತಿಳಿಯುವುದರ ಮೂಲಕ ರಾಷ್ಟ್ರದಲ್ಲಿನ ಉದ್ಯೋಗದ ಗುಣಮಟ್ಟದ ಪ್ರಮಾಣವನ್ನು ತಿಳಿಯಲು ಸಾಧ್ಯವಾಗುತ್ತದೆ. ಅಲ್ಲದೆ, ಇದರಿಂದ ಆತನಿಗೆ/ಅವಳಿಗೆ ತನ್ನ ಕೆಲಸದ ಬಗ್ಗೆ ಇರುವ ಆಸಕ್ತಿ ಹಾಗೂ ಕೆಲಸ ನಿರ್ವಹಿಸುವ ಉದ್ಯಮ ಮತ್ತು ಸಹೋದ್ಯೋಗಿಗಳ ಮೇಲೆ ಇರುವ ವಿಶ್ವಾಸವನ್ನು ನಾವು ತಿಳಿಯಲು ಸಾಧ್ಯವಾಗುತ್ತದೆ.

ಈಗ ನಾವು ಕಟ್ಟಡ ನಿರ್ಮಾಣ ಉದ್ಯಮದ ಸಿಮೆಂಟ್ ಅಂಗಡಿ ಮಾಲೀಕ, ಕಟ್ಟಡ ನಿರ್ಮಾಣದ ಕೆಲಸಗಾರ ಮತ್ತು ಕಟ್ಟಡ ನಿರ್ಮಾಣ ಕಂಪನಿಯ ಸಿವಿಲ್ ಎಂಜಿನಿಯರ್ ಎಂಬ ಮೂವರು ಶ್ರಮಿಕರನ್ನು ತೆಗೆದುಕೊಳ್ಳೋಣ. ಇವರಲ್ಲಿ ಪ್ರತಿಯೊಬ್ಬರ ಸ್ಥಾನಮಾನಗಳು ಬೇರೆ ಬೇರೆಯಾಗಿರುವುದರಿಂದ ಇವರನ್ನು ವಿಭಿನ್ನ ಹೆಸರುಗಳಿಂದ



ಚಿತ್ರ 7.2 ಇಟ್ಟಿಗೆ ತಯಾರಿಕೆ: ಸಾಂದರ್ಭಿಕ ಕೆಲಸದ ಒಂದು ಪ್ರಕಾರ

**ಚಿತ್ರಪಟ 7.1 ಲಿಂಗಾನುಸಾರ ಉದ್ಯೋಗ ಹಂಚಿಕೆ**




ಕರೆಯುತ್ತಾರೆ. ಸ್ವಂತ ಉದ್ಯಮವನ್ನು ಹೊಂದಿದ್ದು, ಅದನ್ನು ತಾನೇ ನಡೆಸಿಕೊಂಡು ತನ್ನ ಜೀವನಕ್ಕೆ ಬೇಕಾದ ಹಣವನ್ನು ಸಂಪಾದಿಸುವವರನ್ನು ಸ್ವ-ಉದ್ಯೋಗಿಗಳು ಎನ್ನುವರು. ಈ ಕಾರಣದಿಂದ ಸಿಮೆಂಟ್ ಅಂಗಡಿಯ ಮಾಲೀಕನು ಸ್ವ-ಉದ್ಯೋಗಿಯಾಗಿದ್ದಾನೆ. ಭಾರತದ ಒಟ್ಟು ಶ್ರಮಬಲದಲ್ಲಿ 52% ರಷ್ಟು ಶ್ರಮಿಕರು ಸ್ವ-ಉದ್ಯೋಗದ ವರ್ಗಕ್ಕೆ ಸೇರುತ್ತಾರೆ. ಕಟ್ಟಡ ನಿರ್ಮಾಣದ ಶ್ರಮಿಕರನ್ನು ದಿನಗೂಲಿ ಕೆಲಸಗಾರರೆಂದು ಕರೆಯುತ್ತಾರೆ. ಭಾರತದ ಒಟ್ಟು ಶ್ರಮಬಲದಲ್ಲಿ ಇವರ ಪಾಲು 30% ರಷ್ಟಿದೆ. ಇಂತಹ ಶ್ರಮಿಕರು ಇತರರ ಹೊಲ-ಗದ್ದೆಗಳಲ್ಲಿ ಕೆಲಸ ಮಾಡಿ ತಾವು ಮಾಡಿದ ಕೆಲಸಕ್ಕೆ ಪ್ರತಿಫಲ ಪಡೆಯುವರು. ಕಟ್ಟಡ ನಿರ್ಮಾಣದ ಕಂಪನಿಯ ಸಿವಿಲ್ ಎಂಜಿನಿಯರ್‌ರಂತಹ ಕೆಲಸಗಾರರು ಭಾರತದ ಒಟ್ಟು ಶ್ರಮಬಲದಲ್ಲಿ 18% ರಷ್ಟಿದಾರೆ. ಇತರರಿಂದ ಅಥವಾ ಉದ್ಯಮದಿಂದ ನೇಮಕವಾಗಿ ನಿಯಮಿತವಾಗಿ ತನ್ನ ಕೆಲಸಕ್ಕೆ ಕೂಲಿಯನ್ನು/ವೇತನವನ್ನು ಪಡೆಯುವ ಶ್ರಮಿಕರನ್ನು ಸಂಬಳ/ವೇತನ ಪಡೆಯುವ ನೌಕರರೆಂದು ಕರೆಯುತ್ತಾರೆ.

ನೀವು 7.1 ಚಿತ್ರಪಟವನ್ನು ನೋಡಿದರೆ ಶೇ.50ಕ್ಕಿಂತ ಹೆಚ್ಚು ಮಹಿಳೆಯರು ಮತ್ತು ಪುರುಷರೀರ್ವರಿಗೂ ಸ್ವ-ಉದ್ಯೋಗವು ಜೀವನಾಧಾರಕ್ಕೆಮುಖ್ಯ ಮೂಲವಾಗಿದೆ ಎಂಬುದನ್ನು ಎರಡೂ ಚಿತ್ರಗಳಲ್ಲೂ ಗಮನಿಸಬಹುದು. ಸಾಮಾನ್ಯ ಕೂಲಿ ಕೆಲಸವು ಪುರುಷ ಮತ್ತು ಮಹಿಳೆಯರಿಬ್ಬರಿಗೂ ಜೀವನಾಧಾರದ ಎರಡನೇ ಮುಖ್ಯ ಮೂಲವಾಗಿದ್ದು, (31%) ಕೊನೆಯ ಉದ್ಯೋಗಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ಸಂಬಳ(ವೇತನ) ಪಡೆಯುವ ಉದ್ಯೋಗಕ್ಕೆ ಬಂದಾಗ ಪುರುಷರೇ ಹೆಚ್ಚು ಪ್ರಮಾಣದಲ್ಲಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಇವರು ಶೇ. 20ರಷ್ಟಿದ್ದರೆ, ಮಹಿಳೆಯರ ಪ್ರಮಾಣ ಶೇ. 13ರಷ್ಟಿದೆ. ಕೌಶಲ್ಯದ ಅವಶ್ಯತೆಯು ಈ ವ್ಯತ್ಯಾಸಕ್ಕಿರುವ ಕಾರಣಗಳಲ್ಲಿ ಒಂದಾಗಿದೆ. ವೇತನಾಧಾರಿತ ಉದ್ಯೋಗಗಳಿಗೆ ಕೌಶಲ್ಯತೆ ಮತ್ತು ಹೆಚ್ಚಿನ ಮಟ್ಟದ ಶಿಕ್ಷಣದ ಅವಶ್ಯಕತೆಯಿರುವ ಕಾರಣದಿಂದಾಗಿ ಮಹಿಳೆಯರು ಉದ್ಯೋಗದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಲು ಸಾಧ್ಯವಾಗದಿರಬಹುದು.

ಚಿತ್ರಪಟ 7.2ರಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ಶ್ರಮಬಲದ ವಿತರಣೆಯನ್ನು ಹೋಲಿಸಿದಾಗ, ಸ್ವ-ಉದ್ಯೋಗಿಗಳು ಮತ್ತು ಕೂಲಿ ಕೆಲಸಗಾರರು ನಗರಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ನಗರ ಪ್ರದೇಶಗಳಲ್ಲಿ ಸ್ವ-ಉದ್ಯೋಗ ಮತ್ತು ವೇತನಾಧಾರಿತ ಉದ್ಯೋಗಗಳು ಹೆಚ್ಚು ಇರುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಬಹುಸಂಖ್ಯಾತ ಜನರು ತಮ್ಮದೇ ಆದ ಭೂಮಿಯನ್ನು ಹೊಂದಿ ಸ್ವತಂತ್ರವಾಗಿ ಸಾಗುವಳಿ ಮಾಡುವುದರಿಂದ ಸ್ವ-ಉದ್ಯೋಗಗಳ ಪಾಲು ಹೆಚ್ಚಾಗಿದೆ.

**ಚಿತ್ರಪಟ 7.2 ಪ್ರದೇಶಾನುಸಾರ ಉದ್ಯೋಗ ಹಂಚಿಕೆ**



ನಗರ ಪ್ರದೇಶಗಳಲ್ಲಿ ಕೆಲಸದ ಸ್ವರೂಪ ಭಿನ್ನವಾಗಿರುತ್ತದೆ. ಪ್ರತಿಯೊಬ್ಬರು ವಿವಿಧ ಬಗೆಯ ಉದ್ಯಮಗಳನ್ನು, ಅಂಗಡಿಗಳನ್ನು ಮತ್ತು ಕಛೇರಿಗಳನ್ನು ನಡೆಸಲು ಸಾಧ್ಯವಿಲ್ಲವೆನ್ನುವುದು ನಿಸ್ಸಂಶಯ. ಅಲ್ಲದೆ, ನಗರ ಪ್ರದೇಶಗಳಲ್ಲಿನ ಉದ್ಯಮಗಳಿಗೆ ನಿಯಮಿತವಾಗಿ ಶ್ರಮಿಕರು ಬೇಕಾಗುತ್ತಾರೆ.

## 7.5 ಉದ್ಯಮಗಳು, ಕಾರ್ಖಾನೆಗಳು ಮತ್ತು ಕಛೇರಿಗಳಲ್ಲಿನ ಉದ್ಯೋಗ
## EMPLOYMENT IN FIRMS, FACTORIES AND OFFICES

ರಾಷ್ಟ್ರದ ಆರ್ಥಿಕಾಭಿವೃದ್ಧಿಯ ಪಥದಲ್ಲಿ ಶ್ರಮವು ಕೃಷಿ ಮತ್ತು ಕೃಷಿಸಂಬಂಧಿ ಚಟುವಟಿಕೆಗಳಿಂದ ಕೈಗಾರಿಕೆ ಮತ್ತು

### ನೀವೇ ಮಾಡಿರಿ
### (Work this out)

- ನಾವು ಸಾಮಾನ್ಯವಾಗಿ ನಿಯಮಿತವಾಗಿ ಅಥವಾ ಸಾಂದರ್ಭಿಕವಾಗಿ ಹಣ ಸಂಪಾದಿಸುವ ಕೆಲಸಗಳಲ್ಲಿ ತೊಡಗಿರುವ ಕೃಷಿ ಶ್ರಮಿಕರು, ಫ್ಯಾಕ್ಟರಿಗಳಲ್ಲಿನ ಶ್ರಮಿಕರು, ಬ್ಯಾಂಕುಗಳಲ್ಲಿ ಮತ್ತು ಇತರ ಕಛೇರಿಗಳಲ್ಲಿ ಸಹಾಯಕರಾಗಿ ಮತ್ತು ಗುಮಾಸ್ತರಾಗಿ ಕೆಲಸ ಮಾಡುವವರನ್ನು ಶ್ರಮಿಕರೆಂದು ಕರೆಯುತ್ತೇವೆ. ಈ ಮೇಲಿನ ಚರ್ಚೆಯಿಂದ ಬೀದಿಯಲ್ಲಿ ತರಕಾರಿ ಮಾರುವ, ವೃತ್ತಿಪರ ವಕೀಲರು, ವೈದ್ಯರು ಮತ್ತು ಎಂಜಿನಿಯರ್‌ರಂತಹ ಸ್ವ-ಉದ್ಯೋಗಿಗಳನ್ನು ಕೂಡ ಶ್ರಮಿಕರೆಂದು ಕರೆಯುತ್ತಾರೆಂಬುದನ್ನು ನೀವು ಅರ್ಥಮಾಡಿಕೊಂಡಿದ್ದೀರಿ.

  ಈ ಕೆಳಗಿನವುಗಳಲ್ಲಿ ಸೂಕ್ತವಾದುದನ್ನು ಆಯ್ಕೆಮಾಡಿ ಕೊಟ್ಟಿರುವ ಹೇಳಿಕೆಗಳ ಮುಂದೆ (a) (b) ಮತ್ತು (c) ಎಂದು ಗುರುತಿಸಿ.

  a) ಸ್ವ-ಉದ್ಯೋಗಿ b) ನಿಯಮಿತ ಸಂಬಳ ಪಡೆಯುವ ನೌಕರರು c) ದಿನಗೂಲಿ ಕೆಲಸಗಾರರು.

  1. ಸಲ್ಯೂನ್‌ವೊಂದರ ಮಾಲೀಕ
  2. ಅಕ್ಕಿ ಗಿರಣಿಯಲ್ಲಿ ದಿನಗೂಲಿ ಪಡೆಯುವ ಆದರೆ ನಿಯಮಿತ ಉದ್ಯೋಗ ಹೊಂದಿರುವ ಶ್ರಮಿಕ
  3. ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿನ ನಗದು ಗುಮಾಸ್ತ (Cashier)
  4. ರಾಜ್ಯ ಸರ್ಕಾರದ ಕಛೇರಿಯಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕವಾದ ಆದರೆ ಮಾಸಿಕ ವೇತನ ಪಡೆಯುವ ಬೆರಳಚ್ಚುಗಾರ
  5. ಕೈಮಗ್ಗ ನೇಕಾರ
  6. ಸಗಟು ತರಕಾರಿ ಅಂಗಡಿಗಳಲ್ಲಿ ಲೋಡು (ಭಾರ ಹೊರುವ) ಮಾಡುವ ಕಾರ್ಮಿಕ (Loading Worker)
  7. ಪೆಪ್ಸಿ, ಕೋಕಕೋಲ ಮತ್ತು ಮಿರಿಂಡಾ ತಂಪು ಪಾನೀಯಗಳನ್ನು ಮಾರುವ ಅಂಗಡಿಯ ಮಾಲೀಕ
  8. ಖಾಸಗಿ ಆಸ್ಪತ್ರೆಯಲ್ಲಿ ಮಾಸಿಕ ವೇತನ ಪಡೆಯುತ್ತಿರುವ ಮತ್ತು ಕಳೆದ 5 ವರ್ಷಗಳಿಂದ ನಿಯಮಿತವಾಗಿ ಕೆಲಸ ಮಾಡುತ್ತಿರುವ ದಾದಿ.

- ಈ ಮೂರು ವರ್ಗಗಳಲ್ಲಿ ದಿನಗೂಲಿ ಕೆಲಸಗಾರರು ಅತ್ಯಂತ ದುರ್ಬಲರೆಂದು ಅರ್ಥಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ಕೆಲಸಗಾರರು ಯಾರು, ಇವರು ಎಲ್ಲಿ ಕಾಣಸಿಗುತ್ತಾರೆ ಮತ್ತು ಏಕೆ ಎಂಬುದನ್ನು ಗುರುತಿಸುವಿರಾ?
- ದಿನಗೂಲಿ ಕೆಲಸಗಾರರು ಅಥವಾ ನಿಯಮಿತ ಸಂಬಳ/ವೇತನ ಪಡೆಯುವ ನೌಕರರಿಗಿಂತ ಸ್ವ-ಉದ್ಯೋಗಸ್ಥರು ಹೆಚ್ಚು ಹಣ ಸಂಪಾದನೆ ಮಾಡುವರು ಎಂದು ನಾವು ಹೇಳಲು ಸಾಧ್ಯವೇ? ಉದ್ಯೋಗ ಗುಣಮಟ್ಟದ ಇತರ ಕೆಲವು ಸೂಚ್ಯಾಂಕಗಳನ್ನು ಗುರುತಿಸಿ.



ಚಿತ್ರ 7.3 ಗಾರ್ಮೆಂಟ್ ಕೆಲಸಗಾರರು: ಮಹಿಳೆಯರಿಗೆ ಹೆಚ್ಚಾಗುತ್ತಿರುವ ಕಾರ್ಖಾನೆ ಉದ್ಯೋಗ

ಸೇವಾ ಕ್ಷೇತ್ರಕ್ಕೆ ಸ್ಥಾನಪಲ್ಲಟಗೊಳ್ಳುವುದು. ಈ ಪ್ರಕ್ರಿಯೆಯಲ್ಲಿ ಶ್ರಮಿಕರು ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ವಲಸೆ ಹೋಗುತ್ತಾರೆ. ಅಂತಿಮವಾಗಿ, ಅಂದರೆ ನಂತರದ ಹಂತದಲ್ಲಿ ಸೇವಾ ವಲಯ ತ್ವರಿತವಾಗಿ ವಿಸ್ತರಣೆ ಘಟ್ಟವನ್ನು ಪ್ರವೇಶಿಸುವುದರಿಂದ ಕೈಗಾರಿಕೆಗಳು ಒಟ್ಟು ಉದ್ಯೋಗದಲ್ಲಿ ತನ್ನ ಪಾಲನ್ನು ಕಳೆದುಕೊಳ್ಳಲು ಪ್ರಾರಂಭಿಸುವುದು. ಈ ಪಲ್ಲಟವನ್ನು ಕೈಗಾರಿಕೆಗಳಿಂದ ಹಂಚಿಕೆಯಾಗುವ ಶ್ರಮಿಕರನ್ನು ಪರಿಶೀಲಿಸುವುದರ ಮೂಲಕ ಅರ್ಥಮಾಡಿಕೊಳ್ಳಬಹುದು. ಸಾಮಾನ್ಯವಾಗಿ ನಾವು ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಎಂಟು ವಿಭಿನ್ನ ಕೈಗಾರಿಕಾ ವರ್ಗಗಳಾಗಿ ವಿಭಾಗಿಸುತ್ತೇವೆ. ಅವುಗಳೆಂದರೆ–1) ಕೃಷಿ, 2) ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ, 3) ತಯಾರಿಕೆ, 4) ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಪೂರೈಕೆ, 5) ಕಟ್ಟಡ ನಿರ್ಮಾಣ, 6) ವ್ಯಾಪಾರ, 7) ಸಾರಿಗೆ ಮತ್ತು ಸಂಗ್ರಹಣೆ, ಮತ್ತು, 8) ಸೇವೆಗಳು. ಈ ಎಲ್ಲಾ ವರ್ಗಗಳಲ್ಲಿ ಕೆಲಸ ಮಾಡುವ ಜನರನ್ನು ಕಲೆಹಾಕಿ ಸರಳವಾಗಿ ಮೂರು ಪ್ರಮುಖ ವಲಯಗಳನ್ನಾಗಿ ವಿಭಾಗಿಸಬಹುದು. a)ಪ್ರಾಥಮಿಕ ವಲಯ, ಇದು ಒಂದನೇ ವರ್ಗವನ್ನು ಒಳಗೊಳ್ಳುವುದು. b)ದ್ವಿತೀಯ ಅಥವಾ ಮಾಧ್ಯಮಿಕ ವಲಯ. ಇದು ವಿಭಾಗ 2, 3, 4 ಮತ್ತು 5ನೇ ವರ್ಗಗಳನ್ನು ಒಳಗೊಳ್ಳುವುದು. c) ಸೇವಾ ವಲಯ ಇದು 6, 7 ಮತ್ತು 8ನೇ ವರ್ಗಗಳನ್ನು ಒಳಗೊಳ್ಳುವುದು. ಕೋಷ್ಟಕ 7.2 2011–12ನೇ ವರ್ಷದಲ್ಲಿ ವಿಭಿನ್ನ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಜನರ ಹಂಚಿಕೆಯನ್ನು ತೋರಿಸುವುದು.

ಭಾರತದಲ್ಲಿ ಬಹುಸಂಖ್ಯಾತ ಕೆಲಸಗಾರರಿಗೆ ಪ್ರಾಥಮಿಕ ವಲಯ ಉದ್ಯೋಗದ ಪ್ರಮುಖ ಮೂಲವಾಗಿದೆ. ದ್ವಿತೀಯ ವಲಯ ಕೇವಲ ಶೇ. 24ರಷ್ಟು ಶ್ರಮಬಲಕ್ಕೆ ಉದ್ಯೋಗವನ್ನು ನೀಡುವುದು. ಶೇ. 27ರಷ್ಟು ಶ್ರಮಿಕರು ಸೇವಾ ವಲಯದಲ್ಲಿದ್ದಾರೆ. ಶೇ. 64ರಷ್ಟು ಗ್ರಾಮೀಣ ಭಾರತದ ಶ್ರಮಬಲವು ಕೃಷಿ, ಅರಣ್ಯಗಾರಿಕೆ ಮತ್ತು ಮೀನುಗಾರಿಕೆಯನ್ನು ಅವಲಂಬಿಸಿದೆ ಎಂಬುದನ್ನು ಕೋಷ್ಟಕ 7.2 ತೋರಿಸುತ್ತದೆ. ಶೇ. 20ರಷ್ಟು ಗ್ರಾಮೀಣ ಕೆಲಸಗಾರರು ತಯಾರಿಕಾ ಕೈಗಾರಿಕೆಗಳಲ್ಲಿ, ಕಟ್ಟಡ ನಿರ್ಮಾಣ ಮತ್ತು ಇತರ ಕೈಗಾರಿಕಾ ಚಟುವಟಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೇವಾ ವಲಯವು ಶೇ. 16ರಷ್ಟು ಗ್ರಾಮೀಣ ಕಾರ್ಮಿರಿಗೆ ಉದ್ಯೋಗವನ್ನು ನೀಡಿದೆ. ನಗರ ಪ್ರದೇಶಗಳಲ್ಲಿ ಜನರು ಮುಖ್ಯವಾಗಿ ಸೇವಾ ವಲಯದಲ್ಲಿ ಕೆಲಸ ಮಾಡುವುದರಿಂದ ಅವರಿಗೆ ಕೃಷಿ ಉದ್ಯೋಗ ಪ್ರಮುಖ ಮೂಲವಲ್ಲ. ಶೇ.60ರಷ್ಟು ನಗರ ಪ್ರದೇಶದ ಶ್ರಮಿಕರು ಸೇವಾ ವಲಯದಲ್ಲಿದ್ದಾರೆ. ದ್ವಿತೀಯ ವಲಯ ಶೇ. 35ರಷ್ಟು ನಗರ ಶ್ರಮಿಕರಿಗೆ ಉದ್ಯೋಗವನ್ನು ನೀಡುತ್ತಿದೆ.

**ಕೋಷ್ಟಕ 7.2**

**ಕೈಗಾರಿಕೆಯ ಮೂಲಕ 2011–12ರಲ್ಲಿ ಆದ ಶ್ರಮಬಲದ ವಿತರಣೆ.**

| ಕೈಗಾರಿಕೆಯ ವರ್ಗಗಳು | ವಾಸ ಸ್ಥಳ | | ಲಿಂಗ | | ಒಟ್ಟು |
|---|---|---|---|---|---|
| | ಗ್ರಾಮೀಣ | ನಗರ | ಪುರುಷ | ಮಹಿಳೆ | |
| ಪ್ರಾಥಮಿಕ ವಲಯ | 64.1 | 6.7 | 43.6 | 62.8 | 48.9 |
| ದ್ವಿತೀಯ/ಮಾಧ್ಯಮಿಕ ವಲಯ | 20.4 | 35.0 | 25.9 | 20.0 | 24.3 |
| ತೃತೀಯ/ಸೇವಾ ವಲಯ | 15.5 | 58.3 | 30.5 | 17.2 | 26.8 |
| **ಒಟ್ಟು** | **100.0** | **100.0** | **100.0** | **100.0** | **100.0** |

**ನೀವೇ ಮಾಡಿರಿ (Work this out)**

➢ ಎಲ್ಲಾ ವೃತ್ತಪತ್ರಿಕೆಗಳು ಉದ್ಯೋಗವಕಾಶಗಳಿಗಾಗಿಯೇ ಒಂದೊಂದು ವಿಭಾಗವನ್ನು ಕಾಯ್ದಿರಿಸಿಕೊಂಡಿರುತ್ತವೆ. ಕೆಲವು ಪತ್ರಿಕೆಗಳು ವಾರದ ಯಾವುದಾದರು ಒಂದು ದಿನ ಅಥವಾ ಪ್ರತಿವಾರ ಇಡೀ ಪುರವಣಿಯನ್ನೇ ಉದ್ಯೋಗವಕಾಶಗಳಿಗಾಗಿ ಮೀಸಲಾಗಿಟ್ಟುಕೊಂಡಿರುತ್ತವೆ. ಉದಾಹರಣೆಗೆ, The Hindu 'Opportunities' ಎಂಬ ಪುರವಣಿಯನ್ನು ಮತ್ತು The Times of India 'Ascent' ಎಂಬ ಪುರವಣಿಯನ್ನು ಪ್ರಕಟಿಸುತ್ತದೆ. ಅನೇಕ ಕಂಪನಿಗಳು ವಿವಿಧ ಹುದ್ದೆಯ ಖಾಲಿಯಿರುವ ಬಗ್ಗೆ ಜಾಹೀರಾತನ್ನು ನೀಡುತ್ತವೆ. ಅಂತಹ ವಿಭಾಗಗಳನ್ನು ಕತ್ತರಿಸಿಡಿ. ನಾಲ್ಕು ಕಾಲಂಗಳುಳ್ಳ ಒಂದು ಕೋಷ್ಟಕವನ್ನು ತಯಾರಿಸಿ. ಅದರಲ್ಲಿ ಕಂಪನಿಯು ಖಾಸಗಿಯೇ ಅಥವಾ ಸಾರ್ವಜನಿಕವೇ, ಹುದ್ದೆಯ ಹೆಸರು, ಹುದ್ದೆಗಳ ಸಂಖ್ಯೆ, ವಲಯ–ಪ್ರಾಥಮಿಕ, ದ್ವಿತೀಯ ಅಥವಾ ತೃತೀಯ ಮತ್ತು ಅಗತ್ಯ ವಿದ್ಯಾರ್ಹತೆಯನ್ನು ನಮೂದಿಸಿ. ವೃತ್ತಪತ್ರಿಕೆಗಳಲ್ಲಿನ ಹುದ್ದೆಗಳ ಜಾಹೀರಾತಿನ ಬಗ್ಗೆ ತರಗತಿಗಳಲ್ಲಿ ವಿಶ್ಲೇಷಿಸಿ.

ಪ್ರಾಥಮಿಕ ವಲಯದಲ್ಲಿ ಪುರುಷ ಮತ್ತು ಮಹಿಳಾ ಶ್ರಮಿಕರೀರ್ವರ ಸಾಂಧ್ರೀಕರಣವಿದ್ದರೂ, ಇಲ್ಲಿ ಮಹಿಳಾ ಕೆಲಸಗಾರರ ಸಾಂಧ್ರೀಕರಣ ಹೆಚ್ಚಾಗಿದೆ. ಪ್ರಾಥಮಿಕ ವಲಯದಲ್ಲಿ ಶೇ. 63ರಷ್ಟು ಮಹಿಳಾ ಶ್ರಮಬಲವು ಉದ್ಯೋಗದಲ್ಲಿದ್ದರೆ, ಅದರ ಅರ್ಧಕ್ಕಿಂತ ಕಡಿಮೆ ಪುರುಷ ಶ್ರಮಿಕರು ಇದೇ ವಲಯದಲ್ಲಿದ್ದಾರೆ. ಪುರುಷರು ದ್ವಿತೀಯ ಮತ್ತು ಸೇವಾ ವಲಯಗಳೆರೆಡರಲ್ಲೂ ಉದ್ಯೋಗವಕಾಶಗಳನ್ನು ಪಡೆಯುವರು.

## 7.6 ಬೆಳವಣಿಗೆ ಮತ್ತು ಬದಲಾಗುತ್ತಿರುವ ಉದ್ಯೋಗದ ರಚನೆ GROWTH AND CHANGING STRUCTURE OF EMPLOYMENT

ಅಧ್ಯಾಯ 2 ಮತ್ತು 3 ರಲ್ಲಿ ಯೋಜನಾ ತಂತ್ರಗಳ ಬಗ್ಗೆ ವಿವರವಾಗಿ ನೀವು ಅಧ್ಯಯನ ಮಾಡಿರುವಿರಿ. ಇಲ್ಲಿ ನಾವು ಎರಡು ಅಭಿವೃದ್ಧಿ ಸೂಚಕಗಳಾದ ಉದ್ಯೋಗದ ಬೆಳವಣಿಗೆ ಮತ್ತು ಒಟ್ಟು ದೇಶೀಯ ಉತ್ಪನ್ನ (GDP) ದ ಬಗ್ಗೆ ಪರಿಶೀಲಿಸುತ್ತೇವೆ. ಅರವತ್ತು ವರ್ಷಗಳ ಯೋಜಿತಾಭಿವೃದ್ಧಿಯು ರಾಷ್ಟ್ರೀಯ ಉತ್ಪಾದನೆ ಮತ್ತು ಉದ್ಯೋಗದ ಹೆಚ್ಚಳದ ಮೂಲಕ ಆರ್ಥಿಕ ವಿಸ್ತರಣೆಯನ್ನು ಸಾಧಿಸುವ ಗುರಿಯನ್ನು ಹೊಂದಿತ್ತು.

1950–2010 ರ ಅವಧಿಯಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನ (Gross Domestic Product-GDP) ದ ಬೆಳವಣಿಗೆ ಸಕಾರಾತ್ಮಕ/ಧನಾತ್ಮಕವಾಗಿತ್ತು ಮತ್ತು ಉದ್ಯೋಗದ ಬೆಳವಣಿಗೆಗಿಂತ ಹೆಚ್ಚಾಗಿತ್ತು. ಆದರೂ, ಒಟ್ಟು ದೇಶೀಯ ಉತ್ಪನ್ನ (GDP)ದ ಬೆಳವಣಿಗೆಯಲ್ಲಿ ಯಾವಾಗಲೂ ಏರಿಳಿತವಿತ್ತು. ಈ ಅವಧಿಯಲ್ಲಿ ಉದ್ಯೋಗದ ಬೆಳವಣಿಗೆಯ ದರ ಶೇ. 2ಕ್ಕಿಂತ ಹೆಚ್ಚಾಗಿರಲಿಲ್ಲ.

ಚಿತ್ರಪಟ 7.3 1990ರ ದಶಕದ ಕೊನೆಯಲ್ಲಿ ಆದ ಮತ್ತೊಂದು ನಿರಾಶಾದಾಯಕ ಅಭಿವೃದ್ಧಿಯನ್ನು ತಿಳಿಸುತ್ತದೆ. ಈ ಅವಧಿಯಲ್ಲಿ ಉದ್ಯೋಗದ ಬೆಳವಣಿಗೆ ಕುಸಿಯಲು ಪ್ರಾರಂಭಿಸಿ, ಭಾರತದಲ್ಲಿದ್ದ ಯೋಜನಾ ಪೂರ್ವ ಹಂತದ ಬೆಳವಣಿಗೆಯ ಮಟ್ಟವನ್ನು ತಲುಪಿತು. ಈ ವರ್ಷಗಳಲ್ಲಿ ಒಟ್ಟು ದೇಶೀಯ ಉತ್ಪನ್ನ (GDP) ಮತ್ತು ಉದ್ಯೋಗದ ಬೆಳವಣಿಗೆಗಳ ನಡುವೆಯಿದ್ದ ಅಗಾಧ ಅಂತರವನ್ನು ನಾವು ನೋಡುತ್ತೇವೆ. ಅಂದರೆ, ಭಾರತದ ಅರ್ಥವ್ಯವಸ್ಥೆ ಉದ್ಯೋಗವಕಾಶಗಳನ್ನು ಸೃಷ್ಟಿಸದೇ ಹೆಚ್ಚು ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಸಮರ್ಥವಾಗಿತ್ತು ಎಂಬುದು ಇದರ ಅರ್ಥ. ತಜ್ಞರು ಈ ವಿದ್ಯಮಾನವನ್ನು 'ಉದ್ಯೋಗರಹಿತ ಬೆಳವಣಿಗೆ' ಎಂದು ಕರೆಯುತ್ತಾರೆ.

ಇಲ್ಲಿಯವರೆಗೂ ನಾವು ಒಟ್ಟು ದೇಶೀಯ ಉತ್ಪನ್ನ (GDP) ಕ್ಕೆ ಹೋಲಿಸಿದಂತೆ ಹೇಗೆ ಉದ್ಯೋಗದ ಬೆಳವಣಿಗೆಯಾಯಿತು ಎನ್ನುವುದನ್ನು ನೋಡಿದ್ದೇವೆ. ಈಗ ಉದ್ಯೋಗ ಬೆಳವಣಿಗೆಯ ಮಾದರಿ ಮತ್ತು ಒಟ್ಟು ದೇಶೀಯ ಉತ್ಪನ್ನ (GDP) ವು ಶ್ರಮಬಲದ

ವಿವಿಧ ವಿಭಾಗಗಳ ಮೇಲೆ ಹೇಗೆ ಪರಿಣಾಮ ಬೀರಿತು ಎಂಬುದನ್ನು ತಿಳಿಯುವುದು ಅವಶ್ಯಕವಾಗಿದೆ. ಇದರಿಂದ ನಮ್ಮ ದೇಶದಲ್ಲಿ ಯಾವ ಯಾವ ಬಗೆಯ ಉದ್ಯೋಗವಕಾಶಗಳು ಸೃಷ್ಟಿಯಾದವು ಎಂಬುದನ್ನು ಕೂಡ ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಹಿಂದಿನ ಅಧ್ಯಾಯಗಳಲ್ಲಿ ನಾವು ನೋಡಿದ ವಿವಿಧ ಕೈಗಾರಿಕೆಗಳಲ್ಲಿನ ಜನರ ಉದ್ಯೋಗ ಮತ್ತು ಅವರ ಸ್ಥಾನಮಾನಗಳೆಂಬ ಎರಡು ಸೂಚಕಗಳನ್ನು ನೋಡೋಣ. ಭಾರತ ಒಂದು ಕೃಷಿಯಾಧಾರಿತ ದೇಶವೆಂಬುದು ನಮಗೆ ಗೊತ್ತಿದೆ. ಜನಸಂಖ್ಯೆಯ ಬಹುಭಾಗ ಗ್ರಾಮೀಣ ಭಾಗಗಳಲ್ಲಿ ವಾಸವಾಗಿದ್ದಾರೆ ಮತ್ತು ಕೃಷಿಯೇ ಅವರ ಜೀವನಾಧಾರದ ಮುಖ್ಯ ಕಸುಬಾಗಿದೆ. ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ತಂತ್ರಗಳು ಕೃಷಿಯ ಮೇಲಿನ ಅವಲಂಬಿತ ಜನರ ಪ್ರಮಾಣವನ್ನು ಕಡಿಮೆಮಾಡುವ ಗುರಿಯನ್ನು ಹೊಂದಿದ್ದವು.

ಕೈಗಾರಿಕಾ ವಲಯಗಳಿಂದಾದ ಶ್ರಮಬಲದ ಹಂಚಿಕೆಯು ಕೃಷಿ ಕೆಲಸಗಳಿಂದ ಕೃಷಿಯೇತರ ಕೆಲಸಗಳಿಗೆ ಆದ ಗಣನೀಯ ಪಲ್ಲಟವನ್ನು ತೋರಿಸುತ್ತದೆ (ಕೋಷ್ಟಕ 7.3 ನೋಡಿ). 1972–73 ರಲ್ಲಿ ಶೇ. 74ರಷ್ಟು ಶ್ರಮಬಲವು ಪ್ರಾಥಮಿಕ ವಲಯದಲ್ಲಿ ತೊಡಗಿದ್ದರೆ, 2011–12ರಲ್ಲಿ ಅದರ ಪ್ರಮಾಣ ಶೇ. 50ಕ್ಕೆ ಕುಸಿಯಿತು. ದ್ವಿತೀಯ ಮತ್ತು ತೃತೀಯ/ ಸೇವಾ ವಲಯಗಳು ಭಾರತದ ಶ್ರಮಬಲಕ್ಕೆ ಭವಿಷ್ಯದ ಭರವಸೆಯನ್ನು ತೋರಿಸುತ್ತವೆ. ಈ ವಲಯದ ಪಾಲುಗಳು ಕ್ರಮವಾಗಿ ಶೇ. 11ರಿಂದ ಶೇ. 24ಕ್ಕೆ ಮತ್ತು ಶೇ. 15ರಿಂದ ಶೇ. 27ಕ್ಕೆ ಹೆಚ್ಚಳವಾಗಿರುವುದನ್ನು ನೀವು ಗಮನಿಸಬಹುದು.

ವಿವಿಧ ಸ್ಥಾನಮಾನಗಳ ಶ್ರಮಬಲದ ಹಂಚಿಕೆಯು ಕಳೆದ ನಾಲ್ಕು ದಶಕಗಳಲ್ಲಿ (1972–2012) ಜನರು ಸ್ವ–ಉದ್ಯೋಗ ಮತ್ತು ನಿಯಮಿತ ಸಂಬಳದ ಉದ್ಯೋಗಗಳಿಂದ ದಿನಗೂಲಿ ಕೆಲಸಕ್ಕೆ ಚಲಿಸಿರುವುದನ್ನು ಸೂಚಿಸುತ್ತದೆ. ಆದಾಗ್ಯೂ, ಉದ್ಯೋಗ ನೀಡುವುದನ್ನು ಮುಂದುವರೆಸುತ್ತಿರುವ ಸ್ವ–ಉದ್ಯೋಗ ಕ್ಷೇತ್ರವು ಪ್ರಮುಖವಾದುದಾಗಿದೆ. ತಜ್ಞರು ಸ್ವ–ಉದ್ಯೋಗ ಮತ್ತು ನಿಯಮಿತ ಸಂಬಳದ ಉದ್ಯೋಗಗಳಿಂದ ದಿನಗೂಲಿ ಕೆಲಸಕ್ಕೆ ಸಾಗುವ ಈ ಪ್ರಕ್ರಿಯೆಯನ್ನು 'ಶ್ರಮಬಲದ ಅನಿಶ್ಚಿತತೆ' (Casualisation of Work force) ಎಂದು ಕರೆಯುವರು. ಇದು ಕೆಲಸಗಾರರನ್ನು ಅತ್ಯಂತ ದುರ್ಬಲರನ್ನಾಗಿ ಮಾಡುವುದು. ಹೇಗೆ? ಮುಂದಿನ ಭಾಗದಲ್ಲಿ ನೀಡಿರುವ ಅಹ್ಮದಾಬಾದ್ ಉದಾಹರಣೆಯನ್ನು ಅಧ್ಯಯನ ಮಾಡಿ.

ಚಿತ್ರಪಟ 7.3 ಉದ್ಯೋಗ ಮತ್ತು ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆ 1951–2012 (%)



**ಕೋಷ್ಟಕ 7.3 : ಉದ್ಯೋಗ ಮಾದರಿಯಲ್ಲಿನ ಪ್ರವೃತ್ತಿಗಳು (ವಲಯವಾರು/ಸ್ಥಾನವಾರು) 1972–2012 (%)**

| ಬಾಬ್ತುಗಳು | 1972-73 | 1983 | 1993-94 | 1999-2000 | 2011-2012 |
|---|---|---|---|---|---|
| | | | ವಲಯ | | |
| ಪ್ರಾಥಮಿಕ | 74.3 | 68.6 | 64 | 60.4 | 48.9 |
| ದ್ವಿತೀಯ | 10.9 | 11.5 | 16 | 15.8 | 24.3 |
| ಸೇವೆಗಳು | 14.8 | 16.9 | 20 | 23.8 | 26.8 |
| ಒಟ್ಟು | 100.0 | 100.0 | 100.0 | 100.0 | 100.0 |
| | | | ಸ್ಥಿತಿಗತಿ | | |
| ಸ್ವ–ಉದ್ಯೋಗಸ್ಥರು | 61.4 | 57.3 | 54.6 | 52.6 | 52.0 |
| ನಿಯಮಿತ ವೇತನ ನೌಕರರು | 15.4 | 13.8 | 13.6 | 14.6 | 18.0 |
| ಸಾಂದರ್ಭಿಕ ಕೂಲಿ ಕೆಲಸಗಾರರು | 23.2 | 28.9 | 31.8 | 32.8 | 30.0 |
| **ಒಟ್ಟು** | **100.0** | **100.0** | **100.0** | **100.0** | **100.0** |

**ನೀವೇ ಮಾಡಿರಿ (Work this out)**

- ಭಾರತದಂತಹ ರಾಷ್ಟ್ರಕ್ಕೆ ಉದ್ಯೋಗದ ಬೆಳವಣಿಗೆಯ ಶೇ. 2ರಷ್ಟು ದರ ಕಾಪಾಡುವುದು ಸುಲಭವಲ್ಲವೆಂಬುದು ನಿಮಗೆ ಗೊತ್ತೆ? ಏಕೆ?
- ಒಂದು ವೇಳೆ ಆರ್ಥಿಕ ವ್ಯವಸ್ಥೆಯು ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಸಮರ್ಥವಾಗಿದ್ದಾಗ್ಯೂ ಯಾವುದೇ ಹೆಚ್ಚುವರಿ ಹುದ್ದೆಗಳು ಸೃಷ್ಟಿಯಾಗದಿದ್ದರೆ ಏನಾಗುತ್ತದೆ? ಉದ್ಯೋಗರಹಿತ ಬೆಳವಣಿಗೆಯಾಗಲು ಹೇಗೆ ಸಾಧ್ಯವಾದೀತು?
- ಒಂದು ವೇಳೆ ಅಶಿಶ್ಚಿತತೆಯು ಜನರ ಹಣ ಸಂಪಾದನೆಯನ್ನು ಹೆಚ್ಚಿಸಿದರೆ ಅಂತಹ ವಿದ್ಯಮಾನವನ್ನು ಸ್ವಾಗತಿಸಲೇಬೇಕೆಂದು ಅರ್ಥಶಾಸ್ತ್ರಜ್ಞರು ಹೇಳುವರು. ಒಂದು ವೇಳೆ ಅಂಚಿನ ಕೃಷಿಕನು ತನ್ನ ದಿನಗೂಲಿ ಕೆಲಸದಲ್ಲಿ ಹೆಚ್ಚು ಹಣ ಸಂಪಾದಿಸುತ್ತಿದ್ದಾಗ್ಯೂ ಪೂರ್ಣಾವಧಿ ಕೃಷಿ ಶ್ರಮಿಕನಾದರೆ ಆತನು ಸಂತೋಷವಾಗಿರಬಲ್ಲನೇ? ಒಂದು ವೇಳೆ ಔಷಧ ಕೈಗಾರಿಕೆಯ ಖಾಯಂ ಮತ್ತು ನಿಯಮಿತ ಕೆಲಸಗಾರನಾಗಿ ಆತನ ಒಟ್ಟು ಸಂಪಾದನೆ ಹೆಚ್ಚಾದರೆ ಆತ ಸಂತೋಷವಾಗಿರುವನೇ? ತರಗತಿಯಲ್ಲಿ ಚರ್ಚಿಸಿ.

## 7.7 ಭಾರತದ ಶ್ರಮಬಲದ ಅನೌಪಚಾರೀಕರಣ INFORMALISATION OF INDIAN WORK FORCE

ಹಿಂದಿನ ವಿಭಾಗದಲ್ಲಿ ದಿನಗೂಲಿ ಕಾರ್ಮಿಕರ ಪ್ರಮಾಣ ಹೆಚ್ಚಾಗುತ್ತಾ ಇರುವುದನ್ನು ನಾವು ಕಂಡುಕೊಂಡಿದ್ದೇವೆ. ಭಾರತ ಸ್ವಾತಂತ್ರ್ಯ ಪಡೆದಾಗಿನಿಂದಲೂ ಅದು ತನ್ನ ದೇಶದ ಜನರಿಗೆ ಯೋಗ್ಯ ಜೀವನಾವಶ್ಯಕಗಳನ್ನು ಒದಗಿಸುವುದು ಭಾರತದ ಅಭಿವೃದ್ಧಿ ಯೋಜನೆಯ ಉದ್ದೇಶಗಳಲ್ಲೊಂದಾಗಿದೆ. ಕೈಗಾರೀಕರಣದ ತಂತ್ರಗಳು ಅಭಿವೃದ್ಧಿ ರಾಷ್ಟ್ರಗಳಲ್ಲಾದಂತೆ ಕೃಷಿ ಕ್ಷೇತ್ರದಲ್ಲಿನ ಹೆಚ್ಚುವರಿ ಕಾರ್ಮಿಕರನ್ನು ಉತ್ತಮ ಜೀವನಮಟ್ಟದೊಂದಿಗೆ ಕೈಗಾರಿಕೆಗಳತ್ತ ಸೆಳೆಯುತ್ತದೆ ಎಂದು ಕಲ್ಪಿಸಿಕೊಳ್ಳಲಾಗಿತ್ತು. ಹಿಂದಿನ ವಿಭಾಗದಲ್ಲಿ, 55 ವರ್ಷಗಳ ಯೋಜಿತ ಅಭಿವೃದ್ಧಿಯ ನಂತರವೂ ಭಾರತದ ಶ್ರಮಬಲದಲ್ಲಿನ ಅರ್ಧದಷ್ಟು ಕಾರ್ಮಿಕರು ತಮ್ಮ ಜೀವನಾಧಾರದ ಮುಖ್ಯ ಮೂಲವಾಗಿ ಕೃಷಿಯ ಮೇಲೆ ಅವಲಂಬಿಸಿದ್ದಾರೆಂಬುದನ್ನು ನಾವು ನೋಡಿದ್ದೇವೆ.

ಇತ್ತೀಚಿನ ವರ್ಷಗಳಲ್ಲಿ ಉದ್ಯೋಗದ ಗುಣಮಟ್ಟ ಕಡಿಮೆಯಾಗುತ್ತಿದೆ ಎಂದು ಅರ್ಥಶಾಸ್ತ್ರಜ್ಞರು ವಾದಿಸುವರು.

ಹತ್ತಿಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕೆಲಸ ಮಾಡುತ್ತಿದ್ದರೂ, ಕೆಲವು ಕೆಲಸಗಾರರು ಮಾತೃತ್ವ ಸೌಲಭ್ಯ, ಭವಿಷ್ಯ ನಿಧಿ, ಗ್ರಾಚ್ಯುಯಿಟಿ ಮತ್ತು ಪಿಂಚಣಿಯನ್ನು ಏಕೆ ಪಡೆಯುತ್ತಿಲ್ಲ? ಖಾಸಗಿ ವಲಯದಲ್ಲಿನ ಕೆಲಸಗಾರ ಸಾರ್ವಜನಿಕ ವಲಯದಲ್ಲಿನ ಕೆಲಸಗಾರ ಮಾಡುವ ಕೆಲಸವನ್ನೇ ಮಾಡುತ್ತಿದ್ದರೂ ಆತ ಏಕೆ ಕಡಿಮೆ ಸಂಬಳ/ ವೇತನವನ್ನು ಪಡೆಯುತ್ತಾನೆ?

ಭಾರತೀಯ ಶ್ರಮಬಲದಲ್ಲಿನ ಸಣ್ಣ ಭಾಗ ನಿಯಮಿತ ಆದಾಯವನ್ನು ಪಡೆಯುತ್ತಿರುವುದನ್ನು ನೀವು ನೋಡಿರಬಹುದು. ಸರ್ಕಾರ ತನ್ನ ಕಾರ್ಮಿಕ ಕಾಯಿದೆಗಳ ಮೂಲಕ ಕಾರ್ಮಿಕರಿಗೆ ಅವರ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ಇಂತಹ ಕಾರ್ಮಿಕರು ಕಾರ್ಮಿಕ ಸಂಘಗಳನ್ನು ರಚಿಸಿಕೊಂಡು ಉತ್ತಮ ಕೂಲಿ ಮತ್ತು ಇತರ ಸಾಮಾಜಿಕ ಸೌಲಭ್ಯಗಳಿಗಾಗಿ ಮಾಲೀಕರೊಡನೆ ಚೌಕಾಸಿ ಮಾಡುತ್ತಾರೆ, ಅವರು ಯಾರು? ಇದನ್ನು ತಿಳಿಯುವುದಕ್ಕಾಗಿ ನಾವು ಕಾರ್ಮಿಕ ಬಲವನ್ನು ಎರಡು ವರ್ಗಗಳಾಗಿ ವಿಂಗಡಿಸುತ್ತೇವೆ. ಔಪಚಾರಿಕ ವಲಯದ ಮತ್ತು ಅನೌಪಚಾರಿಕ ವಲಯದ ಕಾರ್ಮಿಕರು. ಇವರನ್ನು ಸಂಘಟಿತ ವಲಯ ಮತ್ತು ಅಸಂಘಟಿತ ವಲಯದ ಕಾರ್ಮಿಕರೆಂದೂ ಕರೆಯಲಾಗುತ್ತದೆ. ಹತ್ತು ಅಥವಾ ಅದಕ್ಕಿಂತ ಹೆಚ್ಚು ಕೂಲಿ ಕೆಲಸಗಾರರನ್ನು ಹೊಂದಿರುವ ಎಲ್ಲಾ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಖಾಸಗಿ ವಲಯದ ಸಂಸ್ಥೆಗಳನ್ನು ಔಪಚಾರಿಕ ವಲಯದ ಸಂಸ್ಥೆಗಳೆಂದೂ ಇಂತಹ ಸಂಸ್ಥೆಗಳಲ್ಲಿ ಕೆಲಸ ಮಾಡುವವರನ್ನು ಔಪಚಾರಿಕ ವಲಯದ ಕಾರ್ಮಿಕರೆಂದು ಕರೆಯುತ್ತಾರೆ. ಇತರ ಎಲ್ಲಾ ಉದ್ಯಮಗಳು ಮತ್ತು ಆ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಂದ ಅನೌಪಚಾರಿಕ ವಲಯ ರಚನೆಯಾಗುತ್ತದೆ. ಹೀಗೆ ಅನೌಪಚಾರಿಕ ವಲಯವು ದಶಲಕ್ಷಗಳಷ್ಟು ಕೃಷಿಕರನ್ನು, ಕೃಷಿ ಕಾರ್ಮಿಕರನ್ನು, ಸಣ್ಣ ಉದ್ಯಮಗಳ ಮಾಲೀಕರನ್ನು ಮತ್ತು ಯಾವುದೇ ಕಾರ್ಮಿಕರನ್ನು ಕೂಲಿಗಾಗಿ ನೇಮಿಸಿ ಕೊಳ್ಳದೇ ಉದ್ಯಮದಲ್ಲಿ ದುಡಿಯುವ ಸ್ವ–ಉದ್ಯೋಗಸ್ಥರನ್ನು ಒಳಗೊಳ್ಳುತ್ತದೆ. ಇದು ಒಬ್ಬನಿಗಿಂತ ಹೆಚ್ಚು ಮಾಲೀಕರಡಿಯಲ್ಲಿ ಕೆಲಸ ಮಾಡುವ ಕಟ್ಟಡ ನಿರ್ಮಾಣ ಕೆಲಸಗಾರರು, ಭಾರ ಹೊರುವ ಕೆಲಸಗಾರರಂತಹ ಕೃಷಿಯೇತರ ದಿನಗೂಲಿ ಕೆಲಸಗಾರರನ್ನು ಕೂಡ ಒಳಗೊಳ್ಳುತ್ತದೆ.

ಔಪಚಾರಿಕ ವಲಯದಲ್ಲಿ ಕೆಲಸ ಮಾಡುವವರು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಅನುಭವಿಸುತ್ತಿದ್ದಾರೆ.

ಅವರು ಅನೌಪಚಾರಿಕ ವಲಯದಲ್ಲಿರುವವರಿಗಿಂತ ಹೆಚ್ಚು ಹಣ ಸಂಪಾದಿಸುತ್ತಾರೆ. ಆರ್ಥಿಕ ವಲಯ ಬೆಳವಣಿಗೆಯಾದಂತೆ ಹೆಚ್ಚು ಹೆಚ್ಚು ಕಾರ್ಮಿಕರು ಔಪಚಾರಿಕ ವಲಯದ ಕಾರ್ಮಿಕರಾಗುವರು ಮತ್ತು ಅನೌಪಚಾರಿಕ ವಲಯದಲ್ಲಿನ ಒಟ್ಟು ಕಾರ್ಮಿಕರ ಸಂಖ್ಯೆಯು ಕಡಿಮೆಯಾಗುವುದು ಎಂದು ಅಭಿವೃದ್ಧಿ ಯೋಜನೆಗಳಲ್ಲಿ ಚಿತ್ರಿಸಲಾಗಿತ್ತು. ಆದರೆ ಭಾರತದಲ್ಲಿ ಏನಗಿದೆ? ಔಪಚಾರಿಕ ಮತ್ತು ಅನೌಪಚಾರಿಕ ವಲಯದಲ್ಲಿನ ಶ್ರಮಬಲದ ವಿತರಣೆಯನ್ನು ವ್ಯಕ್ತಪಡಿಸುವ ಚಿತ್ರಪಟ 7.4ನ್ನು ನೋಡಿ.

**ಪೆಟ್ಟಿಗೆ 7.1: ಔಪಚಾರಿಕ ವಲಯದ ಉದ್ಯೋಗ**

ಔಪಚಾರಿಕ ವಲಯದಲ್ಲಿನ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಕೇಂದ್ರ ಕಾರ್ಮಿಕ ಇಲಾಖೆಯು ರಾಷ್ಟ್ರದ ವಿವಿಧ ಕಡೆಗಳಲ್ಲಿ ಸ್ಥಾಪಿಸಿರುವ ಉದ್ಯೋಗ ವಿನಿಮಯ ಕಛೇರಿಗಳ ಮೂಲಕ ಸಂಗ್ರಹಿಸುತ್ತದೆ. ಭಾರತದ ಔಪಚಾರಿಕ ವಲಯದಲ್ಲಿ ಉದ್ಯೋಗ ನೀಡುವ ಪ್ರಮುಖ ಮಾಲೀಕರು ಯಾರೆಂಬುದು ನಿಮಗೆ ಗೊತ್ತೆ? 2012 ರಲ್ಲಿ 30 ದಶಲಕ್ಷ ಔಪಚಾರಿಕ ವಲಯದ ಕಾರ್ಮಿಕರಲ್ಲಿ 18 ದಶಲಕ್ಷ ಕಾರ್ಮಿಕರು ಸಾರ್ವಜನಿಕ ಸಂಸ್ಥೆಗಳಿಂದ ನೇಮಕವಾಗಿದ್ದಾರೆ. ಇಲ್ಲಿ ಕೂಡ ಪುರುಷರೇ ಹೆಚ್ಚಾಗಿದ್ದಾರೆ. ಮಹಿಳೆಯರು ಔಪಚಾರಿಕ ವಲಯದಲ್ಲಿನ ಕಾರ್ಮಿಕ ಬಲದ 1/6 ರಷ್ಟು ಮಾತ್ರ ಇದ್ದಾರೆ. 1990 ರ ಆರಂಭದಲ್ಲಿನ ಸುಧಾರಣಾ ಪ್ರಕ್ರಿಯೆಗಳು ಪ್ರಾರಂಭಗೊಂಡಿದ್ದರಿಂದ ಔಪಚಾರಿಕ ವಲಯದಲ್ಲಿನ ಕಾರ್ಮಿಕರ ಸಂಖ್ಯೆ ಇಳಿಮುಖವಾಗಿದೆಯೆಂದು ಅರ್ಥಶಾಸ್ತ್ರಜ್ಞರು ಸೂಚಿಸಿದ್ದಾರೆ. ನೀವೇನು ಹೇಳುವಿರಿ?



**ಚಿತ್ರ 7.4: ರಸ್ತೆಬದಿಯ ಮಾರಾಟ: ಅನೌಪಚಾರಿಕ ವಲಯದಲ್ಲಿನ ಉದ್ಯೋಗಗಳು ಹೆಚ್ಚಾಗುತ್ತಿರುವುದು.**

ವಿಭಾಗ 7.2 ರಲ್ಲಿ ನಮ್ಮ ದೇಶದಲ್ಲಿ 473 ದಶಲಕ್ಷ ಕಾರ್ಮಿಕರಿದ್ದಾರೆಂಬುದನ್ನು ನಾವು ತಿಳಿದಿದ್ದೇವೆ. ಔಪಚಾರಿಕ ವಲಯದಲ್ಲಿ 30 ದಶಲಕ್ಷ ಕಾರ್ಮಿಕರಿದ್ದಾರೆ. ಔಪಚಾರಿಕ ವಲಯದಲ್ಲಿ ಉದ್ಯೋಗದಲ್ಲಿರುವ ರಾಷ್ಟ್ರದ ಜನಸಂಖ್ಯೆಯ ಶೇಕಡವಾರು ಕಾರ್ಮಿಕರನ್ನು ಅಂದಾಜು ಮಾಡಲು ನಿಮಗೆ ಸಾಧ್ಯವೇ? ಅದು ಕೇವಲ ಶೇ. 6 ರಷ್ಟಿದೆ (30/473*100) ! ಹೀಗೆ, ಉಳಿದ ಶೇ. 94ರಷ್ಟು ಕಾರ್ಮಿಕರು ಅನೌಪಚಾರಿಕ ವಲಯದಲ್ಲಿದ್ದಾರೆ. ಔಪಚಾರಿಕ ವಲಯದ 30 ದಶಲಕ್ಷ ಕಾರ್ಮಿಕರಲ್ಲಿ ಕೇವಲ 6 ದಶಲಕ್ಷ ಅಂದರೆ ಕೇವಲ ಶೇ. 21ರಷ್ಟು ಕಾರ್ಮಿಕರು ಮಹಿಳೆಯರಿದ್ದಾರೆ (30/6*100). ಅನೌಪಚಾರಿಕ ವಲಯದ ಒಟ್ಟು ಕಾರ್ಮಿಕ ಬಲದಲ್ಲಿ ಶೇ. 69ರಷ್ಟು ಪುರುಷ ಕಾರ್ಮಿಕರಿದ್ದಾರೆ.

1970ರಿಂದೀಚೆಗೆ, ಭಾರತವು ಸೇರಿದಂತೆ ಅನೇಕ ಅಭಿವೃದ್ಧಿಶೀಲ ದೇಶಗಳು ಔಪಚಾರಿಕ ವಲಯದಲ್ಲಿ ಉದ್ಯೋಗ ಬೆಳವಣಿಗೆಯಾಗದೇ ಇದ್ದುದರಿಂದ ಅನೌಪಚಾರಿಕ ವಲಯದ ಬಗ್ಗೆ ಗಮನಹರಿಸಲು ಪ್ರಾರಂಭಿಸಿದವು. ಅನೌಪಚಾರಿಕ ವಲಯದ ಕಾರ್ಮಿಕರು ಮತ್ತು ಉದ್ಯಮಗಳು ನಿಯಮಿತ ಆದಾಯವನ್ನು ಪಡೆಯುತ್ತಿಲ್ಲ. ಅವರು ಸರ್ಕಾರದಿಂದ ಯಾವುದೇ ರಕ್ಷಣೆಯನ್ನು ಮತ್ತು ನಿಯಮಗಳನ್ನು ಹೊಂದಿಲ್ಲ. ಯಾವುದೇ ಪರಿಹಾರವಿಲ್ಲದೆ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಗುತ್ತಿದೆ.

**ಚಿತ್ರಪಟ 7.4 ಔಪಚಾರಿಕ /ಅನೌಪಚಾರಿಕ ವಲಯದಲ್ಲಿನ ಕಾರ್ಮಿಕರು, 2009–12**



**ಪೆಟ್ಟಿಗೆ 7.2: ಅಹಮದಾಬಾದ್‌ನಲ್ಲಿನ ಅನೌಪಚಾರೀಕರಣ**

**(Informalisation in Ahmedabad)**

ಅಹಮದಾಬಾದ್ ಒಂದು ಸಂಪದ್ಭರಿತ ನಗರವಾಗಿದ್ದು, 60ಕ್ಕಿಂತಲೂ ಹೆಚ್ಚು ಬಟ್ಟೆ ಗಿರಣಿಗಳನ್ನು ಮತ್ತು ಅದರಲ್ಲಿನ 1,50,000 ಕಾರ್ಮಿಕರು ಉತ್ಪಾದಿಸುವ ಸಂಪತ್ತನ್ನು ಆಧಾರವಾಗಿ ಹೊಂದಿತ್ತು. ಈ ಕಾರ್ಮಿಕರು ಶತಮಾನ ಕಾಲದಿಂದಲೂ ನಿರ್ದಿಷ್ಟ ಪ್ರಮಾಣದ ಆದಾಯದ ಭದ್ರತೆಯನ್ನು ಹೊಂದಿದ್ದರು. ಅವರು ಸುಭದ್ರ ಉದ್ಯೋಗ ಮತ್ತು ಜೀವನಯೋಗ್ಯ ಕೂಲಿಯನ್ನು ಪಡೆದಿದ್ದರು. ಅವರು ಆರೋಗ್ಯ ರಕ್ಷಣೆ ಮತ್ತು ವೃದ್ಧಾಪ್ಯ ರಕ್ಷಣೆ ಮುಂತಾದ ಸಾಮಾಜಿಕ ಭದ್ರತಾ ಯೋಜನೆಗಳನ್ನು ಹೊಂದಿದ್ದರು. ಅವರು ಬಲಿಷ್ಠ ಕಾರ್ಮಿಕ ಸಂಘವನ್ನು ಹೊಂದಿದ್ದು, ಅದು ಅವರ ಸಮಸ್ಯೆಗಳನ್ನು ಪ್ರತಿನಿಧಿಸುವುದು ಮಾತ್ರವಲ್ಲದೆ ಕಾರ್ಮಿಕರ ಮತ್ತು ಅವರ ಕುಟುಂಬದ ಕಲ್ಯಾಣಕ್ಕಾಗಿ ಅನೇಕ ಚಟುವಟಿಕೆಗಳನ್ನು ನಡೆಸುತ್ತಿದ್ದವು.



1980ರ ಆರಂಭದಲ್ಲಿ ರಾಷ್ಟ್ರದಾದ್ಯಂತ ಬಟ್ಟೆ ಗಿರಣಿಗಳು ಮುಚ್ಚಲು ಆರಂಭಿಸಿದವು. ಕೆಲವು ಸ್ಥಳಗಳಲ್ಲಿ ಉದಾಹರಣೆಗೆ, ಮುಂಬಯಿಯಲ್ಲಿ ಬಟ್ಟೆಗಿರಣಿಗಳನ್ನು ಬಹುಬೇಗನೇ ಮುಚ್ಚಲಾಯಿತು. ಅಹಮದಾಬಾದ್ ನಲ್ಲಿ ಈ ಪ್ರಕ್ರಿಯೆಯು ನಿಧಾನವಾಗಿ ನಡೆದರೂ 10 ವರ್ಷಗಳಲ್ಲಿ ಪೂರ್ಣವಾಯಿತು. ಈ ಅವಧಿಯಲ್ಲಿ ಸುಮಾರು 80,000 ಖಾಯಂ ಕೆಲಸಗಾರರು ಮತ್ತು 50,000 ಖಾಯಂ ಅಲ್ಲದ ಕೆಲಸಗಾರರು ತಮ್ಮ ಕೆಲಸವನ್ನು ಕಳೆದುಕೊಂಡು ಅನೌಪಚಾರಿಕ ವಲಯಗಳೊಳಗೆ ನಡೆದರು. ನಗರವು ಆರ್ಥಿಕ ಹಿಂಜರಿತ, ಸಾರ್ವಜನಿಕ ಅಶಾಂತಿ ವಿಶೇಷವಾಗಿ ಕೋಮು ಗಲಭೆಗಳನ್ನು ಅನುಭವಿಸಬೇಕಾಯಿತು. ಇಡೀ ಕಾರ್ಮಿಕ ವರ್ಗ ಮತ್ತು ಮಧ್ಯಮವರ್ಗ ಅನೌಪಚಾರಿಕ ವಲಯದೊಳಗೆ ಮತ್ತು ಬಡತನದೊಳಗೆ ಎಸೆಯಲ್ಪಟ್ಟಿತು. ನಗರದಲ್ಲಿ ಮದ್ಯವ್ಯಸನ ಮತ್ತು ಆತ್ಮಹತ್ಯೆಗಳು ವ್ಯಾಪಕವಾದವು. ಮಕ್ಕಳನ್ನು ಶಾಲೆಯಿಂದ ಬಿಡಿಸಿ ಕೆಲಸಕ್ಕೆ ಕಳುಹಿಸಿದರು.

**ಆಧಾರ:** Renana Jhabvala, Ratna M. Sudarshan and Jeemol Unni (Ed.) Informal Economy at Centre Stage: New Structures of Employment, Sage Publications, New delhi, 2003, pp.265

ಅನೌಪಚಾರಿಕ ವಲಯದ ಉದ್ಯಮಗಳಲ್ಲಿ ಬಳಸುವ ತಂತ್ರಜ್ಞಾನ ಹಳೆಯದಾಗಿದೆ. ಅವರು ಯಾವುದೇ ಲೆಕ್ಕಪತ್ರವನ್ನು ಇಡುವುದಿಲ್ಲ. ಈ ವಲಯದ ಕಾರ್ಮಿಕರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಅಕ್ರಮ ವಸತಿದಾರರಾಗಿದ್ದಾರೆ.

ಇತ್ತೀಚೆಗೆ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO)ಯ ಪ್ರಯತ್ನಗಳಿಂದಾಗಿ ಭಾರತ ಸರ್ಕಾರ ಅನೌಪಚಾರಿಕ ಉದ್ಯಮಗಳ ಆಧುನೀಕರಣ ಮತ್ತು ಅನೌಪಚಾರಿಕ ವಲಯದ ಶ್ರಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೈಗೊಂಡಿದೆ.

**ನೀವೇ ಮಾಡಿರಿ (Work this out)**

- [√] ಎಂಬ ಚಿಹ್ನೆಯನ್ನು ಔಪಚಾರಿಕ ವಲಯದೊಳಗಿರುವವರ ಎದುರು ಗುರುತಿಸಿ.
- ಏಳು ಜನ ಕೂಲಿ ಶ್ರಮಿಕರು ಮತ್ತು ಮೂರು ಜನ ಕುಟುಂಬದ ಸದಸ್ಯರನ್ನೊಳಗೊಂಡ ಹೋಟೆಲಿನಲ್ಲಿನ ಕೆಲಸಗಾರ.
- 25 ಜನ ಶಿಕ್ಷಕರನ್ನು ಒಳಗೊಂಡ ಖಾಸಗಿ ಶಾಲೆಯ ಶಿಕ್ಷಕ.
- ಪೊಲೀಸ್ ಕಾನ್‌ಸ್ಟೇಬಲ್.
- ಸರ್ಕಾರಿ ಆಸ್ಪತ್ರೆಯ ದಾದಿ.
- ಸೈಕಲ್ ರಿಕ್ಷಾ ಎಳೆಯುವವನು.
- ಒಂಬತ್ತು ಜನ ಶ್ರಮಿಕರನ್ನು ಹೊಂದಿರುವ ಬಟ್ಟೆ ಅಂಗಡಿಯ ಮಾಲೀಕ.
- ಹತ್ತು ಬಸ್ಸುಗಳು, 20 ಚಾಲಕರು ಮತ್ತು ಕಂಡಕ್ಟರ್ ಗಳು ಹಾಗೂ ಇತರ ಕೆಲಸಗಾರರನ್ನು ಹೊಂದಿರುವ ಬಸ್ ಕಂಪನಿಯೊಂದರ ಚಾಲಕ.
- 10 ಶ್ರಮಿಕರನ್ನು ಹೊಂದಿರುವ ಕಟ್ಟಡ ನಿರ್ಮಾಣ ಕಂಪನಿಯ ಸಿವಿಲ್ ಎಂಜಿನಿಯರ್.
- ರಾಜ್ಯ ಸರ್ಕಾರಿ ಕಛೇರಿಯಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ಕಂಪ್ಯೂಟರ್ ಆಪರೇಟರ್.
- ವಿದ್ಯುಚ್ಛಕ್ತಿ ಕಛೇರಿಯಲ್ಲಿನ ಗುಮಾಸ್ತ.

## 7.8 ನಿರುದ್ಯೋಗ
## UNEMPLOYMENT

ಜನರು ವೃತ್ತ ಪತ್ರಿಕೆಗಳಲ್ಲಿ ಕೆಲಸ ಹುಡುಕುವುದನ್ನು ನೀವು ನೋಡಿರಬಹುದು. ಕೆಲವರು ತಮ್ಮ ಸ್ನೇಹಿತರು ಮತ್ತು ಸಂಬಂಧಿಗಳ ಮೂಲಕ ಕೆಲಸವನ್ನು ಹುಡುಕುತ್ತಾರೆ. ಜನರು ಆಯ್ದ ಸ್ಥಳಗಳಲ್ಲಿ ಆ ದಿನದ ಕೆಲಸಕ್ಕೆ ನೇಮಿಸಿಕೊಳ್ಳುವವರಿಗಾಗಿ ನಿಂತಿರುವುದನ್ನು ನೀವು ಕಂಡಿರಬಹುದು. ಕೆಲವು ಫ್ಯಾಕ್ಟರಿಗಳಿಗೆ ಮತ್ತು ಕಛೇರಿಗಳಿಗೆ ಹೋಗಿ ಕೆಲಸ ಖಾಲಿಯಿದೆಯೇ ಎಂದು ಕೇಳಿ ತಮ್ಮ ಪರಿಚಯ ಪತ್ರವನ್ನು ಕೊಡುವರು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನವರು ಹೊರಹೋಗಿ ಕೆಲಸ ಕೇಳುವುದಿಲ್ಲ. ಅವರು ಕೆಲಸವಿಲ್ಲದಿದ್ದಾಗ ಮನೆಯಲ್ಲಿಯೇ ಉಳಿಯುವರು. ಹೆಚ್ಚಿನವರು ಕೆಲಸ ಖಾಲಿ ಇರುವ ಬಗ್ಗೆ ತಮಗೆ ತಿಳಿಸುವುದಕ್ಕಾಗಿ ಉದ್ಯೋಗ ವಿನಿಮಯ ಕಛೇರಿಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವರು.

NSSO ನಿರುದ್ಯೋಗವನ್ನು ಈ ರೀತಿ ವ್ಯಾಖ್ಯಾನಿಸುತ್ತದೆ. “ನಿರುದ್ಯೋಗವೆಂಬುದು ಕೆಲಸದ



**ಚಿತ್ರ 7.5: ನಿರುದ್ಯೋಗಿ ಗಿರಣಿ ಕೆಲಸಗಾರರು ಸಾಂದರ್ಭಿಕ ಕೆಲಸಕ್ಕಾಗಿ ಕಾಯುತ್ತಿರುವುದು**

ಕೊರತೆಯಿಂದ ಕೆಲಸ ಮಾಡದಿರುವ ಆದರೆ ಉದ್ಯೋಗ ವಿನಿಮಯ ಕಛೇರಿಗಳು, ಮಧ್ಯವರ್ತಿಗಳು, ಸ್ನೇಹಿತರು, ಬಂಧುಗಳ ಮೂಲಕ ಕೆಲಸ ಹುಡುಕುವ ಅಥವಾ ನಿರೀಕ್ಷಿತ ಮಾಲೀಕರಲ್ಲಿ ಅರ್ಜಿ ಸಲ್ಲಿಸುವ ಅಥವಾ ಪ್ರಸಕ್ತ ಕೂಲಿಯಲ್ಲಿ ಮತ್ತು ಸನ್ನಿವೇಶದಲ್ಲಿ ಕೆಲಸ ಮಾಡಲು ಇಚ್ಛಿಸುವ ಮತ್ತು ಕೆಲಸ ಲಭ್ಯವಿದೆಯೇ ಎಂದು ಹುಡುಕುವ ಸನ್ನಿವೇಶವೇ ನಿರುದ್ಯೋಗವಾಗಿದೆ”.



**ಚಿತ್ರ 7.6: ಕಬ್ಬು ಕಟಾವು ಮಾಡುವವರು. ಕೃಷಿ ಕೆಲಸದಲ್ಲಿ ಮರೆಮಾಚಿದ ನಿರುದ್ಯೋಗ ಸಾಮಾನ್ಯವಾಗಿದೆ.**

ನಿರುದ್ಯೋಗಿಗಳನ್ನು ಅನೇಕ ಮಾರ್ಗಗಳಿಂದ ಗುರುತಿಸಲಾಗುತ್ತದೆ. ಅರ್ಥಶಾಸ್ತ್ರಜ್ಞರು ಅರ್ಧ ದಿನದಲ್ಲೂ ಒಂದು ಗಂಟೆಯಷ್ಟು ಕೆಲಸ ಪಡೆಯಲು ಸಾಧ್ಯವಾಗದ ವ್ಯಕ್ತಿಯನ್ನು ನಿರುದ್ಯೋಗಿಯೆಂದು ವ್ಯಾಖ್ಯಾನಿಸಿದ್ದಾರೆ.

ನಿರುದ್ಯೋಗಕ್ಕೆ ಸಂಬಂಧಿಸಿದಂತೆ ದತ್ತಾಂಶಗಳ ಮೂರು ಮೂಲಗಳಿವೆ. ಭಾರತದ ಜನಗಣತಿಯ ವರದಿಗಳು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆಯ ಉದ್ಯೋಗ ವರದಿಗಳು ಮತ್ತು ನಿರುದ್ಯೋಗ ಸನ್ನಿವೇಶ ಮತ್ತು ಉದ್ಯೋಗ ಮತ್ತು ತರಬೇತಿಯ ಸಾರ್ವತ್ರಿಕ ನಿರ್ದೇಶನಾಲಯ ಹಾಗೂ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ನೋಂದಾಯಿಸಿದ ದತ್ತಾಂಶ. ಇವುಗಳು ನಿರುದ್ಯೋಗದ ಬಗ್ಗೆ ವಿವಿಧ ಅಂದಾಜುಗಳನ್ನು ನೀಡಿದರೂ ಸಹ ರಾಷ್ಟ್ರದಲ್ಲಿರುವ ನಿರುದ್ಯೋಗಿಗಳು ಮತ್ತು ವಿವಿಧ ಬಗೆಯ ನಿರುದ್ಯೋಗಿಗಳ ಗುಣಲಕ್ಷಣಗಳ ಬಗ್ಗೆ ತಿಳಿಸುತ್ತವೆ.

ನಾವು ನಮ್ಮ ಆರ್ಥವ್ಯವಸ್ಥೆಯಲ್ಲಿ ವಿವಿಧ ಬಗೆಯ ನಿರುದ್ಯೋಗಗಳನ್ನು ಹೊಂದಿದ್ದೇವೆಯೇ? ಈ ಭಾಗದ ಮೊದಲ ವಾಕ್ಯವೃಂದ (para)ದಲ್ಲಿ ವರ್ಣಿಸಿರುವ ಸನ್ನಿವೇಶವನ್ನು ಮುಕ್ತ ನಿರುದ್ಯೋಗ (Open Unemployment) ಎಂದು ಕರೆಯಲಾಗುತ್ತದೆ. ಅರ್ಥಶಾಸ್ತ್ರಜ್ಞರು ಭಾರತದ ಕೃಷಿಯಲ್ಲಿ ಪ್ರಚಲಿತವಿರುವ ನಿರುದ್ಯೋಗವನ್ನು ಮರೆಮಾಚಿದ ನಿರುದ್ಯೋಗ (Disguised Unemployment) ಎಂದು ಕರೆದಿದ್ದಾರೆ. ಮರೆಮಾಚಿದ ನಿರುದ್ಯೋಗ ಎಂದರೇನು? ರೈತನೊಬ್ಬನು 4 ಎಕರೆ ಭೂಮಿಯನ್ನು ಹೊಂದಿದ್ದಾನೆಂದು ಭಾವಿಸೋಣ. ಒಂದು ವರ್ಷದಲ್ಲಿ ತನ್ನ ಭೂಮಿಯಲ್ಲಿ ಸಾಗುವಳಿ ಮಾಡುವುದಕ್ಕೆ ತನ್ನೊಂದಿಗೆ ಇನ್ನಿಬ್ಬರು ಕೆಲಸಗಾರರ ಅವಶ್ಯಕತೆಯಿದೆ. ಆದರೆ, ತನ್ನ ಕುಟುಂಬದ ಸದಸ್ಯರಾದ ಹೆಂಡತಿ ಮತ್ತು ಮಕ್ಕಳೊಂದಿಗೆ ಅವನು 5 ಜನ ಕೆಲಸಗಾರರನ್ನು ಬಳಸಿದರೆ ಅಂತಹ ಸನ್ನಿವೇಶವನ್ನು ಮರೆಮಾಚಿದ ನಿರುದ್ಯೋಗ ಎನ್ನುವರು. 1950 ರ ದಶಕದ ಕೊನೆಯಲ್ಲಿ ನಡೆಸಿದ ಅಧ್ಯಯನವು ಭಾರತದಲ್ಲಿ 1/3 ಭಾಗದಷ್ಟು ಕೃಷಿ ಕಾರ್ಮಿಕರು ಮರೆಮಾಚಿದ ನಿರುದ್ಯೋಗಿಗಳಾಗಿದ್ದಾರೆ ಎಂದು ತಿಳಿಸುತ್ತದೆ.

ಕೆಲವರು ನಗರಗಳಿಗೆ ವಲಸೆ ಬಂದು ಯಾವುದಾದರೂ ಒಂದು ಉದ್ಯೋಗ ಹಿಡಿದು ಕೆಲವು ಸಮಯದವರೆಗೆ ಅಲ್ಲೇ ಉಳಿದು ಮಳೆಗಾಲ ಪ್ರಾರಂಭವಾದೊಡನೆ ತಮ್ಮ ಹಳ್ಳಿಗಳಿಗೆ ಹಿಂದಿರುಗಿ ಹೋಗುವುದನ್ನು ನೀವು ಗಮನಿಸಿರಬಹುದು. ಏಕೆ ಅವರು ಹೀಗೆ ಮಾಡುತ್ತಾರೆ? ಕೃಷಿಯು ಋತುಮಾನದ ಉದ್ಯೋಗವಾಗಿರುವುದು ಇದಕ್ಕೆ ಕಾರಣವಾಗಿದೆ. ಹಳ್ಳಿಗಳಲ್ಲಿ ವರ್ಷದ ಎಲ್ಲಾ ತಿಂಗಳುಗಳಲ್ಲಿಯೂ ಉದ್ಯೋಗವಕಾಶಗಳಿರುವುದಿಲ್ಲ. ಹೊಲ–ಗದ್ದೆಗಳಲ್ಲಿ ಯಾವುದೇ ಕೆಲಸವಿಲ್ಲದಿದ್ದಾಗ ಜನರು ಕೆಲಸ ಹುಡುಕಲು ನಗರ ಪ್ರದೇಶಗಳಿಗೆ ಹೋಗುತ್ತಾರೆ. ಈ ಬಗೆಯ ನಿರುದ್ಯೋಗವನ್ನು ಋತುಮಾನದ ನಿರುದ್ಯೋಗ ಎನ್ನುವರು. ಭಾರತದಲ್ಲಿ ಈ ಬಗೆಯ ನಿರುದ್ಯೋಗವೂ ಕೂಡ ಸಾಮಾನ್ಯವಾಗಿದೆ.

ನಿಧಾನಗತಿಯ ಉದ್ಯೋಗದ ಬೆಳವಣಿಗೆಗೆ ನಾವು ಸಾಕ್ಷಿಯಾಗಿದ್ದರೂ, ಜನರು ಹಿಂದಿನಿಂದಲೂ ನಿರುದ್ಯೋಗಿಗಳಾಗಿದ್ದಾರೆ. ಜನರು ಬಹಳ ದೀರ್ಘ ಸಮಯ ಸಂಪೂರ್ಣವಾಗಿ ನಿರುದ್ಯೋಗಿಯಾಗಿರಲು ಸಾಧ್ಯವಿಲ್ಲ. ಏಕೆಂದರೆ ಅವರ ಹತಾಶ ಆರ್ಥಿಕ ಸ್ಥಿತಿಯು ಅವರನ್ನು ಹಾಗೆ ಮಾಡಲು ಬಿಡುವುದಿಲ್ಲವೆಂದು ತಜ್ಞರು ಹೇಳುತ್ತಾರೆ. ಅಶುಭ್ರವಾದ, ಅನಾರೋಗ್ಯಕರ ಪ್ರದೇಶಗಳಲ್ಲಿ ಯಾರೂ ಮಾಡದ ಅಸಂತೋಷಕರ ಅಥವಾ ಅಪಾಯಕಾರಿಯಾದ ಉದ್ಯೋಗಗಳನ್ನು ಬಲವಂತವಾಗಿ ಒಪ್ಪಿಕೊಂಡು ಮಾಡುವ ಜನರನ್ನು ನೀವು ಕಣ್ಣಾರೆ ಕಂಡಿರಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಕ್ರಮಗಳ ಮೂಲಕ ಕಡಿಮೆ ಆದಾಯವುಳ್ಳ ಜನರಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸಿ ಯೋಗ್ಯ ಜೀವನ ಕಲ್ಪಿಸಿಕೊಡುವಂತಹ ಕ್ರಮಗಳನ್ನು ಕೈಗೊಂಡಿದೆ. ಇವುಗಳನ್ನು ಮುಂದಿನ ವಿಭಾಗದಲ್ಲಿ ಚರ್ಚಿಸಲಾಗಿದೆ.

## 7.9 ಸರ್ಕಾರ ಮತ್ತು ಉದ್ಯೋಗ ಸೃಷ್ಟಿ GOVERNMENT AND EMPLOYMENT GENERATION

ನೀವು 2005 ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯನ್ನು ನೆನಪು ಮಾಡಿಕೊಳ್ಳಿ. ಇದು ಗ್ರಾಮೀಣ ಪ್ರದೇಶದಲ್ಲಿ ಕೌಶಲ್ಯರಹಿತ ದೈಹಿಕ ಕೆಲಸಗಳನ್ನು ಸ್ವಇಚ್ಛೆಯಿಂದ ಮಾಡುವ ಎಲ್ಲರಿಗೂ 100 ದಿನಗಳ ಕಾಲ ಉದ್ಯೋಗದ ಭರವಸೆಯನ್ನು ನೀಡುತ್ತದೆ. ಸರ್ಕಾರದ ಈ ಯೋಜನೆಯು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗದ ಅವಶ್ಯಕತೆಯುಳ್ಳ ಜನರಿಗೆ ಉದ್ಯೋಗ ಸೃಷ್ಟಿಸುವ ಕ್ರಮಗಳಲ್ಲಿ ಒಂದಾಗಿದೆ.

ಸ್ವಾತಂತ್ರ್ಯದ ನಂತರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉದ್ಯೋಗ ಸೃಷ್ಟಿಸುವಲ್ಲಿ ಅಥವಾ ಅವಕಾಶಗಳನ್ನು ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಇವರ ಪ್ರಯತ್ನಗಳನ್ನು ಪ್ರತ್ಯಕ್ಷ ಮತ್ತು ಪರೋಕ್ಷ ಎಂಬ ಎರಡು ವರ್ಗಗಳಾಗಿ ವಿಂಗಡಿಸಬಹುದಾಗಿದೆ. ಮೊದಲ ವರ್ಗದಲ್ಲಿ, ನೀವು ಹಿಂದಿನ ವಿಭಾಗದಲ್ಲಿ ನೋಡಿದಂತೆ, ಸರ್ಕಾರ ಆಡಳಿತ ಉದ್ದೇಶಕ್ಕಾಗಿ ವಿವಿಧ ಇಲಾಖೆಗಳಿಗೆ ಜನರನ್ನು ನೇಮಕ ಮಾಡುತ್ತದೆ. ಇದು ಕೈಗಾರಿಕೆಗಳನ್ನು, ಹೋಟೆಲ್‌ಗಳನ್ನು ಮತ್ತು ಸಾರಿಗೆಯ ಕಂಪನಿಗಳನ್ನು ಕೂಡ ನಡೆಸುವುದರಿಂದ ಕೆಲಸಗಾರರಿಗೆ ನೇರವಾಗಿ ಉದ್ಯೋಗವನ್ನು ಒದಗಿಸುತ್ತದೆ. ಸರ್ಕಾರಿ ಉದ್ಯಮಗಳಲ್ಲಿ ಸರಕು ಮತ್ತು ಸೇವೆಗಳ ಉತ್ಪಾದನೆ ಹೆಚ್ಚಳವಾದಾಗ ಖಾಸಗಿ ಕಂಪನಿಗಳು ಸಹ ಸರ್ಕಾರಿ ಕಂಪನಿಗಳಿಂದ ಕಚ್ಚಾ ಪದಾರ್ಥಗಳನ್ನು ಪಡೆದು ತಮ್ಮ ಉತ್ಪಾದನೆಯನ್ನು ಹೆಚ್ಚಿಸುವುದರಿಂದ ಅರ್ಥವ್ಯವಸ್ಥೆಯಲ್ಲಿ ಉದ್ಯೋಗವಕಾಶಗಳ ಸಂಖ್ಯೆ ಹೆಚ್ಚಾಗುತ್ತದೆ. ಉದಾಹರಣೆಗೆ, ಸರ್ಕಾರ ಉಕ್ಕಿನ ಕಂಪನಿಯನ್ನು ಹೊಂದಿದ್ದು, ತನ್ನ ಉತ್ಪಾದನೆಯನ್ನು ಹೆಚ್ಚಿಸಿದಾಗ ಅದು ಸರ್ಕಾರಿ ಕಂಪನಿಯಲ್ಲಿನ ನೇರ ಉದ್ಯೋಗದ ಹೆಚ್ಚಳಕ್ಕೆ ಕಾರಣವಾಗಿರುತ್ತದೆ. ಅದೇ ರೀತಿಯಾಗಿ, ಖಾಸಗಿ ಕಂಪನಿಗಳು ಉಕ್ಕನ್ನು ಖರೀದಿಸಿ ತಮ್ಮ ಉತ್ಪಾದನೆಯನ್ನು ಹೆಚ್ಚು ಮಾಡಿದಾಗ ಉದ್ಯೋಗದ ಸಂಖ್ಯೆ ಹೆಚ್ಚಾಗುತ್ತದೆ. ಇದು ಅರ್ಥವ್ಯವಸ್ಥೆಯಲ್ಲಿ ಪರೋಕ್ಷ ಉದ್ಯೋಗವಕಾಶಗಳನ್ನು ಸೃಷ್ಟಿಸಲು ತೆಗೆದುಕೊಂಡ ಸರ್ಕಾರದ ಉಪಕ್ರಮಗಳಾಗಿವೆ.

ನಾಲ್ಕನೇ ಅಧ್ಯಾಯದಲ್ಲಿ ಉದ್ಯೋಗ ಸೃಷ್ಟಿಸುವ ಮೂಲಕ ಬಡತನ ನಿರ್ಮೂಲನೆ ಮಾಡುವ ಉದ್ದೇಶದಿಂದ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿರುವುದನ್ನು ನೀವು ಗಮನಿಸಿದ್ದೀರಿ. ಅವುಗಳನ್ನು ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳೆಂದು ಕೂಡ ಕರೆಯಲಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳು ಉದ್ಯೋಗವನ್ನು ಒದಗಿಸುವ ಉದ್ದೇಶ ಮಾತ್ರವಲ್ಲದೆ ಪ್ರಾಥಮಿಕ ಆರೋಗ್ಯ, ಪ್ರಾಥಮಿಕ ಶಿಕ್ಷಣ, ಗ್ರಾಮೀಣ ಕುಡಿಯುವ ನೀರು, ಪೌಷ್ಟಿಕತೆ, ಆದಾಯ ಮತ್ತು ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಸಮುದಾಯ ಆಸ್ತಿಗಳ ಅಭಿವೃದ್ಧಿ, ಕಟ್ಟಡಗಳು ಮತ್ತು ಒಳಚರಂಡಿಗಳ ನಿರ್ಮಾಣ, ಮನೆಗಳ ನಿರ್ಮಾಣಕ್ಕೆ ಸಹಾಯ, ಗ್ರಾಮೀಣ ರಸ್ತೆಗಳ ನಿರ್ಮಾಣ, ಬಂಜರು ಭೂಮಿ/ಕಡಿಮೆ ಗುಣಮಟ್ಟದ ಭೂಮಿಯ ಅಭಿವೃದ್ಧಿ ವಲಯಗಳಲ್ಲಿ ಸೇವೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.



**ಚಿತ್ರ 7.7: ಜಲಾಶಯ ನಿರ್ಮಾಣ ಕೆಲಸವು ಸರ್ಕಾರದ ಉದ್ಯೋಗ ನಿರ್ಮಾಣದ ನೇರಮಾರ್ಗವಾಗಿದೆ**

## 7.10 ಉಪಸಂಹಾರ CONCLUSION

ಭಾರತದಲ್ಲಿನ ಶ್ರಮಬಲದ ರಚನೆಯಲ್ಲಿ ಬದಲಾವಣೆ ಆಗುತ್ತಿದೆ. ಸೇವಾ ವಲಯದಲ್ಲಿ ಹೆಚ್ಚು ಹೊಸ ಹೊಸ ಉದ್ಯೋಗಗಳು ಉದಯವಾಗುತ್ತಿವೆ. ಸೇವಾವಲಯದ ವಿಸ್ತರಣೆ ಮತ್ತು ಉನ್ನತ ಮಟ್ಟದ ತಂತ್ರಜ್ಞಾನದ ಅಭಿವೃದ್ಧಿ ಈಗ ದಕ್ಷಯುತ ಸಣ್ಣ ಉದ್ಯಮಗಳು ಮತ್ತು ವೈಯುಕ್ತಿಕ ಉದ್ಯಮಗಳಲ್ಲಿನ ಪೈಪೋಟಿ ಅಥವಾ ಬಹುರಾಷ್ಟ್ರೀಯ ಕಂಪನಿಗಳಲ್ಲಿನ ಪರಿಣಿತ ಕಾರ್ಮಿಕರ ಅಸ್ತಿತ್ವಕ್ಕೆ ಅವಕಾಶ

ಮಾಡಿಕೊಟ್ಟಿದೆ. ಹೊರಗುತ್ತಿಗೆಯ ಕೆಲಸ ಈಗ ಸಾಮಾನ್ಯ ಅಭ್ಯಾಸವಾಗಿದೆ. ಅಂದರೆ ದೊಡ್ಡ ಉದ್ಯಮಗಳು ತನ್ನ ಕೆಲವು ಪರಿಣಿತ ವಿಭಾಗಗಳನ್ನು (ಉದಾಹರಣೆಗೆ, ಕಾನೂನು, ಕಂಪ್ಯೂಟರ್ ಪ್ರೋಗ್ರಾಂ, ಗ್ರಾಹಕರ ಸೇವಾ ವಿಭಾಗ ಮುಂತಾದವು) ಮುಚ್ಚುವುದು ಮತ್ತು ಅಂತಹ ಕೆಲಸವನ್ನು ಸಣ್ಣ ತುಂಡು ತುಂಡುಗಳಾಗಿ ವಿಂಗಡಿಸಿ, ಪರಿಣಿತ ಸಣ್ಣ ಉದ್ಯಮಿಗಳಿಗೆ ಕೆಲವು ಸಂದರ್ಭದಲ್ಲಿ ಇತರ ರಾಷ್ಟ್ರಗಳಲ್ಲಿನ ಸಣ್ಣ ಉದ್ಯಮಗಳಿಗೆ ವಹಿಸಿಕೊಡುವುದನ್ನು ಲಾಭದಾಯಕವೆಂದು ತಿಳಿದುಕೊಂಡಿದೆ. ಆಧುನಿಕ ಕಾರ್ಖಾನೆ ಅಥವಾ ಕಛೇರಿಯ ಸಾಂಪ್ರದಾಯಿಕ ಉದ್ದೇಶ ಮನೆಯನ್ನೇ ಕೆಲಸದ ಸ್ಥಳವನ್ನಾಗಿ ಬದಲಾಯಿಸುವುದಾಗಿದೆ. ಈ ಎಲ್ಲಾ ಬದಲಾವಣೆಗಳು ವೈಯುಕ್ತಿಕ ಕೆಲಸಗಾರನ ಪರವಾಗಿ ಆಗುತ್ತಿಲ್ಲ. ಕೆಲಸಗಾರರಿಗೆ ಸೀಮಿತ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡುವುದರ ಮೂಲಕ ಉದ್ಯೋಗದ ಸ್ವರೂಪವು ಅನೌಪಚಾರಿಕವಾಗುತ್ತಿದೆ.

ಕಳೆದ ಎರಡು ದಶಕಗಳಲ್ಲಿ ಒಟ್ಟು ದೇಶೀಯ ಉತ್ಪನ್ನದ ಬೆಳವಣಿಗೆ ತೀವ್ರಗತಿಯಲ್ಲಿ ಹೆಚ್ಚುತ್ತಿದೆ. ಆದರೆ ಅದಕ್ಕೆ ತಕ್ಕಂತೆ ಉದ್ಯೋಗವಕಾಶಗಳು ಹೆಚ್ಚಾಗುತ್ತಿಲ್ಲ. ಇದು ಸರ್ಕಾರವನ್ನು ಉದ್ಯೋಗವಕಾಶಗಳನ್ನು ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸೃಷ್ಟಿಸಲು ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಪಡಿಸುತ್ತದೆ.

## ಪುನರುಕ್ತಿ

- ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿ ಸಮಗ್ರ ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆ ಸಲ್ಲಿಸುವ ಎಲ್ಲಾ ವ್ಯಕ್ತಿಗಳನ್ನು ಶ್ರಮಿಕರು ಎನ್ನುವರು.
- ಒಟ್ಟು ಜನಸಂಖ್ಯೆಯಲ್ಲಿ ಸುಮಾರು 5/2 ಭಾಗದಷ್ಟು ಜನರು ಮಾತ್ರ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.
- ಭಾರತದ ಶ್ರಮಬಲದಲ್ಲಿ ಪುರುಷರು ಅದರಲ್ಲೂ ಗ್ರಾಮೀಣ ಪುರುಷರು ಪ್ರಮುಖರಾಗಿದ್ದಾರೆ.
- ಭಾರತದಲ್ಲಿ ಬಹುಸಂಖ್ಯಾತ ಶ್ರಮಿಕರು ಸ್ವ–ಉದ್ಯೋಗಿಗಳಾಗಿದ್ದಾರೆ. ದಿನಗೂಲಿ ಕೆಲಸಗಾರರು ಮತ್ತು ನಿಯಮಿತ ಸಂಬಳ/ವೇತನದ ನೌಕರರಿಬ್ಬರನ್ನು ಒಟ್ಟಿಗೆ ಸೇರಿಸಿದರೆ ಭಾರತದ ಶ್ರಮಬಲದ ಅರ್ಧದಷ್ಟಿದ್ದಾರೆ.
- ಸುಮಾರು 5/3 ರಷ್ಟು ಭಾರತದ ಶ್ರಮಬಲವು ತಮ್ಮ ಜೀವನಾಧಾರದ ಮೂಲವಾಗಿ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ.
- ಇತ್ತೀಚೆಗೆ ಉದ್ಯೋಗ ಬೆಳವಣಿಗೆಯು ನಿಧಾನವಾಗಿದೆ.
- ಸುಧಾರಣಾವಧಿಯ ನಂತರದಲ್ಲಿ ಭಾರತ ಸೇವಾ ವಲಯದಲ್ಲಿನ ಉದ್ಯೋಗವಕಾಶಗಳಿಗೆ ಸಾಕ್ಷಿಯಾಗಿದೆ. ಈ ಹೊಸ ಉದ್ಯೋಗಗಳು ಹೆಚ್ಚಾಗಿ ಅನೌಪಚಾರಿಕ ವಲಯದಲ್ಲಿ ಕಂಡುಬರುತ್ತದೆ ಮತ್ತು ಉದ್ಯೋಗದ ಸ್ವರೂಪವೂ ಕೂಡ ಹೆಚ್ಚು ಸಾಂದರ್ಭಿಕವಾಗಿದೆ.
- ಸರ್ಕಾರ ದೇಶದಲ್ಲಿ ಅತಿ ಹೆಚ್ಚು ಔಪಚಾರಿಕ ಉದ್ಯೋಗ ನೀಡುವ ಉದ್ಯೋಗದಾತನಾಗಿದೆ.
- ಉದ್ಯೋಗ ಪಡೆದುಕೊಳ್ಳಲು ಅಗತ್ಯ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ಮತ್ತು ತರಬೇತಿಗಳ ಮೊರೆಹೋಗುವುದು ಪ್ರಮುಖವಾಗಿದೆ.
- ಭಾರತದಲ್ಲಿ ಮರೆಮಾಚಿದ ನಿರುದ್ಯೋಗವು ಗ್ರಾಮೀಣ ಪ್ರದೇಶದ ಸಾಮಾನ್ಯರೂಪದ ನಿರುದ್ಯೋಗವಾಗಿದೆ.
- ಭಾರತದಲ್ಲಿನ ಶ್ರಮಬಲದ ರಚನೆಯಲ್ಲಿ ಬದಲಾವಣೆ ಆಗುತ್ತಿದೆ.
- ವಿವಿಧ ಯೋಜನೆಗಳು ಮತ್ತು ನೀತಿಗಳ ಮೂಲಕ ಸರ್ಕಾರ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗವಕಾಶಗಳನ್ನು ನಿರ್ಮಿಸುವ ಕ್ರಮಗಳನ್ನು ಕೈಗೊಳ್ಳುತ್ತಿದೆ.



## ಅಭ್ಯಾಸಗಳು

1. ಶ್ರಮಿಕನೆಂದರೆ ಯಾರು?
2. ಶ್ರಮಿಕ–ಜನಸಂಖ್ಯೆಯ ಅನುಪಾತವನ್ನು ವ್ಯಾಖ್ಯಾನಿಸಿ?
3. ಈ ಕೆಳಗಿನವರು ಶ್ರಮಿಕರೇ? ಏಕೆ? ಭಿಕ್ಷುಕ, ಕಳ್ಳ, ಕಳ್ಳವ್ಯಾಪಾರಿ, ಜೂಜುಕೋರ.
4. ಗುಂಪಿಗೆ ಸೇರದ ವ್ಯಕ್ತಿಯನ್ನು ಕಂಡುಹಿಡಿಯಿರಿ.
   - i. ಸಲೂನ್ ಮಾಲೀಕ
   - ii. ಚಮ್ಮಾರ
   - iii. ಹಾಲು ಮಾರುವ ಮಾತೃಸಂಸ್ಥೆಯಲ್ಲಿನ ನಗದು ಗುಮಾಸ್ತ
   - iv. ಮನೆಪಾಠದ ಶಿಕ್ಷಕ
   - v. ಸಾರಿಗೆಯ ನಿರ್ವಾಹಕ
   - vi. ಕಟ್ಟಡ ನಿರ್ಮಾಣ ಕೆಲಸಗಾರ
5. ಹೊಸದಾಗಿ ಉದಯವಾಗುತ್ತಿರುವ ಉದ್ಯೋಗಗಳು ಹೆಚ್ಚಾಗಿ__________ವಲಯದಲ್ಲಿ ಕಂಡುಬರುತ್ತವೆ. (ಸೇವಾ/ತಯಾರಿಕಾ)
6. ನಾಲ್ಕು ಕೂಲಿ ಕೆಲಸಗಾರರನ್ನು ಹೊಂದಿರುವ ಸಾರ್ವಜನಿಕ ಸಂಸ್ಥೆಯನ್ನು____________ವಲಯದ ಸಂಸ್ಥೆ ಎಂದು ಕರೆಯಲಾಗುತ್ತದೆ. (ಔಪಚಾರಿಕ/ಅನೌಪಚಾರಿಕ)
7. ರಾಜು ಶಾಲೆಗೆ ಹೋಗುತ್ತಿದ್ದಾನೆ. ಅವನು ಶಾಲೆಯಲ್ಲಿ ಇಲ್ಲದಿದ್ದಾಗ ನೀವು ಅವನನ್ನು ಅವನ ಹೊಲದಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡುವಿರಿ. ಅವನನ್ನು ಶ್ರಮಿಕನೆಂದು ಪರಿಗಣಿಸಲು ಸಾಧ್ಯವೇ? ಏಕೆ?
8. ನಗರದ ಮಹಿಳೆಯರಿಗೆ ಹೋಲಿಸಿದಾಗ ಗ್ರಾಮೀಣ ಮಹಿಳೆಯರೆ ಹೆಚ್ಚಾಗಿ ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಏಕೆ?
9. ಮೀನಾಕ್ಷಿ ಒಬ್ಬ ಗೃಹಿಣಿ. ಮನೆಯ ಕೆಲಸಗಳನ್ನು ನಿರ್ವಹಿಸುವುದರ ಜೊತೆಗೆ ಅವಳು ತನ್ನ ಗಂಡ ನಡೆಸುವ ಸ್ವಂತ ಬಟ್ಟೆ ಅಂಗಡಿಯಲ್ಲೂ ಕೆಲಸ ಮಾಡುತ್ತಾಳೆ. ಅವಳನ್ನು ಶ್ರಮಿಕಳೆಂದು ಪರಿಗಣಿಸಲು ಸಾಧ್ಯವೇ? ಏಕೆ?
10. ಗುಂಪಿಗೆ ಸೇರದ ವ್ಯಕ್ತಿಯನ್ನು ಗುರುತಿಸಿ.
    - i. ರಿಕ್ಷಾ ಮಾಲೀಕನ ಕೈಕೆಳಗೆ ದುಡಿಯುವ ರಿಕ್ಷಾ ಎಳೆಯುವವನು.
    - ii. ಗಾರೆ ಕೆಲಸಗಾರ.
    - iii. ಮೆಕಾನಿಕ್ (ಯಂತ್ರೋಪಕರಣ) ಅಂಗಡಿಯ ಕೆಲಸಗಾರ.
    - iv. ಪಾದರಕ್ಷೆ ಪಾಲೀಷ್ ಮಾಡುವ ಹುಡುಗ.
11. ಈ ಕೆಳಗಿನ ಕೋಷ್ಟಕವು 73–1972 ರಲ್ಲಿ ಭಾರತದಲ್ಲಿನ ಕಾರ್ಮಿಕ ಬಲದ ಹಂಚಿಕೆಯನ್ನು ತೋರಿಸುತ್ತದೆ. ಇದನ್ನು ವಿಶ್ಲೇಷಿಸಿ. ಕಾರ್ಮಿಕ ಬಲದ ಹಂಚಿಕೆಯ ಸ್ವರೂಪಕ್ಕೆ ಕಾರಣಗಳನ್ನು ನೀಡಿ. ಭಾರತದಲ್ಲಿ 30 ವರ್ಷಗಳ ಹಿಂದೆ ಇದ್ದ ಸನ್ನಿವೇಶಕ್ಕೆ ಸಂಬಂಧಿಸಿದ ದತ್ತಾಂಶ ಇದಾಗಿದೆ ಎಂಬುದನ್ನು ನೀವು ಗಮನಿಸಬಹುದು.

| ವಾಸಸ್ಥಳ | ಕಾರ್ಮಿಕ ಬಲ (ದಶಲಕ್ಷಗಳಲ್ಲಿ) | | |
|---|---|---|---|
| | ಪುರುಷರು | ಸ್ತ್ರೀಯರು | ಒಟ್ಟು |
| ಗ್ರಾಮೀಣ | 125 | 69 | 194 |
| ನಗರ | 32 | 7 | 39 |

12. ಈ ಕೆಳಗಿನ ಕೋಷ್ಟಕವು 2000–1999ರಲ್ಲಿ ಭಾರತದಲ್ಲಿನ ಜನಸಂಖ್ಯೆಯ ಕಾರ್ಮಿಕ–ಜನಸಂಖ್ಯೆಯ ಅನುಪಾತವನ್ನು ತೋರಿಸುತ್ತದೆ. ಭಾರತದ ಕಾರ್ಮಿಕ ಬಲವನ್ನು ನೀವು ಅಂದಾಜು ಮಾಡಲು ಸಾಧ್ಯವೇ? (ನಗರ ಮತ್ತು ಒಟ್ಟು).

| ಪ್ರದೇಶ | ಜನಸಂಖ್ಯೆಯ ಅಂದಾಜು (ಕೋಟಿಗಳಲ್ಲಿ) | ಕಾರ್ಮಿಕ–ಜನಸಂಖ್ಯೆಯ ಅನುಪಾತ | ಕಾರ್ಮಿಕರ ಸಂಖ್ಯೆಯ ಅಂದಾಜು (ಕೋಟಿಗಳಲ್ಲಿ) |
|---|---|---|---|
| ಗ್ರಾಮೀಣ | 71.88 | 41.9 | $\frac{71.88}{100} \times 41.9 = 30.12$ |
| ನಗರ | 28.52 | 33.7 | ? |
| ಒಟ್ಟು | 100.0 | 39.5 | ? |

13. ಏಕೆ ನಿಯಮಿತ ಸಂಬಳ ಪಡೆಯುವ ಕಾರ್ಮಿಕರು ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚಾಗಿದ್ದಾರೆ?

14. ಏಕೆ ನಿಯಮಿತ ಸಂಬಳ ಉದ್ಯೋಗದಲ್ಲಿ ಹೆಂಗಸರು ಕಡಿಮೆ ಕಂಡುಬರುತ್ತಾರೆ?

15. ಭಾರತದಲ್ಲಿ ವಲಯವಾರು ಶ್ರಮಬಲದ ವಿತರಣೆಯ ಇತ್ತೀಚಿನ ಪ್ರವೃತ್ತಿಗಳನ್ನು ವಿಶ್ಲೇಷಿಸಿ?

16. 1970 ಕ್ಕೆ ಹೋಲಿಸಿದಾಗ ವಿವಿಧ ಕೈಗಾರಿಕೆಗಳಲ್ಲಿನ ಶ್ರಮಬಲದ ಹಂಚಿಕೆಯಲ್ಲಿ ಅಷ್ಟೇನು ಬದಲಾವಣೆಗಳಾಗಿಲ್ಲ. ವಿಮರ್ಶಿಸಿ.

17. ಕಳೆದ 50 ವರ್ಷಗಳಲ್ಲಿ ಭಾರತದಲ್ಲಿ ಉದ್ಯೋಗ ಸೃಷ್ಟಿಯು ರಾಷ್ಟ್ರದ GDP ಬೆಳವಣಿಗೆಗೆ ತಕ್ಕದ್ದಾಗಿದೆ ಎಂದು ನೀವು ಯೋಚಿಸುವಿರಾ? ಹೇಗೆ?

18. ಔಪಚಾರಿಕ ವಲಯಕ್ಕಿಂತ ಅನೌಪಚಾರಿಕ ವಲಯದಲ್ಲಿ ಉದ್ಯೋಗ ಸೃಷ್ಟಿಯಾಗುವ ಅವಶ್ಯಕತೆಯಿದೆಯೇ? ಏಕೆ?

19. ವಿಕ್ಟರ್ ದಿನದಲ್ಲಿ 2 ಗಂಟೆಗಳ ಕಾಲ ಮಾತ್ರ ಕೆಲಸ ಪಡೆಯಬಲ್ಲನು. ದಿನದ ಉಳಿದ ಸಮಯದಲ್ಲಿ ಅವನು ಕೆಲಸವನ್ನು ಹುಡುಕುತ್ತಾನೆ. ಅವನು ನಿರುದ್ಯೋಗಿಯೇ? ಯಾಕೆ? ವಿಕ್ಟರ್ ನಂತಹ ವ್ಯಕ್ತಿಗಳು ಯಾವ ಉದ್ಯೋಗವನ್ನು ಮಾಡುತ್ತಿರುವರು?

20. ನೀವು ಹಳ್ಳಿಯೊಂದರಲ್ಲಿ ವಾಸಿಸುತ್ತದ್ದೀರಿ ಎಂದು ಭಾವಿಸಿ. ಒಂದು ವೇಳೆ ಹಳ್ಳಿಯ ಪಂಚಾಯಿತಿಗೆ ಉದ್ಯೋಗ ಸೃಷ್ಟಿಯೊಂದಿಗೆ ಹಳ್ಳಿಯ ಸುಧಾರಣೆಗೆ ನಿಮ್ಮ ಸಲಹೆಯನ್ನು ಕೇಳಿದರೆ ನೀವು ಯಾವ ಬಗೆಯ ಚಟುವಟಿಕೆಗಳನ್ನು ಸೂಚಿಸುತ್ತೀರಿ?

21. ದಿನಗೂಲಿ ಕೆಲಸಗಾರರೆಂದರೆ ಯಾರು?

22. ಶ್ರಮಿಕನೊಬ್ಬನು ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುತ್ತಿರುವನೇ ಎಂಬುದನ್ನು ನೀವು ಹೇಗೆ ತಿಳಿಯುವಿರಿ

## ಸೂಚಿತ ಹೆಚ್ಚುವರಿ ಚಟುವಟಿಕೆಗಳು

1. ಒಂದು ಬೀದಿ ಅಥವಾ ಕಾಲೋನಿ ಯಾವುದಾದರೊಂದು ಪ್ರದೇಶವನ್ನು ಆಯ್ಕೆಮಾಡಿಕೊಂಡು ಅದನ್ನು 3ರಿಂದ 4 ಉಪಭಾಗಗಳಾಗಿ ವಿಂಗಡಿಸಿ. ಒಂದು ಸಮೀಕ್ಷೆಯನ್ನು ಕೈಗೊಂಡು ಅಲ್ಲಿ ವಾಸವಾಗಿರುವ ಪ್ರತಿಯೊಬ್ಬ ವ್ಯಕ್ತಿಯು ತೊಡಗಿರುವ ಚಟುವಟಿಕೆಯ ವಿವರದ ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸಿ. ಎಲ್ಲಾ ಪ್ರದೇಶಗಳ ಶ್ರಮಿಕ–ಜನಸಂಖ್ಯೆಯ ಅನುಪಾತವನ್ನು ಕಂಡುಹಿಡಿಯಿರಿ. ವಿವಿಧ ಉಪಪ್ರದೇಶಗಳ ನಡುವೆಯಿರುವ ಶ್ರಮಿಕ–ಜನಸಂಖ್ಯೆಯ ನಡುವಿನ ವ್ಯತ್ಯಾಸದ ಫಲಿತಾಂಶವನ್ನು ಅರ್ಥೈಸಿ.

2. ರಾಜ್ಯದ 4 ಬೇರೆ ಬೇರೆ ಪ್ರದೇಶಗಳಿಗೆ 4–3 ವಿದ್ಯಾರ್ಥಿಗಳ ಗುಂಪನ್ನು ನೀಡಲಾಗಿದೆ ಎಂದು ಭಾವಿಸೋಣ. ಮೊದಲ ಪ್ರದೇಶ ಭತ್ತದ ಸಾಗುವಳಿಯಲ್ಲಿ ತೊಡಗಿದೆ. ಮತ್ತೊಂದು ಪ್ರದೇಶದಲ್ಲಿ ತೆಂಗು ಮುಖ್ಯವಾದ ತೋಟಗಾರಿಕಾ ಬೆಳೆಯಾಗಿದೆ. ಮೂರನೇ ಪ್ರದೇಶ ಕರಾವಳಿ ಪ್ರದೇಶವಾಗಿದ್ದು, ಅಲ್ಲಿ ಮೀನುಗಾರಿಕೆ ಮುಖ್ಯ ಚಟುವಟಿಕೆಯಾಗಿದೆ. ನಾಲ್ಕನೇ ಪ್ರದೇಶ ನದಿಯನ್ನು ಹೊಂದಿದ್ದು, ಅದರ ಹತ್ತಿರ ಬಹುಮಟ್ಟಿಗೆ ಜಾನುವಾರುಗಳ ಸಾಕಾಣಿಕೆಯ ಚಟುವಟಿಕೆಗಳು ನಡೆಯುತ್ತಿವೆ. ಈ ನಾಲ್ಕು ಗುಂಪುಗಳಿಗೆ ಈ ನಾಲ್ಕು ಪ್ರದೇಶಗಳಲ್ಲಿ ಯಾವ ಬಗೆಯ ಉದ್ಯೋಗವನ್ನು ಸೃಷ್ಟಿಸಬೇಕೆಂಬುದರ ವರದಿಯೊಂದನ್ನು ಸಿದ್ಧಪಡಿಸಲು ಕೇಳಿ.

3. ಸ್ಥಳೀಯ ಗ್ರಂಥಾಲಯಕ್ಕೆ ಭೇಟಿ ನೀಡಿ ಭಾರತ ಸರ್ಕಾರ ವಾರಕ್ಕೊಮ್ಮೆ ಪ್ರಕಟಿಸುವ 'Employment News' ಅನ್ನು ಕೇಳಿ ಪಡೆಯಿರಿ. ಕಳೆದ ಎರಡು ತಿಂಗಳುಗಳ ಪ್ರತಿ ಸಂಚಿಕೆಯನ್ನು ಓದಿ ಗಮನಿಸಿ. ಈ ಕೆಳಗೆ ಏಳು ಸಂಚಿಕೆಗಳಿವೆ. 25 ಜಾಹೀರಾತುಗಳನ್ನು ಆಯ್ಕೆಮಾಡಿಕೊಂಡು ಈ ಕೆಳಗಿನ ಕೋಷ್ಟಕವನ್ನು ಭರ್ತಿ ಮಾಡಿ. (ಅಗತ್ಯವಿದ್ದಲ್ಲಿ ಕೋಷ್ಟಕವನ್ನು ವಿಸ್ತರಿಸಿ) ಉದ್ಯೋಗದ ಸ್ವರೂಪದ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

| ವಿವರ | ಜಾಹಿರಾತು 1 | ಜಾಹಿರಾತು 2 |
|---|---|---|
| 1. ಕಛೇರಿಯ ಹೆಸರು | | |
| 2. ಇಲಾಖೆ/ಕಂಪನಿ | | |
| 3. ಖಾಸಗಿ/ಸಾರ್ವಜನಿಕ/ಜಂಟಿ ಉಧ್ಯಮ | | |
| 4. ಹುದ್ದೆಯ ಹೆಸರು | | |
| 5. ವಲಯ–ಪ್ರಾಥಮಿಕ/ದ್ವಿತೀಯ/ಸೇವಾ | | |
| 6. ಹುದ್ದೆಗಳ ಒಟ್ಟು ಸಂಖ್ಯೆ/ಖಾಲಿ ಹುದ್ದೆಗಳು | | |
| 7. ಅಗತ್ಯ ವಿದ್ಯಾರ್ಹತೆ | | |

4. ನೀವು ಇರುವ ಸ್ಥಳದಲ್ಲಿ ಸರ್ಕಾರದಿಂದ ವಿವಿಧ ಕೆಲಸಗಳು ನಡೆಯುತ್ತಿರುವುದನ್ನು ನೀವು ಗಮನಿಸಿರಬಹುದು. ಉದಾಹರಣೆಗೆ, ರಸ್ತೆಗಳನ್ನು ನಿರ್ಮಿಸುವುದು, ಕೆರೆಯ ಹೂಳೆತ್ತುವುದು, ಶಾಲಾ ಕಟ್ಟಡಗಳು, ಆಸ್ಪತ್ರೆಗಳು, ಮತ್ತು ಇತರ ಸರ್ಕಾರಿ ಕಛೇರಿ ಕಟ್ಟಡಗಳ ನಿರ್ಮಾಣ, ತಡೆ ಅಣೆಕಟ್ಟುಗಳ (Check Dams) ನಿರ್ಮಾಣ ಮತ್ತು ಬಡವರಿಗಾಗಿ ಮನೆಗಳನ್ನು ನಿರ್ಮಿಸುವುದು ಇತ್ಯಾದಿ. ಈ ಚಟುವಟಿಕೆಗಳ ಬಗ್ಗೆ ವಿಮರ್ಶಾತ್ಮಕ ಮೌಲ್ಯಮಾಪನ ವರದಿಯನ್ನು ಸಿದ್ಧಪಡಿಸಿ. ಆ ವರದಿಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬಹುದಾಗಿದೆ.

   i. ಹೇಗೆ ಕೆಲಸವನ್ನು ಗುರುತಿಸಲಾಗುತ್ತದೆ.

ii. ಬಿಡುಗಡೆಯಾದ ಹಣದ ಮೊತ್ತ.

iii. ಸ್ಥಳೀಯ ಜನರು ನೀಡಿದ ಯಾವುದಾದರು ಕೊಡುಗೆ.

iv. ಪುರುಷ ಮತ್ತು ಮಹಿಳೆಯರಿಬ್ಬರೂ ಸೇರಿದಂತೆ ಭಾಗವಹಿಸಿದ ಜನರ ಸಂಖ್ಯೆ.

v. ಪಾವತಿ ಮಾಡಿದ ಕೂಲಿ.

vi. ಆ ಪ್ರದೇಶದಲ್ಲಿ ಆ ಯೋಜನೆಯ ಅವಶ್ಯಕತೆ ಇದೆಯೇ ಮತ್ತು ಜಾರಿಗೊಳಿಸಿದ ಯೋಜನೆಯಡಿಯಲ್ಲಿ ನಡೆಯುತ್ತಿರುವ ಕೆಲಸಕ್ಕೆ ಸಂಬಂಧಿಸಿದ ವಿಮರ್ಶಾತ್ಮಕ ಅಭಿಪ್ರಾಯ.

5. ಇತ್ತೀಚಿನ ವರ್ಷಗಳಲ್ಲಿ ಅನೇಕ ಸ್ವಯಂ ಸಂಘಟನೆಗಳು ಬೆಟ್ಟ ಮತ್ತು ಒಣಭೂಮಿ ಪ್ರದೇಶಗಳಲ್ಲಿ ಉದ್ಯೋಗ ನಿರ್ಮಿಸಲು ಕ್ರಮಗಳನ್ನು ಕೈಗೊಂಡಿವೆ. ನಿಮ್ಮ ಪ್ರದೇಶದಲ್ಲಿ ಇಂತಹ ಚಟುವಟಿಕೆಗಳು ನಡೆಯುತ್ತಿದ್ದರೆ ನೀವು ಭೇಟಿ ನೀಡಿ ವರದಿಯೊಂದನ್ನು ಸಿದ್ಧಪಡಿಸಿ.



## REFERENCES

**Books:**

CHADHA, G.K. and P.P. SAHU, 2002. 'Post-reform Setbacks in Rural Employment:

Issues that need further scrutiny.' Economic and Political Weekly, May 25, pp.1998-2026.

DESAI, S and M.B.DAS. 2004. 'Is Employment Driving India's Growth Surge',

Economic and Political Weekly, July 3, pp. 3045-3051.

GHOSE, AJIT K. 1999. 'Current Issues of Employment Policy in India.' Economic and Political Weekly, September 4, pp. 2592-2608.

HIRWAY, INDIRA. 2002. 'Employment and Unemployment Situation in 1990s:

How Good are NSS Data.' Economic and Political Weekly, May 25, pp. 2027-2036.

JACOB, PAUL. 1986. 'Concept of 'work' and estimates of 'workforce' — An appraisal of the treatment of activities relating to non-marketed output,' Sarvekshana, Vol.IX, No.4, April.

KULSHRESHTHA, A.C., GULAB SINGH, ALOK KAR and R.L. MISHRA. 2000. 'Workforce in the Indian National Accounts Statistics,' The Journal of Income and Wealth, Vol.22, No.2, July, pp. 3-39.

PRADHAN, B.K. and M.R.SALUJA. 1996. 'Labour Statistics in India: A Review.' Margin, July- September, Vol.28, Number 4, pp. 319-347.

RATH, NILAKANTHA. 2001. 'Data on Employment, Unemployment and Education: Where to go from here?' Economic and Political Weekly, June 9, pp. 2081-2087.

SUNDARAM, K. 2001. 'Employment-Unemployment Situation in the Nineties:

Some Results from NSS 55th Round Survey', Economic and Political Weekly, March 17, pp. 931-940.

SUNDARAM, K. 2001. 'Employment and Poverty in 1990s: Further Results from

NSS 55th Round Employment-Unemployment Survey, 1999-2000,' Economic and Political Weekly, August 11, pp. 3039-3049.

VISARIA, PRAVIN. 1996. 'Structure of the Indian Workforce, 1961-1994,' The

Indian Journal of Labour Economics, Vol.39, No.4, pp. 725-740. Government Reports

Annual Reports, Ministry of Labour, Government of India, Delhi.

Census of India 2011, Primary Census Abstract, Registrar General of Census

Operations, Ministry of Home Affairs, Government of India, Delhi.

Economic Survey, Ministry of Finance, Government of India.

Reports on Employment and Unemployment Situation in India, Ministry of

Statistics and Planning, Government of India.

**Websites**

www.censusofindia.nic.in

www.mospi.nic.in

8

# ಅಧ್ಯಾಯ–8

# ಮೂಲ ಸೌಕರ್ಯ

## INFRASTRUCTURE

**ಈ ಅಧ್ಯಾಯದ ಅಧ್ಯಯನದ ನಂತರ ನೀವು,**

- ಸಾಮಾಜಿಕ ಆರ್ಥಿಕ ಮೂಲಸೌಕರ್ಯಗಳ ಕ್ಷೇತ್ರದಲ್ಲಿ ಭಾರತ ಎದುರಿಸುತ್ತಿರುವ ಪ್ರಮುಖ ಸವಾಲುಗಳನ್ನು ಅರ್ಥ ಮಾಡಿಕೊಳ್ಳುವಿರಿ.
- ಆರ್ಥಿಕ ಅಭಿವೃದ್ಧಿಯಲ್ಲಿ ಮೂಲಸೌಕರ್ಯಗಳ ಪಾತ್ರವನ್ನು ತಿಳಿದುಕೊಳ್ಳುವಿರಿ.
- ಮೂಲಸೌಕರ್ಯದ ಅತಿ ಅಗತ್ಯ ಅಂಶವಾದ ಇಂಧನದ ಪಾತ್ರವನ್ನು ಅರ್ಥ ಮಾಡಿಕೊಳ್ಳುವಿರಿ.
- ಇಂಧನ ಮತ್ತು ಆರೋಗ್ಯ ವಲಯದ ಸಮಸ್ಯೆಗಳು ಮತ್ತು ಸಾಧ್ಯತೆಗಳನ್ನು ಅರ್ಥ ಮಾಡಿಕೊಳ್ಳುವಿರಿ.
- ಭಾರತದಲ್ಲಿನ ಆರೋಗ್ಯ ಮೂಲಸೌಕರ್ಯಗಳನ್ನು ಅರ್ಥ ಮಾಡಿಕೊಳ್ಳುವಿರಿ.

"ನಮಗೆ ಅವಶ್ಯವಿರುವ ಹಲವು ವಸ್ತುಗಳ ಬಗ್ಗೆ ನಾವು ಕಾಯಬಹುದು, ಆದರೆ ಮಗುವಿಗೆ ಸಾಧ್ಯವಿಲ್ಲ. ಅವನಿಗೆ ನಾವು ಅದನ್ನು ನಾಳೆ ಎಂದು ಹೇಳಲೂ ಸಾಧ್ಯವಿಲ್ಲ. ಅವನ ಹೆಸರೇ ಈ ದಿನ"

ಹಾಗೆಯೇ ಮೂಲಸೌಕರ್ಯಗಳೂ ಕೂಡಾ – ಗ್ಯಾಬ್ರಿಯೇಲಾ ಮಿಸ್ಟ್ರಲ್– ಚಿಲಿಯನ್ ಕವಿ

## 8.1 ಪೀಠಿಕೆ (INTRODUCTION)

ಭಾರತದಲ್ಲಿ ಕೆಲವು ರಾಜ್ಯಗಳು ಕೆಲವು ಕ್ಷೇತ್ರಗಳಲ್ಲಿ ಉಳಿದವುಗಳಿಗಿಂತ ಏಕೆ ಚೆನ್ನಾಗಿ ಸಾಧನೆ ಮಾಡುತ್ತಿವೆ ಎಂದು ಯಾವಾಗಲಾದರೂ ಯೋಚಿಸಿದ್ದೀರಾ? ಏಕೆ ಪಂಜಾಬ್, ಹರಿಯಾಣ ಮತ್ತು ಹಿಮಾಚಲ ಪ್ರದೇಶಗಳು ಕೃಷಿ ಮತ್ತು ತೋಟಗಾರಿಕೆಯಲ್ಲಿ ಅಭಿವೃದ್ಧಿಯಾಗಿವೆ? ಏಕೆ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಕೈಗಾರಿಕೆಯಲ್ಲಿ ಉಳಿದವುಗಳಿಗಿಂತ ಮುಂದಿವೆ? ಹೇಗೆ ದೇವರ ಸ್ವಂತ ನಾಡು ಎಂದೇ ಜನಪ್ರಿಯವಾಗಿರುವ ಕೇರಳ ರಾಜ್ಯವು ಸಾಕ್ಷರತೆ, ಆರೋಗ್ಯ, ನೈರ್ಮಲ್ಯದಲ್ಲಿ ಉತ್ತಮ ಪರಿಣಿತಿಯನ್ನು ಸಾಧಿಸಿದೆ ಅಲ್ಲದೇ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ? ಏಕೆ ಕರ್ನಾಟಕದ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯು ಜಗತ್ತಿನ ಗಮನವನ್ನು ಸೆಳೆದಿದೆ?

ಇದು ಏಕೆಂದರೆ ಇವು ಭಾರತದ ಉಳಿದೆಲ್ಲಾ ರಾಜ್ಯಗಳಿಗಿಂತ ಯಾವ ವಲಯದಲ್ಲಿ ಪರಿಣತಿ ಪಡೆದಿದೆಯೋ ಅದಕ್ಕೆ ಬೇಕಾದ ಉತ್ತಮ ಮೂಲಸೌಕರ್ಯಗಳನ್ನು ಈ ರಾಜ್ಯಗಳು ಹೊಂದಿವೆ. ಕೆಲವು ಉತ್ತಮ ನೀರಾವರಿ ಸೌಲಭ್ಯವನ್ನು ಹೊಂದಿವೆ ಇನ್ನುಳಿದವು ಉತ್ತಮ ಸಾರಿಗೆ ಸೌಲಭ್ಯಗಳನ್ನು ಹೊಂದಿವೆ ಅಥವಾ ವಿವಿಧ ತಯಾರಿಕಾ ಕೈಗಾರಿಕೆಗಳಿಗೆ ಅವಶ್ಯವಿರುವ ಕಚ್ಚಾ ವಸ್ತುಗಳನ್ನು ಸುಲಭವಾಗಿ ಪಡೆಯಲು ಅನುಕೂಲವಾದ ಬಂದರುಗಳ ಸಮೀಪ ನೆಲೆಗೊಂಡಿವೆ. ಕರ್ನಾಟಕದ ಬೆಂಗಳೂರಿನಂತಹ ನಗರ ಹಲವು ಬಹುರಾಷ್ಟ್ರೀಯ ಕಂಪನಿಗಳನ್ನು ಆಕರ್ಷಿಸುತ್ತಿದೆ, ಏಕೆಂದರೆ ಅದು ವಿಶ್ವಶ್ರೇಷ್ಠ ಸಂಪರ್ಕ ಸೌಲಭ್ಯಗಳನ್ನೊದಗಿಸಿದೆ. ದೇಶದ ಅಭಿವೃದ್ಧಿಗೆ ಪೂರಕವಾಗುವ ಈ ಎಲ್ಲಾ ಸಂರಚನೆಗಳೂ ಮೂಲಸೌಕರ್ಯಗಳಾಗುತ್ತವೆ. ಅಂದಮೇಲೆ ಈ ಮೂಲಸೌಕರ್ಯಗಳು ಹೇಗೆ ಅಭಿವೃದ್ಧಿಗೆ ಸಹಾಯಕವಾಗಿವೆ?

## 8.2 ಮೂಲಸೌಕರ್ಯಗಳು ಎಂದರೇನು? (WHAT IS INFRASTRUCTURE?)

ಮೂಲಸೌಕರ್ಯವು ಕೈಗಾರಿಕೆ ಮತ್ತು ಕೃಷಿ ಉತ್ಪಾದನೆ, ದೇಶೀ ಮತ್ತು ವಿದೇಶಿ ವ್ಯಾಪಾರ ಹಾಗೂ ವಾಣಿಜ್ಯದಂತಹ ಪ್ರಮುಖ ರಂಗಗಳಿಗೆ ಬೆಂಬಲವಾಗಿರುವ ಸೇವೆಗಳನ್ನು ಒದಗಿಸುತ್ತಿದೆ. ರಸ್ತೆಗಳು, ರೈಲು ಮಾರ್ಗಗಳು, ಬಂದರುಗಳು, ವಿಮಾನ ನಿಲ್ದಾಣಗಳು, ಅಣೆಕಟ್ಟುಗಳು, ವಿದ್ಯುತ್ ಉತ್ಪಾದನಾ ಕೇಂದ್ರಗಳು, ತೈಲ ಮತ್ತು ಕೊಳವೆ ಮಾರ್ಗಗಳು, ದೂರಸಂಪರ್ಕ, ಸೌಲಭ್ಯಗಳು, ದೇಶದಲ್ಲಿನ ಶಾಲಾ ಕಾಲೇಜುಗಳನ್ನು ಒಳಗೊಂಡ ಶೈಕ್ಷಣಿಕ ವ್ಯವಸ್ಥೆ, ಆಸ್ಪತ್ರೆಗಳನ್ನೊಳಗೊಂಡ ಆರೋಗ್ಯ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಸೌಲಭ್ಯವಿರುವ ನೈರ್ಮಲ್ಯ ವ್ಯವಸ್ಥೆ, ಬ್ಯಾಂಕ್, ವಿಮೆ ಹಾಗೂ ಇತರ ಹಣಕಾಸು ಸಂಸ್ಥೆಗಳಿರುವ ಹಣಕಾಸು ವ್ಯವಸ್ಥೆ ಇತ್ಯಾದಿ ಸೇವೆಗಳು ಮೂಲಸೌರ್ಕಯದಲ್ಲಿ ಸೇರಿವೆ. ಇವುಗಳಲ್ಲಿ ಕೆಲವು ಸೌಲಭ್ಯಗಳು ಸರಕು ಮತ್ತು ಸೇವೆಗಳ ಉತ್ಪಾದನೆಯ ಮೇಲೆ ನೇರವಾಗಿ ಪರಿಣಾಮ ಬೀರಿದರೆ ಇನ್ನು ಕೆಲವು ಆರ್ಥಿಕತೆಯ ಸಾಮಾಜಿಕ ವಲಯದ ನಿರ್ಮಾಣದ ಮೂಲಕ ಪರೋಕ್ಷವಾಗಿ ಬೆಂಬಲ ನೀಡುತ್ತವೆ.



ಚಿತ್ರ 8.1 : ರಸ್ತೆಗಳು – ಬೆಳವಣಿಗೆಗೆ ಕಾರಣ



ಚಿತ್ರ 8.2 ಶಾಲೆ : ಒಂದು ದೇಶದ ಪ್ರಮುಖ ಮೂಲ ಸೌಕರ್ಯ

ಕೆಲವರು ಮೂಲಸೌಕರ್ಯಗಳನ್ನು ಆರ್ಥಿಕ ಮತ್ತು ಸಾಮಾಜಿಕ ಎಂದು ಎರಡು ರೀತಿಯಲ್ಲಿ ವರ್ಗೀಕರಿಸಿದ್ದಾರೆ. ಇಂಧನ, ಸಾರಿಗೆ, ದೂರಸಂಪರ್ಕ, ಇತ್ಯಾದಿಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳು ಮೊದಲ ವರ್ಗದಲ್ಲಿ ಒಳಗೊಂಡಿದ್ದರೆ ಶಿಕ್ಷಣ, ಅರೋಗ್ಯ ವಸತಿಗೆ ಸಂಬಂಧಿಸಿದ ಸೇವೆಗಳು ಎರಡನೇ ವರ್ಗದಲ್ಲಿ ಸೇರಿವೆ.




**ನೀವೇ ಮಾಡಿರಿ**

**(Work These Out)**

➢ ನಿಮ್ಮ ಸುತ್ತಮುತ್ತಲ ಪ್ರದೇಶದಲ್ಲಿ ನೀವು ಬಳಸುತ್ತಿರಬಹುದಾದ ವಿವಿಧ ಮೂಲಸೌಕರ್ಯಗಳನ್ನು ಪಟ್ಟಿ ಮಾಡಿ.

ನಿಮ್ಮ ಪ್ರದೇಶಕ್ಕೆ ಅವಶ್ಯವಿರುವ ಇನ್ನೂ ಕೆಲವು ಹೆಚ್ಚಿಗೆ ಮೂಲಸೌಕರ್ಯಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ.

## 8.3 ಮೂಲಸೌಕರ್ಯದ ಮಹತ್ವ (RELEVANCE OF INFRASTRUCTURE)

ಆಧುನಿಕ ಕೈಗಾರಿಕಾ ಆರ್ಥಿಕತೆಯ ದಕ್ಷ ಕಾರ್ಯನಿರ್ವಹಣೆಯು ಅವಲಂಬಿತವಾಗಿರುವ ಆಧಾರ ವ್ಯವಸ್ಥೆಯೇ ಮೂಲಸೌಕರ್ಯ. ಬಿತ್ತನೆ ಬೀಜಗಳು, ರೋಗನಿವಾರಕ ಔಷಧಿಗಳು, ರಸಗೊಬ್ಬರ ಮತ್ತು ಕೃಷಿ ಉತ್ಪನ್ನಗಳನ್ನು ಬೃಹತ್ ಪ್ರಮಾಣದಲ್ಲಿ ಶೀಘ್ರವಾಗಿ ಸಾಗಿಸಲು ಆಧುನಿಕ ಕೃಷಿಯು ಆಧುನಿಕ ರಸ್ತೆ ಸಾರಿಗೆ, ರೈಲ್ವೆ ಮತ್ತು ಹಡಗುಗಳ ಸೌಕರ್ಯವನ್ನೇ ಅವಲಂಬಿಸಿದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ಕೃಷಿಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳುತ್ತಿರುವುದರಿಂದ ವಿಮೆ ಮತ್ತು ಬ್ಯಾಂಕಿಂಗ್ ಸೌಲಭ್ಯವನ್ನು ಸಹಾ ಇದು ಅವಲಂಬಿಸಿದೆ.

ಉತ್ಪಾದನಾಂಗಗಳ ಉತ್ಪಾದಕತೆಯನ್ನು ಹೆಚ್ಚಿಸುವ ಮತ್ತು ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ, ಈ ಎರಡು ರೀತಿಯಲ್ಲಿ ಮೂಲಸೌಕರ್ಯವು ಆರ್ಥಿಕ ಅಭಿವೃದ್ಧಿಗೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಅಸಮರ್ಪಕ ಮೂಲಸೌಕರ್ಯವು ಆರೋಗ್ಯದ ಮೇಲೆ ಅನೇಕ ರೀತಿಯಲ್ಲಿ ದುಷ್ಪರಿಣಾಮಗಳನ್ನು ಬೀರುತ್ತದೆ. ನೀರಿನ ಪೂರೈಕೆ ಮತ್ತು ನೈರ್ಮಲ್ಯದಲ್ಲಿನ ಸುಧಾರಣೆಯು ಜಲಜನ್ಯ ರೋಗಗಳಿಂದಾಗಿ ಕಾಯಿಲೆಗೆ ತುತ್ತಾಗುವ ಮತ್ತು ವ್ಯಾಧಿಗಳಿಂದಾಗುವ ಗಂಭೀರತೆಯನ್ನು ಗಣನೀಯವಾಗಿ ಕಡಿಮೆ ಮಾಡುವಲ್ಲಿ ಬಹಳ ಪ್ರಭಾವಶಾಲಿಯಾಗಿದೆ. ಇದಲ್ಲದೇ ನೀರು, ನೈರ್ಮಲ್ಯ ಮತ್ತು ಅರೋಗ್ಯದ ನಡುವಿನ ಸಂಬಂಧದಂತೆ ಸಾರಿಗೆ ಮತ್ತು ಸಂಪರ್ಕದಂತಹ ಮೂಲಸೌಕರ್ಯಗಳ ಗುಣಮಟ್ಟವೂ ಅರೋಗ್ಯ ಸೇವೆಗಳನ್ನು ಪಡೆಯುವುದರ ಮೇಲೆ ಪರಿಣಾಮ ಬೀರುತ್ತದೆ. ವಾಯುಮಾಲಿನ್ಯ ಮತ್ತು ಸಾರಿಗೆಗೆ ಸಂಬಂಧಿಸಿದ ಸುರಕ್ಷತಾ ಕಂಟಕಗಳು, ವಿಶೇಷವಾಗಿ ಹೆಚ್ಚು ಜನಸಾಂದ್ರತೆಯಿರುವ ಪ್ರದೇಶಗಳಲ್ಲಿ, ಕಾಯಿಲೆಗೆ ಈಡಾಗುವ ಪ್ರಮಾಣದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ.

## 8.4 ಭಾರತದಲ್ಲಿ ಮೂಲಸೌಕರ್ಯಗಳ ಸ್ಥಿತಿಗತಿ (THE STATE OF INFRASTRUCTURE IN INDIA)

ಸಾಂಪ್ರದಾಯಿಕವಾಗಿ ದೇಶದಲ್ಲಿನ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಆದರೆ ಮೂಲಸೌಕರ್ಯ ವಲಯದಲ್ಲಿ ಸರಕಾರದ ಹೂಡಿಕೆಯು ಸಾಕಷ್ಟಿಲ್ಲ ಎಂದು ಕಂಡುಬಂದಿದೆ. ಇಂದು ಖಾಸಗಿ ವಲಯವು ಸ್ವತಃ ಮತ್ತು ಸಾರ್ವಜನಿಕ ವಲಯದ ಪಾಲುದಾರಿಕೆಯೊಂದಿಗೆ ಮೂಲಸೌಕರ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಲು ನಮ್ಮ ಬಹುಸಂಖ್ಯಾತ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಜಗತ್ತಿನಲ್ಲಿ ಬೇಕಾದಷ್ಟು ತಾಂತ್ರಿಕ ಪ್ರಗತಿಯಾಗಿದ್ದರೂ ಗ್ರಾಮೀಣ



**ಚಿತ್ರ 8.3 ಅಣೆಕಟ್ಟುಗಳು : ಅಭಿವೃದ್ಧಿಯ ದೇವಾಲಯಗಳು**

ಮಹಿಳೆಯರು ಉರುವಲಿನ ಅಗತ್ಯಗಳಿಗಾಗಿ ಬೆರಣಿ (ಒಣಗಿಸಿದ ಸಗಣಿ), ಕೃಷಿ ತ್ಯಾಜ್ಯಗಳು, ಉರುವಲು ಕಟ್ಟಿಗೆ ಇತ್ಯಾದಿಗಳನ್ನು ಇನ್ನೂ ಬಳಸುತ್ತಿದ್ದಾರೆ. ಬಹುದೂರ ಅಲೆದಾಡಿ ನೀರು, ಉರುವಲು ಮತ್ತು ಇತರ ಮೂಲಭೂತ ಅವಶ್ಯಕತೆಗಳನ್ನು ಹೊಂದಿಸಿಕೊಳ್ಳುತ್ತಿದ್ದಾರೆ. 2001ರ ಜನಗಣತಿಯ ಪ್ರಕಾರ ಗ್ರಾಮೀಣ ಭಾರತದಲ್ಲಿ ಶೇ.56ರಷ್ಟು

**ಕೋಷ್ಟಕ : 8.1**

**ಭಾರತ ಮತ್ತು ಇತರ ರಾಷ್ಟ್ರಗಳಲ್ಲಿನ ಕೆಲವು ಮೂಲಸೌಕರ್ಯಗಳು–**

| ದೇಶಗಳು | ಮೂಲಸೌಕರ್ಯಗಳಿಗೆ ಜಿ.ಡಿ.ಪಿ.ಯ ಶೇ. ಬಂಡವಾಳ ಹೂಡಿಕೆ* (2013) | ಸುಧಾರಿತ ನೀರಿನ ಮೂಲದ ಲಭ್ಯತೆ(ಶೇ) (2012) | ಸುಧಾರಿತ ನೈರ್ಮಲ್ಯ ವ್ಯವಸ್ಥೆಯ ಲಭ್ಯತೆ(ಶೇ) (2012) | ಮೊಬೈಲ್ ಚಂದಾದಾರರು/ 100 ಜನರಿಗೆ (2013) | ವಿದ್ಯುತ್ ಉತ್ಪಾದನೆ (ಶತಕೋಟಿ ಕಿ.ವ್ಯಾ/ ಘಂಟೆ)(2011) |
|---|---|---|---|---|---|
| ಚೀನಾ | 49 | 92 | 65 | 89 | 4715 |
| ಹಾಂಗ್ ಕಾಂಗ್ | 24 | 92 | 100 | 239 | 39 |
| **ಭಾರತ** | **30** | **84** | **35** | **71** | **1052** |
| ಕೊರಿಯಾ | 29 | 98 | 100 | 111 | 520 |
| ಪಾಕಿಸ್ತಾನ್ | 14 | 91 | 47 | 70 | 95 |
| ಸಿಂಗಪೂರ್ | 29 | 100 | 100 | 156 | 46 |
| ಇಂಡೋನೇಷಿಯಾ | 34 | 76 | 59 | 122 | 182 |

**ಮೂಲ: ವಿಶ್ವ ಅಭಿವೃದ್ಧಿ ಸೂಚಕಗಳು ವಿಶ್ವ ಬ್ಯಾಂಕ್, ಜಾಲತಾಣ, www.worldbank.org./(*)refers to Gross Capital Formation.**

ಕುಟುಂಬಗಳು ಮಾತ್ರ ವಿದ್ಯುತ್ ಸಂಪರ್ಕವನ್ನು ಹೊಂದಿವೆ ಮತ್ತು ಶೇ.43ರಷ್ಟು ಕುಟುಂಬಗಳು ಇನ್ನೂ ಸೀಮೆಎಣ್ಣೆಯನ್ನೇ ಬಳಸುತ್ತಿದ್ದಾರೆ. ಸುಮಾರು ಶೇ.90ರಷ್ಟು ಗ್ರಾಮೀಣ ಕುಟುಂಬಗಳು ಅಡುಗೆಗಾಗಿ ಜೈವಿಕ ಇಂಧನವನ್ನು ಬಳಸುತ್ತಿದ್ದಾರೆ. ನಲ್ಲಿ ನೀರಿನ ಲಭ್ಯತೆ ಕೇವಲ ಶೇ.24ರಷ್ಟು ಗ್ರಾಮೀಣ ಕುಟುಂಬಗಳಿಗೆ ಮಾತ್ರ ಸೀಮಿತವಾಗಿದೆ.



**ಚಿತ್ರ 8.4 ವಾಸಯೋಗ್ಯ ಮನೆಯೊಂದಿಗೆ ಶುದ್ಧ ಕುಡಿಯುವ ನೀರು– ಇನ್ನೂ ಒಂದು ಕನಸು**

ಸುಮಾರು ಶೇ.76ರಷ್ಟು ಜನರು ಬಾವಿ, ಕೆರೆ, ಕೊಳ, ಸರೋವರ, ನದಿ ಮತ್ತು ಕಾಲುವೆ ಇತ್ಯಾದಿ ತೆರೆದ ಮೂಲಗಳಿಂದ ಕುಡಿಯಲು ನೀರನ್ನು ಬಳಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ನೈರ್ಮಲ್ಯ ಸೌಲಭ್ಯಗಳನ್ನು ಪಡೆಯಲು ಶಕ್ತರಾಗಿರುವ ಜನಸಂಖ್ಯೆ ಕೇವಲ ಶೇ.20ರಷ್ಟು ಮಾತ್ರ.

ಇತರ ಕೆಲವು ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದ ಮೂಲಸೌಕರ್ಯಗಳ ಸ್ಥಿತಿಗತಿಗಳನ್ನು ಕೋಷ್ಟಕ 8.1ರಲ್ಲಿ ಕಾಣಬಹುದು. ಮೂಲಸೌಕರ್ಯ ಅಭಿವೃದ್ಧಿಯ ತಳಪಾಯ ಎನ್ನುವುದು ತಿಳಿದಿದ್ದರೂ ಭಾರತ ಇನ್ನೂ ಈ ದಿಶೆಯಲ್ಲಿ ಜಾಗೃತವಾಗಬೇಕಿದೆ. ಭಾರತ ತನ್ನ ಒಟ್ಟು ದೇಶೀಯ ಉತ್ಪನ್ನದ ಕೇವಲ ಶೇ.5ರಷ್ಟನ್ನು ಮಾತ್ರ ಮೂಲ ಸೌಕರ್ಯಗಳ ಮೇಲೆ ಹೂಡಿಕೆ ಮಾಡುತ್ತಿದೆ. ಇದು ಚೀನಾ ಮತ್ತು ಇಂಡೋನೇಷಿಯಾಗಳಿಗೆ ಹೋಲಿಸಿದರೆ ತುಂಬಾ ಕಡಿಮೆಯಿದೆ.

ಭಾರತವು ಮುಂದಿನ ಕೆಲವು ದಶಕಗಳಲ್ಲಿ ಜಗತ್ತಿನಲ್ಲಿಯೇ ಮೂರನೇ ಅತಿ ದೊಡ್ಡ ಅರ್ಥವ್ಯವಸ್ಥೆಯಾಗಿ ಹೊರಹೊಮ್ಮಲಿದೆ ಎಂದು ಕೆಲವು ಅರ್ಥಶಾಸ್ತ್ರಜ್ಞರು ಅಂದಾಜು ಮಾಡಿದ್ದಾರೆ. ಇದು ಸಾಧ್ಯವಾಗಬೇಕಾದರೆ, ಭಾರತ ಮೂಲಸೌಕರ್ಯ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಬೇಕಾಗಿದೆ. ಯಾವುದೇ ದೇಶದಲ್ಲಿ ವರಮಾನ ಹೆಚ್ಚಾದಂತೆ ಮೂಲಸೌಕರ್ಯಗಳ ಅವಶ್ಯಕತೆಯ ರಚನೆಯಲ್ಲಿಯೂ ಗಮನಾರ್ಹ ಬದಲಾವಣೆಗಳಾಗುತ್ತವೆ. ಕಡಿಮೆ ಆದಾಯವಿರುವ ರಾಷ್ಟ್ರಗಳಲ್ಲಿ ಮೂಲಭೂತ ಮೂಲಸೌಕರ್ಯ ಸೇವೆಗಳಾದ ನೀರಾವರಿ, ಸಾರಿಗೆ ವಿದ್ಯುಚ್ಛಕ್ತಿ ಇತ್ಯಾದಿಗಳು ಬಹಳ ಪ್ರಮುಖವಾಗಿವೆ. ಅರ್ಥವ್ಯವಸ್ಥೆಯು ಬೆಳೆದಂತೆ ಹಾಗೂ ಅನುಭೋಗದ ಬೇಡಿಕೆಗಳು ಬಹುತೇಕವಾಗಿ ಈಡೇರಿಸಲ್ಪಟ್ಟಾಗ

**ನೀವೇ ಮಾಡಿರಿ**
**(Work These Out)**

- ನೀವು ದಿನಪತ್ರಿಕೆಗಳನ್ನು ಓದುವಾಗ ಈ ಪದಗಳನ್ನು ಗಮನಿಸಿರಬಹುದು ಉದಾ: ಭಾರತ್ ನಿರ್ಮಾಣ್, ವಿಶೇಷ ಉದ್ದೇಶದ ವಾಹನಗಳು (Special Purpose Vehicle -SPV), ವಿಶೇಷ ಆರ್ಥಿಕ ವಲಯಗಳು (Special Economic Zones -SEZ), ನಿರ್ಮಿಸು ನಿರ್ವಹಿಸು ವರ್ಗಾಯಿಸು (Build, Operate, Transfer -BOT), ಖಾಸಗಿ ಸಾರ್ವಜನಿಕ ಪಾಲುದಾರಿಕೆ (Private Public Partnership -PPP) ಇತ್ಯಾದಿ ಶಬ್ದಗಳ ಸುದ್ದಿಗಳನ್ನೊಳಗೊಂಡ ಪೇಪರ್ ಕ್ಲಿಪ್ಪಿಂಗ್‌ಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿ ಮತ್ತು ಹೇಗೆ ಈ ಶಬ್ದಗಳು ಮೂಲಸೌಕರ್ಯಕ್ಕೆ ಸಂಬಂಧಿಸಿವೆ ಎಂದು ನಮೂದಿಸಿ.
- ಈ ಅಧ್ಯಾಯದ ಕೊನೆಯಲ್ಲಿ ನೀಡಿರುವ ಆಕರ ಟಿಪ್ಪಣಿಗಳನ್ನು ಬಳಸಿ ಇತರೆ ಮೂಲಸೌಕರ್ಯಗಳ ವಿವರಗಳನ್ನು ಸಂಗ್ರಹಿಸಿ.

ಆರ್ಥಿಕತೆಯಲ್ಲಿನ ಕೃಷಿಯ ಪಾಲು ಕಡಿಮೆಯಾಗುತ್ತದೆ ಮತ್ತು ಸೇವೆಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳು ಹೆಚ್ಚು ಬೇಕಾಗುತ್ತದೆ. ಇದರಿಂದಾಗಿಯೇ ಅಧಿಕ ವರಮಾನದ ರಾಷ್ಟ್ರಗಳಲ್ಲಿ ವಿದ್ಯುಚ್ಛಕ್ತಿ ಮತ್ತು ದೂರಸಂಪರ್ಕದಂತಹ ಮೂಲಸೌಕರ್ಯಗಳ ಪಾಲು ಹೆಚ್ಚಾಗಿವೆ.

ಹಾಗಾಗಿ ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿ ಪರಸ್ಪರ ಜೊತೆಯಾಗಿಯೇ ಸಾಗುತ್ತವೆ. ಕೃಷಿಯು ವ್ಯಾಪಕವಾಗಿ ನೀರಾವರಿ ಸೌಲಭ್ಯದ ಅಭಿವೃದ್ಧಿ ಮತ್ತು ವಿಸ್ತರಣೆಯನ್ನು ಅವಲಂಬಿಸಿದೆ. ಕೈಗಾರಿಕಾ ಪ್ರಗತಿಯು ಇಂಧನ ಹಾಗೂ ವಿದ್ಯುಚ್ಛಕ್ತಿಯ ಉತ್ಪಾದನೆ, ಸಾರಿಗೆ ಮತ್ತು ದೂರಸಂಪರ್ಕದ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ. ಇದರಿಂದ ಸ್ಪಷ್ಟವಗುವುದೇನೆಂದರೆ, ಮೂಲಸೌಕರ್ಯಗಳ ಅಭಿವೃದ್ಧಿಗೆ ಸರಿಯಾದ ಗಮನವನ್ನು ಹರಿಸದೇ ಇದ್ದಲ್ಲಿ ಅದು ಆರ್ಥಿಕ ಪ್ರಗತಿಗೆ ಬಹುದೊಡ್ಡ ಅಡ್ಡಿಯಾಗಿ ಪರಿಣಮಿಸಲಿದೆ. ಈ ಅಧ್ಯಾಯದಲ್ಲಿ ಎರಡು ರೀತಿಯ ಮೂಲಸೌಕರ್ಯಗಳಾದ ಇಂಧನ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಮಾತ್ರ ಗಮನ ಹರಿಸಲಾಗುವುದು.

## 8.5 ಇಂಧನ (ENERGY)

ನಮಗೆ ಇಂಧನ ಏಕೆ ಬೇಕು? ಇದು ಯಾವ ಯಾವ ರೂಪದಲ್ಲಿ ದೊರೆಯುತ್ತದೆ? ರಾಷ್ಟ್ರದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇಂಧನ ಬಹಳ ಪ್ರಮುಖ ಸಂಗತಿಯಾಗಿದೆ. ನಿಜವಾಗಿಯೂ ಇದು ಕೈಗಾರಿಕೆಗೆ ಅತ್ಯಂತ ಅವಶ್ಯಕ.

ಈಗ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳಾದ ರಸಗೊಬ್ಬರಗಳು, ರೋಗನಿಯಂತ್ರಕ ಔಷಧಿಗಳು ಮತ್ತು ಕೃಷಿ ಉಪಕರಣಗಳ ಉತ್ಪಾದನೆ ಮತ್ತು ಸಾಗಾಣಿಕೆಯಲ್ಲಿ ಇಂಧನವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಅಡುಗೆಗಾಗಿ, ಬೆಳಕಿಗಾಗಿ ಮತ್ತು ಶಾಖಕ್ಕಾಗಿ ಇತ್ಯಾದಿ ಗೃಹಬಳಕೆಯ ಉದ್ದೇಶಕ್ಕೆ ಕುಟುಂಬಗಳಿಗೆ ಇಂಧನದ ಅವಶ್ಯಕತೆಯಿದೆ.



**ಚಿತ್ರ 8.5 ಉರುವಲು ಕಟ್ಟಿಗೆ ಪ್ರಮುಖ ಇಂಧನ ಮೂಲ**

ಇಂಧನವನ್ನು ಉಪಯೋಗಿಸದೇ ಸರಕು ಅಥವಾ ಸೇವೆಯನ್ನು ಉತ್ಪಾದಿಸಬಹುದು ಎಂದು ನೀವು ಯೋಚಿಸುತ್ತೀರಾ?



**ಚಿತ್ರ 8.6 ಗ್ರಾಮೀಣ ಸಾರಿಗೆಯಲ್ಲಿ ಎತ್ತಿನ ಗಾಡಿಗಳು ಇಂದಿಗೂ ಪ್ರಮುಖ ಪಾತ್ರ ವಹಿಸುತ್ತಿವೆ.**

## ಇಂಧನದ ಮೂಲಗಳು (Sources of Energy):

ಇಂಧನದಲ್ಲಿ ವಾಣಿಜ್ಯ ಮತ್ತು ವಾಣಿಜ್ಯೇತರ ಮೂಲಗಳಿವೆ. ಖರೀದಿ ಮತ್ತು ಮಾರಾಟ ಮಾಡಲ್ಪಡುವ ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ವಿದ್ಯುಚ್ಛಕ್ತಿ ಇತ್ಯಾದಿ ಇಂಧನಗಳು ವಾಣಿಜ್ಯ ಮೂಲಗಳಾಗಿವೆ. ವಾಣಿಜ್ಯೇತರ ಮೂಲಗಳಲ್ಲಿ ಉರುವಲು ಕಟ್ಟಿಗೆ, ಕೃಷಿ ತ್ಯಾಜ್ಯ, ಬೆರಣಿ (ಒಣಗಿದ ಸಗಣಿ) ಇತ್ಯಾದಿಗಳು ಸೇರಿವೆ. ಇವು ಪ್ರಕೃತಿಯಲ್ಲಿ ಅಥವಾ ಅರಣ್ಯದಲ್ಲಿ ದೊರೆಯುವುದರಿಂದ ವಾಣಿಜ್ಯೇತರ ಮೂಲಗಳಾಗಿವೆ. ವಾಣಿಜ್ಯ ಮೂಲದ ಇಂಧನಗಳು ಸಾಮಾನ್ಯವಾಗಿ ಮುಗಿದುಹೋಗುತ್ತವೆ (ಜಲವಿದ್ಯುತ್ತನ್ನು ಹೊರತುಪಡಿಸಿ), ವಾಣಿಜ್ಯೇತರ ಮೂಲದ ಇಂಧನಗಳನ್ನು ಸಾಮಾನ್ಯವಾಗಿ ನವೀಕರಿಸಬಹುದಾಗಿದೆ. ಶೇ.60ಕ್ಕಿಂತ ಹೆಚ್ಚು ಭಾರತೀಯ ಕುಟುಂಬಗಳು ತಮ್ಮ ದೈನಂದಿನ ಅಡುಗೆ, ನೀರು ಕಾಯಿಸುವುದು ಮತ್ತು ಇತರ ಶಾಖದ ಅವಶ್ಯಕತೆಗಳಿಗಾಗಿ ಸಾಂಪ್ರದಾಯಿಕ ಇಂಧನ ಮೂಲವನ್ನೇ ಆಶ್ರಯಿಸಿದ್ದಾರೆ.

**ಅಸಾಂಪ್ರದಾಯಿಕ ಇಂಧನ ಮೂಲಗಳು:** ವಾಣಿಜ್ಯ ಮತ್ತು ವಾಣಿಜ್ಯೇತರ ಈ ಎರಡೂ ಇಂಧನ ಮೂಲಗಳನ್ನು ಸಾಂಪ್ರದಾಯಿಕ ಇಂಧನ ಮೂಲಗಳೆಂದು ಕರೆಯುತ್ತಾರೆ. ಇತರ ಮೂರು ಇಂಧನ ಮೂಲಗಳಾದ ಸೌರಶಕ್ತಿ, ಪವನಶಕ್ತಿ ಮತ್ತು ಉಬ್ಬರವಿಳಿತ (ಭರತಜನ್ಯ ಶಕ್ತಿ) ಶಕ್ತಿ ಇವುಗಳನ್ನು ಸಾಮಾನ್ಯವಾಗಿ ಅಸಾಂಪ್ರದಾಯಿಕ ಇಂಧನ ಮೂಲಗಳೆಂದು ಕರೆಯುತ್ತಾರೆ. ಭಾರತ ಉಷ್ಣವಲಯದ ರಾಷ್ಟ್ರವಾಗಿರುವುದರಿಂದ ಹಾಗೂ ಈಗಾಗಲೇ ಲಭ್ಯವಿರುವ ಮಿತವ್ಯಯಕಾರಿ ತಂತ್ರಜ್ಞಾನವನ್ನು ಬಳಸಿದಲ್ಲಿ ಈ ಮೂರೂ ಬಗೆಯ ಇಂಧನಗಳನ್ನು ಉತ್ಪಾದಿಸಬಲ್ಲ ಅನಿಯಮಿತ ಸಾಮರ್ಥ್ಯವನ್ನು ಭಾರತ ಹೊಂದಿದೆ. ಇದಕ್ಕಾಗಿ ಅತ್ಯಂತ ಕಡಿಮೆ ವೆಚ್ಚದ ತಂತ್ರಜ್ಞಾನವನ್ನು ಸಹ ಅಭಿವೃದ್ಧಿ ಪಡಿಸಬಹುದಾಗಿದೆ.

## ವಾಣಿಜ್ಯ ಇಂಧನದ ಅನುಭೋಗದ ಮಾದರಿ (Consumption pattern of Commercial Energy)

ಭಾರತದಲ್ಲಿ ಬಳಕೆಯಾಗುವ ಒಟ್ಟು ಇಂಧನದಲ್ಲಿ ಶೇ.74ರಷ್ಟು ವಾಣಿಜ್ಯ ಇಂಧನ ಮೂಲಗಳಾಗಿವೆ. ಇದರಲ್ಲಿ ದೊಡ್ಡ ಪಾಲು ಶೇ.54ರಷ್ಟು ಹೊಂದಿರುವ ಕಲ್ಲಿದ್ದಲು, ನಂತರದ ಸ್ಥಾನ ಶೇ.32ರಷ್ಟು ಪಾಲು ಹೊಂದಿರುವ ತೈಲ, ಶೇ.10ರಷ್ಟು ಪಾಲಿರುವ ನೈಸರ್ಗಿಕ ಅನಿಲ ಮತ್ತು ಶೇ.2ರಷ್ಟು ಇರುವ ಜಲವಿದ್ಯುತ್ ವಾಣಿಜ್ಯ ಇಂಧನ ಮೂಲದಲ್ಲಿ ಸೇರಿವೆ. ವಾಣಿಜ್ಯೇತರ ಇಂಧನ ಮೂಲಗಳಾಗಿರುವ ಉರುವಲು ಕಟ್ಟಿಗೆ, ಬೆರಣಿ (ಒಣಗಿದ ಸಗಣಿ) ಮತ್ತು ಕೃಷಿ ತ್ಯಾಜ್ಯಗಳು ಒಟ್ಟು ಇಂಧನ ಬಳಕೆಯಲ್ಲಿ ಶೇ.26ರಷ್ಟು ಪಾಲನ್ನು ಹೊಂದಿದೆ. ಆಮದು ಆಧಾರಿತ ಕಚ್ಚಾ ತೈಲ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಆರ್ಥಿಕತೆಯೊಂದಿಗಿನ ಇವುಗಳ ಸಂಬಂಧ ಹೊಂದಿರುವ ಭಾರತದ ಇಂಧನ ಕ್ಷೇತ್ರದ ಮುಖ್ಯ ಲಕ್ಷಣವೆಂದರೆ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳಿಗಾಗಿ ಆಮದನ್ನು ಅವಲಂಬಿಸಿರುವುದು ಮತ್ತು ಈ ಅವಲಂಬನೆ ಭವಿಷ್ಯದಲ್ಲಿ ಮತ್ತಷ್ಟು ವೇಗವಾಗಿ ಹೆಚ್ಚಾಗುವ ಸಾಧ್ಯತೆಯಿರುವುದು.



**ಚಿತ್ರ 8.7 ಗಾಳಿಯಂತ್ರ ವಿದ್ಯುತ್ ಉತ್ಪಾದನೆಯ ಇನ್ನೊಂದು ಮೂಲ**



**ಚಿತ್ರ 8.8 ಸೌರಶಕ್ತಿಗೆ ಉಜ್ವಲ ಭವಿಷ್ಯತ್ತಿದೆ**

ವಾಣಿಜ್ಯ ಇಂಧನದ ವಲಯವಾರು ಅನುಭೋಗದ ಮಾದರಿಯನ್ನು ಕೋಷ್ಟಕ 8.2ರಲ್ಲಿ ನೀಡಲಾಗಿದೆ. 1953–54 ರಲ್ಲಿ ಸಾರಿಗೆ ವಲಯ ವಾಣಿಜ್ಯ ಇಂಧನವನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿತ್ತು. ಆದಾಗ್ಯೂ ಸಾರಿಗೆ ವಲಯದ ಈ ಪ್ರಮಾಣ ನಿರಂತರವಾಗಿ ಕಡಿಮೆಯಾಗುತ್ತಿದ್ದು ಗೃಹಬಳಕೆ, ಕೃಷಿ ಕೈಗಾರಿಕಾ ವಲಯದ ಪಾಲು ಹೆಚ್ಚಾಗುತ್ತಿದೆ. ತೈಲ ಮತ್ತು ಅನಿಲಗಳು ವಾಣಿಜ್ಯ ಇಂಧನ ಬಳಕೆಯಲ್ಲಿಯೇ ಅತ್ಯಂತ ಹೆಚ್ಚಿನ ಪಾಲನ್ನು ಹೊಂದಿದೆ. ಶೀಘ್ರಗತಿಯ ಆರ್ಥಿಕ ಬೆಳವಣಿಗೆಯಿಂದಾಗಿ ಇಂಧನ ಬಳಕೆಯಲ್ಲಿಯೂ ಸರಿಸಮಾನವಾದ ಏರಿಕೆ ಉಂಟಾಗಿದೆ.

**ಕೋಷ್ಟಕ 8.2**

**ವಾಣಿಜ್ಯ ಇಂಧನದ ವಲಯವಾರು ಬಳಕೆಯ ಮಾದರಿ (ಶೇಕಡ)**

| ವಲಯ | 1953–54 | 1970–71 | 1990–91 | 2012–13 |
|---|---|---|---|---|
| ಗೃಹಬಳಕೆ | 10 | 12 | 12 | 22 |
| ಕೃಷಿ | 01 | 03 | 08 | 18 |
| ಕೈಗಾರಿಕೆ | 40 | 50 | 45 | 45 |
| ಸಾರಿಗೆ | 44 | 28 | 22 | 2 |
| ಇತರೆ | 05 | 07 | 13 | 13 |
| **ಒಟ್ಟು** | **100** | **100** | **100** | **100** |

**ಮೂಲ:** ಒಂಭತ್ತನೇ ಪಂಚವಾರ್ಷಿಕ ಯೋಜನೆ, ಸಂಪುಟ 2, ಅಧ್ಯಾಯ 6, ಯೋಜನಾ ಆಯೋಗ, ಭಾರತ ಸರ್ಕಾರ, ನವದೆಹಲಿ ಮತ್ತು 1947–2003 ರವರೆಗಿನ ಭಾರತದ ವಿದ್ಯುತ್ ವಲಯದ ಬೆಳವಣಿಗೆ, ಕೇಂದ್ರೀಯ ವಿದ್ಯುತ್ ಪ್ರಾಧಿಕಾರ, ಇಂಧನ ಸಚಿವಾಲಯ, ಭಾರತ ಸರ್ಕಾರ.

## ವಿದ್ಯುಚ್ಛಕ್ತಿ (Power/Electricity):

ಆಧುನಿಕ ನಾಗರೀಕತೆಯ ಬೆಳವಣಿಗೆಯೊಂದಿಗೆ ಗುರುತಿಸಿ ಕೊಂಡಿರುವ ಹಾಗೂ ಅತ್ಯಂತ ಹೆಚ್ಚಾಗಿ ಗೋಚರಿಸಲ್ಪಡುವ ಶಕ್ತಿಯ ರೂಪವನ್ನೇ ವಿದ್ಯುಚ್ಛಕ್ತಿಯೆಂದು ಸಾಮನ್ಯವಾಗಿ ಕರೆಯುತ್ತೇವೆ. ಇದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ನಿರ್ಧರಿಸುವ ಮೂಲಸೌಕರ್ಯ ಅಂಶಗಳಲ್ಲಿಯೇ ಅತ್ಯಂತ ಪ್ರಮುಖವಾಗಿದೆ. ವಿದ್ಯುಚ್ಛಕ್ತಿಯ ಬೇಡಿಕೆಯ ಬೆಳವಣಿಗೆ ದರವು ಸಾಮಾನ್ಯವಾಗಿ ಒಟ್ಟು ದೇಶೀಯ ಉತ್ಪನ್ನದ (ಜಿ.ಡಿ.ಪಿ) ಬೆಳವಣಿಗೆಯ ದರಕ್ಕಿಂತ ಹೆಚ್ಚಾಗಿರುತ್ತದೆ. ಅಧ್ಯಯನಗಳು ಸೂಚಿಸುವಂತೆ ವಾರ್ಷಿಕವಾಗಿ ಶೇ.8ರಷ್ಟು ಜಿ.ಡಿ.ಪಿ. ಬೆಳವಣಿಗೆಯನ್ನು ಸಾಧಿಸಲು ವಿದ್ಯುಚ್ಛಕ್ತಿಯ ಪೂರೈಕೆಯು ಸುಮಾರು ಶೇ.12ಕ್ಕಿಂತ ಹೆಚ್ಚಾಗುವುದು ಅಗತ್ಯವಾಗಿದೆ. 2012–2013ರಲ್ಲಿ ಭಾರತದ ಒಟ್ಟು ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯದಲ್ಲಿ ಶಾಖೋತ್ಪನ್ನ ಮೂಲವು ಸುಮಾರು ಶೇ.70ರಷ್ಟು ಪಾಲನ್ನು ಹೊಂದಿದೆ. ಜಲವಿದ್ಯುಚ್ಛಕ್ತಿ, ಪವನಶಕ್ತಿಯು ಶೇ.16 ರಷ್ಟಿದ್ದರೆ ಅಣು ಶಕ್ತಿಯ ಮೂಲಗಳು ಶೇ.2ರಷ್ಟು ಪಾಲನ್ನು ಹೊಂದಿದೆ. ಭಾರತದ ಇಂಧನ ನೀತಿಯು ಎರಡು ಇಂಧನ ಮೂಲಗಳನ್ನು ಪ್ರೋತ್ಸಾಹಿಸುತ್ತದೆ – ಜಲವಿದ್ಯುಚ್ಛಕ್ತಿ ಮತ್ತು ಪವನಶಕ್ತಿ – ಇವು ಪಳೆಯುಳಿಕೆ ಇಂಧನವನ್ನು ಅವಲಂಬಿಸುವುದಿಲ್ಲ. ಹೀಗಾಗಿ ಈ ಮೂಲಗಳು ಇಂಗಾಲದ ಹೊರಸೂಸುವಿಕೆಯನ್ನು ತಪ್ಪಿಸುತ್ತದೆ. ಆದರೂ ಈ ಎರಡು ಮೂಲಗಳಿಂದ ವಿದ್ಯುಚ್ಛಕ್ತಿಯನ್ನು ತ್ವರಿತವಾಗಿ ಉತ್ಪಾದಿಸಲು ಸಾಧ್ಯವಾಗಿಲ್ಲ.




**ಪಟ 8.1: ಭಾರತದಲ್ಲಿ ವಿದ್ಯುತ್ ಉತ್ಪಾದನೆಯ ವಿವಿಧ ಮೂಲಗಳು, 2013**

ಅಣುಶಕ್ತಿಯು ವಿದ್ಯುಚ್ಛಕ್ತಿಯ ಒಂದು ಪ್ರಮುಖ ಮೂಲವಾಗಿದೆ; ಇದು ಆರ್ಥಿಕ ಅನುಕೂಲಗಳನ್ನು ಹೊಂದಿದೆ. ಪ್ರಸ್ತುತ, ಅಣುಶಕ್ತಿಯ ಜಾಗತಿಕ ಬಳಕೆಯ ದರವಾದ ಶೇ.13ಕ್ಕೆ ಹೋಲಿಸಿದಾಗ, ಭಾರತ ಕೇವಲ ಶೇ.2ರಷ್ಟು ಪಾಲನ್ನು ಮಾತ್ರ ಹೊಂದಿದೆ. ಇದು



**ನೀವೇ ಮಾಡಿರಿ**

**(Work These Out)**

- ಇತರ ಎಲ್ಲಾ ಇಂಧನ ಮೂಲಗಳಲ್ಲಿ ಅಣುಶಕ್ತಿಯ ಮೂಲಗಳ ಪಾಲು ಅತ್ಯಂತ ಕಡಿಮೆಯಿರುವುದನ್ನು ನೀವು ಗಮನಿಸರಬಹುದು. ಏಕೆ?
- ಸೌರಶಕ್ತಿ, ಪವನಶಕ್ತಿ, ಸಮುದ್ರದ ಅಲೆಗಳಿಂದ ಉತ್ಪಾದಿಸುವ ಶಕ್ತಿ ಇವು ಭವಿಷ್ಯದ ಇಂಧನ ಮೂಲಗಳಾಗಲಿವೆ. ಇವುಗಳ ತುಲನಾತ್ಮಕ ಅನುಕೂಲ ಮತ್ತು ಅನಾನುಕೂಲಗಳನ್ನು ತರಗತಿಯಲ್ಲಿ ಚರ್ಚಿಸಿ.

ಅತ್ಯಂತ ಕಡಿಮೆಯಾಗಿದೆ. ಹಾಗಾಗಿ ವಿದ್ವಾಂಸರು ಅಣುಶಕ್ತಿಯ ಮೂಲದಿಂದ ಹೆಚ್ಚು ವಿದ್ಯುತ್ತನ್ನು ಉತ್ಪಾದಿಸುವ ಸಲಹೆ ನೀಡುತ್ತಾರೆ. ಆದಾಗ್ಯೂ ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಯ ದೃಷ್ಟಿಕೋನದಿಂದ ಕೆಲವರು ಇದನ್ನು ವಿರೋಧಿಸುತ್ತಾರೆ. ನೀವು ಏನೆಂದು ಯೋಚಿಸುವಿರಿ?

### ವಿದ್ಯುಚ್ಛಕ್ತಿ ವಲಯದ ಕೆಲವು ಸವಾಲುಗಳು (Some Challenges in the Power Sector):

ವಿವಿಧ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಉತ್ಪಾದನೆಯಾದ ಎಲ್ಲಾ ವಿದ್ಯುಚ್ಛಕ್ತಿಯು ಅಂತಿಮ ಗ್ರಾಹಕರಿಂದ ಬಳಸಲ್ಪಡುತ್ತಿಲ್ಲ; ಅದರಲ್ಲಿ ಒಂದು ಭಾಗವು ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದಲೇ ಉಪಯೋಗಿಸಲ್ಪಡುತ್ತಿದೆ. ಅಲ್ಲದೇ ವಿದ್ಯುಚ್ಛಕ್ತಿಯ ಪ್ರಸರಣದಲ್ಲಿ (ಸರಬರಾಜಿನಲ್ಲಿ) ಸ್ವಲ್ಪ ಭಾಗ ನಷ್ಟವಾಗುತ್ತಿದೆ. ಮನೆಗಳಲ್ಲಿ ಕಛೇರಿಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಬಳಸಲು ಲಭಿಸುತ್ತಿರುವುದು ವಿದ್ಯುಚ್ಛಕ್ತಿಯ ನಿವ್ವಳ ಲಭ್ಯತೆಯಾಗಿದೆ.

ಇಂದು ಭಾರತದ ವಿದ್ಯುಚ್ಛಕ್ತಿ ವಲಯವು ಎದುರಿಸುತ್ತಿರುವ ಕೆಲವು ಸವಾಲುಗಳೆಂದರೆ, 1) ಭಾರತದ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯವು ಆರ್ಥಿಕ ಬೆಳವಣಿಗೆಯ ವಾರ್ಷಿಕ ದರವಾದ ಶೇ.7–8ರಷ್ಟನ್ನು ಪೂರೈಸಲು ಸಾಕಾಗುತ್ತಿಲ್ಲ. ಹೆಚ್ಚುತ್ತಿರುವ ಇಂಧನ ಬೇಡಿಕೆಯನ್ನು ಪೂರೈಸಲು ಭಾರತದ ವಾಣಿಜ್ಯ ಇಂಧನ ಪೂರೈಕೆಯಲ್ಲಿ ಶೇ.7ರಷ್ಟು ಬೆಳವಣಿಗೆ ಸಾಧಿಸುವ ಅಗತ್ಯವಿದೆ. ಪ್ರಸ್ತುತ ವಾರ್ಷಿಕವಾಗಿ ಕೇವಲ 20,000 ಮೆ. ವ್ಯಾಟ್‌ಗಳಷ್ಟನ್ನು ಮಾತ್ರ ಸೇರಿಸಲು ಭಾರತ ಶಕ್ತವಾಗಿದೆ. ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸರಿಯಾಗಿ ನಿರ್ವಹಿಸದ ಕಾರಣ ಸ್ಥಾಪಿತ ಸಾಮರ್ಥ್ಯದ ಅಪೂರ್ಣ ಬಳಕೆಯಾಗುತ್ತಿದೆ. 2) ವಿದ್ಯುತ್ ಸರಬರಾಜು ಮಾಡುವ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗಳು **(SEBs),** ಅನುಭವಿಸುವ ನಷ್ಟದ ಪ್ರಮಾಣ ರೂ.500 ಶತಕೋಟಿಗಳನ್ನು ಮೀರಿದೆ. ಇದು ವಿದ್ಯುಚ್ಛಕ್ತಿಯ ಪ್ರಸರಣದಲ್ಲಿನ ಮತ್ತು ವಿತರಣೆಯಲ್ಲಿನ ನಷ್ಟ, ತಪ್ಪಾದ ದರ, ಮತ್ತು ಇತರ ಅದಕ್ಷತೆಗಳಿಂದ ಸಂಭವಿಸುತ್ತಿದೆ. ತಜ್ಞರು ಹೇಳುವಂತೆ ರೈತರಿಗೆ ವಿದ್ಯುತ್ತನ್ನು ಪೂರೈಸುವುದೂ ಕೂಡಾ ನಷ್ಟಕ್ಕೆ ಮುಖ್ಯ ಕಾರಣ. ವಿವಿಧ ಪ್ರದೇಶಗಳಲ್ಲಿ ಆಗುತ್ತಿರುವ ವಿದ್ಯುತ್ ಕಳ್ಳತನವೂ ರಾಜ್ಯ ವಿದ್ಯುತ್ ಮಂಡಳಿಗಳ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸಿದೆ. 3) ಖಾಸಗಿ ವಲಯದ ವಿದ್ಯುತ್ ಉತ್ಪಾದನಾ ಕೇಂದ್ರಗಳು ಇನ್ನೂ

**ಪೆಟ್ಟಿಗೆ 8.1: Making a Difference - ಹೊಸ ಬದಲಾವಣೆ**

ಥಾಣೆ ನಗರವು ತನ್ನ ಪರಿಸರ ಸ್ನೇಹಿ ಯೋಜನೆಗಳಿಂದ ನವೀನ ಮಾದರಿಯ ನಗರ ಎಂಬ ಹೆಸರನ್ನು ಗಳಿಸುತ್ತಿದೆ. ಸೌರಶಕ್ತಿಯನ್ನು ಬೃಹತ್ ಪ್ರಮಾಣದಲ್ಲಿ ಬಳಸುವುದರಿಂದ ವೆಚ್ಚ ಮತ್ತು ಇಂಧನ ಬಳಕೆಯಲ್ಲಿ ಮಿತವ್ಯಯವನ್ನು ಸಾಧಿಸಬಹುದು ಎನ್ನುವುದು ನಿಜವಾಗಿಯೂ ನಮ್ಮ ಕಲ್ಪನೆಯನ್ನೂ ಮೀರಿದ ಪರಿಭಾವನೆಯಾಗಿದೆ. ಇಲ್ಲಿ ನೀರನ್ನು ಕಾಯಿಸಲು, ಟ್ರಾಫಿಕ್ ಲೈಟ್ಸ್ ಮತ್ತು ಜಾಹಿರಾತು ಫಲಕಗಳಿಗೆ ವಿದ್ಯುತ್ ಪೂರೈಕೆಗಾಗಿ ಸೌರಶಕ್ತಿಯನ್ನು ಅಳವಡಿಸಲಾಗಿದೆ. ಥಾಣೆ ನಗರ ಪಾಲಿಕೆಯು ಈ ಅದ್ವಿತೀಯ ಯೋಜನೆಯನ್ನು ಮುನ್ನಡೆಸುತ್ತಿದೆ. ನಗರದಲ್ಲಿ ನಿರ್ಮಾಣಗೊಳ್ಳುತ್ತಿರುವ ಎಲ್ಲಾ ಹೊಸ ಕಟ್ಟಡಗಳಿಗೆ ಸೋಲಾರ್ ವಾಟರ್ ಹೀಟರ್ ವ್ಯವಸ್ಥೆಯ ಅಳವಡಿಕೆಯನ್ನು ಪಾಲಿಕೆಯು ಕಡ್ಡಾಯಗೊಳಿಸಿದೆ. (2005ರ ಆಗಸ್ಟ್ 01 ರಂದು ಔಟ್‌ಲುಕ್ ಪತ್ರಿಕೆಯ 'ಮೇಕಿಂಗ್ ಎ ಡಿಫರೆನ್ಸ್' ಎಂಬ ಅಂಕಣದಲ್ಲಿ ಪ್ರಕಟಿತ).

- ಅಸಾಂಪ್ರದಾಯಕ ಇಂಧನ ಮೂಲಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಬಳಸಬಹುದಾದ ಸಾಧ್ಯತೆಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀವು ನೀಡಬಲ್ಲಿರಾ?

**ಪೆಟ್ಟಿಗೆ 8.2: ವಿದ್ಯುತ್ ವಿತರಣೆ–ದೆಹಲಿ ಮಾದರಿ**

ಸ್ವಾತಂತ್ರ್ಯಾನಂತರದಲ್ಲಿ ರಾಜಧಾನಿಯಲ್ಲಿನ ವಿದ್ಯುತ್ ನಿರ್ವಹಣಾ ವ್ಯವಸ್ಥೆಯು ನಾಲ್ಕು ಬಾರಿ ಬದಲಾಗಿದೆ. 1951ರಲ್ಲಿ ದೆಹಲಿ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ (The Delhi State Electricity Board -DSEB)ಯನ್ನುಸ್ಥಾಪಿಸಲಾಯಿತು. ಇದರ ಉತ್ತರಾಧಿಕಾರಿಯಾಗಿ 1958ರಲ್ಲಿ ದೆಹಲಿ ವಿದ್ಯಚ್ಛಕ್ತಿ ಪೂರೈಕೆ ಉದ್ಯಮ (Delhi Electricity Supply Undertaking-DESU) ಸ್ಥಾಪಿತವಾಯಿತು. 1997ರಲ್ಲಿ ದೆಹಲಿ ವಿದ್ಯುತ್ ಮಂಡಳಿ The Delhi Vidyut Board (DVB)ಯು SEB ಆಗಿ ಅಸ್ತಿತ್ವಕ್ಕೆ ಬಂದಿತು. ಈಗ ವಿದ್ಯುತ್ ವಿತರಣೆಯು ಎರಡು ಪ್ರಮುಖ ವಿದ್ಯುತ್ ಸಂಸ್ಥೆಗಳ ಹಿಡಿತದಲ್ಲಿದೆ. ರಿಲಯನ್ಸ್ ಎನರ್ಜಿ ಲಿಮಿಟೆಡ್ ಸಂಸ್ಥೆಯ (BSES ರಾಜಧಾನಿ ಪವರ್ ಲಿಮಿಟೆಡ್ ಮತ್ತು BSES ಯಮುನಾ ಪವರ್ ಲಿಮಿಟೆಡ್) ಮತ್ತು ಟಾಟಾ–ಪವರ್ ಲಿಮಿಟೆಡ್ (NDPL). ಅವು ಸುಮಾರು 43 ಲಕ್ಷ ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತದೆ. ವಿದ್ಯುತ್ ದರದ ರಚನೆ ಮತ್ತು ಇತರೆ ನಿಯಂತ್ರಣ ವಿಷಯಗಳ ಉಸ್ತುವಾರಿಯನ್ನು ದೆಹಲಿ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (Delhi Electricity Regulatory Commission -DERC)ವು ನಿರ್ವಹಿಸುತ್ತದೆ. ವಿದ್ಯುತ್ ವಿತರಣೆಯಲ್ಲಿ ಭಾರೀ ಸುಧಾರಣೆ ಮತ್ತು ಗ್ರಾಹಕರಿಗೆ ಹೆಚ್ಚಿನ ಲಾಭವಾಗುತ್ತದೆ ಎನ್ನುವ ನಿರೀಕ್ಷೆಗಳಿದ್ದಾಗ್ಯೂ ಫಲಿತಾಂಶ ಅತೃಪ್ತಿಕರವಾಗಿದೆ ಎನ್ನುವುದನ್ನು ತೋರಿಸಿಕೊಟ್ಟಿದೆ.

ಮಹತ್ತರ ಪಾತ್ರ ವಹಿಸಬೇಕಾಗಿದೆ: ವಿದೇಶಿ ಬಂಡವಾಳ ಹೂಡಿಕೆದಾರರ ವಿಷಯದಲ್ಲೂ ಇದೇ ಅನ್ವಯಿಸುತ್ತದೆ. 4) ಅಧಿಕ ವಿದ್ಯುತ್ ದರ ಮತ್ತು ದೇಶದ ವಿವಿಧ ಭಾಗಗಳಲ್ಲಿನ ಸುದೀರ್ಘ ವಿದ್ಯುತ್ ಕಡಿತವೂ ಸಾರ್ವಜನಿಕರ ಆಶಾಂತಿಗೆ ಕಾರಣವಾಗಿದೆ. 5) ಭಾರತದ ವಿದ್ಯುತ್ ವಲಯದ ಪ್ರಮುಖ ವಿದ್ಯುತ್ ಕೇಂದ್ರವಾಗಿರುವ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ಕಚ್ಚಾವಸ್ತು ಮತ್ತು ಕಲ್ಲಿದ್ದಿಲಿನ ಕೊರತೆಯನ್ನು ಎದುರಿಸುತ್ತಿವೆ.

ಹೀಗೆ ಭಾರತದಲ್ಲಿ ಪ್ರಸ್ತುತ ಉತ್ಪಾದನೆಯಾಗುತ್ತಿರುವ ವಿದ್ಯುಚ್ಛಕ್ತಿಗಿಂತ ಅದರ ಬೇಡಿಕೆ ವೇಗವಾಗಿ ಬೆಳೆಯಲು ನಿರಂತರ ಆರ್ಥಿಕ ಅಭಿವೃದ್ಧಿ ಮತ್ತು ಜನಸಂಖ್ಯಾ ಬೆಳವಣಿಗೆಯೇ ಚಾಲನಾ ಶಕ್ತಿಯಾಗಿದೆ.

ಹೆಚ್ಚಿನ ಸಾರ್ವಜನಿಕ ಬಂಡವಾಳ, ಉತ್ತಮ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯತ್ನಗಳು, ಶೋಧನೆ, ತಾಂತ್ರಿಕ ನಾವೀನ್ಯತೆ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆ ಇವು ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಪೂರೈಸುವ ಖಾತರಿಯನ್ನು ನೀಡುತ್ತದೆ. ಸ್ಥಾಪಿತ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ವಿದ್ಯುತ್ ವಲಯದಲ್ಲಿ ಬಂಡವಾಳ ಹೂಡುವುದರ ಬದಲಾಗಿ ಸರ್ಕಾರ ವಿದ್ಯುತ್ ವಲಯದ ಖಾಸಗೀಕರಣಕ್ಕೆ ಹೊರಟಿದೆ, ಅದರಲ್ಲೂ ವಿದ್ಯುತ್ ವಿತರಣೆಯಲ್ಲಿ (ಬಾಕ್ಸ್ 8.2ನ್ನು ನೋಡಿ) ಮತ್ತು ಅಧಿಕ ವಿದ್ಯುತ್ ದರಕ್ಕೆ ಅನುಮತಿಸಿರುವುದು ಕೆಲವು ವಲಯಗಳ ಮೇಲೆ ದುಷ್ಪರಿಣಾಮ ಬೀರಿದೆ (ಬಾಕ್ಸ್ 8.3ನ್ನು ನೋಡಿ). ಇದು ಸರಿಯಾದ ನೀತಿಯೆಂದು ನೀವು ಭಾವಿಸುವಿರಾ?

**ಪೆಟ್ಟಿಗೆ 8.3: ಇಂಧನ ಉಳಿತಾಯ: ಕಾಂಪ್ಯಾಕ್ಟ್ ಫ್ಲೋರೋಸೆಂಟ್ ಲ್ಯಾಂಪ್ (Compact Fluorescent Lamps -CFL)ಗಳ ಬಳಕೆಯನ್ನು ಪ್ರೋತ್ಸಾಹಿಸುವುದು**

ಇಂಧನ ದಕ್ಷತಾ ಬ್ಯೂರೋ (Bureau of Energy Efficiency –BEE) ದವರ ಪ್ರಕಾರ ಸಾಮಾನ್ಯ ಬಲ್ಬ್‌ಗಳಿಗಿಂತ ಅಈಐಗಳು ಶೇ.80ಕ್ಕಿಂತ ಕಡಿಮೆ ಇಂಧನವನ್ನು ಬಳಸುತ್ತದೆ. CFL ತಯಾರಕರ ಪ್ರಕಾರ ಭಾರತ–ಏಷ್ಯಾದಲ್ಲಿ ಒಂದು ದಶಲಕ್ಷ 100 ವ್ಯಾಟ್ ಬಲ್ಬ್‌ಗಳನ್ನು 20 ವ್ಯಾಟ್‌ಗಳ CFLಗಳಿಗೆ ಬದಲಾಯಿಸಿದರೆ ವಿದ್ಯುತ್ ಉತ್ಪಾನೆಯಲ್ಲಿ 80 ಮೆಗಾವ್ಯಾಟ್‌ಗಳಷ್ಟು ಉಳಿತಾಯ ಮಾಡಬಹುದು. ಇದರಿಂದ ರೂ.400 ಕೋಟಿಗಳಷ್ಟು ಉಳಿತಾಯವಾಗುತ್ತದೆ.

(**ಮೂಲ:** ನರೇಶ್ ಮಿನೋಚಾ ರವರ 'ವಿದ್ಯುತ್ ಬಿಕ್ಕಟ್ಟಿನ ಪರಿಹಾರಕ್ಕೆ ಸಾಮಾನ್ಯ ಜ್ಞಾನದ ಬಳಕೆ' 01 ಅಕ್ಟೋಬರ್ 2005 ರಂದು ತೆಹಲ್ಕಾ ದಲ್ಲಿ ಪ್ರಕಟಿತ.)



### ನೀವೇ ಮಾಡಿರಿ
### (Work These Out)

- ನಿಮ್ಮ ಮನೆಯಲ್ಲಿ ಯಾವ ತರಹದ ಇಂಧನವನ್ನು ಬಳಸುತ್ತೀರಿ? ಒಂದು ತಿಂಗಳಿಗೆ ವಿವಿದ ಇಂಧನಗಳ ಮೇಲೆ ಖರ್ಚು ಮಾಡುವ ಮೊತ್ತವನ್ನು ನಿಮ್ಮ ಪಾಲಕರಿಂದ ತಿಳಿದುಕೊಳ್ಳಿ.
- ಯಾರು ನಿಮಗೆ ಇಂಧನವನ್ನು ಪೂರೈಸುತ್ತಾರೆ ಮತ್ತು ಎಲ್ಲಿ ಇದು ಉತ್ಪಾದನೆಯಾಗಿದೆ? ನಿಮ್ಮ ಮನೆಯಲ್ಲಿ ಬೆಳಕಿಗಾಗಿ, ಅಡುಗೆಗಾಗಿ ಮತ್ತು ದೂರದ ಊರುಗಳ ಸಂಚಾರಕ್ಕಾಗಿ ಕಡಿಮೆ ವೆಚ್ಚದ ಇತರೆ ಪರ್ಯಾಯ ಇಂಧನಗಳ ಕುರಿತು ಯೋಚಿಸಿದ್ದೀರಾ?
- ಈ ಕೆಳಗಿನ ಕೋಷ್ಟಕವನ್ನು ನೋಡಿ. ಇಂಧನ ಬಳಕೆಯು ಅಭವೃದ್ಧಿಯ ಪರಿಣಾಮಕಾರಿ ಸೂಚಕವೆಂದು ಯೋಚಿಸುತ್ತೀರಾ?

| ರಾಷ್ಟ್ರಗಳು | ತಲಾದಾಯ (ಅಮರಿಕನ್ ಡಾಲರುಗಲ್ಲಿ) 2012ರಲ್ಲಿ ಇದ್ದಂತೆ(ಪಿ.ಪಿ.ಪಿ) | ವಿದ್ಯುಚ್ಛಕ್ತಿಯ ತಲಾ ಅನುಬೋಗ (ಕಿ.ವ್ಯಾ/ಘಂ) 2011 ರಲ್ಲಿ |
|---|---|---|
| ಭಾರತ | 3,840 | 684 |
| ಇಂಡೋನೇಷಿಯಾ | 4,810 | 680 |
| ಈಜಿಪ್ಟ್ | 6,640 | 1,743 |
| ಯು.ಕೆ | 36,880 | 5,472 |
| ಜಪಾನ್ | 36,290 | 7,848 |
| ಯು.ಎಸ್.ಎ | 50,610 | 13,248 |

**ಮೂಲ: ವಿಶ್ವ ಅಭಿವೃದ್ಧಿ ಸೂಚಕಗಳು – www.worldbank.org**

- ನಿಮ್ಮ ಪ್ರದೇಶ / ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಹೇಗೆ ಸರಬರಾಜು ಮಾಡಲಾಗುತ್ತಿದೆ ಎಂಬುದನ್ನು ಅವಲೋಕಿಸಿರಿ. ನಿಮ್ಮ ನಗರದಲ್ಲಿನ ವಿದ್ಯುಚ್ಛಕ್ತಿಯ ಒಟ್ಟು ಬೇಡಿಕೆ ಮತ್ತು ಅದನ್ನು ಹೇಗೆ ಪೂರೈಸಲಾಗುತ್ತದೆ ಎಂಬುದನ್ನು ಗಮನಿಸಿ?
- ಜನರು ವಿದ್ಯುಚ್ಛಕ್ತಿ ಮತ್ತು ಇತರೆ ಇಂಧನಗಳನ್ನು ಉಳಿಸಲು ವಿವಿಧ ವಿಧಾನಗಳನ್ನು ಅನುಸರಿಸುವುದನ್ನು ಗಮನಿಸಿನಿರಬಹುದು. ಉದಾ: ಗ್ಯಾಸ್ ಸ್ಟವ್‌ನ್ನು ಬಳಸುವಾಗ ಗ್ಯಾಸನ್ನು ಹೆಚ್ಚು ದಕ್ಷತೆಯಿಂದ ಮತ್ತು ಮಿತವ್ಯಯಕಾರಿಯಾಗಿ.

## 8.6 ಆರೋಗ್ಯ (HEALTH)

ಆರೋಗ್ಯವೆಂದರೆ ಕಾಯಿಲೆ ಇಲ್ಲದೇ ಇರುವ ಸ್ಥಿತಿ ಮಾತ್ರವಲ್ಲ ಆದರೆ ಅದು ಒಬ್ಬ ವ್ಯಕ್ತಿಗೆ ಸಾಮರ್ಥ್ಯವನ್ನು ಸಿದ್ಧೀಕರಿಸುವ ಶಕ್ತಿಯಾಗಿದೆ. ಇದು ಒಬ್ಬರ ಯೋಗಕ್ಷೇಮವನ್ನು ಮಾಪನ ಮಾಡುವ ಮಾನದಂಡವಾಗಿದೆ. ಅರೋಗ್ಯ ಎನ್ನುವುದು ಒಂದು ರಾಷ್ಟ್ರದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಮಗ್ರ ಪ್ರಕ್ರಿಯೆಯಾಗಿದೆ. ಇತಿಹಾಸದಲ್ಲಿ ಸರಿಸಾಟಿಯಿಲ್ಲದಂತೆ ಇಪ್ಪತ್ತನೇ ಶತಮಾನವು ಮಾನವನ ಆರೋಗ್ಯದಲ್ಲಿ ಜಾಗತಿಕ ಪರಿವರ್ತನೆಯನ್ನು ಕಂಡಿದ್ದರೂ, ನಿರ್ಧಿಷ್ಟ ಮಾನಕಗಳುಳ್ಳ ಒಂದು ಮಾಪನದ ಆಧಾರದಲ್ಲಿ ಯಾವುದೇ ಒಂದು ರಾಷ್ಟ್ರದ ಅರೋಗ್ಯದ ವಸ್ತುಸ್ಥಿತಿಯನ್ನು ವ್ಯಾಖ್ಯಾನಿಸುವುದು ಕಷ್ಟವಾಗಬಹುದು. ಜನರ ಶಿಶುಮರಣ ಪ್ರಮಾಣ, ಮಾತೃತ್ವ ಮರಣ ದರ, ನಿರೀಕ್ಷಿತ ಜೀವಿತಾವಧಿ, ಪೌಷ್ಟಿಕತೆಯ ಮಟ್ಟದೊಂದಿಗೆ ಸಾಂಕ್ರಾಮಿಕ ಅಥವಾ ಸಾಂಕ್ರಾಮಿಕವಲ್ಲದ ರೋಗಗಳಿಗೆ ತುತ್ತಾಗುವ ತೀವ್ರತೆಯನ್ನು ಪರಿಗಣಿಸಿ ತಜ್ಞರು ಸಾಮಾನ್ಯವಾಗಿ ಜನರ ಅರೋಗ್ಯದ ಮೌಲ್ಯಮಾಪನ ಮಾಡುತ್ತಾರೆ.

ಆರೋಗ್ಯ ಮೂಲಸೌಕರ್ಯಗಳ ಅಭಿವೃದ್ಧಿಯು ಒಂದು ದೇಶಕ್ಕೆ ಸರಕು ಮತ್ತು ಸೇವೆಗಳ ಉತ್ಪಾದನೆಗಾಗಿ ಅರೋಗ್ಯವಂತ

ಮಾನವ ಶಕ್ತಿಯ ಖಾತರಿಯನ್ನು ನೀಡುತ್ತದೆ. ತಜ್ಞರು, ಇತ್ತೀಚಿನ ದಿನಗಳಲ್ಲಿ, ಜನರಿಗೆ ಅರೋಗ್ಯ ಸೌಲಭ್ಯಗಳನ್ನು ಪಡೆಯುವ ಹಕ್ಕು ಇದೆ ಎನ್ನುವ ವಾದವನ್ನು ಮುಂದಿಡುತ್ತಿದ್ದಾರೆ. ಆರೋಗ್ಯವಂತ ಜೀವನದ ಹಕ್ಕನ್ನು ಖಾತರಿ ಪಡಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಆಸ್ಪತ್ರೆಗಳು, ವೈದ್ಯರು, ದಾದಿಯರು, ಅರೆವೈದ್ಯಕೀಯ ವೃತ್ತಿಪರರು, ಹಾಸಿಗೆಗಳು, ಆಸ್ಪತ್ರೆಗೆ ಅವಶ್ಯವಿರುವ ಉಪಕರಣಗಳು ಹಾಗೂ ಚೆನ್ನಾಗಿ ಅಭಿವೃದ್ಧಿ ಹೊಂದಿದ ಔಷಧ ಕೈಗಾರಿಕೆ ಇವು ಆರೋಗ್ಯ ಮೂಲಸೌಕರ್ಯಗಳಲ್ಲಿ ಸೇರಿವೆ. ಆರೋಗ್ಯವಂತ ಜನತೆಯನ್ನು ಹೊಂದಲು ಕೇವಲ ಆರೋಗ್ಯ ಮೂಲಸೌಕರ್ಯಗಳಷ್ಟೇ ಸಾಕಾಗುವುದಿಲ್ಲ ಎನ್ನುವುದು ಸತ್ಯವಾಗಿದೆ. ಅವುಗಳೆಲ್ಲವೂ ಜನಸಾಮಾನ್ಯರಿಗೆ ಲಭ್ಯವಾಗುವಂತಿರಬೇಕು. ಜನರಿಗೆ ಪಾವತಿಸುವ ಸಾಮರ್ಥ್ಯವಿಲ್ಲ ಎನ್ನುವ ಕಾರಣಕ್ಕೆ ಯಾರೊಬ್ಬರೂ ಕೂಡಾ ಪರಿಹಾರಾತ್ಮಕ ಮತ್ತು ನಿವಾರಾತ್ಮಕ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ವಿಫಲರಾಗಬಾರದು ಎನ್ನುವುದನ್ನು ಯೋಜಿತ ಅಭಿವೃದ್ಧಿಯ ಆರಂಭಿಕ ಹಂತದಿಂದಲೇ ನೀತಿ ನಿರೂಪಕರು ಮನಗಂಡಿದ್ದಾರೆ. ಆದರೆ ಈ ಮುನ್ನೋಟವನ್ನು ಸಾಧಿಸಲು ನಾವು ಶಕ್ತರಾಗಿದ್ದೇವೆಯೇ? ವಿವಿಧ ಅರೋಗ್ಯ ಮೂಲಸೌಕರ್ಯಗಳ ಕುರಿತು ಚರ್ಚಿಸುವ ಮೊದಲು ಭಾರತದಲ್ಲಿನ ಆರೋಗ್ಯ ಸ್ಥಿತಿಗತಿಗಳ ಬಗ್ಗೆ ಚರ್ಚಿಸೋಣ.

### ಆರೋಗ್ಯ ಮೂಲಸೌಕರ್ಯದ ಸ್ಥಿತಿ (State of Health Infrastructure):

ವೈದ್ಯಕೀಯ ಶಿಕ್ಷಣ, ಕಲಬೆರಕೆ ಆಹಾರ, ಔಷಧಗಳು ಮತ್ತು ವಿಷಗಳು ವೈದ್ಯಕೀಯ ವೃತ್ತಿ, ಉಪಯುಕ್ತ ಅಂಕಿ ಅಂಶಗಳು, ಬುದ್ಧಿ ಮಾಂದ್ಯತೆ ಮತ್ತು ಚಿತ್ತಭ್ರಮಣೆ ಇತ್ಯಾದಿ ಆರೋಗ್ಯ ಸಂಬಂಧೀ ವಿಷಯಗಳ ಕುರಿತು ಮಾರ್ಗದರ್ಶನ ಮಾಡುವ ಮತ್ತು ನಿಯಂತ್ರಿಸುವ ಸಂವಿಧಾನಾತ್ಮಕ ಬಾಧ್ಯತೆಯು ಸರ್ಕಾರದ ಮೇಲಿದೆ.

ಕೇಂದ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಪರಿಷತ್ತಿನ ಮೂಲಕ ಕೇಂದ್ರ ಸರ್ಕಾರವು ವಿಶಾಲವಾದ ನೀತಿ ಮತ್ತು ಯೋಜನೆಗಳನ್ನು ರೂಪಿಸಿದೆ. ದೇಶದಲ್ಲಿ ಮುಖ್ಯವಾದ ಅರೋಗ್ಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಮಾಹಿತಿಗಳನ್ನು ಸಂಗ್ರಹಿಸುವುದಲ್ಲದೆ ರಾಜ್ಯ ಸರ್ಕಾರಗಳಿಗೆ, ಕೇಂದ್ರಾಡಳಿತ ಪ್ರದೇಶಗಳಿಗೆ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ಮತ್ತು ತಾಂತ್ರಿಕ ನೆರವನ್ನು ನೀಡುತ್ತದೆ.



**ಚಿತ್ರ 8.9 : ಆರೋಗ್ಯ ಮೂಲಸೌಕರ್ಯ ದೇಶದ ಬಹುಭಾಗಗಳಲ್ಲಿ ಇನ್ನೂ ಹಿಂದುಳಿದಿದೆ**

ಕಾಲ ಕ್ರಮೇಣ ಭಾರತವು, ಆರೋಗ್ಯ ಮೂಲಸೌಕರ್ಯ ಮತ್ತು ಮಾನವ ಶಕ್ತಿಯನ್ನು ವಿವಿಧ ಹಂತಗಳಲ್ಲಿ ವ್ಯಾಪಕವಾಗಿ ಕಟ್ಟಿ ಬೆಳೆಸುತ್ತಾ ಬಂದಿದೆ. ಸರ್ಕಾರವು ಗ್ರಾಮೀಣ ಮಟ್ಟದಲ್ಲಿ ವಿವಿಧ ರೀತಿಯ ಆಸ್ಪತ್ರೆಗಳನ್ನು ಸ್ಥಾಪಿಸಿದೆ (ಬಾಕ್ಸ್ 8.5ನ್ನು ನೋಡಿ) ಅವುಗಳನ್ನು ತಾಂತ್ರಿಕವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು **(PHC)** ಎಂದು ಕರೆಯಲಾಗುತ್ತದೆ. ಖಾಸಗಿ ವಲಯ ಮತ್ತು ಸ್ವಯಂಸೇವಾ ಸಂಸ್ಥೆಗಳಿಂದ ನಿರ್ವಹಿಸಲ್ಪಡುವ ಆಸ್ಪತ್ರೆಗಳೂ ಕೂಡಾ ಭಾರತದಲ್ಲಿ ದೊಡ್ಡ ಸಂಖ್ಯೆಯಲ್ಲಿವೆ. ಈ ಆಸ್ಪತ್ರೆಗಳು ವೈದ್ಯಕೀಯ, ಫಾರ್ಮಸಿ ಮತ್ತು ನರ್ಸಿಂಗ್ ಕಾಲೇಜುಗಳಲ್ಲಿ ತರಬೇತಿ ಹೊಂದಿದ ವೃತ್ತಿಪರರು ಮತ್ತು ಅರೆ–ವೈದ್ಯಕೀಯ ವೃತ್ತಿಪರರಿಂದ ನಿರ್ವಹಿಸಲ್ಪಡುತ್ತಿವೆ.

ಸ್ವಾತಂತ್ರ್ಯಾನಂತರದಿಂದ ಆರೋಗ್ಯ ಸೇವೆಗಳ ಭೌತಿಕ ಸೌಲಭ್ಯಗಳಲ್ಲಿ ಗಮನಾರ್ಹ ವಿಸ್ತರಣೆಯಾಗಿದೆ. 1951–2013ರ ಅವಧಿಯಲ್ಲಿ ಆಸ್ಪತ್ರೆ ಮತ್ತು ಔಷಧಾಲಯಗಳ ಸಂಖ್ಯೆ 9300 ರಿಂದ 44,000ಕ್ಕೆ ಹೆಚ್ಚಾಗಿದೆ ಮತ್ತು ಆಸ್ಪತ್ರೆಗಳ ಹಾಸಿಗೆಗಳ ಸಂಖ್ಯೆ 1.2 ರಿಂದ 6.3 ಲಕ್ಷಗಳಿಗೆ ಏರಿದೆ (ಕೋಷ್ಟಕ 8.3 ನ್ನು ನೋಡಿ); ನರ್ಸಿಂಗ್ ಸಿಬ್ಬಂದಿಗಳ ಸಂಖ್ಯೆ 0.18 ರಿಂದ 23.44 ಲಕ್ಷಗಳಿಗೆ ಮತ್ತು ಅಲೋಪಥಿ ವೈದ್ಯರ ಸಂಖ್ಯೆ 0.62 ರಿಂದ 9.2 ಲಕ್ಷಗಳಿಗೆ ಹೆಚ್ಚಾಗಿದೆ. ಆರೋಗ್ಯ ಮೂಲಸೌಕರ್ಯಗಳಲ್ಲಿ ಆಗಿರುವ ವಿಸ್ತರಣೆಯು ಸಿಡುಬು, ಗಿನಿಯಾ ಜಂತುಗಳ ನಿರ್ಮೂಲನೆ ಆಗಿದ್ದು, ಪೋಲಿಯೋ ಮತ್ತು ಕುಷ್ಠ ರೋಗವನ್ನು ಬಹುತೇಕ ನಿರ್ಮೂಲನೆ ಮಾಡುವಷ್ಟು ಫಲಪ್ರದವಾಗಿದೆ.

**ಕೋಷ್ಟಕ: 8.3: ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯಗಳು 1951–2013**

| ವಿವರ | 1951 | 1981 | 2000 | 2013–14 |
|---|---|---|---|---|
| ಆಸ್ಪತ್ರೆಗಳು | 2,694 | 6,805 | 15,888 | 19,817 |
| ಆಸ್ಪತ್ರೆಗಳ/ಔಷಧಾಲಯಗಳ ಹಾಸಿಗೆಗಳು | 1,17,000 | 5,04,538 | 7,19,861 | 6,28,708 |
| ಔಷಧಾಲಯಗಳು | 6,600 | 16,745 | 23,065 | 24,392 |
| ಪ್ರಾಥಮಿಕ ಆರೋಗ್ಯ ಕೇಂದ್ರಗಳು | 725 | 9,115 | 22,842 | 24,448 |
| ಉಪ ಕೇಂದ್ರಗಳು | – | 84,736 | 1,37,311 | 1,51,684 |
| ಸಮುದಾಯ ಆರೋಗ್ಯ ಕೇಂದ್ರಗಳು | – | 761 | 3,043 | 5,187 |

**ಮೂಲ:** National Commission on Macroeconomics and Health, Ministry of Health and Family Welfare, Government of India, New Delhi, 2005.and National Health Profile for various years available on wwwcbhidghs.nic.in

**ಪೆಟ್ಟಿಗೆ 8.4: ಭಾರತದಲ್ಲಿನ ಆರೋಗ್ಯ ವ್ಯವಸ್ಥೆ**

ಭಾರತದ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸುರಕ್ಷೆಯು ಮೂರು ಹಂತಗಳ ವ್ಯವಸ್ಥೆಯಾಗಿದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಎಂಬ ಹಂತಗಳಿವೆ. ಪ್ರಾಥಮಿಕ ಆರೋಗ್ಯ ಸುರಕ್ಷೆಯು ಪ್ರಸ್ತುತ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ ಶಿಕ್ಷಣ ಮತ್ತು ಗುರುತಿಸುವ ಕ್ರಮಗಳು, ಅವುಗಳ ನಿಯಂತ್ರಣ ಮತ್ತು ನಿವಾರಣೆ; ಆಹಾರ ಪೂರೈಕೆ ಮತ್ತು ಸರಿಯಾದ ಪೌಷ್ಟಿಕತೆಯ ಪ್ರಗತಿ ಮತ್ತು ಮೂಲಭೂತ ಸ್ವಚ್ಛತೆ ಹಾಗೂ ಸಮರ್ಪಕ ನೀರು ಪೂರೈಕೆ; ತಾಯಿ ಮತ್ತು ಮಗುವಿನ ಸುರಕ್ಷತೆ; ಭೀಕರ ಸಾಂಕ್ರಾಮಿಕ ರೋಗಗಳು ಮತ್ತು ಗಾಯಗಳ ವಿರುದ್ಧ ಲಸಿಕೆ ಹಾಕುವುದು; ಅವಶ್ಯಕ ಔಷಧಗಳ ಸೌಲಭ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಪ್ರೋತ್ಸಾಹ ಇವುಗಳನ್ನು ಒಳಗೊಂಡಿದೆ.



**ಆರೋಗ್ಯ ಜಾಗೃತಿ ಸಭೆ ನಡೆಯುತ್ತಿದೆ**



**ಶಿಶುವಿಗೆ ಪೋಲಿಯೋ ಹನಿ ಹಾಕುತ್ತಿರುವುದು**

ಸಹಾಯಕ ದಾದಿಯರು (Auxiliary Nursing Midwife- ANM) ಗ್ರಾಮೀಣ ಭಾಗದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಸೇವೆಯನ್ನು ಒದಗಿಸುವ ಮೊದಲ ವ್ಯಕ್ತಿಯಾಗಿದ್ದಾರೆ. ಪ್ರಾಥಮಿಕ ಆರೋಗ್ಯ ಸುರಕ್ಷಾ ಸೇವೆಯನ್ನು ಒದಗಿಸುವುದಕ್ಕಾಗಿ ಹಳ್ಳಿಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ. ಇವು ಸಾಮಾನ್ಯವಾಗಿ ಒಬ್ಬರು ವೈದ್ಯರು, ಒಬ್ಬರು ದಾದಿ ಮತ್ತು ಸೀಮಿತ ಔಷಧಿಗಳೊಂದಿಗೆ ನಿರ್ವಹಿಸಲ್ಪಡುತ್ತಿದೆ.

ಇವುಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳು (Primary Health Centres -PHC), ಸಮುದಾಯ ಆರೋಗ್ಯ ಕೇಂದ್ರಗಳು (Community Health Centres -CHC) ಉಪ ಕೇಂದ್ರಗಳು ಎಂದು ಕರೆಯುತ್ತಾರೆ.

ಯಾವಾಗ ರೋಗಿಯ ಸ್ಥಿತಿಯನ್ನು ನಿರ್ವಹಿಸಲು PHC ಗಳಿಗೆ ಸಾಧ್ಯವಾಗುವುದಿಲ್ಲವೋ ಆಗ ರೋಗಿಗಳನ್ನು ಮಾಧ್ಯಮಿಕ ಅಥವಾ ತೃತೀಯ ಆಸ್ಪತ್ರೆಗೆ ಕಳುಹಿಸಲಾಗುತ್ತದೆ. ಶಸ್ತ್ರಚಿಕಿತ್ಸೆಗೆ ಬೇಕಾದ ಉತ್ತಮ ಸೌಲಭ್ಯಗಳಾದ ಕ್ಷಕಿರಣ, ಇಲೆಕ್ಟ್ರೊ ಕಾರ್ಡಿಯೋಗ್ರಾಂ ಇವುಗಳನ್ನು ಹೊಂದಿರುವ ಆಸ್ಪತ್ರೆಗಳನ್ನು ಮಾಧ್ಯಮಿಕ ಆರೋಗ್ಯ ಸುರಕ್ಷಾ ಸಂಸ್ಥೆಗಳೆಂದು ಕರೆಯುತ್ತಾರೆ. ಇವು ಪ್ರಾಥಮಿಕ ಆರೋಗ್ಯ ಸುರಕ್ಷೆ ಮತ್ತು ಉತ್ತಮ ಆರೋಗ್ಯ ಸುರಕ್ಷಾ ಸೌಲಭ್ಯಗಳನ್ನು ಒದಗಿಸುತ್ತದೆ. ಇವು ಹೆಚ್ಚಾಗಿ ದೊಡ್ಡ ಪಟ್ಟಣಗಳು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿತವಾಗಿರುತ್ತವೆ. ಆಧುನಿಕ ಉಪಕರಣಗಳನ್ನು ಮತ್ತು ಔಷಧಗಳನ್ನು ಹೊಂದಿರುವ ಮತ್ತು ಪ್ರಾಥಮಿಕ ಮತ್ತು ಮಾಧ್ಯಮಿಕ ಆಸ್ಪತ್ರೆಗಳಿಂದ ನಿಭಾಯಿಸಲಾಗದ ಸಂಕೀರ್ಣವಾದ ಎಲ್ಲಾ ಅರೋಗ್ಯ ಸಮಸ್ಯೆಗಳನ್ನು ನಿರ್ವಹಿಸುವ ಎಲ್ಲಾ ಆಸ್ಪತ್ರೆಗಳೂ ತೃತೀಯ ವಲಯದಲ್ಲಿ ಬರುತ್ತದೆ.

ತೃತೀಯ ವಲಯವು ಗುಣಮಟ್ಟದ ವೈದ್ಯಕೀಯ ಶಿಕ್ಷಣವನ್ನು ನೀಡಿ ಸಂಶೋಧನೆಗಳನ್ನು ಕೈಗೊಳ್ಳುವುದಲ್ಲದೇ ವಿಶೇಷ ಪರಿಣಿತಿ ಹೊಂದಿದ ಆರೋಗ್ಯ ಸೇವೆಯನ್ನೂ ಒದಗಿಸುವ ಹಲವು ಉತ್ಕೃಷ್ಟ ಸಂಸ್ಥೆಗಳನ್ನು ಹೊಂದಿದೆ. ಇಂತಹ ಕೆಲವು ಸಂಸ್ಥೆಗಳೆಂದರೆ– ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ನವದೆಹಲಿ; ಸ್ನಾತಕೋತ್ತರ ಸಂಸ್ಥೆ, ಚಂಡೀಘಢ: ಜವಹರಲಾಲ್ ಸ್ನಾತಕೋತ್ತರ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ, ಪಾಂಡಿಚೇರಿ; ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ, ಬೆಂಗಳೂರು; ಅಖಿಲ ಭಾರತ ಆರೋಗ್ಯ ವಿಜ್ಞಾನ ಮತ್ತು ಸಾರ್ವಜನಿಕ ಆರೋಗ್ಯ ಸಂಸ್ಥೆ, ಕೋಲ್ಕತ್ತಾ.

ಮೂಲ: **Report of the National Commission on Macroeconomics and Health, 2005**.

## ಖಾಸಗಿ ವಲಯದ ಆರೋಗ್ಯ ಮೂಲಸೌಕರ್ಯ (Private Sector Health Infrastructure):

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಆರೋಗ್ಯ ವಲಯವು ನಿರೀಕ್ಷಿತ ಸೇವೆಗಳನ್ನು ಒದಗಿಸುವಲ್ಲಿ ಅಷ್ಟು ಯಶಸ್ವಿಯಾಗಿಲ್ಲವಾದರೂ, ಇದನ್ನು ಮುಂದಿನ ಭಾಗದಲ್ಲಿ ನಾವು ಅಧ್ಯಯನ ಮಾಡುತ್ತೇವೆ, ಖಾಸಗಿ ವಲಯವು ಶೀಘ್ರಗತಿಯಲ್ಲಿ ಅಭಿವೃದ್ಧಿಸುತ್ತಾ ಮಿತಿಗಳನ್ನು ಜಿಗಿದು ಬೆಳೆದಿದೆ. ಭಾರತದಲ್ಲಿ ಶೇ. 70ಕ್ಕಿಂತ ಆಸ್ಪತ್ರೆಗಳು ಖಾಸಗಿ ವಲಯದಿಂದ ನಿರ್ವಹಿಸಲ್ಪಡುತ್ತಿದೆ. ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳಲ್ಲಿ ಐದನೇ ಎರಡರಷ್ಟು ಹಾಸಿಗೆಗಳು ಇವರ ನಿಯಂತ್ರಣದಲ್ಲಿದೆ. ಸುಮಾರು ಶೇ.60ರಷ್ಟು ಔಷಧಾಲಯಗಳು ಅದೇ ಖಾಸಗಿ ವಲಯದವರಿಂದ ನಿರ್ವಹಿಸಲ್ಪಡುತ್ತಿದೆ. ಅವರು ಶೇ. 80ರಷ್ಟು ಹೊರರೋಗಿಗಳಿಗೆ ಮತ್ತು ಶೇಕಡ 46ರಷ್ಟು ಒಳರೋಗಿಗಳಿಗೆ ಆರೋಗ್ಯ ಸೇವೆಯನ್ನು ಒದಗಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಖಾಸಗಿ ವಲಯವು ವೈದ್ಯಕೀಯ ಶಿಕ್ಷಣ ಮತ್ತು ತರಬೇತಿ, ವೈದ್ಯಕೀಯ ತಂತ್ರಜ್ಞಾನ ಮತ್ತು ರೋಗ ಪರೀಕ್ಷೆ, ಔಷಧಗಳ ತಯಾರಿಕೆ ಮತ್ತು ಮಾರಾಟ, ಆಸ್ಪತ್ರೆಗಳ ನಿರ್ಮಾಣ ಮತ್ತು ವೈದ್ಯಕೀಯ ಸೇವೆಗಳ ಸೌಲಭ್ಯಗಳನ್ನು ಒದಗಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಿದೆ.

2001–02 ರಲ್ಲಿ 22 ಲಕ್ಷ ಜನರನ್ನು ನೇಮಿಸಿಕೊಂಡಿರುವ 13 ಲಕ್ಷಕ್ಕಿಂತ ಹೆಚ್ಚು ವೈದ್ಯಕೀಯ ಉದ್ಯಮಗಳು ಇದ್ದವು. ಇವುಗಳಲ್ಲಿ ಶೇ.80ರಷ್ಟು ಏಕವ್ಯಕ್ತಿಯ ಒಡೆತನದಲ್ಲಿ ಇದ್ದು ಆಗಾಗ ವೇತನ ನೀಡಿ ಕೆಲಸಗಾರರನ್ನು ನೇಮಿಸಿಕೊಂಡು ಒಬ್ಬ ವ್ಯಕ್ತಿಯಿಂದ ನಿರ್ವಹಿಸಲ್ಪಡುತ್ತಿದ್ದವು. ವಿದ್ವಾಂಸರ ಪ್ರಕಾರ ಯಾವುದೇ ಪ್ರಮುಖ ನಿಯಂತ್ರಣಗಳಿಲ್ಲದೆ ಖಾಸಗಿ ವಲಯವು ಸ್ವತಂತ್ರವಾಗಿ ಬೆಳೆದಿದೆ. ವೈದ್ಯ ವೃತ್ತಿ ನಡೆಸುತ್ತಿರುವ ಖಾಸಗಿ ವೈದ್ಯರಲ್ಲಿ ಕೆಲವರು ನೋಂದಾಯಿತ ವೈದ್ಯರೇ ಅಲ್ಲ– ಅವರನ್ನು ನಕಲಿ ವೈದ್ಯರೆಂದು ಕರೆಯುತ್ತಾರೆ.

1990 ರಿಂದ ಉದಾರೀಕರಣವನ್ನು ಅಳವಡಿಸಿಕೊಂಡ ಮೇಲೆ ಭಾರತದ ಶ್ರೀಮಂತರು ಮತ್ತು ವೈದ್ಯಕೀಯ ಪ್ರವಾಸಿಗರನ್ನು ಆಕರ್ಷಿಸಲು ಹಲವಾರು ಅನಿವಾಸಿ ಭಾರತೀಯರು, ಕೈಗಾರಿಕಾ ಮತ್ತು ಔಷಧೋದ್ಯಮ ಕಂಪನಿಗಳು ಸ್ಟೇಟ್–ಆಫ್–ದ–ಆರ್ಟ್–ಸೂಪರ್–ಸ್ಪೆಷಾಲಿಟಿ ಆಸ್ಪತ್ರೆಗಳನ್ನು **(state-of-the-art super-specialty hospitals)** ಸ್ಥಾಪಿಸಿದ್ದಾರೆ (ಬಾಕ್ಸ್ 8.6 ನ್ನು ನೋಡಿ). ಭಾರತದ ಬಹುಸಂಖ್ಯಾತರು ಅಂತಹ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸೌಲಭ್ಯವನ್ನು ಪಡೆಯಲು ಸಾಧ್ಯ ಎಂದು ನೀವು ಯೋಚಿಸುವಿರಾ? ಏಕೆ ಸಾಧ್ಯವಿಲ್ಲ? ಭಾರತದ ಪ್ರತಿಯೊಬ್ಬರೂ ತಕ್ಕ ಗುಣಮಟ್ಟದ ಆರೋಗ್ಯ ಸುರಕ್ಷೆಯನ್ನು ಪಡೆಯಲು ಏನು ಮಾಡಬೇಕಿದೆ?

### ಪೆಟ್ಟಿಗೆ 8.6 : ವೈದ್ಯಕೀಯ ಪ್ರವಾಸೋದ್ಯಮ – ಒಂದು ಸದಾವಕಾಶ

ಶಸ್ತ್ರಚಿಕಿತ್ಸೆಗಾಗಿ, ಯಕೃತ್ತಿನ ಮರುಜೋಡಣೆಗಾಗಿ, ದಂತ ಮತ್ತು ಸೌಂದರ್ಯ ಚಿಕಿತ್ಸೆಗಾಗಿ ವಿದೇಶಿಯರು ಗುಂಪುಗಟ್ಟಿ ಭಾರತಕ್ಕೆ ಬರುವುದನ್ನು ಟಿ.ವಿ.ವಾರ್ತೆಗಳಲ್ಲಿ ಕೇಳಿರುತ್ತೀರಿ, ನೋಡಿರುತ್ತೀರಿ ಅಥವಾ ವೃತ್ತ ಪತ್ರಿಕೆಗಳಲ್ಲಿ ಓದಿರುತ್ತೀರಿ. ಇದು ಏಕೆ? ಏಕೆಂದರೆ ನಮ್ಮ ಆರೋಗ್ಯ ಸೇವೆಯು ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನವನ್ನು ಪರಿಣಿತ ತಜ್ಞರ ವೃತ್ತಿಪರತೆಯೊಂದಿಗೆ ಸಂಯೋಜಿಸಿದೆ ಹಾಗೂ ವಿದೇಶಿಯರಿಗೆ ಅವರ ರಾಷ್ಟ್ರಗಳಲ್ಲಿನ ಇದೇ ಬಗೆಯ ಆರೋಗ್ಯ ಸುರಕ್ಷಾ ಸೇವೆಗೆ ಹೋಲಿಸಿದರೆ ತುಂಬಾ ಅಗ್ಗವೆನಿಸಿದೆ. 2004–05 ನೇ ಸಾಲಿನಲ್ಲಿ ಸುಮಾರು 1,50.000 ವಿದೇಶಿಯರು ವೈದ್ಯಕೀಯ ಚಿಕಿತ್ಸೆಗಾಗಿ ಭಾರತಕ್ಕೆ ಭೇಟಿ ನೀಡಿದ್ದರು. ಪ್ರತಿ ವರ್ಷ ಈ ಸಂಖ್ಯೆ ಶೇ.15ರಷ್ಟು ಏರಿಕೆಯಾಗುವ ಸಾಧ್ಯತೆಯೂ ಇದೆ. ಭಾರತವು 2012ರ ವೇಳೆಗೆ ಆ ರೀತಿಯ ವೈದ್ಯಕೀಯ ಪ್ರವಾಸದ ಮೂಲಕ 100 ಶತಕೋಟಿ ರೂಪಾಯಿಗಳನ್ನು ಗಳಿಸಬಹುದೆಂದು ತಜ್ಞರು ಅಂದಾಜು ಮಾಡಿದ್ದಾರೆ. ಭಾರತಕ್ಕೆ ಹೆಚ್ಚು ವಿದೇಶಿಯರನ್ನು ಆಕರ್ಷಿಸಲು ಆರೋಗ್ಯ ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ.

## ಭಾರತೀಯ ವೈದ್ಯ ಪದ್ಧತಿ (Indian Systems of Medicine-ISM):

ಇದು ಆಯುರ್ವೇದ, ಯೋಗ, ಯುನಾನಿ, ಸಿದ್ಧ, ಪ್ರಕೃತಿ ಚಿಕಿತ್ಸೆ **(Naturopathy)** ಹೋಮಿಯೋಪತಿ **(AYUSH)** ಯಂತಹ ಆರು ಚಿಕಿತ್ಸಾ ವ್ಯವಸ್ಥೆಗಳನ್ನು ಒಳಗೊಂಡಿದೆ. ಪ್ರಸ್ತುತ ಭಾರತದಲ್ಲಿ 3,167 ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳು, 26,000 ಔಷಧಾಲಯಗಳು ಮತ್ತು ಸುಮಾರು 7 ಲಕ್ಷ ನೋಂದಾಯಿತ ವೈದ್ಯರುಗಳಿದ್ದಾರೆ. ಆದರೆ ಶಿಕ್ಷಣ ಅಥವಾ ಸಂಶೋಧನೆಗಳ ಪ್ರಗತಿಯನ್ನು ಕ್ರಮಬದ್ಧಗೊಳಿಸುವ ಒಂದು ಚೌಕಟ್ಟನ್ನು ರೂಪಿಸುವಲ್ಲಿ ಆಗಿರುವ ಪ್ರಯತ್ನಗಳು ತೀರಾ ಅತ್ಯಲ್ಪ. ನಮ್ಮ ಅನೇಕ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸುವ ಬೃಹತ್ ಸಾಮರ್ಥ್ಯ ಭಾರತೀಯ ವೈದ್ಯ ಪದ್ಧತಿಗಿದೆ. ಏಕೆಂದರೆ ಭಾರತೀಯ ವೈದ್ಯ ಪದ್ಧತಿಯು ಮಿತವ್ಯಯಕಾರಿಯಾಗಿದೆ, ಪರಿಣಾಮಕಾರಿಯಾಗಿದೆ ಮತ್ತು ಸುರಕ್ಷಿತವಾಗಿದೆ.

**ಪೆಟ್ಟಿಗೆ 8.7: ಆರೋಗ್ಯ ಸುರಕ್ಷೆಯಲ್ಲಿ ಸಮುದಾಯ ಮತ್ತು ಲಾಭೇತರ ಸಂಸ್ಥೆಗಳು**

ಸಮುದಾಯದ ಸಹಭಾಗಿತ್ವವು ಆರೋಗ್ಯ ಸುರಕ್ಷತಾ ವ್ಯವಸ್ಥೆಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಜನರಿಗೆ ತರಬೇತಿಯನ್ನು ನೀಡಿ ಪ್ರಾಥಮಿಕ ಆರೋಗ್ಯ ಸುರಕ್ಷಾ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬಹುದೆಂಬ ಕಲ್ಪನೆಯೊಂದಿಗೆ ಇದು ಕಾರ್ಯ ನಿರ್ವಹಿಸುತ್ತದೆ. ಈ ಪದ್ಧತಿ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಈಗಾಗಲೇ ಜಾರಿಯಲ್ಲಿದೆ. ಅಹಮದಾಬಾದಿನ SEWA ಮತ್ತು ನೀಲಗಿರಿಯ ACCORD ಇವು ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳಿಗೆ ಕೆಲವು ಉದಾಹರಣೆಗಳಾಗಿವೆ. ಕಾರ್ಮಿಕ ಸಂಘಟನೆಗಳು ತಮ್ಮ ಸದಸ್ಯರಿಗಾಗಿ ಆರೋಗ್ಯ ಸುರಕ್ಷಾ ಸೇವೆಯನ್ನು ಒದಗಿಸಲು ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದೆ ಅಲ್ಲದೇ ಕಡಿಮೆ ಖರ್ಚಿನಲ್ಲಿ ಸುತ್ತಲಿನ ಗ್ರಾಮೀಣ ಜನರಿಗೆ ತ್ವರಿತ ಆರೋಗ್ಯ ಸುರಕ್ಷಾ ಸೇವೆಯನ್ನು ಒದಗಿಸುತ್ತಿದೆ. CMSS(Chattisgarh Mines Shramik Sangh) ಇವರಿಂದ ನಿರ್ವಹಿಸಲ್ಪಡುವ 1983ರಲ್ಲಿ ಮಧ್ಯಪ್ರದೇಶದ ದರ್ಗನಲ್ಲಿ ನಿರ್ಮಿತವಾದ ಶಾಹಿದ್ ಆಸ್ಪತ್ರೆ ಇದರಲ್ಲಿ ಪ್ರಮುಖವಾದುದು ಮತ್ತು ಪ್ರಸಿದ್ಧವಾದುದಾಗಿದೆ. ಪರ್ಯಾಯ ಆರೋಗ್ಯ ಸುರಕ್ಷತಾ ಸೇವೆಗಳನ್ನು ಒದಗಿಸುವಲ್ಲಿ ಗ್ರಾಮೀಣ ಸಂಘಟನೆಗಳು ಕೆಲವು ಪ್ರಯತ್ನಗಳನ್ನು ಮಾಡಿದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮಹಾರಾಷ್ಟ್ರದ ಥಾಣೆ ಎಂಬಲ್ಲಿನ ಬುಡಕಟ್ಟು ಜನರ ಸಂಘಟನೆಯಾದ ಕ್ಷೇತ್ಕರಿ ಸಂಘಟನೆ, ಇದು ಸರಳವಾದ ಕಾಯಿಲೆಗಳನ್ನು ಕಡಿಮೆ ಖರ್ಚಿನಲ್ಲಿ ಗುಣಪಡಿಸುವುದಕ್ಕಾಗಿ ಮಹಿಳಾ ಆರೋಗ್ಯ ಕಾರ್ಯಕರ್ತೆಯರಿಗೆ ಗ್ರಾಮ ಮಟ್ಟದಲ್ಲಿ ತರಬೇತಿ ನೀಡುತ್ತದೆ.

## ಆರೋಗ್ಯ ಸೂಚಕಗಳು ಮತ್ತು ಆರೋಗ್ಯ ಮೂಲ ಸೌಕರ್ಯಗಳು–ಒಂದು ಮೌಲ್ಯಮಾಪನ (Indicators of Health Infrastructure - A Critical Appraisal):

ಈ ಹಿಂದೆ ಸೂಚಿಸಿದಂತೆ ಆರೋಗ್ಯ ಸೂಚಕಗಳಾದ ಶಿಶು ಮರಣ ದರ, ಮಾತೃತ್ವ ಮರಣ ದರ, ನಿರೀಕ್ಷಿತ ಜೀವಿತಾವಧಿಯ ಪ್ರಮಾಣ, ಪೌಷ್ಟಿಕತೆಯ ಮಟ್ಟ ಇದರೊಂದಿಗೆ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ತೀವ್ರತೆಗಳ ಮೂಲಕ ದೇಶದ ಆರೋಗ್ಯ ಸ್ಥಿತಿಗತಿಗಳ ಮೌಲ್ಯಮಾಪನ ಮಾಡಬಹುದು. ಕೆಲವು ಆರೋಗ್ಯ ಸೂಚಕಗಳನ್ನು ಮತ್ತು ಭಾರತದ ಸ್ಥಿತಿಯನ್ನು ಕೋಷ್ಟಕ 8.4ರಲ್ಲಿ ನೀಡಿದೆ, ವಿದ್ವಾಂಸರ ಅಭಿಪ್ರಾಯದಂತೆ ಆರೋಗ್ಯ ವಲಯದಲ್ಲಿ ಸರ್ಕಾರದ ಪಾತ್ರಕ್ಕೆ ಹೆಚ್ಚು ಅವಕಾಶವಿದೆ. ಉದಾಹರಣೆಗೆ ಆರೋಗ್ಯ ವಲಯದ ವೆಚ್ಚವು ಒಟ್ಟು ಜಿಡಿಪಿಯ ಶೇ.8.2ರಷ್ಟು ಇದೆ. ಇದು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಬಹಳ ಗಂಭೀರವಾಗಿ ಕಡಿಮೆ ಪ್ರಮಾಣದಲ್ಲಿದೆ.

**ಕೋಷ್ಟಕ ಸಂಖ್ಯೆ: 8.4**

**ಇತರ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದಲ್ಲಿನ ಆರೋಗ್ಯ ಸೂಚಕಗಳು, 2013**

| ಸೂಚಕಗಳು | ಭಾರತ | ಚೀನಾ | ಯು.ಎಸ್.ಎ | ಶ್ರೀಲಂಕಾ |
|---|---|---|---|---|
| ಶಿಶು ಮರಣ ಪ್ರಮಾಣ/1000 ಜೀವಂತ ಜನನಗಳಿಗೆ | 41 | 12 | 6 | 8 |
| 5 ವರ್ಷದೊಳಗಿನ ಶಿಶು ಮರಣ ಪ್ರಮಾಣ/1000 ಜೀವಂತ ಜನನಗಳಿಗೆ | 53 | 14 | 7 | 10 |
| ಜನನ–(ಕೌಶಲ್ಯಯುಕ್ತ ಸಿಬ್ಬಂದಿಗಳ ಸಹಾಯದಿಂದ ಪ್ರಸವ)ಶೇ. | 67 | 96 | 99 | 99 |
| ಸಂಪೂರ್ಣ ಲಸಿಕೆ ಹಾಕಿರುವುದು | 72 | 99 | 99 | 99 |
| ಆರೋಗ್ಯ ವೆಚ್ಚ (ಜಿಡಿಪಿಯ ಶೇ.) | 4 | 5.6 | 17 | 3.2 |
| ಸರ್ಕಾರದ ಒಟ್ಟು ವೆಚ್ಚದಲ್ಲಿ ಸರ್ಕಾರದ ಆರೋಗ್ಯ ವೆಚ್ಚ (ಶೇ) | 4.5 | 12.6 | 20.7 | 7.4 |
| ಖಾಸಗಿ ಆರೋಗ್ಯ ವೆಚ್ಚದಲ್ಲಿ ವ್ಯಕ್ತಿಗತ ವೆಚ್ಚ (ಶೇ) | 86 | 77 | 22 | 83 |

ಮೂಲ: **World Health Statistics 2013 and www.worldbank.org**

## ನೀವೇ ಮಾಡಿರಿ
## (Work These Out)

- ನಿಮ್ಮ ಊರಿನಲ್ಲಿರುವ ಅಥವಾ ಸಮಿಪದಲ್ಲಿರುವ ಪ್ರಾಥಮಿಕ ಆಸ್ಪತ್ರೆಗಳಿಗೆ ಭೇಟಿ ಮಾಡಿ. ನಿಮ್ಮ ಊರಿನಲ್ಲಿರುವ ಖಾಸಗಿ ಆಸ್ಪತ್ರೆಗಳ ಸಂಖ್ಯೆಗಳು, ವೈದ್ಯಕೀಯ ಪ್ರಯೋಗಾಲಯಗಳು, ಸ್ಕ್ಯಾನ್ ಕೇಂದ್ರಗಳು, ಔಷಧಿ ಅಂಗಡಿಗಳು ಮತ್ತು ಆ ರೀತಿಯ ಸೌಲಭ್ಯಗಳ ವಿವರಗಳನ್ನು ಸಂಗ್ರಹಿಸಿ.
- ನಿಮ್ಮ ತರಗತಿಯಲ್ಲಿ ಈ ವಿಷಯದ ಕುರಿತು ಚರ್ಚೆ ಮಾಡಿ– 'ಪ್ರತಿ ವರ್ಷ ವೈದ್ಯಕೀಯ ಕಾಲೇಜುಗಳಿಂದ ಉತ್ತೀರ್ಣರಾಗಿ ಹೊರಬರುವ ವೈದ್ಯಕೀಯ ಪದವೀಧರರು ನೀಡುವ ಸೇವೆಯನ್ನು ಪಡಯಲಾಗದ ಬಡವರ ಆರೈಕೆಯನ್ನು ನೋಡಿಕೊಳ್ಳಲು ದಾದಿಯರ ಒಂದು ಸೇನೆಯನ್ನು ನಾವು ನಿರ್ಮಿಸಬೇಕೆ'?
- ಒಂದು ಅಧ್ಯಯನದ ಅಂದಾಜಿನ ಪ್ರಕಾರ ವೈದ್ಯಕೀಯ ವೆಚ್ಚಗಳ ಒಂದೇ ಕಾರಣಕ್ಕಾಗಿ ಪ್ರತಿವರ್ಷ ಶೇ.2.2 ಜನಸಂಖ್ಯೆಯನ್ನು ಬಡತನ ರೇಖೆಗಿಂತ ಕೆಳಗಿಳಿಸುತ್ತಿದೆ. ಹೇಗೆ?
- ನಿಮ್ಮಲ್ಲಿ ಸ್ಥಳೀಯವಾಗಿರುವ ಕೆಲವು ಆಸ್ಪತ್ರೆಗಳಿಗೆ ಭೇಟಿ ನೀಡಿ. ಅಲ್ಲಿಂದ ಲಸಿಕೆ ಹಾಕಿಸಿಕೊಂಡಿರುವ ಮಕ್ಕಳ ಸಂಖ್ಯೆಯನ್ನು ಸಂಗ್ರಹಿಸಿ. ಐದು ವರ್ಷಗಳ ಹಿಂದೆ ಲಸಿಕೆ ಹಾಕಿಸಿಕೊಂಡಿರುವ ಮಕ್ಕಳ ಸಂಖ್ಯೆಯನ್ನು ವೈದ್ಯಕೀಯ ಸಿಬ್ಬಂದಿಯಿಂದ ಪಡಯಿರಿ. ಇವುಗಳ ವಿವರಗಳನ್ನು ತರಗತಿಗಳಲ್ಲಿ ಚರ್ಚಿಸಿ.
- ಅಸ್ಸಾಂ ರಾಜ್ಯದ ಇಬ್ಬರು ವಿದ್ಯಾರ್ಥಿಗಳು–ಲೀನಾ ತಾಲೂಕ್‌ದಾರ್ (16) ಮತ್ತು ಸುಶಾಂತಾ ಮಹಂತ (16) ಭತ್ತದ ಹುಲ್ಲು, ಹೊಟ್ಟು ಮತ್ತು ಒಣಗಿದ ಅಡುಗೆಯ ತ್ಯಾಜ್ಯದಿಂದ ಗಿಡಮೂಲಿಕೆಯ 'ಜಾಗ್' ಎಂಬ ಸೊಳ್ಳೆ ಓಡಿಸುವ ಸಾಧನವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ಪ್ರಯೋಗವು ಯಶಸ್ವಿಯಾಗಿದೆ. (ಶೋಧ ಯಾತ್ರ (innovation),ಯೋಜನಾ, ಸೆಪ್ಟಂಬರ್ 2005). ಜನರ ಆರೋಗ್ಯವನ್ನು ಸುಧಾರಿಸುವ ಹೊಸ ವಿಧಾನಗಳ ಬಗ್ಗೆ ಅರಿವಿರುವವರ ಕುರಿತು ನಿಮಗೆ ಮಾಹಿತಿಯಿದ್ದರೆ ಅಥವಾ ಜನರ ಕಾಯಿಲೆಯನ್ನು ವಾಸಿ ಮಾಡುವ ಔಷಧೀಯ ಸಸ್ಯಗಳ ಕುರಿತು ಯಾರಿಗಾದರೂ ತಿಳುವಳಿಕೆಯಿದ್ದಲ್ಲಿ, ಅಂತಹವರೊಂದಿಗೆ ಮಾತನಾಡಿ ಅವರನ್ನು ನಿಮ್ಮ ತರಗತಿಗೆ ಕರೆತನ್ನಿರಿ ಮತ್ತು ಅವರು ಏಕೆ ಮತ್ತು ಹೇಗೆ ಕಾಯಿಲೆಗಳನ್ನು ಗುಣಪಡಿಸುತ್ತಾರೆ ಎಂಬ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ. ಸ್ಥಳೀಯ ವೃತ್ತ ಪತ್ರಿಕೆಗಳಿಗೆ ಮತ್ತು ನಿಯತಕಾಲಿಕಗಳಿಗೆ ಲೇಖನಗಳನ್ನೂ ಬರೆಯಿರಿ.
- ಭಾರತದ ನಗರಗಳಿಗೆ ಜಾಗತಿಕ ಮಟ್ಟದ ಆರೋಗ್ಯ ಮೂಲಸೌಕರ್ಯಗಳನ್ನು ಒದಗಿಸುವುದರಿಂದ ಅವು ವೈದ್ಯಕೀಯ ಪ್ರವಾಸಿಗರನ್ನು ಆಕರ್ಷಿಸುತ್ತದೆ ಎಂದು ನೀವು ಯೋಚಿಸುವಿರಾ? ಅಥವಾ ಸರ್ಕಾರ ಗ್ರಾಮೀಣ ಜನರಿಗೆ ಮೂಲಸೌಕರ್ಯವನ್ನು ಒದಗಿಸುವತ್ತ ತನ್ನ ಗಮನವನ್ನು ಕೇಂದ್ರೀಕರಿಸಬೇಕೆ? ಸರ್ಕಾರದ ಆದ್ಯತೆಗಳೇನಾಗಿರಬೇಕು? ಚರ್ಚಿಸಿ.
- ನಿಮ್ಮ ಪ್ರದೇಶದ ಆರೋಗ್ಯ ಸುರಕ್ಷತಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳನ್ನು ನೋಡಿ. ಅವರ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮತ್ತು ತರಗತಿಗಳಲ್ಲಿ ಚರ್ಚಿಸಿ.

ಒಂದು ಅಧ್ಯಯನದ ಪ್ರಕಾರ ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಶೇ.17ರಷ್ಟು ಜನಸಂಖ್ಯೆ ಭಾರತದಲ್ಲಿದೆ. ಆದರೆ ಕಾಯಿಲೆಗಳ ಜಾಗತಿಕ ಹೊರೆಯಲ್ಲಿ **(GBD)** ಶೇ.20ರಷ್ಟು ಭಾರತದಲ್ಲಿಯೇ ಇದೆ. ಜಗತ್ತಿನಲ್ಲಿ ಕಾಯಿಲೆಯಿಂದ ಅಕಾಲಿಕ ಮರಣಕ್ಕೆ ತುತ್ತಾಗುವವರ ಸಂಖ್ಯೆಯನ್ನು ಗುರುತಿಸಲು ವಿದ್ವಾಂಸರು **GBD** ಯನ್ನು ಮಾಪಕವಾಗಿ ಬಳಸುತಿದ್ದಾರೆ ಅದರೊಂದಿಗೆ ಅಂತಹ ರೋಗಿಗಳು ರೋಗ ಕಾರಣಕ್ಕಾಗಿ ಅಶಕ್ತತೆಯಿಂದ ನರಳಿದ ವರ್ಷಗಳನ್ನೂ ಗುರುತಿಸಲಾಗುತ್ತದೆ.

ಭಾರತದಲ್ಲಿ **GBD**ಯ ಅರ್ಧಕ್ಕಿಂತ ಹೆಚ್ಚಿನವು ಅತಿಸಾರ, ಮಲೇರಿಯಾ ಮತ್ತು ಕ್ಷಯ ಮುಂತಾದ ಸಾಂಕ್ರಾಮಿಕ ರೋಗಗಳನ್ನು ಒಳಗೊಂಡಿದೆ. ಪ್ರತಿ ವರ್ಷ ಐದು ಲಕ್ಷ ಮಕ್ಕಳು ನೀರಿನಿಂದ ಹರಡುವ ಕಾಯಿಲೆಗಳಿಂದ ಮರಣ ಹೊಂದುತ್ತಿದ್ದಾರೆ. ಏಡ್ಸ್‌ನ ಅಪಾಯವೂ ಕೂಡಾ ಭಾರಿ ಪ್ರಮಾಣದಲ್ಲಿ ಏರುತ್ತಿದೆ. ಪ್ರತಿ ವರ್ಷ 2.2 ದಶಲಕ್ಷ ಮಕ್ಕಳು ಅಪೌಷ್ಟಿಕತೆ ಮತ್ತು ಲಸಿಕೆಗಳ ಅಸಮರ್ಪಕ ಪೂರೈಕೆಯಿಂದ ಸಾವನ್ನಪ್ಪುತ್ತಿದ್ದಾರೆ.

ಪ್ರಸ್ತುತ ಭಾರತದಲ್ಲಿ ಒಟ್ಟು ಸಂಖ್ಯೆಯ ಶೆ.20ಕ್ಕಿಂತ ಕಡಿಮೆ ಜನಸಂಖ್ಯೆಯು ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಉಪಯೋಗಿಸುತ್ತಿದ್ದಾರೆ. ಒಂದು ಅಧ್ಯಯನದ ಪ್ರಕಾರ ಶೇ.38ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅವಶ್ಯವಿರುವಷ್ಟು ಸಂಖ್ಯೆಯ ವೈದ್ಯರುಗಳನ್ನು ಹೊಂದಿದ್ದರೆ ಶೇ.30ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಾಕಷ್ಟು ಔಷಧಗಳ ದಾಸ್ತಾನು ಹೊಂದಿದೆ.

## ನಗರ–ಗ್ರಾಮೀಣ ಮತ್ತು ಬಡವ–ಶ್ರೀಮಂತ ವಿಭಜನೆ (Urban-Rural and Poor-Rich Divide):

ಭಾರತದ ಶೇ.70ರಷ್ಟು ಜನಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾಗ್ಯೂ ಕೇವಲ ಐದನೇ ಒಂದು ಭಾಗದ ಆಸ್ಪತ್ರೆಗಳು ಮಾತ್ರ ಗ್ರಾಮೀಣ ಪ್ರದೇಶದಲ್ಲಿದೆ. ಗ್ರಾಮೀಣ ಭಾರತವು ಅರ್ಧದಷ್ಟು ಔಷಧಾಲಯಗಳನ್ನು ಮಾತ್ರ ಹೊಂದಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿರುವ ಒಟ್ಟು 6.3 ಲಕ್ಷ ಹಾಸಿಗೆಗಳಲ್ಲಿ ಅಂದಾಜು ಶೇ.30ರಷ್ಟು ಮಾತ್ರ ಗ್ರಾಮೀಣ ಪ್ರದೇಶದಲ್ಲಿದೆ. ಆ ರೀತಿಯಲ್ಲಿ ಗ್ರಾಮೀಣ ಭಾಗದಲ್ಲಿ ವಾಸಿಸುವ ಜನರು ಸಾಕಷ್ಟು ವೈದ್ಯಕೀಯ ಮೂಲಸೌಕರ್ಯಗಳನ್ನು ಹೊಂದಿಲ್ಲ. ಇದು ಜನರ ಆರೋಗ್ಯ ಸ್ಥಿತಿಗತಿಗಳಲ್ಲಿನ ಅಂತರಕ್ಕೆ ಕಾರಣವಾಗಿದೆ. ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಭಾಗದ ಪ್ರತಿ ಒಂದು ಲಕ್ಷ ಜನರಿಗೆ ಕೇವಲ 0.36ರಷ್ಟು ಆಸ್ಪತ್ರೆಗಳಿದ್ದರೆ ನಗರ ಪ್ರದೇಶದ ಅಷ್ಟೇ ಜನರಿಗೆ 3.6 ಆಸ್ಪತ್ರೆಗಳಿವೆ. ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕ್ಷ–ಕಿರಣ ಅಥವಾ ರಕ್ತ ಪರೀಕ್ಷಾ ಸೌಲಭ್ಯಗಳನ್ನೂ ಹೊಂದಿಲ್ಲ, ಆದರೆ ನಗರವಾಸಿಗಳಿಗೆ ಮೂಲ ಆರೋಗ್ಯ ಸುರಕ್ಷಾ ಸೌಲಭ್ಯವಾಗಿದೆ. ಬಿಹಾರ್, ಮಧ್ಯಪ್ರದೇಶ,



### ನೀವೇ ಮಾಡಿರಿ
### (Work These Out)

- ಕಳೆದ ಹಲವಾರು ವರ್ಷಗಳಲ್ಲಿ ರಾಷ್ಟ್ರದ ಆರೋಗ್ಯ ಸ್ಥಿತಿಗತಿಗಳಲ್ಲಿ ಒಟ್ಟಾರೆ ಸುಧಾರಣೆ ಖಂಡಿತವಾಗಿಯೂ ಆಗಿದೆ. ನಿರೀಕ್ಷಿತ ಜೀವಿತಾವಧಿಯಲ್ಲಿ ಹೆಚ್ಚಳವಾಗಿದೆ, ಶಿಶುಮರಣ ಪ್ರಮಾಣದಲ್ಲಿ ಇಳಿಕೆಯಾಗಿದೆ. ಸಿಡುಬನ್ನು ನಿರ್ಮೂಲನೆ ಮಾಡಲಾಗಿದೆ ಮತ್ತು ಕುಷ್ಠ ಮತ್ತು ಪೋಲಿಯೋ ನಿರ್ಮೂಲನೆ ಸಾಧ್ಯವಾಗಲಿದೆ. ಆದರೆ ಈ ಅಂಕಿಅಂಶಗಳನ್ನು ಪ್ರತ್ಯೇಕವಾಗಿ ನೋಡಿದಾಗ ಮಾತ್ರ ಚೆನ್ನಾಗಿ ಕಾಣುತ್ತದೆ. ಇವುಗಳನ್ನು ಪ್ರಪಂಚದ ಉಳಿದವುಗಳೊಂದಿಗೆ ಹೋಲಿಸಿ ನೋಡಿ. ನೀವು ಏನನ್ನು ಕಾಣುವಿರಿ. ವಿಶ್ವ ಆರೋಗ್ಯ ಸಂಘಟನೆಯು ಹೊರತಂದಿರುವ ವಿಶ್ವ ಆರೋಗ್ಯ ವರದಿಯಿಂದ ಈ ವಿವರಗಳನ್ನು ನೀವು ಪಡಯಬಹದು. ನೀವು ಏನನ್ನು ಕಾಣುವಿರಿ?
- ಒಂದು ತಿಂಗಳವರೆಗೆ ನಿಮ್ಮ ತರಗತಿಯನ್ನು ವೀಕ್ಷಿಸಿ ಏಕೆ ವಿದ್ಯಾರ್ಥಿಗಳು ಗೈರುಹಾಜರಾಗುತ್ತಾರೆ? ಆರೋಗ್ಯದ ಸಮಸ್ಯೆಗಳಿಂದಾಗಿ ಹಾಗೆ ಆಗುತ್ತಿದ್ದರೆ, ಅವರು ಯಾವ ರೀತಿಯ ವೈದ್ಯಕೀಯ ಸಮಸ್ಯೆಯನ್ನು ಹೊಂದಿದ್ದರು ಎಂಬುದನ್ನು ಕಂಡುಹಿಡಿಯಿರಿ. ಸಮಸ್ಯೆಯ ವಿವರಗಳನ್ನು ಸಂಗ್ರಹಿಸಿ, ಪಡೆದಿರುವ ಚಿಕಿತ್ಸೆಯ ಸ್ವಭಾವ ಮತ್ತು ಅವರ ಪೋಷಕರು ಚಿಕಿತ್ಸೆಗಾಗಿ ಮಾಡಿದ ವೆಚ್ಚ ಈ ಮಾಹಿತಿಗಳನ್ನು ತರಗತಿಯಲ್ಲಿ ಚರ್ಚಿಸಿ.




**ಚಿತ್ರ 8.10 ವಿವಿಧ ಆರೋಗ್ಯ ಸುರಕ್ಷಾ ಕ್ರಮಗಳನ್ನು ಪಡೆದುಕೊಂಡರೂ ತಾಯಂದಿರ ಆರೋಗ್ಯವು ಕಳವಳಕ್ಕೆ ಕಾರಣವಾಗಿದೆ.**

ರಾಜಸ್ತಾನದಂತಹ ರಾಜ್ಯಗಳು ಮತ್ತು ಉತ್ತರಪ್ರದೇಶ ಸಾಪೇಕ್ಷವಾಗಿ ಆರೋಗ್ಯ ಸುರಕ್ಷಾ ಸೌಲಭ್ಯಗಳಲ್ಲಿ ಹಿಂದುಳಿದಿವೆ. ಗ್ರಾಮೀಣ ಪ್ರದೇಶದಲ್ಲಿ ಸರಿಯಾದ ಆರೋಗ್ಯ ಸೌಲಭ್ಯಗಳಿಲ್ಲದ ಜನರ ಶೇ.ಪ್ರಮಾಣ ಇತ್ತೀಚಿನ ಕೆಲವು ವರ್ಷಗಳಲ್ಲಿ ಏರಿಕೆಯಾಗಿದೆ.

ಮಕ್ಕಳ ತಜ್ಞರು, ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು, ಅರಿವಳಿಕೆ ತಜ್ಞರು ಇತ್ಯಾದಿ ಪರಿಣಿತ ವೈದ್ಯಕೀಯ ಚಿಕಿತ್ಸೆಗಳನ್ನು ಪಡಯಲು ಗ್ರಾಮೀಣ ಜನರಿಗೆ ಸಾಧ್ಯವಾಗುತ್ತಿಲ್ಲ. ಪ್ರತಿ ವರ್ಷ 44,000 ವೈದ್ಯಕೀಯ ಪದವೀಧರರು 380 ಅಂಗೀಕೃತ ವೈದ್ಯಕೀಯ ಕಾಲೇಜುಗಳಿಂದ ತಯಾರಾಗುತ್ತಿದ್ದಾಗ್ಯೂ ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಕೊರತೆ ಇನ್ನೂ ಮುಂದುವರಿದಿದೆ.ಅದರಲ್ಲೂ ಐದನೇ ಒಂದರಷ್ಟು ವೈದ್ಯಕೀಯ ಪದವೀಧರರು ಉತ್ತಮ ಸಂಬಳ ಮತ್ತು ಸವಲತ್ತುಗಳಿಗಾಗಿ ದೇಶವನ್ನು ಬಿಡುತ್ತಿದ್ದಾರೆ, ಇತರೆ ಹಲವರು ನಗರ ಪ್ರದೇಶದ ಖಾಸಗಿ ಆಸ್ಪತ್ರೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಶೇ.20ರಷ್ಟು ಭಾರತೀಯ ಕಡುಬಡವರು ತಮ್ಮ ಆದಾಯದ ಶೇ.12ರಷ್ಟನ್ನು ಆರೋಗ್ಯ ಸುರಕ್ಷೆಗಾಗಿ ವೆಚ್ಚ ಮಾಡಿದರೆ ಶ್ರೀಮಂತರು ಕೇವಲ 2ರಷ್ಟನ್ನು ಮಾತ್ರ ವೆಚ್ಚ ಮಾಡುತ್ತಿದ್ದಾರೆ. ಬಡವರು ಕಾಯಿಲೆ ಬಿದ್ದರೆ ಏನಾಗುತ್ತದೆ?ಬಹಳಷ್ಟು ಜನ ತಮ್ಮ ಆಸ್ತಿಯನ್ನು ಮಾರಾಟ ಮಾಡಬೇಕಾಗುತ್ತದೆ ಅಥವಾ ಚಿಕಿತ್ಸಾ ವೆಚ್ಚಕ್ಕಾಗಿ ತಮ್ಮ ಮಕ್ಕಳನ್ನು ಒತ್ತೆ ಇಡಬೇಕಾಗುತ್ತದೆ. ಸರ್ಕಾರಿ ಆಸ್ಪತ್ರೆಗಳು ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತಿಲ್ಲವಾದ್ದರಿಂದ ಬಡವರು ಖಾಸಗಿ ಆಸ್ಪತ್ರೆಗೆ ಅನಿವಾರ್ಯವಾಗಿ ಹೋಗುತ್ತಿದ್ದಾರೆ. ಇದರಿಂದ ಸದಾ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ, ಇಲ್ಲವೇ ಸಾವಿಗೆ ಶರಣಾಗುತ್ತಿದ್ದಾರೆ.

## ಮಹಿಳಾ ಆರೋಗ್ಯ (Women's Health):

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಪುರುಷರಿಗೆ ಹೋಲಿಸಿದಾಗ ಆರೋಗ್ಯ, ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಮಹಿಳೆಯರು ತುಂಬಾ ಅನಾನುಕೂಲತೆಗಳನ್ನು ಅನುಭವಿಸುತ್ತಿದ್ದಾರೆ. ದೇಶದಲ್ಲಿ, 2001ರಂದು 927ರಷ್ಟು ಇದ್ದ ಮಕ್ಕಳ ಲಿಂಗಾನುಪಾತವು 914ಕ್ಕೆ ಇಳಿದಿದೆ ಎನ್ನುವುದು 2011ರ ಜನಗಣತಿಯಲ್ಲಿ ಕಂಡುಬಂದಿದೆ. ದೇಶದಲ್ಲಿನ ಹೆಣ್ಣು ಭ್ರೂಣಹತ್ಯೆ ಇದಕ್ಕೆ ಮುಖ್ಯ ಕಾರಣವಾಗಿದೆ. ಸುಮಾರು 3,00,000 ಹೆಣ್ಣುಮಕ್ಕಳು 15ನೇ ವಯಸ್ಸಿನೊಳಗೆ ವಿವಾಹಿತರಾಗುವುದಲ್ಲದೆ ಮಕ್ಕಳನ್ನೂ ಪಡೆಯುತ್ತಿದ್ದಾರೆ. ವಿವಾಹಿತ ಮಹಿಳೆಯರಲ್ಲಿ, 15 ರಿಂದ 49ರ ವಯೋಮಾನದೊಳಗಿರುವ ಶೇ. 50ರಷ್ಟು ಸ್ತ್ರೀಯರು ರಕ್ತಹೀನತೆ ಮತ್ತು ಕಬ್ಬಿಣದ ಅಂಶದ ಕೊರತೆಯಿಂದಾಗುವ ಪೌಷ್ಠಿಕ ರಕ್ತಹೀನತೆಯಿಂದ ಬಳಲುತ್ತಿದ್ದಾರೆ, ಇದು ಶೇ.19ರಷ್ಟು ಮಾತೆಯರ ಮರಣಕ್ಕೆ ಕಾರಣವಾಗಿದೆ. ಭಾರತದಲ್ಲಿ ಗರ್ಭಪಾತವೂ ಕೂಡಾ ಮಾತೃತ್ವ ಅನಾರೋಗ್ಯ ಮತ್ತು ಮರಣಕ್ಕೆ ಪ್ರಮುಖ ಕಾರಣವಾಗಿದೆ.

ಆರೋಗ್ಯ ಅತಿ ಮುಖ್ಯವಾದ ಸಾರ್ವಜನಿಕ ಸರಕು ಮತ್ತು ಮೂಲಭೂತ ಮಾನವ ಹಕ್ಕಾಗಿದೆ. ಸಾರ್ವಜನಿಕ ಆರೋಗ್ಯ ಸೇವೆಗಳನ್ನು ವಿಕೇಂದ್ರೀಕರಣಗೊಳಿಸಿದಲ್ಲಿ ಎಲ್ಲಾ ನಾಗರೀಕರೂ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಪಡೆಯಬಹುದು. ಕಾಯಿಲೆಯ ವಿರುದ್ಧದ ಹೋರಾಟದ ಯಶಸ್ಸು ಶಿಕ್ಷಣ ಮತ್ತು ಆರೋಗ್ಯ ಮೂಲಸೌಕರ್ಯದ ದಕ್ಷತೆಯನ್ನು ಅವಲಂಬಿಸಿದೆ.ಆದ್ದರಿಂದ ಆರೋಗ್ಯ ಮತ್ತು ಆರೋಗ್ಯ ಶುಚಿತ್ವವನ್ನು ಒದಗಿಸುವ ದಕ್ಷ ವ್ಯವಸ್ಥೆಗಳ ಕುರಿತು ಪರಿಜ್ಞಾನವನ್ನು ಮೂಡಿಸುವುದು ಅತಿ ಮುಖ್ಯವಾಗಿದೆ. ಈ ಪ್ರಕ್ರಿಯೆಯಲ್ಲಿ ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪಾತ್ರವನ್ನು ಕಡೆಗಣಿಸುವಂತಿಲ್ಲ. ಆರೋಗ್ಯ ಸುರಕ್ಷಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿಸುವುದು ಮೂಲ ಆರೋಗ್ಯ ಸುರಕ್ಷತೆಯನ್ನು ಅವಲಂಬಿಸಿದೆ. ಜನರನ್ನು ಉತ್ತಮ ಗುಣಮಟ್ಟದ ಜೀವನದ ದಿಶೆಗೆ ಒಯ್ಯುವುದು ಇದರ ಅಂತಿಮ ಗುರಿಯಾಗಬೇಕು. ಭಾರತದಲ್ಲಿ ನಗರ ಮತ್ತು ಗ್ರಾಮೀಣ ಆರೋಗ್ಯ ಸುರಕ್ಷತೆಯ ನಡುವೆ ತೀವ್ರ ಅಂತರವಿದೆ.

ಈ ಹೆಚ್ಚುತ್ತಿರುವ ಅಂತರವನ್ನು ನಿರ್ಲಕ್ಷಿಸುತ್ತಾ ಹೋದಲ್ಲಿ ನಮ್ಮ ದೇಶದ ಸಾಮಾಜಿಕ–ಆರ್ಥಿಕ ರಚನೆಯು ಅಸ್ಥಿರಗೊಳ್ಳುವ ಅಪಾಯವಿದೆ. ಎಲ್ಲರಿಗೂ ಆರೋಗ್ಯ ಸುರಕ್ಷತೆಯನ್ನು ಒದಗಿಸುವ ಸಲುವಾಗಿ ಅದರ ಲಭ್ಯತೆ ಮತ್ತು ಅವುಗಳನ್ನು ಪಡೆಯುವ ಸಾಮರ್ಥ್ಯವನ್ನು ಮೂಲ ಆರೋಗ್ಯ ಸೌಕರ್ಯಗಳೊಂದಿಗೆ ಸಮನ್ವಯಗೊಳಿಸಬೇಕಾಗಿದೆ.

## 8.7 ಉಪಸಂಹಾರ (CONCLUSION)

ಸಾಮಾಜಿಕ ಮತು ಆರ್ಥಿಕ ಮೂಲಸೌಕರ್ಯಗಳೆರಡೂ ದೇಶದ ಅಭಿವೃದ್ಧಿಗೆ ಅತಿ ಅವಶ್ಯಕವಾಗಿದೆ.ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ ಮತ್ತು ಉತ್ಪಾದನಾಂಗಗಳ ಉತ್ಪಾದಕತೆಯನ್ನು ಹೆಚ್ಚಿಸುವ ಎಲ್ಲಾ ಆರ್ಥಿಕ ಚಟುವಟಿಕೆಯ ಮೇಲೆ ನೇರವಾಗಿ ಪ್ರಭಾವ ಬೀರುವ ಬೆಂಬಲ ವ್ಯವಸ್ಥೆಯಾಗಿದೆ. ಸ್ವಾತಂತ್ರ್ಯಾನಂತರದ ಆರು ದಶಕಗಳಲ್ಲಿ ಭಾರತವು ಮೂಲಸೌಕರ್ಯ ನಿರ್ಮಾಣದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ, ಆದಾಗ್ಯೂ ಅವುಗಳ ಹಂಚಿಕೆಯಲ್ಲಿ ಅಸಮಾನತೆಯಿದೆ. ಗ್ರಾಮೀಣ ಭಾರತದ ಹಲವು ಭಾಗಗಳು ಇನ್ನೂ ದೂರಸಂಪರ್ಕ ಸೌಲಭ್ಯಗಳು, ವಿದ್ಯುಚ್ಛಕ್ತಿ, ಶಾಲೆ ಮತ್ತು ಆಸ್ಪತ್ರೆಗಳನ್ನು ಹೊಂದಬೇಕಾಗಿದೆ. ಭಾರತ ಆಧುನಿಕತೆಯೆಡೆಗೆ ಸಾಗುತ್ತಿರುವುದರಿಂದ ಪರಿಸರದ ಮೇಲಾಗುವ ಪರಿಣಾಮಗಳನ್ನು ಗಮನದಲ್ಲಿ ಇಟ್ಟುಕೊಂಡು ಗುಣಮಟ್ಟದ ಮೂಲಸೌಕರ್ಯಗಳಿಗೆ ಹೆಚ್ಚುತ್ತಿರುವ ಬೇಡಿಕೆಯ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಸುಧಾರಣಾ ನೀತಿಯು ಸಾಮಾನ್ಯವಾಗಿ ಖಾಸಗಿ ವಲಯ ಮತ್ತು ನಿರ್ದಿಷ್ಟವಾಗಿ ವಿದೇಶೀ ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶದಿಂದ ಹಲವು ರಿಯಾಯಿತಿಗಳು ಮತ್ತು ಉತ್ತೇಜಕಗಳನ್ನು ಒದಗಿಸುತ್ತಿದೆ. ಇಂಧನ ಮತ್ತು ಆರೋಗ್ಯದಂತಹ ಎರಡೂ ಮೂಲಸೌಕರ್ಯಗಳ ಮೌಲ್ಯಮಾಪನ ಮಾಡುವಾಗ ಎಲ್ಲರಿಗೂ ಇದನ್ನು ಪಡೆಯುವ ಸಮಾನ ಅವಕಾಶಗಳು ನಿಚ್ಚಳವಾಗಿದೆ.

## ಪುನರುಕ್ತಿ

- ಮೂಲಸೌಕರ್ಯಗಳೆಂದರೆ ಭೌತಿಕ ಸೌಲಭ್ಯಗಳು ಮತ್ತು ಸಾರ್ವಜನಿಕ ಸೇವೆಗಳು ಇದರೊಂದಿಗೆ ಸಾಮಾಜಿಕ ಮೂಲಸೌಕರ್ಯಗಳನ್ನು ಸಮಾನವಾಗಿ ಒಳಗೊಂಡಿರುವ ಜಾಲವಾಗಿದೆ. ಇದು ದೇಶದ ಆರ್ಥಿಕ ಅಭಿವೃದ್ಧಿಗೆ ಪ್ರಮುಖ ಮೂಲಾಧಾರವಾಗಿದೆ.
- ಉನ್ನತ ಆರ್ಥಿಕ ಬೆಳವಣಿಗೆಯ ದರವನ್ನು ಸಾಧಿಸಲು ಕಾಲ ಕಾಲಕ್ಕೆ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ. ಇತ್ತೀಚೆಗೆ ಉತ್ತಮ ಮೂಲಸೌಕರ್ಯ ಸೌಲಭ್ಯಗಳು ಭಾರತಕ್ಕೆ ಹೆಚ್ಚು ವಿದೇಶಿ ಹೂಡಿಕೆದಾರರನ್ನು ಮತ್ತು ಪ್ರವಾಸಿಗರನ್ನು ಆಕರ್ಷಿಸಿದೆ.
- ಗಾಮೀಣ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಮುಖ್ಯವಾಗಿದೆ.
- ಮೂಲಸೌಕರ್ಯ ಅಭಿವೃದ್ಧಿಗಾಗಿ ಬೃಹತ್ ಬಂಡವಾಳವನ್ನು ಹೊಂದಿಸಲು ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯ ಅವಶ್ಯಕತೆಯಿದೆ.
- ಶೀಘ್ರಗತಿಯ ಆರ್ಥಿಕ ಬೆಳವಣಿಗೆಗೆ ಇಂಧನವು ಅತ್ಯಂತ ಅಗತ್ಯ ಅಂಶವಾಗಿದೆ. ಭಾರತದಲ್ಲಿ ವಿದ್ಯುಚ್ಛಕ್ತಿಯ ಗ್ರಾಹಕರ ಬೇಡಿಕೆ ಮತ್ತು ಪೂರೈಕೆಯ ನಡುವೆ ಭಾರಿ ಅಂತರವಿದೆ.
- ಇಂಧನದ ಕೊರತೆಯನ್ನು ಸರಿದೂಗಿಸುವಲ್ಲಿ ಅಸಾಂಪ್ರದಾಯಿಕ ಇಂಧನ ಮೂಲಗಳು ದೊಡ್ಡ ಪ್ರಮಾಣದಲ್ಲಿ ಸಹಕಾರಿಯಾಗಲಿದೆ.
- ವಿದ್ಯುತ್ ವಲಯವು ಉತ್ಪಾದನೆ, ಪ್ರಸರಣ ಮತ್ತು ವಿತರಣೆಯಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ.
- ಆರೋಗ್ಯವು ಮಾನವನ ಯೋಗಕ್ಷೇಮವನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಳೆಯುವ ಮಾನದಂಡವಾಗಿದೆ.
- ಸ್ವಾತಂತ್ರ್ಯಾನಂತರದಿಂದ ಆರೋಗ್ಯ ಸೇವೆಗಳ ಭೌತಿಕ ಸೌಲಭ್ಯಗಳಲ್ಲಿ ಗಮನಾರ್ಹ ವಿಸ್ತರಣೆಯಾಗಿದೆ. ಮತ್ತು ಆರೋಗ್ಯ ಸೂಚಕಗಳಲ್ಲಿ ಗಣನೀಯ ಸುಧಾರಣೆಯಾಗಿದೆ.
- ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಸೌಲಭ್ಯಗಳು ಬೃಹತ್ ಗಾತ್ರದ ಜನಸಂಖ್ಯೆಗೆ ಸಾಕಾಗುವಷ್ಟಿಲ್ಲ.
- ಗ್ರಾಮೀಣ–ನಗರ ಪ್ರದೇಶಗಳ ನಡುವೆ ಭಾರಿ ಅಂತರವಿದೆ ಮತ್ತು ಆರೋಗ್ಯ ಸೌಲಭ್ಯಗಳನ್ನು ಬಳಸಿಕೊಳ್ಳುವಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ಅಂತರವಿದೆ.
- ಹೆಣ್ಣು ಭ್ರೂಣಹತ್ಯೆ ಮತ್ತು ಮರಣ ದರದ ವರದಿಗಳಿಂದ ಮಹಿಳಾ ಆರೋಗ್ಯ ವಿಷಯವು ರಾಷ್ಟ್ರಾದ್ಯಂತ ಭಾರಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ.
- ಖಾಸಗಿ ವಲಯದ ನಿಯಂತ್ರಿತ ಆರೋಗ್ಯ ಸೌಲಭ್ಯಗಳು ಪರಿಸ್ಥಿತಿಯನ್ನು ಸುಧಾರಿಸುತ್ತದೆ ಮತ್ತು ಅದೇ ವೇಳೆಗೆ ಆರೋಗ್ಯ ಸುರಕ್ಷಾ ಸೌಲಭ್ಯಗಳನ್ನು ಒದಗಿಸುವಲ್ಲಿ ಮತ್ತು ಆರೋಗ್ಯ ಜಾಗೃತಿಯನ್ನು ಹರಡುವಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಸಮುದಾಯದ ಸಹಭಾಗಿತ್ವವೂ ಕೂಡಾ ಮುಖ್ಯವಾಗಿದೆ.
- ಸಾರ್ವಜನಿಕ ಆರೋಗ್ಯವನ್ನು ಬಲಪಡಿಸಲು ನೈಸರ್ಗಿಕ ಔಷಧ ವ್ಯವಸ್ಥೆಗಳ ಶೋಧನೆ ಮತ್ತು ಬಳಸುವ ಅವಶ್ಯಕತೆಯಿದೆ. ಭಾರತದಲ್ಲಿ ವೈದ್ಯಕೀಯ ಪ್ರವಾಸೋದ್ಯಮದ ಅಭಿವೃದ್ಧಿಗೆ ವಿಫುಲ ಅವಕಾಶಗಳಿವೆ.



## ಅಭ್ಯಾಸಗಳು

1. 'ಮೂಲಸೌಕರ್ಯ' ಈ ಪದವನ್ನು ವಿವರಿಸಿ.
2. ಮೂಲಸೌಕರ್ಯದ ಎರಡು ವಿಧಗಳನ್ನು ವಿವರಿಸಿ. ಹೇಗೆ ಅವೆರಡೂ ಪರಸ್ಪರ ಅವಲಂಬಿತವಾಗಿದೆ?
3. ಹೇಗೆ ಮೂಲಸೌಕರ್ಯಗಳು ಉತ್ಪಾದನೆಯನ್ನು ಹೆಚ್ಚಿಸುತ್ತದೆ?
4. ಮೂಲಸೌಕರ್ಯಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಕೊಡುಗೆಯನ್ನು ನೀಡುತ್ತದೆ. ಇದನ್ನು ನೀವು ಒಪ್ಪುತ್ತೀರಾ? ವಿವರಿಸಿ.
5. ಭಾರತದಲ್ಲಿ ಗ್ರಾಮೀಣ ಮೂಲಸೌಕರ್ಯಗಳ ಸ್ಥಿತಿಗತಿಗಳೇನು?
6. ಇಂಧನದ ಪ್ರಾಮುಖ್ಯತೆಯೇನು? ವಾಣಿಜ್ಯ ಮತ್ತು ವಾಣಿಜ್ಯೇತರ ಇಂಧನ ಮೂಲಗಳ ವ್ಯತ್ಯಾಸಗಳನ್ನು ತಿಳಿಸಿ.
7. ವಿದ್ಯುತ್ ಉತ್ಪಾದನೆಯ ಮೂರು ಮೂಲಗಳಾವುವು?
8. ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆಯಲ್ಲಿನ ನಷ್ಟ ಎನ್ನುವುದರ ಅರ್ಥವೇನು? ಹೇಗೆ ಅವುಗಳನ್ನು ಕಡಿಮೆ ಮಾಡಬಹುದು?
9. ವಾಣಿಜ್ಯೇತರ ಇಂಧನ ವಿವಿಧ ಮೂಲಗಳು ಯಾವುವು?
10. ನವೀಕರಿಸಬಹುದಾದ ಇಂಧನ ಮೂಲಗಳ ಬಳಕೆಯಿಂದ ವಿದ್ಯುತ್ ಬಿಕ್ಕಟ್ಟಿನಿಂದ ಪಾರಾಗಬಹುದು ಎನ್ನುವುದನ್ನು ಸಮರ್ಥಿಸಿ.
11. ಹೇಗೆ ಇಂಧನ ಬಳಕೆಯ ಮಾದರಿಯು ವರ್ಷಗಳ ಅವಧಿಯಲ್ಲಿ ಬದಲಾಗಿದೆ?
12. ಹೇಗೆ ಆರ್ಥಿಕ ಬೆಳವಣಿಗೆ ಮತ್ತು ಇಂಧನ ಬಳಕೆಯ ದರ ಸಂಬಂಧ ಹೊಂದಿದೆ?
13. ವಿದ್ಯುತ್ ವಲಯವು ಎದುರಿಸುತ್ತಿರುವ ಸಮಸ್ಯೆಗಳಾವುವು?
14. ಭಾರತದಲ್ಲಿನ ವಿದ್ಯುತ್ ಬಿಕ್ಕಟ್ಟನ್ನು ಎದುರಿಸಲು ಜಾರಿಗೆ ತರಲಾದ ಸುಧಾರಣೆಗಳನ್ನು ಚರ್ಚಿಸಿರಿ.
15. ನಮ್ಮ ದೇಶದ ಜನರ ಆರೋಗ್ಯದ ಪ್ರಮುಖ ಲಕ್ಷಣಗಳಾವುವು?
16. 'ರೋಗಗಳ ಜಾಗತಿಕ ಹೊರೆ' ಎಂದರೇನು?
17. ನಮ್ಮ ಆರೋಗ್ಯ ಸುರಕ್ಷಾ ವ್ಯವಸ್ಥೆಯ ದೋಷಗಳನ್ನು ಚರ್ಚಿಸಿ
18. ಹೇಗೆ ಮಹಿಳಾ ಆರೋಗ್ಯವು ಪ್ರಮುಖ ಆದ್ಯತಾ ವಿಷಯವಾಗಿದೆ?
19. ಸಾರ್ವಜನಿಕ ಆರೋಗ್ಯದ ಅರ್ಥವನ್ನು ವಿವರಿಸಿ. ಇತ್ತೀಚಿನ ವರ್ಷಗಳಲ್ಲಿ ಕಾಯಿಲೆಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಪ್ರಮುಖ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ಚರ್ಚಿಸಿ.
20. ಆರು ಭಾರತೀಯ ವೈದ್ಯ ಪದ್ಧತಿಯ ಪ್ರಕಾರಗಳ ವ್ಯತ್ಯಾಸಗಳನ್ನು ತಿಳಿಸಿ.
21. ಹೇಗೆ ಆರೋಗ್ಯ ಸುರಕ್ಷಾ ಕಾಯಕ್ರಮಗಳ ಕಾರ್ಯದಕ್ಷತೆಯನ್ನು ಹೆಚ್ಚಿಸಬಹುದು?

## ಸೂಚಿತ ಹೆಚ್ಚುವರಿ ಚಟುವಟಿಕೆಗಳು

1. ಒಂದು ಮೆಗಾವ್ಯಾಟ್ ವಿದ್ಯುತ್ತನ್ನು ನಿಮ್ಮ ಮನೆಗೆ ತರಲು 40–30 ದಶಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಎನ್ನುವುದು ನಿಮಗೆ ಗೊತ್ತಾ? ಹೊಸ ವಿದ್ಯುತ್ ಸ್ಥಾವರದ ನಿರ್ಮಾಣಕ್ಕೆ ದಶಲಕ್ಷಗಳಷ್ಟು ಖರ್ಚಾಗುತ್ತದೆ. ನಿಮ್ಮ ಮನೆಗಳಲ್ಲಿ ವಿದ್ಯುತ್ ಉಳಿತಾಯ ಆರಂಭಿಸುವುದಕ್ಕೆ ಇದು ಸಕಾರಣವಲ್ಲವೇ? ವಿದ್ಯುತ್ ಉಳಿಸಿದರೆ ಹಣವನ್ನು ಉಳಿಸಿದಂತೆ: ವಾಸ್ತವವಾಗಿ ವಿದ್ಯುತ್ ಉತ್ಪಾದಿಸುವುದಕ್ಕಿಂತ ಇದು ಹಲವು ಪಟ್ಟು ಹೆಚ್ಚಾಗಿದೆ. ಪ್ರತೀ ಬಾರಿ ನಿಮ್ಮ ಮನೆಗೆ ವಿದ್ಯುತ್ ಬಿಲ್ ಬಂದಾಗ ಹೆಚ್ಚು ದೀಪಗಳು ಮತ್ತು ಫ್ಯಾನ್‌ಗಳ ಅವಶ್ಯಕತೆಯಿಲ್ಲ ಎನ್ನುವುದನ್ನು ಅರಿಯುವಿರಿ. ಎಲ್ಲರೂ ಮಾಡಬೇಕಾದ ಕೆಲಸವೆಂದರೆ ಈ ಬಗ್ಗೆ ಜಾಗೃತವಾಗಿರುವುದು. ನೀವು ಮಾಡಬಹುದಾದ ಉತ್ತಮ ಕೆಲಸವೆಂದರೆ ಈ ಪ್ರಯತ್ನದಲ್ಲಿ ನಿಮ್ಮ ಕುಟುಂಬದವರನ್ನು ಸೇರಿಸಿಕೊಳ್ಳಿ ಮತ್ತು ವ್ಯತ್ಯಾಸವನ್ನು ನೋಡಿರಿ. ನಿಮ್ಮ ಮನೆಯ ತಿಂಗಳ ವಿದ್ಯುತ್ ಬಳಕೆಯನ್ನು ಪಟ್ಟಿ ಮಾಡಿ. ವಿದ್ಯುತ್ ಉಳಿಸುವ ವಿಧಾನಗಳನ್ನು ಅಳವಡಿಸಿದ ನಂತರ ವಿದ್ಯುತ್ ಬಿಲ್ಲಿನಲ್ಲಿ ಆದ ವೆತ್ಯಾಸವನ್ನು ನೋಡಿರಿ.

2. ನಿಮ್ಮ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿರುವ ಮೂಲಸೌಕರ್ಯ ಯೋಜನೆಗಳನ್ನು ನೋಡಿರಿ. ನಂತರ ಇವುಗಳನ್ನು ಗಮನಿಸಿ.

   **I.** ಯೋಜನೆಗೆ ಮಂಜೂರಾಗಿರುವ ಅಂದಾಜು ಮೊತ್ತ

   **II.** ಈ ಯೋಜನೆಯ ಹಣಕಾಸಿನ ಮೂಲ

   **III.** ಈ ಯೋಜನೆಯು ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಬಲ್ಲದು.

   **IV.** ಈ ಯೋಜನೆ ಪೂರ್ಣಗೊಂಡ ನಂತರ ಒಟ್ಟಾರೆ ದೊರೆಯುವ ಪ್ರಯೋಜನಗಳಾವುವು?

   **V.** ಈ ಯೋಜನೆ ಪೂರ್ಣಗೊಳ್ಳಲು ಎಷ್ಟು ಸಮಯ ಬೇಕಾಗಬಹುದು?

   **VI.** ಈ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಕಂಪನಿ/ಕಂಪನಿಗಳಾವುವು?

3. ಸಮೀಪವಿರುವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ/ಜಲ ವಿದ್ಯುತ್ ಉತ್ಪಾದನಾ ಕೇಂದ್ರ/ಅಣು ವಿದ್ಯುತ್ ಸ್ಥಾವರಗಳಿಗೆ ಭೇಟಿ ನೀಡಿ. ಈ ಸ್ಥಾವರಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಗಮನಿಸಿ.

4. ತರಗತಿಯನ್ನು ಎರಡು ಭಾಗಗಳಾಗಿ ವಿಭಜಿಸಿ ನೆರೆಹೊರೆಯಲ್ಲಿ ಬಳಸಲಾಗುವ ಇಂಧನಗಳ ಸಮೀಕ್ಷೆ ಮಾಡಿರಿ. ಯಾವ ಇಂಧನವನ್ನು ಹೆಚ್ಚಾಗಿ ಬಳಸುತ್ತಿದ್ದಾರೆ ಮತ್ತು ಯಾವ ಪ್ರಮಾಣದಲ್ಲಿ ಬಳಸುತ್ತಿದ್ದಾರೆ ಎನ್ನುವುದನ್ನು ತಿಳಿಯುವುದೇ ಸಮೀಕ್ಷೆಯ ಉದ್ದೇಶವಾಗಿರಲಿ. ವಿವಿಧ ಗುಂಪುಗಳ ನಕ್ಷೆಯನ್ನು ತಯಾರಿಸಿ ಯಾವುದೇ ಒಂದು ನಿರ್ದಿಷ್ಟ ಇಂಧನವನ್ನು ಆದ್ಯತಾನುಸಾರ ಬಳಸಲು ಇರುವ ಸಾಧ್ಯತೆಯ ಕಾರಣಗಳನ್ನು ಹೋಲಿಸಿ ನೋಡಿ.

5. ಆಧುನಿಕ ಭಾರತದ ಇಂಧನ ನಿರ್ಮಾಣದ ವಾಸ್ತುಶಿಲ್ಪಿಯಾದ ಡಾ. ಹೋಮಿ ಭಾಭಾರವರ ಜೀವನ ಮತ್ತು ಸಾಧನೆಯನ್ನು ಅಧ್ಯಯನ ಮಾಡಿರಿ.

6. ತರಗತಿಯಲ್ಲಿ ಈ ವಿಷಯದ ಕುರಿತು ಚರ್ಚಿಸಿ ಅಥವಾ ಚರ್ಚಾಗೋಷ್ಠಿಯನ್ನು ಏರ್ಪಡಿಸಿ 'ಸಮರಗಳಲ್ಲಿ ನಿರತರಾಗಿರುವ ರಾಷ್ಟ್ರಗಳು ಅನಾರೋಗ್ಯಕರ ಜಗತ್ತನ್ನು ನಿರ್ಮಿಸುತ್ತಿವೆ. ಆದ್ದರಿಂದ ಅಸ್ತವ್ಯಸ್ತ ವರ್ತನೆಗಳು ಮತ್ತು ಮುಚ್ಚಿದ ಮನಸ್ಥಿತಿಗಳು ಮನೋವ್ಯಾದಿಗೆ ಕಾರಣವಾಗಿವೆ'.



## REFERENCES


**Books:**

JALAN, BIMAL (Ed.). The Indian Economy Problems and Prospects. Penguin Books, Delhi, 1993.

KALAM, A.P.J. ABDUL WITH Y.S. RAJAN. 2002. India 2020: A Vision for the New Millennium. Penguin Books, Delhi.

PARIKH, KIRIT S. AND RADHAKRISHNA (Eds.) 2005. India Development Report 05–2004. Oxford University Press, Delhi.

**Government Reports:**

The World Health Report 2002. Reducing Risks, Promoting Healthy Life, World Health Organisation, Geneva.

Report of the National Commission on Macroeconomics and Health, Ministry of Health and Family Welfare, Government of India, New Delhi, 2005.

Tenth Five Year Plan, Vol.2, Planning Commission, Government of India, New Delhi.

The India Infrastructure Report: Policy Imperatives for Growth and Welfare

The India Infrastructure Report: Policy Imperatives for Growth and Welfare 1996. Expert Group on the Commercialisaton of Infrastructure Projects. Vols. 1, 2 and 3 Ministry of Finance. Government of India, New Delhi.

World Development Report 2004. The World Bank, Washington DC.

India Infrastructure Report 2004 Oxford University Press, New Delhi.

Economic Survey 2004–2005 Ministry of Finance, Government of India.

World Development Indicators, 2013, The World Bank, Washington.

World Health Statistics 2014, World Health Organisation, Geneva.

National Health Profile (NHP) of India for various years, Central Bureau of Health Intelligence, Goverment of India, New Delhi.

**Websites:**

***On energy related issues:***

www.pcra.org www.bee-india.com www.edugreen.teri.res.in http://powermin.nic.in

***On health related issues:***

http://www.aiims.edu http://www.whoindia.org http://mohfw.nic.in

www.apollohospitalsgroup.com www.worldbank.org www.cbhidghs.nic.in

9

# ಅಧ್ಯಾಯ–9

# ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ

## ENVIRONMENT AND SUSTAINABLE DEVELOPMENT

**ಈ ಅಧ್ಯಾಯದ ಅಧ್ಯಯನದ ನಂತರ ನೀವು,**

- ಪರಿಸರದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಬಹುದು,
- ಪರಿಸರದ ಗುಣಮಟ್ಟದ ಕ್ಷೀಣತೆಗೆ ಕಾರಣಗಳು, ಪರಿಣಾಮಗಳು ಮತ್ತು ಸಂಪನ್ಮೂಲಗಳ ವಿನಾಶದ ಬಗ್ಗೆ ವಿಶ್ಲೇಷಿಸಬಹುದು,
- ಭಾರತದ ಪರಿಸರ ಎದುರಿಸುವ ಸವಾಲುಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು,
- ಸುಸ್ಥಿರ ಅಭಿವೃದ್ಧಿಯ ಸನ್ನಿವೇಶಕ್ಕೆ  ಪರಿಸರದ ಸಮಸ್ಯೆಗಳನ್ನು ಸಂಬಂಧಿಸಬಹುದು.

> ಪರಿಸರವನ್ನು ಅದರಷ್ಟಕ್ಕೇ ಅದನ್ನು ಬಿಟ್ಟಾಗ, ಮಿಲಿಯಾಂತರ ವರ್ಷಗಳವರೆಗೆ ಜೀವಕ್ಕೆ ಆಸರೆಯಾಗುತ್ತದೆ. ಈ ಯೋಜನೆಯಲ್ಲಿ ಅಸ್ಥಿರ ಹಾಗೂ ಬಲಯುತವಾದ ವಿನಾಶಕಾರಿ ಅಂಶವೆಂದರೆ ಮಾನವಜಾತಿ. ತಿಳಿದೋ ತಿಳಿಯದಂತೆಯೋ ಮಾನವನು ಆಧುನಿಕ ತಾಂತ್ರಿಕತೆಯ ಸಹಾಯದಿಂದ ಪರಿಸರದಲ್ಲಿ ದೂರಗಾಮಿ ಹಾಗೂ ಪರಿವರ್ತಿಸಲಾಗದ ಬದಲಾವಣೆಗಳನ್ನು ತರುವ ಸಾಮರ್ಥ್ಯವನ್ನು ಹೊಂದಿದ್ದಾನೆ – **ಅನಾಮಧೇಯ**

## 9.1 ಪೀಠಿಕೆ (INTRODUCTION)

ಭಾರತದ ಅರ್ಥವ್ಯವಸ್ಥೆ ಎದುರಿಸುತ್ತಿರುವ ಪ್ರಮುಖ ಆರ್ಥಿಕ ವಿಚಾರಗಳ ಬಗ್ಗೆ ಈ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದ್ದೇವೆ. ನಾವು ಪರಿಸರದ ಗುಣಮಟ್ಟಕ್ಕೆ ಭಾರೀ ಬೆಲೆ ತೆತ್ತು ಈ ವರೆಗೆ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿರುತ್ತೇವೆ. ಹೆಚ್ಚಿನ ಆರ್ಥಿಕ ಬೆಳವಣಿಗೆಯ ಭರವಸೆಯನ್ನಿಟ್ಟುಕೊಂಡು ಜಾಗತೀಕರಣದ ಯುಗಕ್ಕೆ ಹೆಜ್ಜೆ ಇಟ್ಟ ನಾವು ಹಿಂದಿನ ಅಭಿವೃದ್ಧಿ ತಂತ್ರಗಳು ಪರಿಸರದ ಮೇಲೆ ಯಾವ ರೀತಿಯ ದುಷ್ಪರಿಣಾಮ ಬೀರಿವೆ ಎಂಬುದನ್ನು ಮನದಲ್ಲಿಟ್ಟುಕೊಂಡು ಪ್ರಜ್ಞಾಪೂರ್ವಕವಾಗಿ ಸುಸ್ಥಿರ ಅಭಿವೃದ್ಧಿಯ ಹಾದಿಯನ್ನು ಆಯ್ದುಕೊಳ್ಳಬೇಕಾಗಿದೆ. ನಾವು ಸಾಗುತ್ತಿರುವ ಅಭಿವೃದ್ಧಿಯ ಅಸ್ಥಿರಮಾರ್ಗ ಮತ್ತು ಸುಸ್ಥಿರ ಅಭಿವೃದ್ಧಿಯ ಸವಾಲುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಮೊದಲು ಆರ್ಥಿಕಾಭಿವೃದ್ಧಿಯಲ್ಲಿ ಪರಿಸರದ ಮಹತ್ವ ಮತ್ತು ಪರಿಸರದ ಕೊಡುಗೆಗಳನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಪರಿಸರದ ಅರ್ಥ ಮತ್ತು ಕಾರ್ಯಗಳು, ಎರಡನೆಯ ಭಾಗದಲ್ಲಿ ಭಾರತದ ಪರಿಸರದ ಸ್ಥಿತಿಗತಿಗಳು ಹಾಗೂ ಮೂರನೆಯ ಭಾಗದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸುವ ಮಾರ್ಗಗಳು ಮತ್ತು ಕಾರ್ಯತಂತ್ರಗಳ ಬಗ್ಗೆ ವಿವರಿಸಲಾಗಿದೆ.

## 9.2 ಪರಿಸರ – ಅರ್ಥ ಮತ್ತು ಕಾರ್ಯಗಳು (ENVIRONMENT – DEFINITION AND FUNCTIONS)

ಈ ಭೂ ಗ್ರಹಕ್ಕೆ ಬಳುವಳಿಯಾಗಿರುವ ಎಲ್ಲಾ ಸಂಪನ್ಮೂಲಗಳ ಒಟ್ಟು ಮೊತ್ತವನ್ನು ಪರಿಸರ ಎಂದು ವ್ಯಾಖ್ಯಾನಿಸಲಾಗಿದೆ. ಪರಿಸರವು ಒಂದನ್ನೊಂದು ಪ್ರಭಾವಿಸುವ ಸಜೀವ ಮತ್ತು ನಿರ್ಜೀವ ಅಂಶಗಳನ್ನು ಒಳಗೊಂಡಿದೆ. ಸಜೀವ ಅಂಶಗಳಲ್ಲಿ ಪಕ್ಷಿಗಳು, ಪ್ರಾಣಿಗಳು, ಸಸ್ಯಗಳು, ಅರಣ್ಯಗಳು ಮುಂತಾದುವುಗಳು ಒಳಗೊಂಡಿದ್ದರೆ ನಿರ್ಜೀವ ಅಂಶಗಳಲ್ಲಿ ಸೂರ್ಯನ ಬೆಳಕು, ನೀರು, ವಾತಾವರಣದಲ್ಲಿನ ಅನಿಲಗಳು, ಕಲ್ಲುಬಂಡೆಗಳು ಮುಂತಾದುವುಗಳು ಒಳಗೊಂಡಿವೆ. ಪರಿಸರದ ಅಧ್ಯಯನವನ್ನು ಸಜೀವ ಮತ್ತು ನಿರ್ಜೀವ ಅಂಶಗಳ ನಡುವಿನ ಅಂತರ್‌ಸಂಬಂಧದ ಅಧ್ಯಯನವೆಂದು ಕರೆಯಲಾಗಿದೆ.

### ಪರಿಸರದ ಕಾರ್ಯಗಳು (FUNCTIONS OF THE ENVIRONMENT)

ಪರಿಸರವು ನಾಲ್ಕು ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳು ಈ ಕೆಳಕಂಡಂತಿವೆ.

1. **ಇದು ಸಂಪನ್ಮೂಲಗಳನ್ನು ಪೂರೈಸುತ್ತದೆ:**

   ಈ ಸಂಪನ್ಮೂಲಗಳು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳೆರಡನ್ನೂ ಒಳಗೊಂಡಿವೆ. ನಾಶವಾಗುವ ಅಥವಾ ಮುಗಿದು ಹೋಗುವ ಸಾಧ್ಯತೆ ಇಲ್ಲದೆ ಬಳಸಬಹುದಾದ ಸಂಪನ್ಮೂಲವೇ ನವೀಕರಿಸಬಹುದಾದ ಸಂಪನ್ಮೂಲಗಳಾಗಿವೆ. ಇವು ನಿರಂತರ ಪೂರೈಕೆಗೆ ಲಭ್ಯವಿರುತ್ತವೆ. ಉದಾ: ನೀರು, ಅರಣ್ಯದಲ್ಲಿರುವ ಮರಗಳು, ಸಮುದ್ರದಲ್ಲಿರುವ ಮೀನುಗಳು, ಇತ್ಯಾದಿ. ಯಾವ ಸಂಪನ್ಮೂಲಗಳು ಹೊರ ತೆಗೆದು ಉಪಯೋಗಿಸಿದಂತೆಲ್ಲ ಬರಿದಾಗುತ್ತಾ ಹೋಗುತ್ತವೆಯೋ ಅಂತಹ ಸಂಪನ್ಮೂಲಗಳು ನವೀಕರಿಸಲಾಗದ ಸಂಪನ್ಮೂಲಗಳಾಗಿವೆ. ಉದಾ: ಪಳೆಯುಳಿಕೆ ಇಂಧನ.

2. ಇದು ತ್ಯಾಜ್ಯವನ್ನು ಹೀರಿಕೊಳ್ಳುತ್ತದೆ.
3. ಇದು ಜೀವ ವೈವಿಧ್ಯತೆ ಮತ್ತು ಅನುವಂಶೀಯತೆಯ ಮುಂದುವರಿಕೆಗೆ ಅವಕಾಶ ಒದಗಿಸುತ್ತದೆ.



**ಚಿತ್ರ : 9.1 ಜಲಮೂಲಗಳು : ಮಾಲಿನ್ಯಕ್ಕೊಳಗಾಗದ ಶುದ್ಧನೀರಿನ ಮೂಲಗಳುಳ್ಳ ಹಿಮದಿಂದ ಹರಿಯುವ ಹಿಮಾಲಯದ ಕೆಲವು ಸಣ್ಣ ತೊರೆಗಳು**

4. ಇದು ಮನಸ್ಸಿಗೆ ಮುದನೀಡುವ ಪ್ರಕೃತಿ ಸೌಂದರ್ಯ ದೃಶ್ಯಾವಳಿ ಇತ್ಯಾದಿಗಳನ್ನು ಒದಗಿಸುತ್ತದೆ. ಪರಿಸರದ ಈ ಕಾರ್ಯಗಳ ಮೇಲಿನ ಬೇಡಿಕೆಯು ಅದರ **ಧಾರಣಾಶಕ್ತಿಯ (carrying capacity)** ಮಿತಿಯೊಳಗೆ ಇರುವವರೆಗೆ ಪರಿಸರವು ಈ ಕಾರ್ಯಗಳನ್ನು ತಡೆರಹಿತವಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿರುತ್ತದೆ.

ಪರಿಸರದ ಮೇಲಿನ ಮಾನವ ಚಟುವಟಿಕೆಗಳ ಒತ್ತಡವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಪರಿಸರದ ಧಾರಣಶಕ್ತಿ ಎನ್ನುತ್ತಾರೆ. ಅಂದರೆ ಸಂಪನ್ಮೂಲಗಳ ಹೊರತೆಗೆಯುವಿಕೆಯು ಸಂಪನ್ಮೂಲಗಳ ಪುನರುತ್ಪತ್ತಿ ದರಕ್ಕಿಂತ ಹೆಚ್ಚಿರಬಾರದು ಮತ್ತು ತ್ಯಾಜ್ಯಗಳ ಸೃಷ್ಟಿಯ ಪ್ರಮಾಣವು ಪರಿಸರದ ಹೀರಿಕೊಳ್ಳುವ ಸಾಮರ್ಥ್ಯಕ್ಕಿಂತ ಕಡಿಮೆ ಇರಬೇಕು. ಹೀಗಾಗದಿದ್ದರೆ, ಪರಿಸರವು ತನ್ನ ಮೂರನೆಯ ಮಹತ್ವದ ಕಾರ್ಯ (ಜೀವ ವೈವಿಧ್ಯತೆ ಮತ್ತು ಅನುವಂಶೀಯತೆಯ ಮುಂದುವರಿಕೆಗೆ ಅವಕಾಶ ಒದಗಿಸುವುದು) ನಿರ್ವಹಿಸುವಲ್ಲಿ ವಿಫಲವಾಗಿ ಪರಿಸರ ಮಾಲಿನ್ಯ ಮತ್ತು ಅಸಮತೋಲನ ಸಮಸ್ಯೆ ಉದ್ಭವಿಸುತ್ತದೆ. ಇಂತಹ ಸನ್ನಿವೇಶವನ್ನು ಇಂದು ವಿಶ್ವದಾದ್ಯಂತ ಕಾಣುತ್ತಿದ್ದೇವೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ವೈಭವೋಪೇತ ವಸ್ತುಗಳ ಅನುಭೋಗ ಹಾಗೂ ಉತ್ಪಾದನೆಯ ಹೆಚ್ಚಳದಿಂದ ಪರಿಸರದ ಮೇಲೆ ಅಗಾಧವಾದ ಒತ್ತಡ ಬೀಳುತ್ತಿರುವುದರಿಂದ ಹಲವಾರು ಸಂಪನ್ಮೂಲಗಳು ನಶಿಸಿವೆ. ತ್ಯಾಜ್ಯಗಳ ಸೃಷ್ಟಿಯ ಪ್ರಮಾಣವು ಪರಿಸರದ



### ನೀವೇ ಮಾಡಿರಿ

- ನೀರು ಒಂದು ಆರ್ಥಿಕ ವಸ್ತುವಾಗುತ್ತಿದೆ. ಏಕೆ? ಚರ್ಚಿಸಿ.
- ಗಾಳಿ, ನೀರು, ಶಬ್ದಮಾಲಿನ್ಯಗಳಿಂದಾಗಿ ಕೆಲವು ಸಾಮಾನ್ಯ ರೋಗಗಳು ಕಂಡುಬರುತ್ತಿವೆ. ಈ ಕೆಳಗಿನ ಕೋಷ್ಟಕದಲ್ಲಿ ಅಂತಹ ರೋಗಗಳಿಗೆ ಉದಾಹರಣೆಗಳನ್ನು ಭರ್ತಿಮಾಡಿ.

| ವಾಯುಮಾಲಿನ್ಯ | ಜಲಮಾಲಿನ್ಯ | ಶಬ್ದಮಾಲಿನ್ಯ |
|---|---|---|
| ಅಸ್ತಮಾ | ಕಾಲರಾ | ಕಿವುಡುತನ |

**ಪೆಟ್ಟಿಗೆ 9.1 ಜಾಗತಿಕ ತಾಪಮಾನ (Global Warming)**

ಕೈಗಾರಿಕಾ ಕ್ರಾಂತಿಯ ನಂತರ ಹಸಿರುಮನೆ ಅನಿಲ ಹೊರಸೂಸುವಿಕೆ ಹೆಚ್ಚಾದ ಪರಿಣಾಮವಾಗಿ ಭೂಮಿಯ ಮೇಲ್ಮೈ ವಾತಾವರಣದಲ್ಲಿನ ಸರಾಸರಿ ಉಷ್ಣತೆಯು ನಿಧಾನವಾಗಿ ಏರಿಕೆಯಾಗುತ್ತಿರುವುದೇ ಜಾಗತಿಕ ತಾಪಮಾನ ಏರಿಕೆ. ಈ ಏರಿಕೆಯು ಮಾನವ ಪ್ರೇರಿತವಾಗಿದೆ. ಮಾನವನು ಹೆಚ್ಚು ಹೆಚ್ಚು ಅರಣ್ಯನಾಶ, ಪಳೆಯುಳಿಕೆ ಇಂಧನಗಳ ದಹನ ಮಾಡುತ್ತಿರುವುದರಿಂದ ಇಂಗಾಲದ ಡೈ ಆಕ್ಸೈಡ್ ಮತ್ತು ಹಸಿರುಮನೆ ಅನಿಲಗಳು ಹೆಚ್ಚಳವಾಗಿ ತಾಪಮಾನ ಏರಿಕೆಯಾಗುತ್ತದೆ. (ಇಂಗಾಲದ ಡೈ ಆಕ್ಸೈಡ್, ಮಿಥೇನ್ ಮುಂತಾದ ಅನಿಲಗಳಿಗೆ ಉಷ್ಣತೆಯನ್ನು ಹೀರಿಕೊಳ್ಳುವ ಶಕ್ತಿ ಇರುವುದರಿಂದ ಭೂಮಿಯ ಮೇಲ್ಮೈ ಉಷ್ಣತೆ ಏರುತ್ತದೆ.) 1750ರ ಕೈಗಾರಿಕಾ ಕ್ರಾಂತಿಯ ನಂತರ ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ಮಿಥೇನ್ ($CH_4$) ಅನಿಲಗಳ ಪ್ರಮಾಣ ಕ್ರಮವಾಗಿ ಶೇ0.31 ಮತ್ತು ಶೇ0.149 ರಷ್ಟು ಹೆಚ್ಚಾಗಿದೆ. ಕಳೆದ ಶತಮಾನದಲ್ಲಿ ವಾತಾವರಣದ ಉಷ್ಣತೆ 1.1 ಫ್ಯಾರನ್ ಹೀಟ್ (0.6 ಡಿಗ್ರಿ ಸೆಂಟಿಗ್ರೇಡ್) ನಷ್ಟು ಏರಿಕೆಯಾಗಿದ್ದು, ಸಮುದ್ರದ ನೀರಿನ ಮಟ್ಟ ಹಲವು ಇಂಚುಗಳಷ್ಟು ಅಧಿಕವಾಗಿದೆ. ಧ್ರುವಪ್ರದೇಶದ ಹಿಮ ಕರಗಿ ಸಮುದ್ರದ ನೀರಿನ ಮಟ್ಟ ಹೆಚ್ಚಾಗುವುದು ಮತ್ತು ಕರಾವಳಿ ಪ್ರದೇಶದಲ್ಲಿ ನೆರೆಹಾವಳಿ ಜಾಗತಿಕ ತಾಪಮಾನ ಏರಿಕೆಯ ದೀರ್ಘಾವಧಿ ಪರಿಣಾಮಗಳಾಗಿವೆ. ಹವಮಾನ ವೈಪರೀತ್ಯದಿಂದ ಆಗಾಗ ಬಿರುಗಾಳಿ ಬೀಸಬಹುದು ಮತ್ತು ಈ ಸಂದರ್ಭದಲ್ಲಿ ರೋಗರುಜಿನಗಳು ವ್ಯಾಪಕವಾಗಿ ಹರಡಬಹುದು, ಅಲ್ಲದೆ ಇದರಿಂದ ಕುಡಿಯುವ ನೀರಿನ ಪೂರೈಕೆಗೆ ಅಡ್ಡಿಯಾಗುವುದು, ಈ ಕಾರಣದಿಂದ ಜೈವಿಕ ಪರಿಸರ ವ್ಯವಸ್ಥೆ ಕಣ್ಮರೆಯಾಗುವ ಸಾಧ್ಯತೆ ಹೆಚ್ಚಾಗಿದೆ.

ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಇಂಧನಗಳ ದಹನದಿಂದ ಮತ್ತು ಅರಣ್ಯನಾಶದಿಂದ ವಾತಾವರಣದಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣ ಹೆಚ್ಚಾಗುತ್ತಿದೆ. ಹಾಗೆಯೇ ಪ್ರಾಣಿಗಳ ತ್ಯಾಜ್ಯದಿಂದ ಮಿಥೇನ್ ಅನಿಲ ಬಿಡುಗಡೆ ಹೆಚ್ಚಾಗುತ್ತಿದೆ. ಜಾನುವಾರುಗಳ ಸಾಕಣೆ ಹೆಚ್ಚಾಗುತ್ತಿರುವುದರಿಂದ ಅರಣ್ಯನಾಶವಾಗುತ್ತಿದೆ ಮತ್ತು ಪಳೆಯುಳಿಕೆ ಇಂಧನದ ಬಳಕೆಯೂ ಹೆಚ್ಚಾಗುತ್ತಿದೆ. 1997 ರಲ್ಲಿ ಜಪಾನ್ ನ ಕ್ಯೋಟೋದಲ್ಲಿ ನಡೆದ ವಾತಾವರಣದ ಬದಲಾವಣೆ ಮೇಲಿನ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಜಾಗತಿಕ ತಾಪಮಾನ ಏರಿಕೆ ವಿರುದ್ಧ ಹೋರಾಟ ಮಾಡುವ ಅಂತಾರಾಷ್ಟ್ರೀಯ ಒಪ್ಪಂದ ಮಾಡಿಕೊಳ್ಳಲಾಯಿತು. ಈ ಸಮಾವೇಶ ಕೈಗಾರಿಕೀಕರಣಗೊಂಡ ರಾಷ್ಟ್ರಗಳಿಗೆ ಹಸಿರುಮನೆ ಅನಿಲ ವಿಸರ್ಜನೆಯನ್ನು ಕಡಿಮೆ ಮಾಡಲು ಕರೆ ನೀಡಿದೆ.

**ಮೂಲ:** www.wikipedia.org

ಹೀರಿಕೊಳ್ಳುವ ಸಾಮರ್ಥ್ಯಕ್ಕಿಂತ ಹೆಚ್ಚಾಗಿದೆ. ಪರಿಸರದ ಹೀರಿಕೊಳ್ಳುವ ಸಾಮರ್ಥ್ಯವೆಂದರೆ ಪರಿಸರದ ಮಾಲಿನ್ಯವನ್ನು ಅರಗಿಸಿಕೊಳ್ಳುವ ಶಕ್ತಿ ಎಂದರ್ಥ. ಇದರ ಪರಿಣಾಮವಾಗಿ ಇಂದು ನಾವು ಪರಿಸರದ ಬಿಕ್ಕಟ್ಟಿನ ಹೊಸ್ತಿಲಿನಲ್ಲಿದ್ದೇವೆ. ಇಲ್ಲಿಯವರೆಗೆ ಸಾಧಿಸಿರುವ ಅಭಿವೃದ್ಧಿಯು ನದಿಗಳನ್ನು ಕಲುಷಿತಗೊಳಿಸಿದೆ ಮತ್ತು ನದಿಗಳು ಹಾಗೂ ಜಲಮೂಲಗಳು (aquifers) ಬತ್ತಿಹೋಗಿ ನೀರು ಒಂದು ಆರ್ಥಿಕ ವಸ್ತುವಾಗಿ ಪರಿಣಮಿಸಿದೆ. ಇದರೊಂದಿಗೆ ಸಂಪನ್ಮೂಲಗಳ ತೀವ್ರವಾದ ಮತ್ತು ವ್ಯಾಪಕವಾದ ಬಳಕೆಯಿಂದ ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳೆರಡರಲ್ಲೂ ಅಮೂಲ್ಯ ಸಂಪನ್ಮೂಗಳು ನಾಶವಾಗಿವೆ ಮತ್ತು ಹೊಸ ಸಂಪನ್ಮೂಲಗಳ ಶೋಧಕಾರ್ಯ ಮತ್ತು ತಂತ್ರಜ್ಞಾನಕ್ಕಾಗಿ ನಾವು ಬಾರೀ ಪ್ರಮಾಣದ ಹಣವನ್ನು ವ್ಯಯ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ. ಇದಲ್ಲದೆ ಪರಿಸರ ಗುಣಮಟ್ಟದ ಕುಸಿತದಿಂದ ಆರೋಗ್ಯ ರಕ್ಷಣೆಗಾಗಿ ಭಾರೀ ಬೆಲೆ ತೆರಬೇಕಾಗಿದೆ. ವಾಯುಮಾಲಿನ್ಯ, ಜಲಮಾಲಿನ್ಯದಿಂದಾಗಿ (ಭಾರತದಲ್ಲಿ ಶೇ.70ರಷ್ಟು ಭಾಗ ನೀರು ಕಲುಷಿತವಾಗಿದೆ.) ಉಸಿರಾಟದ ತೊಂದರೆ ಮತ್ತು ನೀರಿನಿಂದ ಜನ್ಯವಾಗುವ ರೋಗಗಳು ಉಲ್ಬಣಿಸಿವೆ. ಆದ್ದರಿಂದ ಆರೋಗ್ಯ ರಕ್ಷಣೆಗಾಗಿ ಮಾಡುವ ವೆಚ್ಚವೂ ಗಣನೀಯವಾಗಿ ಏರಿಕೆಯಾಗಿದೆ. ಕಲುಷಿತ ನದಿಗಳು, ಜಾಗತಿಕ ತಾಪಮಾನ ಏರಿಕೆ, ಓಝೋನ್ ಪದರದ ನಾಶ ಮುಂತಾದ ಜಾಗತಿಕ ಪರಿಸರ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರಗಳ ಮೇಲೆ ಆರ್ಥಿಕ ಹೊರೆ

**ಪೆಟ್ಟಿಗೆ 9.2: ಓರ್ಝೋನ್ ಪದರದ ನಾಶ (ozone depletion)**

ಸ್ತರಗೋಲದಲ್ಲಿ (stratosphere) ಓರ್ಝೋನ್ ಅಂಶವು ಕ್ಷೀಣಿಸುವುದನ್ನು ಓರ್ಝೋನ್ ಪದರದ ನಾಶ ಎನ್ನುತ್ತಾರೆ. ಏರ್‌ಕಂಡೀಶನ್ ಯಂತ್ರಗಳಲ್ಲಿ ಮತ್ತು ರೆಫ್ರಿಜರೇಟರ್‌ಗಳಲ್ಲಿ ತಂಪುಕಾರಕಗಳಾಗಿ ಬಳಸುವ ಕ್ಲೋರೋಫ್ಲೋರೋ ಕಾರ್ಬನ್ (CFC) ಸಂಯುಕ್ತಕ ಮತ್ತು ಬೆಂಕಿ ನಂದಿಸುವ ಸಾಧನಗಳಲ್ಲಿ ಬಳಸುವ ಬ್ರೋಮೋಫ್ಲೋರೋ ಕಾರ್ಬನ್ ಸಂಯುಕ್ತಕಗಳನ್ನು ವಾಯುಮಂಡಲಕ್ಕೆ ಬಿಡುಗಡೆ ಮಾಡುವುದರಿಂದ ಓರ್ಝೋನ್ ಪದರದ ಕ್ಷೀಣತೆಯ ಸಮಸ್ಯೆ ಉದ್ಭವಿಸುತ್ತದೆ. ಇದರ ಪರಿಣಾಮವಾಗಿ ಸೂರ್ಯನ ಅತಿನೇರಳೆ ಕಿರಣಗಳು ಭೂಮಿಯ ವಾತಾವರಣಕ್ಕೆ ಪ್ರವೇಶಿಸಿ, ಭೂಮಿಯ ಮೇಲಿರುವ ಜೀವ ಸಂಕುಲಕ್ಕೆ ಹಾನಿ ಉಂಟುಮಾಡುತ್ತದೆ. ಅತಿನೇರಳೆ ಕಿರಣಗಳು ಮಾನವನಿಗೆ ಚರ್ಮದ ಕ್ಯಾನ್ಸರ್ ಬರಲೂ ಕಾರಣವಾಗುತ್ತವೆ. ಹಾಗೂ ಭೂಮಿಯ ಮೇಲೆ ಬೆಳೆಯುವ ಸಸ್ಯಗಳು ಹಾಗೂ ಜಲಚರಗಳ ನಾಶಕ್ಕೆ ಕಾರಣವಾಗುತ್ತದೆ. 1979ರಿಂದ 1990ರವರೆಗೆ ಓರ್ಝೋನ್ ಪದರ ಸುಮಾರು ಶೇ.5ರಷ್ಟು ಕ್ಷೀಣಿಸಿದೆ ಎಂದು ಸಂಶೋಧಿಸಲಾಗಿತ್ತು. ಓರ್ಝೋನ್ ಪದರವು ಭೂಮಿಯ ವಾತಾವರಣಕ್ಕೆ ಅತ್ಯಂತ ಅಪಾಯಕಾರಿ ತರಂಗಾಂತರವುಳ್ಳ ಅತಿನೇರಳೆ ಕಿರಣಗಳನ್ನು ತಡೆಯುವುದರಿಂದ, ಅದರ ಕ್ಷೀಣತೆಯ ವಿರುದ್ಧ ವಿಶ್ವದಾದ್ಯಂತ ಕಾಳಜಿ ವ್ಯಕ್ತವಾಗಿದೆ. ಓರ್ಝೋನ್ ಪದರದ ನಾಶಕ್ಕೆ ಕಾರಣವಾಗುವ ಕ್ಲೋರೋಫ್ಲೋರೋಕಾರ್ಬನ್ (CFC) ಮತ್ತು ಕಾರ್ಬನ್ ಟೆಟ್ರಾಕ್ಲೋರೈಡ್, ಟ್ರೈಕ್ಲೋರೋಥೇನ್ (ಮೀಥೈಲ್ ಕ್ಲೋರೊಫಾರ್ಮ) ಬ್ರೋಮಿನ್ ಸಂಯುಕ್ತತೆ ಮುಂತಾದವುಗಳ ಬಳಕೆಯನ್ನು ನಿಷೇಧಿಸುವ "ಮಾಂಟ್ರಿಯಲ್ ಪ್ರೋಟೋಕಾಲ್" ಜಾರಿಗೆ ತರಲು ಇದು ಕಾರಣವಾಯಿತು.

**ಮೂಲ :** www.ceu.hu

ಅಧಿಕವಾಗುತ್ತಿದೆ. ಹೀಗಾಗಿ ಪರಿಸರದ ಮೇಲಿನ ಋಣಾತ್ಮಕ ಪರಿಣಾಮಗಳ ಸದಾವಕಾಶ ವೆಚ್ಚವು (opportunity costs) ಹೆಚ್ಚಾಗಿದೆ ಎಂಬುದು ಸ್ಪಷ್ಟವಾಗುತ್ತಿದೆ.

ಹಾಗಾದರೆ ಅತಿದೊಡ್ಡ ಪ್ರಶ್ನೆ ಎಂದರೆ ಪರಿಸರ ಸಮಸ್ಯೆಗಳು ಈ ಶತಮಾನದ ಹೊಸ ಸಮಸ್ಯೆಗಳೇ? ಹೌದಾದರೆ ಏಕೆ? ಈ ಸಮಸ್ಯೆಯ ಉತ್ತರಕ್ಕೆ ಕೆಲವು ವಿವರಣೆಯ ಅಗತ್ಯವಿದೆ. ಆರಂಭಿಕ ದಿನಗಳಲ್ಲಿ ನಾಗರೀಕತೆ ಉದಯವಾಗುವಾಗ ಅಥವಾ ಜನಸಂಖ್ಯೆಯ ಭಾರೀ ಏರಿಕೆಯ ಪೂರ್ವದಲ್ಲಿ ಮತ್ತು



**ಚಿತ್ರ 9.2: ದಾಮೋದರ ಕಣಿವೆಯು ಭಾರತದ ಅತೀ ಹೆಚ್ಚು ಕೈಗಾರಿಕೆ ಕರಣಗೊಂಡ ಪ್ರದೇಶಗಳಲ್ಲಿ ಒಂದಾಗಿದೆ. ದಾಮೋದರ ನದಿಯ ದಂಡೆ ಯಲ್ಲಿರುವ ಕೈಗಾರಿಕೆಗಳ ಮಾಲಿನ್ಯಕಾರಕಗಳು ಪರಿಸರ ವಿಕೋಪಗಳನ್ನು ಸೃಷ್ಟಿಸುತ್ತಿವೆ.**

ದೇಶಗಳು ಕೈಗಾರಿಕೀಕರಣಗೊಳ್ಳುವ ಮೊದಲು ಪರಿಸರದ ಸಂಪನ್ಮೂಲಗಳಿಗೆ ಮತ್ತು ಸಂಪನ್ಮೂಲಗಳ ಬಳಕೆಯ ದರ ಸಂಪನ್ಮೂಲಗಳ ಪುನರುತ್ಪತ್ತಿ ದರಕ್ಕಿಂತ ಕಡಿಮೆ ಇತ್ತು. ಆದ್ದರಿಂದ ಪರಿಸರ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಆದರೆ ಜನಸಂಖ್ಯಾಸ್ಫೋಟ ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯ ಅಗತ್ಯತೆಗಳನ್ನು ಪೂರೈಸಲು ಕೈಗಾರಿಕಾ ಕ್ರಾಂತಿ ಸಂಭವಿಸಿದ್ದರಿಂದ ಚಿತ್ರಣ ಬದಲಾಗಿ ಹೋಯಿತು. ತತ್ಪರಿಣಾಮವಾಗಿ ಉತ್ಪಾದನೆ ಮತ್ತು ಅನುಭೋಗಕ್ಕಾಗಿ ಸಂಪನ್ಮೂಲಗಳ ಬೇಡಿಕೆಯ ದರವು ಪುನರುತ್ಪತ್ತಿ ದರಕ್ಕಿಂತ ಅಧಿಕವಾದ್ದರಿಂದ, ಪರಿಸರದ ಹೀರಿಕೊಳ್ಳುವ ಸಾಮರ್ಥ್ಯದ ಮೇಲೆ ಒತ್ತಡ ಭಾರೀ ಹೆಚ್ಚಳವಾಯಿತು. ಅದೇ ಪ್ರವೃತ್ತಿ ಇಂದೂ ಸಹ ಮುಂದುವರೆದಿದೆ. ಹೀಗೆ ಪರಿಸರದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಪೂರೈಕೆ ಮತ್ತು ಬೇಡಿಕೆ ಪ್ರಮಾಣಗಳು ತಿರುವುಮುರುವಾದವು. ಈಗ ನಾವು ಪರಿಸರದ ಸಂಪನ್ಮೂಲಗಳು ಮತ್ತು ಸೇವೆಗಳಿಗೆ ಹೆಚ್ಚಾಗಿರುವ ಬೇಡಿಕೆಯ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಆದರೆ ಅತಿಯಾದ ಬಳಕೆ ಮತ್ತು ದುರ್ಬಳಕೆಯಿಂದ ಪರಿಸರ ಸಂಪನ್ಮೂಲಗಳ ಪೂರೈಕೆ ಸೀಮಿತವಾಗಿದೆ. ಅದ್ದರಿಂದ ತ್ಯಾಜ್ಯಗಳ ಉತ್ಪತ್ತಿ, ಮಾಲಿನ್ಯ ಸಮಸ್ಯೆಗಳು ಸಂದಿಗ್ಧತೆಯನ್ನು ಉಂಟುಮಾಡಿವೆ.

## 9.3 ಭಾರತದ ಪರಿಸರದ ಸ್ಥಿತಿಗತಿ (STATE OF INDIA'S ENVIRONMENT)

ಭಾರತವು ಹೇರಳವಾದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದೆ. ಉದಾ: ಫಲವತ್ತಾದ ಮಣ್ಣು, ನೂರಾರು ನದಿಗಳು ಮತ್ತು ಉಪನದಿಗಳು, ನಿತ್ಯಹರಿದ್ವರ್ಣ ಕಾಡುಗಳು, ಭೂಗರ್ಭದಲ್ಲಿರುವ ಅನಿಲ ನಿಕ್ಷೇಪಗಳು, ವಿಶಾಲವಾಗಿ ಮೈಚಾಚಿರುವ ಹಿಂದೂ ಮಹಾಸಾಗರ, ಪರ್ವತಗಳ ಶ್ರೇಣಿ ಇತ್ಯಾದಿ. ದಖನ್ ಪ್ರಸ್ಥಭೂಮಿಯ ಕಪ್ಪುಮಣ್ಣು ವಿಶೇಷವಾಗಿ ಹತ್ತಿ ಬೆಳೆಯಲು ಯೋಗ್ಯವಾಗಿದೆ. ಇದರಿಂದಾಗಿ ಈ ಭಾಗದಲ್ಲಿ ಜವಳಿ ಉದ್ಯಮಗಳು ಹೆಚ್ಚು ಕೇಂದ್ರೀಕೃತವಾಗಿವೆ. ಅರಬ್ಬೀ ಸಮುದ್ರದಿಂದ ಬಂಗಾಳಕೊಲ್ಲಿಯವರೆಗೂ ವಿಸ್ತಾರವಾಗಿ ಹರಡಿರುವ ಸಿಂಧೂ-ಗಂಗಾನದಿ ಬಯಲು ಪ್ರದೇಶ ಜಗತ್ತಿನಲ್ಲಿಯೇ ಶ್ರೇಷ್ಠ ಫಲವತ್ತತೆ ಹೊಂದಿದ್ದು, ಬಹುಭಾಗ ಸಾಗುವಳಿ ಮಾಡಲಾಗುತ್ತಿದ್ದು ಅಧಿಕ ಜನಸಂಖ್ಯೆಯನ್ನು ಹೊಂದಿದ ಪ್ರದೇಶವಾಗಿದೆ. ಭಾರತದ ಅರಣ್ಯಗಳು ಅಲ್ಲಲ್ಲಿ ಚದುರಿದಂತೆ ಹಂಚಿಕೆಯಾಗಿದ್ದರೂ, ಬಹಳಷ್ಟು ಜನರಿಗೆ ಹಸಿರು ಹೊದಿಕೆ ಹಾಗೂ ವನ್ಯಪ್ರಾಣಿಗಳಿಗೆ ಪ್ರಾಕೃತಿಕ ಹೊದಿಕೆ ಒದಗಿಸಿವೆ. ಭಾರತದಲ್ಲಿ ಹೇರಳವಾದ ಕಬ್ಬಿಣದ ಅದಿರಿನ ನಿಕ್ಷೇಪ, ಕಲ್ಲಿದ್ದಲ ನಿಕ್ಷೇಪ ಮತ್ತು ನೈಸರ್ಗಿಕ ಅನಿಲಗಳ ಲಭ್ಯತೆ ಇದೆ. ಜಗತ್ತಿನ ಒಟ್ಟು ಕಬ್ಬಿಣದ ಅದಿರಿನ ನಿಕ್ಷೇಪದ ಸಂಗ್ರಹದಲ್ಲಿ ಶೇ.20 ರಷ್ಟು ಕಬ್ಬಿಣದ ಅದಿರು ಭಾರತದಲ್ಲಿಯೇ ಸಿಗುತ್ತದೆ. ಬಾಕ್ಸೈಟ್, ತಾಮ್ರ, ಕ್ರೋಮೈಟ್, ವಜ್ರ, ಬಂಗಾರ, ಸೀಸ, ಲಿಗ್ನೈಟ್, ಮ್ಯಾಂಗನೀಸ್, ಸತು, ಯುರೇನಿಯಂ ಮುಂತಾದ ಖನಿಜಗಳು ದೇಶದ ವಿವಿಧ ಭಾಗಗಳಲ್ಲಿ ದೊರೆಯುತ್ತಿವೆ. ಏನೇ ಆದರೂ ಭಾರತದ ಅಭಿವೃದ್ಧಿ ಚಟುವಟಿಕೆಗಳು ಮಾನವನ ಆರೋಗ್ಯ ಮತ್ತು ಕಲ್ಯಾಣದ ಮೇಲೆ ಪರಿಣಾಮ ಬೀರುವುದರ ಜೊತೆಗೆ, ಸೀಮಿತ ಲಭ್ಯತೆ ಇರುವ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಕೂಡಾ ಒತ್ತಡ ಬೀರುತ್ತಿವೆ. ಭಾರತದ ಪರಿಸರದ ಗುಣಮಟ್ಟಕ್ಕೆ ಎರಡು ಮಾರ್ಗಗಳಿಂದ ಬೆದರಿಕೆಯಿದೆ – ಬಡತನ ಪ್ರೇರಿತ (poverty induced) ಅಂಶಗಳಿಂದಾಗುವ ಪರಿಸರ ಅವನತಿ, ಅದೇ ರೀತಿ ವೈಭವೋಪೇತ ಜೀವನ ಸಂಸ್ಕೃತಿ ಮತ್ತು



**ಚಿತ್ರ 9.3: ಅರಣ್ಯ ನಾಶವು ಭೂಮಿಯ ಅವನತಿ, ಜೀವ ವೈವಿಧ್ಯತೆಯ ನಷ್ಟ ಮತ್ತು ವಾಯುಮಾಲಿನ್ಯಕ್ಕೆ ಕಾರಣವಾಗಿದೆ**

ತೀವ್ರ ಕೈಗಾರಿಕೀಕರಣದಿಂದಾಗುತ್ತಿರುವ ಮಾಲಿನ್ಯಗಳ ಬೆದರಿಕೆಯಿಂದಾಗಿ ನಮ್ಮ ಪರಿಸರವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದೆ. ವಾಯುಮಾಲಿನ್ಯ, ಜಲಮಾಲಿನ್ಯ, ಭೂಸವಕಳಿ, ಅರಣ್ಯನಾಶ, ವನ್ಯಜೀವಿಗಳ ನಾಶ ಮುಂತಾದ ಅಂಶಗಳು ನಮ್ಮ ಪರಿಸರದ ಸಮಸ್ಯೆಯ ಮೇಲೆ ಅತೀ ಹೆಚ್ಚು ಒತ್ತಡ ಬೀರುವ ಅಂಶಗಳಾಗಿವೆ. ಇದಕ್ಕೆ ಸಂಬಂಧಿಸಿದಂತೆ ಆದ್ಯತೆಯ ಮೇಲೆ ಗುರುತಿಸಲಾದ ಸಮಸ್ಯೆಗಳೆಂದರೆ– 1) ಕ್ಷೀಣಿಸುತ್ತಿರುವ ಭೂಮಿಯ ಗುಣಮಟ್ಟ 2) ಜೀವವೈವಿಧ್ಯತೆಯ ಹಾನಿ 3) ವಾಯುಮಾಲಿನ್ಯ–ವಿಶೇಷವಾಗಿ ನಗರಪ್ರದೇಶಗಳಲ್ಲಿ ವಾಹನಗಳಿಂದ ಉಂಟಾಗುತ್ತಿರುವ ಮಾಲಿನ್ಯ 4) ಶುದ್ಧನೀರಿನ ನಿರ್ವಹಣೆ ಮತ್ತು 5) ಘನತ್ಯಾಜ್ಯ ನಿರ್ವಹಣೆ ಸುಸ್ಥಿರವಲ್ಲದ ಬಳಕೆ ಮತ್ತು ಅನುಚಿತ ನಿರ್ವಹಣಾ ಪದ್ಧತಿಯಿಂದಾಗಿ ಭಾರತದಲ್ಲಿ ಭೂಮಿಯು ವಿವಿಧ ರೀತಿಯಲ್ಲಿ ಮತ್ತು ಶ್ರೇಣಿಯಲ್ಲಿ ನಷ್ಟ ಹೊಂದುತ್ತಿದೆ. ಭೂಮಿಯ ಗುಣಮಟ್ಟದ ಕ್ಷೀಣತೆಗೆ ಕಾರಣವಾಗುವ ಅಂಶಗಳೆಂದರೆ (Factors responsible for land degradation):

1) ಅರಣ್ಯನಾಶದಿಂದಾಗುವ ಸಸ್ಯ ಸಂಕುಲಗಳನಾಶ
2) ಉರುವಲು ಕಟ್ಟಿಗೆ ಮತ್ತು ಮೇವನ್ನು ಸುಸ್ಥಿರವಾದ ರೀತಿಯಲ್ಲಿ ಉಪಯೋಗಿಸದಿರುವುದು.
3) ಸ್ಥಳಾಂತರ ಬೇಸಾಯ
4) ಅರಣ್ಯ ಭೂಮಿ ಒತ್ತುವರಿ.

**ಪೆಟ್ಟಿಗೆ 9.3 ಚಿಪ್ಕೊ ಅಥವಾ ಅಪ್ಪಿಕೋ– ಈ ಹೆಸರಿನಲ್ಲೇನಿದೆ?**

ಹಿಮಾಲಯದ ಅರಣ್ಯವನ್ನು ರಕ್ಷಿಸುವ ಉದ್ದೇಶವನ್ನಿಟ್ಟುಕೊಂಡ ಕೈಗೊಂಡ ಚಿಪ್ಕೊ ಚಳುವಳಿ ಬಗ್ಗೆ ನಿಮಗೆ ತಿಳಿದಿರಬಹುದು. ಅದೇ ಪ್ರಕಾರ "ಅಪ್ಪಿಕೋ ಚಳುವಳಿ" ಹೆಸರಿನಲ್ಲಿ ಕರ್ನಾಟಕದಲ್ಲೂ ಅಂತಹ ಆಂದೋಲನ ನಡೆಯಿತು. ಇಲ್ಲಿ ಅಪ್ಪಿಕೋ ಎಂದರೆ ಮರಗಳನ್ನು ತಬ್ಬಿಕೊಳ್ಳುವುದು ಎಂದರ್ಥ. 1983ರ ಸಪ್ಟೆಂಬರ್ 8ನೇ ತಾರೀಕು 160 ಜನ ಪುರುಷರು, ಮಹಿಳೆಯರು ಮತ್ತು ಮಕ್ಕಳು ಮರಗಳನ್ನು ಕಡಿಯುವವರಿಂದ ಮರಗಳನ್ನು ರಕ್ಷಿಸಲು ಮರಗಿಡಗಳನ್ನು ತಬ್ಬಿಕೊಂಡು ಪ್ರತಿರೋಧ ವ್ಯಕ್ತಪಡಿಸಿದರು. ಅನಾವಶ್ಯಕವಾಗಿ ಮರ ಕಡಿಯುವುದನ್ನು ನಿಲ್ಲಿಸುವಂತೆ ಅಧಿಕಾರಿಗಳು ಆದೇಶಿಸುವವರೆಗೆ ಇದು ಮುಂದುವರೆಯಿತು.

ಈ ಘಟನೆ ಜನರಲ್ಲಿ ಅರಣ್ಯಗಳನ್ನು ರಕ್ಷಿಸುವ ಬಗ್ಗೆ ಭರವಸೆ ಮತ್ತು ಆತ್ಮ ವಿಶ್ವಾಸವನ್ನು ಮೂಡಿಸಿತು. ಇದರಿಂದಾಗಿ ಜನರು 12,000 ಮರಗಳನ್ನು ರಕ್ಷಿಸಿದರು. ಕೆಲವೇ ತಿಂಗಳುಗಳಲ್ಲಿ ಈ ಸುದ್ದಿ ಅಕ್ಕಪಕ್ಕದ ಜಿಲ್ಲೆಗಳಿಗೂ ಪಸರಿಸಿತು.



ಉರುವಲಿಗಾಗಿ ಮತ್ತು ಕೈಗಾರಿಕಾ ಉದ್ದೇಶಗಳಿಗಾಗಿ ಮರಗಳನ್ನು ವಿವೇಚನೆ ಇಲ್ಲದೆ ಕಡಿಯುವುದು ಅನೇಕ ಪರಿಸರ ಸಮಸ್ಯೆಗಳಿಗೆ ಕಾರಣವಾಗುತ್ತದೆ. 12 ವರ್ಷಗಳ ನಂತರ ಕರ್ನಾಟಕ ಉತ್ತರಕನ್ನಡ ಜಿಲ್ಲೆಯಲ್ಲಿ ಒಂದು ಕಾಗದದ ಕಾರ್ಖಾನೆ ಸ್ಥಾಪನೆಯಾಯಿತು. ಇದರಿಂದ ಅ ಪ್ರದೇಶದಲ್ಲಿ ಬಿದಿರು ನಾಶವಾಯಿತು. ಮಳೆಯಿಂದ ಸವಕಳಿಯನ್ನು ತಡೆಗಟ್ಟುವ ದೊಡ್ಡ ದೊಡ್ಡ ಮರಗಳನ್ನು ಕಡಿಯಲಾಯಿತು. ಪರಿಣಾಮವಾಗಿ ಮಣ್ಣಿನ ಸವೆತ ಉಂಟಾಗಿ, ಫಲವತ್ತತೆ ಕೊಚ್ಚಿ ಹೋಗಿ, ಕೇವಲ ಮುರಮಣ್ಣು ಮಾತ್ರ ಉಳಿದು, ಅಲ್ಲಿ ಕಳೆ ಹೊರತು ಪಡಿಸಿದರೆ ಮತ್ತೇನು ಬೆಳೆಯುವುದಿಲ್ಲ. ನದಿಗಳು, ತೋಡು, ಹಳ್ಳಗಳು ಬೇಗನೆ ಬತ್ತಿ ಹೋಗಿ, ಮಳೆ ಅಸ್ಥಿರವಾಗಿದೆ. ಹೊಸ ಹೊಸ ಕ್ರಿಮಿಕೀಟಗಳು ಮತ್ತು ರೋಗಗಳು ಬೆಳೆಗಳನ್ನು ಬಾದಿಸುತ್ತವೆ ಎಂದು ಆ ಭಾಗದ ರೈತರು. ದೂರುತ್ತಿದ್ದಾರೆ. ಅರಣ್ಯ ಗುತ್ತಿಗೆದಾರರಿಗೆ ಮತ್ತು ಅರಣ್ಯಾಧಿಕಾರಿಗಳು ಕೆಲವು ನಿಯಮ ನಿಬಂಧನೆಗಳನ್ನು ಅನುಸರಿಸುವಂತೆ ಅಪ್ಪಿಕೋ ಕಾರ್ಯಕರ್ತರು ಮನವಿ ಮಾಡಿಕೊಂಡರು. ಉದಾ:– ಕಡಿಯುವ ಮರಗಳನ್ನು ಗುರುತಿಸುವಾಗ ಸ್ಥಳೀಯ ಜನರನ್ನು ಸಂಪರ್ಕಿಸಿ, ಸಲಹೆ ಪಡೆಯಬೇಕು, ನೀರಿನ ಮೂಲಗಳಿಂದ 100 ಮೀಟರ್ ಒಳಗೆ ಇರುವ ಮರಗಳನ್ನು ಮತ್ತು 30 ಡಿಗ್ರಿ ಮತ್ತು ಅದಕ್ಕಿಂತ ಹೆಚ್ಚು ಇಳಿಜಾರು ಪ್ರದೇಶದಲ್ಲಿರುವ ಮರಗಳನ್ನು ಕಡಿಯಬಾರದು.

ಅರಣ್ಯ ಉತ್ಪನ್ನಗಳು ಮತ್ತು ಕಚ್ಚಾವಸ್ತುಗಳನ್ನು ಉಪಯೋಗಿಸಲು ಅರಣ್ಯ ಭೂಮಿಯನ್ನು ಸರಕಾರ ಕೈಗಾರಿಕೆಗಳಿಗೆ ಹಂಚುವುದು ನಿಮಗೆ ತಿಳಿದಿದೆಯಲ್ಲವೇ? ಕಾಗದದ ಕಾರ್ಖಾನೆ 10,000 ಕಾರ್ಮಿಕರಿಗೆ ಹಾಗೂ ಒಂದು ಪ್ಲೈವುಡ್ ಕಾರ್ಖಾನೆ 800 ಜನರಿಗೆ ಉದ್ಯೋಗ ನೀಡಿದರೂ, ಲಕ್ಷಗಟ್ಟಲೆ ಜನರ ದೈನಂದಿನ ಅಗತ್ಯತೆಗಳನ್ನು ಕಸಿದುಕೊಳ್ಳುವುದು ನ್ಯಾಯೋಚಿತವೆಂದು ನೀವು ಭಾವಿಸುವಿರಾ?

**ಮೂಲ:** ಸ್ಟೇಟ್ ಅಫ್ ಇಂಡಿಯಾಸ್ ಎನವಿರಾನ್‌ಮೆಂಟ್ 2 : ದ ಸೆಕೆಂಡ್ ಸಿಟಿಜನ್ಸ್ ರಿಪೋರ್ಟ' 1984–85, ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್‌ವಿರಾನ್‌ಮೆಂಟ್ 1996, ನವದೆಹಲಿ.



## ನೀವೇ ಮಾಡಿರಿ

➢ ಆರ್ಥಿಕ ಅಭಿವೃದ್ಧಿಗೆ ಪರಿಸರದ ಕೊಡುಗೆಯನ್ನು ತಿಳಿಯಲು ಈ ಕೆಳಗಿನ ಆಟವನ್ನು ಪರಿಚಯಿಸಬಹುದು. ಒಬ್ಬ ವಿದ್ಯಾರ್ಥಿ ಯಾವುದಾದರೊಂದು ಉದ್ಯಮ ಅಥವಾ ಕೃಷಿರಂಗ ಬಳಸುವ ಒಂದು ಉತ್ಪನ್ನವನ್ನು ಹೆಸರಿಸಬೇಕು. ಇನ್ನೊಬ್ಬ ವಿದ್ಯಾರ್ಥಿ ಆ ಉತ್ಪನ್ನದ ಮೂಲವನ್ನು ಗುರುತಿಸಬೇಕು.

ಟ್ರಕ್ಕುಗಳು ← ಸ್ಟೀಲ್ ಮತ್ತು ರಬ್ಬರ್

ಸ್ಟೀಲು ← ಕಬ್ಬಿಣ ← ಖನಿಜ ← ಭೂಮಿ

ರಬ್ಬರ್ ← ಮರಗಳು ← ಅರಣ್ಯ ← ಭೂಮಿ

ಪುಸ್ತಕಗಳು ← ಪೇಪರ್ ← ಮರಗಳು ← ಹಣ್ಣು ← ಭೂಮಿ

ಬಟ್ಟೆ ← ಹತ್ತಿ ← ಗಿಡ ← ಪ್ರಕೃತಿ

ಪೆಟ್ರೋಲ್ ← ಭೂಮಿ

ಯಂತ್ರ ← ಕಬ್ಬಿಣ ← ಖನಿಜ ← ಭೂಮಿ

➢ ಒಂದು ಟ್ರಕ್ಕು ಕಪ್ಪು ಹೊಗೆಯನ್ನು ಹೊರಸೂಸಿದ್ದಕ್ಕಾಗಿ ಟ್ರಕ್ ಡ್ರೈವರ್ ರೂ.1,000 ವನ್ನು ಚಲನ್ ಮೂಲಕ ದಂಡ ಪಾವತಿ ಮಾಡಬೇಕಾಯಿತು. ಅವನನ್ನು ದಂಡನೆಗೆ ಗುರಿ ಮಾಡಲಾಯಿತು ಎಂದು ನೀವು ಏಕೆ ತಿಳಿಯುವಿರಿ? ಅದು ನ್ಯಾಯ ಸಮ್ಮತವೇ? ಚರ್ಚಿಸಿ.

ಪ್ರಪಂಚದ ಒಟ್ಟು ಭೂಪ್ರದೇಶದಲ್ಲಿ ಶೇ.2.5ರಷ್ಟು ಭೂಪ್ರದೇಶ ಹೊಂದಿರುವ ಭಾರತ ಜಗತ್ತಿನ ಜನಸಂಖ್ಯೆಯ ಸುಮಾರು ಶೇ.17ರಷ್ಟು ಮತ್ತು ಶೇ.20ರಷ್ಟು ಜಾನುವಾರುಗಳನ್ನು ಪೋಷಿಸುತ್ತಿದೆ. ಜನಸಂಖ್ಯೆ ಮತ್ತು ಜಾನುವಾರು ದಟ್ಟಣೆ ಹಾಗೂ ಅರಣ್ಯೀಕರಣ, ಕೃಷಿ, ಹುಲ್ಲುಗಾವಲು, ಜನವಸತಿ, ಕೈಗಾರಿಕೆಗಳ ಸ್ಥಾಪನೆ ಮುಂತಾದ ಉದ್ದೇಶಗಳಿಗೆ ಭೂಮಿಯ ಬಳಕೆ ಅಧಿಕವಾಗುತ್ತಿರುವುದರಿಂದ ದೇಶದ ಮಿತವಾದ ಸಂಪನ್ಮೂಲಗಳ ಮೇಲೆ ಒತ್ತಡ ಬೀಳುತ್ತಿದೆ.

ದೇಶದಲ್ಲಿ ಅರಣ್ಯಭೂಮಿಯ ತಲಾವಾರು ಲಭ್ಯತೆಯ ಪ್ರಮಾಣ ಕೇವಲ ಶೇ 0.08 ಹೆಕ್ಟೇರುಗಳಷ್ಟಾಗಿದೆ. ಆದರೆ ಅಗತ್ಯವಿರುವ ಪ್ರಮಾಣ 0.47 ಹೆಕ್ಟೇರ್‌ಗಳಷ್ಟಿದೆ. ಹೀಗಾಗಿ ಹೆಚ್ಚುವರಿಯಾಗಿ ಬಳಸಬಹುದಾದ ಮಿತಿಗಿಂತ 15 ಮಿಲಿಯನ್ ಕ್ಯೂಬಿಕ್ ಮೀಟರ್ ನಷ್ಟು ಹೆಚ್ಚು ಅರಣ್ಯದ ಮರಗಳನ್ನು ಕಡಿದು ನಾಶ ಮಾಡಲಾಗಿದೆ.

ಭಾರತದಲ್ಲಿ ವರ್ಷಕ್ಕೆ ಸುಮಾರು 5.3 ಬಿಲಿಯನ್ ಟನ್ನುಗಳಷ್ಟು ಭೂಸವೆತ ಸಂಭವಿಸುತ್ತದೆ ಎಂದು ಅಂದಾಜಿಸಲಾಗಿದೆ. ಇದರ ಪರಿಣಾಮವಾಗಿ ದೇಶ ಪ್ರತಿವರ್ಷ 0.8 ದಶಲಕ್ಷ ಟನ್ನುಗಳಷ್ಟು ಸಾರಜನಕ, 1.8 ದಶಲಕ್ಷ ಟನ್ನುಗಳಷ್ಟು ರಂಜಕ, ಮತ್ತು 26.3 ದಶಲಕ್ಷ ಟನ್ನುಗಳಷ್ಟು ಪೊಟ್ಯಾಶಿಯಂನ್ನು ಕಳೆದುಕೊಳ್ಳುತ್ತಿದೆ. ಭಾರತ ಸರಕಾರದ ಅಂದಾಜಿನ ಪ್ರಕಾರ ಪ್ರತಿವರ್ಷ ದೇಶ 5.8 ದಶಲಕ್ಷ ಟನ್ನುಗಳಿಂದ 8.4 ದಶಲಕ್ಷ ಟನ್ನುಗಳಷ್ಟು ಪೋಷಕಾಂಶಗಳನ್ನು ಭೂಸವೆತದಿಂದ ಕಳೆದುಕೊಳ್ಳುತ್ತಿದೆ.

ಭಾರತದ ನಗರ ಪ್ರದೇಶಗಳಲ್ಲಿ ವಾಯುಮಾಲಿನ್ಯ ವ್ಯಾಪಕವಾಗಿ ಹರಡಿದೆ. ವಾಯು ಮಾಲಿನ್ಯಕ್ಕೆ ವಾಹನಗಳು, ಕೈಗಾರಿಕೆಗಳು ಮತ್ತು ಉಷ್ಣ ವಿದ್ಯುತ್ ಸ್ಥಾವರಗಳ ಕೊಡುಗೆ ಅಪಾರವಾಗಿದೆ. ವಾಹನಗಳು ಹೊರ ಸೂಸುವ ಹೊಗೆ ತಳಮಟ್ಟದ ಮೂಲಗಳಾಗಿದ್ದು ಸಾಮಾನ್ಯ ಜನತೆಯ

**ಪೆಟ್ಟಿಗೆ 9.4 ಮಾಲಿನ್ಯ ನಿಯಂಯ್ತ್ರಣ ಮಂಡಳಿಗಳು: (Pollution Control Boards)**

ಭಾರತದ ಎರಡು ಪರಿಸರ ಸಮಸ್ಯೆಗಳಾದ ಜಲಮಾಲಿನ್ಯ ಮತ್ತು ವಾಯುಮಾಲಿನ್ಯಗಳ ಬಗ್ಗೆ ಕ್ರಮ ಕೈಗೊಳ್ಳಲು 1974ರಲ್ಲಿ ಸರಕಾರ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿದೆ. ಅದನ್ನನುಸರಿಸಿ ಎಲ್ಲಾ ರಾಜ್ಯಗಳೂ ತಮ್ಮದೇ ಆದ ರಾಜ್ಯಮಟ್ಟದ ಮಂಡಳಿಗಳನ್ನು ಸ್ಥಾಪಿಸಿಕೊಂಡಿವೆ. ಅವುಗಳು ಜಲ, ವಾಯು ಮತ್ತು ಭೂಮಾಲಿನ್ಯಗಳ ಕುರಿತು ಪರಿಶೀಲಿಸಿ, ಮಾಹಿತಿಗಳನ್ನು ಪ್ರಸಾರ ಮಾಡುವುದಲ್ಲದೆ ಕೈಗಾರಿಗಳು ಹೊರಸೂಸುವ ವಿಷಕಾರಿ ಕೊಳಚೆ ನೀರು, ವಿಷಾನಿಲಗಳನ್ನು ನಿಯಂತ್ರಿಸುವ ಕುರಿತು ನಿಯಮಗಳನ್ನು ರೂಪಿಸಿವೆ. ಜಲಮಾಲಿನ್ಯವನ್ನು ನಿಯಂತ್ರಿಸಿ, ತಗ್ಗಿಸಲು ಈ ಮಂಡಳಿಗಳು ನದಿಗಳು ಮತ್ತು ಬಾವಿಗಳನ್ನು ಶುದ್ಧೀಕರಿಸಲು ಸರಕಾರಕ್ಕೆ ತಾಂತ್ರಿಕ ಸಲಹೆಗಳನ್ನು ನೀಡುತ್ತವೆ. ಹಾಗೆಯೇ ವಾಯುಮಾಲಿನ್ಯವನ್ನು ನಿಯಂತ್ರಿಸಿ, ತಗ್ಗಿಸಿ ವಾತಾವರಣ ಗುಣಮಟ್ಟವನ್ನು ಹೆಚ್ಚಿಸಲು ಸರಕಾರಗಳಿಗೆ ಸೂಕ್ತ ಸಲಹೆಗಳನ್ನು ಹಾಗೂ ತಾಂತ್ರಿಕ ಸಹಾಯವನ್ನು ನೀಡುತ್ತವೆ. ವಾಯು ಮತ್ತು ಜಲಮಾಲಿನ್ಯಗಳನ್ನು ನಿಯಂತ್ರಿಸಲು ಸಂಶೋಧನೆಗಳನ್ನು ಕೈಗೊಳ್ಳುತ್ತವೆ ಅಲ್ಲದೆ ಅವುಗಳು ಮಾಧ್ಯಮಗಳ ಮೂಲಕ ಸಮಗ್ರ ಜನಜಾಗೃತಿ ಕಾರ್ಯಕ್ರಮಗಳನ್ನು ಸಂಘಟಿಸುತ್ತವೆ. ಕೊಳಚೆನೀರು, ಕೈಗಾರಿಕೆಗಳ ವಿಷಾನಿಲ ಮತ್ತು ವಿಷಯುಕ್ತ ನೀರನ್ನು ಬಿಡುವ ಕುರಿತು ಸೂಚನಾಪುಸ್ತಕಗಳು, ನಿಯಮಗಳು ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಇವುಗಳು ರೂಪಿಸುತ್ತವೆ.

ಕೈಗಾರಿಕೆಗಳನ್ನು ನಿಯಂತ್ರಿಸುವುದರ ಮೂಲಕ ವಾತಾವರಣದ ಗುಣಮಟ್ಟವನ್ನು ಕಾಪಾಡುವಲ್ಲಿ ಈ ಮಂಡಳಿಗಳು ಪ್ರಯತ್ನಿಸುತ್ತವೆ. ತಮ್ಮ ವ್ಯಾಪ್ತಿಯೊಳಗೆ ಬರುವ ಕೈಗಾರಿಕೆಗಳ ವಿಷಯುಕ್ತ ನೀರು ಮತ್ತು ಅನಿಲಗಳ ಕುರಿತು ಕ್ರಮಕೈಗೊಳ್ಳುವ ಸಲುವಾಗಿ ನಿಯಮಿತವಾಗಿ ಪ್ರತಿಯೊಂದು ಕೈಗಾರಿಕೆಯನ್ನು ಮಂಡಳಿಯು ಜಿಲ್ಲಾಮಟ್ಟದ ಅಧಿಕಾರಿಗಳ ಮೂಲಕ ತಪಾಸಣೆ ನಡೆಸುತ್ತದೆ. ಕೈಗಾರಿಕೆಗಳ ವಿಷಯುಕ್ತ ಕೊಳಚೆಗಳನ್ನು ಹೊರಹಾಕುವುದು ಮತ್ತು ನಗರಯೋಜನೆಗಳಿಗೆ ಅಗತ್ಯವಿರುವ ವಾತಾವರಣದ ಗುಣಮಟ್ಟಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಈ ಮಂಡಳಿಗಳು ಒದಗಿಸುತ್ತವೆ.

ಮಾಲಿನ್ಯ ನಿಯಂತ್ರಣ ಮಂಡಳಿಗಳು ಜಲಮಾಲಿನ್ಯಕ್ಕೆ ಸಂಬಂಧಿಸಿದ ತಾಂತ್ರಿಕ ಅಂಶಗಳನ್ನು ಮತ್ತು ಅಂಕಿಅಂಶಗಳನ್ನು ಸಂಗ್ರಹಿಸಿ, ಹೋಲಿಸಿ ನೋಡುವುದಲ್ಲದೆ ಅಂತಹ ಅಂಕಿಅಂಶಗಳನ್ನು ಪ್ರಸಾರ ಮಾಡುತ್ತವೆ. ಇವುಗಳು 125 ನದಿಗಳ (ಉಪನದಿಗಳು ಸೇರಿ) ಬಾವಿಗಳ, ಸರೋವರಗಳ, ಕೊಲ್ಲಿ ಪ್ರದೇಶಗಳ, ಕೊಳಗಳ, ಕೆರೆಗಳ ಹಾಗೂ ಕಾಲುವೆಗಳ ನೀರಿನ ಗುಣಮಟ್ಟವನ್ನೂ ಸಹ ನಿಯಂತ್ರಿಸುತ್ತವೆ.

- ನಿಮ್ಮ ಸ್ಥಳಕ್ಕೆ ಹತ್ತಿರದಲ್ಲಿರುವ ಕಾರ್ಖಾನೆ ಅಥವಾ ನೀರಾವರಿ ಇಲಾಖೆಗೆ ಭೇಟಿ ನೀಡಿ ಜಲಮಾಲಿನ್ಯ ಮತ್ತು ವಾಯುಮಾಲಿನ್ಯವನ್ನು ನಿಯಂತ್ರಿಸಲು ಅವುಗಳು ಅಳವಡಿಸಿಕೊಂಡ ಕ್ರಮಗಳ ವಿವರಗಳನ್ನು ಸಂಗ್ರಹಿಸಿ.
- ಜಲಮಾಲಿನ್ಯ ಮತ್ತು ವಾಯುಮಾಲಿನ್ಯಕ್ಕೆ ಸಂಬಂಧಪಟ್ಟ ಅರಿವು ಕಾರ್ಯಕ್ರಮಗಳನ್ನು ದಿನಪತ್ರಿಕೆಯ ಜಾಹೀರಾತುಗಳಲ್ಲಿ ರೇಡಿಯೋ ದೂರದರ್ಶನದಲ್ಲಿ ಜಾಹೀರಾತು ಫಲಕಗಳಲ್ಲಿ ನೀವು ನೋಡಿರಬಹುದು. ಅಂತಹ ಕೆಲವು ಸುದ್ದಿತುಣುಕುಗಳನ್ನು, ಕರಪತ್ರಗಳನ್ನು ಮತ್ತು ಇತರ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿ.

ಮೇಲೆ ಗರಿಷ್ಟ ಪ್ರಮಾಣದ ಪ್ರತಿಕೂಲ ಪರಿಣಾಮ ಬೀರುತ್ತಿವೆ. 1951 ರಲ್ಲಿ ವಾಹನಗಳ ಸಂಖ್ಯೆ ಮೂರು ಲಕ್ಷ ಇದ್ದು 2003 ರಲ್ಲಿ ಅದು 67 ಕೋಟಿಯಷ್ಟಾಗಿದೆ. ಒಟ್ಟು ನೊಂದಾಯಿತ ವಾಹನಗಳಲ್ಲಿ ಸುಮಾರು ಶೇ.80ರಷ್ಟು ವೈಯಕ್ತಿಕಸಾರಿಗೆ ವಾಹನಗಳಾಗಿದ್ದು (ದ್ವಿಚಕ್ರ ಮತ್ತು ಮೋಟಾರು ಕಾರುಗಳು) ಇವುಗಳು ಮಾಲಿನ್ಯದ ಮೇಲಿನ ಒತ್ತಡದ ಹೊರೆಯನ್ನು ಗಮನಾರ್ಹವಾಗಿ ಹೆಚ್ಚಿಸಿವೆ.

ತೀವ್ರ ಕೈಗಾರೀಕರಣ ಹೊಂದುತ್ತಿರುವ ಪ್ರಪಂಚದ ಹತ್ತು ದೇಶಗಳಲ್ಲಿ ಭಾರತವೂ ಒಂದು. ಆದರೆ ಈ ಸ್ಥಾನಮಾನ ಯೋಜನಾರಹಿತ ನಗರೀಕರಣ, ವಾಯುಮಾಲಿನ್ಯ, ಅಪಘಾತಗಳ ಗಂಡಾಂತರ ಮುಂತಾದ ಅನಪೇಕ್ಷಿತ ಮತ್ತು ಅನಿರೀಕ್ಷಿತ ಪರಿಣಾಮಗಳೊಂದಿಗೆ ಲಭಿಸಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (CPCB) (Central Pollution Control Board) ಯು ಅತೀ ಹೆಚ್ಚು ಮಾಲಿನ್ಯವನ್ನುಂಟು ಮಾಡುವ ಹದಿನೇಳು ಪ್ರಕಾರದ ಕೈಗಾರಿಕೆ (ಬ್ರಹತ್ ಮತ್ತು ಮಧ್ಯಮಪ್ರಮಾಣದ ಕೈಗಾರಿಕೆ) ಗಳನ್ನು ಗುರುತಿಸಿದೆ.

ಮೇಲ್ಕಾಣಿಸಿದ ಅಂಶಗಳು ಭಾರತದ ಪರಿಸರದ ಸವಾಲುಗಳ ಮೇಲೆ ಬೆಳಕು ಚೆಲ್ಲುತ್ತದೆ. ಕೇಂದ್ರ ಪರಿಸರ ಸಚಿವಾಲಯ, ರಾಜ್ಯ ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣಾ ಮಂಡಳಿಗಳು ಮಾಲಿನ್ಯ ನಿಯಂತ್ರಣಕ್ಕೆ ಅನೇಕ ಕ್ರಮಗಳನ್ನು ಕೈಗೊಂಡಿವೆ. ಆದ್ದರಿಂದ ಭಾರತೀಯರು ಪ್ರಜ್ಞಾಪೂರ್ವಕವಾಗಿ ಸುಸ್ಥಿರ ಅಭಿವೃದ್ಧಿಯ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳದಿದ್ದರೆ ಇವುಗಳು ಕೈಗೊಂಡಿರುವ ಮಾಲಿನ್ಯ ನಿಯಂತ್ರಣ ಕ್ರಮಗಳು ನಿರೀಕ್ಷಿತ ಫಲಿತಾಂಶವನ್ನು ನೀಡುವುದಿಲ್ಲ. ಮುಂದಿನ ಪೀಳಿಗೆಯ ಕಾಳಜಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೈಗೊಂಡ ಅಭಿವೃದ್ಧಿ ಕ್ರಮಗಳು ಶಾಶ್ವತವಾಗಿರುತ್ತವೆ. ಮುಂದಿನ ಪೀಳಿಗೆಯ ಬಗ್ಗೆ ಕಾಳಜಿ ಮತ್ತು ಹಿತಾಸಕ್ತಿ ಇಲ್ಲದೆ ಸಾಧಿಸುವ ಅಭಿವೃದ್ಧಿ, ಸಂಪನ್ಮೂಲ ಗಳನ್ನು ಬರಿದು ಮಾಡಿ, ಪರಿಸರ ನಾಶಗೊಳಿಸಿ, ತೀವ್ರವಾದ ಆರ್ಥಿಕ ಹಾಗೂ ಪರಿಸರ ಸಮಸ್ಯೆಗಳನ್ನು ಸೃಷ್ಟಿಸುತ್ತದೆ.



**ನೀವೇ ಮಾಡಿರಿ**

- ಯಾವುದೇ ರಾಷ್ಟ್ರೀಯ ದಿನಪತ್ರಿಕೆಯ ವಾಯುಮಾಲಿನ್ಯ ತಡೆಯುವ ಬಗ್ಗೆ ಒಂದು ಕಾಲಂನ್ನು ನೀವು ನೋಡಬಹುದು. ದೀಪಾವಳಿಗಿಂತ ಒಂದು ವಾರ ಮೊದಲು, ದೀಪಾಳಿಯ ದಿನ ಮತ್ತು ದೀಪಾವಳಿ ಹಬ್ಬದ ಮುಂದಿನ ಎರಡು ದಿನಗಳ ನಂತರದ ನ್ಯೂಸ್‌ನ್ನು ನೋಡಿ, ಏನಾದರೂ ಗಮನಾರ್ಹ ವ್ಯತ್ಯಾಸವನ್ನು ನೀವು ಗಮನಿಸುವಿರಾ? ನಿಮ್ಮ ತರಗತಿಯಲ್ಲಿ ಚರ್ಚಿಸಿ.

## 9.4 ಸುಸ್ಥಿರ ಅಭಿವೃದ್ಧಿ (SUSTAINABLE DEVELOPMENT)

ಪರಿಸರ ಮತ್ತು ಆರ್ಥಿಕತೆ ಒಂದಕ್ಕೊಂದು ಪರಸ್ಪರಾವಲಂಬಿ ಹಾಗೂ ಪೂರಕವಾಗಿವೆ. ಆದ್ದರಿಂದ ಪರಿಸರದ ಮೇಲಿನ ಪ್ರತಿಕೂಲ ಪರಿಣಾಮಗಳನ್ನು ನಿರ್ಲಕ್ಷಿಸುವ ಅಭಿವೃದ್ಧಿಯು ಪರಿಸರವನ್ನು ಮತ್ತು ಜೀವ ಸಂಕುಲವನ್ನು ನಾಶ ಮಾಡುತ್ತದೆ. ಇಂದಿನ ಪೀಳಿಗೆಯು ಹೊಂದಿರುವ ಜೀವನದ ಗುಣಮಟ್ಟದಷ್ಟೇ ಉತ್ತಮವಾಗಿರುವ ಜೀವನಮಟ್ಟವನ್ನು ಮುಂದಿನ ಪೀಳಿಗೆಯು ಹೊಂದಲು ಅವಕಾಶ ಮಾಡಿಕೊಡುವ ಅಭಿವೃದ್ಧಿ ಅಂದರೆ ಸುಸ್ಥಿರ ಅಭಿವೃದ್ಧಿ ಸಾಧಿಸುವುದು ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿ ಮೇಲೆ ವಿಶ್ವಸಂಸ್ಥೆಯ ಸಮ್ಮೇಳನ (UNCED) ಸುಸ್ಥಿರ ಅಭಿವೃದ್ಧಿ ಎಂಬ ಪರಿಕಲ್ಪನೆಗೆ ಹೆಚ್ಚು ಒತ್ತು ನೀಡಿದೆ. ಈ ಸಮಿತಿಯ ಪ್ರಕಾರ "ಮುಂದಿನ ಪೀಳಿಗೆಯವರ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವ ಅವರ ಸಾಮರ್ಥ್ಯದೊಂದಿಗೆ ರಾಜಿಮಾಡಿಕೊಳ್ಳದೆ ಇಂದಿನ ಪೀಳಿಗೆಯ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವ ಪ್ರಕ್ರಿಯೆಯೇ ಸುಸ್ಥಿರ ಅಭಿವೃದ್ಧಿ".

ಈ ವ್ಯಾಖ್ಯೆಯನ್ನು ಇನ್ನೊಮ್ಮೆ ಓದಿ. 'ಅಗತ್ಯತೆ' ಮತ್ತು 'ಭವಿಷ್ಯದ ಪೀಳಿಗೆ' ಎಂಬ ಪದಗುಚ್ಛಗಳು ಗ್ರಹಿಕೆ ಮಾಡಿಕೊಳ್ಳಬೇಕಾದ ಪದಗುಚ್ಛಗಳಾಗಿವೆ. ಈ ವ್ಯಾಖ್ಯೆಯಿಂದ ತಿಳಿಯುವುದೇನೆಂದರೆ, ಅಗತ್ಯತೆಗಳು ಎಂಬ ಪರಿಕಲ್ಪನೆ ಸಂಪನ್ಮೂಲಗಳ ಹಂಚಿಕೆಗೆ ಸಂಬಂಧಿಸಿದೆ. ಈ ಸಮಿತಿಯ "ನಮ್ಮ ಸಾಮಾನ್ಯ ಭವಿಷ್ಯ" ಎಂಬ ಮೂಲ ವರದಿಯಲ್ಲಿ ಸುಸ್ಥಿರ ಅಭಿವೃದ್ಧಿಯ ವ್ಯಾಖ್ಯೆಯು ವಿವರಿಸಿರುವಂತೆ ಎಲ್ಲರ ಮೂಲ ಅಗತ್ಯತೆಗಳನ್ನು ಪೂರೈಸುವುದು ಮತ್ತು ಉತ್ತಮ ಜೀವನ ಅಗತ್ಯತೆಗಳನ್ನು ಪೂರೈಸುವುದು ಮತ್ತು ಉತ್ತಮ ಜೀವನ ನಿರ್ವಹಣೆಗಾಗಿ ಬಯಕೆಗಳನ್ನು ತೃಪ್ತಿ ಪಡಿಸುವ ಅವಕಾಶಗಳನ್ನು ವಿಸ್ತರಿಸುವುದಾಗಿದೆ. ಎಲ್ಲರ ಅಗತ್ಯತೆಗಳನ್ನು ಪೂರೈಸಲು ಸಂಪನ್ಮೂಲಗಳ ಮರುಹಂಚಿಕೆ ಮಾಡುವ ಅಗತ್ಯವಿದೆ ಎಂಬುದು ನೈತಿಕ ವಿಚಾರವಾಗಿದೆ. ಎಡ್ವರ್ಡ್ ಬಾರ್ಬಿಯರ್‌ರವರ ಪ್ರಕಾರ ಸುಸ್ಥಿರ ಅಭಿವೃದ್ಧಿ ಎಂದರೆ – ತಳಮಟ್ಟದಲ್ಲಿ ಬಡಜನರ ಭೌತಿಕ ಜೀವನಮಟ್ಟವನ್ನು ಹೆಚ್ಚಿಸುವುದಕ್ಕೆ ನೇರವಾಗಿ ಸಂಬಂಧಿಸಿದ ಒಂದು ಅಭಿವೃದ್ಧಿ

ಪ್ರಕ್ರಿಯೆಯಾಗಿದೆ. ಇದನ್ನು ಅಧಿಕವಾದ ಆದಾಯ, ನೈಜ ಆದಾಯ, ಶಿಕ್ಷಣ ಸೇವೆಗಳು, ವೈದ್ಯಕೀಯ ಸೌಲಭ್ಯ, ನೈರ್ಮಲೀಕರಣ, ನೀರು ಪೂರೈಕೆ ಮುಂತಾದ ಅಂಶಗಳ ಮೂಲಕ ಪರಿಮಾಣಾತ್ಮಕವಾಗಿ ಅಳೆಯಬಹುದು. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಸಂಪನ್ಮೂಲಗಳ ದುರ್ಬಳಕೆ, ಪರಿಸರದ ನಾಶ ಕಡಿಮೆ ಮಾಡಿ, ಸಾಂಸ್ಕೃತಿಕ ವಿಘಟನೆ ಹಾಗೂ ಸಾಮಾಜಿಕ ಅಸ್ಥಿರತೆಯನ್ನು ಕಡಿಮೆ ಮಾಡುವ ಮೂಲಕ ಜನರ ನಿರಪೇಕ್ಷ ಬಡತನವನ್ನು ಕಡಿಮೆ ಮಾಡಿ ಜೀವನ ಭದ್ರತೆ ಒದಗಿಸುವುದೇ ಸುಸ್ಥಿರ ಅಭಿವೃದ್ಧಿಯ ಗುರಿಯಾಗಿದೆ. ಹೀಗಾಗಿ ಸುಸ್ಥಿರ ಅಭಿವೃದ್ಧಿಯು ಎಲ್ಲಾ ಜನರ ಅದರಲ್ಲೂ ಬಹುಸಂಖ್ಯಾತ ಬಡಜನರ ಅಗತ್ಯತೆಗಳಾದ ಉದ್ಯೋಗ, ಆಹಾರ, ಇಂಧನ, ನೀರು, ಆರೋಗ್ಯ ಮತ್ತು ಇತರ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ಈ ಸೌಲಭ್ಯಗಳನ್ನು ಒದಗಿಸಲು ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆಯ ಭರವಸೆಯನ್ನೂ ಒದಗಿಸುತ್ತದೆ.

ಬ್ರಂಟ್‌ಲ್ಯಾಂಡ್ ಸಮಿತಿಯು ಮುಂದಿನ ಪೀಳಿಗೆಯ ರಕ್ಷಣೆಯ ಬಗ್ಗೆ ಹೆಚ್ಚು ಒತ್ತು ನೀಡುತ್ತದೆ. ಸುಸ್ಥಿತಿಯಲ್ಲಿರುವ ಭೂಗ್ರಹವನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಇಂದಿನ ಪೀಳಿಗೆಯ ನೈತಿಕ ಜವಾಬ್ದಾರಿಯಾಗಿದೆ ಎಂಬ ಪರಿಸರವಾದಿಗಳ ವಾದಕ್ಕೆ ಇದು ಪೂರಕವಾಗಿದೆ. ನಮ್ಮ ಪೂರ್ವಜರಿಂದ ಪಡೆದ, ಕೊನೆ ಪಕ್ಷ ಈಗ ನಾವು ಪಡೆದಿರುವುದಕ್ಕಿಂತ ಕಡಿಮೆಯಾಗದಂತೆ ಜೀವನ ಗುಣಮಟ್ಟದ ಆಸ್ತಿಗಳ ಸಂಗ್ರಹವನ್ನು ಮುಂದಿನ ಪೀಳಿಗೆಗೆ ಬಿಟ್ಟು ಹೋಗಬೇಕಾಗುತ್ತದೆ. ಇಂದಿನ ಪೀಳಿಗೆ ಪರಿಸರವನ್ನು ಮೇಲ್ದರ್ಜೆಗೇರಿಸುವ ಕೆಲವು ಮಾರ್ಗಗಳನ್ನು ಅನುಸರಿಸುತ್ತಾ ಅಭಿವೃದ್ಧಿಯನ್ನು ಹೆಚ್ಚಿಸಬೇಕು ಅವುಗಳೆಂದರೆ (1) ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಾಡುವುದು (2) ವಿಶ್ವದ ಸ್ವಾಭಾವಿಕ ಪರಿಸರದ ಪುನರುತ್ಪತ್ತಿ ಸಾಮರ್ಥ್ಯವನ್ನು ಸುರಕ್ಷಿತವಾಗಿಡುವುದು. (3) ಮುಂದಿನ ಜನಾಂಗದ ಮೇಲೆ ಹೇರಲ್ಪಡುವ ಹೆಚ್ಚುವರಿ ವೆಚ್ಚ ಮತ್ತು ಗಂಡಾಂತರಗಳನ್ನು ತಪ್ಪಿಸುವುದು.

ಖ್ಯಾತ ಪರಿಸರ ಅರ್ಥಶಾಸ್ತ್ರಜ್ಞರಾದ ಹರ್ಮನ್ ಡ್ಯಾಲಿ ಪ್ರಕಾರ ಸುಸ್ಥಿರ ಅಭಿವೃದ್ಧಿ ಸಾಧಿಸಲು ಕೆಳಕಂಡ ಕ್ರಮಗಳನ್ನು ಅನುಸರಿಸುವ ಅಗತ್ಯವಿದೆ.

(i) ಪರಿಸರ ಧಾರಣಾ ಶಕ್ತಿಯ ಸಾಮರ್ಥ್ಯ ಮೀರದಂತೆ ಜನಸಂಖ್ಯೆಯನ್ನು ನಿಯಂತ್ರಿಸುವುದು. ಪರಿಸರ ಧಾರಣಾ ಸಾಮರ್ಥ್ಯವು ಹಡಗಿನ ಭಾರಮಿತಿಯ ಚಿಹ್ನೆಯಂತಿರುತ್ತದೆ. ಹೀಗೆ ಜನಸಂಖ್ಯೆಯ ಗಾತ್ರ ಭೂಮಿ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಾದರೆ ಅರ್ಥವ್ಯವಸ್ಥೆ ಸುಸ್ಥಿರ ಅಭಿವೃದ್ಧಿಯ ದಾರಿಯಲ್ಲಿ ಸಾಗುವುದು ಅಸಾಧ್ಯ.

(ii) ತಾಂತ್ರಿಕ ಪ್ರಗತಿಯು ಸಂಪನ್ಮೂಲಗಳ ದಕ್ಷ ಬಳಕೆಯನ್ನು ಅವಲಂಬಿಸಿರಬೇಕೇ ವಿನಹ ಸಂಪನ್ಮೂಲಗಳ ಅನುಭೋಗದಿಂದಲ್ಲ.

(iii) ನವೀಕರಿಸಬಹುದಾದ ಸಂಪನ್ಮೂಲಗಳನ್ನು ಸುಸ್ಥಿರವಾದ ನೆಲೆಯಲ್ಲಿ ಬಳಸಬೇಕು, ಅಂದರೆ ನವೀಕರಿಸಬಹುದಾದ ಸಂಪನ್ಮೂಲಗಳ ಬಳಕೆಯ ಪ್ರಮಾಣದ ದರ ಅವುಗಳ ಪುನರುತ್ಪತ್ತಿ ಪ್ರಮಾಣದ ದರವನ್ನು ಮೀರಬಾರದು

(iv) ನವೀಕರಿಸಲಾಗದ ಸಂಪನ್ಮೂಲಗಳ ವಿನಾಶದ ದರವು ಅವುಗಳ ಬದಲಿ ವಸ್ತುಗಳ ಸೃಷ್ಟಿಯ ದರಕ್ಕಿಂತ ಅಧಿಕವಿರಬಾರದು.

(v) ಮಾಲಿನ್ಯದಿಂದ ಉದ್ಭವಿಸುವ ಅದಕ್ಷತೆಗಳನ್ನು ಸರಿಪಡಿಸಬೇಕು.

## 9.5 ಸುಸ್ಥಿರ ಅಭಿವೃದ್ಧಿಯ ಕಾರ್ಯ ತಂತ್ರಗಳು (STRATEGIES FOR SUSTAINABLE DEVELOPMENT)

### ಅಸಂಪ್ರದಾಯಿಕ ಇಂಧನಗಳ ಬಳಕೆ (Use of Non-conventional Sources of Energy):

ಪ್ರಸ್ತುತ ಸನ್ನಿವೇಶದಲ್ಲಿ ಭಾರತವು ಬಹುತೇಕ ಜಲವಿದ್ಯುತ್ ಮತ್ತು ಉಷ್ಣವಿದ್ಯುತ್(ತಾಪಶಕ್ತಿ) ಉತ್ಪಾದನೆಯ ಮೇಲೆ ಅವಲಂಬಿತವಾಗಿದೆ. ಇವೆರಡೂ ಮೂಲಗಳು ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತವೆ. ಉಷ್ಣವಿದ್ಯುತ್

ಸ್ಥಾವರಗಳು ದೊಡ್ಡ ಪ್ರಮಾಣದಲ್ಲಿ ಬಿಡುಗಡೆ ಮಾಡುವ ಕಾರ್ಬನ್ ಡೈ ಆಕ್ಸೈಡ್ (ಹಸಿರು ಮನೆ ಅನಿಲ), ಹಾರು ಬೂದಿ ಸರಿಯಾಗಿ ಬಳಕೆಯಾಗದಿದ್ದರೆ ಭೂಮಿ, ನೀರು ಮತ್ತು ಗಾಳಿಯನ್ನು ಮಲಿನಗೊಳಿಸುತ್ತವೆ. ಜಲವಿದ್ಯುತ್ ಯೋಜನೆಗಳು ಅರಣ್ಯನಾಶಕ್ಕೆ ಮತ್ತು ನದಿಗಳ ನೈಸರ್ಗಿಕ ಹರಿವಿಗೆ ತೊಂದರೆಯುಂಟುಮಾಡುತ್ತವೆ. ಪವನಶಕ್ತಿ ಹಾಗೂ ಸೌರಶಕ್ತಿ ಸಹಜ ಮತ್ತು ಶುದ್ಧ ಶಕ್ತಿಯ ಮೂಲಗಳಾಗಿವೆ. ಇವುಗಳನ್ನು ಪರಿಶೋಧಿಸಿ ಬೃಹತ್ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಿ ಉಷ್ಣ ವಿದ್ಯುತ್ ಮತ್ತು ಜಲಶಕ್ತಿಗಳ ಬದಲಿಗೆ ಬಳಸಬಹುದಾಗಿದೆ.

### ಗ್ರಾಮೀಣ ಪ್ರದೇಶಗಳಲ್ಲಿ ಎಲ್‌ಪಿಜಿ ಮತ್ತು ಗೋಬರ್ ಗ್ಯಾಸ್ ಬಳಕೆ (Use of LPG, Gobar Gas in Rural Areas):

ಗ್ರಾಮೀಣ ಪ್ರದೇಶಗಳ ಜನರು ಸಾಮಾನ್ಯವಾಗಿ ಉರುವಲಿಗಾಗಿ ಸಾಮಾನ್ಯವಾಗಿ ಕಟ್ಟಿಗೆ, ಬೆರಣಿ ಮತ್ತು ಜೈವಿಕ ತ್ಯಾಜ್ಯಗಳನ್ನು ಬಳಸುತ್ತಾರೆ. ಇದು ಅರಣ್ಯನಾಶ, ಹಸಿರುಹೊದಿಕೆ ನಾಶ, ಜಾನುವಾರುಗಳ ಸಗಣಿಯ ನಾಶ ಮತ್ತು ವಾಯು ಮಾಲಿನ್ಯ ಮುಂತಾದ ಪ್ರತಿಕೂಲ ಪರಿಣಾಮಗಳನ್ನು ಹೊಂದಿದೆ. ಈ ಸನ್ನಿವೇಶವನ್ನು ಸುದಾರಿಸಲು ಸಹಾಯಧನಾಧಾರಿತ ದ್ರವೀಕೃತ ಪೆಟ್ರೋಲಿಯಂ ಅನಿಲ (Liquefied Petroleum Gas) ವನ್ನು ಒದಗಿಸಲಾಗಿದೆ. ಅಲ್ಲದೆ ಸುಲಭ ಸಾಲ ಮತ್ತು ಸಹಾಯಧನದ ಮೂಲಕ ಗೋಬರ್ ಗ್ಯಾಸ್ ಘಟಕಗಳನ್ನು ಒದಗಿಸಲಾಗುತ್ತಿದೆ. ದ್ರವೀಕೃತ ಪೆಟ್ರೋಲಿಯಂ ಅನಿಲವು ಒಂದು ಶುದ್ಧ ಇಂಧನವಾಗಿದ್ದು, ಮಾಲಿನ್ಯವನ್ನು ಕಡಿಮೆಗೊಳಿಸುತ್ತದೆ. ಇಂಧನ ನಷ್ಟವಾಗುವುದನ್ನೂ ಕೂಡಾ ಕಡಿಮೆಗೊಳಿಸುತ್ತದೆ. ಗೋಬರ್ ಗ್ಯಾಸ್ ಘಟಕವು ಕಾರ್ಯನಿರ್ವಹಿಸಲು ಜಾನುವಾರುಗಳ ಸಗಣಿಯನ್ನು ಪೂರೈಸಬೇಕಾಗುತ್ತದೆ. ಇದರಿಂದ ಉತ್ಪತ್ತಿಯಾದ ಅನಿಲವನ್ನು ಇಂಧನವಾಗಿ ಬಳಸಲಾಗುತ್ತದೆ. ನಂತರ ಉಳಿದ ಅವಶೇಷವು (ಚರಟ-slurry) ಒಂದು ಉತ್ತಮ ಸಾವಯವ ಗೊಬ್ಬರ ಹಾಗೂ ಮಣ್ಣು ಸಂರಕ್ಷಕವಾಗಿದೆ.



ಚಿತ್ರ 9.4 ಜಾನುವಾರುಗಳು ಸೆಗಣಿಯಿಂದ ಗೋಬರ್ ಗ್ಯಾಸ್ ತಯಾರಿಸುವ ಘಟಕ

### ನಗರ ಪ್ರದೇಶಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲ (CNG in Urban Areas):

ದೆಹಲಿ ಮುಂತಾದ ಪ್ರಮುಖ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲವನ್ನು ಇಂಧನವಾಗಿ ಬಳಸಲಾಗುತ್ತಿದೆ. ಇದರಿಂದ ವಾಯುಮಾಲಿನ್ಯ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಪರಿಣಾಮವಾಗಿ ಕಳೆದ ಕೆಲವು ವರ್ಷಗಳಿಂದ ಪರಿಸ್ಥಿತಿಯನ್ನು ಸುಧಾರಿಸುತ್ತಿದೆ.

**ನೀವೇ ಮಾಡಿರಿ**

- ದೆಹಲಿಯಲ್ಲಿ ಬಸ್‌ಗಳು ಮತ್ತು ಸಾರ್ವಜನಿಕ ವಾಹನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬದಲಿಗೆ CNG ಯನ್ನು ಬಳಸಲಾಗುತ್ತಿದೆ; ಕೆಲವು ವಾಹನಗಳಲ್ಲಿ ಇಂಧನ ಪರಿವರ್ತಿಸುವ ಎಂಜಿನ್‌ಗಳನ್ನು ಬಳಸಲಾಗುತ್ತಿದೆ. ಬೀದಿ ದೀಪಗಳಿಗೆ ಸೌರಶಕ್ತಿಯನ್ನು ಬಳಸಲಾಗುತ್ತಿದೆ. ಈ ಬದಲಾವಣೆಗಳ ಬಗ್ಗೆ ನೀವು ಯೋಚಿಸಿದ್ದೀರಾ? ಭಾರತದಲ್ಲಿ ಸುಸ್ಥಿರ ಅಭಿವೃದ್ಧಿಯ ಅಗತ್ಯತೆಯ ಬಗ್ಗೆ ತರಗತಿಯಲ್ಲಿ ಒಂದು ಚರ್ಚೆ ಏರ್ಪಡಿಸಿ.

### ಪವನಶಕ್ತಿ (Wind Power):

ಗಾಳಿಯು ವೇಗವಾಗಿ ಬೀಸುವ ಪ್ರದೇಶಗಳಲ್ಲಿ ಗಾಳಿಯಂತ್ರಗಳನ್ನು ಅಳವಡಿಸಿ, ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರದೆ, ವಿದ್ಯುತ್ ಶಕ್ತಿಯನ್ನು ಉತ್ಪಾದಿಸಬಹುದು. ಇಲ್ಲಿ ಗಾಳಿ ಬೀಸುವ ವೇಗಕ್ಕನುಗುಣವಾಗಿ ಗಾಳಿಯಂತ್ರಕ್ಕೆ ಅಳವಡಿಸಿದ ರೆಕ್ಕೆಗಳು ತಿರುಗುವ ಮೂಲಕ ವಿದ್ಯುತ್ ಉತ್ಪಾದನೆಯಾಗುತ್ತದೆ. ಆರಂಭಿಕ ಹಂತದಲ್ಲಿ ನಿಸ್ಸಂದೇಹವಾಗಿ ಸ್ಥಾಪನೆ ಖರ್ಚು ಅಧಿಕವಿರುತ್ತದೆ. ಆದರೆ ಇದು ದೀರ್ಘಕಾಲೀನ ಅನುಕೂಲತೆಗಳನ್ನು ಗಮನಿಸಿದಂತೆ ಖರ್ಚು ಮಾಡುವ ಹಣ ಗೌಣವೆನಿಸುತ್ತದೆ.

### ಫೋಟೋವೊಲ್ಟಾಯಿಕ್ ಕೋಶಗಳ ಮೂಲಕ ಸೌರಶಕ್ತಿ (Solar Power through Photovoltaic cells):

ಸೂರ್ಯನ ಬೆಳಕಿನ ರೂಪದಲ್ಲಿ ಭಾರತವು ಹೇರಳವಾದ ಸೌರಶಕ್ತಿಯನ್ನು ಹೊಂದಿದೆ. ಇದನ್ನು ನಾವು ಅನೇಕ ರೀತಿಯಲ್ಲಿ ಉಪಯೋಗಿಸುತ್ತೇವೆ. ಉದಾ: ಬಟ್ಟೆ, ಧಾನ್ಯ, ಕೃಷಿ ವಸ್ತುಗಳು ಹಾಗೂ ನಿತ್ಯ ಜೀವನದಲ್ಲಿ ಬಳಸು ಇತರ ವಸ್ತುಗಳನ್ನು ಒಣಗಿಸಲು ಬಳಸುತ್ತಾರೆ. ಚಳಿಗಾಲದಲ್ಲಿ ನಮ್ಮನ್ನು ಬೆಚ್ಚಗೆ ಇಟ್ಟುಕೊಳ್ಳಲು ಕೂಡಾ ಸೂರ್ಯನ ಬೆಳಕನ್ನು ಬಳಸುತ್ತೇವೆ. ಸಸ್ಯಗಳು ದ್ಯುತಿಸಂಶ್ಲೇಷಣಾ ಕ್ರಿಯೆಗಾಗಿ ಸೌರಶಕ್ತಿಯನ್ನು ಬಳಸುತ್ತವೆ. ಈಗ ಫೋಟೋವೊಲ್ಟಾಯಿಕ್ ಕೋಶಗಳ ಸಹಾಯದಿಂದ ಸೂರ್ಯನ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಬಹುದಾಗಿದೆ. ಈ ಕೋಶಗಳು ವಿಶೇಷ ರೀತಿಯ ವಸ್ತುಗಳ ಸಹಾಯದಿಂದ ಸೂರ್ಯನ ಶಕ್ತಿಯನ್ನು ಹೀರಿಕೊಂಡು ಆ ಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುತ್ತವೆ. ಗ್ರಿಡ್ ಮೂಲಕ ವಿದ್ಯುತ್‌ಶಕ್ತಿಯ ಪೂರೈಕೆ ಮಾಡುವುದು ಸಾಧ್ಯವಿಲ್ಲದ, ಅಥವಾ ಪೂರೈಸಲು ಅತೀ ಹೆಚ್ಚು ವೆಚ್ಚ ತಗಲುವ ಪ್ರದೇಶಗಳಿಗೆ ಮತ್ತು ಬಹುದೂರದ ಪ್ರದೇಶಗಳಿಗೆ ಈ ತಂತ್ರಜ್ಞಾನ ಅತ್ಯಂತ ಉಪಯುಕ್ತವಾಗಿದೆ. ಅಲ್ಲದೆ ಈ ತಂತ್ರಜ್ಞಾನವು ಸಂಪೂರ್ಣವಾಗಿ ಮಾಲಿನ್ಯ ರಹಿತವಾಗಿದೆ.

### ಕಿರು ಜಲವಿದ್ಯುತ್ ಘಟಕಗಳು (Mini hydel plants):

ಸಾಮಾನ್ಯವಾಗಿ ಪರ್ವತ ಶ್ರೇಣಿಗಳಲ್ಲಿ ಹರಿಯುವ ನೀರಿನ ಪ್ರವಾಹಗಳು ಅಲ್ಲಲ್ಲಿ ಕಂಡು ಬರುತ್ತದೆ. ಅವುಗಳಲ್ಲಿ ಹೆಚ್ಚಿನವುಗಳು ವರ್ಷವಿಡೀ ತುಂಬಿಹರಿಯುತ್ತಿರುತ್ತವೆ. ಹೀಗೆ ಪ್ರವಹಿಸುವ ನೀರು ಕೆಳಗಡೆ ಅಳವಡಿಸಲಾಗಿರುವ ಸಣ್ಣ ಚಕ್ರಗಳ ಮೇಲೆ ಚಕ್ರ ತಿರುಗಿದಂತೆಲ್ಲಾ ವಿದ್ಯುತ್ ಉತ್ಪಾದನೆಯಾಗುತ್ತದೆ. ಹೀಗೆ ಉತ್ಪತ್ತಿಯಾದ ವಿದ್ಯುತ್‌ನ್ನು ಸ್ಥಳೀಯವಾಗಿ ಬಳಸಿಕೊಳ್ಳಬಹುದು. ಇಂತಹ ಘಟಕಗಳು ಪರಿಸರ ಸ್ನೇಹಿಯಾಗಿರುತ್ತವೆ. ಏಕೆಂದರೆ ಈ ಘಟಕಗಳು, ಅವುಗಳು ಸ್ಥಾಪನೆಯಾದ ಪ್ರದೇಶಗಳಲ್ಲಿ, ಭೂ ಬಳಕೆಯ ಮಾದರಿಯಲ್ಲಿ ಬದಲಾವಣೆ ಉಂಟುಮಾಡುವುದಿಲ್ಲ. ಇವುಗಳು ಸ್ಥಳೀಯ ಬೇಡಿಕೆಯನ್ನು ಪೂರೈಸುವಷ್ಟು

ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತವೆ. ಅಂದರೆ, ವಿದ್ಯುತ್ ಪೂರೈಕೆಗೆ ದೊಡ್ಡ ಪ್ರಮಾಣದ ವಿದ್ಯುತ್ ಪ್ರಸರಣ ಗೋಪುರಗಳು, ಕೇಬಲ್‌ಗಳ ಅಗತ್ಯವಿಲ್ಲ, ಅಲ್ಲದೆ ಪ್ರಸರಣದಲ್ಲಾಗುವ ನಷ್ಟವನ್ನು ಇದು ತಪ್ಪಿಸುತ್ತದೆ.

### ಸಾಂಪ್ರದಾಯಿಕ ಜ್ಞಾನ ಹಾಗೂ ಪದ್ಧತಿಗಳು (Traditional Knowledge and Practices):

ಸಾಂಪ್ರದಾಯಿಕವಾಗಿ ಭಾರತದ ಜನರು ಅವರ ಪರಿಸರಕ್ಕೆ ಹತ್ತಿರವಾಗಿದ್ದಾರೆ. ಅವರು ಪರಿಸರವನ್ನು ನಿಯಂತ್ರಿಸುವ ಬದಲು ಅವರು ಪರಿಸರದ ಒಂದು ಅಂಗವಾಗಿದ್ದಾರೆ. ಹಿಂದಿನ ಕೃಷಿ ಪದ್ಧತಿ, ಆರೋಗ್ಯ ಸಂರಕ್ಷಣೆ, ವಸತಿ, ಸಾರಿಗೆ ಮುಂತಾದವುಗಳನ್ನು ಅವಲೋಕಿಸಿದರೆ ಅವುಗಳೆಲ್ಲಾ ಪರಿಸರ ಸ್ನೇಹಿಯಾಗಿದ್ದವು. ತೀರಾ ಇತ್ತೀಚೆಗೆ ನಾವು ಸಾಂಪ್ರದಾಯಿಕ ಪದ್ಧತಿಗಳಿಂದ ವಿಮುಖರಾದ ಕಾರಣ ಪರಿಸರ ಸ್ನೇಹಿ ಹಾಗೂ ಗ್ರಾಮೀಣ ಪರಂಪರೆಗೆ ಧಕ್ಕೆಯಾಗಿವೆ. ಈಗ ನಾವು ಮತ್ತೊಮ್ಮೆ ಹಿಂದಿನ ವ್ಯವಸ್ಥೆಗೆ ಹಿಂದಿರುಗಲು ಸರಿಯಾದ ಸಮಯ. ಆರೋಗ್ಯ ರಕ್ಷಣೆಯಲ್ಲಿ ಇದಕ್ಕೆ ಒಂದು ಸೂಕ್ತವಾದ ಉದಾಹರಣೆ ಇದೆ. ಭಾರತದಲ್ಲಿ ಸುಮಾರು 15,000 ಜಾತಿಯ ಔಷಧೀಯ ಗುಣ ಹೊಂದಿರುವ ಸಸ್ಯಗಳಿರುವುದು ಹೆಮ್ಮೆಯ ಸಂಗತಿಯಾಗಿದೆ. ಇವುಗಳಲ್ಲಿ ಸುಮಾರು 8000 ಸಸ್ಯಗಳನ್ನು ಚಿಕಿತ್ಸೆಗಾಗಿ ಇಂದಿಗೂ ಜನಪದ ವೈದ್ಯ ಸೇರಿದಂತೆ ಅನೇಕ ವೈದ್ಯ ಪದ್ಧತಿಗಳಲ್ಲಿ ನಿರಂತರವಾಗಿ ಬಳಸಲಾಗುತ್ತಿದೆ. ಪಾಶ್ಚಾತ್ಯ ವೈದ್ಯ ಪದ್ಧತಿಯ ಆಕ್ರಮಣದಿಂದಾಗಿ, ನಮ್ಮ ಸಾಂಪ್ರದಾಯಿಕ ವೈದ್ಯ ಪದ್ಧತಿಗಳಾದ ಆಯುರ್ವೇದ, ಯುನಾನಿ, ಟಿಬೆಟಿಯನ್ ಮತ್ತು ಜನಪದ ಪದ್ಧತಿಗಳನ್ನು ನಿರ್ಲಕ್ಷಿಸಲಾಗಿದೆ. ಆದರೆ ಇಂದು ಮತ್ತೊಮ್ಮೆ ದೀರ್ಘಕಾಲದ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ಈ ದೇಶೀಯ ವೈದ್ಯ ಪದ್ಧತಿಗೆ ಬೇಡಿಕೆ ಹೆಚ್ಚಾಗಿದೆ. ಇಂದು ಪ್ರತಿಯೊಂದು ಸೌಂದರ್ಯ ವರ್ಧಕ ವಸ್ತುಗಳ ಉತ್ಪಾದನೆಗೂ (ಹೇರ್ ಆಯಿಲ್, ಟೂತ್‌ಪೇಸ್ಟ್, ಬಾಡಿಲೋಷನ್, ಫೇಸ್ ಕ್ರೀಂ ಇತ್ಯಾದಿ) ಗಿಡಮೂಲಿಕೆಗಳನ್ನು ಬಳಸಲಾಗುತ್ತಿದೆ. ಈ ವಸ್ತುಗಳು ಪರಿಸರ ಸ್ನೇಹಿಯಾಗಿರುವುದಲ್ಲದೇ, ಅಡ್ಡ ಪರಿಣಾಮಗಳಿಂದ ಮುಕ್ತವಾಗಿವೆ ಮತ್ತು ದೊಡ್ಡ ಪ್ರಮಾಣದ ರಾಸಾಯನಿಕಗಳನ್ನು ಹೊಂದಿರುವುದಿಲ್ಲ.

### ಜೈವಿಕಗೊಬ್ಬರ(ಸಾವಯವಗೊಬ್ಬರ)(Biocomposting):

ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಭರದಲ್ಲಿ ಕಳೆದ ಐದು ದಶಕಗಳಿಂದ ಜೈವಿಕ ಗೊಬ್ಬರದ ಬಳಕೆಯನ್ನು ನಾವು ಸಂಪೂರ್ಣವಾಗಿ ನಿರ್ಲಕ್ಷಿಸಿ, ರಾಸಾಯನಿಕ ಗೊಬ್ಬರ ಬಳಕೆಯ ಮೇಲೆ ಅವಲಂಬಿತರಾಗಿದ್ದೇವೆ. ಇದರ ಪರಿಣಾಮವಾಗಿ, ರಾಸಾಯನಿಕಗಳಿಂದ ಭೂಮಿ ಮತ್ತು ನೀರು ಕಲುಷಿತಗೊಂಡಿದೆ ಮತ್ತು ನೀರಾವರಿಗೆ ವರ್ಷದಿಂದ ವರ್ಷಕ್ಕೆ ಬೇಡಿಕೆ ಹೆಚ್ಚುತ್ತಿದೆ.

ಆದರೆ ಈಗ ಇಡೀ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ರೈತರು ಬೇರೆ ಬೇರೆ ವಿಧದ ಸಾವಯವ ತ್ಯಾಜ್ಯಗಳಿಂದ ತಯಾರಿಸಿದ ಮಿಶ್ರ ಗೊಬ್ಬರದ ಬಳಕೆಯನ್ನು ಪುನಃ ಆರಂಭಿಸಿದ್ದಾರೆ. ಸೆಗಣಿ ಒಂದು ಪ್ರಮುಖ ಗೊಬ್ಬರ ಮತ್ತು ಮಣ್ಣಿನ ಸಂರಕ್ಷಣೆ ಆಗಿರುವುದರಿಂದ ಇದಕ್ಕಾಗಿಯೇ ದೇಶದ ಕೆಲವು ಭಾಗಗಳಲ್ಲಿ ಜಾನುವಾರುಗಳನ್ನು ಸಾಕಾಣೆ ಮಾಡಲಾಗುತ್ತಿದೆ

ಎರೆಹುಳುಗಳು ವೇಗವಾಗಿ ಜೈವಿಕ ತ್ಯಾಜ್ಯಗಳನ್ನು ಮಿಶ್ರಗೊಬ್ಬರವಾಗಿ ಪರಿವರ್ತಿಸುತ್ತವೆ. ಎರೆಹುಳುಗಳಿಂದ ಗೊಬ್ಬರ ತಯಾರಿಕೆ ವಿಧಾನವು ಈಗ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿದೆ. ಇದರಿಂದ ಘನತ್ಯಾಜ್ಯಗಳ ಪ್ರಮಾಣ ಕಡಿಮೆಯಾಗಿ, ನಗರ ಪ್ರಾಧಿಕಾರಗಳಿಗೂ ಪರೋಕ್ಷವಾಗಿ ಅನುಕೂಲವಾಗಿದೆ.

### ಜೈವಿಕ ರೋಗ ನಿಯಂತ್ರಣ (Biopest Centrol):

ಹಸಿರು ಕ್ರಾಂತಿಯ ಕಾರಣದಿಂದ, ಇಡೀ ದೇಶವು ಕೃಷಿ ಉತ್ಪಾದನೆ ಹೆಚ್ಚಿಸಲು ಹೆಚ್ಚು ಹೆಚ್ಚು ರಾಸಾಯನಿಕ ಕ್ರಿಮಿನಾಶಕಗಳನ್ನು ಬಳಸುವ ಭ್ರಮೆಗೆ ತಲುಪಿತು. ಶೀಘ್ರವಾಗಿ ಇವಗಳ ಪ್ರತಿಕೂಲ ಪರಿಣಾಮಗಳು ಕಾಣಲಾರಂಭಿಸಿದವು. ಇವುಗಳ ಅತಿಯಾದ ಬಳಕೆಯಿಂದಾಗಿ ಆಹಾರ ಉತ್ಪನ್ನಗಳು ಕಲುಷಿತಗೊಂಡವು. ಅಲ್ಲದೆ ಮಣ್ಣು, ನೀರು, ಅಂತರ್ಜಲವೂ ಸಹ ಮಲಿನವಾದವು. ಹಾಲು, ಮಾಂಸ ಮತ್ತು ಮೀನುಗಳು ಕೂಡಾ ಕಲುಷಿತಗೊಂಡವು. ಈ ಸವಾಲನ್ನು ಎದುರಿಸಲು ಈಗ ರೋಗ ಮತ್ತು ಕ್ರಿಮಿಗಳ

ನಿಯಂತ್ರಣಕ್ಕೆ ಉತ್ತಮ ವಿಧಾನಗಳನ್ನು ಬಳಕೆಗೆ ತರುವ ಪ್ರಯತ್ನ ನಡೆಯುತ್ತಿದೆ. ಸಸ್ಯಗಳು ಮತ್ತು ಗಿಡಮರಗಳಿಂದ ತಯಾರಿಸಿದ ಕ್ರಿಮಿನಾಶಕಗಳ ಬಳಕೆ ಅಂತಹ ಒಂದು ಕ್ರಮವಾಗಿದೆ. ಉದಾ: ಬೇವಿನ ಮರಗಳಿಂದ ತಯಾರಿಸಿದ ಕ್ರಿಮಿನಾಶಕವನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಮಿಶ್ರ ಬೆಳೆ ಬೇಸಾಯ ಮತ್ತು ಆವರ್ತ ಬೆಳೆ ಪದ್ಧತಿಗಳು ರೋಗ ನಿಯಂತ್ರಣಕ್ಕೆ ರೈತರಿಗೆ ಸಹಾಯಕಾರಿಯಾಗಿವೆ.

ಇದರೊಂದಿಗೆ ಕ್ರಿಮಿಕೀಟಗಳ ನಿಯಂತ್ರಣದಲ್ಲಿ, ಪ್ರಾಣಿಗಳು, ಪಕ್ಷಿಗಳು ವಹಿಸುವ ಪಾತ್ರದ ಬಗ್ಗೆ ರೈತರಲ್ಲಿ ಸಾಕಷ್ಟು ಜಾಗೃತಿ ಮೂಡಿದೆ. ಉದಾ: ಹಾವುಗಳು, ಹೆಗ್ಗಣ ಮತ್ತು ಇಲಿಗಳನ್ನು ತಿಂದು ಬೆಳೆಗಳು ಹಾಳಾಗುವುದನ್ನು ನಿಯಂತ್ರಿಸುತ್ತವೆ. ಹಾಗೆಯೇ ಗೂಬೆ, ನವಿಲು ಮತ್ತು ವಿವಿಧ ಪಕ್ಷಿಗಳು ಹುಳುಗಳನ್ನು ಮತ್ತು ಕ್ರಿಮಿಗಳನ್ನು ತಿನ್ನುತ್ತವೆ. ನಾವು ಇವುಗಳನ್ನು ರಕ್ಷಿಸಿ ಕೃಷಿ ಭೂಮಿಯ ಸುತ್ತಲೂ ನೆಲೆಸುವಂತೆ ನೋಡಿಕೊಂಡರೆ ಅವುಗಳು ಎಲ್ಲಾ ವಿಧದ ಕ್ರಿಮಿಕೀಟಗಳನ್ನು ನಾಶಪಡಿಸುತ್ತದೆ. ಹಲ್ಲಿಗಳೂ ಈ ನಿಟ್ಟಿನಲ್ಲಿ ಪ್ರಾಮುಖ್ಯತೆ ಪಡೆದಿವೆ. ಅವುಗಳ ಮಹತ್ವವನ್ನು ಅರಿತು ಅವುಗಳನ್ನು ರಕ್ಷಿಸಬೇಕಾಗಿದೆ.

ಇಂದು 'ಸುಸ್ಥಿರ ಅಭಿವೃದ್ಧಿ' ಎಂಬ ಪರಿಕಲ್ಪನೆ ಜನಪ್ರಿಯವಾಗುತ್ತಿದೆ. ವಾಸ್ತವಿಕವಾಗಿ ಅಭಿವೃದ್ಧಿ ಚಿಂತನೆಯ ದೃಷ್ಟಿಕೋನವೇ ಬದಲಾಗುತ್ತಿದೆ. ಹಲವಾರು ರೀತಿಯಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ವಿಶ್ಲೇಷಿಸಿದರೂ, ಈ ದಾರಿಯನ್ನು ದೇಶ ಅನುಸರಿಸಿದರೆ, ಶಾಶ್ವತವಾದ ಅಭಿವೃದ್ಧಿ ಮತ್ತು ದೇಶದ ಎಲ್ಲ ಜನರ ಯೋಗಕ್ಷೇಮ ಕಡಿಮೆಯಾಗದಿರುವ ಭರವಸೆ ಮೂಡುತ್ತದೆ.

## 9.6 ಉಪಸಂಹಾರ (CONCLUSION)

ಆರ್ಥಿಕ ಅಭಿವೃದ್ಧಿಯು ಹೆಚ್ಚುತ್ತಿರುವ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸಲು ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶವನ್ನಿಟ್ಟುಕೊಂಡ ಕಾರಣ ಪರಿಸರದ ಮೇಲೆ ತೀವ್ರ ಒತ್ತಡ ಹಾಕುತ್ತಿದೆ. ಅಭಿವೃದ್ಧಿಯ ಆರಂಭಿಕ ಹಂತಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಬೇಡಿಕೆ ಪೂರೈಕೆಗಿಂತ ಕಡಿಮೆಯಾಗಿತ್ತು. ಆದರೆ ಇಂದು ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆ ಮತ್ತು ದುರ್ಬಳಕೆಯಿಂದ ಅವುಗಳ ಪೂರೈಕೆ, ಬೇಡಿಕೆಗಿಂತ ಕಡಿಮೆಯಾಗಿದೆ. ಒಟ್ಟಿನಲ್ಲಿ ಪರಿಸರ ಸಮಸ್ಯೆಯನ್ನು ಕನಿಷ್ಟಗೊಳಿಸಿ ದೇಶದ ಆರ್ಥಿಕ ಅಭಿವೃದ್ಧಿ ಸಾಧಿಸುವುದು ಮತ್ತು ಮುಂದಿನ ಪೀಳಿಗೆಯ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವ ಸಾಮರ್ಥ್ಯದೊಂದಿಗೆ ರಾಜಿ ಮಾಡಿಕೊಳ್ಳದೆ ಇಂದಿನ ಪೀಳಿಗೆಯ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವುದು ಸುಸ್ಥಿರ ಅಭಿವೃದ್ಧಿಯ ಉದ್ದೇಶವಾಗಿದೆ.

## ಪುನರುಕ್ತಿ

- ಪರಿಸರ ನಾಲ್ಕು ಕಾರ್ಯಗಳನ್ನು ನಿರ್ವಹಿಸುತ್ತದೆ. ಸಂಪನ್ಮೂಲಗಳನ್ನು ಪೂರೈಸುತ್ತದೆ, ತ್ಯಾಜ್ಯಗಳನ್ನು ಹೀರಿಕೊಳ್ಳುತ್ತವೆ, ಜೀವ ವೈವಿಧ್ಯತೆ ಮತ್ತು ಅನುವಂಶೀಯತೆಯ ಮುಂದುವರಿಕೆಗೆ ಅವಕಾಶ ಒದಗಿಸುತ್ತದೆ. ಮನಸ್ಸಿಗೆ ಮುದ ನೀಡುವ ಪ್ರಕೃತಿ ಸೌಂದರ್ಯ ತಾಣಗಳನ್ನು ಸೃಷ್ಟಿಸುತ್ತದೆ.
- ಜನಸಂಖ್ಯಾ ಸ್ಫೋಟ, ವೈಭವೋಪೇತ ವಸ್ತುಗಳ ಅನುಭೋಗ ಮತ್ತು ಉತ್ಪಾದನೆಯ ಹೆಚ್ಚಳವು ಪರಿಸರದ ಮೇಲೆ ಅಗಾಧವಾದ ಒತ್ತಡ ಹೇರಿದೆ.
- ಭಾರತದಲ್ಲಿ ಅಭಿವೃದ್ಧಿ ಚಟುವಟಿಕೆಗಳು ನವೀಕರಿಸಲಾಗದ (ಮಿತವಾದ) ಸಂಪನ್ಮೂಲಗಳ ಮೇಲೆ ಕೂಡ ಹೆಚ್ಚು ಒತ್ತಡ ಬೀರುತ್ತಿವೆ. ಅಲ್ಲದೇ, ಮಾನವನ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ದುಷ್ಪರಿಣಾಮ ಬೀರುತ್ತಿವೆ.
- ಭಾರತದ ಪರಿಸರದ ಗುಣಮಟ್ಟಕ್ಕೆ ಎರಡು ಆಯಾಮಗಳಿಂದ ಅಪಾಯ ಇದೆ. ಬಡತನ ಪ್ರೇರಿತ ಅಂಶಗಳಿಂದಾಗುವ ಪರಿಸರ ಅವನತಿ ಮತ್ತು ವೈಭವೋಪೇತ ಜೀವನ ಸಂಸ್ಕೃತಿ ಮತ್ತು ತೀವ್ರ ಕೈಗಾರಿಕೀಕರಣದಿಂದಾಗುವ ಮಾಲಿನ್ಯಗಳ ಬೆದರಿಕೆ.
- ಸರಕಾರ ಹಲವಾರು ಕ್ರಮಗಳ ಮೂಲಕ ಪರಿಸರ ಸಂರಕ್ಷಣೆಗೆ ಪ್ರಯತ್ನಿಸಿದರೂ ಸುಸ್ಥಿರ ಅಭಿವೃದ್ಧಿಯ ತಂತ್ರಗಳನ್ನು ಅಳವಡಿಸಿಕೊಳ್ಳುವುದು ಸಹ ಅಗತ್ಯವಾಗಿದೆ.
- ಮುಂದಿನ ಪೀಳಿಗೆಯವರ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವ ಅವರ ಸಾಮರ್ಥ್ಯದೊಂದಿಗೆ ರಾಜಿ ಮಾಡಿಕೊಳ್ಳದೆ, ಇಂದಿನ ಪೀಳಿಗೆಯ ಅಗತ್ಯತೆಗಳನ್ನು ಈಡೇರಿಸುವ ಪ್ರಕ್ರಿಯೆ ಸುಸ್ಥಿರ ಅಭಿವೃದ್ಧಿಯಾಗಿದೆ.
- ನೈಸರ್ಗಿಕ ಸಂಪನ್ಮೂಲಗಳ ಅಭಿವೃದ್ಧಿ, ಪರಿಸರದ ಪುನರುತ್ಪತ್ತಿ, ಸಾಮರ್ಥ್ಯವನ್ನು ಸಂರಕ್ಷಿಸುವುದು, ಮತ್ತು ಮುಂದಿನ ಪೀಳಿಗೆಯ ಮೇಲೆ ಪರಿಸರ ಮಾಲಿನ್ಯದ ತೊಂದರೆ ಮತ್ತು ಅಪಾಯಗಳನ್ನು ತಡೆಯುವುದರ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಬಹುದು.



## ಅಭ್ಯಾಸಗಳು

1. ಪರಿಸರ ಎಂದರೇನು?
2. ಸಂಪನ್ಮೂಲಗಳ ಪುನರುತ್ಪತ್ತಿಗಿಂತ ಸಂಪನ್ಮೂಲಗಳ ಹೊರ ತೆಗೆಯುವಿಕೆ ದರ ಅಧಿಕವಾದರೆ ಏನಾಗುತ್ತದೆ?
3. ಈ ಕೆಳಗಿನವುಗಳನ್ನು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳೆಂದು ವಿಂಗಡಿಸಿ.

| | | |
|---|---|---|
| i. ಮರಗಳು | ii. ಮೀನು | iii. ಪೆಟ್ರೋಲಿಯಂ |
| iv. ಕಲ್ಲಿದ್ದಲು | v. ಕಬ್ಬಿಣದ ಅದಿರು | vi. ನೀರು |

4. ಇಂದು ಜಗತ್ತು ಎದುರಿಸುವ ಎರಡು ಪ್ರಮುಖ ಪರಿಸರ ಸಮಸ್ಯೆಗಳು __________ ಮತ್ತು __________.

5. ಈ ಕೆಳಗಿನ ಅಂಶಗಳು ಭಾರತದಲ್ಲಿ ಹೇಗೆ ಪರಿಸರ ಬಿಕ್ಕಟ್ಟಿಗೆ ಕಾರಣವಾಗಿವೆ? ಸರಕಾರಕ್ಕೆ ಅವುಗಳು ಯಾವ ರೀತಿಯ ಸಮಸ್ಯೆಯನ್ನು ಒಡ್ಡುತ್ತಿವೆ?

   i. ಜನಸಂಖ್ಯೆ ಏರಿಕೆ  ii. ವಾಯು ಮಾಲಿನ್ಯ
   iii. ನೀರು ಕಲುಷಿತವಾಗುವುದು (ಜಲಮಾಲಿನ್ಯ)  iv. ವೈಭವೋಪೇತ ಅನುಭೋಗ
   v. ಅನಕ್ಷರತೆ  vi. ಕೈಗಾರಿಕೀಕರಣ
   vii. ನಗರೀಕರಣ  viii. ಅರಣ್ಯ ಸಂಪನ್ಮೂಲದ ಕ್ಷೀಣತೆ
   ix. ಅತಿಕ್ರಮಣ  x. ಜಾಗತಿಕ ತಾಪಮಾನ

6. ಪರಿಸರದ ಕಾರ್ಯಗಳು ಯಾವುವು?

7. ಭಾರತದಲ್ಲಿ ಭೂಮಿಯ ಗುಣಮಟ್ಟದ ಕ್ಷೀಣತೆಗೆ ಆರು ಕಾರಣಗಳನ್ನು ಗುರುತಿಸಿ

8. ಪರಿಸರದ ಮೇಲಿನ ಋಣಾತ್ಮಕ ಪರಿಣಾಮಗಳ ಸದವಕಾಶ ವೆಚ್ಚವು ಹೇಗೆ ಹೆಚ್ಚಾಗಿದೆ? ವಿವರಿಸಿ.

9. ಭಾರತದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸಲು ಅಳವಡಿಸಿಕೊಂಡ ಕ್ರಮಗಳನ್ನು ವಿವರಿಸಿ

10. ಭಾರತವು ಹೇರಳವಾದ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದೆ – ಈ ಹೇಳಿಕೆಯನ್ನು ಪ್ರಮಾಣೀಕರಿಸಿ.

11. ಪರಿಸರ ಬಿಕ್ಕಟ್ಟು ಇತ್ತೀಚಿನ ಒಂದು ಸಂಗತಿಯೇ? ಹೌದಾದರೆ ಏಕೆ?

12. ಈ ಕೆಳಗಿನವುಗಳಿಗೆ ಎರಡು ಉದಾಹರಣೆ ನೀಡಿ –

   (a) ಪರಿಸರ ಸಂಪನ್ಮೂಲಗಳ ಅತಿಯಾದ ಬಳಕೆ  (b) ಪರಿಸರ ಸಂಪನ್ಮೂಲಗಳ ದುರ್ಬಳಕೆ

13. ಭಾರತದ ಪರಿಸರದ ಮೇಲೆ ಒತ್ತಡ ಬೀರುವ ಯಾವುದಾದರೂ ನಾಲ್ಕು ಅಂಶಗಳನ್ನು ತಿಳಿಸಿ. ಪರಿಸರದ ಹಾನಿಯನ್ನು ಸರಿಪಡಿಸುವ ಕ್ರಮಗಳ ಅವಕಾಶ ವೆಚ್ಚವನ್ನು – ವಿವರಿಸಿ

14. ಪರಿಸರ ಸಂಪನ್ಮೂಲಗಳ ಪೂರೈಕೆ ಮತ್ತು ಬೇಡಿಕೆ ತಿರುವು ಮುರುವಾಗಿರುವುದನ್ನು ವಿವರಿಸಿ.

15. ಪ್ರಸ್ತುತ ಪರಿಸರ ಬಿಕ್ಕಟ್ಟಿನ ಕುರಿತು ವಿವರಣೆ ಕೊಡಿ

16. ಭಾರತದಲ್ಲಿ ಅಭಿವೃದ್ಧಿಯು ಪರಿಸರದ ಮೇಲೆ ಯಾವುದಾದರೂ ಎರಡು ರೀತಿಯಲ್ಲಿ ದುಷ್ಪರಿಣಾಮ ಬೀರಿರುವುದರ ಬಗ್ಗೆ ಬೆಳಕು ಚೆಲ್ಲಿ. ಎರಡು ಆಯಾಮಗಳಿಂದ ಭಾರತ ಪರಿಸರ ಸಮಸ್ಯೆಯನ್ನು ಎದುರಿಸುತ್ತಿದೆ – ಅವುಗಳೆಂದರೆ ಬಡತನ ಪ್ರೇರಿತ ಪರಿಸರ ಸಮಸ್ಯೆ ಮತ್ತು ವೈಭವೋಪೇತ ಜೀವನ ಸಂಸ್ಕೃತಿ – ಇದು ಸರಿಯೇ?

17. ಸುಸ್ಥಿರ ಅಭಿವೃದ್ಧಿ ಎಂದರೇನು?

18. ನಿಮ್ಮ ಸ್ಥಳೀಯ ಪ್ರದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸುಸ್ಥಿರ ಅಭಿವೃದ್ಧಿಯ ಯಾವುದಾದರೂ ನಾಲ್ಕು ಕಾರ್ಯ ತಂತ್ರಗಳನ್ನು ವಿವರಿಸಿ.

19. ಸುಸ್ಥಿರ ಅಭಿವೃದ್ಧಿಯ ವ್ಯಾಖ್ಯೆಯಲ್ಲಿ ಅಂತರ್ ಪೀಳಿಗೆಯ ಸಮಾನತೆಯ ಔಚಿತ್ಯವನ್ನು ವಿವರಿಸಿ.



## ಸೂಚಿಸಿದ ಹೆಚ್ಚುವರಿ ಚಟುವಟಿಕೆಗಳು

1. ಪ್ರಮುಖ ಪಟ್ಟಣಗಳ ರಸ್ತೆಗಳಲ್ಲಿ ಪ್ರತಿ ವರ್ಷ 70 ಲಕ್ಷ ಕಾರುಗಳು ಹೆಚ್ಚಾಗುತ್ತಿವೆ ಎಂದು ಭಾವಿಸಿ. ಇದರಿಂದ ಯಾವ ವಿಧದ ಸಂಪನ್ಮೂಲ ಕ್ಷೀಣಿಸುತ್ತದೆ ಎಂದು ನೀವು ಯೋಚಿಸುವಿರಿ? ಚರ್ಚಿಸಿ.

2. ಪುನರ್ ಬಳಕೆ ಮಾಡಬಹುದಾದ ವಸ್ತುಗಳ ಪಟ್ಟಿ ತಯಾರಿಸಿ.

3. ಭಾರತದಲ್ಲಿ ಮಣ್ಣು ಸವೆತದ (ಭೂ ಸವೆತ) ಕಾರಣಗಳು ಮತ್ತು ಪರಿಹಾರೋಪಾಯಗಳ ಬಗ್ಗೆ ಒಂದು ಪಟ್ಟಿ ತಯಾರಿಸಿ

4. ಜನಸಂಖ್ಯೆ ಸ್ಫೋಟ ಪರಿಸರ ಬಿಕ್ಕಟ್ಟಿಗೆ ಹೇಗೆ ಕಾರಣವಾಗುತ್ತದೆ ? ತರಗತಿಯಲ್ಲಿ ಚರ್ಚಾ ಕೂಟ ಏರ್ಪಡಿಸಿ.

5. ಪರಿಸರದ ಹಾನಿಯನ್ನು ಸರಿಪಡಿಸಲು ದೇಶ ಭಾರೀ ಬೆಲೆ ತೆರಬೇಕಾಗಿದೆ. ಚರ್ಚಿಸಿ.

6. ನಿಮ್ಮ ಗ್ರಾಮದಲ್ಲಿ ಒಂದು ಕಾಗದದ ಕಾರ್ಖಾನೆಯನ್ನು ಸ್ಥಾಪಿಸಬೇಕಾಗಿದೆ. ಆಗ ಒಬ್ಬ ಪರಿಸರ ಕಾರ್ಯಕರ್ತ, ಒಬ್ಬ ಕೈಗಾರಿಕೋದ್ಯಮಿ ಮತ್ತು ಗ್ರಾಮೀಣ ಜನರ ಗುಂಪಿನ ಪಾತ್ರವನ್ನು ವ್ಯವಸ್ಥೆಗೊಳಿಸಿ.



## REFERENCES

**Books:**

AGARWAL, ANIL AND SUNITA NARAIN, 1996, Global Warming in an Unequal World. Centre for Science and Environment. Reprint Edition. New Delhi

BHARUCHA, E. 2015 Textbook of Environment Studies for Undergraduate Courses, Universities Press (India) Pvt., Ltd.

CENTRE FOR SCIENCE AND ENVIRONMENT. 1996,. State of India's Environment

1. The First Citizens' Report 1982, Reprint Edition, New Delhi

CENTRE FOR SCIENCE AND ENVIRONMENT. 1996. State of India's Environment

2. The Second Citizens' Report 1985, Reprint Edition, New Delhi.

KARPAGAM. M . 2001. Environmental Economics: A Textbook. Sterling Publishers, New Delhi.

RAJAGOPALN, R. 2005. Environmental Studies: From Crisis to Cure. Oxford, University Press, New Delhi.

SCHUMACHER, E.F. Small is Beautiful, Abacus Publishers, NewYork.

**Journals**

Scientific American, India, Special Issue, September 2005

Down to Earth, Centre for Science and Environment, New Delhi.

**Websites**

http://envfor.nic.in

http://cpch.nic.in

http://www.cseindia.org

# ಘಟಕ

# IV

## ಭಾರತದ ಅಭಿವೃದ್ಧಿಯ ಅನುಭವಗಳು: ನೆರರಾಷ್ಟ್ರಗಳೊಂದಿಗೆ ತೌಲನಿಕ ಅಧ್ಯಯನ

## DEVELOPMENT EXPERIENCE OF INDIA: A COMPARISON WITH NEIGHBOURS

ಇಂದಿನ ಜಾಗತೀಕರಣದ ಯುಗದಲ್ಲಿ ಭೌಗೋಳಿಕ ಗಡಿಗಳು ನಿಧಾನವಾಗಿ ಅರ್ಥಹೀನವಾಗುತ್ತಿರುವಾಗ, ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ನೆರೆ ರಾಷ್ಟ್ರಗಳು ಅಳವಡಿಸಿದ ಅಭಿವೃದ್ಧಿ ಕಾರ್ಯತಂತ್ರಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಏಕೆಂದರೆ ಇವು ಜಾಗತಿಕ ಮಾರುಕಟ್ಟೆಯ ಸೀಮಿತ ಆರ್ಥಿಕ ಸ್ಥಳವನ್ನು ಹಂಚಿಕೊಳ್ಳುತ್ತವೆ. ಈ ಘಟಕದಲ್ಲಿ ನಾವು ಭಾರತದ ಅಭಿವೃದ್ಧಿಯ ಅನುಭವಗಳನ್ನು ಅದರ ಎರಡು ಪ್ರಮುಖ ಮತ್ತು ನಿರ್ಣಾಯಕ ನೆರೆ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಚೀನಾದೊಂದಿಗೆ ತುಲನೆ ಮಾಡುತ್ತೇವೆ.

10

# ಅಧ್ಯಾಯ–10

# ಭಾರತದ ಮತ್ತು ಅದರ ನೆರೆ ರಾಷ್ಟ್ರಗಳ ಅಭಿವೃದ್ಧಿಯ ಅನುಭವಗಳ ತೌಲನಿಕ ಅಧ್ಯಯನ

# COMPARATIVE DEVELOPMENT EXPERIENCES OF INDIA AND ITS NEIGHBOURS

**ಈ ಅಧ್ಯಾಯದ ಅಧ್ಯಯನದ ನಂತರ ನೀವು,**

- ಭಾರತದ ವಿವಿಧ ಆರ್ಥಿಕ ಮತ್ತು ಮಾನವ ಅಭಿವೃದ್ಧಿ ಸೂಚಕಗಳ ಅಂಕಿ ಅಂಶಗಳನ್ನು ಇದರ ನೆರೆಯ ರಾಷ್ಟ್ರಗಳಾದ ಚೀನಾ ಮತ್ತು ಪಾಕಿಸ್ತಾನದೊಂದಿಗೆ ತುಲನೆ ಮಾಡುವುದು ಅರ್ಥೈಸಿಕೊಳ್ಳುವಿರಿ.
- ಭಾರತದ ನೆರೆಯ ಅರ್ಥವ್ಯವಸ್ಥೆಗಳು ಪ್ರಸಕ್ತ ಆರ್ಥಿಕಾಭಿವೃದ್ಧಿಗಾಗಿ ಅಳವಡಿಸಿಕೊಂಡಿರುವ ಕಾರ್ಯತಂತ್ರಗಳನ್ನು ಅಂದಾಜು ಮಾಡುವುದನ್ನು ತಿಳಿಯುವಿರಿ.

> ಭೂಗೋಳ ನಮ್ಮನ್ನು ನೆರೆಹೊರೆಯನ್ನಾಗಿಸಿದೆ. ಇತಿಹಾಸ ನಮ್ಮನ್ನು ಗೆಳಯರನ್ನಾಗಿಸಿದೆ. ಅರ್ಥಶಾಸ್ತ್ರ ನಮ್ಮನ್ನು ಪಾಲುದಾರರನ್ನಾಗಿಸಿದೆ. ಹಾಗು ಅವಶ್ಯಕತೆಯು ನಮ್ಮನ್ನು ಒಗ್ಗೂಡಿಸಿದೆ. ಈ ರೀತಿ ಆ ದೇವರು ನಮ್ಮನ್ನೆಲ್ಲಾ ಒಡಗೂಡಿಸಿರುವಾಗ, ಯಾವುದೇ ವ್ಯಕ್ತಿ ಮತ್ತೊಬ್ಬನಿಗೆ ಶರಣಾಗುವ ಅಗತ್ಯವಿಲ್ಲ.
>
> **– ಜೌನ್.ಎಫ್.ಕೆನಡಿ.**

## 10.1 ಪೀಠಿಕೆ (INTRODUCTION)

ಈ ಹಿಂದಿನ ಘಟಕಗಳಲ್ಲಿ ನಾವು ಭಾರತದ ಆರ್ಥಿಕ ಅಭಿವೃದ್ಧಿಯ ಅನುಭವಗಳನ್ನು ವಿವರವಾಗಿ ಅಧ್ಯಾಯನ ಮಾಡಿದ್ದೇವೆ. ಇದರ ಜೊತೆಗೆ ನಾವು ಭಾರತ ಅಳವಡಿಸಿಕೊಂಡ ನೀತಿಗಳು ವಿವಿಧ ಆರ್ಥಿಕ ವಲಯಗಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಿದವು ಎಂಬುದನ್ನು ಸಹ ತಿಳಿದಿದ್ದೇವೆ. ಕಳೆದ ಎರಡು ದಶಕಗಳಿಂದಲೂ ಜಾಗತೀಕರಣ ಪ್ರಕ್ರಿಯೆಯಿಂದಾಗಿ, ಭಾಗಶಃ ವಿಶ್ವದ ಎಲ್ಲಾ ದೇಶಗಳಲ್ಲಿ ಹೊಸ ಆರ್ಥಿಕ ಪರಿವರ್ತನೆಗಳು ಉಂಟಾಗುತ್ತಿವೆ. ಈ ಪರಿವರ್ತನೆಗಳು ಭಾರತವೂ ಒಳಗೊಂಡಂತೆ ದೇಶಗಳ ಮೇಲೆ ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಣಾಮಗಳನ್ನು ಬೀರಿವೆ. ರಾಷ್ಟ್ರಗಳು ತಮ್ಮ ಆರ್ಥಿಕತೆಗಳನ್ನು ಬಲಿಷ್ಟಗೊಳಿಸಲು ಅನೇಕ ವಿಧಾನಗಳನ್ನು ಅನುಸರಿಸುತ್ತಿದೆ. ಇದೆ ಉದ್ದೇಶದಿಂದ ಹಲವಾರು ಪ್ರಾದೇಶಿಕ ಮತ್ತು ಜಾಗತೀಕ ಅರ್ಥಿಕ ಸಂಘಟನೆಗಳನ್ನು ರಚಿಸಿಕೊಂಡಿವೆ. ಉದಾ: SAARC, European Union, ASEAN, G-8, G-20, BRICS ಇತ್ಯಾದಿ. ಇದಲ್ಲದೆ ತಮ್ಮ ನೆರೆ ರಾಷ್ಟ್ರಗಳು ಅಳವಡಿಸಿಕೊಂಡ ಅಭಿವೃದ್ಧಿ ವಿಧಾನಗಳು ತಿಳಿದುಕೊಳ್ಳುವ ಕಾತುರ ಎಲ್ಲಾ ರಾಷ್ಟ್ರಗಳಲ್ಲಿ ಹೆಚ್ಚಾಗುತ್ತಿದೆ. ಇದು ಆಯಾ ರಾಷ್ಟ್ರಗಳ ಬಲ–ದುರ್ಬಲತೆಗಳನ್ನು ಅರಿಯಲು ಅನುಕೂಲವಾಗುತ್ತದೆ. ಜಾಗತೀಕರಣದ ಪ್ರಕ್ರಿಯೆಯಿಂದಾಗಿ ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಇದು ಅವಶ್ಯಕ ಎಂದು ಪರಿಗಣಿಸಲಾಗಿದೆ. ಏಕೆಂದರೆ ತುಲಾನಾತ್ಮಕವಾಗಿ ಸೀಮಿತ ಆರ್ಥಿಕ ಸ್ಥಳದಲ್ಲಿ ಅವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಪೈಪೋಟಿ ಎದುರಿಸುವುದಲ್ಲದೆ, ತಮ್ಮ ತಮ್ಮಲಿಯೂ ಕೂಡ ಪೈಪೋಟಿಯನ್ನು ಎದುರಿಸಬೇಕಾಗಿದೆ. ಇದಲ್ಲದೆ ನೆರೆ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಗಳ ತಿಳುವಳಿಕೆ ಅವಶ್ಯಕವಾಗಿರುತ್ತದೆ. ಏಕೆಂದರೆ ಆ ಪ್ರದೇಶದ ಪ್ರಮುಖ ಸಾಮಾನ್ಯ ಆರ್ಥಿಕ ಚಟುವಟಿಕೆಗಳು ಒಂದು ಭಾಗಿದಾರ ಪರಿಸರದಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿರುತ್ತದೆ.

ಈ ಅಧ್ಯಾಯದಲ್ಲಿ ನಾವು ಭಾರತ ಮತ್ತು ಅದರ ದೊಡ್ಡ ನೆರೆ ರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೀನಾ ಅಳವಡಿಸಿಕೊಂಡಿರುವ ಅಭಿವೃದ್ಧಿ ಕಾರ್ಯತಂತ್ರಗಳನ್ನು ಪರಸ್ಪರ ಹೋಲಿಸಿದ್ದೇವೆ. ಆದರೆ ಇದು ನಿಮಗೆ ನೆನೆಪಿರಲಿ, ಅದಾಗ್ಯೂ ಅಪಾರ ಪ್ರಮಾಣದ ನೈಸರ್ಗಿಕ ಸಂಪತ್ತುವಿನಲ್ಲಿ ಸಮಾನತೆಯನ್ನು ಹೊಂದಿದ್ದರೂ, ಕಳೆದ ಅರ್ಧ ಶತಮಾನದಿಂದಲೂ ಜ್ಯಾತ್ಯಾತೀತ ಹಾಗು ಆಳವಾದ ಉದಾರಿಕೃತ ಸಂವಿಧಾನ ಮತ್ತು ವಿಶ್ವದ ದೊಡ್ಡ ಪ್ರಜಾಪ್ರಭುತ್ವ ಹೊಂದಿದ ಭಾರತ ದೇಶದ ರಾಜಕೀಯ ಶಕ್ತಿ, ಪಾಕಿಸ್ತಾನದ ಸೈನ್ಯವಾದಿ ರಾಜಕೀಯ ಶಕ್ತಿ ಸಂರಚನೆಗೆ ಮತ್ತು ಚೀನಾದ ನಿಯಂತ್ರಿತ ಅರ್ಥಕತೆಯಲ್ಲಿ ಯಾವ ಸಮಾನತೆಗಳು ಕಂಡು ಬರುವುದಿಲ್ಲ, ಇತ್ತೀಚೆಗೆ ಚೀನಾ ದೇಶವು ಉದಾರೀಕೃತ ಅರ್ಥವ್ಯವಸ್ಥೆಯ ಮರು ರಚನೆಗೆ ಸಿದ್ಧತೆ ನಡೆಸಿದೆ.

## 10.2 ಅಭಿವೃದ್ಧಿ ಪಥ : ಕ್ಷಿಪ್ರ ನೋಟ (DEVELOPMENTAL PATH-A SNAPSHOT VIEW)

ಭಾರತ, ಪಾಕಿಸ್ತಾನ ಮತ್ತು ಚೀನಾ ದೇಶಗಳ ಅಭಿವೃದ್ಧಿಯ ಕಾರ್ಯತಂತ್ರಗಳು ಅನೇಕ ಏಕರೂಪತೆಗಳನ್ನು ಹೊಂದಿವೆ ಎಂಬುದು ನಿಮಗೆ ತಿಳಿದಿದೆಯೆ? ಈ ಮೂರು ದೇಶಗಳು ಅಭಿವೃದ್ಧಿಯ ಪಥವನ್ನು ಆರಂಭಿಸಿದ್ದು ಏಕಕಾಲದಲ್ಲಿಯೇ. ಭಾರತ ಮತ್ತು ಪಾಕಿಸ್ತಾನ 1947 ರಲ್ಲಿ ಸ್ವತಂತ್ರ ಪಡೆದರೆ, ಚೀನಾ ಗಣರಾಜ್ಯವಾದದ್ದು 1949ರಲ್ಲಿ. ಅಂದು ಪಂಡಿತ್ ಜವಾಹರಲಾಲ್ ನೆಹರುರವರು ತಮ್ಮ ಭಾಷಣದಲ್ಲಿ ಈ

ರೀತಿಯಾಗಿ ಹೇಳಿದ್ದಾರೆ. "ಭಾರತ ಮತ್ತು ಚೀನಾ ದೇಶಗಳ ನಡುವೆ ವಿಚಾರಗಳ ಭೇದವಿರಬಹುದು, ಆದರೆ ಹೊಸ ಮತ್ತು ಕ್ರಾಂತಿಕಾರಕ ಬದಲಾವಣೆಗಳು ಏಷಿಯಾದ ಹೊಸ ಸ್ಫೂರ್ತಿಯ ಸಂಕೇತವಾಗಿ, ಏಷಿಯಾದ ದೇಶಗಳಲ್ಲಿ ಹೊಸ ಜೀವ ಚೇತನ ಭಾವವನ್ನು ಮೂಡಿಸಿದೆ."

ಈ ಮೂರು ದೇಶಗಳು ಅಭಿವೃದ್ಧಿಯ ಕಾರ್ಯತಂತ್ರಗಳ ಯೋಜನೆಗಳು ಸಮಾನ ರೂಪದಲ್ಲಿ ಆರಂಭಿಸಿದವು. ಭಾರತ 1951–56 ರಲ್ಲಿ ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಘೋಷಣೆ ಮಾಡಿದರೆ, ಪಾಕಿಸ್ತಾನವು ತನ್ನ ಪ್ರಥಮ ಪಂಚವಾರ್ಷಿಕ ಯೋಜನೆ, ಈಗ ಕರೆಯುವಂತೆ ಮಧ್ಯಮ ಅವಧಿಯ ಅಭಿವೃದ್ಧಿ ಯೋಜನಯನ್ನು 1956 ರಲ್ಲಿ ಘೋಷಿಸಿತು. ಚೀನಾ ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯನ್ನು 1953 ರಲ್ಲಿ ಘೋಷಿಸಿತು. 2013 ರಲ್ಲಿ ಪಾಕಿಸ್ತಾನ ತನ್ನ 11ನೆಯ ಪಂಚವಾರ್ಷಿಕ ಅಭಿವೃದ್ಧಿ ಯೋಜನೆ (2013–18) ಕಾರ್ಯರಂಭ ಮಾಡಿದೆ. ಚೀನಾದೇಶದ 12ನೆಯ ಪಂಚವಾರ್ಷಿಕ ಯೋಜನೆಯ ಅವಧಿ 2011–2015 ಆಗಿರುತ್ತದೆ. ಪ್ರಸ್ತುತ ಭಾರತದ ಯೋಜನೆಯು 12ನೇಯ ಪಂಚವಾರ್ಷಿಕ ಯೋಜನೆಯುನ್ನು (2012–2017) ಆಧರಿಸಿದೆ. ಭಾರತ ಮತ್ತು ಪಾಕಿಸ್ತಾನ ಬೃಹತ್ ಕೈಗಾರಿಕೆಗಳ ಸ್ಥಾಪನೆ ಮತ್ತು ಸಾಮಾಜಿಕ ಅಭಿವೃದ್ಧಿಯ ಮೇಲೆ ಅಧಿಕ ಸಾರ್ವಜನಿಕ ವೆಚ್ಚ ಹೂಡಿಕೆಯಂತಹ ಸಮಾನರೂಪದ ತಂತ್ರಗಳನ್ನು ಅಳವಡಿಸಿಕೊಂಡಿವೆ. ಉದಾ; 1980 ರವರೆಗೆ ಈ ಮೂರು ದೇಶಗಳು ಸಮಾನ ಆರ್ಥಿಕ ಬೆಳವಣಿಗೆ ದರ ಮತ್ತು ತಲಾ ಆದಾಯ ಹೊಂದಿದ್ದವು, ಆದರೆ ಈಗ ಈ ದೇಶಗಳು ಯಾವ ಸ್ಥಾನದಲ್ಲಿ ನಿಂತಿವೆಯೆಂದರೆ ಅವುಗಳನ್ನು ಒಂದೂಕ್ಕೊಂದು ಹೋಲಿಸಲು ಸಾಧ್ಯವೇ ? ಈ ಪ್ರಶ್ನೆಗೆ ಉತ್ತರವನ್ನು ಹೇಳುವ ಮೊದಲು ನಾವು ಚೀನಾ ಮತ್ತು ಪಾಕಿಸ್ತಾನ ದೇಶಗಳ ಅಭಿವೃದ್ಧಿ ನೀತಿಗಳ ಐತಿಹಾಸಿಕ ಹಾದಿಯನ್ನು ಕಂಡುಹಿಡಿಯೋಣ. ಹಿಂದಿನ ಮೂರು ಘಟಕಗಳ ಅಧ್ಯಯನದಿಂದ ನಮಗೆ ಭಾರತ ಸ್ವತಂತ್ರದ ನಂತರದಿಂದ ಇಲ್ಲಿಯವರೆಗೆ ಯಾವ ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡು ಬಂದಿದೆ ಎಂದು ತಿಳಿದಿರುತ್ತದೆ.

### ಚೀನಾ (China):

ಒಂದೇ ಪಕ್ಷದ ಅಡಿಯಲ್ಲಿ ಪ್ರಜಾಸತ್ತಾತ್ಮಕ ಗಣರಾಜ್ಯ ಸ್ಥಾಪನೆ ಮಾಡಿದ ನಂತರ ಆರ್ಥಿಕತೆಯ ಎಲ್ಲಾ ಪ್ರಮುಖ ವಲಯಗಳು, ಉದ್ಯಮಗಳು, ಖಾಸಗಿ ವ್ಯಕ್ತಿಗಳ ನಿರ್ವಹಣೆ ಹಾಗು ಒಡತನಕ್ಕೆ ಸೇರಿದ ಭೂಮಿ (ಜಮೀನು)ಗಳನ್ನು ಸರಕಾರದ ನಿಯಂತ್ರಣಕ್ಕೆ ಒಳಪಡಿಸಲಾಯಿತು. 1958 ರಲ್ಲಿ **"ಮಹಾ ಮುಂಜಿಗಿತ ಅಭಿಯಾನ"** ಆರಂಭಿಸಲಾಯಿತು. ಇದರ ಮುಖ್ಯ ಉದ್ದೇಶ ದೇಶವನ್ನು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೀರಣಗೊಳಿಸುವುದಾಗಿತ್ತು. ಜನರನ್ನು ಮನೆಯ ಹಿತ್ತಲಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ **"ಕಮ್ಯೂನ್"**ಗಳ ಪ್ರಾರಂಭವಾದವು. ಕಮ್ಯೂನ್ ಪದ್ಧತಿ ಅಡಿಯಲ್ಲಿ ಜನರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದರು. 1958 ರ ವೇಳೆಗೆ ಎಲ್ಲಾ ಕೃಷಿಕರನ್ನು ಒಳಗೊಂಡಂತೆ ದೇಶದಲ್ಲಿ 26000 ಕಮ್ಯೂನ್‌ಗಳು ರಚನೆಯಾದವು. ಮಹಾ ಮುಂಜಿಗಿತ ಅಭಿಯಾನ ಅನೇಕ ಸಮಸ್ಯೆಗಳನ್ನು ಎದುರಿಸಿತು. ಭೀಕರ ಬರಗಾಲವು ಸುಮಾರು 30 ಮಿಲಿಯನ್ ಜನರನ್ನು ಕೊಂದು ವ್ಯಾಪಕ ಹಾನಿ ಉಂಟುಮಾಡಿತು. ರಷ್ಯಾ ಮತ್ತು ಚೀನಾ ದೇಶದ ನಡುವೆ ಸಂಘರ್ಷವಾದಾಗ ರಷ್ಯಾ ತನ್ನ ವೃತ್ತಿಪರರನ್ನು ಹಿಂದಕ್ಕೆ ಕರೆಸಿಕೊಂಡಿತ್ತು. ಹಿಂದೆ ರಷ್ಯಾ ದೇಶವು ಈ ವೃತ್ತಿಪರರನ್ನು ಚೀನಾ ದೇಶದ ಕೈಗಾರಿಕೀರಣ ಪ್ರಕ್ರಿಯೆಯಲ್ಲಿ ನೆರವಾಗಲು ಕೊಟ್ಟಿತು. 1965 ರಲ್ಲಿ ಮಾವೊ **'ಶ್ರಮಿಕ ವರ್ಗದ ಸಾಂಸ್ಕೃತಿಕ ಮಹಾ ಕ್ರಾಂತಿ'** (1966–76) ಆರಂಭ ಮಾಡಿ, ವಿದ್ಯಾರ್ಥಿಗಳನ್ನು ಮತ್ತು ವೃತ್ತಿಪರರನ್ನು ಗ್ರಾಮಾಂತರ ಕೆಲಸಗಳನ್ನು ಕಲಿಯಲು ಮತ್ತು ಅಧ್ಯಾಯ ಮಾಡಲು ಗ್ರಾಮೀಣ ಪ್ರದೇಶಗಳಿಗೆ ಕಳುಹಿಸಲಾಯಿತು.

ಇಂದಿನ ಚೀನಾ ದೇಶದ ಕೈಗಾರಿಕೆ ಬೆಳವಣಿಗೆಯ ಜಾಡನ್ನು 1978ರಲ್ಲಿ ಜಾರಿಗೆ ತಂದ ಸುಧಾರಣೆಗಳಲ್ಲಿ ಕಾಣಬಹುದು. ಚೀನಾ ಸುಧಾರಣೆಗಳನ್ನು ಹಂತ–ಹಂತವಾಗಿ ಅಳವಡಿಸಿಕೊಂಡಿದೆ. ಆರಂಭಿಕ ಹಂತದಲ್ಲಿ ಸುಧಾರಣೆಗಳನ್ನು ಕೃಷಿ, ವಿದೇಶಿ ವ್ಯಾಪಾರ ಮತ್ತು ಹೂಡಿಕೆ ವಲಯಗಳಲ್ಲಿ ಅಳವಡಿಸಲಾಯಿತು. ಉದಾ. ಕೃಷಿ ಕ್ಷೇತ್ರದಲ್ಲಿ

ಕಮ್ಯೂನನ ಜಮೀನುಗಳನ್ನು ಸಣ್ಣ ಹಿಡುವಳಿಗಳನ್ನಾಗಿ ವಿಭಜಿಸಿ ಪ್ರತಿ ಕುಟುಂಬಗಳಿಗೆ ಹಂಚಲಾಯಿತು. (ಉಪಯೋಗಕ್ಕಾಗಿ, ಮಾಲೀಕತ್ವಕಲ್ಲ) ನಿಗದಿತ ತೆರಿಗೆಯನ್ನು ಪಾವತಿಸಿದ ನಂತರ ಕುಟುಂಬಗಳು ಜಮೀನಿನಿಂದ ಬರುವ ಎಲ್ಲಾ ಆದಾಯವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವ ಅವಕಾಶವಿತ್ತು. ನಂತರದ ಹಂತದಲ್ಲಿ, ಕೈಗಾರಿಕೆ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಅಳವಡಿಸಿಕೊಳ್ಳಲಾಯಿತು. ಸಾಮಾನ್ಯವಾಗಿ ಖಾಸಗಿ ಉದ್ದಿಮೆಗಳು ಮತ್ತು ಪಟ್ಟಣ ಮತ್ತು ಗ್ರಾಮೀಣ ಉದ್ದಿಮೆಗಳು ಅಂದರೆ ಸ್ಥಳೀಯರ ಸಾಮೂಹಿಕ ಒಡೆತನ ಮತ್ತು ನಿರ್ವಹಣೆಗೊಳಪಟ್ಟ ಉದ್ಯಮಗಳನ್ನು ನಿಗದಿತ ಸರಕುಗಳು ಉತ್ಪಾದಿಸಲು ಅನುಮತಿ ನೀಡಲಾಗಿತ್ತು. ಈ ಹಂತದಲ್ಲಿ ಸರಕಾರಿ ಒಡೆತನದ ಉದ್ದಿಮೆಗಳನ್ನು (ರಾಜ್ಯಗಳ ಮಾಲೀಕತ್ವದ ಉದ್ಯಮಗಳು) (ಇವುಗಳಿಗೆ ನಾವು ಭಾರತದಲ್ಲಿ ಸಾರ್ವಜನಿಕ ವಲಯದ ಉದ್ಯಮಗಳು ಎಂದು ಕರೆಯುತ್ತೇವೆ) ಪೈಪೋಟಿ ಎದುರಿಸುವಂತೆ ಮಾಡಲಾಯಿತು. ಸುಧಾರಣೆ ಪ್ರಕ್ರಿಯೆಯಲ್ಲಿ ದ್ವಂದ್ವ ಬೆಲೆ ನೀತಿ ಸಹ ಒಳಗೊಂಡಿತು. ಅಂದರೆ ಬೆಲೆಗಳನ್ನು ಎರಡು ರೀತಿಯಾಗಿ ನಿಗದಿ ಮಾಡುವುದು. ರೈತರು ಮತ್ತು ಉದ್ಯಮ ಘಟಕಗಳು ನಿಗದಿತ ಅದಾನಗಳು (Inputs) ಮತ್ತು ಉದಾನಗಳನ್ನು (Outputs) ಸರ್ಕಾರ ನಿಗದಿ ಪಡಿಸಿದ ಬೆಲೆಯ ಆಧಾರದ ಮೇಲೆ ಕೊಳ್ಳಬೇಕಿತ್ತು ಮತ್ತು ಮಾರಾಟ ಮಾಡಬೇಕಿತ್ತು ಉಳಿದ ಭಾಗವನ್ನು ಮಾರುಕಟ್ಟೆ ಬೆಲೆಯಲ್ಲಿ ಮಾರಾಟ ಮತ್ತು ಖರೀದಿ ಮಾಡಬೇಕಿತ್ತು. ಹಲವು ವರ್ಷಗಳಲ್ಲಿ ಉತ್ಪಾದನೆ ಹೆಚ್ಚಾದಂತೆ ಮಾರುಕಟ್ಟೆಯಲ್ಲಿ ಸರಕುಗಳು ಮತ್ತು ಅದಾನಗಳ ವ್ಯವಹಾರ ಪ್ರಮಾಣ ಹೆಚ್ಚಳವಾಯಿತು. ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುವುದಕ್ಕಾಗಿ ವಿಶೇಷ ಆರ್ಥಿಕ ವಲಯ SEZ ಗಳನ್ನು ಸ್ಥಾಪಿಸಲಾಯಿತು.

## ಪಾಕಿಸ್ತಾನ (Pakistan):

ಪಾಕಿಸ್ತಾನ ಅಳವಡಿಸಿದ ಹಲವಾರು ಆರ್ಥಿಕ ನೀತಿಗಳನ್ನು ನೀವು ಗಮನಿಸಿದಾಗ, ಅವು ಭಾರತದ ನೀತಿಗಳೊಂದಿಗೆ ಅನೇಕ ರೀತಿಯ ಸಾಮ್ಯತೆಗಳನ್ನು ಕಾಣುತ್ತೀರಿ. ಪಾಕಿಸ್ತಾನವು ನಮ್ಮ ಹಾಗೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಭಾಗಿತ್ವದ ಮಿಶ್ರ ಆರ್ಥಿಕ ಮಾದರಿಯನ್ನು



**ಚಿತ್ರ. 10.1: ವಾಘಾ ಗಡಿಯು ಕೇವಲ ಪ್ರವಾಸಿ ಸ್ಥಳವಷ್ಟೆ ಅಲ್ಲ ಈ ಸ್ಥಳವು ಭಾರತ ಮತ್ತು ಪಾಕಿಸ್ತಾನಗಳ ನಡುವಿನ ವ್ಯಾಪಾರಕ್ಕೂ ಬಳಸಲ್ಪಡುತ್ತಿದೆ.**

ಅನುಸರಿಸಿದೆ. 1950 ಮತ್ತು 1960 ರ ದಶಕಗಳ ಅಂತ್ಯದಲ್ಲಿ ಪಾಕಿಸ್ತಾನ ಅನೇಕ ಪ್ರಕಾರದ ನಿಯಂತ್ರಿತ ನೀತಿಗಳ ಒಂದು ಚೌಕಟ್ಟನ್ನು (ಆಮದು ಬದಲೀಕರಣ ಕೈಗಾರಿಕೀರಣಕ್ಕಾಗಿ) ಅಳವಡಿಸಿಕೊಂಡಿತು. ಈ ನೀತಿಯಡಿಯಲ್ಲಿ ಅನುಭೋಗದ ವಸ್ತುಗಳ ತಯಾರಿಕೆಗೆ ಸುಂಕ ರಕ್ಷಣೆ ನೀಡುವುದರ ಜೊತೆಗೆ ಪ್ರತಿಸ್ಪರ್ಧಿ ಆಮದುಗಳ ಮೇಲೆ ನೇರ ಆಮದು ನಿಯಂತ್ರಣ ಸಹ ಒಳಗೊಂಡಿತು. ಹಸಿರು ಕ್ರಾಂತಿ ಸಂಭವಸಿದ ನಂತರ ಪಾಕಿಸ್ತಾನದಲ್ಲಿ ಯಾಂತ್ರಿಕರಣದ ಯುಗ ಪ್ರಾರಂಭವಾಯಿತು, ಜೊತೆಗೆ ಆಯ್ದ ಮೂಲ ಸೌಕರ್ಯಗಳಲ್ಲಿ ಸಾರ್ವಜನಿಕ ಹೂಡಿಕೆಯ ಹೆಚ್ಚಳದಿಂದ ಆಹಾರ ಧಾನ್ಯಗಳ ಉತ್ಪಾದನೆಯು ಹೆಚ್ಚಾಯಿತು. ಇದು ಕೃಷಿ ಸಂರಚನೆಯಲ್ಲಿ ಬಹಳ ಬದಲಾವಣೆಗಳನ್ನು ತಂದಿತು. 1970ರ ದಶಕದಲ್ಲಿ ಬಂಡವಾಳ ಸರಕುಗಳ ಕೈಗಾರಿಕೆಗಳು, ರಾಷ್ಟ್ರೀಕರಣಗೊಂಡವು. ನಂತರ 1970 ಮತ್ತು 1980 ರ ದಶಕದ ಅಂತ್ಯದಲ್ಲಿ ಅರಾಷ್ಟ್ರೀಕರಣಕ್ಕೆ ಒತ್ತು ಮತ್ತು ಖಾಸಗಿ ವಲಯಕ್ಕೆ ಪ್ರೋತ್ಸಾಹ ನೀಡುವ ಮೂಲಕ ಪಾಕಿಸ್ತಾನ ತನ್ನ ನೀತಿಗಳ ದೃಷ್ಟಿಕೋಣದಲ್ಲಿ ಬದಲಾವಣೆಗಳನ್ನು ತಂದಿತು. ಇದೇ ಅವಧಿಯಲ್ಲಿ ಪಾಕಿಸ್ತಾನಕ್ಕೆ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಹಣಕಾಸಿನ ನೆರವು ದೊರೆಯಿತು, ಜೊತೆಗೆ ನಿರಂತರವಾಗಿ ಮಧ್ಯಪೂರ್ವ ದೇಶಗಳಿಗೆ ಹೋಗುವ ವಲಸಿಗರಿಂದ ಹಣ ರವಾನೆಯಾಗುತ್ತಿತ್ತು. ಇದು ದೇಶದ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿತು. ಅಂದಿನ ಸರಕಾರವು ಸಹ ಖಾಸಗಿ ವಲಯಕ್ಕೆ ಪ್ರೋತ್ಸಾಹ ನೀಡಿತು. ಇವೆಲ್ಲವೂ ಹೊಸ ಹೂಡಿಕೆಗಳಿಗೆ ಸಕರಾತ್ಮಕ ವಾತಾವರಣ ನಿರ್ಮಿಸಿದವು. 1988 ರಲ್ಲಿ ಪಾಕಿಸ್ತಾನದಲ್ಲಿ ಸುಧಾರಣೆಗಳು ಆರಂಭವಾದವು.

ಚೀನಾ ಮತ್ತು ಪಾಕಿಸ್ತಾನ ದೇಶಗಳ ಅಭಿವೃದ್ಧಿ ನೀತಿಗಳ ಸಂಕ್ಷಿಪ್ತವಾಗಿ ಅಧ್ಯಯಿನಿಸಿದ ನಂತರ ನಾವು ಭಾರತ, ಚೀನಾ ಮತ್ತು ಪಾಕಿಸ್ತಾನ ದೇಶಗಳ ಅಭಿವೃದ್ಧಿ ಸೂಚಕಗಳನ್ನು ತುಲನೆ ಮಾಡೋಣ.

## 10.3 ಜನಸಂಖ್ಯೆಯ ಸೂಚಕಗಳು (DEMOGRAPHIC INDICATORS)

ನಾವು ವಿಶ್ವದ ಜನಸಂಖ್ಯೆಯನ್ನು ಗಮನಿಸಿದಾಗ, ಜಗತ್ತಿನಲ್ಲಿ ಇರುವ ಪ್ರತಿ ಆರು ಜನರಲ್ಲಿ ಒಬ್ಬ ಭಾರತೀಯ ಮತ್ತೊಬ್ಬ ಚೀನಾ ದೇಶದವನಾಗಿರುತ್ತಾನೆ. ಈಗ ನಾವು ಭಾರತ, ಚೀನಾ ಮತ್ತು ಪಾಕಿಸ್ತಾನದ ಜನಸಂಖ್ಯಾ ಸೂಚಕಗಳನ್ನು ತುಲನೆ ಮಾಡೋಣ. ಪಾಕಿಸ್ತಾನ ದೇಶದ ಜನಸಂಖ್ಯೆ ಬಹಳ ಕಡಿಮೆ ಇದೆ, ಅದು ಚೀನಾ ಅಥವಾ ಭಾರತದ ಜನಸಂಖ್ಯೆಯ ಹತ್ತನೆಯ ಒಂದು ಭಾಗದಷ್ಟಿದೆ. ಈ ಮೂರು ದೇಶಗಳಲ್ಲಿ ಚೀನಾ ದೊಡ್ಡ ದೇಶವಾಗಿದೆ. ಭೌಗೋಳಿಕವಾಗಿಯೂ ಅತಿ ಹೆಚ್ಚು ಭೂ–ವಿಸ್ತೀರ್ಣ ಪಡೆದರೂ ಇಲ್ಲಿ ಜನಸಾಂದ್ರತೆ ಕಡಿಮೆ ಇರುತ್ತದೆ. ಕೋಷ್ಟಕ 10.1 ತೋರಿಸಿದಂತೆ ಪಾಕಿಸ್ತಾನದಲ್ಲಿ ಜನಸಂಖ್ಯೆ ಬೆಳವಣಿಗೆ ದರ ಅಧಿಕವಾಗಿರುತ್ತದೆ. ನಂತರದ ಸ್ಥಾನವನ್ನು ಕ್ರಮವಾಗಿ ಭಾರತ ಮತ್ತು ಚೀನಾ ಪಡೆದಿವೆ.

**ಕೋಷ್ಟಕ 10.1**

**ಆಯ್ದ ಜನಸಂಖ್ಯೆ ಸೂಚಕಗಳು 2013**

| ದೇಶ | ಜನಸಂಖ್ಯೆ ಅಂದಾಜಿಸಿದ ಜನ ಸಂಖ್ಯೆ (ಮಿಲಿಯನ್ ಗಳಲ್ಲಿ) | ವಾರ್ಷಿಕ ಜನಸಂಖ್ಯೆ ಬೆಳವಣಿಗೆ ದರ (2001–2010) | ಜನಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ | ಲಿಂಗಾನುಪಾತ | ಫಲವಂತಿಕೆಯ ದರ %) | ನಗರೀಕರಣ |
|---|---|---|---|---|---|---|
| ಭಾರತ | 1252 | 1.24 | 421 | 934 | 2.6 | 32 |
| ಚೀನಾ | 1357 | 0.49 | 145 | 929 | 1.6 | 53 |
| ಪಾಕಿಸ್ತಾನ | 182 | 1.65 | 236 | 947 | 3.3 | 38 |

**ಮೂಲ :** ವಿಶ್ವ ಅಭಿವೃದ್ಧಿ ಸೂಚಕಗಳು. www.worldbank.org

ವಿದ್ವಾಂಸರು ಗುರುತಿಸಿದಂತೆ ಚೀನಾ ದೇಶವು 1970ರ ದಶಕದ ಅಂತ್ಯದಲ್ಲಿ ಜಾರಿಗೆ ತಂದ ಏಕ ಮಗುವಿನ ನೀತಿಯೇ ಕಡಿಮೆ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ. ಅವರು ಈ ನೀತಿಯಿಂದಾಗಿಯೇ ಚೀನಾ ದೇಶದಲ್ಲಿ ಲಿಂಗಾನುಪಾತವು (ಪ್ರತಿ 1000 ಪುರುಷರಿಗೆ ಮಹಿಳೆಯರ ಅನುಪಾತ) ಕಡಿಮೆಯಾಗಿದೆ ಎಂದು ಸಹ ಹೇಳುತ್ತಾರೆ. ಅದಾಗ್ಯೂ ಕೋಷ್ಟಕದಲ್ಲಿ ನೀವು ಗಮನಿಸಿದಾಗ ಈ ಮೂರು ದೇಶಗಳಲ್ಲಿಯೂ ಲಿಂಗಾನುಪಾತ ಕಡಿಮೆ ಇರುತ್ತದೆ ಮತ್ತು ಸ್ತ್ರೀಯರ ವಿರುದ್ಧ ಪಕ್ಷಪಾತವಾಗಿರುತ್ತದೆ. ವಿಧ್ವಾಂಸರ ಪ್ರಕಾರ ಈ ಮೂರು ದೇಶಗಳಲ್ಲಿ ಪುತ್ರ ಒಲವು ಅಧಿಕವಾಗಿರುವುದೇ ಲಿಂಗತಾರತಮ್ಯಕ್ಕೆ ಕಾರಣವಾಗಿದೆ. ಇತ್ತೀಚಿನ ಕಾಲದಲ್ಲಿ ಈ ಮೂರು ದೇಶಗಳು ಲಿಂಗತಾರತಮ್ಯವನ್ನು ಸರಿಪಡಿಸಲು ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿವೆ. ಏಕ ಮಗುವಿನ ನೀತಿಯು ಚೀನಾ ದೇಶದಲ್ಲಿ ಜನಸಂಖ್ಯಾ ನಿಯಂತ್ರಣದ ಜೊತೆಗೆ ಇತರ ಪರಿಣಾಮಗಳನ್ನು ಬೀರಿವೆ. ಕೆಲವು ದಶಕಗಳ ನಂತರ ಚೀನಾದಲ್ಲಿ ಯುವ ಜನಸಂಖ್ಯೆಯ ಪ್ರಮಾಣವನ್ನು ಹೋಲಿಸಿದಾಗ ವೃದ್ಧ ಜನಸಂಖ್ಯೆ ಪ್ರಮಾಣ ಅಧಿಕವಾಗಲಿದೆ. ಇದರಿಂದಾಗಿ ಮುಂಬರುವ ದಿನಗಳಲ್ಲಿ ಚೀನಾ ಕೆಲವೇ ಉದ್ಯೋಗಿಗಳ ನೆರವಿನಿಂದ ಅಧಿಕ ಜನರಿಗೆ ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸಬೇಕಾಗುತ್ತದೆ.

ಚೀನಾದಲ್ಲಿ ಫಲವಂತಿಕೆಯ ದರವೂ ಕೂಡ ಕಡಿಮೆ ಇದೆ. ಆದರೆ ಪಾಕಿಸ್ತಾನದಲ್ಲಿ ಅದು ಅಧಿಕವಾಗಿದೆ. ನಗರೀಕರಣ ಪ್ರಮಾಣ ಚೀನಾ ಮತ್ತು ಪಾಕಿಸ್ತಾನದಲ್ಲಿ ಹೆಚ್ಚಿರುತ್ತದೆ. ಭಾರತದಲ್ಲಿ ಶೇ. 32 ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ.

## 10.4 ಒಟ್ಟು ದೇಶಿಯ ಉತ್ಪನ್ನ ಮತ್ತು ವಲಯಗಳು (GROSS DOMESTIC PRODUCT AND SECTORS)

ವಿಶ್ವದಲ್ಲಿಯೇ ಅತಿ ಹೆಚ್ಚು ಚರ್ಚೆಗೆ ಒಳಗಾಗಿರುವ ವಿಷಯವೆಂದರೆ ಚೀನಾ ದೇಶದ ಒಟ್ಟು ದೇಶಿಯ ಉತ್ಪನ್ನ. ಚೀನಾ ದೇಶವು ಜಗತ್ತಿನಲ್ಲಿಯೇ ಎರಡನೇ ಅತಿ




**ಚಿತ್ರ. 10.2: ಭಾರತ, ಚೀನಾ ಮತ್ತು ಪಾಕಿಸ್ತಾನಗಳಲ್ಲಿ ಭೂಬಳಕೆ ಮತ್ತು ಕೃಷಿ**

ಹೆಚ್ಚು ಒಟ್ಟು ದೇಶಿಯ ಉತ್ಪನ್ನವನ್ನು GDP (PPP) ಅಂದರೆ $ 15.6 ಟ್ರಿಲಿಯನ್ ಹೊಂದಿದೆ. ಭಾರತದ ಜಿ.ಡಿ.ಪಿ. (PPP) $ 6.6 ಟ್ರಿಲಿಯನ್ ಮತ್ತು ಪಾಕಿಸ್ತಾನದ ಜಿ.ಡಿ.ಪಿ.ಯು$ 0.83 ಟಿಲಿಯನ್ ಆಗಿದ್ದು, ಅದು ಭಾರತದ ಜಿ.ಡಿ.ಪಿ.ಯ ಸುಮಾರು ಶೇ. 13 ರಷ್ಟು ಆಗಿರುತ್ತದೆ.

ಅದೇ ವೇಳೆಗೆ ಅನೇಕ ಅಭಿವೃದ್ಧಿ ರಾಷ್ಟ್ರಗಳು ಬೆಳವಣಿಗೆ ದರವನ್ನು ಶೇ.5 ರಷ್ಟು ಕಾಪಾಡಿಕೊಳ್ಳುವಲ್ಲಿ ತೊಂದರೆ ಎದುರಿಸುತ್ತಿರುವಾಗ ಚೀನಾ ದೇಶವು ಕಳೆದ ಎರಡು ದಶಕಗಳಿಂದ ಎರಡಂಕಿಗಿತಿಂಗಲ್ಲೂ ಅಧಿಕ ಬೆಳವಣಿಗೆ ದರವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನು ಕೋಷ್ಟಕ 10.2 ರಲ್ಲಿ ಗಮನಿಸಬಹುದು.

**ಕೋಷ್ಟಕ 10.2**

**ಒಟ್ಟು ದೇಶಿಯ ಉತ್ಪನ್ನದ ವಾರ್ಷಿಕ ಬೆಳವಣಿಗೆ (%) 1980–2013**

| ದೇಶ | 1980–90 | 2005–13 |
|---|---|---|
| ಭಾರತ | 5.7 | 7.6 |
| ಚೀನಾ | 10.3 | 10.2 |
| ಪಾಕಿಸ್ತಾನ | 6.3 | 4.4 |

**ಮೂಲ:** ಏಷಿಯಾ ಮತ್ತು ಪೆಸಿಫಿಕ್ ಮೂಲ ಸೂಚಕಗಳು 2011. ಏಷಿಯ ಅಭಿವೃದ್ಧಿ ಬ್ಯಾಂಕು.

### ನೀವೇ ಮಾಡಿರಿ

### (Work These Out)

- ಭಾರತವು ಜನಸಂಖ್ಯೆಯ ಸ್ಥಿರೀಕರಣಕ್ಕಾಗಿ ಯಾವುದಾದರು ಕ್ರಮಗಳನ್ನು ಕೈಗೊಂಡಿದೆಯೇ? ಇದ್ದರೆ ಅವುಗಳ ವಿವರಗಳನ್ನು ಸಂಗ್ರಹಿಸಿ ಹಾಗೂ ತರಗತಿಯಲ್ಲಿ ಚರ್ಚಿಸಿರಿ. ಇದಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಆರ್ಥಿಕ ಸಮೀಕ್ಷೆಗಳನ್ನು ಅವಲೋಕಿಸಿ ವಾರ್ಷಿಕ ವರದಿಗಳು ಅಥವಾ ಕೇಂದ್ರ ಆರೋಗ್ಯ ಕುಟುಂಬ ಕಲ್ಯಾಣ ಮಂತ್ರಾಲಯದ ವೆಬ್‌ಸೈಟ್‌ನ್ನು ನೋಡಿರಿ. (http:/mohtw.nic.in)
- ವಿದ್ವಾಂಸರ ಅಭಿಪ್ರಾಯದಂತೆ ಭಾರತವನ್ನೊಳಗೊಂಡತೆ ಚೀನಾ ಮತ್ತು ಪಾಕಿಸ್ತಾನಗಳ ಮತ್ತು ಅಭಿವೃದ್ಧಿ ಶೀಲ ದೇಶಗಳಲ್ಲಿ ಗಂಡು ಮಗುವಿನ ಆಧ್ಯತೆ ಒಂದು ಸಾಮಾನ್ಯ ವಿದ್ಯಮಾನವಾಗಿದೆ. ನೀವೇನಾದರೂ ಇಂತಹದೇ ವಿದ್ಯಮಾನವನ್ನು ನಿಮ್ಮ ಕುಟುಂಬ ಅಥವಾ ನೆರೆ ಹೊರೆಯಲ್ಲಿ ಗಮನಿಸಿದ್ದೀರಾ? ಜನರು ಗಂಡು ಮತ್ತು ಹೆಣ್ಣು ಮಗುವಿನ ಮಧ್ಯ ಏಕೆ ತಾರತಮ್ಯ ಮಾಡುತ್ತಿದ್ದಾರೆ? ನೀವು ಇದರ ಬಗ್ಗೆ ಏನು ಯೋಚಿಸುತ್ತೀರಾ? ತರಗತಿಯಲ್ಲಿ ಚರ್ಚಿಸಿರಿ.




**ಚಿತ್ರ. 10.3: ಭಾರತ, ಚೀನಾ ಮತ್ತು ಪಾಕಿಸ್ತಾನಗಳಲ್ಲಿ ಕೈಗಾರಿಕೆ**

ಚೀನಾವು ಎರಡಂಕಿ ಬೆಳವಣಿಗೆ ದರ ಹೊಂದಿದ್ದರೆ, ಭಾರತ ಕೊನೆಯ ಸ್ಥಾನದಲ್ಲಿತ್ತು ಎಂಬುದನ್ನು ಕೋಷ್ಟಕ 10.2 ರಲ್ಲಿ ನೀವು ಗಮನಿಸಬಹುದು. 2005–13 ರಲ್ಲಿ ಭಾರತ ಮತ್ತು ಚೀನಾದ ಜಿ.ಡಿ.ಪಿ.ಯಲ್ಲಿ ಅಲ್ಪ ಪ್ರಮಾಣದ ಇಳಿಕೆ ಕಂಡುಬಂದಿದ್ದು, ಪಾಕಿಸ್ತಾನದ ಜಿ.ಡಿ.ಪಿ.ಯು ಭಾರಿ ಪ್ರಮಾಣದಲ್ಲಿ ಅಂದರೆ ಶೇ. 4.4ಕ್ಕೆ ಇಳಿಕೆಯಾಗಿದೆ. ಕೆಲವು ವಿದ್ವಾಂಸರ ಪ್ರಕಾರ ಪಾಕಿಸ್ತಾನದಲ್ಲಿ 1988ರ ಸುಧಾರಣೆ ಪ್ರಕ್ರಿಯೆಗಳು ಮತ್ತು ರಾಜಕೀಯ ಅಸ್ಥಿರತೆ ಈ ಪ್ರವೃತ್ತಿಯ ಹಿಂದಿದೆ. ಮುಂದಿನ ಭಾಗದಲ್ಲಿ ನಾವು ಯಾವ ವಲಯಗಳು ಈ ಪ್ರವೃತ್ತಿಗೆ ಕೊಡುಗೆ ನೀಡಿವೆ ಎಂದು ಅಧ್ಯಯನ ಮಾಡುತ್ತೇವೆ.

1980ರ ದಶಕದಲ್ಲಿ ಭಾರತಕ್ಕಿಂತ ಪಾಕಿಸ್ತಾನವು ಜಿ.ಡಿ.ಪಿ.ಯಲ್ಲಿ ಮುಂದಿದೆ ಎಂದು ನೀವು ಗಮನಿಸಬಹುದು.

ನಾವು ಮೊದಲಿಗೆ ಜನರು ಹೇಗೆ ಬೇರೆ ಬೇರೆ ವಲಯಗಳಲ್ಲಿ ತೊಡಗಿಸಿಕೊಂಡು ಒಟ್ಟು ದೇಶಿಯ ಉತ್ಪನ್ನಕ್ಕೆ ಕೊಡುಗೆಯನ್ನು ನೀಡುತ್ತಾರೆ ಎನ್ನುವುದನ್ನು

ನೋಡೋಣ. ಈ ಹಿಂದೆ ಗುರುತಿಸಿದಂತೆ ಚೀನಾ ಮತ್ತು ಪಾಕಿಸ್ತಾನದಲ್ಲಿ ನಗರವಾಸಿಗಳ ಅನುಪಾತ ಭಾರತಕ್ಕಿಂತಲೂ ಅಧಿಕವಾಗಿದೆ. ಚೀನಾ ದೇಶದ ಭೂಸ್ವರೂಪ ಮತ್ತು ಹವಾಗುಣದಿಂದಾಗಿ ಸಾಗುವಳಿಗೆ ಯೋಗ್ಯವಿರುವ ಭೂ ಪ್ರದೇಶವು ತುಲನಾತ್ಮಕವಾಗಿ ತೀರ ಕಡಿಮೆ ಇದೆ. ಅಂದರೆ ಅದು ಒಟ್ಟು ಭೂ ಪ್ರದೇಶದ ಶೇ. 10 ರಷ್ಟಿದೆ. ಚೀನಾದ ಒಟ್ಟು ಸಾಗುವಳಿ ಭೂಮಿ, ಭಾರತದ ಒಟ್ಟು ಸಾಗುವಳಿ ಭೂಮಿಯ ಶೇ. 40ರಷ್ಟಿದೆ. 1980 ರವರೆಗೂ ಚೀನಾದಲ್ಲಿ ಶೇ. 80ಕ್ಕಿಂತಲೂ ಅಧಿಕ ಜನರು ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿದ್ದಾರೆ. ತದನಂತರ ಚೀನಾ ಸರ್ಕಾರ ತನ್ನ ಜನರಿಗೆ ಕೃಷಿಯನ್ನು ಬಿಟ್ಟು ಇತರೆ ಚಟುವಟಿಕೆಗಳಾದ ಕರಕುಶಲತೆ, ವ್ಯಾಪಾರ, ವಾಣಿಜ್ಯ ಮತ್ತು ಸಾರಿಗೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿತು. 2013ರಲ್ಲಿ ಚೀನಾದಲ್ಲಿ ಒಟ್ಟು ಶ್ರಮಬಲದಲ್ಲಿ ಶೇ. 30 ರಷ್ಟು ಕೃಷಿಯಲ್ಲಿ ತೊಡಗಿದ್ದು, ಒಟ್ಟು ಜಿ.ಡಿ.ಪಿ. ಗೆ ಕೃಷಿಯ ಕೊಡುಗೆ ಶೇ. 10% ರಷ್ಟಿದೆ. (ಕೋಷ್ಟಕ 10.3 ನೋಡಿ)

ಭಾರತ ಮತ್ತು ಪಾಕಿಸ್ತಾನ ಇವೆರಡೂ ದೇಶಗಳಲ್ಲಿ ಒಟ್ಟು ದೇಶಿಯ ಉತ್ಪನ್ನದಲ್ಲಿ ಕೃಷಿಯ ಪಾಲು ಕ್ರಮವಾಗಿ ಶೇ. 18 ಮತ್ತು ಶೇ. 25ರಷ್ಟಿದೆ. ಆದರೆ ಈ ವಲಯದಲ್ಲಿ ನಿರತವಾಗಿರುವ ಶ್ರಮ ಶಕ್ತಿ ಪ್ರಮಾಣ ಪಾಕಿಸ್ತಾನಕ್ಕಿಂತಲೂ ಭಾರತದಲ್ಲಿ ಅಧಿಕವಿರುತ್ತದೆ. ಪಾಕಿಸ್ತಾನದಲ್ಲಿ ಶೇ. 44 ಜನರು ಕೃಷಿ ಕೆಲಸದಲ್ಲಿ ತೊಡಗಿದ್ದರೆ, ಭಾರತದಲ್ಲಿ ಅದು ಶೇ.47 ರಷ್ಟಿದೆ. ಈ ಮೂರು ಆರ್ಥಿಕತೆಗಳಲ್ಲಿ, ವಲಯವಾರು ಉತ್ಪನ್ನ ಮತ್ತು ಉದ್ಯೋಗ ಪಾಲುಗಳನ್ನು ಗಮನಿಸಿದಾಗ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಕಡಿಮೆ ಪ್ರಮಾಣದ ಶ್ರಮಶಕ್ತಿ ಇದ್ದರೂ ಅಧಿಕ ಉತ್ಪನ್ನಗಳನ್ನು ಕೊಡುತ್ತಿದೆ. ಚೀನಾದಲ್ಲಿ ತಯಾರಿಕ ಮತ್ತು ಸೇವಾ ವಲಯಗಳು ಒಟ್ಟು ದೇಶಿಯ ಉತ್ಪನ್ನಕ್ಕೆ ಅತಿ ಹೆಚ್ಚು ಅಂದರೆ ಕ್ರಮವಾಗಿ ಶೇ. 44 ಮತ್ತು ಶೇ. 46 ಕೊಡುಗೆ ನೀಡಿದರೆ, ಭಾರತ ಮತ್ತು ಪಾಕಿಸ್ತಾನದಲ್ಲಿ ಒಟ್ಟು ಜಿ.ಡಿ.ಪಿ.ಗೆ ಸೇವಾ ವಲಯದ ಕೊಡುಗೆ ಅಧಿಕವಾಗಿದ್ದು ಶೇ. 50 ಕ್ಕಿಂತಲೂ ಹೆಚ್ಚಿದೆ.

**ಕೋಷ್ಟಕ 10.3**

**ವಲಯವಾರು ಉದ್ಯೋಗ ಮತ್ತು ಜಿ.ಡಿ.ಪಿ. ಪಾಲು/ಕೊಡುಗೆ (%) 2013**

| ವಲಯ | ಒಟ್ಟು ದೇಶಿಯ ಉತ್ಪನ್ನದಲ್ಲಿ ಕೊಡುಗೆ | | | ಶ್ರಮಬಲ ಹಂಚಿಕೆ | | |
|---|---|---|---|---|---|---|
| | ಭಾರತ | ಚೀನಾ | ಪಾಕಿಸ್ತಾನ | ಭಾರತ | ಚೀನಾ | ಪಾಕಿಸ್ತಾನ |
| ಕೃಷಿ | 18 | 10 | 25 | 47 | 31 | 44 |
| ಕೈಗಾರಿಕೆ | 25 | 44 | 21 | 25 | 30 | 14 |
| ಸೇವಾ | 57 | 46 | 54 | 28 | 39 | 42 |
| **ಒಟ್ಟು** | **100** | **100** | **100** | **100** | **100** | **100** |

**ಮೂಲ – ವಿಶ್ವ ಅಭಿವೃದ್ಧಿ ಸೂಚಕಗಳು (www.worldbank.org)**

ಸಾಮಾನ್ಯವಾಗಿ ಅಭಿವೃದ್ಧಿಯ ಹಾದಿಯಲ್ಲಿ ದೇಶಗಳು ಮೊದಲು ಉದ್ಯೋಗ ಮತ್ತು ಉತ್ಪನ್ನವನ್ನು ಕೃಷಿ ಕ್ಷೇತ್ರದಿಂದ ತಯಾರಿಕೆ ಕ್ಷೇತ್ರಕ್ಕೆ ನಂತರ ಸೇವಾ ವಲಯಗಳಿಗೆ ವರ್ಗಾಯಿಸುತ್ತವೆ. ಚೀನಾ ದೇಶದಲ್ಲಿ ಇದನ್ನು ನಾವು ಕಾಣುತ್ತೇವೆ. (ಕೋಷ್ಟಕ 10.4) ಭಾರತ ಮತ್ತು ಪಾಕಿಸ್ತಾನದಲ್ಲಿ ತಯಾರಿಕ ವಲಯದಲ್ಲಿ ತೊಡಗಿದ ಶ್ರಮಬಲದ ಪ್ರಮಾಣ ಅತಿ ಕಡಿಮೆ ಅಂದರೆ ಕ್ರಮವಾಗಿ ಶೇ. 25 ಮತ್ತು ಶೇ. 14 ರಷ್ಟಿವೆ. ಜಿ.ಡಿ.ಪಿ.ಯಲ್ಲಿ ಕೈಗಾರಿಕೆಗಳ ಕೊಡುಗೆ ಕೃಷಿ ಕ್ಷೇತ್ರದಷ್ಟು ಅಥವಾ ಸ್ವಲ್ಪ ವ್ಯತ್ಯಾಸವಿರುತ್ತದೆ. ಭಾರತ ಮತ್ತು ಪಾಕಿಸ್ತಾನದಲ್ಲಿ ವಲಯವಾರು ವರ್ಗಾವಣೆಯು ನೇರವಾಗಿ ಕೃಷಿ ಕ್ಷೇತ್ರದಿಂದ ಸೇವಾ ವಲಯಕ್ಕೆ ಬದಲಾಗಿದೆ.

ಹೀಗೆ ಭಾರತ ಮತ್ತು ಪಾಕಿಸ್ತಾನದಲ್ಲಿ ಸೇವಾ ವಲಯವು ಆರ್ಥಿಕ ಅಭಿವೃದ್ಧಿಯ ಪ್ರಮುಖ ವಲಯವಾಗಿ ಹೊರ

**ಕೋಷ್ಟಕ 10.4**

**ವಿವಿಧ ವಲಯಗಳ ಉತ್ಪನ್ನದ ಬೆಳವಣಿಗೆ ಪ್ರವೃತ್ತಿಗಳು 1980–2013**

| ದೇಶ | 1980–90 | | | 2005–13 | | |
|---|---|---|---|---|---|---|
| | ಕೃಷಿ | ಕೈಗಾರಿಕೆ | ಸೇವೆ | ಕೃಷಿ | ಕೈಗಾರಿಕೆ | ಸೇವೆ |
| ಭಾರತ | 3.1 | 7.4 | 6.9 | 4.0 | 6.9 | 9.1 |
| ಚೀನಾ | 5.9 | 10.8 | 13.5 | 4.5 | 11.0 | 10.9 |
| ಪಾಕಿಸ್ತಾನ | 4 | 7.7 | 6.8 | 3.4 | 4.3 | 4.8 |

ಹೊಮ್ಮುತ್ತಿದೆ. ಈ ದೇಶಗಳಲ್ಲಿ ಸೇವಾ ವಲಯವು ಜಿ.ಡಿ.ಪಿ.ಗೆ ಅಧಿಕ ಕೊಡುಗೆಯನ್ನು ನೀಡಿದೆ ಮತ್ತು ಭವಿಷ್ಯದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಕ್ಷೇತ್ರ ವಾಗಿದೆ. ನಾವು 1980ರ ಶ್ರಮಬಲದ ಅನುಪಾತವನ್ನು ಗಮನಿಸಿದಾಗ, ಪಾಕಿಸ್ತಾನವು ತನ್ನ ಶ್ರಮ ಬಲವನ್ನು, ಭಾರತ ಮತ್ತು ಚೀನಾಕ್ಕಿಂತಲೂ ವೇಗವಾಗಿ ಸೇವಾ ವಲಯಕ್ಕೆ ವರ್ಗಾಯಿಸುತ್ತಿದೆ. 1980 ರ ದಶಕದಲ್ಲಿ ಭಾರತ, ಚೀನಾ ಮತ್ತು ಪಾಕಿಸ್ತಾನ ಕ್ರಮವಾಗಿ ಶೇ. 17, ಶೇ. 12 ಮತ್ತು ಶೇ. 27 ರಷ್ಟು ತಮ್ಮ ಶ್ರಮ ಬಲಕ್ಕೆ ಸೇವಾ ವಲಯದಲ್ಲಿ ಉದ್ಯೋಗ ಒದಗಿಸಿವೆ. 2013ರ ವೇಳೆಗೆ ಇವುಗಳ ಪ್ರಮಾಣ ಕ್ರಮವಾಗಿ ಶೇ. 28, ಶೇ. 39 ಮತ್ತು ಶೇ.42 ಕ್ಕೆ ಮಟ್ಟಕ್ಕೆ ತಲುಪಿದೆ.



**ನೀವೇ ಮಾಡಿರಿ**

- ಚೀನಾವು ತಯಾರಿಕೆ ವಲಯ ಮೇಲೆ ಹೆಚ್ಚು ಕೇಂದ್ರಿಕೃತವಾಗಿರುವ ಹಾಗೆಯೇ ಭಾರತ ಮತ್ತು ಪಾಕಿಸ್ತಾನವೂ ಆ ಕ್ಷೇತ್ರದ ಮೇಲೆ ಕೇಂದ್ರಿಕೃತ ಆಗಬೇಕಾಗಿರುವುದು ಅವಶ್ಯಕವೇ? ಏಕೆ ? ಈ ಕುರಿತು ತಮ್ಮ ಅಭಿಪ್ರಾಯವೇನು?
- ಸೇವಾ ವಲಯವು ಬೆಳವಣಿಗೆಯ ಎಂಜಿನ್ ಆಗಬಾರದೆಂದು ವಿದ್ವಾಂಸರು ವಾದಿಸುತ್ತಾರೆ. ಆದರೆ ಭಾರತ ಮತ್ತು ಪಾಕಿಸ್ತಾನವು ಈ ವಲಯದಿಂದಲೇ ತಮ್ಮ ಉತ್ಪನ್ನದ ಹೆಚ್ಚಿನ ಪಾಲನ್ನು ಪಡೆಯುತ್ತಿವೆ. ನೀವೇನು ಯೋಚಿಸುವಿರಿ?

ಕಳೆದ ಎರಡು ದಶಕಗಳಿಂದ ಈ ಮೂರೂ ದೇಶಗಳಲ್ಲಿ ದೊಡ್ಡ ಶ್ರಮಬಲಕ್ಕೆ ಉದ್ಯೋಗ ಒದಗಿಸಿರುವ ಕೃಷಿ ಕ್ಷೇತ್ರದ ಬೆಳವಣಿಗೆ ಕಡಿಮೆಯಾಗಿದೆ. ಕೈಗಾರಿಕೆ ಕ್ಷೇತ್ರದಲ್ಲಿ ಚೀನಾದ ಬೆಳವಣಿಗೆ ದರ ಎರಡಂಕ್ಕಿಯಲ್ಲಿ ಮುಂದುವರಿಯುತ್ತಿದ್ದರೆ, ಭಾರತ ಮತ್ತು ಪಾಕಿಸ್ತಾನದಲ್ಲಿ ಅದು ಇಳಿಕೆಯಾಗಿದೆ.

1980–2013 ರಲ್ಲಿ ಚೀನಾ ಮತ್ತು ಭಾರತವು ಸೇವಾ ವಲಯದ ಬೆಳವಣಿಗೆ ದರವನ್ನು ಹೆಚ್ಚಿಸಿಕೊಳ್ಳಲು ಸಮರ್ಥವಾದವು. ಆದರೆ ಪಾಕಿಸ್ತಾನದ ಸೇವಾ ವಲಯದ ಬೆಳವಣಿಗೆ ಸ್ಥಗಿತವಾಯಿತು. ಹೀಗೆ ಚೀನಾದ ಆರ್ಥಿಕ ಬೆಳವಣಿಗೆಗೆ ತಯಾರಿಕಾ ಕೈಗಾರಿಕೆಯ ಪ್ರಮುಖ ಕೊಡುಗೆಯಾದರೆ, ಭಾರತದ ಬೆಳವಣಿಗೆಯ ಸೇವಾ ವಲಯದಿಂದಾಗಿದೆ, ಈ ಅವಧಿಯಲ್ಲಿ ಪಾಕಿಸ್ತಾನವು ಮೂರು ವಲಯಗಳಲ್ಲಿ ಹಿನ್ನಡೆಯನ್ನು ಹೊಂದಿದೆ.

## 10.5 ಮಾನವ ಅಭಿವೃದ್ಧಿ ಸೂಚಕಗಳು (INDICATORS OF HUMAN DEVELOPMENT)

ಈ ಹಿಂದಿನ ತರಗತಿಗಳಲ್ಲಿ ನೀವು ಮಾನವ ಅಭಿವೃದ್ಧಿ ಸೂಚಕಗಳ ಪ್ರಾಮುಖ್ಯತೆ ಮತ್ತು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಅವುಗಳ ಪಡೆದಿರುವ ಪಡೆದಿರುವ ಸ್ಥಾನ ಕುರಿತು ಅಭ್ಯಸಿಸಿದ್ದೀರಿ. ಈಗ ನಾವು ಭಾರತ, ಚೀನಾ ಮತ್ತು ಪಾಕಿಸ್ತಾನ ದೇಶಗಳು ಮಾನವ ಅಭಿವೃದ್ಧಿಯ ಆಯ್ದ ಸೂಚಕಗಳಲ್ಲಿ ಹೇಗೆ ಸಾಧನೆ

**ಕೋಷ್ಟಕ 10.5**

**ಮಾನವ ಅಭಿವೃದ್ಧಿಯ ಆಯ್ದ ಸೂಚಕಗಳು, 2012–13**

| ವಿವರಗಳು | ಭಾರತ | ಚೀನಾ | ಪಾಕಿಸ್ತಾನ |
|---|---|---|---|
| ಮಾನವ ಅಭಿವೃದ್ಧಿ ಸೂಚಕದ (ಮೌಲ್ಯ) | 0.586 | 0.719 | 0.537 |
| ಸ್ಥಾನ (HDI ಆಧರಿತ) | 135 | 91 | 146 |
| ಜೀವಿತಾವಧಿ(ವರ್ಷಗಳು) | 66.2 | 75.2 | 66.4 |
| ವಯಸ್ಕರ ಸಾಕ್ಷರತೆ (% 15 ವರ್ಷ ಮೇಲ್ಪಟ್ಟವರು) | 62.8 | 95.1 | 54.07 |
| ಜಿ.ಡಿ.ಪಿ. ತಲಾ ವರಮಾನ (PPP US$) | 5238 | 11524 | 4549 |
| ಬಡತನ ರೇಖೆಗಿಂತಲೂ ಕೆಳಗಿರುವ ಜನರ ಪ್ರಮಾಣ (2$ ಪ್ರತಿ ದಿನಕ್ಕೆ) | 61 | 19 | 51 |
| ಶಿಶು ಮರಣ ದರ (ಪ್ರತಿ 1 ಸಾವಿರ ಜನನಕ್ಕೆ) | 41 | 11 | 69 |
| ತಾಯಿಯಂದಿರ ಮರಣ ಪ್ರಮಾಣ (ಪ್ರತಿ 1 ಲಕ್ಷ ಜನನಕ್ಕೆ) | 190 | 32 | 170 |
| ಸುಧಾರಿತ ನೈರ್ಮಲ್ಯ ವ್ಯವಸ್ಥೆಯನ್ನು ಹೊಂದಿರುವ ಜನರ ಪ್ರಮಾಣ (%) | 36 | 65 | 48 |
| ನಿರಂತರ ಶುದ್ಧ ಕುಡಿಯುವ ನೀರಿನ ಸೌಲಭ್ಯ ಹೊಂದಿರುವ ಜನಸಂಖ್ಯೆ ಪ್ರಮಾಣ (%) | 93 | 92 | 91 |
| ಅಪೌಷ್ಟಿಕತೆಯ ಮಕ್ಕಳ ಶೇಕಡಾವಾರು (ಕಡಿಮೆ ತೂಕ <5) | 43.5 | 3.4 | 31 |

**ಮೂಲ:** ಮಾನವ ಅಭಿವೃದ್ಧಿ ವರದಿ 2014 ಮತ್ತು ವಿಶ್ವ ಅಭಿವೃದ್ಧಿ ಸೂಚಕಗಳು (www.worldbank.org)

ಮಾಡಿವೆ ಎಂದು ನೋಡೋಣ – ಕೋಷ್ಟಕ 10.5 ನ್ನು ನೋಡಿ.

ಕೋಷ್ಟಕ 10.5 ರಲ್ಲಿ ತೋರಿಸಿದಂತೆ, ಚೀನಾ ಮಾನವ ಅಬಿವೃದ್ಧಿ ಸೂಚಕಗಳಲ್ಲಿ ಭಾರತ ಮತ್ತು ಪಾಕಿಸ್ತಾನಕ್ಕಿಂತಲೂ ಮುಂದಿದೆ. ಇದು ಅನೇಕ ಸೂಚಕಗಳಲ್ಲಿಯೂ ನಿಜವಾಗಿದೆ. ಉದಾ ಆದಾಯ ಸೂಚಕಗಳಾದ, ತಲಾವಾರು ಜಿ.ಡಿ.ಪಿ, ಬಡತನ ರೇಖೆಕ್ಕಿಂತ ಕೆಳಗಿರುವ ಜನಸಂಖ್ಯಾ ಅನುಪಾತ ಅಥವಾ ಆರೋಗ್ಯ ಸೂಚಕಗಳಾದ ಮರಣದರ, ನೈರ್ಮಲ್ಯ ಸೌಲಭ್ಯ, ಸಾಕ್ಷರತೆ, ಜೀವಿತಾವಧಿ ಅಥವಾ ಅಪೌಷ್ಟಿಕತೆ. ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯ ಪ್ರಮಾಣ ತಗ್ಗಿಸುವಲ್ಲಿ ಪಾಕಿಸ್ತಾನವು ಭಾರತಕ್ಕಿಂತ ಮುಂದಿದೆ. ಸಾಕ್ಷರತೆ, ನೈರ್ಮಲಿಕರಣ ಹಾಗು ಕುಡಿಯುವ ನೀರಿನ ಲಭ್ಯತೆ ವಿಷಯಗಳಲ್ಲಿಯೂ ಪಾಕಿಸ್ತಾನ ಭಾರತಕ್ಕಿಂತಲೂ ಉತ್ತಮ ಸ್ಥಿತಿ ಹೊಂದಿದೆ, ಆದರೆ ಈ ಎರಡು ದೇಶಗಳು ತಾಯಿಂದರ ಮರಣ ಪ್ರಮಾಣ ನಿಯಂತ್ರಿಸುವಲ್ಲಿ ವಿಫಲವಾಗಿವೆ. ಚೀನಾ ದೇಶದಲ್ಲಿ ಪ್ರತಿ ಒಂದು ಲಕ್ಷ ಜನನಗಳಲ್ಲಿ ಕೇವಲ 32, ಮಹಿಳೆಯರು ಮರಣ ಹೊಂದಿದ್ದರೆ, ಭಾರತ ಮತ್ತು ಪಾಕಿಸ್ತಾನದಲ್ಲಿ ಕ್ರಮವಾಗಿ 190 ಮತ್ತು 170 ಮಹಿಳೆಯರು ಮರಣ ಹೊಂದುತ್ತಾರೆ. ಆದರೆ ಆಶ್ಚರ್ಯಕರ ವಿಷಯವೆಂದರೆ ಮೂರು ದೇಶಗಳು ಶುದ್ಧ ಕುಡಿಯುವ ನೀರನ್ನು ತಮ್ಮ ಹೆಚ್ಚಿನ ಜನಸಂಖ್ಯೆಗೆ ಪೂರೈಸುತ್ತಿವೆ ಎಂದು ವರದಿ ಮಾಡಲಾಗಿದೆ ಅಂತಾರಾಷ್ಟ್ರೀಯ ಬಡತನ ದರವಾದ ಪ್ರತಿ ದಿನ $ 2 ಕ್ಕಿಂತ ಕೆಳಗೆ ಆದಾಯವಿರುವ ಜನಸಂಖ್ಯೆ ಪ್ರಮಾಣದಲ್ಲಿ ಈ ಮೂರು ದೇಶಗಳಲ್ಲಿ ಭಾರತದ್ದೇ ಅಧಿಕವಿದೆ ಎಂದು ನೀವು ಗಮನಿಸಿರುವಿರಿ. ಈ ರೀತಿಯ ಅಂತರಗಳು ಹೇಗೆ ಸಂಭವಿಸುತ್ತವೆ ನೀವೆ ಹುಡುಕಿರಿ.

ಇಂತಹ ಪ್ರಶ್ನೆಗಳ ಬಗ್ಗೆ ವಿಚಾರ ಅಥವಾ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ನಾವು ಮೇಲೆ ಹೇಳಿದ ಮಾನವ ಅಭಿವೃಧಿ ಸೂಚಕಗಳನ್ನು ವಿವೇಕಪೂರ್ಣವಾಗಿ ಬಳಸಿಕೊಳ್ಳುವುದಕ್ಕೆ ಸಂಬಂಧಿಸಿದ ಆ ಒಂದು ಸಮಸ್ಯೆಯ ಬಗ್ಗೆ ಗಮನ ನೀಡಬೇಕು. ಈ ಸೂಚಕಗಳು ಅತ್ಯಂತ ಮಹತ್ವವಾಗಿವೆ; ಆದರೆ ಸಾಕಷ್ಟಿಲ್ಲ. ಆದ್ದರಿಂದ ಸಮಸ್ಯೆ ಹುಟ್ಟಿಕೊಳ್ಳುತ್ತವೆ. ಇವುಗಳ ಜೊತೆಗೆ "ಸ್ವತಂತ್ರ ಸೂಚಕಗಳು' ಅಗತ್ಯವು ಇರುತ್ತದೆ. ಉದಾಹರಣೆಗೆ ಸಾಮಾಜಿಕ ಮತ್ತು ರಾಜಕೀಯ ನಿರ್ಣಯ ಕೈಗೊಳ್ಳುವಿಕೆಯಲ್ಲಿ ಪ್ರಜಾ ಪ್ರಭುತ್ವ ಭಾಗವಹಿಸುವಿಕೆ ಪ್ರಮಾಣವನ್ನು ಒಂದು ಮಾಪಕವಾಗಿ

ಸೂಚಕವನ್ನು ಸೇರಿಸಲಾಗಿದೆ. ಆದರೆ ಈ ಸೂಚಕಕ್ಕೆ ಹೆಚ್ಚಿನ ತೂಕ ಕೊಟ್ಟಿಲ್ಲ. ಕೆಲವು ಸ್ಪಷ್ಟ 'ಸ್ವತಂತ್ರ ಸೂಚಕಗಳು' ಅಂದರೆ ನಾಗರೀಕ ಹಕ್ಕುಗಳಿಗೆ ನೀಡಲಾಗಿರುವ ವಿಸ್ತೃತ ಸಂವಿಧಾನಾತ್ಮಕ ರಕ್ಷಣೆ ವ್ಯಾಪ್ತಿಯು ಅಥವಾ ನ್ಯಾಯಾಂಗ ಮತ್ತು ಕಾನೂನು ವ್ಯವಸ್ಥೆಯ ಸ್ವಾತಂತ್ರಕ್ಕಾಗಿ ನೀಡಲಾಗಿರುವ ವಿಸ್ತೃತ ರಕ್ಷಣೆ ವ್ಯಾಪ್ತಿಯು ಇದುವರೆಗೂ ಜಾರಿಗೆ ಬಂದಿಲ್ಲ. ಈ ಸೂಚಕಗಳನ್ನು (ಬಹುಶಃ ಮತ್ತಷ್ಟು ಹೆಚ್ಚಿನ) ಸೇರಿಸದೆ ಅಥವಾ ಇವುಗಳ ಮಹತ್ವವನ್ನು ನೀಡದೇ ಇದ್ದಲ್ಲಿ ಮಾನವ ಅಭಿವೃದ್ಧಿ ಸೂಚಂಕದ ನಿರ್ಮಾಣ ಅಪರಿಪೂರ್ಣವಾಗುತ್ತದೆ, ಜೊತೆಗೆ ಇವುಗಳ ಉಪಯೋಗ ಕೂಡ ಸೀಮಿತವಾಗಿರುತ್ತದೆ.

## 10.6 ಅಭಿವೃದ್ಧಿಯ ಕಾರ್ಯತಂತ್ರಗಳು ಒಂದು ಮೌಲ್ಯ ಮಾಪನ (DEVELOPMENT STRATERGIES - AN APPRAISAL)

ಸಾಮಾನ್ಯವಾಗಿ ಒಂದು ದೇಶದ ಅಭಿವೃದ್ಧಿ ಕಾರ್ಯತಂತ್ರಗಳು ಇತರೆ ದೇಶಗಳಿಗೆ ಮಾದರಿಯಾದರೆ, ತಮ್ಮ ಸ್ವಂತ ಅಭಿವೃದ್ಧಿಗೆ ಮಾರ್ಗದರ್ಶಕವಾಗಿರುತ್ತವೆ. ಇದು ಜಗತ್ತಿನ ವಿವಿಧ ಭಾಗಗಳಲ್ಲಿ ಆರ್ಥಿಕ ಸುಧಾರಣೆಯನ್ನು ಜಾರಿಗೆ ತಂದಿರುವುದಕ್ಕೆ ಸಾಕ್ಷಿಯಾಗಿದೆ. ನಮ್ಮ ನೆರೆ ರಾಷ್ಟ್ರಗಳ ಆರ್ಥಿಕ ಸಾಧನೆಗಳ ಬಗ್ಗೆ ಕಲಿಯುವಾಗ ಆ ದೇಶಗಳ ಯಶಸ್ಸು ಮತ್ತು ವಿಫಲತೆಗಳ ಮೂಲಗಳನ್ನು ತಿಳಿಯುವುದು ಅವಶ್ಯಕವಾಗಿದೆ. ಇದರ ಜೊತೆಗೆ ಅವುಗಳ ವಿವಿಧ ಹಂತದ ಕಾರ್ಯತಂತ್ರಗಳ ನಡುವಿನ ಅಂತರ ಮತ್ತು ಭಿನ್ನತೆಯನ್ನು ತಿಳಿಯುವುದು ಅಗತ್ಯವಾಗಿದೆ. ಬೇರೆ ಬೇರೆ ದೇಶಗಳು ತಮ್ಮ ಅಭಿವೃದ್ಧಿ ಹಂತಗಳಲ್ಲಿ ಬೇರೆ ಬೇರೆ ರೀತಿ ಸಾಗಿದರೂ ಅವುಗಳ ಆರಂಭಿಕ ಸುಧಾರಣೆಗಳನ್ನು ನಾವು ಆಧಾರವಾಗಿ ತೆಗೆದುಕೊಳ್ಳೋಣ. ಚೀನಾದಲ್ಲಿ ಸುಧಾರಣೆಗಳು 1978 ರಲ್ಲಿ, ಪಾಕಿಸ್ತಾನದಲ್ಲಿ 1988 ಮತ್ತು ಭಾರತದಲ್ಲಿ 1991 ರಲ್ಲಿ ಆರಂಭವಾದವು ಎಂಬುದು ನಮಗೆ ತಿಳಿದಿದೆ ಈಗ ನಾವು ಸುಧಾರಣಾ ಪೂರ್ವ ಮತ್ತು ಸುಧಾರಣಾ ನಂತರದ ಅವಧಿಯ ಸಾಧನೆ ಮತ್ತು ವಿಫಲತೆಗಳ ಸಂಕ್ಷಿಪ್ತವಾಗಿ ಮೌಲ್ಯ ಮಾಪನ ಮಾಡೋಣ.

ಚೀನಾ 1978 ರಲ್ಲಿ ರಚನಾತ್ಮಕ ಸುಧಾರಣೆಗಳನ್ನು ಏಕೆ ಅಳವಡಿಸಿಕೊಂಡಿತು? ವಿಶ್ವ ಬ್ಯಾಂಕು ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಗಳು ಭಾರತ ಮತ್ತು ಪಾಕಿಸ್ತಾನಗಳಿಗೆ ನಿರ್ದೇಶಿಸಿದಂತೆ, ಚೀನಾ ದೇಶಕ್ಕೆ ಸುಧಾರಣೆಗಳನ್ನು ಅಳವಡಿಸಿಕೊಳ್ಳಲು ಯಾವುದೇ ಒತ್ತಡವಿರಲಿಲ್ಲ. ಆದರೂ ಚೀನಾ ದೇಶದ ಅಂದಿನ ಹೊಸ ನಾಯಕತ್ವಕ್ಕೆ ಮಾವೋವಾದಿ ಅವಧಿಯ ಮಂದಗತಿಯ ಬೆಳವಣಿಗೆ ಮತ್ತು ಆರ್ಥಿಕತೆಯಲ್ಲಿ ಆಧುನಿಕರಣದ ಅಭಾವ ಅತೃಪ್ತಿ ಉಂಟುಮಾಡಿತ್ತು. ವಿಕೇಂದ್ರಿಕರಣ, ಸ್ವಾವಲಂಬನೆ, ಮತ್ತು ವಿದೇಶಿ ತಂತ್ರಜ್ಞಾನ ಸರಕುಗಳು, ಮತ್ತು ಬಂಡವಾಳ ಬಹಿಷ್ಕಾರದ ಆಧಾರಿತ ಆರ್ಥಿಕ ಅಭಿವೃದ್ಧಿಯ ಮಾವೂವಾದಿ ದೃಷ್ಟಿಕೋನ ವಿಫಲವಾಗಿದೆ ಎಂದು ಚೀನಾ ಸರಕಾರ ಭಾವಿಸಿತ್ತು. ಅದಾಗ್ಯೂ ವ್ಯಾಪಕ ಭೂ-ಸುಧಾರಣೆ, ಸಾಮೂಹಿಕರಣ, ಮುನ್ನಡೆಯ ಮುಂಜಿಗಿತ ಮತ್ತು ಇತರೆ ಕ್ರಮಗಳಿದ್ದಾಗ್ಯೂ 1978ರಲ್ಲಿ ತಲಾವಾರು ಆಹಾರ ಧಾನ್ಯಗಳ ಉತ್ಪನ್ನ 1950ರ ದಶಕದ ಮಧ್ಯವಧಿಯಲ್ಲಿ ಇದ್ದಷ್ಟೇ ಇತ್ತು.

ಸುಧಾರಣ ನಂತರ ಅವಧಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ, ಭೂಸುಧಾರಣೆ, ದೀರ್ಘಾವಧಿಯ ವಿಕೇಂದ್ರಿಕೃತ ಯೋಜನೆ ಹಾಗು ಸಣ್ಣ ಉದ್ದಿಮೆಗಳ ಕ್ಷೇತ್ರದಲ್ಲಿ ಮೂಲ ಸೌಕರ್ಯದ ಸ್ಥಾಪನೆ, ಸಾಮಾಜಿಕ ಮತ್ತು ಆದಾಯ ಸೂಚಕಗಳಲ್ಲಿ ಸಕಾರಾತ್ಮಕ ಬೆಳವಣಿಗೆಗೆ ಸಹಾಯಕವಾಯಿತು. ಸುಧಾರಣೆಯನ್ನು ಜಾರಿಗೆ ತರುವ ಮುನ್ನವೇ ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಆರೋಗ್ಯ ಸೇವೆಗಳನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಲಾಗಿತು. ಕಮ್ಯುನ್ ಪದ್ಧತಿಯ ಮೂಲಕ ಆಹಾರ ಧಾನ್ಯಗಳನ್ನು ಸಮಾನತೆಯ ಆಧಾರದಲ್ಲಿ ಹಂಚಲಾಗುತ್ತಿತ್ತು. ತಜ್ಞರು ಗುರುತಿಸಿದಂತೆ ಪ್ರತಿಯೊಂದು ಸುಧಾರಣಾ ಕ್ರಮಗಳನ್ನು ಮೊದಲು ಸಣ್ಣ ಮಟ್ಟದಲ್ಲಿ ನಂತರ ದೊಡ್ಡ ಮಟ್ಟದಲ್ಲಿ ಜಾರಿಗೊಳಿಸಲಾಯಿತು. ವಿಕೇಂದ್ರಿಕೃತ ಸರ್ಕಾರ ಕೈಗೊಂಡ ಪ್ರಾಯೋಗಿಕ ಕ್ರಮಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವೆಚ್ಚಗಳ ಯಶಸ್ಸು ಮತ್ತು ವಿಫಲತೆಯನ್ನು ಅಂದಾಜು ಮಾಡಲು ಸಹಾಯಕವಾಯಿತು. ಉದಾ; ಕೃಷಿ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಮಾಡಿದಾಗ, ಕಮ್ಯೂನಿನ ಹಿಡುವಳಿಗಳನ್ನು ವೈಯಕ್ತಿಕ ಸಾಗುವಳಿಗಾಗಿ ವಿತರಣೆ ಮಾಡಿದ ಪರಿಣಾಮ ವ್ಯಾಪಕ ಪ್ರಮಾಣದಲ್ಲಿ ಬಡ ಜನರ ಸಮೃದ್ಧಿಗೆ ಕಾರಣವಾಯಿತು. ಇದು ಗ್ರಾಮೀಣ ಕೈಗಾರಿಕೆಗಳ ಅದ್ಭುತ ಬೆಳವಣಿಗೆ ಮತ್ತು ಇತರೆ

ಸುಧಾರಣೆಗಳಿಗೆ ಬಲಿಷ್ಟ ಅಡಿಪಾಯ ನಿರ್ಮಿಸಿತು. ಈ ರೀತಿ ವಿದ್ವಾಂಸರು ಸುಧಾರಣೆ ಕ್ರಮಗಳು ಹೇಗೆ ಚೀನಾ ದೇಶದ ತೀವ್ರ ಆರ್ಥಿಕ ಬೆಳವಣಿಗೆಗೆ ಕಾರಣವಾಗಿವೆ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ನೀಡಿದ್ದಾರೆ.

ವಿದ್ವಾಂಸರು ಪಾಕಿಸ್ತಾನದಲ್ಲಿ ಸುಧಾರಣಾ ಪ್ರಕ್ರಿಯೆಗಳು ಎಲ್ಲಾ ಆರ್ಥಿಕ ಸೂಚಕಗಳು ಹದಗೆಡಲು ಕಾರಣವಾಗಿದೆ ಎಂದು ವಾದಿಸಿದ್ದಾರೆ. 1980 ರ ದಶಕಕ್ಕೆ ಹೋಲಿಸಿದಾಗ ಪಾಕಿಸ್ತಾನದ ಜಿ.ಡಿ.ಪಿ. ಮತ್ತು ವಲಯವಾರು ಘಟಕಗಳ ಬೆಳವಣಿಗೆಯ ದರ 1990 ರ ದಶಕದಲ್ಲಿ ಕಡಿಮೆಯಾಗಿದೆ ಎಂಬುದನ್ನು ನಾವು ಹಿಂದಿನ ಭಾಗದಲ್ಲಿ ನೋಡಿದ್ದೇವೆ.

ಪಾಕಿಸ್ತಾನಕ್ಕೆ ಅಂತರಾಷ್ಟ್ರೀಯ ಬಡತನ ರೇಖೆಯ ಸಂಬಂಧಿತ ಅಂಕಿ ಅಂಶಗಳು ಆರೋಗ್ಯಕರವಾಗಿದ್ದರೂ, ಸರಕಾರದ ಅಂಕಿ ಅಂಶಗಳನ್ನು ಬಳಸುವ ವಿದ್ವಾಂಸರು ಪಾಕಿಸ್ತಾನದಲ್ಲಿ ಬಡತನದ ಪ್ರಮಾಣ ಹೆಚ್ಚಾಗಿದೆ ಎಂದು ಸೂಚಿಸುತ್ತಾರೆ. 1960ರ ದಶಕದಲ್ಲಿ ಬಡವರ ಪ್ರಮಾಣ ಶೇ. 40 ಕ್ಕಿಂತಲೂ ಅಧಿಕವಿತ್ತು. ನಂತರ 1980 ರ ದಶಕದಲ್ಲಿ ಶೇ. 25% ಇಳಿಯಿತು. ಮತ್ತೆ 1990 ರ ದಶಕದಲ್ಲಿ ಏರಲು ಆರಂಭಿಸಿತು. ವಿದ್ವಾಂಸರ ಪ್ರಕಾರ ಪಾಕಿಸ್ತಾನದ ನಿಧಾನಗತಿಯ ಬೆಳವಣಿಗೆ ದರ ಮತ್ತು ಬಡತನದ ಮರು ಹುಟ್ಟುಗೆ ಪ್ರಮುಖ ಕಾರಣವೆಂದರೆ ಕೃಷಿ ಬೆಳವಣಿಗೆ ಮತ್ತು ಆಹಾರ ಪೂರೈಕೆಯ ಸ್ಥಿತಿಯು ತಾಂತ್ರಿಕ ಬದಲಾವಣೆ, ಸಾಂಸ್ಥಿತ ಪ್ರಕ್ರಿಯೆ



## ನೀವೇ ಮಾಡಿರಿ

## (Work These Out)

- ಆರ್ಥಿಕ ಬೆಳವಣಿಗೆಯಲ್ಲಿ ಭಾರತವನ್ನು ಜಗತ್ತಿನ ಅಭಿವೃದ್ಧಿ ಶೀಲ ರಾಷ್ಟ್ರಗಳೊಂದಿಗೆ (ಇತರೆ ಏಷ್ಯನ್ ನೆರೆ ಹೊರೆ ದೇಶಗಳ ಒಳಗೊಂಡಂತೆ) ಹೋಲಿಸಿದಾಗ ಅದು ಉತ್ತಮ ಸ್ಥಿತಿಯನ್ನು ಹೊಂದಿದೆ. ಆದರೆ ಭಾರತದ ಮಾನವ ಅಭಿವೃದ್ಧಿ ಸೂಚಕಗಳು ಜಗತ್ತಿನಲ್ಲಿಯೇ ನಿಕೃಷ್ಟವಾಗಿವೆ. ಎಲ್ಲಿ ಭಾರತವು ಎಡವಿದೆ? ನಾವು ಮಾನವ ಸಂಪತ್ತಿನ ಬಗ್ಗೆ ಏಕೆ ಹೆಚ್ಚು ಕಾಳಜಿ ವಹಿಸುತ್ತಿಲ್ಲವೇ? ತರಗತಿಯಲ್ಲಿ ಇದನ್ನು ಚರ್ಚಿಸಿರಿ.
- ಚೀನಾದ ಸಿದ್ಧವಸ್ತುಗಳು ಭಾರತಕ್ಕೆ ಯಥೇಚ್ಛವಾಗಿ ಬಂದು ಬೀಳುತ್ತಿವೆ. ಇದರಿಂದ ಭಾರತದಲ್ಲಿರುವ ಕೈಗಾರಿಕೆ ವಲಯವು ಸಂಕಷ್ಟಕ್ಕೆ ಈಡಾಗಿದ್ದು, ಇದರ ಜೊತೆಗೆ ನಾವು ಇತರೆ ನಮ್ಮ ನೆರೆ ದೇಶಗಳೊಂದಿಗೆ ವ್ಯಾಪಾರವನ್ನು ಅಧಿಕ ಪ್ರಮಾಣದಲ್ಲಿ ನಡೆಸುತ್ತಿಲ್ಲ ಎಂಬುದು ಭಾರತವನ್ನು ಕುರಿತಂತೆ ಇರುವ ಸಾಮಾನ್ಯ ಗ್ರಹಿಕೆಯಾಗಿದೆ. ಈ ಕೆಳಗಿನ ಕೋಷ್ಟಕವನ್ನು ಗಮನಿಸಿರಿ. ಇದರಲ್ಲಿ ಭಾರತವು ಚೀನಾ ಮತ್ತು ಪಾಕಿಸ್ತಾನಕ್ಕೆ ರಫ್ತು ಮಾಡಿದ ಪ್ರಮಾಣ ಭಾರತವು ಚೀನಾ ಮತ್ತು ಪಾಕಿಸ್ತಾನದಿಂದ ಆಮದು ಮಾಡಿಕೊಂಡ ಪ್ರಮಾಣವನ್ನು ತೋರಿಸುತ್ತಿದೆ. ಇದರ ಫಲಿತಾಂಶವನ್ನು ಅರ್ಥೈಸಿರಿ ಹಾಗೂ ತರಗತಿಗಳಲ್ಲಿ ಚರ್ಚಿಸಿರಿ, ದಿನಪತ್ರಿಕೆಗಳಿಂದ, ವೆಬ್‌ಸೈಟ್‌ಗಳಿಂದ ಹಾಗೂ ಸುದ್ಧಿ ಸಮಾಚಾರಗಳಿಂದ ನಮ್ಮ ನೆರೆ ದೇಶಗಳ ನಡುವೆ ವಹಿವಾಟಾದ ಸರಕು ಮತ್ತು ಸೇವೆಗಳ ವ್ಯಾಪಾರದ ಕುರಿತು ಅಂಕಿ–ಅಂಶಗಳನ್ನು ಸಂಗ್ರಹಿಸಿರಿ. ಅಂತರಾಷ್ಟ್ರೀಯ ವ್ಯಾಪಾರದ ಇನ್ನೂ ಹೆಚ್ಚುವರಿ ಮಾಹಿತಿಯನ್ನು ಪಡೆಯಲು, ನೀವು http:/dgft.nic.in ನ್ನು ಸಂಪರ್ಕಿಸಿರಿ.

| ದೇಶ | ರಫ್ತುಗಳು (ಕೋಟಿ ರೂ.ಗಳು) | | | ಆಮದುಗಳು (ಕೋಟಿ ರೂ.ಗಳು) | | |
|---|---|---|---|---|---|---|
| | 2003–04 | 2014–15 | ಬೆಳವಣಿಗೆ ದರ% | 2003–04 | 2014–15 | ಬೆಳವಣಿಗೆ ದರ% |
| ಪಾಕಿಸ್ತಾನ | 2,341 | 11351 | 39 | 427 | 3041 | 61 |
| ಚೀನಾ | 25,232 | 73038 | 19 | 31,892 | 369541 | 106 |

ಆಧಾರಿತವಾಗಿರದೆ ಉತ್ತಮ ಸುಗ್ಗಿಕಾಲವನ್ನು ಆಧರಿಸಿದೆ. ಉತ್ತಮ ಸುಗ್ಗಿಯ ವೇಳೆ ಆರ್ಥಿಕತೆಯು ಉತ್ತಮ ಸ್ಥಿತಿಯಲ್ಲಿತ್ತು. ಅದು ಇಲ್ಲದಿದ್ದಾಗ ಆರ್ಥಿಕ ಸೂಚಕಗಳು ನಕಾರಾತ್ಮಕ ಅಥವಾ ಸ್ಥಗಿತ ಪ್ರವೃತ್ತಿ ತೋರಿಸುತ್ತಿದ್ದವು, ಭಾರತವು ತನ್ನ ಸಂದಾಯ ಬಾಕಿಯಲ್ಲಿನ ಅಸಮತೋಲನವನ್ನು ಸರಿಪಡಿಸಲು ವಿಶ್ವ ಹಣಕಾಸಿನ ನಿಧಿ (IMF) ಹಾಗು ವಿಶ್ವ ಬ್ಯಾಂಕಿನಿಂದ ಸಾಲ ಪಡೆಯಬೇಕಾಯಿತು ಎಂಬುದನ್ನು ನೀವು ನೆನೆಪಿಸಿಕೊಳ್ಳಿ, ವಿದೇಶಿ ವಿನಿಮಯ ಪ್ರತಿಯೊಂದು ದೇಶಗಳಿಗೆ ಅತ್ಯಾವಶ್ಯಕವಾಗಿದ್ದು, ಇದನ್ನು ಯಾವ ರೀತಿ ಗಳಿಸಬೇಕು ಎಂಬುದನ್ನು ಎಲ್ಲರು ತಿಳಿದುಕೊಳ್ಳುವುದು ಮುಖ್ಯವಾಗಿದೆ. ಒಂದು ದೇಶವು ವಿದೇಶಿ ವಿನಿಮಯವನ್ನು ನಿರಂತರವಾಗಿ ಉತ್ಪಾದಕ ವಸ್ತುಗಳ ರಫ್ತುಗಳಿಂದ ಗಳಿಸುತ್ತಿದ್ದರೆ ಅದಕ್ಕೆ ಚಿಂತೆ ಮಾಡುವ ಅವಶ್ಯಕತೆ ಇಲ್ಲ. ಆದರೆ ಪಾಕಿಸ್ತಾನದಲ್ಲಿ ಅತಿ ಹೆಚ್ಚು ವಿದೇಶಿ ವಿನಿಮಯದ ಗಳಿಕೆಯು ಮಧ್ಯ ಪೂರ್ವ ದೇಶಗಳಲ್ಲಿ ಇರುವ ಪಾಕಿಸ್ತಾನದ ಶ್ರಮಿಕರು ರವಾನೆ ಮಾಡುತ್ತಿರುವ ಪಾವತಿಗಳಿಂದ ಮತ್ತು ಅಸ್ಥಿರ ಕೃಷಿ ಉತ್ಪನ್ನಗಳ ರಫ್ತುಗಳಿಂದ ಬರುತ್ತಿತ್ತು. ಒಂದೆಡೆ ವಿದೇಶಿ ಸಾಲದ ಮೇಲೆ ಅವಲಂಬನೆ ಹೆಚ್ಚಾಗುತ್ತಿದ್ದರೆ ಇನ್ನೊಂದಡೆ ಸಾಲವನ್ನು ಮರು ಪಾವತಿ ಮಾಡುವ ತೊಂದರೆಗಳ ಸಹ ಹೆಚ್ಚಾಗುತ್ತಿದ್ದವು.

ಪಾಕಿಸ್ತಾನದ ವಾರ್ಷಿಕ ಯೋಜನೆ 2011–12 ರ ವರದಿಯಂತೆ ಹಲವಾರು ಅಂಶಗಳು ಆರ್ಥಿಕತೆಯ ಮಂದ ಬೆಳವಣಿಗೆ ಕಾರಣವಾಗಿದ್ದವು. ವರದಿಯಲ್ಲಿ ಉಲ್ಲೇಖಿಸಿದ್ದಂತೆ "ಆರ್ಥಿಕತೆಯು ಒತ್ತಡದಲ್ಲಿರುವ ಕಾರಣ ಪ್ರವಾಹಗಳಿಂದಾಗಿ ಸುಧಾರಣೆ ಪ್ರಕ್ರಿಯೆಗಳನು ಅಳವಡಿಸಲು ವಿಳಂಬವಾಗುತಿದೆ, ಶಿಥಿಲಗೊಂಡ ಭದ್ರತಾ ಸ್ಥಿತಿ ಮತ್ತು ವಿದೇಶ ನೇರ ಹೂಡಿಕೆಯ ಕಡಿಮೆ ಒಳಹರಿವು ಪ್ರಮುಖ ವಲಯಗಳ ಬೆಳವಣಿಗೆಗೆ ತಡೆಯೊಡ್ಡುತ್ತಿವೆ. ಅಧಿಕ ಪ್ರವಾಹಗಳಿಂದಾಗಿ ಕೃಷಿ ಮತ್ತು ಮೂಲ ಸೌಕರ್ಯಗಳಲ್ಲಿ ಭಾರಿ ನಷ್ಟವಾಗಿದೆ. ಇದಲ್ಲದೆ 2010–11ರಲ್ಲಿ ಇಂಧನದ ಬಿಕ್ಕಟ್ಟು, ವಿದೇಶಿ ನೇರ ಹೂಡಿಕೆ ಇಳಿಕೆಯಿಂದಾಗಿ ವ್ಯವಹಾರದ ಚಟುವಟಿಕೆಗಳು ಇಳಿತಕ್ಕೆ ಒಳಗಾಗಿವೆ". ಆದರೂ ಪಾಕಿಸ್ತಾನದ ಆರ್ಥವ್ಯವಸ್ಥೆ 2010–14 ರ ಅವಧಿಯಲ್ಲಿ ನಿರಂತರ ಅಭಿವೃದ್ಧಿಯನ್ನು ಕಂಡಿದೆ. ಈ ಅವಧಿಯಲ್ಲಿ ಒಟ್ಟು ದೇಶೀಯ ಉತ್ಪನ್ನ (ಜಿ.ಡಿ.ಪಿ) ಶೇ. 1.6 ರಿಂದ ಶೇ. 4.4 ಕ್ಕೆ ಏರಿದೆ.

## 10.7 ಉಪಸಂಹಾರ (CONCLUSION)

ನಮ್ಮ ನೆರೆ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಅನುಭವಗಳಿಂದ ನಾವು ಏನನ್ನು ಕಲಿಯುತ್ತಿದ್ದೇವೆ? ಭಾರತ, ಚೀನಾ ಮತ್ತು ಪಾಕಿಸ್ತಾನ ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಅಭಿವೃದ್ಧಿಯ ಪಥದಲ್ಲಿ ಸಾಗಿವೆ. ಮತ್ತು ಇವುಗಳ ಫಲಿತಾಂಶಗಳು ವಿಭಿನ್ನವಾಗಿವೆ. 1970 ದಶಕದ ಅಂತ್ಯದವರೆಗೆ ಈ ಮೂರು ದೇಶಗಳು ಕಡಿಮೆ ಅಭಿವೃದ್ಧಿ ದರವನ್ನು ಹೊಂದಿದ್ದವು. ಆದರೆ ಕಳೆದ ಮೂರು ದಶಕಗಳು ಈ ಮೂರು ದೇಶಗಳನ್ನು ವಿವಿಧ ಮಟ್ಟಕ್ಕೆ ಕೊಂಡೊಯ್ದಿವೆ. ಪ್ರಜಾ ಪ್ರಭುತ್ವದ ಸಂಸ್ಥೆಗಳೊಂದಿಗೆ ಸಾಧಿಸಿದ ಭಾರತದ ಸಾಧನೆ ಸಾಧಾರಣವಾಗಿದೆ, ಆದರೆ ಇಂದಿಗೂ ಬಹುತೇಕ ಜನರು ಕೃಷಿಯನ್ನೆ ಅವಲಂಭಿಸಿದ್ದಾರೆ. ದೇಶದ ಅನೇಕ ಭಾಗದಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ. ಸುಮಾರು ನಾಲ್ಕನೆ ಒಂದರಷ್ಟು ಬಡತನ ರೇಖಯ ಕೆಳಗೆ ಜೀವಿಸುವ ತನ್ನ ಜನಸಂಖ್ಯೆಯ ಜೀವನಮಟ್ಟ ಸುಧಾರಿಸಬೇಕಾಗಿದೆ. ಪಾಕಿಸ್ತಾನದಲ್ಲಿ ರಾಜಕೀಯ ಅಸ್ಥಿರತೆ, ವಿದೇಶಿ ನೆರವು ಮತ್ತು ಪಾವತಿಗಳ ಮೇಲೆ ಅಧಿಕ ಅವಲಂಬನೆ, ಕೃಷಿ ಕ್ಷೇತ್ರದ ಅಸ್ಥಿರ ಸಾಧನೆಯು ದೇಶದ ಮಂದಗತಿಯ ಅಭಿವೃದ್ಧಿಗೆ ಕಾರಣ ಎಂದು ವಿದ್ವಾಂಸರು ಅಭಿಪ್ರಯ ಪಟ್ಟಿದ್ದಾರೆ. ಇತ್ತೀಚೆಗೆ ಪಾಕಿಸ್ತಾನ ತನ್ನ ಜಿ.ಡಿ.ಪಿ. ದರವನ್ನು ಹೆಚ್ಚಿಸುವ ಮೂಲಕ ಸ್ಥಿತಿಯನ್ನು ಸುಧಾರಿಸುವ ಅಶಾಭಾವನೆಯನ್ನು ಹೊಂದಿದೆ. 2005 ರಲ್ಲಿ ಸಂಭವಿಸಿದ ಭೂಕಂಪದಲ್ಲಿ ಸುಮಾರು 75000 ಜನರು ಮರಣ ಹೊಂದಿ, ಅಪಾರ ಪ್ರಮಾಣದ ಆಸ್ತಿ–ಪಾಸ್ತಿಗಳ ನಷ್ಟವಾಗಿತ್ತು. ಈ ವಿನಾಶಕಾರಿ ಭೂಕಂಪದಿಂದ ಚೇತರಿಸಿಕೊಳ್ಳುವುದು ಪಾಕಿಸ್ತಾನಕ್ಕೆ ದೊಡ್ಡ ಸವಾಲಾಗಿತ್ತು. ಚೀನಾದಲ್ಲಿ ರಾಜಕೀಯ ಸ್ವತಂತ್ರದ ಕೊರತೆ, ಮಾನವ ಹಕ್ಕುಗಳ ಮೇಲೆ ಅದರ ಪರಿಣಾಮ ಮುಖ್ಯವಾದ ಕಳವಳಕಾರಿ ವಿಷಯವಾಗಿದೆ. ಆದರೂ ಕಳೆದ ಮೂರು ದಶಕಗಳಲ್ಲಿ, ತನ್ನ ರಾಜಕೀಯ ಬದ್ಧತೆ ಕಳೆದುಕೊಳ್ಳದೇ "ಮಾರುಕಟ್ಟೆ ವ್ಯವಸ್ಥೆ" ಯನ್ನು ಬಳಸಿಕೊಂಡು ಬಡತನ ನಿರ್ಮೂಲನೆ ಜೊತೆಗೆ ಬೆಳವಣಿಗೆ ದರ ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ನೀವು ಇದನ್ನು ಗಮನಿಸಿದ್ದೀರಿ, ಭಾರತ ಮತ್ತು ಪಾಕಿಸ್ತಾನ ತಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳನ್ನು

ಖಾಸಗೀಕರಣಗೊಳಿಸಲು ಪ್ರಯತ್ನಿಸುತ್ತಿರುವಾಗ, ಇದಕ್ಕೆ ವಿಭಿನ್ನವಾಗಿ ಚೀನಾ ದೇಶವು ಮಾರುಕಟ್ಟೆ ಯಂತ್ರ ಬಳಸಿ ಹೆಚ್ಚು ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳನ್ನು ಸೃಷ್ಟಿಸಿತು. ಸಾಮೂಹಿಕ ಜಮೀನುಗಳ ಒಡೆತನ ಇಟ್ಟುಕೊಂಡು, ವೈಯಕ್ತಿಕ ಸಾಗುವಳಿಗೆ ಅವಕಾಶ ನೀಡುವುದರ ಮೂಲಕ ಚೀನಾ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ ಭದ್ರತೆಯನ್ನು ಒದಗಿಸಿದೆ. ಚೀನಾದಲ್ಲಿ ಸುಧಾರಣೆ ಪೂರ್ವ ಅವಧಿಯಲ್ಲಿಯೇ ಸಾಮಾಜಿಕ ಮೂಲ ಸೌಕರ್ಯಗಳಲ್ಲಿ ಸಾರ್ವಜನಿಕ ವಲಯದ ಮಧ್ಯ ಪ್ರವೇಶದಿಂದ ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಧನಾತ್ಮಕ ಫಲಿತಾಂಶ ದೊರೆಯಿತು.

## ಪುನರುಕ್ತಿ

- ನಿರಂತರ ಜಾಗತೀಕರಣದ ಪ್ರಕ್ರಿಯೆಯಿಂದಾಗಿ ನಮ್ಮ ನೆರೆ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳಿಂದ ಹಾಗು ಇತರೆ ದೇಶಗಳಿಂದ ಪೈಪೋಟಿಯನ್ನು ಎದುರಿಸಲು ಯಾವ ರೀತಿಯ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳುತ್ತಿವೆ ಎಂಬುವುದನ್ನು ಎಲ್ಲಾ ಅಭಿವೃದ್ಧಿ ಶೀಲ ರಾಷ್ಟ್ರಗಳು ತಿಳಿದುಕೊಳ್ಳಲು ಕಾತರಿಸುತ್ತಿವೆ.
- ಭಾರತ, ಪಾಕಿಸ್ತಾನ ಮತ್ತು ಚೀನಾಗಳು ಒಂದೇ ತರಹದ ಭೌತಿಕ ಆಸ್ತಿಗಳನ್ನು ಹೊಂದಿದ್ದು ಆದರೆ ವಿಭಿನ್ನ ರಾಜಕೀಯ ಪದ್ಧತಿಗಳನ್ನು ಹೊಂದಿವೆ.
- ಈ ಮೂರು ದೇಶಗಳು ಪಂಚವಾರ್ಷಿಕ–ಯೋಜನೆಗಳ ಅಬಿವೃದ್ಧಿ ವಿನ್ಯಾಸಗಳನ್ನು ಅನುಸರಿಸುತ್ತಿವೆ. ಆದರೆ ಅಭಿವೃದ್ಧಿ ನೀತಿಗಳ ಅಳವಡಿಕೆಗೆ ಸ್ಥಾಪಿಸಿಕೊಂಡಿರುವ ಆರ್ಥಿಕ ಸಂರಚನೆಯು ವಿಭಿನ್ನವಾಗಿದೆ.
- 1980 ದಶಕದವರೆಗೂ ಈ ಮೂರು ದೇಶಗಳ ಅಭಿವೃದ್ಧಿ ಸೂಚಕಗಳು ಅಂದರೆ ಬೆಳವಣಿಗೆ ದರ, ರಾಷ್ಟ್ರೀಯ ಆದಾಯದಲ್ಲಿ ವಲಯವಾರು ಕೊಡುಗೆ ಇವೆಲ್ಲವೂ ಒಂದೆ ಸಮನಾಗಿದ್ದವು.
- ಚೀನಾದಲ್ಲಿ ಆರ್ಥಿಕ ಸುಧಾರಣೆಗಳು 1978 ರಲ್ಲಿ, ಪಾಕಿಸ್ತಾನದಲ್ಲಿ 1988 ರಲ್ಲಿ ಮತ್ತು ಭಾರತದಲ್ಲಿ 1991 ರಲ್ಲಿ ಜಾರಿಗೆ ಬಂದಿತ್ತು.
- ಚೀನಾ ರಚನಾತ್ಮಕ ಸುಧಾರಣೆಗಳನ್ನು ತನ್ನ ಸ್ವತಃ ಹಿತಾಸಕ್ತಿಯಿಂದ ಜಾರಿಗೆಗೆ ತಂದಿತು ಆದರೆ ಪಾಕಿಸ್ತಾನ ಮತ್ತು ಭಾರತಗಳು ಅಂತರಾಷ್ಟ್ರೀಯ ಸಂಸ್ಥೆಗಳ ಒತ್ತಡದಿಂದ ಜಾರಿಗೆ ತಂದವು.
- ಆರ್ಥಿಕ ಸುಧಾರಣಾ ಕ್ರಮಗಳ ಪರಿಣಾಮವು ಈ ದೇಶಗಳಲ್ಲಿ ವಿಭಿನ್ನವಾಗಿದೆ ಚೀನಾದಲ್ಲಿ ಏಕ ಮಗುವಿನ ನೀತಿಯ ತತಕ್ಷಣವಾಗಿ ಆ ದೇಶದಲ್ಲಿನ ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಿದರೆ, ಭಾರತ ಪಾಕಿಸ್ತಾನದಲ್ಲಿ ಈ ಸಂಬಂಧಿಸಿದಂತೆ ಅತಿ ದೊಡ್ಡ ಬದಲಾವಣೆಯಾಗಬೇಕಾಗಿದೆ.
- 50 ವರ್ಷಗಳ ಆರ್ಥಿಕ ಯೋಜನೆಗಳ ಅಭಿವೃದ್ಧಿಯ ನಂತರವೂ ಈ ಮೂರು ದೇಶಗಳಲ್ಲಿ ಬಹುತೇಕ ಜನರು ಕೃಷಿಯನ್ನು ಅವಲಂಬಿಸಿದ್ದಾರೆ. ಅದರಲ್ಲೂ ಭಾರತದಲ್ಲಿ ಕೃಷಿ ಅವಲಂಬಿತರ ಪ್ರಮಾಣ ಹೆಚ್ಚಿದೆ.
- ಅದಾಗ್ಯೂ ಚೀನಾವು ಪ್ರಾಚೀನ ಸಾಂಪ್ರಾದಾಯಿಕ ಅಭಿವೃದ್ಧಿಯ ಪಥದ ವಿನ್ಯಾಸ ಹೊಂದಿದ್ದು ತನ್ನ ಜನರನ್ನು ಕೃಷಿ ಕ್ಷೇತ್ರದಿಂದ ಕ್ರಮೇಣ ತಯಾರಿಕೆ ಕ್ಷೇತ್ರ ನಂತರ ಸೇವಾ ವಲಯಕ್ಕೆ ವರ್ಗಾಹಿಸುತ್ತಿದೆ. ಆದರೆ ಭಾರತ ಮತ್ತು ಪಾಕಿಸ್ತಾನ ತನ್ನ ಜನರನ್ನು ಕೃಷಿ ಕ್ಷೇತ್ರದಿಂದ ನೇರವಾಗಿ ಸೇವಾ ವಲಯಕ್ಕೆ ವರ್ಗಾಯಿಸುತ್ತಿವೆ.
- ಚೀನಾ ಕೈಗಾರಿಕಾ ವಲಯದ ತನ್ನ ಅಧಿಕ ಬೆಳವಣಿಗೆ ದರವನ್ನು ಕಾಪಾಡಿಕೊಂಡಿದೆ, ಇದು ಭಾರತ ಮತ್ತು ಪಾಕಿಸ್ತಾನದಲ್ಲಿ ಕಂಡುಬರುತ್ತಿಲ್ಲ.
- ಚೀನಾವು ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಭಾರತ ಮತ್ತು ಪಾಕಿಸ್ತಾನಕ್ಕಿಂತ ಮುಂಚೂಣಿಯಲ್ಲಿದೆ. ಆದರೆ ಈ ಸುಧಾರಣೆಗಳು ಚೀನಾ ದೇಶ ಜಾರಿಗೆ ತಂದ ಆರ್ಥಿಕ ಸುಧಾರಣೆಗಳಿಂದ ಮಾತ್ರ ಸಾಧ್ಯವಾಗಿಲ್ಲ ಬದಲಿಗೆ ಚೀನಾ ದೇಶವು ಅಳವಡಿಸಿಕೊಂಡಿರುವ ಪೂರ್ವ ಸುಧಾರಣಾ ಕಾರ್ಯತಂತ್ರಗಳಿಂದ ಇದು ಸಾಧ್ಯವಾಗಿದೆ.
- ಅಭಿವೃದ್ಧಿಯ ಸೂಚಕಗಳನ್ನು ಮೌಲ್ಯ ಮಾಪನ ಮಾಡುವಾಗ ಸ್ವಾತಂತ್ರ್ಯದ ಸೂಚಕಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.



## ಅಭ್ಯಾಸಗಳು

1) ಪ್ರಾದೇಶಿಕ ಮತ್ತು ಆರ್ಥಿಕ ಗುಂಪುಗಳು ಏಕೆ ರಚನೆಯಾದವು?
2) ದೇಶಿಯ ಆರ್ಥಿಕತೆಗಳನ್ನು ಬಲಯುತಗೊಳಿಸಲು ದೇಶಗಳು ಅಳವಡಿಸಿಕೊಂಡಿರುವ ವಿವಿಧ ವಿಧಾನಗಳಾವವು?
3) ಭಾರತ ಮತ್ತು ಪಾಕಿಸ್ತಾನಗಳು ಅಭಿವೃದ್ಧಿಯ ಪಥದಲ್ಲಿ ಅಳವಡಿಸಿಕೊಂಡಿರುವ ಸಮಾನ ಅಭಿವೃದ್ಧಿ ಕಾರ್ಯತಂತ್ರಗಳು ಯಾವುವು?
4) 1958 ರಲ್ಲಿ ಚೀನಾವು ಆರಂಭಿಸಿದ "ಮಹಾ ಮುಂಜಿಗಿತ ಅಭಿಯಾನವನ್ನು" ವಿವರಿಸಿರಿ.
5) ಚೀನಾದ ತ್ವರಿತ ಕೈಗಾರಿಕಾ ಬೆಳವಣಿಗೆಯು 1978 ರ ಸುಧಾರಣೆಯ ಪರಿಣಾಮ ಎಂಬ ಸುಳಿವನ್ನು ನೀಡಿದೆ. ಇದನ್ನು ನೀವು ಒಪ್ಪುತ್ತೀರಾ ? ಸ್ಪಷ್ಟ ಪಡಿಸಿರಿ.
6) ಪಾಕಿಸ್ತಾನವು ಆರ್ಥಿಕ ಅಭಿವೃದ್ಧಿಗಾಗಿ ಕೈಗೊಂಡಿರುವ ಅಭಿವೃದ್ಧಿ ಪಥದ ಆರಂಭಿಕ ಕ್ರಮಗಳನ್ನು ವಿವರಿಸಿ.
7) ಚೀನಾವು ಅಳವಡಿಸಿಕೊಂಡಿರುವ "ಏಕ ಮಗು ನೀತಿ' ಯ ಪ್ರಮುಖ ಪರಿಣಾಮಾವೇನು?
8) ಚೀನಾ, ಪಾಕಿಸ್ತಾನ ಮತ್ತು ಭಾರತಗಳ ಜನಸಂಖ್ಯಾ ಸೂಚಕಗಳು ತಿಳಿಸಿರಿ.
9) ಭಾರತ ಮತ್ತು ಚೀನಾ ದೇಶಗಳ 2003ರಲ್ಲಿ ಜಿ.ಡಿ.ಪಿ.ಯ ವಲಯವಾರು ಕೊಡುಗೆಗಳನ್ನು ಹೋಲಿಸಿ ಮತ್ತು ವ್ಯತ್ಯಾಸಗಳನ್ನು ತಿಳಿಸಿರಿ. ಇದು ಏನನ್ನು ಸೂಚಿಸುತ್ತಿದೆ?
10) ಮಾನವ ಅಭಿವೃದ್ಧಿಯ ವಿವಿಧ ಸೂಚಕಗಳ ಬಗ್ಗೆ ತಿಳಿಸಿರಿ.
11) ಸ್ವಾತಂತ್ರ್ಯ ಸೂಚಕದ ವ್ಯಾಖ್ಯೆ ನೀಡಿರಿ. ಸ್ವಾತಂತ್ರ್ಯ ಸೂಚಕಕ್ಕೆ ಕೆಲವು ಉದಾಹರಣೆ ನೀಡಿರಿ.
12) ಚೀನಾ ದೇಶದ ತೀವ್ರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾದ ವಿವಿಧ ಅಂಶಗಳನ್ನು ಮೌಲ್ಯಮಾಪನ ಮಾಡಿರಿ.
13) ಭಾರತ, ಚೀನಾ ಮತ್ತು ಪಾಕಿಸ್ತಾನ ದೇಶಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಲಕ್ಷಣಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಿರಿ.
    * ಏಕ ಮಗು ನೀತಿ
    * ಕಡಿಮೆ ಫಲವಂತಿಕೆ ದರ
    * ಅಧಿಕ ಪ್ರಮಾಣದ ನಗರೀಕರಣ
    * ಮಿಶ್ರ ಅರ್ಥವ್ಯವಸ್ಥೆ
    * ಅಧಿಕ ಫಲವಂತಿಕೆ ದರ
    * ಅಧಿಕ ಜನಸಂಖ್ಯೆ
    * ಅಧಿಕ ಜನಸಾಂದ್ರತೆ
    * ತಯಾರಿಕ ವಲಯದಿಂದ ಬೆಳವಣಿಗೆ
    * ಸೇವಾ ವಲಯದಿಂದ ಬೆಳವಣಿಗೆ
14) ಪಾಕಿಸ್ತಾನದಲ್ಲಿ ಕಡಿಮೆ ಬೆಳವಣಿಗೆ ಮತ್ತು ಬಡತನ ಮರು ಹುಟ್ಟಿಗೆ ಕಾರಣಗಳನ್ನು ನೀಡಿರಿ.

15) ಪ್ರಮುಖ ಮಾನವ ಅಭಿವೃದ್ಧಿ ಸೂಚಕಕ್ಕೆ ಸಂಬಂಧಿಸಿದಂತೆ ಭಾರತ, ಚೀನಾ ಮತ್ತು ಪಾಕಿಸ್ತಾನಗಳ ಅಭಿವೃದ್ಧಿಯನ್ನು ಹೋಲಿಸಿ ಮತ್ತು ವ್ಯತ್ಯಾಸಗಳನ್ನು ತಿಳಿಸಿರಿ.

16) ಚೀನಾ ಮತ್ತು ಭಾರತದಲ್ಲಿ ಕಳೆದ ಎರಡು ದಶಕಗಳಲ್ಲಿ ಸಾಕ್ಷಿಯಾಗಿರುವ ಬೆಳವಣಿಗೆ ದರದ ಕುರಿತು ಟೀಕೆಗಳನ್ನು ಬರೆಯಿರಿ.

17) ಬಿಟ್ಟ ಸ್ಥಳಗಳನ್ನು ತುಂಬಿರಿ.

ಎ) ಪ್ರಥಮ ಪಂಚವಾರ್ಷಿಕ ಯೋಜನೆ ________ ದೇಶದಲ್ಲಿ 1956 ರಲ್ಲಿ ಆರಂಭವಾಯಿತು (ಪಾಕಿಸ್ತಾನ/ಚೀನಾ).

ಬಿ) ತಾಯಿಯಂದಿರ ಮರಣ ದರ ಹೆಚ್ಚಿರುವುದು________ ದೇಶದಲ್ಲಿ (ಚೀನಾ/ಪಾಕಿಸ್ತಾನ).

ಸಿ) ಬಡತನ ರೇಖೆಗಿಂತಲೂ ಕೆಲಮಟ್ಟದಲ್ಲಿ ಜನ ಅನುಪಾತ ಹೆಚ್ಚಿರುವ ದೇಶ________ (ಭಾರತ/ಪಾಕಿಸ್ತಾನ).

ಡಿ) 1978ರಲ್ಲಿ ____________ ದೇಶದಲ್ಲಿ ಸುಧಾರಣೆಗಳು ಜಾರಿಗೆ ಯಾದವು (ಚೀನಾ/ಪಾಕಿಸ್ತಾನ).

## ಸೂಚಿಸಿದ ಹೆಚ್ಚುವರಿ ಚಟುವಟಿಕೆಗಳು

1) ಭಾರತ ಮತ್ತು ಚೀನಾ ಹಾಗೂ ಭಾರತ ಮತ್ತು ಪಾಕಿಸ್ತಾನ ದೇಶಗಳ ನಡುವೆ ಮುಕ್ತ ವ್ಯಾಪಾರಕ್ಕೆ ಸಂಬಂಧಿಸಿದಂತೆ ತರಗತಿಗಳಲ್ಲಿ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುವುದು.

2) ಮಾರುಕಟ್ಟೆಯಲ್ಲಿ ಲಭ್ಯವಿರುವ ಚೀನಾ ದೇಶದ ಕಳಪೆ ಗುಣಮಟ್ಟದ ವಸ್ತುಗಳಾದ ಆಟಿಕೆ ಸಾಮಾನುಗಳು, ಎಲೆಕ್ಟ್ರಾನಿಕ್ ವಸ್ತುಗಳು, ಬ್ಯಾಟರಿ ಇತ್ಯಾದಿಗಳಿಂದ ಎಚ್ಚರ ವಹಿಸಿರಿ. ಇಂತಹ ಚೀನಾದ ವಸ್ತುಗಳ ಪ್ರತಿರೂಪವಾದ ಭಾರತೀಯ ವಸ್ತುಗಳ ಗುಣಮಟ್ಟ ಮತ್ತು ಬೆಲೆಗಳೊಂದಿಗೆ ಹೋಲಿಸಬಹುದೆ? ಚೀನಾದ ವಸ್ತುಗಳು ನಮ್ಮ ಸ್ವದೇಶಿ ಉತ್ಪಾದಕರಿಗೆ ಆತಂಕವನ್ನು ಸೃಷ್ಟಿಸಿವೆಯೇ? ಚರ್ಚಿಸಿರಿ.

3) ಭಾರತವೂ ಸಹ ಚೀನಾದಂತೆ ಜನಸಂಖ್ಯೆಯನ್ನು ನಿಯಂತ್ರಿಸಲು ಏಕ ಮಗು ನೀತಿಯನ್ನು ಜಾರಿಗೆ ತರಬೇಕೆಂದು ನೀವು ಕೂಡ ಯೋಚಿಸುತ್ತಿದ್ದೀರಾ ? ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಲು ಭಾರತ ಕೈಗೊಂಡಿರುವ ನೀತಿಗಳ ಕುರಿತು ಚರ್ಚಿಸಿರಿ.

4) ಚೀನಾದ ಬೆಳವಣಿಗೆಗೆ ಕೈಗಾರಿಕಾ ವಲಯದ ಪ್ರಮುಖ ಕೊಡುಗೆಯಾಗಿದ್ದು, ಭಾರತದ ಬೆಳವಣಿಗೆ ಸೇವಾ ವಲಯದ ಕೊಡುಗೆಯಾಗಿದೆ. ಈ ಹೇಳಿಕೆಗೆ ಸಂಬಂಧಿಸಿದಂತೆ, ರಚನಾತ್ಮಕ ಬದಲಾವಣೆಗಳ ಕುರಿತಂತೆ ಒಂದು ನಕ್ಷೆಯನ್ನು ತಯಾರಿಸಿ.

5) ಚೀನಾ ದೇಶಕ್ಕೆ ಹೇಗೆ ಎಲ್ಲಾ ಮಾನವ ಅಭಿವೃದ್ಧಿ ಸೂಚಕಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿದೆ? ತರಗತಿಗಳಲ್ಲಿ ಚರ್ಚಿಸಿರಿ. ಇತ್ತೀಚಿನ ಮಾನವ ಅಭಿವೃದ್ಧಿ ಸೂಚಕದ ವರದಿಯನ್ನು ಬಳಸಿರಿ.



# REFERENCES

**Books:**

DREZE, JEAN AND AMARTYA SEN. 1996. India: Economic Development and Social Opportunity. Oxford University Press, Delhi.

**Articles:**

RAY, ALOK. 2002. 'The Chinese Economic Miracle: Lessons to be Learnt.'

Economic and Political Weekly, September 14, pp. 3835–3848

ZAIDI, S. AKBAR. 1999. 'Is Poverty now a Permanent Phenomenon in Pakistan?'

Economic and Political Weekly, October 9, pp. 2943–2951

**Government Reports:**

Human Development Report 2005, United Nations Development Programme,

Oxford University Press, Oxford.

Pakistan: National Human Development Report 2003, United Nations

Development Programme, Second Impression 2004.

World Development Report 2005, The World Bank, published by Oxford University Press, New York.

Labour Market Indicators, 3rd Edition, International Labour Organisation, Geneva.

Economic Survey, 2013–14 Ministry of Finance, Government of India.

**Websites**

www.stats.gov.cn

www.un.org

www.planningcommission.nic.in

www.statpak.gov.pk

www.ilo.org

www.dgft.delhi.nic.in

# ಪದಕೋಶ

**ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘಟನೆ – The Association of South East Asian Nation (ASEAN)**

ಇದು ಆಗ್ನೇಯ ಏಷ್ಯದಲ್ಲಿರುವ ರಾಷ್ಟ್ರಗಳ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿದ್ದು ಥೈಲ್ಯಾಂಡ್, ಇಂಡೋನೇಷಿಯಾ, ಮಲೇಶಿಯಾ, ಸಿಂಗಾಪೂರ, ಫಿಲಿಫೈನ್ಸ್, ಬ್ರೂನಿ, ದರೂಸಲಮ್, ಕಾಂಬೋಡಿಯಾ, ಲಾವೋದ್, ಮಯಾನ್ಮಾರ್ ಮತ್ತು ವಿಯಟ್ನಾಮ್ ರಾಷ್ಟ್ರಗಳನ್ನು ಒಳಗೊಂಡಿದೆ.

**ಪಾವತಿ ಶಿಲ್ಕು – Balance of Payment:**

ಯಾವುದೇ ಒಂದು ದೇಶ, ಒಂದು ವರ್ಷದ ಅವಧಿಯಲ್ಲಿ ವಿಶ್ವದ ಇತರ ದೇಶಗಳೊಡನೆ ತನ್ನ ಚಾಲ್ತಿ ಮತ್ತು ಬಂಡವಾಳ ಖಾತೆಗೆ ಮಾಡಿಕೊಂಡಿರುವ ಸ್ವೀಕೃತಿ ಮತ್ತು ಪಾವತಿಯ ಸಂಖ್ಯಾರೂಪದ ಸಾರಾಂಶ. ಪಾವತಿ ಶಿಲ್ಕು ಒಂದು ವರ್ಷದ ಅವಧಿಯ ಆಸ್ತಿ ಮತ್ತು ಋಣಭಾರವನ್ನು ತೋರಿಸುವುದರಿಂದ ಯಾವಾಗಲೂ ಸಮತೋಲನದಲ್ಲಿರುತ್ತದೆ.

**ಪ್ರವೇಶ ನಿರ್ಬಂಧ ಅಡೆತಡೆ – Barriers to entry:**

ಈಗಾಗಲೇ ಒಂದು ಉದ್ಯಮದಲ್ಲಿ ಸ್ಥಾಪಿತವಾಗಿರುವ ಕೈಗಾರಿಕ ಘಟಕಗಳಿಗೆ ಹೋಲಿಸಲಾಗಿ, ಹೊಸತಾಗಿ ಪ್ರವೇಶಿಸುವ (ಪ್ರವೇಶ ಬಯಸುವ) ಉದ್ಯಮ ಘಟಕಗಳಿಗೆ ಅನಾನುಕೂಲಕರವಾದ ಅಂಶಗಳಿಗೆ ಸಂಬಂಧಿಸಿದೆ.

**ಉತ್ತಮ ನಿಯಮ ಪಾಲನೆ – Better compliance:**

ಸರ್ಕಾರದ ನಿಯಮಗಳನ್ನು ಪಾಲಿಸುವುದು ಅಥವಾ ವಿಧೇಯರಾಗಿರುವುದು. ಇದು ಸಾಮಾನ್ಯವಾಗಿ ಸರ್ಕಾರಕ್ಕೆ ನೀಡಬೇಕಾದ ತೆರಿಗೆ ಮತ್ತು ಇತರ ಪಾವತಿಗಳಿಗೆ ಸಂಬಂಧಿಸಿದೆ.

**ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳು – Bilateral trade agreement:**

ಎರಡು ರಾಷ್ಟ್ರಗಳ ನಡುವೆ ಸರಕು ಮತ್ತು ಸೇವೆಗಳ ವಿನಿಮಯಕ್ಕೆ ಸಂಬಂಧಿಸಿದ ಒಪ್ಪಂದ.

**ಬ್ರಟ್‌ಲ್ಯಾಂಡ್ ಆಯೋಗ – Brudtland Commission:**

1983ರಲ್ಲಿ ಸಂಯುಕ್ತ ರಾಷ್ಟ್ರಗಳ ಸಂಸ್ಥೆ ವಿಶ್ವದ ಪರಿಸರದ ಸಮಸ್ಯೆಗಳನ್ನು ಅಧ್ಯಯನ ಮಾಡಲು ಮತ್ತು ಅವುಗಳ ಬಗ್ಗೆ ತಿಳಿಸಲು ರಚಿಸಿದ ಆಯೋಗ. ಇದು ಒಂದು ವರದಿಯನ್ನು ತಯಾರಿಸಿತು. ಸುಸ್ಥಿರ ಅಭಿವೃದ್ಧಿಯ ಬಗ್ಗೆ ಈ ಆಯೋಗ ನೀಡಿದ ವ್ಯಾಖ್ಯೆ ತುಂಬ ಜನಪ್ರಿಯವಾಗಿದೆ ಮತ್ತು ಜಗತ್ತಿನಾದ್ಯಂತ ವ್ಯಾಪಕವಾಗಿ ಉಲ್ಲೇಖಿಸಲಾಗಿದೆ.

**ಮುಂಗಡ ಪತ್ರ ಕೊರತೆ – Budget deficit:**

ಸರ್ಕಾರದ ಆದಾಯ ಮತ್ತು ತೆರಿಗೆ ಸ್ವೀಕೃತಿಗಳು ಅದರ ವೆಚ್ಚವನ್ನು ಭರಿಸಲು ವಿಫಲವಾದ ಒಂದು ಸ್ಥಿತಿ.

**ಇಂಧನ ದಕ್ಷತೆಯ ಬ್ಯೂರೊ(ಕಛೇರಿ) – Bureau of Energy Efficiency:**

ಸ್ವನಿಯಂತ್ರಣ ಮತ್ತು ಮಾರುಕಟ್ಟೆ ತತ್ವಗಳ ಮೇಲೆ ಒತ್ತು ನೀಡಿ ನೀತಿ ಮತ್ತು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾದ ಒಂದು ಸರ್ಕಾರಿ ಸಂಸ್ಥೆ. ಇದು ಅರ್ಥವ್ಯವಸ್ಥೆಯ ವಿವಿಧ ರಂಗಗಳಲ್ಲಿ ಇಂಧನದ ಸಂರಕ್ಷಣೆಯನ್ನು ಪ್ರೋತ್ಸಾಹಿಸುತ್ತದೆ ಮತ್ತು ವಿದ್ಯುಚ್ಛಕ್ತಿಯ ಅಪವ್ಯಯದ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

**ವ್ಯವಹಾರ ಪ್ರಕ್ರಿಯೆಯ ಹೊರಗುತ್ತಿಗೆ – Business Process Outsourcing (BPO):**

ಒಂದು ಕಂಪನಿಯು ವ್ಯವಹಾರ ಪ್ರಕ್ರಿಯೆಗಳನ್ನು ಮತ್ತೊಂದು ಕಂಪನಿಗೆ ಹೊರಗುತ್ತಿಗೆ ನೀಡುವುದು. ಈ ಪದವು ಸಾಫ್ಟವೇರ್ ಆಧಾರಿತ ಸೇವಾ ರಂಗದಲ್ಲಿರುವ ವಿದೇಶಿ ಕಂಪನಿಗಳಿಂದ ಭಾರತದ ಕಂಪನಿಗಳಿಗೆ ಕೆಲ ಚಟುವಟಿಕೆಗಳನ್ನು (ಉದಾ ಸಾಮಾನ್ಯವಾಗಿ ಕಾಲ್‌ಸೆಂಟರ್ ಎಂದು ಕರೆಯಲ್ಪಡುವ ಇತರ ಕಂಪನಿಗಳಿಂದ ಕರೆ ಸ್ವೀಕರಿಸುವ ಮತ್ತು ಕರೆ ಮಾಡುವ) ಹೊರಗುತ್ತಿಗೆ ನೀಡುವುದಕ್ಕೆ ಸಂಬಂಧಿಸಿದೆ.

**ಧಾರಣಾಯ ಸಾಮರ್ಥ್ಯ – Carrying Capacity:**

ಇದು ಜನಸಂಖ್ಯೆಯ ಒಂದು ನಿರ್ದಿಷ್ಟ ಜನಸಾಂದ್ರತೆಗೆ ಅನಿರ್ದಿಷ್ಟ ಕಾಲದವರೆಗೆ ಆಧಾರವಾಗಿರುವ ವಾಸಸ್ಥಳದ ಮಾಪನ. ಜನಸಂಖ್ಯೆ ಬೆಳವಣಿಗೆಯ ದರ ಶೂನ್ಯವಾಗಿರುವ ದೊಡ್ಡ ಗಾತ್ರದ ಸಾಂದ್ರತೆ – ಅವಲಂಬಿತ ಜನಸಂಖ್ಯೆ ಎಂಬುದು ದಾರಣಾ ಸಾಮರ್ಥ್ಯದ ತಾಂತ್ರಿಕ ವ್ಯಾಖ್ಯಾನವಾಗಿದೆ.

ಕಡಿಮೆ ಬದುಕುಳಿಯುವ ಸಾಂದ್ರತೆ (ಉದಾ: ಸಾಕಷ್ಟು ಸ್ಥಳ ಅಥವಾ ಆಹಾರ ಇಲ್ಲದ ಕಾರಣ) ಅಥವಾ ಪುನರುತ್ಪತ್ತಿ ಸಫಲತೆ (ಉದಾ – ಸಾಕಾಗುವಷ್ಟು ಆಹಾರದ ಅಭಾವ ಅಥವಾ ಪರಸ್ಪರ ನಡವಳಿಕೆಯ ಅಭಾವ ಅಥವಾ ಎರಡೂ) ಹೀಗಾಗಿ ಧಾರಣಾ ಸಾಮರ್ಥ್ಯದ ಅಡಿಯಲ್ಲಿ ಜನಸಂಖ್ಯೆಯ ಏರಿಕೆ ಪ್ರವೃತ್ತಿಯನ್ನು, ಹಾಗೆಯೇ ಧಾರಣಾ ಸಾಮರ್ಥ್ಯದ ಮೇಲುಗಡೆ ಜನಸಂಖ್ಯೆಯ ಇಳಿಕೆಯ ಪ್ರವೃತ್ತಿಯನ್ನು ಹೊಂದಿರುತ್ತದೆ. ಆಹಾರ ಲಭ್ಯತೆಯಲ್ಲಿನ ಪ್ರವೃತ್ತಿ ಪರಿಸರದ ಸ್ಥಿತಿಗತಿ ಮತ್ತು ಸ್ಥಳ ಇತ್ಯಾದಿ ಅಂಶಗಳನ್ನು ಒಳಗೊಂಡಿದೆ. ವಿವಿಧ ಅಂಶಗಳ ಕಾರಣದಿಂದಾಗಿ, ಪರಿಸರದ ಧಾರಣಾ ಸಾಮರ್ಥ್ಯ ಬೇರೆ ಬೇರೆ ಜಾತಿ, ವರ್ಗ (ಜೀವಸಂಕುಲಗಳು), ಬೇರೆ ಬೇರೆ ವಾಸಸ್ಥಳ ಮತ್ತು ಬೇರೆ ಬೇರೆ ಕಾಲಗಳಲ್ಲಿ ಬದಲಾಗುತ್ತಿರುತ್ತದೆ.

**ತೆರಿಗೆಯ ಪರಿಣಾಮ – Cascading Effect:**

ತೆರಿಗೆ ವಿಧಿಸುವುದರಿಂದಾಗುವ ಬೆಲೆ ಏರಿಕೆ, ತೆರಿಗೆಯಲ್ಲಾದ ಬದಲವಾಣೆಗಿಂತಲೂ ಹೆಚ್ಚಿದ್ದರೆ, ಅದನ್ನು ತೆರಿಗೆಯ ಪರಿಣಾಮ **(Cascading)** ಎನ್ನುವರು.

**ನಗದು ಮೀಸಲು ಅನುಪಾತ – Cash reserve ratio – CRR:**

ವಾಣಿಜ್ಯ ಬ್ಯಾಂಕುಗಳು ಕೇಂದ್ರ ಬ್ಯಾಂಕಿನ (ಭಾರತೀಯ ರಿಜರ್ವ್ ಬ್ಯಾಂಕ್) ಬಳಿ ನಗದು ರೂಪದಲ್ಲಿ ಇರಿಸಬೇಕಾದ ಠೇವಣಿಯ ಮತ್ತು ಸಂಗ್ರಹದ ಒಂದು ಭಾಗ. ಇದನ್ನು ಭಾರತೀಯ ರಿಜರ್ವ್ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳನ್ನು ನಿಯಂತ್ರಿಸುವ ಕ್ರಮವಾಗಿ ಉಪಯೋಗಿಸುತ್ತದೆ.

**ದಿನಗೂಲಿ ನೌಕರ – Casual Wage Labourer:**

ಇತರರ ಕೃಷಿ ಭೂಮಿ ಅಥವಾ ಕೃಷಿಯೇತರ ಉದ್ಯಮದಲ್ಲಿ ದಿನಗೂಲಿ ನೌಕರನಾಗಿ ನೇಮಕಗೊಂಡಿರುವ ಮತ್ತು ಪ್ರತಿಫಲವಾಗಿ ದಿನದ ಅಥವಾ ನಿಯತಕಾಲಿಕ ಕೆಲಸದ ಗುತ್ತಿಗೆಯ ಅನುಸಾರವಾಗಿ ಕೂಲಿ ಪಡೆಯುವ ವ್ಯಕ್ತಿ.

**ವಸಾಹತು ಪದ್ಧತಿ – Colonialism:**

ವಸಾಹತುಗಳನ್ನು ಗೆಲ್ಲುವ ಅಥವಾ ಇತರ ವಿಧಾನಗಳಿಂದ ಅವುಗಳನ್ನು ಗಳಿಸುವ ಮತ್ತು ಅವುಗಳನ್ನು ಅವಲಂಬಿಗಳನ್ನಾಗಿ ಮಾಡುವ ವಿಧಾನ. ಅಲ್ಲದೆ ಗಡಿಯಾಚೆಯ ಪ್ರದೇಶಗಳ ರಾಜಕೀಯ ಮತ್ತು ಆರ್ಥಿಕ ಜೀವನದಲ್ಲಿ ತನ್ನ ಸಾಮರ್ಥ್ಯ, ನಿಯಂತ್ರಣ ಅಥವಾ ಆಳ್ವಿಕೆಯನ್ನು ಹೇರುವುದಾಗಿದೆ. ಶೋಷಣೆ ವಸಾಹತುವಿನ ಪ್ರಮುಖ ಲಕ್ಷಣವಾಗಿದೆ.

**ಕೃಷಿಯ ವಾಣಿಜ್ಯೀಕರಣ – Commercialization of Agriculture:**

ಇದು ಸ್ವಅನುಭೋಗಕ್ಕೆ ಬದಲಾಗಿ ಮಾರುಟ ಮಾಡುವುದಕ್ಕಾಗಿಯೇ ಬೆಳೆಗಳನ್ನು ಬೆಳೆಯುವುದಾಗಿದೆ. ಬ್ರಿಟೀಷರ ಆಡಳಿತದಲ್ಲಿ ಕೃಷಿಯ ವಾಣಿಜ್ಯೀಕರಣ ಬೇರೆಯೇ ಅರ್ಥವನ್ನು ಪಡೆದಿತ್ತು. ಮೂಲವಾಗಿ ಅದು ಬೆಳೆಗಳ ವಾಣಿಜ್ಯೀಕರಣವಾಗಿತ್ತು. ಬ್ರಿಟಿಷರು ರೈತರಿಗೆ ಆಹಾರ ಬೆಳೆಗಳಿಗಿಂತ, ವಾಣಿಜ್ಯ ಬೆಳೆಗಳ ಉತ್ಪಾದನೆಗೆ ಹೆಚ್ಚಿನ ಬೆಲೆಯನ್ನು ನೀಡಲು ಪ್ರಾರಂಭಿಸಿದರು. ಅವರು ವಾಣಿಜ್ಯ ಬೆಳೆಗಳನ್ನು ಬ್ರಿಟನ್‌ನಲ್ಲಿರುವ ತಮ್ಮ ಕೈಗಾರಿಕೆಗಳಿಗೆ ಕಚ್ಚಾ ವಸ್ತುವಾಗಿ ಬಳಸುತ್ತಿದ್ದರು.

**ಸಹಭಾಗಿತ್ವ – Communes:**

1958 ರಿಂದ 1982–85ರವರೆಗೆ ಮತ್ತು ಪಟ್ಟಣಗಳಿಂದ ಅವುಗಳ ಸ್ಥಾನಪಲ್ಲಟಗೊಳ್ಳುವ ತನಕ ಅಸ್ಥಿತ್ವದಲ್ಲಿದ್ದ ಗ್ರಾಮೀಣ ಪ್ರದೇಶಗಳ ಮೂರು ಸ್ತರಗಳ ಆಡಳಿತದ ಮೇಲುಸ್ತರವೇ ಸಹಭಾಗಿತ್ವ ಅಥವಾ ಕಮ್ಯೂನ್‌ಗಳಾಗಿವೆ. ಇದನ್ನು ಜನರ ಸಹಭಾಗಿತ್ವ (ಕಮ್ಯೂನ್‌ಗಳು) ವೆಂದು ಅಥವಾ ಚೀನೀ ಭಾಷೆಯಲ್ಲಿ 'ರೆನ್‌ಮಿನ್ ಗೋಂಗಶೆ' ಎಂದು ಕರೆಯುತ್ತಾರೆ. ಒಂದು ದೊಡ್ಡ ಸಾಮುದಾಯಿಕ ಘಟಕವಾದ ಕಮ್ಯೂನ್‌ಗಳನ್ನು (ಸಹಭಾಗಿತ್ವ) ಉತ್ಪಾದನಾ ದಳ ಮತ್ತು ಉತ್ಪಾದವಾ ತಂಡವೆಂದು ಎರಡು ಭಾಗಗಳನ್ನಾಗಿ ವಿಭಾಗಿಸಲಾಗಿತ್ತು. ಈ ಕಮ್ಯೂನ್‌ಗಳು ಸರ್ಕಾರಿ, ರಾಜಕೀಯ ಮತ್ತು ಆರ್ಥಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

**ಅನುಭೋಗದ ಚೀಲ (ಬುಟ್ಟಿ) – Consumption Basket:**

ಒಂದು ಕುಟುಂಬ ಅನುಭೋಗಿಸುವ ಸರಕು ಮತ್ತು ಸೇವೆಗಳ ಗುಂಪು. "ಜನರ ಅನುಭೋಗದ ನಮೂನೆಯನ್ನು ಅಳತೆ ಮಾಡಲು ಸಂಖ್ಯಾಶಾಸ್ತ್ರೀಯ ಇಲಾಖೆಗಳು, ಅಂಥಹ ವಸ್ತುಗಳನ್ನು ಗುರುತಿಸಿರುತ್ತಾರೆ. ಉದಾಹರಣೆಗೆ NSSO ಅನುಭೋಗ ಚೀಲದ ವಸ್ತುಗಳ 19 ಗುಂಪುಗಳನ್ನು ಗುರುತಿಸಿದ್ದಾರೆ.

ಅವುಗಳಲ್ಲಿ ಕೆಲವು (i) ದವಸ ಧಾನ್ಯಗಳು, (ii) ಬೇಳೆ ಕಾಳುಗಳು, (iii) ಹಾಲು ಮತ್ತು ಹಾಲಿನ ಉತ್ಪನ್ನಗಳು, (vi) ಖಾದ್ಯತೈಲಗಳು, (v) ಇಂಧನ ಮತ್ತು ವಿದ್ಯುತ್ ಮತ್ತು (vi) ಉಡುಪುಗಳು.

**ಡೀಫಾಲ್ಟ್ (ಸುಸ್ತಿ) – Default:**

ಒಂದು ಸಾಲದ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸಲು ವಿಫಲರಾಗುವುದು. ಉದಾ: ಸರ್ಕಾರವು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲವನ್ನು ನಿಗದಿತ ಸಮಯದಲ್ಲಿ ಮರುಪಾವತಿಸಲಾಗದೆ, ಸಾಲಗಾರನಾಗಿ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುವುದು.

**ಕೊರತೆ ಹಣಕಾಸು – Deficit finance**

ಸರಕಾರದ ವೆಚ್ಚವು ಅದರ ಆದಾಯಕ್ಕಿಂತ ಹೆಚ್ಚಾಗಿರುವ ಸನ್ನಿವೇಶ.

**ಜನಸಂಖ್ಯೆಯ ಪರಿವರ್ತನೆ – Demographic Transition:**

ಈ ಪರಿಭಾವನೆಯನ್ನು ಜನಸಂಖ್ಯಾ ತಜ್ಞನಾದ ಫ್ರಾಂಕ್ ನೋಟೀಸ್ಟಿನ್‌ನಿಂದ 1948 ರಲ್ಲಿ ಆರ್ಥಿಕ ಅಭಿವೃದ್ಧಿಯ ಪರಿಣಾಮವಾಗಿ ಉತ್ತಮ ಜೀವನದ ಪರಿಸ್ಥಿತಿಯ ಫಲವಾಗಿ ಇಳಿಮುಖವಾಗುತ್ತಿದ್ದ ಜನನ ಮತ್ತು ಮರಣ ದರದ ವಿಶಿಷ್ಟ ನಮೂನೆಯನ್ನು ವಿವರಿಸಲು ಅಭಿವೃದ್ಧಿಗೊಳಿಸಿದ್ದಾಗಿತ್ತು. ನೋಟೀಸ್ಟಿನ್‌ನು ಜನಸಂಖ್ಯೆ ಪರಿವರ್ತನೆಯ ಮೂರು ಹಂತಗಳನ್ನು ಗುರುತಿಸಿದ್ದಾನೆ. ಅವುಗಳೆಂದರೆ ಕೈಗಾರಿಕೀಕರಣದ ಪೂರ್ವ, ಅಭಿವೃದ್ಧಿಯಾಗುತ್ತಿರುವ ಮತ್ತು ಆಧುನಿಕ ಕೈಗಾರಿಕೀಕರಣದ ಸಮಾಜಗಳು. ತದನಂತರ ಇನ್ನೊಂದು ಹಂತವಾದ ಕೈಗಾರಿಕೀಕರಣದ ನಂತರದ ಹಂತವು ಕೂಡ ಸೇರಿಸಲ್ಪಟಿದೆ.

**ಮೀಸಲಾತಿ ಹಿಂತೆಗೆತ – Dereservation:**

ಒಂದು ಉದ್ದಿಮೆ ಅಥವಾ ಉದ್ದಿಮೆಗಳ ಗುಂಪಿಗೆ ಯಾವುದೇ ಇನ್ನೊಂದು ಉದ್ದಿಮೆ ಅಥವಾ ಉದ್ದಿಮೆಗಳ ಗುಂಪಿಗೆ ಮೀಸಲಾಗಿದ್ದ ಸರಕು ಮತ್ತು ಸೇವೆಗಳನ್ನು ಉತ್ಪಾದಿಸಲು ಅನುಮತಿ ನೀಡುವುದು. ಭಾರತದಲ್ಲಿ ಇದು ಚಿಕ್ಕ ಕೈಗಾರಿಕೆಗಳಿಗೆ ಮೀಸಲಾದ ಸರಕು ಮತ್ತು ಸೇವೆಗಳನ್ನು ಬೃಹತ್ ಕೈಗಾರಿಕೆಗಳಿಗೆ ಉತ್ಪಾದಿಸಲು ಅನುವು ಮಾಡಿ ಕೊಡುವುದಾಗಿದೆ.

**ಅಪಮೌಲ್ಯ – Devaluation:**

ವಿನಿಮಯ ದರದ ಇಳಿಕೆಯಿಂದಾಗಿ ಒಂದು ರಾಷ್ಟ್ರದ ಹಣದ ಮೌಲ್ಯ ಮತ್ತೊಂದು ರಾಷ್ಟ್ರದ ಹಣದ ಮೌಲ್ಯದ ಎದುರು ಕಡಿಮೆಯಾಗುವುದು

**ಹೂಡಿಕೆ ಹಿಂತೆಗೆತ – Disinvestment:**

ಸಂಪನ್ಮೂಲ ಕ್ರೋಢೀಕರಿಸಲು ಅಥವಾ ಕಂಪನಿಯ ಮಾಲೀಕತ್ವ ಬದಲಿಸುವ ಉದ್ದೇಶದಿಂದ ಒಂದು ಕಂಪನಿಯ ಬಂಡವಾಳ ಸರಕುಗಳ ಭಾಗವನ್ನು ಉದ್ದೇಶ ಪೂರ್ವಕವಾಗಿ ಮಾರಾಟ ಮಾಡುವ ಒಂದು ಪ್ರಕ್ರಿಯೆ.

**ಉದ್ಯೋಗದಾತರು – Employers:**

ವೇತನ ನೀಡಿ ನೇಮಕಾತಿ ಮಾಡಿಕೊಂಡ ಕೆಲಸಗಾರರಿಂದ ಉದ್ಯಮವನ್ನು ನಡೆಸುವ ಸ್ವಯಂ ಉದ್ಯೋಗಿಗಳು.

**ಉದ್ದಿಮೆ – Enterprise:**

ಸರಕು ಅಥವಾ ಸೇವೆಗಳನ್ನು ಉತ್ಪಾದಿಸಲು ಮತ್ತು ವಿತರಿಸಲು, ಮುಖ್ಯವಾಗಿ ಮಾರಾಟ ಮಾಡಲು ಒಬ್ಬ ವ್ಯಕ್ತಿ ಅಥವಾ ಕೆಲವು ವ್ಯಕ್ತಿಗಳ ಗುಂಪಿನ ಮಾಲೀಕತ್ವದಿಂದ ನಡೆಸಲ್ಪಡುವ ಒಂದು ಉದ್ದಿಮೆ.

**ಈಕ್ವಿಟಿಗಳು – Equities:**

ಒಂದು ಕಂಪನಿಯ ಪಾವತಿ ಮಾಡಿದ ಅಥವಾ ಸಂಗ್ರಹಿಸಿದ ಬಂಡವಾಳದ ಷೇರು ಭಾಗವೇ ಈಕ್ವಿಟಿ. ಇದನ್ನು ಪಡೆದವರು (ಈಕ್ವಿಟಿದಾರರು) ಕಂಪನಿಯ ಮತದಾನ ಮಾಡುವ ಹಕ್ಕು ಮತ್ತು ಲಾಭಾಂಶದ ಹಕ್ಕಿನೊಂದಿಗೆ ಕಂಪನಿಯ ಒಡೆತನವನ್ನು ಪಡೆಯುತ್ತಾರೆ.

**ಸಂಸ್ಥೆ – Establishment:**

ಒಂದು ವರ್ಷದಲ್ಲಿ ಹೆಚ್ಚಿನ ಅವಧಿಯ ಕಾರ್ಯಾಚರಣೆಗೆ ಕನಿಷ್ಟ ಒಬ್ಬ ಕೆಲಸಗಾರನ್ನಾದರೂ ನೇಮಕಾತಿ ಮಾಡಿಕೊಂಡ ಸಂಸ್ಥೆ.

**ಯೂರೋಪಿನ ಒಕ್ಕೂಟ – European Union:**

ಯೂರೋಪ ಖಂಡದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಹಕಾರವನ್ನು ವಿಸ್ತರಿಸಲು ಸ್ಥಾಪಿಸಲ್ಪಟ್ಟ 25 ರಾಷ್ಟ್ರಗಳ ಒಕ್ಕೂಟ. ಯೂರೋಪಿನ ಒಕ್ಕೂಟದ ಸದಸ್ಯ ರಾಷ್ಟ್ರಗಳೆಂದರೆ, ಆಸ್ಟ್ರೀಯಾ, ಬೆಲ್ಜಿಯಂ, ಸೈಪ್ರಸ್, ಜೆಕ್ ಗಣರಾಜ್ಯ, ಡೆನ್‌ಮಾರ್ಕ್, ಎಸ್ಟೋನಿಯಾ, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ಹಂಗೇರಿ, ಐರ್ಲೆಂಡ್, ಪೋರ್ಚುಗಲ್, ಸ್ಪೇನ್, ಸ್ವೀಡನ್, ಇಂಗ್ಲೆಂಡ್, ಮಲ್ಟಾ, ಪೋಲಂಡ್, ಸ್ಲೋವಾಕಿಯಾ ಮತ್ತು ಸ್ಲೋವೇನಿಯಾ.

**ರಫ್ತು ಸುಂಕಗಳು – Export Duties:**

ಒಂದು ರಾಷ್ಟ್ರದಿಂದ ರಫ್ತಾಗುವ ಸರಕುಗಳ ಮೇಲೆ ವಿಧಿಸುವ ಸುಂಕ.

**ರಫ್ತು ಪ್ರೋತ್ಸಾಹ – Export Promotion:**

ಹೆಚ್ಚಿನ ಆರ್ಥಿಕ ಪ್ರಗತಿಯನ್ನು ಸಾಧಿಸಲು ಮತ್ತು ವಿದೇಶಿ ವಿನಿಮಯವನ್ನು ಸಂಗ್ರಹಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳ ಸಮುಚ್ಛಯ (ವ್ಯಾಪಾರ ಅಡೆತಡೆಗಳನ್ನು ತೆಗೆದುಹಾಕುವ ಉದ್ದೇಶದ ತೆರಿಗೆ ಮತ್ತು ವಾಣಿಜ್ಯ ಬೆಂಬಲ ಕ್ರಮಗಳನ್ನು ಒಳಗೊಂಡಿರುತ್ತದೆ.)

**ರಫ್ತಾಮದು ನೀತಿ – Export-Import Policy:**

ರಫ್ತು ಮತ್ತು ಆಮದಿಗೆ ಸಂಬಂಧಿಸಿದಂತೆ ಸರ್ಕಾರದ ಆರ್ಥಿಕ ನೀತಿಗಳು.

**ಕುಟುಂಬ ಶ್ರಮಿಕ ಅಥವಾ ಕೆಲಸಗಾರ – Family Labour / worker:**

ನಗದು ಅಥವಾ ವಸ್ತುವಿನ ರೂಪದಲ್ಲಿ ಯಾವುದೇ ಪ್ರತಿಫಲ ಪಡೆಯದೇ ಕುಟುಂಬದ ಸದಸ್ಯರಿಂದ ನಡೆಸಲ್ಪಡುವ ಕೃಷಿ, ಕೈಗಾರಿಕೆ, ಉದ್ಯಮ ಅಥವಾ ವ್ಯಾಪಾರದಲ್ಲಿ ದುಡಿಯುವ ಕೆಲಸಗಾರ.

**ಹಣಕಾಸು ಸಂಸ್ಥೆಗಳು – Financial Institutions:**

ಉಳಿತಾಯದ ಸಂಗ್ರಹ ಮತ್ತು ಹಂಚಿಕೆಯಲ್ಲಿ ನಿರತವಾಗಿರುವ ಸಂಸ್ಥೆಗಳು. ಅವು ವಾಣಿಜ್ಯ ಬ್ಯಾಂಕುಗಳು ಸಹಕಾರಿ ಬ್ಯಾಂಕ್‌ಗಳು, ಅಭಿವೃದ್ಧಿ ಬ್ಯಾಂಕ್‌ಗಳು ಮತ್ತು ಹೂಡಿಕೆ ಸಂಸ್ಥೆಗಳನ್ನು ಒಳಗೊಂಡಿವೆ.

**ರಾಜ್ಯಕೋಶದ ನಿರ್ವಹಣೆ – Fiscal Management:**

ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸಲು ತೆರಿಗೆ ಮತ್ತು ಸರ್ಕಾರದ ವೆಚ್ಚವನ್ನು ಬಳಸಿಕೊಳ್ಳುವುದು.

**ರಾಜ್ಯಕೋಶದ ನೀತಿ – Fiscal Policy:**

ಒಂದು ದೇಶದಲ್ಲಿ ವೆಚ್ಚವನ್ನು ಭರಿಸಲು ಮತ್ತು ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸಲು, ಹಣಕಾಸು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸರ್ಕಾರದ ಎಲ್ಲಾ ಯೋಜಿತ ಕಾರ್ಯ ಚಟುವಟಿಕೆಗಳು.

**ವಿದೇಶಿ ನೇರ ಹೂಡಿಕೆ – Foreign Direct Investment:**

ವಿದೇಶಿ ಸಂಪತ್ತನ್ನು ದೇಶಿಯ ರಚನೆ, ಸರಕು ಮತ್ತು ಸಂಸ್ಥೆಗಳಲ್ಲಿ ಹೂಡಿಕೆ ಮಾಡವುದು. ಇದು ಷೇರು ಮಾರುಕಟ್ಟೆಯಲ್ಲಿನ ವಿದೇಶೀ ಹೂಡಿಕೆಯನ್ನು ಒಳಗೊಂಡಿರುವುದಿಲ್ಲ. ವಿದೇಶಿ ನೇರ ಹೂಡಿಕೆಯು ಯಾವುದೇ ಕಂಪನಿಯ ಇಕ್ವಿಟಿಯಲ್ಲಿನ ಹೂಡಿಕೆಗಿಂತ ಹೆಚ್ಚು ಉಪಯೋಗಕಾರಿ ಎಂದು ಭಾವಿಸಲಾಗಿದೆ. ಏಕೆಂದರೆ ಇಕ್ವಿಟಿ ಹೂಡಿಕೆಯು ಅಸ್ಥಿರತೆಯ ಸಂಭಾವ್ಯತೆ ಹೊಂದಿದ್ದು, ಅಲ್ಪಕಾಲಿಕವಾಗಿದೆ. ಆದರೆ ವಿದೇಶಿ ನೇರ ಹೂಡಿಕೆ, ಸಾಮಾನ್ಯವಾಗಿ, ಒಳ್ಳೆಯ ಮತ್ತು ಕೆಟ್ಟ ಸ್ಥಿತಿಗಳೆರಡರಲ್ಲೂ ಉಪಯುಕ್ತವಾದುದಾಗಿದೆ.

**ವಿದೇಶಿ ವಿನಿಮಯ – Foreign Exchange:**

ಇತರೆ ದೇಶದ ಹಣ ಅಥವಾ ಕರಾರು ಪತ್ರ.

**ವಿದೇಶಿ ವಿನಿಮಯ ಮಾರುಕಟ್ಟೆ – Foreign Exchange Markets:**

ಪ್ರಸ್ತುತ ನಿಗದಿಪಡಿಸಿರುವ ವಿನಿಮಯ ದರದಲ್ಲಿ ವಿದೇಶಿ ಹಣವನ್ನು ಪಡೆಯುವ (bought) ಮತ್ತು ಮಾರಾಟ ಮಾಡುವ (Sold) ಮಾರುಕಟ್ಟೆಯಾಗಿದ್ದು ಅವುಗಳ ಹಸ್ತಾಂತರ ಭವಿಷ್ಯದ ಯಾವುದಾದರೂ ನಿರ್ದಿಷ್ಟ ದಿನಗಳಲ್ಲಿ ಆಗುತ್ತದೆ.

**ವಿದೇಶಿ ಸಾಂಸ್ಥಿಕ ಹೂಡಿಕೆ – Foreign Institutional Investment:**

ಸ್ಟಾಕ್, ಬಾಂಡ್ ಮತ್ತು ಹಣಕಾಸಿನ ಆಸ್ತಿಯ ರೂಪದಲ್ಲಿರುವ ವಿದೇಶಿ ಹೂಡಿಕೆಯಾಗಿದೆ. ಈ ರೀತಿಯ ಹೂಡಿಕೆ ದೇಶದ ಉದ್ಧಿಮೆ ಮತ್ತು ಹೂಡಿಕೆದಾರರ ಮೇಲೆ ಯಾವುದೇ ರೀತಿಯ ನಿಯಂತ್ರಣ ಹೊಂದಿರುವುದಿಲ್ಲ.

**ವಿದೇಶಿ ಸಂಸ್ಥೆಗಳ ಹೂಡಿಕೆದಾರರು – Foreign Institutional Investors:**

ಇದು ವಾಣಿಜ್ಯ ಬ್ಯಾಂಕುಗಳು, ಹೂಡಿಕೆ ಬ್ಯಾಂಕುಗಳು, ಮ್ಯೂಚುಯಲ್ ಫಂಡ್, ನಿವೃತ್ತಿ ನಿಧಿ ಅಥವಾ ಅಂತಹ ಇತರೆ ಸಾಂಸ್ಥಿಕ ಹೂಡಿಕೆಗಳನ್ನು ಒಳಗೊಂಡ ವಿದೇಶಿ ಮೂಲದ ಬ್ಯಾಂಕಿಂಗ್ ಮತ್ತು ಇತರೆ ಬ್ಯಾಂಕೇತರ ಸಂಸ್ಥೆಗಳಾಗಿದ್ದು, ಅವುಗಳು ಸ್ಟಾಕ್ ಮಾರ್ಕೆಟ್ ಮೂಲಕ ದೇಶದಲ್ಲಿ ಸ್ಟಾಕ್ ಮತ್ತು ಬಾಂಡ್ ಮೂಲಕ ಹೂಡುವ ಬಂಡವಾಳ ಮಹತ್ವದ ಪರಿಣಾಮ ಬೀರುತ್ತದೆ (ಈ ಸಂಸ್ಥೆಗಳ ಹೂಡಿಕೆ ದೇಶೀಯ ಸಂಸ್ಥೆಗಳ ಹೂಡಿಕೆಗಿಂತ ಭಿನ್ನವಾಗಿದೆ).

**ಔಪಚಾರಿಕ / ಸಂಘಟಿತ ಕ್ಷೇತ್ರದ ಪ್ರತಿಷ್ಠಾನಗಳು – Formal Sector Establishments:**

ಹತ್ತು ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರನ್ನು ನೇಮಕ ಮಾಡಿಕೊಂಡಿರುವ ಎಲ್ಲಾ ಸಾರ್ವಜನಿಕ ಕೇತ್ರದ ಮತ್ತು ಖಾಸಗಿ ಕ್ಷೇತ್ರದಸಂಸ್ಥೆಗಳು.

**G–20 (20 ರಾಷ್ಟ್ರಗಳ ಗುಂಪು):–** ಜಾಗತಿಕ ಆರ್ಥಿಕ ಸ್ಥಿರತೆ ಮತ್ತು ಅವಿಶ್ರಾಂತ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿರುವ ರಾಷ್ಟ್ರಗಳ ಸಮೂಹ. ಇದು 19 ಸದಸ್ಯ ರಾಷ್ಟ್ರಗಳ ವಿತ್ತೀಯ ಮಂತ್ರಿಗಳು ಮತ್ತು ಕೇಂದ್ರ ಬ್ಯಾಂಕಿನ ಗವರ್ನರ್‌ಗಳನ್ನು ಒಟ್ಟುಗೂಡಿಸುತ್ತದೆ. ಆ ರಾಷ್ಟ್ರಗಳೆಂದರೆ ಅರ್ಜೆಂಟೈನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಭಾರತ, ಇಂಡೋನೇಶಿಯ, ಇಟಲಿ, ಜಪಾನ್, ಕೊರಿಯ, ಮೆಕ್ಸಿಕೋ, ರಷ್ಯಾ ಸೌದಿ ಅರೇಬಿಯ, ದಕ್ಷಿಣ ಆಫ್ರಿಕಾ, ಟರ್ಕಿ, ಇಂಗ್ಲೆಂಡ್, ಅಮೇರಿಕಾ, ಯೂರೋಪಿಯನ್ ಒಕ್ಕೂಟವೂ ಸಹ G–20ರ ಸದಸ್ಯತ್ವ ಹೊಂದಿದೆ ಮತ್ತು ಇದು ಯೂರೋಪಿಯನ್ ಕೌನ್ಸಿಲ್‌ರ ಅಧ್ಯಕ್ಷರು ಮತ್ತು ಯೂರೋಪಿನ ಕೇಂದ್ರ ಬ್ಯಾಂಕಿನ ಮುಖ್ಯಸ್ಥರಿಂದ ಪ್ರತಿನಿಧಿಸಲ್ಪಡುತ್ತದೆ.

**G–8 (ಎಂಟು ರಾಷ್ಟ್ರಗಳ ಗುಂಪು):–** ಇದು ಕೆನಡ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್, ಉತ್ತರ ಐರ್ಲ್ಯಾಂಡ್, ಅಮೇರಿಕ ಮತ್ತು ರಷ್ಯಾವನ್ನು ಒಳಗೊಂಡಿದೆ. G–8ರ ವೈಶಿಷ್ಟವೆಂದರೆ ಎಲ್ಲಾ ಸದಸ್ಯ ರಾಷ್ಟ್ರಗಳ ಅಧ್ಯಕ್ಷರು ಮತ್ತು ಅಂತರರಾಷ್ಟ್ರೀಯ ಅಧಿಕಾರಿಗಳ ಆರ್ಥಿಕ, ರಾಜಕೀಯ ವಾರ್ಷಿಕ ಶೃಂಗ ಸಭೆಗಳು, ಇದರ ಜೊತೆಯಲ್ಲಿ ಅನೇಕ ಉಪಸಭೆಗಳು ಮತ್ತು ನೀತಿಯ ಸಂಶೋಧನೆಗಳು ನಡೆಯುತ್ತವೆ. ಈ ಗುಂಪಿನ ಅಧ್ಯಕ್ಷತೆ ಪ್ರತಿ ವರ್ಷ ಚಕ್ರಾಕಾರದಲ್ಲಿ ಬದಲಾಗುತ್ತದೆ ಮತ್ತು 2006 ರಲ್ಲಿ ರಷ್ಯಾ ಇದರ ಅಧ್ಯಕ್ಷತೆ ಹೊಂದಿತ್ತು.

**ಗ್ರಾಚ್ಯುಟಿ (ಸೇವೆಯ ಅನುಧಾನ) – Gratuity:**

ನೌಕರನು ಸಲ್ಲಿಸಿದ ಸೇವೆಗಾಗಿ ಅವನ ನಿವೃತ್ತಿಯ ಸಮಯದಲ್ಲಿ ಉದ್ಯೋಗದಾತನು ನೀಡುವ ಹಣದ ಮೊತ್ತ.

**ಒಟ್ಟು ದೇಶೀಯ ಉತ್ಪನ್ನ – Gross Domestic Product:**

ಒಡೆತನವನ್ನು ಪರಿಗಣಿಸದೆ ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸಿದ ಎಲ್ಲಾ ಅಂತಿಮ ಸರಕು ಮತ್ತು ಸೇವೆಗಳ ಹಣರೂಪದ ಮೌಲ್ಯ. ಒಂದು ದೇಶದ ಜೀವನಮಟ್ಟದ ಮಾನದಂಡವಾಗಿ ಬಳಸಲಾಗುವ ಸೂಚ್ಯಾಂಕಗಳಲ್ಲಿ ಇದು ಒಂದಾಗಿದೆ ಆದರೆ ಇದಕ್ಕೆ ಕೆಲವು ಮಿತಿಗಳಿವೆ.

**ಕುಟುಂಬ (ಮನೆವಾರ್ತೆ) – Household:**

ಸಾಮಾನ್ಯವಾಗಿ ಒಂದೇ ಮನೆಯಲ್ಲಿ ವಾಸಿಸುತ್ತಿರುವ, ಒಂದೇ ಅಡುಗೆ ಮನೆಯಲ್ಲಿ ಆಹಾರ ಪಡೆಯುವ ವ್ಯಕ್ತಿಗಳ ಗುಂಪು. ಸಾಮಾನ್ಯವಾಗಿ ಎಂದರೆ ತಾತ್ಕಾಲಿಕವಾಗಿ ಭೇಟಿ ನೀಡುವ ಅತಿಥಿಗಳು ಕುಟುಂಬದ ಸದಸ್ಯರಾಗಿರುವುದಿಲ್ಲ ಮತ್ತು ಕಾರಣಾಂತರಗಳಿಂದ ತಾತ್ಕಾಲಿಕವಾಗಿ ಹೊರಗೆ ಹೋಗಿರುವ ಸದಸ್ಯರನ್ನು ಇದು ಒಳಗೊಂಡಿರುತ್ತದೆ.

**ಆಮದು ಪರವಾನಗಿ – Import Licensing:**

ಒಂದು ದೇಶಕ್ಕೆ ಸರಕುಗಳನ್ನು ಆಮದು ಮಾಡಿಕೊಳ್ಳಲು ಸರ್ಕಾರದಿಂದ ಪಡೆಯಬೇಕಾದ ಪರವಾನಗಿ.

**ಆಮದು ಬದಲಿ – Import Substitution:**

ಆಮದು ಮಾಡಿಕೊಳ್ಳುವ ವಸ್ತುವನ್ನು ದೇಶದಲ್ಲಿಯೇ ಉತ್ಪಾದಿಸುವ ದೇಶದ ಆರ್ಥಿಕಾಭಿವೃದ್ಧಿಯ ಒಂದು ನೀತಿ. (ಆಮದು ನಿಯಂತ್ರಣ, ಸುಂಕಗಳು ಮತ್ತು ಇತರ ನಿಯಂತ್ರಣಗಳನ್ನು ಇದು ಒಳಗೊಂಡಿರುತ್ತದೆ.) ಈ ನೀತಿಯು ಸ್ವಾವಲಂಬನೆ ಸಾಧಿಸಲು ಮತ್ತು ಸ್ವದೇಶೀಯರಿಗೆ ಉದ್ಯೋಗ ನೀಡಲು ದೇಶೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿದೆ.

**ಶಿಶು ಮರಣ ದರ – Infant Mortality Rate:**

ಒಂದು ನಿರ್ದಿಷ್ಟ ವರ್ಷದಲ್ಲಿ ಜನಿಸುವ ಮಕ್ಕಳಲ್ಲಿ ಒಂದು ವರ್ಷ ತುಂಬುವುದುರೊಳಗೆ ಮರಣ ಹೊಂದುವ ಮಕ್ಕಳ ಸರಾಸರಿ ಸಂಖ್ಯೆ.

**ಹಣದುಬ್ಬರ – Inflation:**

ನಿರಂತರವಾಗಿ ಏರುವ ಸಾಮಾನ್ಯ ಬೆಲೆಯ ಮಟ್ಟ.

**ಅನೌಪಚಾರಿಕ ಕ್ಷೇತ್ರದ ಉದ್ಯಮ – Informal Sector Enterprises:**

ನಿಯಮಿತ ಆಧಾರದ ಮೇಲೆ 10ಕ್ಕಿಂತ ಕಡಿಮೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಖಾಸಗಿ ಸಂಸ್ಥೆಗಳು.

**ದೇಶೀಯ ಅರ್ಥ ವ್ಯವಸ್ಥೆಯ ಒಟ್ಟುಗೂಡಿಸುವಿಕೆ – Integration of Domestic Economy:**

ಸರ್ಕಾರದ ನೀತಿಯ ಮೂಲಕ ಇತರ ರಾಷ್ಟ್ರಗಳೊಡನೆ ಮುಕ್ತ ವ್ಯಾಪಾರ ಮತ್ತು ಹೂಡಿಕೆಗೆ ಅನುವು ಮಾಡಿಕೊಡುವ ಜೊತೆಯಲ್ಲಿ ದೇಶೀಯ ಅರ್ಥ ವ್ಯವಸ್ಥೆಯು ಇತರ ರಾಷ್ಟ್ರಗಳೊಡನೆ ದಕ್ಷವಾಗಿ ಮತ್ತು ಪರಸ್ಪರ ಅವಲಂಬಿತವಾಗಿ ಕಾರ್ಯ ನಿರ್ವಹಿಸುವ ಒಂದು ಪರಿಸ್ಥಿತಿ.

**ಅಗೋಚರಗಳು – Invisibles:**

ಸಂದಾಯ ಬಾಕಿ (ಪಾವತಿ ಶುಲ್ಕ) ಚಾಲ್ತಿ ಖಾತೆಗೆ ಸೇರಲ್ಪಡುವ ವಿವಿಧ ಅಗೋಚರ ಸರಕುಗಳು, ಅವು ಬಹುತೇಕ ಸೇವೆಗಳಾಗಿದ್ದು ಪ್ರವಾಸೋದ್ಯಮ, ಹಡಗು ಮತ್ತು ವಾಯು ಸಾರಿಗೆ, ವಿಮೆ ಮತ್ತು ಬ್ಯಾಂಕಿನ ಇತ್ಯಾದಿ ವಿತ್ತೀಯ ಸೇವೆ ಮುಂತಾದ ಸೇವೆಗಳಾಗಿವೆ. ಇವು ವಿದೇಶಗಳಿಗೆ ಮಾಡಿದ ಮತ್ತು ವಿದೇಶಗಳಿಂದ ಪಡೆದ ಉಡುಗೊರೆಗಳು, ಖಾಸಗಿ ನಿಧಿಯ ವರ್ಗಾವಣೆ, ಸರ್ಕಾರಿ ಅನುದಾನಗಳು ಮತ್ತು ಬಡ್ಡಿಗಳು, ಲಾಭಗಳು ಮತ್ತು ಲಾಭಾಂಶಗಳನ್ನು ಸಹ ಒಳಗೊಂಡಿರುತ್ತವೆ.

**ಕಾರ್ಮಿಕ ಕಾನೂನು – Labour Laws:**

ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡಲು ಸರ್ಕಾರ ರೂಪಿಸಿರುವ ಎಲ್ಲಾ ನೀತಿ ನಿಯಮಗಳು.

**ಕಂದಾಯದ ವಸಾಹತು – Land / Revenue settlement:**

ಬ್ರಿಟೀಷರು ಭಾರತದ ವಿವಿಧ ಭಾಗಗಳಲ್ಲಿ ಪ್ರಾಂತ್ಯಗಳ ಮೇಲೆ ಹಕ್ಕನ್ನು ಪಡೆದಾಗ, ಅಂತಹ ಪ್ರಾಂತ್ಯಗಳ ಆಡಳಿತವನ್ನು ಭೂ ಸಮೀಕ್ಷೆಯ ಆಧಾರದ ಮೇಲೆ ರಚಿಸಲಾಯಿತು. ಸರ್ಕಾರದ ಹಿತ ದೃಷ್ಟಿಯಿಂದ ಭೂಮಿಯ ಮಾಲೀಕತ್ವ ಹೊಂದಿರುವ ರೈತ ಅಥವಾ ಕಂದಾಯ ಗ್ರಾಮ ಅಥವಾ ಜಮೀನ್ದಾರರಿಂದ ಕಂದಾಯವನ್ನು ಸಂಗ್ರಹಿಸಲು ನಿರ್ಧರಿಸಲಾಯಿತು. ಈ ಎಲ್ಲಾ ಸಂದರ್ಭಗಳಲ್ಲಿ ಭೂಮಿಯ ಮಾಲೀಕತ್ವ ಅಥವಾ ಸಾಗುವಳಿಗೆ ಸಂಬಂಧಿಸಿದಂತೆ ಹಕ್ಕು ಪತ್ರ ನೀಡಲಾಯಿತು. ಇಂತಹ ಪದ್ಧತಿಯನ್ನು ಭೂಮಿ/ಕಂದಾಯದ ವಸಾಹತು ಎಂದು ಕರೆಯಲಾಗಿದೆ. ಭಾರತದಲ್ಲಿ ವಿವಿಧ ಭೂಮಿ, ಕಂದಾಯದ ವಸಾಹತುಗಳು ರಚಿಸಲ್ಪಟ್ಟಿದ್ದವು. ಅವುಗಳೆಂದರೆ,

1. ಶಾಶ್ವತ ವಸಾಹತು ಸ್ಥಾಪನೆ – ಇದು ಜಮೀನ್ದಾರಿ ಪದ್ಧತಿ ಎಂದು ಕರೆಯಲ್ಪಟ್ಟಿದೆ.
2. ರೈತವಾರಿ ಪದ್ಧತಿ – ಇದು ವೈಯಕ್ತಿಕ ಸಾಗುವಳಿದಾರರೊಂದಿಗೆ ಸರ್ಕಾರ ಮಾಡಿಕೊಳ್ಳುವ ಕಂದಾಯ ಒಪ್ಪಂದ
3. ಮಹಲ್‌ವಾರಿ ಪದ್ಧತಿ – ಇದು ಗ್ರಾಮದೊಂದಿಗೆ ಸರ್ಕಾರ ಮಾಡಿಕೊಳ್ಳುವ ಒಪ್ಪಂದ.

**ಜನನ ಸಮಯದಲ್ಲಿ ನಿರೀಕ್ಷಿತ ಜೀವಿತಾವಧಿ – Life Expectency at Birth:**

ಒಂದು ಮಗು ಜನಿಸಿದಾಗ, ಆಗಿನ ವಯೋಮಾನ ಮರಣದರ ಮಾದರಿಯು ಮಗುವಿನ ಜೀವನಪೂರ್ತಿ ಹಾಗೇ ಇದ್ದಾಗ, ಒಂದು ಹಸುಳೆಯು ಜೀವಿಸಬಹುದಾದ ವರ್ಷಗಳು ಜನನ ಸಮಯದಲ್ಲಿ ನಿರೀಕ್ಷಿತ ಜೀವಿತಾವಧಿ ಎನಿಸಿಕೊಳ್ಳುತ್ತದೆ.

**ಮಾತೃತ್ವ ಮರಣ ದರ – Maternal Mortality Rate:**

ಇದು ಪ್ರಸವ ಸಮಯದಲ್ಲಿ ತಾಯಂದಿರ ಮರಣ ಮತ್ತು ಸಜೀವ ಜನನಗಳ ನಡುವಿನ ಅನುಪಾತವಾಗಿದೆ. ಕೆಲವೊಮ್ಮೆ ಸಜೀವ ಜನನದ ಜೊತೆಗೆ ಗರ್ಭಪಾತವೂ (ಸತ್ತುಹುಟ್ಟುವ) ಆಗುವ ಸಾಧ್ಯತೆ ಇರುತ್ತದೆ. ಈ ಅನುಪಾತವನ್ನು ವರ್ಷದ ಅವಧಿಗೆ ಲೆಕ್ಕಾಚಾರ ಮಾಡಲಾಗುತ್ತದೆ.

**ವ್ಯಾಪಾರಿ ಬ್ಯಾಂಕರರು – Merchant Bankers:**

ಇವು ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆಗಳಾಗಿದ್ದು, ಹೂಡಿಕೆ ಬ್ಯಾಂಕರ್ ಎಂದು ಸಹ ಕರೆಯಲ್ಪಟ್ಟಿದೆ. ಇವು ಸ್ಟಾಕ್ ಮತ್ತು ಬಾಂಡುಗಳನ್ನು ಕೊಳ್ಳುವ/ಮಾರಾಟ ಮಾಡುವ ಮೂಲಕ ಕಂಪನಿಗಳಿಗೆ ಸಲಹೆ ನೀಡುವಲ್ಲಿ ತಜ್ಞರಾಗಿದ್ದು ಇಕ್ವಿಟಿ ಮತ್ತು ಸಾಲದ ಅವಶ್ಯಕತೆಗಳನ್ನು ನಿರ್ವಹಿಸುತ್ತದೆ.

**ಅನಾರೋಗ್ಯ (ಕಾಯಿಲೆ) – Morbidity:**

ಇದು ಕಾಯಿಲೆ ಬೀಳುವ ಸಾಪೇಕ್ಷತೆ ಇದು ಜನರನ್ನು ತಾತ್ಕಾಲಿಕವಾಗಿ ಅಶಕ್ತರನ್ನಾಗಿ ಮಾಡಿ ಕೆಲಸದ ಮೇಲೆ ಪ್ರಭಾವ ಬೀರುತ್ತದೆ. ದೀರ್ಘಕಾಲದ ಅಶಕ್ತತೆ ಜನರ ಮರಣಕ್ಕೆ ಕಾರಣವಾಗುತ್ತದೆ. ಭಾರತದಲ್ಲಿ ಶ್ವಾಸಕೋಶದ ಜಾಡ್ಯ ಮತ್ತು ಡಯೇರಿಯಾ ಅನಾರೋಗ್ಯಕ್ಕೆ ಎರಡು ಪ್ರಮುಖ ಕಾರಣಗಳಾಗಿವೆ.

**ಮರಣ ದರ – Mortality rate:**

ಇಂಗ್ಲೀಷ್‌ನ **'Mortality'**ಎಂಬ ಪದವು **'Mortal'**ನಿಂದ ರೂಪಾಂತರವಾಗಿದ್ದು ಮೂಲತಃ ಲ್ಯಾಟಿನ್ ಪದವಾದ **'Mors'**ನಿಂದ ಬಂದಿದೆ. ಇದು ಒಂದು ವರ್ಷದ ಅವಧಿಯಲ್ಲಿ ಪ್ರತಿ ಸಾವಿರ ಜನರಲ್ಲಿ ಮರಣ ಹೊಂದುವ ಜನರ ಪ್ರಮಾಣವಾಗಿದೆ. ಇದು ರೋಗಗ್ರಸ್ಥ ಜನರ ದರಕ್ಕಿಂತ ಭಿನ್ನವಾಗಿದೆ. ಇದು ಒಟ್ಟು ಜನಸಂಖ್ಯೆಗೆ ಹೋಲಿಸಿದಾಗ ರೋಗಗ್ರಸ್ಥ ಜನರ ಪ್ರಮಾಣವನ್ನು ಉಲ್ಲೇಖಿಸುತ್ತದೆ.

**ಎಂ.ಆರ್.ಟಿ.ಪಿ ಕಾನೂನು – MRTP ACT:**

ಈ ಕಾನೂನನ್ನು ಉದ್ಯಮ ಸಂಸ್ಥೆಗಳ ಏಕಸ್ವಾಮ್ಯವನ್ನು ನಿಯಂತ್ರಿಸಲು ಮತ್ತು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ವ್ಯವಹಾರ ಆಚರಣೆಯನ್ನು ಕ್ರಮಬದ್ಧಗೊಳಿಸಲು ರೂಪಿಸಲಾಗಿದೆ.

**ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳು – Multilateral Trade Agreement:**

ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳು ಸರಕು ಮತ್ತು ಸೇವೆಗಳನ್ನು ವಿನಿಮಯ ಮಾಡಿಕೊಳ್ಳಲು ಯಾವುದೇ ರಾಷ್ಟ್ರ ಎರಡು ಅಥವಾ ಹೆಚ್ಚು ರಾಷ್ಟ್ರಗಳೊಡನೆ ಮಾಡಿಕೊಂಡಿರುವ ಒಪ್ಪಂದ.

**ರಾಷ್ಟ್ರೀಯ ಉತ್ಪನ್ನ/ ಆದಾಯ – National Product/ Income:**

ಒಂದು ರಾಷ್ಟ್ರದಲ್ಲಿ ಉತ್ಪಾದಿಸಲಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯ ಮತ್ತು ಬಾಹ್ಯ ಆದಾಯ.

**ರಾಷ್ಟ್ರೀಕರಣ – Nationalisation:** ಖಾಸಗಿ ಕ್ಷೇತ್ರದ ಒಡೆತನವನ್ನು ಸಾರ್ವಜನಿಕ ಕ್ಷೇತ್ರಕ್ಕೆ ವರ್ಗಾವಣೆ ಮಾಡುವುದು. ಇದು ಕೇಂದ್ರ ಅಥವಾ ರಾಜ್ಯ ಸರ್ಕಾರಗಳು, ಖಾಸಗಿ ವ್ಯಕ್ತಿಗಳ ಅಥವಾ ವ್ಯಕ್ತಿಗಳ ಸಮೂಹದ ಒಡೆತನದ ಕಂಪನಿಗಳನ್ನು ತನ್ನ ವಶಕ್ಕೆ ಪಡೆದುಕೊಳ್ಳುವುದಾಗಿದೆ. ಕೆಲವು ಪ್ರಕರಣಗಳಲ್ಲಿ ರಾಜ್ಯ ಸರ್ಕಾರದ ಒಡೆತನವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾವಣೆ ಮಾಡುವುದಾಗಿದೆ.

**ಹೊಸ ಆರ್ಥಿಕ ನೀತಿ – New Economic Policy:**

1991ರಿಂದ ಭಾರತದಲ್ಲಿ ಅಳವಡಿಸಿಕೊಂಡಿರುವ ನೀತಿಗಳನ್ನು ವಿವರಿಸಲು ಈ ಪದವನ್ನು ಬಳಸಲಾಗಿದೆ.

**ನವೀಕರಿಸಲಾಗದ ಸಂಪನ್ಮೂಲಗಳು Non renewable resources:**

ನವೀಕರಿಸಲು ಆಗದಿರುವ ಸಂಪನ್ಮೂಲಗಳು. ದೊಡ್ಡ ಪ್ರಮಾಣದಲ್ಲಿ ಲಭ್ಯವಿದ್ದರೂ ಅವು ಮಿತವಾಗಿವೆ. ಅವುಗಳಿಗೆ ಕೆಲವು ಉದಾಹರಣೆಗಳು ಭೂಗರ್ಭದಲ್ಲಿರುವ ಇಂಧನಗಳಾದ ತೈಲ, ಕಲ್ಲಿದ್ದಲು, ಖನಿಜ ಸಂಪನ್ಮೂಲಗಳಾದ ಕಬ್ಬಿಣ, ಸತು, ಅಲ್ಯುಮಿನಿಯಂ, ಯುರೇನಿಯಂ ಮುಂತಾದವು.

**ತೆರಿಗೇತರ ನಿಯಂತ್ರಣ – Non tariff barriers:**

ಆಮದಿನ ಮೇಲೆ ಸರ್ಕಾರ ವಿಧಿಸುವ ಎಲ್ಲಾ ತೆರಿಗೆಯೇತರ ನಿರ್ಬಂಧಗಳು. ಇವು ಮುಖ್ಯವಾಗಿ ಆಮದಿನ ಗುಣಮಟ್ಟ ಮತ್ತು ಪರಿಮಾಣದ ಮೇಲಿನ ನಿರ್ಬಂಧಗಳನ್ನು ಒಳಗೊಂಡಿದೆ.

**ಅವಕಾಶ ವೆಚ್ಚ – Opportunity Cost:**

ಇದನ್ನು ಒಂದು ನಿರ್ದಿಷ್ಟ ಕ್ರಿಯೆ ಅಥವಾ ಮೌಲ್ಯಕ್ಕೆ ಸಂಬಂಧಿಸಿದಂತೆ ವ್ಯಾಖ್ಯಾನಿಸಲಾಗಿದೆ. ಮತ್ತು ಇದು ಬಿಟ್ಟುಕೊಡಲಾದ ಪರ್ಯಾಯ ಆಯ್ಕೆ ಅಥವಾ ಕ್ರಿಯೆಯ ಮೌಲ್ಯಕ್ಕೆ ಸಮವಾಗಿದೆ.

**ಪಿಂಚಣಿ – Pension:**

ಕೆಲಸದಿಂದ ನಿವೃತ್ತಿಹೊಂದಿದ ಕಾರ್ಮಿಕನಿಗೆ ಮಾಸಿಕವಾಗಿ ನೀಡುವ ವೇತನ.

**ತಲಾ ಆದಾಯ – Percapita Income:**

ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ರಾಷ್ಟ್ರದ ಒಟ್ಟು ರಾಷ್ಟ್ರೀಯ ವರಮಾನವನ್ನು ಅದರ ಜನಸಂಖ್ಯೆಯಿಂದ ಭಾಗಿಸುವುದಾಗಿದೆ.

**ಅನುಮತಿ ಪರವಾನಗಿ ರಾಜ್ – Permit License Raj:**

ಈ ಪದವನ್ನು, ಭಾರತದಲ್ಲಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಉದ್ದಿಮೆಗಳನ್ನು ಪ್ರಾರಂಭಿಸಲು, ನಡೆಸಲು ಸರ್ಕಾರ ರಚಿಸಿರುವ ನಿಯಮ ಮತ್ತು ನೀತಿಗಳನ್ನು ಸೂಚಿಸಲು ಬಳಸಲಾಗುತ್ತದೆ.

**ಯೋಜನಾ ಆಯೋಗ – Planning commission:**

ಭಾರತ ಸರ್ಕಾರ ಸ್ಥಾಪಿಸಿದ ಸಂಸ್ಥೆ. ಇದು ದೇಶದಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಅಂದಾಜು ಮಾಡುವ, ಆದ್ಯತೆಗಳನ್ನು ನಿರ್ಧಾರ ಮಾಡುವ ಮತ್ತು ಕೊರತೆಯಲ್ಲಿರುವ ಸಂಪನ್ಮೂಲಗಳನ್ನು ವೃದ್ಧಿಗೊಳಿಸುವ ಮತ್ತು ರಾಷ್ಟ್ರದಲ್ಲಿನ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಮತ್ತು ಸಮತೋಲನವಾಗಿ ಬಳಸಿಕೊಳ್ಳಲು ಯೋಜನೆಗಳನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿವೆ.

**ಬಡತನದ ರೇಖೆ – Poverty line:**

ಗ್ರಾಮೀಣ ಪ್ರದೇಶಗಳಲ್ಲಿ 2400 ಕ್ಯಾಲರಿಗಳಷ್ಟು ಮತ್ತು ನಗರ ಪ್ರದೇಶಗಳಲ್ಲಿ 2100 ಕ್ಯಾಲರಿಗಳಷ್ಟು ಆಹಾರ ಸೇವನೆ ಜೊತೆಯಲ್ಲಿ ಕೆಲವು ಕನಿಷ್ಟ ಅವಶ್ಯಕತೆಗಳ ಮೇಲೆ ಮಾಡುವ ವೆಚ್ಚ.

**ಖಾಸಗಿ ಕ್ಷೇತ್ರದ ಉದ್ಯಮಗಳು – Private Sector Establishments:**

ಖಾಸಗಿ ಜನರ ಅಥವಾ ಸಮೂಹದ ಒಡೆತನದಲ್ಲಿರುವ ಮತ್ತು ಅವರಿಂದ ನಡೆಸಲ್ಪಟಡುವ ಉದ್ಯಮಗಳು.

**ಉತ್ಪಾದಕತೆ – Productivity:**

ಉತ್ಪಾದನೆಗೆ ಬಳಸುವ ಆದಾನದ ಪ್ರತಿ ಘಟಕದ ಉತ್ಪನ್ನ. ಬಂಡವಾಳ ಮತ್ತು ಶ್ರಮದ ದಕ್ಷತೆಯ ಹೆಚ್ಚಳವು ಉತ್ಪಾದಕತೆಯ ಹೆಚ್ಚಳಕ್ಕೆ ಕಾರಣವಾಗಿದೆ. ಈ ಪದವನ್ನು ಸಾಮಾನ್ಯವಾಗಿ ಶ್ರಮದ ಘಟಕಗಳ ಹೆಚ್ಚಳದಿಂದ ಉತ್ಪಾದನೆಯಲ್ಲಾಗುವ ಹೆಚ್ಚಳಕ್ಕೆ ಬಳಸಲಾಗುತ್ತದೆ.

**ಭವಿಷ್ಯ ನಿಧಿ – Provident Fund:**

ನೌಕರನ ಹಿತದೃಷ್ಟಿಯಿಂದ ಮಾಲಿಕ ಮತ್ತು ನೌಕರರಿಬ್ಬರೂ ನಿಯಮಿತವಾಗಿ ಉಳಿತಾಯದ ನಿಧಿಗೆ ಸೇರಿಸುವ ಹಣ. ಇದನ್ನು ಸರ್ಕಾರ ನಿರ್ವಹಿಸುತ್ತಿದ್ದು ಮತ್ತು ನೌಕರ ರಾಜೀನಾಮೆ ನೀಡಿದಾಗ ಅಥವಾ ನಿವೃತ್ತಿಯಾದಾಗ ನೀಡಲಾಗುತ್ತದೆ.

**ಸಾರ್ವಜನಿಕ ಕ್ಷೇತ್ರದ ಉದ್ಯಮಗಳು – Public Sector Establishment:**

ಸರ್ಕಾರದ ಒಡೆತನದಲ್ಲಿದ್ದು ಸರ್ಕಾರದಿಂದ ನಡೆಸಲ್ಪಡುವ ಎಲ್ಲಾ ಉದ್ದಿಮೆಗಳು. ಅವುಗಳು ಸ್ಥಳೀಯ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಸ್ವತಂತ್ರವಾಗಿ ಅಥವಾ ಜಂಟಿಯಾಗಿ ನಡೆಸಲ್ಪಡಬಹುದು.

**ಪರಿಮಾಣಾತ್ಮಕ ನಿಯಂತ್ರಣಗಳು – Quantitative Restriction:**

ಸಂದಾಯ ಬಾಕಿಯಲ್ಲಿನ ಕೊರತೆಯನ್ನು ಕಡಿಮೆ ಮಾಡಲು ಮತ್ತು ದೇಶೀಯ ಕೈಗಾರಿಕೆಗಳನ್ನು ರಕ್ಷಿಸಲು, ಒಟ್ಟು ಪ್ರಮಾಣ ಮತ್ತು ಭಾಗದ ರೂಪದಲ್ಲಿರುವ ಆಮದಿನ ಮೇಲಿನ ನಿಯಂತ್ರಣಗಳು.

**ನಿಯಮಿತ ವೇತನ/ ಕೂಲಿ ಪಡೆಯುವ ಶ್ರಮಿಕ – Regular Salaried/ Wage employee:**

ಬೇರೆಯವರ ಹೊಲದಲ್ಲಿ ಅಥವಾ ಕೃಷಿಯೇತರ ಉದ್ದಿಮೆಯಲ್ಲಿ ಕೆಲಸ ಮಾಡುವ ಮತ್ತು ಪ್ರತಿಫಲವಾಗಿ ನಿಯಮಿತವಾಗಿ ಸಂಬಳ ಅಥವಾ ಕೂಲಿಯನ್ನು ಪಡಯುವವರು. (ಅಂದರೆ ದಿನಗೂಲಿ ಅಥವಾ ನಿಯಮಿತವಾಗಿ ನವೀಕರಿಸಬೇಕಾದ ಗುತ್ತಿಗೆ ಆಧಾರಿತ ಕೆಲಸವಲ್ಲದ).

ಅವರು ಪೂರ್ಣಕಾಲಿಕ ಮತ್ತು ಅರೆಕಾಲಿಕವಾಗಿ, ಕೂಲಿ ಪಡೆಯುವ, ಆಂಶಿಕ ಕೂಲಿ ಅಥವಾ ಸಂಬಳ ಸಹಿತ ತರಬೇತಿ ನಿರತರನ್ನು ಒಳಗೊಂಡಿರುತ್ತದೆ.

**ನವೀಕರಿಸಬಹುದಾದ ಸಂಪನ್ಮೂಲಗಳು – Renewable Resources:**

ಬುದ್ಧಿವಂತಿಕೆಯಿಂದ ಬಳಸಿದರೆ, ನೈಸರ್ಗಿಕ ಪ್ರಕ್ರಿಯೆಯಿಂದ ನವೀಕರಿಸಲ್ಪಡುವ ಸಂಪನ್ಮೂಲಗಳು. ಅರಣ್ಯಗಳು, ಪ್ರಾಣಿಗಳು ಮತ್ತು ಮೀನುಗಳು, ಅತಿಯಾಗಿ ಬಳಕೆಯಾಗದಿದ್ದರೆ ಸುಲಭವಾಗಿ ನವೀಕರಿಸಲ್ಪಡುತ್ತವೆ. ನೀರು (ಜಲ) ಕೂಡ ಈ ಗುಂಪಿನಲ್ಲಿದೆ.

**ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘಟನೆ – SAARC:**

ಇದು ದಕ್ಷಿಣ ಏಷ್ಯಾದ ಎಂಟು ರಾಷ್ಟ್ರಗಳ ಸಹಯೋಗ – ಬಂಗ್ಲಾದೇಶ, ಭೂತಾನ್, ಭಾರತ, ಮಾಲ್ಡೀವ್, ನೇಪಾಳ, ಪಾಕಿಸ್ತಾನ, ಶ್ರೀಲಂಕಾ ಮತ್ತು ಅಫಘಾನಿಸ್ಥಾನ. **SAARC** ದಕ್ಷಿಣ ಏಷ್ಯಾದ ಜನಸಮುದಾಯಗಳಿಗೆ, ಪರಸ್ಪರ ಸ್ನೇಹ, ವಿಶ್ವಾಸ ಮತ್ತು ತಿಳುವಳಿಕೆಯ ಆಧಾರದ ಮೇಲೆ ಕೆಲಸಮಾಡುವ ವೇದಿಕೆಯನ್ನು ಒದಗಿಸುತ್ತದೆ. ಇದು ಸದಸ್ಯ ರಾಷ್ಟ್ರಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ತ್ವರಿತಗೊಳಿಸುವ ಉದ್ದೇಶ ಹೊಂದಿದೆ.

**ಸ್ವ ಉದ್ಯೋಗಿಗಳು – Self Employed:**

ತಮ್ಮದೇ ಸ್ವಂತ ಕೃಷಿ ಅಥವಾ ಕೃಷಿಯೇತರ ಉದ್ದಿಮೆಗಳಲ್ಲಿ ಅಥವಾ ಸ್ವತಂತ್ರವಾಗಿ ವೃತ್ತಿಯಲ್ಲಿ ಅಥವಾ ವ್ಯಾಪಾರದಲ್ಲಿ ಒಬ್ಬರೇ ಅಥವಾ ಪಾಲುದಾರರ ಜೊತೆಯಲ್ಲಿ ಉದ್ಯೋಗದಲ್ಲಿ ತೊಡಗಿರುವವರು. ಅವರಿಗೆ ಹೇಗೆ ಎಲ್ಲಿ ಮತ್ತು ಯಾವಾಗ ಉತ್ಪಾದಿಸಬೇಕು, ಎಲ್ಲಿ ಮಾರಾಟ ಮಾಡಬೇಕು ಎನ್ನುವ ನಿರ್ಣಯ ತೆಗೆದುಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ಅವರ ಆದಾಯವು ಅವರ ಉದ್ಯಮದ ಮಾರಾಟ ಮತ್ತು ಲಾಭದ ಮೇಲೆ ಸಂಪೂರ್ಣವಾಗಿ ಅಥವಾ ಅಂಶಿಕವಾಗಿ ಅವಲಂಬಿತವಾಗಿದೆ.

**ಸಾಮಾಜಿಕ ಭದ್ರತೆ – Social Security:**

ವೃದ್ಧರು, ವಿಕಲಚೇತನರು, ನಿರ್ಗತಿಕರು, ವಿಧವೆಯರು ಮತ್ತು ಮಕ್ಕಳಿಗೆ ಭೌತಿಕ ಭದ್ರತೆಯನ್ನು ನೀಡಲು ಸರ್ಕಾರ ಅಥವಾ ಖಾಸಗಿ ಪ್ರತಿಷ್ಠಾನಗಳು ತೆಗೆದುಕೊಂಡ ಕ್ರಮಗಳಾಗಿದ್ದು, ಇದರಲ್ಲಿ ಪಿಂಚಣಿ, ಸೇವಾನುದಾನ, ಭವಿಷ್ಯ ನಿಧಿ, ಮಾತೃತ್ವ ನೆರವು, ಆರೋಗ್ಯ ರಕ್ಷಣೆ ಮುಂತಾದವು ಒಳಗೊಂಡಿವೆ.

**ವಿಶೇಷ ಆರ್ಥಿಕ ವಲಯ – Special Economic Zone:**

ಒಂದು ರಾಷ್ಟ್ರದ ಸಾಮಾನ್ಯ ಆರ್ಥಿಕ ನಿಯಮಗಳಿಗಿಂತ ಭಿನ್ನವಾದ ಆರ್ಥಿಕ ನಿಯಮಗಳನ್ನು ಹೊಂದಿರುವ ಭೌಗೋಳಿಕ ಪ್ರದೇಶ. ವಿದೇಶಿ ಹೂಡಿಕೆಯನ್ನು ಹೆಚ್ಚಿಸುವುದು ಇದರ ಸಾಮಾನ್ಯ ಉದ್ದೇಶವಾಗಿದೆ. ಚೀನಾ, ಭಾರತ, ಜೋರ್ಡಾನ್, ಪೋಲ್ಯಾಂಡ್, ಕಝುಕಿಸ್ತಾನ್, ಫಿಲಿಪೈನ್ಸ್ ಮತ್ತು ರಷ್ಯಾಗಳನ್ನು ಒಳಗೊಂಡಂತೆ ಅನೇಕ ರಾಷ್ಟ್ರಗಳಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲಾಗಿದೆ.

**ಸ್ಥಿರಾತ್ಮಕ ಕ್ರಮಗಳು – Stabilization Measures:**

ಸಂದಾಯ ಬಾಕಿಯಲ್ಲಿನ ಏರಿಳಿತಗಳನ್ನು ಮತ್ತು ಅತಿಯಾದ ಹಣದುಬ್ಬರದ ದರವನ್ನು ನಿಯಂತ್ರಿಸಲು ಕೈಗೊಂಡ ಕೋಶೀಯ ಮತ್ತು ಹಣಕಾಸಿನ ಕ್ರಮಗಳು.

**ರಾಜ್ಯವಿದ್ಯುಚ್ಛಕ್ತಿ ಮಂಡಳಿಗಳು – State Electricity Board:**

ವಿವಿಧ ರಾಜ್ಯಗಳಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ, ಪ್ರಸರಣಮಾಡುವ ಮತ್ತು ವಿತರಿಸುವ ರಾಜ್ಯದ ಆಡಳಿತದ ಒಂದು ಭಾಗ.

**ಶಾಸನಬದ್ಧ ದ್ರವ್ಯತೆಯ ಅನುಪಾತ – Statutory Liquidity Ratio:**

ಕೇಂದ್ರ ಬ್ಯಾಂಕಿನ ನಿರ್ದೇಶನದ ಮೇರೆಗೆ ಎಲ್ಲಾ ಬ್ಯಾಂಕುಗಳು ನಗದು ರೂಪದಲ್ಲಿ ನಿರ್ವಹಿಸಬೇಕಾದ ಒಟ್ಟು ಠೇವಣಿಯ ಮತ್ತು ಮೀಸಲಿನ ಕನಿಷ್ಠ ಭಾಗ. ನಗದು ಮೀಸಲು ಅನುಪಾತದ ಜೊತೆಯಲ್ಲಿ ಶಾಸನಬದ್ಧ ದ್ರವ್ಯತೆಯ ಅನುಪಾತವನ್ನು ನಿರ್ವಹಿಸಬೇಕಾದದ್ದು ಬ್ಯಾಂಕುಗಳು ಮಾಡಲೇಬೇಕಾದ ಕರ್ತವ್ಯ.

**ಸ್ಟಾಕ್ ಎಕ್ಸ್‌ಛೇಂಜ್ – Stock Exchange:**

ಸರ್ಕಾರದ ಮತ್ತು ಸಾರ್ವಜನಿಕ ಕಂಪನಿಗಳ ಭದ್ರತೆಗಳನ್ನು ವ್ಯಾಪಾರ ಮಾಡುವ ಮಾರುಕಟ್ಟೆ. ಇದು ಮಧ್ಯವರ್ತಿಗಳಿಗೆ ಕಂಪನಿಗಳ ಭದ್ರತೆಗಳನ್ನು ಮತ್ತು ಷೇರುಗಳನ್ನು ಮಾರಾಟ ಮಾಡಲು ಸೌಲಭ್ಯಗಳನ್ನು ಒದಗಿಸುತ್ತದೆ.

**ಷೇರು ಮಾರುಕಟ್ಟೆ – Stock Market:**

ಸ್ಟಾಕ್ ಮತ್ತು ಷೇರುಗಳನ್ನು ವ್ಯಾಪಾರ ಮಾಡುವ ಸಂಸ್ಥೆ.

**ರಚನಾತ್ಮಕ ಸುಧಾರಣಾ ನೀತಿ – Structural Reform Policies:**

ಆರ್ಥಿಕತೆಯ ದಕ್ಷತೆ ಮತ್ತು ಸ್ಪರ್ಧಾತ್ಮಕತೆಯನ್ನು ಸುಧಾರಿಸುವ ಉದ್ದೇಶಗಳುಳ್ಳ ದೀರ್ಘಾವಧಿ ಕ್ರಮಗಳಾದ ಉದಾರೀಕರಣ, ಅನಿಯಂತ್ರಣ ಮತ್ತು ಖಾಸಗೀಕರಣ.

**ಸುಂಕಗಳು – Tariff:**

ಇದು ಆಮದುಗಳ ಮೇಲೆ ವಿಧಿಸುವ ತೆರಿಗೆಯಾಗಿದ್ದು ಭೌತಿಕ ಸರಕುಗಳ ಮೇಲೆ (ಉದಾ: ಪ್ರತಿ ಟನ್ನಿಗೆ) ಅಥವಾ ಅದರ ಮೌಲ್ಯದ ಮೇಲೆ ವಿಧಿಸಲಾಗುತ್ತದೆ.

ಸುಂಕಗಳನ್ನು ವಿವಿಧ ಕಾರಣಗಳಿಗಾಗಿ ವಿಧಿಸುತ್ತಿದ್ದು, ಅವುಗಳೆಂದರೆ ಸರ್ಕಾರದ ವರಮಾನವನ್ನು ಹೆಚ್ಚಿಸುವುದು, ಅಗ್ಗದ ಅಥವಾ ಕಡಿಮೆ ಬೆಲೆಯ ಆಮದುಗಳಿಂದ ದೇಶೀಯ ಕೈಗಾರಿಕೆಗಳನ್ನು ರಕ್ಷಿಸುವುದು, ದೇಶೀಯ ಉದ್ಯೋಗವನ್ನು ಹೆಚ್ಚಿಸುವುದು ಅಥವಾ ಸಂದಾಯ ಬಾಕಿಯ ಕೊರತೆಯನ್ನು ಬಗೆಹರಿಸುವುದು. ಸುಂಕಗಳನ್ನು ಹೆಚ್ಚಿಸುವುದರಿಂದ ವರಮಾನದ ಜೊತೆಗೆ ವ್ಯಾಪಾರದ ಪ್ರಮಾಣವನ್ನು ಕಡಿತಗೊಳಿಸುವುದು ಮತ್ತು ಅನುಭೋಗಿಗಳಿಗೆ ಆಮದು ಸರಕುಗಳ ಬೆಲೆಯನ್ನು ಹೆಚ್ಚಿಸುವುದು ಉತ್ತಮ ಸಾಧನೆ ಎನಿಸುತ್ತದೆ.

**ಸುಂಕ ನಿರ್ಬಂಧಗಳು – Tariff Barriers:**

ಒಂದು ಸರ್ಕಾರವು ತೆರಿಗೆ ರೂಪದಲ್ಲಿ ಆಮದಿನ ಮೇಲೆ ವಿಧಿಸುವ ಎಲ್ಲಾ ನಿರ್ಬಂಧಗಳು.

**ಕಾರ್ಮಿಕ ಸಂಘ – Trade Union:**

ವೇತನ ಸೌಲಭ್ಯ ಮತ್ತು ಕೆಲಸದ ಸ್ಥಿತಿಗತಿಗಳ ಸುಧಾರಣೆಗಳ ಉದ್ದೇಶಕ್ಕಾಗಿ ಕಾರ್ಮಿಕರು ಮಾಡಿಕೊಂಡಿರುವ ಒಕ್ಕೂಟ.

**ನಿರುದ್ಯೋಗ – Unemployment:**

ಪ್ರಸ್ತುತ ಲಭ್ಯವಿರುವ ಕೆಲಸದ ಪರಿಸ್ಥಿತಿ ಮತ್ತು ಕೂಲಿಗಳಲ್ಲಿ ಕೆಲಸ ಮಾಡುವ ಇಚ್ಛೆಯನ್ನು ಹೊಂದಿರುವ, ಆದರೆ ಉದ್ಯೋಗ ವಿನಿಮಯ ಕೇಂದ್ರ, ಮಧ್ಯವರ್ತಿಗಳು ಸ್ನೇಹಿತರು ಅಥವಾ ಬಂಧುಗಳು ಅಥವಾ ಉದ್ಯೋಗದಾತರಿಗೆ ಅರ್ಜಿ ಸಲ್ಲಿಸುವ ಮೂಲಕ ಉದ್ಯೋಗವನ್ನು ಅರಸುತ್ತಿರುವ ಕೆಲಸದ ಕೊರತೆಯನ್ನು ಹೊಂದಿರುವ ಸನ್ನಿವೇಶವಾಗಿರುತ್ತದೆ.

**ನಗರೀಕರಣ – Urbanization:**

ಒಂದು ಬೃಹತ್ ಮಹಾನಗರ ಪಾಲಿಕೆಯ ವಿಸ್ತರಣೆ. ಅದು ಒಟ್ಟು ಜನಸಂಖ್ಯೆಯ ಅನುಪಾತ ಅಥವಾ ನಗರ ಪ್ರದೇಶದ ಭಾಗಗಳು ಅಥವಾ ಪ್ರದೇಶಗಳು (ನಗರ ಮತ್ತು ಪಟ್ಟಣಗಳು) ಅಥವಾ ಕಾಲಕ್ರಮೇಣ ಈ ಅನುಪಾತದಲ್ಲಾಗುವ ಹೆಚ್ಚಳವನ್ನು ಒಳಗೊಂಡಿದೆ. ಇದು ಒಂದು ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆಯ ಸಾಪೇಕ್ಷ ಮಟ್ಟವನ್ನು ಅಥವಾ ಯಾವ ದರದಲ್ಲಿ ನಗರ ಪ್ರದೇಶದ ಜನಸಂಖ್ಯೆಯ ಅನುಪಾತವು ಹೆಚ್ಚಾಗುತ್ತದೆ ಎಂಬುದನ್ನು ಪ್ರತಿನಿಧಿಸುತ್ತದೆ. ಇವೆರಡನ್ನು ಶೇಕಡವಾರು ಪ್ರಮಾಣದಲ್ಲಿ ವ್ಯಕ್ತಪಡಿಸಬಹುದು. ಬದಲಾವಣೆಯ ದರವನ್ನು ವಾರ್ಷಿಕ ಶೇಕಡವಾರು ರೂಪದಲ್ಲಿ ಒಂದು ದಶಕದ ಅವಧಿಯಲ್ಲಿ ಅಥವಾ ಜನಗಣತಿಗಳ ನಡುವಿನ ಅವಧಿಯಲ್ಲಿ ವ್ಯಕ್ತಪಡಿಸಲಾಗಿದೆ.

**ಶ್ರಮಿಕ–ಜನಸಂಖ್ಯೆ ಅನುಪಾತ – Worker Population Ratio:**

ಒಟ್ಟು ಶ್ರಮಿಕರ ಸಂಖ್ಯೆಯನ್ನು ಜನಸಂಖ್ಯೆಯಿಂದ ಭಾಗಿಸುವುದು. ಇದನ್ನು ಶೇಕಡವಾರು ಪ್ರಮಾಣದಲ್ಲಿ ವ್ಯಕ್ತಪಡಿಸಲಾಗುವುದು.

★★★